ಕರ್ನಾಟಕ ಸರ್ಕಾರ

ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ಭಾಷಿಕ ಸಾಹಿತ್ಯ

೩

ಕನ್ನಡಂಗಳ ಒಗಟುಗಳು

ಸಂ. ಪ್ರೊ. ಬೋಳಾರ ಶಿವರಾಮ ಶೆಟ್ಟಿ

SHOUT
SHARE
IT

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ – ೫೪

ಭಾಷಿಕ ಸಾಹಿತ್ಯ ಪ್ರಕಾರ – ೩

ಕನ್ನಡಂಗಳ ಒಗಟುಗಳು

ಸಂಪಾದಕರು

ಪ್ರೊ. ಬೋಳಾರ ಶಿವರಾಮ ಶೆಟ್ಟಿ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು – ೫೬೦ ೦೦೨

'Kannadangala Ogatugalu' Edited by **Dr. Bolara Shivarama Shetty,** Published by K.A. Dayananda, Director, Dept. of Kannada and Culture, Kannada Bhavana, J.C.Road, Bangalore-560002.

© ಕಾಯ್ದಿರಿಸಿದೆ

ಆವೃತ್ತಿಯ ಹಕ್ಕು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಪ್ರಥಮ ಮುದ್ರಣ : ೨೦೧೪
ಪುಟಗಳು : xcii + ೫೭೨ = ೬೬೪
ಪ್ರತಿಗಳು : ೧೦೦೦
ಬಿಡಿ ಪ್ರತಿ ಬೆಲೆ : ರೂ. ೫೦/–
Print : 2014
Pages : xcii + 572 = 664
Copies : 1000
Price : Rs. 50/-

ಪ್ರಕಾಶಕರು :

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ
ಶ್ರೀ ಕೆ.ಎ. ದಯಾನಂದ, ಕ.ಆ.ಸೇ. ಅವರಿಂದ ಪ್ರಕಟಿತ
ಸಹಕಾರ : ಶ್ರೀ ಬಿ.ಎನ್. ಪರಡ್ಡಿ, ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಸಂಯೋಜಕರು : **ಡಾ. ಚಕ್ಕೆರೆ ಶಿವಶಂಕರ್**

ಮುಖಪುಟ ವಿನ್ಯಾಸ : **ಪ. ಸ. ಕುಮಾರ್**

ಮುದ್ರಕರು :

ಗೀತಾಂಜಲಿ ಗ್ರಾಫಿಕ್ಸ್
ನಂ. ಬಿ–71, ನ್ಯೂ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್, 6ನೇ ಬಡಾವಣೆ, ರಾಜಾಜಿನಗರ, ಬೆಂಗಳೂರು – 560 010.
ದೂರವಾಣಿ : 23404232

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಸಮಿತಿ

ಅಧ್ಯಕ್ಷರು
ಪ್ರೊ. ಹಿ.ಶಿ. ರಾಮಚಂದ್ರೇಗೌಡ

ಸದಸ್ಯರು
ಡಾ. ಸೋಮಶೇಖರ ಇಮ್ರಾಪುರ
ಡಾ. ಎಚ್.ಜೆ. ಲಕ್ಕಪ್ಪಗೌಡ
ಡಾ. ಎಂ. ಪ್ರಭಾಕರ ಜೋಶಿ
ಡಾ. ತೀ.ನಂ. ಶಂಕರನಾರಾಯಣ
ಶ್ರೀಮತಿ ಶಾಂತಿನಾಯಕ
ಡಾ. ಅರವಿಂದ ಮಾಲಗತ್ತಿ
ಡಾ. ಮ.ಗು. ಬಿರಾದಾರ
ಪ್ರೊ. ಎ.ವಿ. ನಾವಡ
ಡಾ. ವೆಂಕಟೇಶ ಇಂದ್ವಾಡಿ

ಸದಸ್ಯ ಕಾರ್ಯದರ್ಶಿ
ಶ್ರೀ ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪದನಿಮಿತ್ತ ಸದಸ್ಯರು
ಶ್ರೀ ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ನಾಡೋಜ ಬೆಳಗಲ್ಲು ವೀರಣ್ಣ
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಟಿ. ತಿಮ್ಮೇಗೌಡ
ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು
ಶ್ರೀ ಪಿ.ಎನ್. ಶ್ರೀನಿವಾಸಚಾರಿ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು
ಶ್ರೀ ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂಚಾಲಕರು
ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ಜಂಟಿ ನಿರ್ದೇಶಕರು (ಆಡಳಿತ)

ಶ್ರೀ ಬಲವಂತರಾವ್ ಪಾಟೀಲ್
ಜಂಟಿ ನಿರ್ದೇಶಕರು (ಸು.ಕ.)

ಶ್ರೀ ಬಿ.ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

ಶ್ರೀ ಎನ್. ಹರಿಕುಮಾರ್
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಿದ್ಧರಾಮಯ್ಯ
ಮುಖ್ಯಮಂತ್ರಿಗಳು

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೨೮/೨೦೧೪ ದಿನಾಂಕ : ೦೪–೦೨–೨೦೧೪

ಸಂದೇಶ

ಸಮಾಜ ನಿಂತ ನೀರಲ್ಲ. ಎಲ್ಲ ಕಾಲಘಟ್ಟಗಳಲ್ಲಿ ಚಾರಿತ್ರಿಕ ಭೌಗೋಳಿಕ ಒತ್ತಡಗಳಿಂದ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದು ಎದ್ದು ಕಾಣಿಸುವ ವೇಗದಲ್ಲಿ ಆಗುವಂಥದ್ದೇನಲ್ಲ. ಮಂದಗತಿಯಲ್ಲಿಯೇ ಚಲನಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ.

ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವೂ ಇಂತಹ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿರುತ್ತದೆ. **ಬದಲಾವಣೆ ಜಗದ ನಿಯಮ** ಎಂಬ ಮಾತಿಗನುಗುಣವಾಗಿ ಎಲ್ಲ ಸೃಜನಶೀಲ ಕಲೆಗಳೂ ಆಯಾ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುತ್ತವೆ.

ಸಮುದಾಯ ಹಿತವನ್ನೇ ತನ್ನೊಡಲಲ್ಲಿ ತುಂಬಿಕೊಂಡಿರುವ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳಲ್ಲೂ ಇಂತಹ ಚಲನಶೀಲತೆ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುತ್ತದೆ. ಆಯಾಕಾಲದ ಸಮಾಜಕ್ಕೆ ಪ್ರಸ್ತುತವಲ್ಲದ್ದು ಮರೆಯಾಗಿ ಅದರ ಜಾಗದಲ್ಲಿ ಹೊಸದು ಸೃಷ್ಟಿಯಾಗುತ್ತಿದ್ದರೂ ಚಾರಿತ್ರಿಕ ದೃಷ್ಟಿಯಿಂದ, ಮೌಲಿಕ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನದ ಕಣಜವಾಗಿರುವ ಜನಪದ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯು ಹೊರತರುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ.

ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎಂಬ ವ್ಯಾಖ್ಯಾನ ನಮ್ಮ ಜನಪದ ಸಾಹಿತ್ಯ ಮತ್ತಿತರ ಸಂಗತಿಗಳ ಸಾರವಾಗಿದೆ. ಕನ್ನಡ ನೆಲ, ಜಲ, ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು

ನಿಜಕ್ಕೂ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿವೆ. **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ** ಯೋಜನೆಯ ಈ ಪುಸ್ತಕಗಳನ್ನು ನಾಡಿನ ಜನ ಸಮುದಾಯ ಆದರದಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನ್ನದು.

ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಹೊರತರಲು ಕರ್ನಾಟಕ ಸರ್ಕಾರದ ಜೊತೆ ಜೊತೆಗೆ ಯೋಜನೆಯ ಯಶಸ್ಸಿಗಾಗಿ ಶ್ರಮಿಸುತ್ತಿರುವ ಯೋಜನೆಯ ಅಧ್ಯಕ್ಷರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಹಾಗೂ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಲು ಇಚ್ಛಿಸುತ್ತೇನೆ.

ನೂರು ಸಂಪುಟಗಳ ಈ ಯೋಜನೆಯಲ್ಲಿ ಈಗಾಗಲೇ ೩೬ ಸಂಪುಟಗಳು ಹೊರಬಂದಿವೆ. ಇನ್ನೂ ೬೪ ಸಂಪುಟಗಳು ಸದ್ಯದಲ್ಲಿಯೇ ಪ್ರಕಟಗೊಳ್ಳಲಿವೆ. ಈ ಮಹತ್ವದ ಯೋಜನೆಗೆ ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.



ಸಿದ್ಧರಾಮಯ್ಯ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ :
೨೨೨೫೫೨೮೨, ೨೨೦೩೩೪೬೬೯

ಕೊಠಡಿ ಸಂಖ್ಯೆ : ೨೫೨, ೨ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ. ಮಮಕಸಂಸ/೨೮೨/೨೦೧೪

ದಿನಾಂಕ: ೨೮-೦೧-೨೦೧೪

ಸಂದೇಶ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ, ಉದ್ದೀಪನಗೊಳಿಸುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆ. ಕನ್ನಡ ಭಾಷೆ ಸಾಹಿತ್ಯ ಮತ್ತು ಇತರ ಎಲ್ಲಾ ಕಲೆಗಳ ಅಭಿವೃದ್ಧಿಗೆ ಅಂದಿನಿಂದ ಇಂದಿನವರೆಗೂ ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡು ಇಲಾಖೆ ಕಾರ್ಯಪ್ರವೃತ್ತವಾಗಿದೆ. ಈಗ **"ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"** ಎಂಬ ಬೃಹತ್ತಾದ ಯೋಜನೆ ರೂಪಿಸಿ ಜಾನಪದವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಜಾನಪದ ಮೌಖಿಕ ಪರಂಪರೆಯ ಮೂಲಕ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುವುದಾದರೂ ಕೆಲವು ಅಪರೂಪದ ಮಾಹಿತಿಗಳು, ಸಾಹಿತ್ಯಕ ಮಾದರಿಗಳು ಅದೇ ಪ್ರಮಾಣದಲ್ಲಿ ವರ್ಗಾವಣೆಯಾಗುವುದಿಲ್ಲ. ಒಬ್ಬ ಅಭಿಜಾತ ಕಲಾವಿದ ಹಾಡಿದಂಥ ರೂಪ ಮತ್ತು ಶೈಲಿಯನ್ನು ಆತನ ಸಂತತಿಯೇ ಅನುಸರಿಸಲಾಗಿರುವುದಿಲ್ಲ. ಆ ಒಂದು ಅನನ್ಯತೆ ಅವರಿಗೇ ಮೀಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಂಥ ಅಪರೂಪದ ಸಂಗತಿಯನ್ನು ಉಳಿಸಲು ಮತ್ತು ತೌಲನಿಕವಾಗಿ ಅಧ್ಯಯನ ಮಾಡಲು ದಾಖಲೀಕರಣಗೊಳಿಸುವುದು ಅನಿವಾರ್ಯವಾಗುತ್ತದೆ.

ಜಾನಪದ ಬದುಕಿನ ಅನಂತ ಮುಖಗಳನ್ನು ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ನಂಬಿಕೆ, ನಡವಳಿಕೆ, ಆಚರಣೆ, ಸಂಪ್ರದಾಯಗಳು, ಎಲ್ಲಕ್ಕಿಂತ ಹೆಚ್ಚಾಗಿ ಜೀವನ ಮೌಲ್ಯಗಳು ತುಂಬಿರುವ ಕ್ಷೇತ್ರ. ಅಪ್ರಸ್ತುತವಾಗಿರುವುದನ್ನು

ಇಂದಿನ ದಿನವಮಾನಗಳಲ್ಲಿ ಅನುಸರಿಸಬೇಕಾಗಿರುವುದಿಲ್ಲ. ಅದು ಅಪ್ರಸ್ತುತವಾದುದು ಎಂದು ತಿಳಿದುಕೊಳ್ಳುವುದಕ್ಕಾದರೂ ಅದು ದಾಖಲೀಕರಣಗೊಳ್ಳಬೇಕು. ಯಾವುದೇ ಒಂದು ಮೌಲ್ಯ ಕೇವಲ ಒಬ್ಬರಿಂದ ಹೇರಲ್ಪಟ್ಟಿರುವುದಿಲ್ಲ. ಹಲವು ಜನ ಚಿಂತಕರು ಹಲವಾರು ವರ್ಷಗಳ ಕಾಲ ಅದನ್ನು ಜೀವನದಲ್ಲಿ ಅಳವಡಿಸಿ ಸಾಣೆ ಹಿಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎಂಬ ಮಾತು ಬಂದಿರುವುದು.

ಇಂತಹ ಅಪರೂಪದ ಮಾಹಿತಿಯ ಜಾನಪದವನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಕೆಲಸಕ್ಕೆ ಕೈಹಚ್ಚಿರುವ ಎಲ್ಲ ವಿದ್ವಾಂಸರಿಗೆ, ಎಲ್ಲ ಅಧಿಕಾರಿವರ್ಗದವರಿಗೆ ಅಭಿನಂದಿಸುತ್ತಾ ವಿದ್ವತ್‌ವಲಯ ಈ ಯೋಜನೆಯ ಸಂಪುಟಗಳನ್ನು ಸದುಪಯೋಗಪಡಿಸಿಕೊಳ್ಳಲೆಂದು ಆಶಿಸುತ್ತೇನೆ.

ಉಮಾಶ್ರೀ

ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಿಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ–ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ.ಹಿ.ಶಿ.ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ. ತೀ.ನಂ. ಶಂಕರನಾರಾಯಣ, ಶ್ರೀಮತಿ ಶಾಂತಿನಾಯಕ, ಡಾ.ಎಂ.ಪ್ರಭಾಕರ ಜೋಶಿ, ಶ್ರೀ ಅರವಿಂದ ಮಾಲಗತ್ತಿ, ಡಾ. ಮ.ಗು.ಬಿರಾದಾರ, ಪ್ರೊ. ಎ.ವಿ. ನಾವಡ, ಡಾ. ವೆಂಕಟೇಶ ಇಂದ್ವಾಡಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳ ಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಸಲಹೆ–ಸಹಕಾರ ಅಮೂಲ್ಯವಾದುವು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಮತ್ತು ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'**ಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದವೇ ಜಗತ್ತಿನ ಆದಿಮ ಉಸಿರು ಮತ್ತು ಸಂಸ್ಕೃತಿ. ಇಡೀ ಜಗತ್ತಿನ ಮೊಟ್ಟ ಮೊದಲ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮತ್ತು ಧರ್ಮವು ಕೂಡ ಜಾನಪದ ಮೂಲದ್ದೇ. ಜಗತ್ತಿನಾದ್ಯಂತ ಇಂದಿನ ಮುಖ್ಯ ಪ್ರವಾಹದ ಎಲ್ಲ ವೈವಿಧ್ಯಮಯ ಕಲೆ–ಧರ್ಮಗಳು ಕುಡಿಯೊಡೆದಿದ್ದು ಸಹ ಅಲ್ಲಲ್ಲಿನ ಜಾನಪದ ವೈಶಿಷ್ಟ್ಯಗಳಿಂದಲೇ ಎಂಬುದು ಎಲ್ಲ ಇತಿಹಾಸಕಾರರ ಮತ್ತು ಸಂಸ್ಕೃತಿ ಚಿಂತಕರ ಒಮ್ಮತಾಭಿಪ್ರಾಯವಾಗಿದೆ. ದುರಂತವೇನೆಂದರೆ ಜಾನಪದ ಪರಂಪರೆಯಲ್ಲಿನ ಅಲಿಪಿ ಮತ್ತು ಥೋಂಡಿ ಲಕ್ಷಣದ ಕಾರಣದಿಂದಾಗಿ ಜಾನಪದದ ಅನೇಕ ಸಾಂಸ್ಕೃತಿಕ ಮೂಲದ ಮಹತ್ವದ ಅಂಶಗಳು, ಆಚರಣಾತ್ಮಕ ಅಭಿವ್ಯಕ್ತಿಗಳು ಇಂದಿನವರೆಗೂ ಯಾವ ರೂಪದಲ್ಲೂ ದಾಖಲಾಗದೇ ಹೋದದ್ದು ಕೇವಲ ಜಾನಪದ ಜಗತ್ತು ಮತ್ತು ವಿದ್ವಾಂಸರಿಗಷ್ಟೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಕಾರರಿಗೂ ಆಗಿರುವ, ಎಂದೆಂದಿಗೂ ತುಂಬಲಾರದಂತಹ ಬಹುದೊಡ್ಡ ನಷ್ಟವಾಗಿದೆ. ಈ ಅಪಾಯ ಈ ಕ್ಷಣಕ್ಕೂ ಮುಂದುವರೆದಿದೆ ಯಲ್ಲದೇ ಇಂದಿನ ಅತ್ಯಾಧುನಿಕತೆಯ ವೇಗ ಮತ್ತು ಧಾವಂತದ ಸಂದರ್ಭದಲ್ಲಿ ಅಳಿದುಳಿದ ಮತ್ತೆಷ್ಟೋ ಸಾಹಿತ್ಯ, ಕಲೆ ಮತ್ತು ಆಚರಣೆಗಳು ಆಧುನಿಕತೆಯ ವೇಗ ಸಂಸ್ಕೃತಿಗೆ ಅನುಗುಣವಾದ ವೇಗದಲ್ಲೇ ನಮ್ಮಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಇದು ಇಡೀ ಜಗತ್ತಿನ ಜಾನಪದ ವಲಯದ ಎದುರಿರುವ ಬಹು ದೊಡ್ಡ ಸಂದಿಗ್ಧ ಮತ್ತು ಸವಾಲಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ವರ್ತಮಾನದ ಈ ಕ್ಷಣದಲ್ಲಿ ಜಾನಪದೀಯ ಅಭಿವ್ಯಕ್ತಿಗಳನ್ನೆಲ್ಲಾ ದಾಖಲಿಸಿಡುವುದರ ಮೂಲಕವೇ ನಾವು ರಕ್ಷಿಸಿ, ಮುಂದಿನ ತಲೆಮಾರುಗಳಿಗೆ ದಾಟಿಸಬೇಕಾದ ತುರ್ತು ಇದೆ.

ಜನಪದ ಸಾಹಿತ್ಯವೆಂಬುದು ಅಲಿಪಿ ಸಾಹಿತ್ಯ. ಅದನ್ನು ಸಂಗ್ರಹಿಸಿ ಲಿಪಿಬದ್ಧಗೊಳಿಸುವುದರ ಮೂಲಕ ಕಾಪಿಡಬಹುದಾಗಿದೆ. ಆದರೆ ಜಾನಪದದ ಬಹುತೇಕ ಕಲೆ ಮತ್ತು ಆಚರಣೆಗಳು ಲಿಪಿಬದ್ಧಗೊಳಿಸಲಾಗದಂತಹವು. ಅವು ಬಹುತೇಕ ಧಾರ್ಮಿಕ ನೆಲೆಯ ಶ್ರದ್ಧಾವಂತಿಕೆಯ ಅಭಿವ್ಯಕ್ತಿಗಳು. ಅಂತಹ

ಆಚರಣೆಗಳನ್ನು ಜಾನಪದ ವಿದ್ವಾಂಸನೊಬ್ಬ ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದು; ಇಲ್ಲವೇ ಅದನ್ನು ತನ್ನ ಗ್ರಹಿಕೆಯ ಅನುಸಾರವಾಗಿ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸಬಹುದು. ಆದರೆ ಅಂತಹ ನಿರ್ದಿಷ್ಟ ವಿದ್ವಾಂಸನೊಬ್ಬನ ಗ್ರಹಿಕೆ, ವಿಶ್ಲೇಷಣೆಗಳು ಅಂತಿಮವಾಗಿ ಆತನ ತಿಳಿವಳಿಕೆಯ ಮಿತಿಯೊಳಗಿನವೇ ಆಗಿರಬಲ್ಲದೇ ಹೊರತು ಅಂತಿಮ ಸತ್ಯವಲ್ಲದಿರಬಹುದು. ಜಾನಪದ ಆಚರಣೆಯೊಂದನ್ನು ಗಮನಿಸುವ ಕ್ರಮದಲ್ಲಿನ ಅನೇಕ ಸೂಕ್ಷ್ಮಗಳು ವಿದ್ವಾಂಸರಿಂದ ವಿದ್ವಾಂಸರಿಗೆ ಭಿನ್ನವೂ ಆಗಿರಬಲ್ಲವು. ಹಾಗಾಗಿ ಆಯಾಯಾ ಕಾಲದ ಪ್ರತಿಯೊಬ್ಬ ಆಸಕ್ತ ಜಾನಪದ ವಿದ್ವಾಂಸನೂ ತನಗೆ ಸಾಂಸ್ಕೃತಿಕವಾಗಿ ಮುಖ್ಯ ಎನಿಸುವ ಆಚರಣೆ, ಕಲೆಯಂತಹ ವಿವಿಧ ಪ್ರಕಾರಗಳ ವೈಶಿಷ್ಟ್ಯವನ್ನು ಪ್ರತ್ಯಕ್ಷವಾಗಿಯೇ ಕಂಡು ಅನುಭವಿಸಿ ಬರೆದಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇದ್ದೇ ಇದೆ.

ಆದರೆ ಈಗಾಗಲೇ ನಾವು ಗಮನಿಸಿರುವಂತೆ ಅನೇಕ ಅನನ್ಯವೆಂಬಂತಹ ಜಾನಪದೀಯ ಆಚರಣೆಗಳು ಆಧುನಿಕತೆಯ ಅನ್ಯಾಕ್ರಮಣಶೀಲತೆಯಿಂದಾಗಿ ನೆನಪುಗಳಿಂದಲೂ ಮಾಸಿ ಹೋಗುವಷ್ಟು ವಿನಾಶದ ಹಾಗೂ ಅಳಿವಿನ ಅಂಚಿನಲ್ಲಿವೆ. ಕೆಲವು ಜನಪ್ರಿಯವಾದ ಕಲೆಗಳನ್ನು ಕಲಿಕಾ ಶಿಬಿರಗಳ ಮೂಲಕ ಆಸಕ್ತ ಯುವಕ/ಯುವತಿಯರಿಗೆ ಕಲಿಸುವುದರ ಮೂಲಕವಾದರೂ ಮುಂದುವರೆಯುವಂತೆ ಮಾಡಬಹುದಾಗಿದೆ. ಆದರೆ ನಿರ್ದಿಷ್ಟ ಪಂಗಡದ ನಿರ್ದಿಷ್ಟ ವ್ಯಕ್ತಿಗಳೇ ಪಾತ್ರವಹಿಸುವುದರ ಮೂಲಕವಷ್ಟೇ ಮಂದುವರೆಯಬೇಕಾದ ಅನಿವಾರ್ಯತೆಯ ಆಚರಣೆಗಳನ್ನು ನಾವು ಉಳಿಸಿಕೊಳ್ಳುವ ಬಗೆಯಾದರೂ ಯಾವುದು? ಉದಾಹರಣೆಗೆ; ಈ ನೆಲದ ಆದಿಮ ಧರ್ಮದ ಬಗ್ಗೆ ಅನೇಕ ರಹಸ್ಯಗಳನ್ನು ಉಸುರುವ ಜೇನುಕುರುಬರ ಕೊಂಟು ಪೂಜೆಯ ಆಚರಣೆ, ದಕ್ಕಲರು, ಮಾಸ್ತೀಕರು ಮತ್ತು ಸಿಂಧ್‌ಮಾದಿಗರ ತಂಗಡಿ ದ್ಯಾವ್ರದ ಆಚರಣೆ, ಮೋಡಿ ಹಾಕುವವರ ತಂತ್ರಗಳು, ಮೇರರ ಕಾಡ್ಯಾನಾಟ ಇತ್ಯಾದಿಗಳು ಅಪರೂಪವಾಗುತ್ತಿದೆಯಷ್ಟೇ ಅಲ್ಲದೆ ಕೊಂಟು ಪೂಜೆ, ತಂಗಡಿ ದ್ಯಾವ್ರದಂತಹ ವಿಶಿಷ್ಟವೂ, ಮಹತ್ವದವೂ ಆದ ಆಚರಣೆಗಳು ಈಗಾಗಲೇ ಕಣ್ಮರೆಯಾಗುತ್ತಿವೆ. ಇಂತಹುದೇ ಮತ್ತೆಷ್ಟೋ ಸಾಂಸ್ಕೃತಿಕ ಮಹತ್ವದ ಆಚರಣೆಗಳ ಬಗೆಗಂತೂ ಮಾಹಿತಿ ಕೂಡ ಸಿಗದಂತಾಗಿದೆ. ಬಾಲ್ಯದಲ್ಲಿ ಸ್ವತಃ ನಾವೇ ಪ್ರತ್ಯಕ್ಷವಾಗಿ ಕಂಡುಂಡ ಅನೇಕ ಕಲಾತ್ಮಕ ಜಾನಪದೀಯ ಆಚರಣೆಗಳು ಇಂದು ನಮ್ಮ ನಂತರದ ಪೀಳಿಗೆಯವರ ಪಾಲಿಗೆ ಇಲ್ಲದಂತಾಗಿರುವುದನ್ನು ನಾವೇ ಕಾಣುತ್ತಿದ್ದೇವಲ್ಲ? ಈ ಹಿನ್ನೆಲೆಯಲ್ಲಿ ಈಗಾಗಲೇ ಅಳಿವಿನ ಅಂಚಲ್ಲಿರುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೂಲದ ಕೆಲವಾದರೂ ಅತಿ ಮುಖ್ಯ ಆಚರಣೆಗಳನ್ನು ನಾವು

ಈ ಡಿಜಿಟಲ್ ಯುಗದಲ್ಲಿ, ಯಾವ ತಂತ್ರಜ್ಞಾನ ಜಾನಪದದ ಅಳಿವಿಗೆ ಕಾರಣವಾಗುತ್ತಿದೆಯೋ ಅದೇ ತಂತ್ರಜ್ಞಾನದ ನೆರವಿನಿಂದಲೇ ದೃಶ್ಯೀಕರಿಸಿ ಮುಂದಿನ ತಲೆಮಾರಿನ ಅಧ್ಯಯನಕಾರರ ಪಾಲಿಗೆ ರಕ್ಷಿಸಿಡಬೇಕಾದ ತುರ್ತು ಮತ್ತು ಒತ್ತಡವೇರ್ಪಟ್ಟಿದೆಯೆಂಬುದೇ ನನ್ನ ಸ್ಪಷ್ಟ ತಿಳಿವಳಿಕೆ. ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೋರಿರುವ ಕಾಳಜಿಯನ್ನೇ ವಿಸ್ತರಿಸಿ, ಜಾನಪದ ಆಚರಣೆಗಳ ದೃಶ್ಯ ದಾಖಲಾತಿಯ ವಿಚಾರದಲ್ಲೂ ಮುಂದುವರೆಸಬೇಕೆಂಬುದು ನನ್ನ ವಿನಮ್ರ ಮನವಿ.

ಈ ಹಿನ್ನೆಲೆಯಲ್ಲಿ ಮೌಖಿಕ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಜಾನಪದ ಪರಂಪರೆಯನ್ನು ಜೀವಂತವಾಗಿಡುವ ಒಂದು ಪಾರ್ಶ್ವ ಪ್ರಯತ್ನ ಮಾತ್ರ. ಆದರೆ ಈ ಪ್ರಯತ್ನವು ಕೂಡ ತನ್ನದೇ ಆದ ಮಹತ್ವವನ್ನು ಒಳಗೊಂಡಿದೆಯಲ್ಲದೇ ಅದರ ಕೊಡುಗೆಯನ್ನು ಯಾವ ರೀತಿಯಲ್ಲೂ ನಗಣ್ಯವಾಗಿಸಲು ಸಾಧ್ಯವಿಲ್ಲ. ಆದರೆ ಬದಲಾಗುತ್ತಿರುವ ಅತ್ಯಾಧುನಿಕ ತಾಂತ್ರಿಕಾವಿಷ್ಕಾರಗಳಿಗೆ ಅನುಗುಣವಾಗಿಯೇ ಸ್ಪಂದಿಸಿ ನಾವು ಇನ್ನು ಮುಂದಿನ ಜಾನಪದೀಯ ಯೋಜನೆಗಳಲ್ಲಿ ಕಲೆ, ಕಲಾವಿದರು ಮತ್ತು ಆಚರಣೆಗಳನ್ನು ದೃಶ್ಯ ರೂಪದಲ್ಲಿಯೂ ದಾಖಲಿಸಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇರುವುದನ್ನು ಮನಗಾಣಬೇಕಾಗಿದೆ. ಈ ಬಗ್ಗೆ ತಜ್ಞ ವಿದ್ವಾಂಸರು ಇನ್ನಾದರೂ ಗಮನ ಹರಿಸಬೇಕಿದೆ.

ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಎಂಬ ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಅಡಿಯಲ್ಲಿ ೧೦೦ ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಲು ತೀರ್ಮಾನಿಸಿತು.

ಕರ್ನಾಟಕ ಜಾನಪದ ಅಕಾಡೆಮಿಯು ಸಹಜವಾಗಿಯೇ ಈ ಬೃಹತ್ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊತ್ತು ಅದನ್ನು ಕಾಲಾನುಕ್ರಮದಲ್ಲಿ ಅನುಷ್ಠಾನಗೊಳಿಸಿ, ಸಂಪುಟಗಳನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದೆ. ಜನಪದ ಸಾಹಿತ್ಯ ಪರಂಪರೆಯಲ್ಲಿನ ಪ್ರಕಾರ ವಿಶಿಷ್ಟತೆ, ಭೌಗೋಳಿಕ ವ್ಯಾಪ್ತಿ ಮತ್ತು ಇತಿಹಾಸವನ್ನು ಗಮನದಲ್ಲಿರಿಸಿಕೊಂಡೇ ನಿರ್ದಿಷ್ಟ ಸಂಪುಟಗಳ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ನಾಡಿನ ಹೆಸರಾಂತ ಜಾನಪದ ತಜ್ಞರು ಅಮೂಲ್ಯವಾದ ತಮ್ಮ ಸಮಯ ಮತ್ತು ಶ್ರಮಗಳೊಂದಿಗೆ ಈ ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಅವರೆಲ್ಲರ ಶ್ರಮ ಸಾರ್ಥಕವಷ್ಟೇ ಅಲ್ಲದೆ, ಸೃಜನಶೀಲ ಜಾನಪದ ಕ್ಷೇತ್ರಕ್ಕೆ

ಸಂದ ಅನನ್ಯ ಹಾಗೂ ಅಪರೂಪದ ಕೊಡುಗೆಗಳೆಂದೇ ನಾನು ಭಾವಿಸಿದ್ದೇನೆ. ಈ ಬೃಹತ್ ಯೋಜನೆಯನ್ನು ಆಗುಮಾಡಿಸುವಲ್ಲಿ ಹೀಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ಎಲ್ಲ ಮಹನೀಯರಿಗೂ ಅಕಾಡೆಮಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ಈ ಯೋಜನೆಯ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇ ಗೌಡ ಅವರಿಗೂ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಸಲ್ಲಲೇಬೇಕು.

ತಮ್ಮ ಉಚಿತವೂ, ವಿದ್ವತ್ಪೂರ್ಣವೂ ಆದ ನುಡಿಗಳೊಂದಿಗೆ ಸಂಪುಟಗಳ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಸಂಚಾಲಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಈ ಯೋಜನೆಯ ನಿರ್ವಹಣೆಯಲ್ಲಿ ತೋರಿದ ಅಪಾರ ಆಸಕ್ತಿ ಮತ್ತು ಶ್ರದ್ಧೆಗಳಿಗೆ ಇಡೀ ಕನ್ನಡ ನಾಡಿನ ಜಾನಪದ ಜಗತ್ತು ಋಣಿಯಾಗಿದೆ.

ಈ ಬೃಹತ್ ಯೋಜನೆಯ ಅನುಷ್ಠಾನದ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡು ತತ್ಪರತೆಯಿಂದ ಕಾರ್ಯ ನಿರ್ವಹಿಸಿದ ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ನೆನಕೆಗಳು.

ಮುಂದಿನ ತಲೆಮಾರಿನ ಸಂಸ್ಕೃತಿ ಚಿಂತಕರು, ಜಾನಪದ ಅಧ್ಯಯನ ಕಾರರ ಪಾಲಿಗೆ ಸಮೃದ್ಧ ಆಕರ ಗ್ರಂಥಗಳಾಗಬಲ್ಲ ಈ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಅಷ್ಟರ ಮಟ್ಟಿಗೆ ಜಾನಪದ ಅಕಾಡೆಮಿಯ ಆಶಯವನ್ನು ಈಡೇರಿಸಿದೆಯೆಂಬುದೇ ನನ್ನ ನಂಬಿಕೆ ಮತ್ತು ಅದೇ ನನ್ನ ನಿಜವಾದ ಸಂತೋಷಕ್ಕೆ ಕಾರಣವಾಗಿದೆ.

ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

ಅಧ್ಯಕ್ಷರ ಮಾತು
ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ

ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಋಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು,

ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ–ಚಿಂತಕರಿಗೆ ಒಂದು ಹೆದ್ದಾರಿಯಾಯಿತು. ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ

ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು. ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

ಮಾತಿನ ಸರಣಿ : ಮುತ್ತಿನ ಬೆಲೆ

ಬಿ. ಎಂ. ಶ್ರೀಕಂಠಯ್ಯ

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ

ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

ದ. ರಾ. ಬೇಂದ್ರೆ

'.....ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

ಮಾಸ್ತಿ ವೆಂಕಟೇಶ ಅಯ್ಯಂಗಾರ್

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೬)**

ಬೆಟಗೇರಿ ಕೃಷ್ಣಶರ್ಮ

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

ಬಿ. ಎಸ್. ಗದ್ದೀಮಠ

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

ದೇ. ಜವರೇಗೌಡ

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

ಎಚ್. ಎಲ್. ನಾಗೇಗೌಡ

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೫)**

ಜೀ.ಶಂ. ಪರಮಶಿವಯ್ಯ

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

– ೩ –

ಕಟ್ಟುವ ಕನಸು ; ನೆಟ್ಟ ಸಸಿ

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ

ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟ್ರೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯ ಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ–ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಬಿ. ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವನ್ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ– ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ

ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ, ಧವಳಶ್ರೀ, ಸಿ. ವೀರಣ್ಣ, ಬಿ.ಎಸ್. ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ. ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೬೬ರಲ್ಲಿ ತರೀಕೆರೆಯಲ್ಲಿ, ೧೯೬೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ

ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿದ್ದಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇ ಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ

ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕ ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

– ರಾಘವಾಂಕ

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ–ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ

ಮನಸ್ಸು ಮತ್ತು ಶ್ರವಣವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿ ಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೊಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ–ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು. ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು

ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ–ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು

ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವ್ಯತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ– ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ

ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

ಕರ್ನಾಟಕ ಸರ್ಕಾರ: ಚಿಗುರಿದ ಸಂಸ್ಕೃತಿಯ ಸಾರ
ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ–ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ

ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಆರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ

'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು–ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು,.... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಅಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು

ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ಯಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ

ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು; ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦–೦೨–೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಹಾಗೂ ಸಾಹಿತಿಗಳಾದ ಶ್ರೀ ಕಾ.ತ.ಚಿಕ್ಕಣ್ಣರವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ.

ಈ ಸಂಪುಟಗಳು ಅಚ್ಚುಕಟ್ಟಾಗಿ ಹೊರಬರಲು ಜಾನಪದ ತಜ್ಞರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಅವಿರತ ಶ್ರಮ ನೆರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ.ಎನ್. ಪರಡ್ಡಿ ಮತ್ತು ಅಕಾಡೆಮಿ ಸಿಬ್ಬಂದಿ ವರ್ಗ ಶ್ರದ್ಧೆವಹಿಸಿ ಬೆಂಬಲಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

ಪ್ರೊ. ಹಿ. ಶಿ. ರಾಮಚಂದ್ರೇಗೌಡ
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

ಮೊದಲ ಮಾತು

ಬಹಳಷ್ಟು ಸುದೀರ್ಘ ಕಾಲದ ಸಂಪಾದನೆಯ ಕೆಲಸದ ಬಳಿಕ ಈ ಕೃತಿ ಪ್ರಕಟಗೊಳ್ಳುತ್ತಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳ' ಸಂಪಾದನಾ ಯೋಜನೆಯಲ್ಲಿ (೨೦೦೬) ಕನ್ನಡ ಒಗಟುಗಳ ಸಂಪಾದನೆಯ ಕೆಲಸವನ್ನು ಸಂಪಾದಕ ಮಂಡಳಿ ನನಗೆ ವಹಿಸಿಕೊಟ್ಟಾಗ, ಕರ್ನಾಟಕದಾದ್ಯಂತ ದೊರಕುವ ಒಗಟುಗಳನ್ನು ಕ್ಷೇತ್ರಕಾರ್ಯದ ಮೂಲಕ ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸುವುದು ಕಷ್ಟಸಾಧ್ಯ ಎಂದು ಅನಿಸಿತು. ಹೀಗಾಗಿ, ಈಗಾಗಲೇ, ಸಾಕಷ್ಟು ಸಂಖ್ಯೆಯಲ್ಲಿ ಕನ್ನಡ ಒಗಟುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿರುವ ಅನೇಕ ಗ್ರಂಥಗಳು ಲಭ್ಯವಿರುವುದರಿಂದ, ಅಂತಹ ಪ್ರಕಟಿತ ಗ್ರಂಥಗಳಿಂದಲೇ ಒಗಟುಗಳನ್ನು ಕಲೆಹಾಕಿ ಅವುಗಳನ್ನು ಸಂಪಾದಿಸಿ, ಸಂಪುಟ ರೂಪದಲ್ಲಿ ಪ್ರಕಟಿಸಬಹುದೆಂದು ಯೋಚಿಸಿ, ಒಗಟುಗಳ ಸಂಗ್ರಹ ಹಾಗೂ ಸಂಪಾದನೆಯ ಕೆಲಸವನ್ನು ಆರಂಭಿಸಲಾಯಿತು. ಈ ನಿಟ್ಟಿನಲ್ಲಿ, ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳಲ್ಲಿ ಲಭ್ಯವಿರುವ ಹಾಗೂ ವೈಯಕ್ತಿಕ ಸಂಗ್ರಹಗಳಿಂದ ದೊರಕುವ ಒಗಟುಗಳ ಸಂಕಲನಗಳನ್ನು ಕಲೆ ಹಾಕಿದಾಗ, ಬಹಳಷ್ಟು ಸಂಖ್ಯೆಯಲ್ಲಿ ಒಗಟುಗಳ ಸಂಪಾದಿತ ಸಂಕಲನಗಳು ದೊರೆತವು. ಇವುಗಳಲ್ಲಿ, ಕರ್ನಾಟಕದ ವಿವಿಧ ಪ್ರಾಂತೀಯ ಭಾಷಾ ವಲಯಗಳಿಗೆ ಸಂಬಂಧಪಟ್ಟ ಒಗಟುಗಳ ಸಂಕಲನಗಳಲ್ಲದೆಯೇ, ಲಂಬಾಣಿ, ಹವ್ಯಕ ಈ ಮುಂತಾದ ನಿರ್ದಿಷ್ಟ ಭಾಷಿಕ, ಸಾಮಾಜಿಕ ಸಮುದಾಯಗಳಿಗೆ ಸಂಬಂಧಪಟ್ಟಂತಹ ಒಗಟುಗಳ ಸಂಕಲನಗಳೂ ದೊರೆತವು. ಇವಲ್ಲದೆಯೇ, ಕತೆಗಳು, ಘಟನೆಗಳು ಹಿನ್ನೆಲೆಯಾಗಿರುವ ಪ್ರತ್ಯೇಕ ಒಗಟುಗಳ ಸಂಕಲನಗಳೂ ದೊರೆತವು. ಹೀಗೆ, ಸಂಪಾದಿತ ಸಂಕಲನಗಳಿಂದ, ಒಗಟುಗಳನ್ನು ಸಂಗ್ರಹಿಸಿ, ಸಂಪಾದನೆಯ ಕೆಲಸಕ್ಕೆ ತೊಡಗಿದಾಗ, ಈ ಯೋಜನೆಯಲ್ಲಿ ಮುದ್ರಣಕ್ಕೆ ನಿಗದಿಪಡಿಸಿರುವ ಪುಟಗಳ ಪರಿಮಿತಿಯೊಳಗೆ, ಅಪಾರ ಸಂಖ್ಯೆಯಲ್ಲಿರುವ

ಎಲ್ಲ ಬಗೆಯ ಒಗಟುಗಳನ್ನು ಸಂಪಾದಿಸಿ ಸಂಕಲಿಸುವುದು ಕಷ್ಟಸಾಧ್ಯವೆನಿಸಿತು. ಈ ಹಿನ್ನೆಲೆಯಲ್ಲಿ, ಸಂಪಾದಿತ ಕೃತಿಗಳಿಂದ ಸಂಗ್ರಹಿಸಿದ ಒಗಟುಗಳನ್ನು ಆಯ್ಕೆ ಮಾಡಿ ನಿರ್ದಿಷ್ಟ ವಿಧಾನಕ್ರಮದಲ್ಲಿ ಸಂಪಾದಿಸುವ ಕೆಲಸವನ್ನು ಆರಂಭಿಸಲಾಯಿತು.

ಪ್ರಸ್ತುತ ಯೋಜನೆಯಲ್ಲಿ, ಯಾವ ವಿಧಾನಕ್ರಮ ಹಾಗೂ ತಾತ್ತ್ವಿಕ ಚೌಕಟ್ಟಿನಲ್ಲಿ ಒಗಟುಗಳ ಸಂಪಾದನೆಯ ಕೆಲಸವನ್ನು ನಿರ್ವಹಿಸುವುದು; ಈಗಾಗಲೇ ಸಂಕಲನಗಳ ರೂಪದಲ್ಲಿ ಪ್ರಕಟಗೊಂಡಿರುವ ಸಂಪಾದಿತ ಒಗಟುಗಳು ಪ್ರತಿನಿಧಿಸುತ್ತಿರುವ ಕರ್ನಾಟಕದ ಭಾಷಿಕ ಹಾಗೂ ಸಾಂಸ್ಕೃತಿಕ ನಾನಾ ರೂಪಗಳನ್ನು ಹೇಗೆ ದಾಖಲಿಸುವುದು; ಈ ಬಗೆಯ ವೈಧಾನಿಕ, ತಾತ್ತ್ವಿಕ ಸಮಸ್ಯೆಗಳು ಸಂಪಾದನೆಯ ಸಂದರ್ಭದಲ್ಲಿ ಎದುರಾದುವು. ಈಗಾಗಲೇ ಪ್ರಕಟಗೊಂಡಿರುವ ಒಗಟುಗಳ ಸಂಕಲನಗಳು ಕರ್ನಾಟಕದ ಪ್ರಾಂತೀಯ ಭಾಷೆ, ಸಂಸ್ಕೃತಿಯನ್ನು ಪ್ರತಿನಿಧಿಸುವ ಸ್ವರೂಪದಲ್ಲಿರುವುದರಿಂದ, ಪ್ರಮಾಣೀಕೃತ ಏಕರೂಪೀ ಕನ್ನಡದ ಬದಲು ಭಾಷಿಕ, ಪ್ರಾದೇಶಿಕ, ಸಾಂಸ್ಕೃತಿಕ ನೆಲೆಗಳಲ್ಲಿ ನಾನಾ ರೂಪಗಳಲ್ಲಿರುವ ಬಹುರೂಪೀ, ವೈವಿಧ್ಯದ 'ಕನ್ನಡಂಗಳ' ಸ್ವರೂಪವನ್ನು ಪ್ರತಿನಿಧಿಸುವ, 'ಭಾಷಿಕ ಸಾಂಸ್ಕೃತಿಕ ಪ್ರಾಂತೀಯ ನಕಾಶೆ'ಯೊಂದನ್ನು ಅನಾವರಣಗೊಳಿಸುವ ನೆಲೆಯಲ್ಲಿ ಒಗಟುಗಳನ್ನು ಸಂಪಾದಿಸಿ ಸಂಕಲಿಸುವುದು ತಾತ್ತ್ವಿಕ ಹಾಗೂ ವೈಧಾನಿಕತೆಯ ನೆಲೆಯಲ್ಲಿ ಹೆಚ್ಚು ಸಮಂಜಸವೆನಿಸಿತು. ಈ ನೆಲೆಯಲ್ಲಿ ಕತೆ, ಘಟನೆಗಳು ಹಿನ್ನೆಲೆಯಾಗಿರುವ ಒಗಟುಗಳನ್ನು ಹೊರತುಪಡಿಸಿ, ಬಯಲು ಸೀಮೆ, ಮಲೆನಾಡು, ಹಾಗೂ ಕರಾವಳಿ ಭಾಗ ಎಂದೆನ್ನುವ 'ಜನಪದೀಯ'ವಾಗಿರುವ ಸಾಂಪ್ರದಾಯಿಕ ಸೀಮೆ ಅಥವಾ ಪ್ರಾಂತೀಯ ಪ್ರತಿನಿಧೀಕರಣದ ನೆಲೆಯಲ್ಲಿ ಕನ್ನಡಂಗಳ ಒಗಟುಗಳನ್ನು ಸಂಪಾದಿಸುವುದು ಹೆಚ್ಚು ಸೂಕ್ತವೆಂದೆನಿಸಿತು. ಈಯೊಂದು ತಾತ್ತ್ವಿಕತೆಯ ಹಿನ್ನೆಲೆಯಲ್ಲಿ, ಮೈಸೂರು, ಮಂಡ್ಯ, ತುಮಕೂರು, ಬೆಂಗಳೂರು, ಉತ್ತರ ಕರ್ನಾಟಕ, ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ವಿವಿಧ ಪ್ರಾಂತ್ಯಗಳನ್ನು ಪ್ರತಿನಿಧಿಸುವ ಪ್ರಕಟಿತ ಒಗಟುಗಳ ಸಂಕಲನಗಳಿಂದ ಒಗಟುಗಳನ್ನು ಸಂಗ್ರಹಿಸಿ, ಈ ಗ್ರಂಥದಲ್ಲಿ ಸಂಪಾದಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಅರ್ಥದಲ್ಲಿ, ಕರ್ನಾಟಕದ ವಿವಿಧ ಪ್ರಾಂತೀಯ ಭಾಷೆಗಳ ಭಾಷಿಕ, ಪ್ರಾದೇಶಿಕ, ಸಾಂಸ್ಕೃತಿಕ ವೈವಿಧ್ಯವನ್ನು ಅನಾವರಣಗೊಳಿಸುವ ಈ ಸಂಕಲನವನ್ನು 'ಕನ್ನಡಂಗಳ ಒಗಟುಗಳು' ಎಂಬುದಾಗಿ ಸಂಪಾದಿಸಲಾಗಿದೆ.

ಸಂಪಾದನೆಯ ಆರಂಭಿಕ ಹಂತದಲ್ಲಿ ಪ್ರಾಂತೀಯ ಪ್ರತಿನಿಧೀಕರಣದ ನೆಲೆಯಲ್ಲಿ ಒಗಟುಗಳನ್ನು ಸಂಗ್ರಹಿಸಿದರೂ, ಸಂಗ್ರಹಿಸಿರುವ ಒಗಟುಗಳನ್ನು ಯಾವ ವೈಧಾನಿಕ ಮಾದರಿಯಲ್ಲಿ ಸಂಪಾದಿಸುವುದು ಎಂಬ ಸಂದಿಗ್ಧತೆಯೂ ಎದುರಾಯಿತು. ಯಾಕೆಂದರೆ, ಪ್ರಕಟಿತ ಒಗಟುಗಳ ಸಂಕಲನಗಳ ಸಂಪಾದನಾ ವಿಧಾನವನ್ನು ಗಮನಿಸಿದಾಗ, ಸಂಪಾದಿತ ಒಗಟುಗಳ ಸಂಕಲನಗಳಲ್ಲಿ ಪ್ರಮುಖವಾಗಿ, ಎರಡು ಮಾದರಿಗಳು ಕಂಡುಬಂದುವು. ಒಂದು, ಅಕಾರಾದಿ ವರ್ಗೀಕರಣದ ಮಾದರಿ. ಇನ್ನೊಂದು, ವಿಷಯ ಅಥವಾ ವಸ್ತುನಿಷ್ಠ ವರ್ಗೀಕರಣದ ಮಾದರಿ. ಈ ಎರಡೂ ಮಾದರಿಗಳಲ್ಲಿ ಸಾಹಿತ್ಯದ ಪರಿಕಲ್ಪನೆಯಲ್ಲಿ ಒಗಟುಗಳನ್ನು ಜನಪದ ಸಾಹಿತ್ಯ ಪ್ರಕಾರವಾಗಿ ಪರಿಕಲ್ಪಿಸಿಕೊಂಡು, ಒಗಟುಗಳ ಸ್ವರೂಪವನ್ನು ಪ್ರಶ್ನೆ ಮತ್ತು ಉತ್ತರ ಅನ್ನುವ ಎರಡು ಪ್ರತ್ಯೇಕ ಪ್ರತ್ಯೇಕ ಘಟಕಗಳಾಗಿ ಗ್ರಹಿಸಿರುವುದನ್ನು ಕಾಣುತ್ತೇವೆ. ಮಾತ್ರವಲ್ಲ, ಪ್ರಶ್ನೆಯ ಭಾಗವನ್ನೇ ಪ್ರಧಾನವೆಂದು ಪರಿಗಣಿಸಿ, ಅದನ್ನೇ ಆಧಾರವಾಗಿರಿಸಿಕೊಂಡು ಒಗಟುಗಳ ಸಂಪಾದನೆಯನ್ನು ಮಾಡಿರುವುದನ್ನೂ ಕಾಣುತ್ತೇವೆ. ಒಗಟುಗಳನ್ನು ಒಡಚುವ, ಒಗಟುಗಳನ್ನು ಹೇಳುವ ಮತ್ತು ಕೇಳುವ ಮೌಖಿಕ ಪ್ರಕ್ರಿಯೆಗಳು ಮರೆಯಾಗಿ, ಆಕ್ಷರಿಕವಾಗಿ ಓದುವ ಒಗಟುಗಳಾಗಿ ರೂಪಾಂತರಗೊಂಡು, ಲಿಪೀಕೃತ ಪಠ್ಯೀಕರಣದ ಪ್ರಕ್ರಿಯೆಗೆ ಒಳಗಾಗುವ ಸಂಪಾದನೆಯ ಹಂತದಲ್ಲಿ ಒಗಟುಗಳು ಪ್ರಶ್ನೆ ಮತ್ತು ಉತ್ತರದ ಭಾಗಗಳಾಗಿ ವಿಭಾಗೀಕರಣಗೊಂಡು, ಪ್ರತ್ಯೇಕ ಪ್ರತ್ಯೇಕ ಘಟಕಗಳಾಗಿ ಎಲ್ಲ ಸಂಕಲನಗಳಲ್ಲಿ ಸಂಪಾದಿತಗೊಂಡಿವೆ. ಸಂಪಾದನೆಯ ಸಂದರ್ಭದಲ್ಲಿ, ಒಗಟು ಅಂದರೆ ಪ್ರಶ್ನೆ ಎಂದೇ ಪರಿಭಾವಿಸಿಕೊಂಡ ಕಾರಣದಿಂದಾಗಿ, ಒಗಟುಗಳ ಸಂಪಾದನೆಯಲ್ಲಿ ಒಗಟುಗಳ ಪ್ರಶ್ನೆಯ ಭಾಗಗಳು, ಆಯಾ ಕೃತಿಯ ಪುಟಗಳ ಮೇಲ್ಭಾಗದಲ್ಲಿ ಅಕಾರಾದಿಯಾಗಿ ಜೋಡಣೆಗೊಂಡಿದ್ದರೆ, ಅವುಗಳಿಗೆ ಅನುಕ್ರಮವಾಗಿ, ಒಗಟುಗಳ ಉತ್ತರಗಳು ಆಯಾ ಪುಟಗಳ ಅಡಿಟಿಪ್ಪಣಿಯ ಭಾಗಗಳಲ್ಲಿ ಅಥವಾ ಕೃತಿಯ ಕೊನೆಯ ಪುಟಗಳಲ್ಲಿ ಜೋಡಣೆಗೊಂಡಿವೆ. ಬಹಳ ಕುತೂಹಲದ ಸಂಗತಿ ಎಂದರೆ, ಈ ಬಗೆಯ ಸಂಪಾದನಾ ವಿಧಾನದಲ್ಲಿ ತಾತ್ತ್ವಿಕವಾಗಿ ಒಗಟುಗಳ ಸ್ವರೂಪದಲ್ಲಿರುವ ಗೌಪ್ಯವನ್ನು ಕಾಪಾಡುವ ತಂತ್ರವನ್ನು (ಇದು ಒಗಟಿನ ಗುಣಲಕ್ಷಣ) ನಾವು ಕಾಣಬಹುದು. ವಿಷಯನಿಷ್ಠ ಅಥವಾ ವಸ್ತುನಿಷ್ಠ ನೆಲೆಯಲ್ಲಿ ಒಗಟುಗಳನ್ನು ವರ್ಗೀಕರಿಸಿರುವ ಸಂಪಾದನಾ ವಿಧಾನದ ಇನ್ನೊಂದು ಮಾದರಿಯಲ್ಲೂ ಒಗಟುಗಳ ಸ್ವರೂಪವನ್ನು ಪ್ರಶ್ನೆ ಮತ್ತು ಉತ್ತರ

ಅನ್ನುವ ಪ್ರತ್ಯೇಕ ಪ್ರತ್ಯೇಕ ಘಟಕಗಳಾಗಿ ಒಡೆದು ಅವುಗಳನ್ನು ವರ್ಗೀಕರಿಸಿರುವ ವಿಧಾನವನ್ನು ಕಾಣಬಹುದು. ವಸ್ತುನಿಷ್ಠ ಅಥವಾ ವಿಷಯನಿಷ್ಠ ಎಂದೆನಿಸಿಕೊಳ್ಳುವ ಈ ವಿಧಾನದಲ್ಲಿ, ವರ್ಣನಾಂಶಗಳನ್ನೊಳಗೊಂಡಿರುವ ಒಗಟಿನ ಪ್ರಶ್ನೆಯ ಭಾಗದಲ್ಲಿ ಒಗಟುಗಳ ವಸ್ತು ಅಥವಾ ವಿಷಯಗಳನ್ನು ಗುರುತಿಸಿ, ವರ್ಗೀಕರಿಸಿರುವ ಒಂದು ಮಾದರಿಯಿದ್ದರೆ, ಒಗಟುಗಳ ಉತ್ತರದ ಭಾಗದಲ್ಲಿ ವಸ್ತು ಅಥವಾ ವಿಷಯಗಳನ್ನು ಗುರುತಿಸಿ ಅವುಗಳಿಗೆ ಅನುಸಾರವಾಗಿ ಒಗಟುಗಳನ್ನು ಅಕಾರಾದಿಯಾಗಿ ಜೋಡಿಸಿರುವ ಮತ್ತೊಂದು ಮಾದರಿಯನ್ನೂ ಕಾಣಬಹುದು. ಪ್ರಶ್ನೆ ಮತ್ತು ಉತ್ತರದ ಭಾಗಗಳೆಂದು ಒಗಟುಗಳ ಸಂರಚನೆಯನ್ನು ಒಡೆದು ಸಂಪಾದಿಸಿ, ಸಂಕಲಿಸಿರುವ ಈ ಅಧ್ಯಯನ ವಿಧಾನ ಮತ್ತು ಗ್ರಹಿಕೆಯ ಕ್ರಮವನ್ನು ಕೇವಲ ಒಗಟುಗಳ ಸಂಪಾದನೆಯ ಸಂದರ್ಭದಲ್ಲಿ ಮಾತ್ರವಲ್ಲದೆ, ಒಗಟುಗಳ ಸ್ವರೂಪವನ್ನು ವಿವೇಚಿಸಿರುವ, ವಿಶ್ಲೇಷಿಸಿರುವ ಈವರೆಗಿನ ಎಲ್ಲ ಅಧ್ಯಯನಗಳಲ್ಲೂ ಕಾಣಬಹುದಾಗಿದೆ.

ಆದರೆ, ಸೊಲೊಮನ್ ದ್ವೀಪದ ಲಾವೊ ಜನಾಂಗದ ಒಗಟುಗಳ ಸಂರಚನಾತ್ಮಕ ಅಧ್ಯಯನವನ್ನು ನಡೆಸಿರುವ ಮರಾಂಡ, ಒಗಟುಗಳ ಒಡಲನ್ನು ಪ್ರಶ್ನೆ ಮತ್ತು ಉತ್ತರದ ಭಾಗಗಳಾಗಿ ಒಡೆಯದೆ, ಪ್ರಶ್ನೆ ಮತ್ತು ಉತ್ತರವನ್ನೊಳಗೊಂಡ ಸಮಗ್ರ ಸಂರಚನೆಯಾಗಿ ಗ್ರಹಿಸಿ, ಒಗಟುಗಳ ಸ್ವರೂಪವನ್ನು 'ಸಂರಚನಾತ್ಮಕ ಏಕಕವಾಗಿ' (structural unit) ಪರಿಭಾವಿಸುತ್ತಾರೆ. ಈ ಅರ್ಥದಲ್ಲಿ, ಇಂದು, ಒಗಟುಗಳ ಸ್ವರೂಪವನ್ನು ಗ್ರಹಿಸಲು ಮರಾಂಡ ಅವರ ವಿಧಾನ ಹೆಚ್ಚು ಸಮಂಜಸವೆನಿಸುತ್ತದೆ. ಈ ಕಾರಣದಿಂದ, ಪ್ರಸ್ತುತ 'ಕನ್ನಡಂಗಳ ಒಗಟುಗಳ' ಸಂಪಾದನೆ ಮತ್ತು ಸಂಕಲನದಲ್ಲಿ ಈ ವಿಧಾನವನ್ನೇ ಅನುಸರಿಸಲಾಗಿದೆ. ಒಗಟುಗಳ ಸ್ವರೂಪವನ್ನು ಸಂರಚನಾತ್ಮಕ ಏಕಕವಾಗಿ ಗ್ರಹಿಸಿರುವುದರಿಂದಲೇ, ಈವರೆಗಿನ ಒಗಟುಗಳ ಸಂಪಾದನಾ ವಿಧಾನದಂತೆ, ಒಗಟುಗಳ ಸ್ವರೂಪವನ್ನು ಪ್ರಶ್ನೆ ಮತ್ತು ಉತ್ತರದ ಭಾಗಗಳೆಂದು ಪ್ರತ್ಯೇಕಿಸಿ, ಪ್ರಶ್ನೆಯ ಭಾಗವನ್ನು ಅಕಾರಾದಿಯಾಗಿ ಜೋಡಿಸಿಕೊಳ್ಳದೆ, ಪ್ರಶ್ನೆ ಮತ್ತು ಉತ್ತರವನ್ನೊಳಗೊಂಡ ಒಗಟನ್ನು ಒಂದು ರೂಪಕವಾಗಿ ಗ್ರಹಿಸಿ ಈ ನೆಲೆಯಲ್ಲಿಯೇ ಒಗಟುಗಳನ್ನು ಸಂಪಾದಿಸುವ ಪ್ರಯತ್ನವನ್ನು ಮಾಡಲಾಗಿದೆ.

ಸಂಗ್ರಹಿಸಿದ ಸಂಕಲನಗಳಿಂದ ಪ್ರತಿಯೊಂದು ಸಂಕಲನದ ಒಗಟುಗಳನ್ನು ಸಂಪಾದಿಸುವ ಕೆಲಸವನ್ನು ಆರಂಭಿಸಿದಾಗ ಮೊದಲು ಪ್ರತ್ಯೇಕ ಪ್ರತ್ಯೇಕವಾದ

ಪಟ್ಟಿಕೆಗಳಲ್ಲಿ ಒಗಟುಗಳ ಉತ್ತರಗಳನ್ನು ನಮೂದಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಯಿತು. ಪ್ರತಿಯೊಂದು ಉತ್ತರಗಳನ್ನು ಪ್ರಕಟಿತ ಸಂಕಲನಗಳಿಂದ ನಮೂದಿಸಿಕೊಂಡ ಬಳಿಕ ಆಯಾ ಉತ್ತರಗಳಿರುವ ಪಟ್ಟಿಕೆಗಳಲ್ಲಿ ಆಯಾ ಉತ್ತರಗಳನ್ನು ಒಳಗೊಂಡಿರುವ ಒಗಟುಗಳ ಪ್ರಶ್ನೆಯ ಭಾಗಗಳನ್ನೂ ನಮೂದಿಸಿಕೊಳ್ಳಲಾಯಿತು. ಹೀಗೆ, ಒಂದೇ ಉತ್ತರವಿರುವ ಹಲವಾರು ಒಗಟುಗಳು ಪ್ರಾಂತೀಯವಾಗಿ ಬೇರೆ ಬೇರೆ ಸಂಕಲನಗಳಿಂದ ದೊರೆತವು. ಈ ಎಲ್ಲ ಒಗಟುಗಳ ಜೊತೆಗೆ, ಒಗಟುಗಳು ಯಾವ ಯಾವ ಸಂಕಲನಗಳಲ್ಲಿ ಪ್ರಕಟಗೊಂಡಿವೆ ಅನ್ನುವ ವಿವರಗಳನ್ನೂ ದಾಖಲಿಸಲಾಯಿತು. ಸಂಪಾದಕರ ಹೆಸರು, ಒಗಟಿನ ಸಂಖ್ಯೆ, ಪುಟ ಸಂಖ್ಯೆ, ಪ್ರಕಾಶನ ಸಂಸ್ಥೆ ಹೀಗೆ, ಪ್ರಕಟಣೆಯ ಎಲ್ಲ ವಿವರಗಳನ್ನು ನಮೂದಿಸಿಕೊಂಡ ಬಳಿಕ, ನಮೂದು ಪಟ್ಟಿಕೆಗಳನ್ನು ಅಕಾರಾದಿಯಾಗಿ ಜೋಡಿಸಿಕೊಳ್ಳಲಾಯಿತು. ಈ ವಿಧಾನದಲ್ಲಿ ಒಗಟುಗಳನ್ನು ಸಂಪಾದಿಸಿಕೊಂಡಾಗ, ಒಂದೇ ಉತ್ತರಕ್ಕೆ ಬೇರೆ ಬೇರೆ ಸಂಕಲನಗಳಲ್ಲಿ ದೊರೆಯುವ ಒಗಟುಗಳ ವಿವಿಧ ರೂಪಗಳನ್ನು ಕಂಡುಕೊಳ್ಳಲಾಯಿತು. ಒಗಟುಗಳ ಸಂರಚನೆ ಮತ್ತು ಅವುಗಳ ರೂಪಪರಿವರ್ತನೆ ಹಾಗೂ ಸಾಂಸ್ಕೃತಿಕ ಸ್ವರೂಪಕ್ಕೆ ಸಂಬಂಧಿಸಿದಂತೆ ಪ್ರಾಂತೀಯವಾದ ಹಲವಾರು ಕುತೂಹಲದ ಅಂಶಗಳು ಕಾಣಿಸಿಕೊಂಡವು.

ಈ ಹಿನ್ನೆಲೆಯಲ್ಲಿ, ಒಗಟುಗಳ ಪ್ರಶ್ನೆಯ ಭಾಗವನ್ನೇ ಪ್ರಧಾನವಾಗಿ ಲಕ್ಷ್ಯದಲ್ಲಿರಿಸಿ ಅವುಗಳನ್ನು ಅಕಾರಾದಿಯಾಗಿ ವರ್ಗೀಕರಿಸಿ ಜೋಡಿಸಿರುವ ಮತ್ತು ಒಗಟಿನ ಉತ್ತರದ ಆಧಾರದಲ್ಲಿ ಒಗಟುಗಳ ವಿಷಯ ಅಥವಾ ವಸ್ತುವನ್ನು ಒಗಟುಗಳ ಪ್ರಶ್ನೆಯ ಭಾಗಗಳಲ್ಲಿ ಗುರುತಿಸಿ ವಿಷಯನಿಷ್ಠ ಮಾದರಿಯಲ್ಲಿ ಅಕಾರಾದಿಯಾಗಿ ವರ್ಗೀಕರಿಸಿ ಸಂಪಾದಿಸಿರುವ ಈ ಎರಡೂ ಕ್ರಮಗಳನ್ನು ಕೈಬಿಟ್ಟು, ಮರಾಂಡ ಅವರು ಗ್ರಹಿಸಿರುವಂತೆ, ಪ್ರಶ್ನೆ ಮತ್ತು ಉತ್ತರವನ್ನು ಸಮಗ್ರ ಸಂರಚನೆಯಾಗಿ ಗ್ರಹಿಸಿ, ಪ್ರಶ್ನೆ ಮತ್ತು ಉತ್ತರವನ್ನೊಳಗೊಂಡ 'ಜನಪದೀಯ ಮಾದರಿ'ಯಲ್ಲೇ ಈ ಸಂಪುಟದಲ್ಲಿ ಒಗಟುಗಳನ್ನು ಸಂಪಾದಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ವೈಧಾನಿಕತೆ ಮತ್ತು ತಾತ್ತ್ವಿಕತೆಯ ನೆಲೆಯಲ್ಲಿ ರೂಪಕವಾಗಿ ಗ್ರಹಿಸುವ ಒಗಟುಗಳ ಸ್ವರೂಪದಲ್ಲಿ ಒಗಟುಗಳ ಉತ್ತರಗಳನ್ನು ಅನುಸರಿಸಿ, ಒಗಟುಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡು ಇದಕ್ಕೆ ಅನುಗುಣವಾಗಿ ಆಯಾ ಒಗಟುಗಳ ಪ್ರಶ್ನೆಯ ಭಾಗಗಳನ್ನು ಉತ್ತರದ ಜೊತೆಯಾಗಿಯೇ ಜೋಡಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಉತ್ತರಗಳಿಗೆ

ಅನುಗುಣವಾಗಿ ಪ್ರಶ್ನೆಯ ಭಾಗಗಳನ್ನು ಸಂಕಲಿಸಿಕೊಳ್ಳುವಾಗ ಒಂದೇ ಉತ್ತರದ ವಿವಿಧ ವರ್ಣನಾಂಶಗಳಿರುವ ಬಗೆ ಬಗೆಯ ಒಗಟುಗಳು ದೊರೆತವು. ಉತ್ತರವನ್ನು ಅನುಸರಿಸಿ ಅಕಾರಾದಿಯಾಗಿ ಒಗಟುಗಳನ್ನು ಜೋಡಿಸಿಕೊಳ್ಳುವ ಜೊತೆಗೆ, ಒಂದೇ ಉತ್ತರದ ವಿವಿಧ ವರ್ಣನಾಂಶಗಳಿರುವ ಒಗಟುಗಳನ್ನೂ (ಪ್ರಶ್ನೆಯ ಭಾಗ) ಅನುಕೂಲಕ್ಕಾಗಿ ಮತ್ತೆ ಅಕಾರಾದಿಯಾಗಿಯೇ ಜೋಡಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಈ ಮಾದರಿಯ ಸಂಪಾದನಾ ವಿಧಾನದ ಅನುಕೂಲತೆ ಏನೆಂದರೆ, ಒಗಟುಗಳ ರೂಪಕಾತ್ಮಕ ಸ್ವರೂಪದ ಜೊತೆಗೆ, ಒಗಟುಗಳ ರೂಪಪರಿವರ್ತನೆಯ ವಿನ್ಯಾಸವನ್ನೂ ನಾವು ನಮ್ಮ ಅನುಭವಕ್ಕೆ ತಂದುಕೊಳ್ಳಬಹುದಾಗಿದೆ. ಇದಲ್ಲದೆಯೇ, ಪ್ರಶ್ನೆಯ ಭಾಗದಲ್ಲಿರುವ ಒಂದೇ ರೂಪದ ಒಗಟಿನ ವರ್ಣನಾಂಶಗಳಿಗೆ ಪ್ರಾಂತೀಯವಾಗಿ, ಸಾಂಸ್ಕೃತಿಕವಾಗಿ ಅನೇಕ ಬಗೆಯ ಉತ್ತರಗಳು ಇರುವುದನ್ನೂ ಈ ವಿಧಾನದಿಂದ ಗುರುತಿಸಿಕೊಳ್ಳಬಹುದಾಗಿದೆ. ಅದೇ ರೀತಿ, ಒಂದೇ ಉತ್ತರವನ್ನೊಳಗೊಂಡ ಒಗಟುಗಳ ಪ್ರತಿಮೆಗಳು ಪ್ರಾಂತೀಯವಾಗಿ, ಸಾಂಸ್ಕೃತಿಕವಾಗಿ ಪಡೆದುಕೊಂಡಿರುವ ಪ್ರತಿಮಾತ್ಮಕವಾಗಿರುವ ವೈವಿಧ್ಯಮಯ ವರ್ಣನಾಂಶಗಳನ್ನು ಹೊಂದಿರುವ ಒಗಟಿನ ರೂಪಕಗಳನ್ನೂ ಈ ಗ್ರಂಥಸಂಪಾದನಾ ವಿಧಾನದಿಂದ ಕಾಣಬಹುದಾಗಿದೆ. ಮರಾಂಡ ಅವರ ಪ್ರಕಾರ, ಒಗಟಿನ ಸ್ವರೂಪದಲ್ಲಿ ಅನೇಕ ಉತ್ತರಗಳನ್ನು ಹೊಂದಿರುವ ಪ್ರತಿಮೆಗಳಿವೆ. ಅದೇ ರೀತಿ, ಅನೇಕ ಒಗಟಿನ ಪ್ರತಿಮೆಗಳಿಗೆ ಒಂದೇ ಉತ್ತರವೂ ಇರುವುದಿದೆ. ಹೀಗಿದ್ದರೂ, ಒಗಟಿನ ಉತ್ತರ ಯಾದೃಚ್ಛಿಕ ಎಂದಾಗುವುದಿಲ್ಲ. ಈ ಹಿನ್ನೆಲೆಯಲ್ಲಿ, ಗ್ರಂಥ ಸಂಪಾದನೆ ಹಾಗೂ ಜಾನಪದ ಅಧ್ಯಯನದಲ್ಲಿ ಸಾಂಪ್ರದಾಯಿಕವಾಗಿ ಬಳಕೆಯಲ್ಲಿರುವ 'ಮೂಲ ಪಠ್ಯ' ಹಾಗೂ 'ಪಾಠಾಂತರ' ಅನ್ನುವ ಪರಿಭಾಷೆಗಳನ್ನು ಈ ಸಂಪಾದನಾ ವಿಧಾನಕ್ರಮದಲ್ಲಿ ಪುನರ್ ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಜಾನಪದ ಅಧ್ಯಯನದ ಪರಿಭಾಷೆಗಳಲ್ಲಿ ಪ್ರಚಲಿತದಲ್ಲಿರುವ 'ಪಾಠಾಂತರ'ದ ಬದಲು 'ಕನ್ನಡಂಗಳ ಒಗಟುಗಳ' ಸಂಪಾದನೆಯ ಸಂದರ್ಭದಲ್ಲಿ, 'ರೂಪಾಂತರ' ಅನ್ನುವ ಪರಿಭಾಷೆಯಲ್ಲಿಯೇ ಒಗಟುಗಳ ಸ್ವರೂಪವನ್ನು ಗ್ರಹಿಸುವುದು ಹೆಚ್ಚು ಸಮಂಜಸವೆನಿಸಿದೆ. ಯಾಕೆಂದರೆ, ಜಾನಪದ ಅಧ್ಯಯನದ ಪಾಠಾಂತರ ಅನ್ನುವ ಪರಿಭಾಷೆಯಲ್ಲಿ ಮೂಲಪಠ್ಯದ ಕಲ್ಪನೆ ಇದೆ. ಈ ಕಲ್ಪನೆಯಲ್ಲಿ ಮೂಲಭೂತವಾದೀ ನಿಲುವು ಕೂಡಾ ಇದೆ. ಈ ನಿಲುವಿನಿಂದ ರೂಪುಗೊಳ್ಳುವ ಮೂಲಪಠ್ಯದ ಪರಿಕಲ್ಪನೆಯಲ್ಲಿಯೇ

ಪಾಠಾಂತರದ ಪರಿಕಲ್ಪನೆ ಹುಟ್ಟಿಕೊಳ್ಳುತ್ತದೆ. ಅಂದರೆ, ಪಠ್ಯ ಅಥವಾ ಮೂಲಪಠ್ಯದ ಭಿನ್ನ ಪಾಠಗಳೇ ಪಾಠಾಂತರಗಳೆನಿಬಿಡುತ್ತವೆ. ಇದು ವಿಕಾಸವಾದಿ ಅಥವಾ ಅಪವಿಕಾಸವಾದಿ ಗ್ರಹೀತದಿಂದ ರೂಪುಗೊಳ್ಳುವ ಗ್ರಹಿಕೆಯ ವಿಧಾನ. ಇದು ಸಮಸ್ಯಾತ್ಮಕವೂ ಕೂಡಾ. ಈ ಪರಿಕಲ್ಪನೆಗಿಂತ ಒಗಟಿನ ಸಂಪಾದನೆಯ ಸಂದರ್ಭದಲ್ಲಿ ಒಗಟಿನ ಭಿನ್ನ ಭಿನ್ನ ರೂಪಗಳನ್ನು 'ರೂಪಾಂತರ', 'ರೂಪಪರಿವರ್ತನೆ' ಎಂಬುದಾಗಿ ಪರಿಭಾವಿಸಿಕೊಳ್ಳುವುದು ಹೆಚ್ಚು ಸಮಂಜಸವೆನಿಸುತ್ತದೆ. ಪ್ರಜಾಪ್ರಭುತ್ವವಾದಿ ಮೌಲ್ಯಗಳನ್ನೊಳಗೊಂಡ ಪ್ರಜಾತಂತ್ರದ ಸನ್ನಿವೇಶದಲ್ಲಿ ಜನಪದದ ವಿಭಿನ್ನ ಪಾಠಗಳನ್ನು ಪಾಠಾಂತರ ಅನ್ನುವ ಬದಲು ರೂಪಾಂತರವೆಂದು ಪರಿಕಲ್ಪಿಸಿಕೊಳ್ಳುವುದು ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಕನ್ನಡಂಗಳ ಒಗಟುಗಳ ಸಂಪಾದನೆಯ ಸಂದರ್ಭದಲ್ಲಿ ಈ ಅಂಶವನ್ನು ಪ್ರಧಾನವಾಗಿ ಗಮನದಲ್ಲಿಟ್ಟುಕೊಳ್ಳಲಾಗಿದೆ. ಈ ಬಗೆಯ ಸಂಪಾದನಾ ವಿಧಾನದಲ್ಲಿ ಒಗಟುಗಳ ಪ್ರಾಂತೀಯ ವೈವಿಧ್ಯದ ಜೊತೆಗೆ, ಒಗಟುಗಳ ಭಾಷಿಕ ಸಂರಚನೆಯನ್ನು, ರೂಪಾಂತರ, ರೂಪಪರಿವರ್ತನೆಗಳ ವಿನ್ಯಾಸಗಳನ್ನು, ಸಾಂಸ್ಕೃತಿಕ ಅನನ್ಯತೆಗಳನ್ನೂ ಗಮನಿಸಬಹುದಾಗಿದೆ.

ಈ ಬಗೆಯ ವಿಧಾನಕ್ರಮದಿಂದ, ಒಗಟುಗಳ ಸ್ವರೂಪವನ್ನು ಪ್ರಶ್ನೆ ಮತ್ತು ಉತ್ತರವನ್ನೊಳಗೊಂಡ ಸಂರಚನಾತ್ಮಕ ಏಕಕ ಎಂಬುದಾಗಿ ಗ್ರಹಿಸಬಹುದಲ್ಲದೆ, ಮೌಖಿಕ ರೂಪದಲ್ಲಿರುವ ಜನಪದ ಅಭಿವ್ಯಕ್ತಿಗಳನ್ನು ಆಕ್ಷರಿಕ ರೂಪದಲ್ಲೂ ಸಂಪಾದಿಸಬಹುದಾಗಿದೆ. ಇಂದು, ಒಗಟುಗಳು ಬಾಯಿಯಿಂದ ಹೇಳಿ ಕಿವಿಯಿಂದ ಕೇಳುವ ಅಥವಾ ಕಿವಿಯಿಂದ ಕೇಳಿ ಬಾಯಿಯಿಂದ ಹರಡುವ ಕರ್ತೃತ್ವರಹಿತ ಮೌಖಿಕತೆಯ ಜನಪದ ಲೋಕದಿಂದ, ಕಣ್ಣಿನಿಂದ ಓದಿ ಗ್ರಹಿಸುವ ಆಕ್ಷರಿಕ ಬಂಡವಾಳಶಾಹಿ ಸಮಾಜಕ್ಕೆ ರೂಪಾಂತರಗೊಂಡು ವರ್ಗಾವಣೆಗೊಳ್ಳುತ್ತಿವೆ. ಒಗಟುಗಳ ಸಾಮಾಜಿಕ ಪಯಣದ ಈ ಪ್ರಕ್ರಿಯೆಯಲ್ಲಿ ಹೇಳುವ–ಕೇಳುವ ಧ್ವನಿಪೂರ್ಣ ಮೌಖಿಕತೆಯ ಪ್ರಕ್ರಿಯೆಯಿಂದ (ಜನಪದ ಕೇಳುಗನೂ ಹೌದು ಹೇಳುಗನೂ ಹೌದು) ಒಗಟುಗಳು ಓದುಗ ಮುಖ್ಯನಾಗುವ ಮುದ್ರಿತ ಅಕ್ಷರ ಲೋಕದ ಓದುಗ ಸಮಾಜಕ್ಕೆ ರವಾನೆಯಾಗುತ್ತದೆ. ಲಿಪೀಕರಣದ ಮೂಲಕ ಓದುಗನ ಜೊತೆಗೆ ಅಧ್ಯಯನಕಾರನನ್ನೂ ಒಳಗೊಂಡ ಮುದ್ರಿತ ಬಂಡವಾಳಶಾಹಿ ಆಧುನಿಕ ಸಮಾಜಕ್ಕೆ 'ಜನಪದ ಸಾಹಿತ್ಯ'ವಾಗಿ ಪಯಣವನ್ನು ಬೆಳೆಸುವ ಒಗಟುಗಳನ್ನು

ಜನಪದ ಭಾಷೆಯ ಕಲಾತ್ಮಕತೆ, ರೂಪಕಾತ್ಮಕತೆಯ ಜೊತೆಗೆ, ಭಾಷಿಕ, ಪ್ರಾಂತೀಯ, ಸಾಂಸ್ಕೃತಿಕ ಜ್ಞಾನ ಪರಂಪರೆಯ ಸಂಗತಿಗಳ ಆಧುನಿಕ ಗ್ರಹಿಕೆಯ ಅಧ್ಯಯನಾತ್ಮಕ ಬಗೆಯಲ್ಲೂ ಒಗಟುಗಳನ್ನು ಈ ಸಂಪುಟದಲ್ಲಿ ಸಂಪಾದಿಸಲು ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಜಾನಪದ ಅಧ್ಯಯನಕ್ಕೆ ಅದರಲ್ಲೂ, ಒಗಟುಗಳ ಅಧ್ಯಯನಕ್ಕೆ ಭಿನ್ನ ಆಯಾಮವನ್ನು ರೂಪಿಸಿಕೊಳ್ಳುವ ನೆಲೆಯಲ್ಲಿ 'ಕನ್ನಡಂಗಳ ಒಗಟುಗಳ' ಸಂಪಾದನೆಯ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ. ಈ ಸಂಪಾದನಾ ವಿಧಾನ, 'ಕನ್ನಡಂಗಳ ಒಗಟು'ಗಳ ಭಾಷಿಕ ಹಾಗೂ ಸಾಂಸ್ಕೃತಿಕ ವೈವಿಧ್ಯಗಳ ಬಹುರೂಪೀ ಪ್ರಾಂತೀಯ, ಸೀಮೆ, ನಾಡುಗಳ ಅಧ್ಯಯನಕ್ಕೂ ಹೆಚ್ಚು ಅನುಕೂಲವನ್ನು ಕಲ್ಪಿಸಬಹುದೆಂದು ಭಾವಿಸಲಾಗಿದೆ.

ಪ್ರಾಂತೀಯ, ಭಾಷಿಕ, ಸಾಂಸ್ಕೃತಿಕ ಪ್ರತಿನಿಧೀಕರಣದ ನೆಲೆಯಲ್ಲಿ ಒಗಟುಗಳನ್ನು ಸಂಪಾದಿಸಿರುವ ಈ ಸಂಪಾದನ ವಿಧಾನದಲ್ಲಿ ಪ್ರಾಂತೀಯ ಗಡಿಗಳನ್ನು ದಾಟಿ ಸಾರ್ವತ್ರಿಕವಾಗಿ ಗೋಚರವಾಗುವ ಒಗಟುಗಳ ರಚನೆಗಳನ್ನೂ ಕಾಣಬಹುದಾಗಿದೆ. ಪ್ರಾಂತೀಯ, ಪ್ರಾದೇಶಿಕ ಸಂಸ್ಕೃತಿಯ ಕಾಲದೇಶದ ನಿರ್ದಿಷ್ಟತೆಯನ್ನು ಒಳಗೊಂಡೂ ಒಗಟುಗಳು ಕಾಲದೇಶಾತೀತ ಅಥವಾ ಸಾರ್ವತ್ರಿಕ ಆಗುವುದು ಹೇಗೆ ಅನ್ನುವುದಕ್ಕೆ ಒಗಟುಗಳು ಭಾಷಿಕರೂಪಗಳು ಅನ್ನುವುದು ಕಾರಣವೇ? ಈ ನೆಲೆಯಲ್ಲಿ ಯೋಚಿಸುವುದಾದರೆ, ದ್ರವೀಕೃತ ಮಾತಿನ ಮೂಲಕ ಒಂದು ನಿರ್ದಿಷ್ಟ ಭಾಷೆಯಲ್ಲಿ ಘನೀಕರಣದ ಪ್ರಕ್ರಿಯೆಗೆ ಒಳಗಾಗುವ ಒಗಟುಗಳು, ಮತ್ತೆ ಮಾತಿನ ಬಳಕೆಯ ಮೂಲಕ ದ್ರವೀಕರಣದ ಪ್ರಕ್ರಿಯೆಗೆ ಒಳಗಾಗುತ್ತವೆ. ಹೀಗೆ, ದ್ರವೀಕರಣ ಹಾಗೂ ಘನೀಕರಣದ ಸ್ವಭಾವವನ್ನೊಳಗೊಂಡ ಭಾಷಿಕ ಒಗಟುಗಳು ಈ ಗುಣದಿಂದಲೇ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಪ್ರಸರಣಗೊಳ್ಳುತ್ತವೆ. ಈ ಪ್ರಕ್ರಿಯೆಗೆ ದ್ರವರೂಪೀ ಭಾಷೆಗೆ ನಿರ್ಬಂಧಗಳಿಲ್ಲ ಅನ್ನುವುದು ಕಾರಣನೇ? ಅಥವಾ ಒಗಟುಗಳನ್ನು ಕಟ್ಟುವ ಸ್ವರೂಪವೇ ಕಾರಣನೇ?. ಪರಸ್ಪರ ವಿಭಿನ್ನವಾಗಿರುವ ಮಾನವ ಜನಾಂಗಗಳಲ್ಲಿ ಸಮಾನವಾಗಿ ಕಾಣಬರುವ ಒಗಟಿನ ಸ್ವರೂಪದ ಕುರಿತು ರಾಗೌ ಅವರು ಮೂರು ಊಹನಾ ಸಿದ್ಧಾಂತಗಳನ್ನು ಉಲ್ಲೇಖಿಸುತ್ತಾರೆ. ೧) ಸಾಮಾನ್ಯ ಮೂಲವೊಂದಿರುವುದು ೨) ಜನಾಂಗವೊಂದರಿಂದ ಜನಾಂಗವೊಂದಕ್ಕೆ ಒಗಟುಗಳು ಸಂವಹನಗೊಳ್ಳುವುದು ೩) ಮಾನವ ಮನಸ್ಸಿನ ಸಮಗ್ರ ಸಮತೆಯ ಸಾದೃಶ್ಯ. ಒಗಟು ಸ್ಥಳದಿಂದ ಸ್ಥಳಕ್ಕೆ ರವಾನೆಯಾಗುವ ಸಾಧ್ಯತೆಯಿದ್ದರೂ, ಮಾನವ ಮನಸ್ಸಿನ ಸಮಾನತೆಯೇ ಹೆಚ್ಚು ಕಾರಣವಾಗುವ

ಸಾಧ್ಯತೆಯಿದೆ ಎಂಬುದಾಗಿ ರಾಗೌ ಅವರು ಮನುಷ್ಯನ ಸಾರಸತ್ವವನ್ನು (ಎಸೆನ್ಸ್) ಕಾಲದೇಶ ಅತೀತವಾಗಿ, ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ ಪ್ರತಿಪಾದಿಸುವ ಆಧುನಿಕ ಸ್ವಯಂತಂತ್ರವಾದಿ ಮಾನವತಾವಾದದ (ಲಿಬಿರಲ್ ಹ್ಯೂಮನಿಸಂ) ನಿಲುವನ್ನು ವ್ಯಕ್ತಪಡಿಸುತ್ತಾರೆ.

ಅಕ್ಷರ ರೂಪದಲ್ಲಿ ಒಗಟುಗಳು ಬಳಕೆಯಾಗಿರುವ ಚಾರಿತ್ರಿಕ ಸನ್ನಿವೇಶಗಳನ್ನು ಗಮನಿಸಿಕೊಳ್ಳುವುದಾದರೆ, ಆಧುನಿಕ ಪೂರ್ವದ ಕನ್ನಡ ಕಾವ್ಯ ಪರಂಪರೆಯಲ್ಲಿ ಒಗಟುಗಳು ಬಳಕೆಯಾಗಿರುವ ಉದಾಹರಣೆಗಳಿವೆ. ಅದಲ್ಲದೆಯೇ, ವಸಾಹತುಶಾಹಿ ಅನುಭವದ ಹಿನ್ನೆಲೆಯಲ್ಲಿ ವಸಾಹತುಶಾಹಿಗೆ ಪ್ರತಿಕ್ರಿಯಾತ್ಮಕವಾಗಿ, ದೇಸೀಯ ರಾಷ್ಟ್ರೀಯವಾದದ ನೆಲೆಯಲ್ಲಿ ಆಧುನಿಕ ಅರ್ಥದ ಓದುಗವರ್ಗವನ್ನು ನಿರ್ಮಾಣಗೊಳಿಸುವ ಆಧುನಿಕತೆಯ ಸನ್ನಿವೇಶದಲ್ಲಿ, ಕೆಲವು ಪತ್ರಿಕೆಗಳಲ್ಲಿ ಬಾಲ ಸಾಹಿತ್ಯಕ್ಕೆ ಮೀಸಲಾದ ಕೆಲವೊಂದು ಪುಟಗಳಲ್ಲಿ ಒಗಟುಗಳು ಪ್ರಕಟಗೊಂಡಿವೆ. ಇವುಗಳನ್ನು ಹೊರತುಪಡಿಸಿದರೆ, ಆಕ್ಷರಿಕ ರೂಪದಲ್ಲಿ ಒಗಟುಗಳು ಪಠ್ಯಗಳಾಗಿ ದಾಖಲುಗೊಂಡು, ಸಂಕಲನಗಳ ರೂಪದಲ್ಲಿ ಸಂಪಾದಿತಗೊಂಡು ಪ್ರಕಟಗೊಂಡಿರುವುದು ವಸಾಹತುಶಾಹಿಯ ಅನಂತರದ ಕಳೆದ ಶತಮಾನದ ಕಾಲಾವಧಿಯಲ್ಲಿ. ಅಂದರೆ, ೨೦ನೆಯ ಶತಮಾನದ ೫೦ರ ದಶಕದಿಂದೀಚೆಗೆ. ಆದರೆ, ಕುತೂಹಲದ ಸಂಗತಿ ಎಂದರೆ, ಜಾನಪದ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನದ ಇತಿಹಾಸವನ್ನು ಗಮನಿಸಿದರೆ, ಜಾನಪದದ ಸಂಗ್ರಹ ಕಾರ್ಯಗಳು ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಮಿಶನರಿಗಳಿಂದ ಆರಂಭವಾಗಿರುವುದನ್ನು ಈಗಾಗಲೇ ಗುರುತಿಸಲಾಗಿದೆ. ಭಾಷಿಕ ಜಾನಪದವಾಗಿರುವ ಗಾದೆಗಳ ಸಂಗ್ರಹಕಾರ್ಯವನ್ನು ಮಿಶನರಿಗಳು ಮಾಡಿದ್ದರೂ, ಮಿಷನರಿಗಳ ಸಂಗ್ರಹದಲ್ಲಿ ಒಗಟುಗಳಿಲ್ಲ! ಇದು ಯಾಕೆ?

ಈಗಾಗಲೇ ಪ್ರಸ್ತಾವಿಸಿರುವಂತೆ, ಸಂಸ್ಕೃತಿಯ ಪರಿಕಲ್ಪನೆಯಲ್ಲಿ ನಮ್ಮಲ್ಲಿ ಪಾರಂಪರಿಕ ಬದುಕಿನ ಭಾಷಿಕ ಅಭಿವ್ಯಕ್ತಿಗಳನ್ನು ಸಂಗ್ರಹಿಸಿ ದಾಖಲು ಮಾಡಲು ಆರಂಭಿಸಿರುವುದು ವಸಾಹತುಶಾಹಿ ಆಧುನಿಕತೆಯ ಸನ್ನಿವೇಶದಲ್ಲಿ. ಒಂದು ಕಡೆಯಲ್ಲಿ ಆಧುನಿಕೀಕರಣದ ಪ್ರಕ್ರಿಯೆಯಲ್ಲಿ ಸಂಸ್ಕೃತಿ ನಾಶವಾಗುತ್ತಿದೆ ಅನ್ನುವ ಸಾಂಸ್ಕೃತಿಕ ಆತಂಕದಲ್ಲಿ ಪಾರಂಪರಿಕ ಸಮಾಜದ ಅಭಿವ್ಯಕ್ತರೂಪಗಳನ್ನು ಸಂಗ್ರಹಿಸುವ ಕಾರ್ಯಗಳು ನಡೆದರೆ, ಇನ್ನೊಂದು ಮಗ್ಗುಲಲ್ಲಿ ನಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಪ್ರತಿನಿಧಿಸುವ ರಾಷ್ಟ್ರ ಮತ್ತು ರಾಷ್ಟ್ರೀಯ ಸಾಹಿತ್ಯದ

ಪ್ರತಿನಿಧೀಕರಣದಲ್ಲಿ ಈ ಬಗೆಯ ಸಂಗ್ರಹ ಕಾರ್ಯಗಳು ನಡೆದು ಬಂದಿರುವುದನ್ನು ನಾವು ಕಾಣಬಹುದಾಗಿದೆ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪಶ್ಚಿಮದ ಮಿಷನರಿಗಳಿಂದ ಪೂರ್ವದ ಸಾಂಸ್ಕೃತಿಕ ಪಠ್ಯದ ಪಠ್ಯೀಕರಣದ ಪ್ರಕ್ರಿಯೆಗೆ ಒಳಗಾಗುವ ಗ್ರಾಮೀಣ ಬದುಕಿನ ಮೌಖಿಕ ಅಭಿವ್ಯಕ್ತ ರೂಪದ ದಾಖಲೆಗಳು, ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಶೈಕ್ಷಣಿಕ ಸನ್ನಿವೇಶದಲ್ಲಿ ಜನಪದೀಕರಣಗೊಂಡು 'ಜಾನಪದ'ವೆಂದು, ಅದರ ಜೊತೆಗೆ, 'ಜನಪದ ಸಾಹಿತ್ಯ'ವೆಂದು ಪರಿಕಲ್ಪಿತಗೊಂಡಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಜಾನಪದವೆಂದು ಇಂದು ನಾವು ಪರಿಭಾವಿಸಿಕೊಳ್ಳುವ ಕನ್ನಡ ಜಾನಪದಕ್ಕೆ ಸಂಬಂಧಿಸಿದ ಸಂಗ್ರಹದ ಮೊದಲ ದಾಖಲೆಗಳು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಮಿಷನರಿ ಕಾರ್ಯಚಟುವಟಿಕೆಯಲ್ಲಿ ದೊರೆಯುವುದಾದರೂ ಒಗಟುಗಳ ಸಂಗ್ರಹದ ಮೊತ್ತಮೊದಲ ದಾಖಲೆ ನಮಗೆ ದೊರೆಯುವುದು ಕಳೆದ ಶತಮಾನದ ಐದರ ದಶಕದಲ್ಲಿ. ಕುತೂಹಲದ ಸಂಗತಿ ಏನೆಂದರೆ, ವಸಾಹತುಶಾಹಿ ಸನ್ನಿವೇಶದಲ್ಲಿ ಪೂರ್ವದ ಪಠ್ಯಗಳಾಗಿ ಲಾವಣಿ, ಪಾಡ್ದನ ಮುಂತಾದ ಜನಪದದ ಮೌಖಿಕ ರೂಪಗಳು ಸಾಂಸ್ಕೃತಿಕ ದಾಖಲೆಗಳಾಗಿ ಸಂಗ್ರಹಗೊಂಡಂತೆ, ಒಗಟುಗಳು ಸಂಗ್ರಹಗೊಂಡಿಲ್ಲ. ಮಿಷನರಿಗಳು ಒಗಟುಗಳನ್ನು ಸಂಗ್ರಹಿಸದಿರುವುದಕ್ಕೆ ಕಾರಣ ಏನಿರಬಹುದು ಅನ್ನುವುದು ಕುತೂಹಲದ ಸಂಗತಿ. ಯಾಕೆಂದರೆ, ವಸಾಹತುಶಾಹಿ ಸನ್ನಿವೇಶದಲ್ಲಿ ಪೌರ್ವಾತ್ಯವಾದಿ ಪಾಶ್ಚಾತ್ಯ ಅಧ್ಯಯನಕಾರರಿಂದ, ಮಿಷನರಿಗಳಿಂದ ಭಾಷಿಕ ಅಭಿವ್ಯಕ್ತಿಗಳಾಗಿರುವ, ಜನಪದ ಸಾಹಿತ್ಯವೆಂದು ಪರಿಕಲ್ಪಿತಗೊಂಡಿರುವ ಕತೆ, ಗೀತೆ, ಗಾದೆ, ಲಾವಣಿ, ಪಾಡ್ದನ ಇವುಗಳು ಸಂಗ್ರಹಗೊಂಡಿವೆಯೇ ಹೊರತಾಗಿ, ಒಗಟುಗಳು ಸಂಗ್ರಹಗೊಂಡಿರುವ ಉದಾಹರಣೆಗಳು ಎಲ್ಲೂ ಕಂಡುಬರುವುದಿಲ್ಲ. ಬಹುಷ: ವಸಾಹತುಶಾಹಿ ಚಾರಿತ್ರಿಕ ಸನ್ನಿವೇಶದಲ್ಲಿ ವಸಾಹತುಶಾಹಿ ಆಳ್ವಿಕೆಯನ್ನು ನ್ಯಾಯಸಮ್ಮತಗೊಳಿಸುವ ಪೌರ್ವಾತ್ಯವಾದಿ ಕಥನಕ್ಕೆ ಜನಪದ ಸಾಹಿತ್ಯವೆಂದು ಪರಿಕಲ್ಪಿಸಿಕೊಂಡಿರುವ ಕತೆ, ಗೀತೆ, ಲಾವಣಿ, ಪಾಡ್ದನ, ಗಾದೆಗಳು ಪೂರ್ವದ ಸಾಂಸ್ಕೃತಿಕ ಆಕರಗಳಾಗಿ ಪ್ರಮುಖವೆನಿಸಿದಂತೆ, ಒಗಟುಗಳು ಪ್ರಮುಖವೆನಿಸದಿರುವುದಕ್ಕೆ ಭಾಷಿಕ ಅಭಿವ್ಯಕ್ತಿಯಾಗಿರುವ ಒಗಟುಗಳ ಸ್ವರೂಪ ಹಾಗೂ ಸಾಂಸ್ಕೃತಿಕ ನಿಯೋಗವನ್ನು ಗ್ರಹಿಸಿರುವ ಗ್ರಹಿಕೆಯ ನೆಲೆಗಳು ಕಾರಣವಿದ್ದಿರಬಹುದೇ?

ಲಭ್ಯವಿರುವ ಮಾಹಿತಿಗಳ ಪ್ರಕಾರ, ೧೯೪೬ರಲ್ಲಿ ಪ್ರಕಟಗೊಂಡಿರುವ ಶಂಬಾ ಜೋಶಿಯವರ 'ಒಡಪುಗಳು' ಕೃತಿಯನ್ನು ಹೊರತುಪಡಿಸಿದರೆ, ೧೯೫೫ರಲ್ಲಿ, ಮಂಗಳೂರಿನ ಪ್ರಭಾತ ಪ್ರಕಾಶನದ ಒಂದಾಣೆ ಮಾಲೆಯ ೧೭ನೆಯ ಪ್ರಕಟಣೆಯಾಗಿ ಪ್ರಕಟಗೊಂಡಿರುವ ಚಂದ್ರರಾಜ ಸೆಟ್ಟಿಯವರ 'ಒಗಟು'ಗಳು ಕೃತಿ ಒಗಟುಗಳ ಸಂಪಾದನಾ ಇತಿಹಾಸದಲ್ಲಿ ಮೊತ್ತಮೊದಲನೆಯ ಕೃತಿಯಾಗಿ ಕಂಡುಬರುತ್ತದೆ. ೧೯೫೫ರಲ್ಲಿ ಪ್ರಕಟವಾಗಿರುವ ಈಶ್ವರಚಂದ್ರ ಚಿಂತಾಮಣಿಯವರ 'ಗರತಿಯರ ಮನೆಯಿಂದ ' ಎಂಬ ಗ್ರಂಥದಲ್ಲಿ ಹಾಗೂ, ೧೯೬೭ರಲ್ಲಿ ಪ್ರಕಟಗೊಂಡಿರುವ ಚಕ್ಕಲೂರು ಚನ್ನಪ್ಪನವರ 'ಕನ್ನಡ ಒಗಟುಗಳ ಮಾಲೆ' ಎಂಬ ಕೃತಿಯಲ್ಲಿ (ಉದ್ಧೃತ, ಸುಧಾಕರ, ೧೯೭೦) ಕೆಲವು ಒಗಟುಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಆದರೆ, ೧೯೬೭ರಲ್ಲಿ ಪ್ರಕಟಗೊಂಡಿರುವ ಜೀ.ಶಂ. ಪರಮಶಿವಯ್ಯನವರ 'ಕನ್ನಡ ಒಗಟುಗಳು' ಕೃತಿಯ ಹಿನ್ನುಡಿ ಮಾತುಗಳಲ್ಲಿ ಸಿಪಿಕೆಯವರು ಈ ಕೃತಿ, ಒಗಟುಗಳ ಸಂಕಲನದಲ್ಲಿ ಮೊತ್ತಮೊದಲ ಕೃತಿ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಅವರು ಹೇಳಿರುವ ಮಾತುಗಳು ಈ ರೀತಿಯಲ್ಲಿವೆ. "ಇದು ತನಕ ಕನ್ನಡದಲ್ಲಿ ಒಗಟುಗಳ ಒಂದು ಸಂಕಲನವೂ ಬಂದಿರಲಿಲ್ಲ. ಕೆಲವು ಪತ್ರಿಕೆಗಳಲ್ಲಿ ಬಾಲ ಸಾಹಿತ್ಯಕ್ಕೆ ಮೀಸಲಾದ ಪುಟಗಳಲ್ಲಿ ಮಾತ್ರ ಒಗಟುಗಳು ಕಣ್ಣಿಗೆ ಬೀಳುತ್ತಿದ್ದುವು. ವ್ಯವಸ್ಥಿತವಾಗಿ ಒಗಟುಗಳನ್ನು ಸಂಪಾದಿಸಿ ಪುಸ್ತಕ ರೂಪದಲ್ಲಿ ಹೊರತಂದಿರುವ ಪ್ರಪ್ರಥಮ ಯತ್ನ ಶ್ರೀ ಜೀಶಂಪ ಅವರದೇ ಎಂದು ತೋರುತ್ತದೆ". ಮುಂದೆ, ೧೯೭೪ರಲ್ಲಿ ಪ್ರಕಟಗೊಂಡಿರುವ ಎಮ್.ಎಸ್. ಲಠ್ಠೆಯವರ 'ಉತ್ತರ ಕರ್ನಾಟಕದ ಒಗಟುಗಳು', ೧೯೭೬ರಲ್ಲಿ ಪ್ರಕಟಗೊಂಡಿರುವ ಸೋಮಶೇಖರ ಇಮ್ರಾಪುರ ಅವರ 'ಕನ್ನಡ ಸಾವಿರ ಒಗಟುಗಳು', ಇದೇ ವರ್ಷದಲ್ಲಿ ಪ್ರಕಟಗೊಂಡಿರುವ ನಂ. ತಪಸ್ವೀಕುಮಾರ್ ಅವರ 'ಕನ್ನಡ ಒಗಟುಗಳ ಸಮೀಕ್ಷೆ', ೧೯೮೩ರಲ್ಲಿ ಪ್ರಕಟಗೊಂಡಿರುವ ಎಲ್.ವಿ. ಪೈ ಅವರ 'ಕನ್ನಡ ಒಗಟುಗಳು', ೧೯೯೦ರಲ್ಲಿ ಪ್ರಕಟಗೊಂಡಿರುವ ಸುಧಾಕರ ಅವರ 'ಒಗಟುಗಳು' ೧೯೯೩ರಲ್ಲಿ ಪ್ರಕಟಗೊಂಡಿರುವ ಎಲ್ ಆರ್ ಹೆಗಡೆಯವರ 'ಒಗಟುಗಳು ಮತ್ತು ಕತೆಗಳು', ೧೯೯೪ರಲ್ಲಿ ಪ್ರಕಟವಾಗಿರುವ ಮೀರಾಸಾಬಿಹಳ್ಳಿ ಶಿವಣ್ಣ ಅವರ 'ಒಗಟುಗಳು ಒಡಪುಗಳು', ೧೯೯೫ರಲ್ಲಿ ಪ್ರಕಟಗೊಂಡಿರುವ ಎಚ್. ಜೆ. ಲಕ್ಕಪ್ಪಗೌಡ ಅವರ 'ಒಗಟುಗಳು' ಇವು ಪ್ರಮುಖವಾದವುಗಳು. ಇವುಗಳಲ್ಲದೆಯೇ, ೨೦ನೆಯ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಒಗಟುಗಳ ಸಂಕಲನಗಳು ಸಾಕಷ್ಟು ಸಂಖ್ಯೆಯಲ್ಲಿ ಪ್ರಕಟಗೊಂಡಿವೆ.

ಒಗಟುಗಳ ಸಂಕಲನಗಳಲ್ಲದೆಯೇ, ಈವರೆಗೆ, ಒಗಟುಗಳ ಉಗಮ, ಸ್ವರೂಪವನ್ನು ವಿವೇಚಿಸಿರುವ ಬಹಳಷ್ಟು ಬರವಣಿಗೆಗಳಿವೆ. ಕರ್ನಾಟಕ ಸಂಸ್ಕೃತಿ (ದೇವುಡು ನರಸಿಂಹಶಾಸ್ತ್ರಿ), ಸುವರ್ಣ ಸಂಚಯ (ಪ್ರೊ. ಹಾ.ಮಾ. ನಾಯಕ), ಜನಾಂಗದ ಜೀವಾಳ (ಸಿಂಪಿ ಲಿಂಗಣ್ಣ), ಸುವರ್ಣ ಸಂಚಯ (ಗೊರೂರು ರಾಮಸ್ವಾಮಿ ಅಯ್ಯಂಗಾರ್), ನಮ್ಮ ಜನಪದ ಸಾಹಿತ್ಯ, (ಜೀಶಂಪ), ಜಾನಪದ ಪ್ರತಿಭೆ (ಸಿಪಿಕೆ), ಹೊನ್ನ ಬಿತ್ತೇವು ಹೊಲಕೆಲ್ಲ (ಸುಧಾಕರ), ಜಾನಪದ ಅಧ್ಯಯನ ಕೆಲವು ವಿಚಾರಗಳು (ಅಂಬಳಿಕೆ ಹಿರಿಯಣ್ಣ) ಈ ಗ್ರಂಥಗಳಲ್ಲಿರುವ ಲೇಖನಗಳಲ್ಲದೆ, ಈವರೆಗೆ ಪ್ರಕಟಗೊಂಡಿರುವ ಒಗಟುಗಳ ಸಂಪಾದಿತ ಕೃತಿಗಳ ಪ್ರಸ್ತಾವನೆ ಹಾಗೂ ಮುನ್ನುಡಿಯ ಮಾತುಗಳಲ್ಲೂ ಒಗಟಿನ ರೂಪಲಕ್ಷಣಗಳನ್ನು, ಉಗಮವಿಕಾಸಗಳನ್ನು ಕುರಿತ ಸುದೀರ್ಘವಾದ ವಿವರಣೆ, ವಿಶ್ಲೇಷಣೆಗಳನ್ನು ಕಾಣಬಹುದಾಗಿದೆ.

ಪ್ರಸ್ತುತ 'ಕನ್ನಡಂಗಳ ಒಗಟುಗಳು' ಈ ಗ್ರಂಥದಲ್ಲಿ ಲಭ್ಯವಿರುವ ಕೆಲವೊಂದು ಸಂಕಲನಗಳಿಂದ ಒಗಟುಗಳನ್ನು ಸಂಗ್ರಹಿಸಿ ಸಂಪಾದಿಸಲಾಗಿದೆ. ಮಂಗಳೂರಿನ ಪ್ರಭಾತ ಪುಸ್ತಕಮಾಲೆಯಲ್ಲಿ ಪ್ರಕಟಗೊಂಡಿರುವ ಚಂದ್ರರಾಜ ಸೆಟ್ಟಿ ಸಂಪಾದಿಸಿರುವ '*ಒಗಟುಗಳು*' (೧೯೫೫), ಜೀಶಂ ಪರಮಶಿವಯ್ಯ ಸಂಪಾದಿಸಿರುವ '*ಕನ್ನಡ ಒಗಟುಗಳು*' (೧೯೬೭), ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡಿರುವ ಸುಧಾಕರ ಸಂಪಾದನೆ ಮಾಡಿರುವ '*ಜನಪದ ಬೆಡಗಿನ ವಚನಗಳು*' (೧೯೭೦), ಮೈಸೂರಿನ ಉಷಾ ಸಾಹಿತ್ಯ ಮಾಲೆಯಿಂದ ಪ್ರಕಟಗೊಂಡಿರುವ ರಾಮೇಗೌಡ ಸಂಪಾದಿಸಿರುವ '*ನಮ್ಮ ಒಗಟುಗಳು*' (೧೯೭೦), ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡಿರುವ, ಹೆಚ್. ಜೆ. ಲಕ್ಕಪ್ಪಗೌಡ ಸಂಪಾದನೆ ಮಾಡಿರುವ '*ಒಗಟುಗಳು*' (೧೯೭೩), ನಂ. ನಾರಾಯಣ ಗೌಡ ತುಮಕೂರು ಜಿಲ್ಲೆಯಿಂದ ಒಗಟುಗಳನ್ನು ಸಂಗ್ರಹಿಸಿ, ಸಂಪಾದಿಸಿರುವ '*ಜನಪದ ಒಗಟುಗಳು*' (೧೯೭೩), ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡದಿಂದ ಪ್ರಕಟಗೊಂಡಿರುವ ಸೋಮಶೇಖರ ಇಮ್ರಾಪುರ ಸಂಪಾದಿಸಿರುವ '*ಕನ್ನಡದ ಸಾವಿರ ಒಗಟುಗಳು*' (೧೯೭೬), ಜಾನಪದ ಪ್ರಕಾಶನ, ಹೊನ್ನಾವರದಿಂದ ಪ್ರಕಟಗೊಂಡಿರುವ, ಶಾಂತಿನಾಯಕ ಸಂಪಾದಿಸಿರುವ ಉತ್ತರಕನ್ನಡದ ಭಾಷೆಯನ್ನು ಪ್ರತಿನಿಧಿಸುವ '*ಜಾಣೆ ಕನ್ನಡವ ತಿಳಿದ್ಹೇಳಿ*' (೧೯೮೨), ಮೈಸೂರಿನ ಅಭಿರುಚಿ ಪ್ರಕಾಶನದಿಂದ

ಪ್ರಕಟಗೊಂಡಿರುವ, ಮೈಸೂರು ಮಂಡ್ಯ ಜಿಲ್ಲೆಯಿಂದ ಒಗಟುಗಳನ್ನು ಸಂಗ್ರಹಿಸಿ ಸಂಪಾದಿಸಿರುವ ಡಾ. ಎಲ್. ಮಂಜುಳಾಕ್ಷಿಯವರ 'ನುಡಿಮುತ್ತಿನ ಹಾರ' (೨೦೦೩) ಈ ಎಲ್ಲ ಕೃತಿಗಳಿಂದ ಸಂಗ್ರಹಿಸಿ, ಸಂಪಾದಿಸಿ ಈ ಗ್ರಂಥದಲ್ಲಿ ಪ್ರಕಟಿಸಲಾಗಿದೆ.

ಈ ಗ್ರಂಥದಲ್ಲಿ ಸಂಪಾದಿಸಿರುವ ಒಗಟುಗಳನ್ನು ಈಗಾಗಲೇ ಸಂಗ್ರಹಿಸಿ, ಸಂಪಾದನೆ ಮಾಡಿರುವ ಎಲ್ಲ ಹಿರಿಯ ವಿದ್ವಾಂಸರುಗಳನ್ನು ಮತ್ತು ಅವರಿಗೆ ನೆರವಾದ ಜನಪದರನ್ನು ಕೃತಜ್ಞತಾಪೂರ್ವಕವಾಗಿ, ವಿಶೇಷವಾಗಿ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ಪ್ರಕಟಿತ ಕೃತಿಗಳಿಂದ ಒಗಟುಗಳನ್ನು ಸಂಗ್ರಹಿಸುವ ಕೆಲಸದಲ್ಲಿ ನನಗೆ ನೆರವಾದ ವಿದ್ಯಾರ್ಥಿ ಮಿತ್ರರಾಗಿರುವ ಸಂಜಯ ಹಾಗೂ ಮಂಜುನಾಥ ಇವರ ನೆರವನ್ನೂ ನೆನಪಿಸಿಕೊಳ್ಳುತ್ತೇನೆ. ಬೆರಳಚ್ಚಿನ ನೆರವು ನೀಡಿದ ಶ್ರೀಮತಿ ಪೂರ್ಣಿಮ ಹಾಗೂ ಕುಸುಮ ಇವರಿಬ್ಬರಿಗೂ ವಿಶ್ವಾಸಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಒಗಟುಗಳ ಸಂಪಾದನೆಯ ಕೆಲಸವನ್ನು ನನಗೆ ಒದಗಿಸಿಕೊಟ್ಟ ಸಂಪಾದಕ ಮಂಡಳಿ ಹಾಗೂ ಸಾಕಷ್ಟು ಸುದೀರ್ಘ ಕಾಲದ ಕಾಲಾವಕಾಶವನ್ನು ಒದಗಿಸಿಕೊಟ್ಟು **'ಕನ್ನಡಂಗಳ ಒಗಟುಗಳು'** ಈ ಗ್ರಂಥವನ್ನು ಬಹಳ ತಾಳ್ಮೆಯಿಂದ ಪ್ರಕಟಿಸುತ್ತಿರುವ ಕರ್ನಾಟಕ ಜಾನಪದ ಅಕಾಡೆಮಿಗೂ ನಾನು ಋಣಿಯಾಗಿದ್ದೇನೆ.

ಪ್ರೊ. ಬೋಳಾರ ಶಿವರಾಮ ಶೆಟ್ಟಿ

ಚಿನ್ನದ ಗೋಡೆಗೆ ಪಚ್ಚೆಯ ಆವರಣ
ಗೋಡೆಯೊಳಗೆ ಕಪ್ಪಿನ ಸಾಸಿರ ಮಣಿಗಳು

ವಿಜ್ಞಾನ ತಂತ್ರಜ್ಞಾನವನ್ನೊಳಗೊಂಡ ನಾನಾ ಕ್ಷೇತ್ರಗಳಲ್ಲಿ ಮನುಷ್ಯನ ಆವಿಷ್ಕಾರಗಳ ಬಗ್ಗೆ ಆಧುನಿಕ ಸಮಾಜ ಬೆರಗನ್ನು ವ್ಯಕ್ತಪಡಿಸುತ್ತಿರುವ ಸಂಗತಿಗಳನ್ನೆಲ್ಲ ಗಮನಿಸುವಾಗ, ಅನಾದಿಕಾಲದಿಂದ ಮನುಷ್ಯ ಹುಟ್ಟುಹಾಕಿದ ಮಾತಿನ ಬಗ್ಗೆ ಬೆರಗು ಯಾಕೆ ವ್ಯಕ್ತವಾಗುತ್ತಿಲ್ಲ ಅನ್ನುವುದೊಂದು ಒಗಟು. ಮನುಷ್ಯನ ಉಸಿರಾಟದ ಜೈವಿಕ ಕ್ರಿಯೆಯಿಂದ ಮಾತು ಹುಟ್ಟಿತು ಅನ್ನುವ ಕಾರಣಕ್ಕಾಗಿಯೇ? ಅಥವಾ ಮಾತು ಮನುಷ್ಯನ ಪ್ರಜ್ಞಾಪೂರ್ವಕವಾದ ಬೌದ್ಧಿಕ ಕ್ರಿಯೆ ಅಲ್ಲ ಅನ್ನುವ ಕಾರಣಕ್ಕಾಗಿಯೇ? ಅಥವಾ ಆಧುನಿಕ ಸಮಾಜದಲ್ಲಿ ವ್ಯಕ್ತಿಕೇಂದ್ರಿತ ನೆಲೆಗಳಿರುವ ಕಾರಣ, ಮಾತು ವ್ಯಕ್ತಿಗತ ಅಲ್ಲ ಅನ್ನುವ ಕಾರಣಕ್ಕಾಗಿಯೇ? ನಿಶ್ವಾಸದ ಕ್ರಿಯೆಯಲ್ಲಿ ಧನ್ವಂಗಗಳ ಮೂಲಕ ಉಸಿರನ್ನೇ ಧ್ವನಿಯಾಗಿಸಿ, ಮಾತನ್ನು ರೂಪಿಸಿರುವ ಮಾನವನ ಚಮತ್ಕಾರ, ನಿಜಕ್ಕೂ ಸೋಜಿಗ ಪಡುವಂತಹದೇ. ಆದಿಮ ಲೋಕ ಮಾತ್ರವಲ್ಲ, ಆಧುನಿಕ ಸಮಾಜದಲ್ಲೂ ಮನುಷ್ಯ ಮಾತಿನಿಂದಲೇ ಎಲ್ಲವನ್ನು ಸಾಧಿಸಿಕೊಂಡು ಬಂದಿದ್ದಾನೆ. ಬಹುಷ: ಮಾತು ಇಲ್ಲ ಎಂದಾಗಿದ್ದರೆ, ಈ ಲೋಕವೇ ಇಲ್ಲ. ಈ ಲೋಕವನ್ನು ಮನುಷ್ಯ ನಡೆಸುವುದು, ಮುನ್ನಡೆಸುವುದು ಮಾತಿನಿಂದಲೇ. ಲೌಕಿಕ ಮಾತ್ರವಲ್ಲ, ಆಧ್ಯಾತ್ಮಿಕ ಸಂಬಂಧಗಳನ್ನು ಕೂಡಾ ಮಾತಿನಿಂದಲೇ ಮಾನವ ನಿರ್ಮಿಸಿಕೊಳ್ಳುತ್ತಾನೆ, ನಿರ್ವಹಿಸಿಕೊಳ್ಳುತ್ತಾನೆ, ಸ್ಥಾಪಿಸಿಕೊಳ್ಳುತ್ತಾನೆ. "ಮಾತು ಬಲ್ಲವ ದೇಶ ಸುತ್ತಿಯಾನು" ಅನ್ನುವ ಬಲ್ಲವರ ಮಾತಿನ ಜೊತೆಗೆ, "ಭಾಷೆಯ ಲಜ್ಜೆಯ ನೋಡಾ" ಅನ್ನುವ ಅಲ್ಲಮನ ಮಾತಿನಲ್ಲೂ, ಮಾತಿನ ಶಕ್ತಿ ಸಾಮರ್ಥ್ಯದ ಜೊತೆಗೆ, ಮಾತಿನ ಇತಿಮಿತಿಯನ್ನೂ ಕಾಣಬಹುದು. ಆಧುನಿಕ ತತ್ತ್ವಶಾಸ್ತ್ರಜ್ಞನಾದ ವಿಟ್ಗೆನ್ಸ್ಟನ್ ಹೇಳುವಂತೆ, "ಭಾಷೆ ಅನ್ನುವುದು ಅದೊಂದು ಆಟವೂ ಹೌದು". ಮಾತು ಆಟ ಆದುದರಿಂದಲೇ ಮನುಷ್ಯ ಮಾತು ಆಡುವುದು; ಮಾತಾಡುವುದು. ಆದರೆ, ಆಟ ಅನ್ನುವುದನ್ನು ನಾವಿಂದು ಕೇವಲ ದೈಹಿಕವಾದ ಭೌತಿಕ ಕ್ರಿಯೆ ಎಂಬುದಾಗಿ ಮಾತ್ರ ಅಂದುಕೊಂಡಿದ್ದೇವೆ.

ಮಾತಿಗಿರುವ ಮಾಂತ್ರಿಕ ಧ್ವನಿಶಕ್ತಿಯಿಂದಲೇ, ಮಾತು ಮಂತ್ರವೂ ಹೌದು; ತಂತ್ರವೂ ಹೌದು. ಮಾತು ಮಾಟವೂ ಹೌದು; ಮೋಡಿಯೂ ಹೌದು.

ಮನುಷ್ಯನ ಚಾರಿತ್ರಿಕ ಕಾಲದಿಂದಲೂ ಮನುಷ್ಯ ಮಾತಿನಿಂದ ನಿರ್ವಹಿಸುವ ಸಾಮಾಜಿಕ, ರಾಜಕೀಯ ಕ್ರಿಯೆಗಳನ್ನು ಗಮನಿಸಿದಾಗ, ಮಾತಿನ ಸಾಧ್ಯತೆಗಳೇನು ಅನ್ನುವುದು ಸ್ಪಷ್ಟವಾಗುತ್ತದೆ. ಮನೆಯೊಳಗಿನ ಬಂಧುತ್ವದ ಕೌಟುಂಬಿಕ ಆವರಣದಲ್ಲಿ ಅಕ್ಕ–ತಂಗಿ, ಅಣ್ಣ–ತಮ್ಮ, ತಂದೆ–ಮಗ, ತಾಯಿ–ಮಗಳು, ಅತ್ತೆ–ಸೊಸೆ, ಮಾವ–ಅಳಿಯ ಹೀಗೆ, ಮನೆಯ ಹೊಸ್ತಿಲನ್ನು ದಾಟಿ ಮನೆಯಂಗಳಕ್ಕೆ ಬಂದಾಗ ಜಾತಿ, ಧರ್ಮ, ವರ್ಣ, ವರ್ಗ, ಲಿಂಗ ಈ ಎಲ್ಲ ಸಾಮಾಜಿಕ, ಸಾಂಸ್ಕೃತಿಕ ತರತಮದ, ಏರುಪೇರಿನ ಅಧಿಕಾರ ಸಂಬಂಧಗಳನ್ನು ಮನುಷ್ಯ ಮಾತಿನಿಂದಲೇ ನಿರ್ಮಿಸಿಕೊಳ್ಳುತ್ತಾನೆ, ನಿರ್ವಹಿಸಿಕೊಳ್ಳುತ್ತಾನೆ. ಒಬ್ಬನನ್ನು ಉಳಿಸುವ ಇಲ್ಲವೇ ಅಳಿಸುವ ಎಲ್ಲ ಬಗೆಯ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕ್ರಿಯೆಗಳನ್ನು ಮನುಷ್ಯ ಮಾತಿನಿಂದಲೇ ಕೈಗೂಡಿಸಿಕೊಳ್ಳುತ್ತಾನೆ. ಮಾತಿನ ಈ ಸಾಮಾಜಿಕ ಕಲಾತ್ಮಕ ಶಕ್ತಿ ಮತ್ತು ಕೌಶಲದಿಂದಲೇ ಮಾನವ ತನ್ನ ಲೋಕದ ಬದುಕನ್ನು ತಾನೇ ಕಟ್ಟಿಕೊಳ್ಳುತ್ತಾನೆ. ಲೋಕದ ಸಂಬಂಧವನ್ನು ನಿರ್ಮಿಸಿ, ನಿರ್ವಹಿಸಿಕೊಳ್ಳುತ್ತಾನೆ. ಇಂತಹ ಮಾತು ಅಥವಾ ಭಾಷೆಯ ಕಲಾತ್ಮಕತೆಯ ಆಯಾಮಗಳನ್ನು ನಾವು ನಮ್ಮ ಅನುಭವಕ್ಕೆ ತಂದುಕೊಳ್ಳುವುದಕ್ಕೆ ಕೇವಲ ಆಕ್ಷರಿಕ ಪರಂಪರೆಯನ್ನು ಮಾತ್ರ ಗಮನಿಸಬೇಕಾಗಿಲ್ಲ. ಮೌಖಿಕ ಪರಂಪರೆ ಮತ್ತು ನಿತ್ಯದ ಮಾತುಕತೆಯಲ್ಲೂ ಈ ಕಲಾತ್ಮಕತೆಯನ್ನು ಕಾಣಬಹುದು.

ನಿರ್ದಿಷ್ಟ ಪಠ್ಯವಿಲ್ಲದೆಯೇ, ಮಾತಿನಲ್ಲಿಯೇ ವ್ಯಕ್ತಗೊಳ್ಳುವ, ಮೌಖಿಕತೆಯಲ್ಲಿ ಮುಂದುವರಿದುಕೊಡು ಬಂದಿರುವ ಜನಪದದ ಜ್ಞಾನಪರಂಪರೆಯನ್ನು ಪಶ್ಚಿಮಪ್ರಣೀತವಾಗಿರುವ ವಸಾಹತುಶಾಹಿ ಆಧುನಿಕ ಜ್ಞಾನಮೀಮಾಂಸೆ ವಿಜ್ಞಾನವಲ್ಲದ ಅಜ್ಞಾನವೆಂದೇ ಪರಿಗಣಿಸಿತು. ತನ್ನ ತರ್ಕಪಾರಮ್ಯ ಮತ್ತು ವೈಚಾರಿಕತೆಯ ಆಧಾರದಲ್ಲಿ ಆಧುನಿಕಪೂರ್ವದ ಪಾರಂಪರಿಕ ಅಭಿವ್ಯಕ್ತಿಗಳನ್ನು ಅತಾರ್ಕಿಕ ಎಂದು ಪ್ರತಿಪಾದಿಸಿತು. ಅದರ ಪ್ರಮಾಣಬದ್ಧ ವೈಜ್ಞಾನಿಕ ದೃಷ್ಟಿಕೋನಗಳಿಗೆ ಪಾರಂಪರಿಕ ನಂಬಿಕೆಗಳು ಮೌಢ್ಯಗಳಾಗಿ ಕಂಡವು. ಇಂದ್ರಿಯಾನುಭವದ ಮೂಲಕ ಸಾಕ್ಷಾತ್ಕಾರವಾಗದ ತರ್ಕಬದ್ಧವಲ್ಲದ ಸಂಗತಿಗಳನ್ನು ಅದು ನಂಬಲೇ ಇಲ್ಲ. ಆ ಕಾರಣದಿಂದಲೇ, ನೆನಪಿನಿಂದಲೇ ಬದುಕುವ ಪಾರಂಪರಿಕ ನಂಬಿಕೆಗಳನ್ನು ಕಾಲ್ಪನಿಕ, ಅವಾಸ್ತವಿಕ ಎಂದು ನಿರಾಕರಿಸಿತು. ಕಂಡಕಂಡದ್ದನ್ನು ಏನೇನೋ ಕಲ್ಪಿಸಿಕೊಂಂಡು ಅದನ್ನು ನಂಬುವ

ಮತ್ತು ಅದನ್ನು ನೆನಪಿಸುವ, ಆಧುನಿಕಪೂರ್ವದ ಆಚಾರ ವಿಚಾರಗಳು ಒಂದಕ್ಕೊಂದಕ್ಕೆ ಸಂಬಂಧವಿಲ್ಲದ ಅಸಂಬದ್ಧವೆಂದೆನಿಸಿತು. ವ್ಯಕ್ತ ಪಠ್ಯವಿಲ್ಲದೆ ಮಾನಸಿಕ ಪಠ್ಯದ, ನೆನಪುಗಳನ್ನು ನೆನಪಿಸಿಕೊಳ್ಳುತ್ತಾ ಆಡುಮಾತಲ್ಲಿ ನಿರ್ವಹಣೆಗೊಳ್ಳುವ, ನಾವಿಂದು ಜಾನಪದವೆಂದು ಪರಿಕಲ್ಪಿಸುವ ಆಧುನಿಕಪೂರ್ವದ ಜನಪದ ಬದುಕನ್ನು ಅವೈಚಾರಿಕ, ಅವೈಜ್ಞಾನಿಕ, ಚಲನಹೀನ ಸಮಾಜವೆಂದು ಪ್ರತಿಪಾದಿಸಿ ಅಪಮೌಲ್ಯಗೊಳಿಸಿತು. ನೆನಪಿನಿಂದಲೇ ಬದುಕುವ, ನೆನಪಿನಿಂದಲೇ ಜೀವಂತಿಕೆಯನ್ನು ಪಡೆಯುವ, ನೆನಪಿನಿಂದಲೇ ಸೃಜನಶೀಲಗೊಳ್ಳುವ ಜನಪದದ ಪಾರಂಪರಿಕ ಇಲ್ಲವೇ ಸಾಂಪ್ರದಾಯಿಕ ಎಂದು ಹೇಳಲಾಗುವ ಲೋಕಜ್ಞಾನವನ್ನು ಅವೈಚಾರಿಕ, ಅವೈಜ್ಞಾನಿಕ, ಅಲೌಕಿಕ ನಿರೂಪಿಸಿತು.

ಮಾತಿನಲ್ಲೇ ಕಟ್ಟುವ ವಿಜ್ಞಾನ್ಞಪೂರ್ವ ಬದುಕಿನ ಜನಪದದ ಲೋಕೋಕ್ತಿಯನ್ನು, ಲೋಕಗ್ರಹಿಕೆಯನ್ನು, ಲೋಕಜ್ಞಾನವನ್ನು ನಾವು ನಮ್ಮ ಅನುಭವಕ್ಕೆ ತಂದುಕೊಳ್ಳಬೇಕಾದರೆ, ವಿಭಿನ್ನ ರೂಪದ ಜನಪದದ ನುಡಿಗಳನ್ನು ನಾವು ವಿವರಿಸಬೇಕು. ವಿಶೇಷವಾಗಿ, ಭಾಷೆಯ ತರ್ಕ, ಬುದ್ಧಿವಂತಿಕೆ, ರೂಪಕಾತ್ಮಕತೆ, ಕೌತುಕ, ಮೌನ, ಗೌಪ್ಯ ಈ ಮುಂತಾದ ಮಾತಿನ ಕಲಾತ್ಮಕ ಗುಣಸ್ವಭಾವ ಹಾಗೂ ಸಾಧ್ಯತೆಗಳ ಜೊತೆಗೆ, ಈ ಲೋಕದ ಜೊತೆಗಿನ ಮಾನವನ ನೈಸರ್ಗಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳ ಮೂಲಕ ಹೊಂದುವ ಜ್ಞಾನಪರಂಪರೆಯ ನಿರ್ವಹಣೆಯನ್ನು ಕಾಣಬೇಕಾದರೆ, ಮಾತಿನ ಆಟವಾಗಿರುವ ಜನಪದ ಒಗಟುಗಳನ್ನು ನಾವು ಗಮನಿಸಬೇಕು. ಸಂಸ್ಕೃತಿ ಮತ್ತು ಪ್ರಕೃತಿಯನ್ನೊಳಗೊಂಡ ಲೋಕದ ಇರವಿನ ಬಗೆಗಿನ ಜನಪದದ ರೂಪಕಾತ್ಮಕ ಅಭಿವ್ಯಕ್ತಿಯ ಅರಿವು ಗಾದೆ, ಒಗಟು ಈ ಮುಂತಾದ ಜನಪದ ಭಾಷಿಕ ಅಭಿವ್ಯಕ್ತಿಗಳಲ್ಲಿ ಗೋಚರವಾಗುತ್ತದೆ.

ಒಗಟು ಪದದ ಮೂಲ

ನಿಷ್ಪತ್ತಿ ಮತ್ತು ಅರ್ಥವ್ಯಾಖ್ಯಾನ

ನಿತ್ಯದ ನಮ್ಮ ಬಳಕೆಯ ಮಾತಿನಲ್ಲಿ ಒಗಟು ಅನ್ನುವ ಪದವನ್ನು ಆಗಾಗ ಕೇಳುತ್ತಿರುತ್ತೇವೆ. ಮಾತು ಅರ್ಥ ಆಗದೆ ಇದ್ದಾಗ, ಅಥವಾ ಮಾತು ನಿಗೂಢ ಆದಾಗ ಸಾಮಾನ್ಯವಾಗಿ, ಅಂತಹ ಮಾತು ಒಗಟಾಗಿ ಬಿಡುತ್ತದೆ. ಆಡಿದ ಮಾತು ಒಗಟಾದಾಗ ಅದನ್ನು ಬಿಡಿಸಿ ಹೇಳಬೇಕು ಅನ್ನುವ ಇಂಗಿತವೂ ಇರುತ್ತದೆ. ಹೀಗಾಗಿ, ಒಗಟು ಅನ್ನುವ ಪದಕ್ಕೆ ಜನಪದದಲ್ಲಿ ಬಿಡಿಸಿ

ಹೇಳಬೇಕಾದುದು ಅನ್ನುವ ಸಾಮಾನ್ಯ ಅರ್ಥ ಪ್ರಾಪ್ತವಾಗಿದೆ. ಸಾಂಪ್ರದಾಯಿಕವಾಗಿ, ಒಗಟುಗಳ ಸ್ವರೂಪವನ್ನು ಅಧ್ಯಯನ ಮಾಡುವಾಗಲೆಲ್ಲಾ, ಒಗಟು ಪದದ ನಿಷ್ಪತ್ತಿಯ ಮೂಲಕ ಒಗಟಿನ ಸ್ವರೂಪವನ್ನು ವಿಶ್ಲೇಷಿಸಲಾಗುತ್ತದೆ. ಒಗಟು ಪದದ ಅರ್ಥವ್ಯಾಖ್ಯಾನದ ಸಂದರ್ಭದಲ್ಲಿ ಒಗಟು ಪದದ ನಿಷ್ಪತ್ತಿಯೇ ಒಗಟಾದಂತೆ ಕಾಣಿಸುತ್ತದೆ. ಒಗಟಿನ ಪದದ ವ್ಯುತ್ಪತ್ತಿ ಮತ್ತು ಅದರ ಸ್ವರೂಪದ ವಿಶ್ಲೇಷಣೆಯಲ್ಲಿ ಶಬ್ದಸಾಮ್ಯ ಮತ್ತು ಶಬ್ದಾರ್ಥದ ಮೂಲಕ ಒಗಟು ಪದದ ವ್ಯುತ್ಪತ್ತಿಮೂಲವನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಮುಖವಾಗಿ ಸಂಸ್ಕೃತ, ಪ್ರಾಕೃತ, ಅನ್ಯದೇಶೀಯ ಮತ್ತು ದ್ರಾವಿಡದ ಇತರ ಭಾಷೆಗಳ ಶಬ್ದ ಮತ್ತು ಅರ್ಥಸಾಮ್ಯತೆ ಇರುವ ಪದಗಳ ಜೊತೆಗೆ, ತುಲನಾತ್ಮಕವಾಗಿ ಅಭ್ಯಾಸ ಮಾಡುತ್ತಾ ಒಗಟು ಪದದ ಅರ್ಥ ಮತ್ತು ಮೂಲವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಒಗಟುಗಳ ಬಗ್ಗೆ ನಡೆದಿರುವ ಅಧ್ಯಯನಗಳ ಪ್ರಕಾರ, ಒಗಟು (<ಒಗಂಟು) ಪದ ಬಳಕೆಯಾಗಿರುವುದಕ್ಕೆ ಆಕ್ಷರಿಕವಾದ ಪ್ರಾಚೀನ ಎಂದೆನ್ನುವ ದಾಖಲೆ ದೊರೆಯುವುದು ಹನ್ನೊಂದು/ಹನ್ನೆರಡನೆಯ ಶತಮಾನದ ಕಾವ್ಯಾವಲೋಕನ (ನಾಗವರ್ಮ–೨, ೧೦೪೨ /೧೧೪೧) ಹಾಗೂ ವಸ್ತುಕೋಶದಲ್ಲಿ. ಈ ಗ್ರಂಥಗಳಲ್ಲಿ 'ಒಗಂಟು' ಅನ್ನುವ ಶಬ್ದರೂಪವಿದ್ದು, ಟೀಕೆ ಟಿಪ್ಪಣಿ ಬೇಡುವಂತಹ ಗೂಢವಾದ ವ್ಯಾಖ್ಯಾನಾಪೇಕ್ಷಿ ಅಭಿವ್ಯಕ್ತಿಯನ್ನು ಒಗಂಟು ಎಂದೂ, ಹೀಗೆ ಹೇಳುವವನು ಕವಿಯಲ್ಲವೆಂದೂ ಅಭಿಪ್ರಾಯ ಪಡಲಾಗಿದೆ (ಪಂಡಿತಾರಾಧ್ಯ:೧೯೭೬:೩೭). ಹೀಗಿದ್ದರೂ, ಹನ್ನೆರಡನೆಯ ಶತಮಾನದಲ್ಲಿದ್ದ ಒಗಂಟು ಅನುನಾಸಿಕ ಪದ, ಹದಿಮೂರನೆಯ ಶತಮಾನದ ವೇಳೆಗೆ ಒಗಟು ಎಂಬುದಾಗಿ, ನಿರನುನಾಸಿಕ ಪದವಾಗಿ (ಒಗಂಟು>ಒಗಟು) ಬಳಕೆಯಾಗಿದೆ ಎಂಬುದನ್ನು, ಆ ಕಾಲದ ಪ್ರೌಢದೇವನ ಕಾವ್ಯವನ್ನು ಉಲ್ಲೇಖಿಸಿ ಪ್ರತಿಪಾದಿಸಲಾಗಿದೆ. (ಪಂಡಿತಾರಾಧ್ಯ:೧೯೭೬:೩೭, ತಪಸ್ವೀಕುಮಾರ್: ೧೯೭೯:೧). ಹೀಗೆ, ಆಕ್ಷರಿಕ ಪರಂಪರೆಯ ದಾಖಲೆಗಳನ್ನು ಒದಗಿಸಿ, ಒಗಟು ಪದದ ಅರ್ಥ ಮತ್ತು ಪ್ರಾಚೀನತೆಗೆ ಸುಮಾರು ಹನ್ನೊಂದು, ಹನ್ನೆರಡನೆಯ ಶತಮಾನದ ಆಕ್ಷರಿಕ ದಾಖಲೆಗಳನ್ನು ಒದಗಿಸಲಾಗಿದೆ.

ಕನ್ನಡದ ಒಗಟು ಶಬ್ದದ ವ್ಯುತ್ಪತ್ತಿಮೂಲವನ್ನು ಪ್ರಮುಖವಾಗಿ ಸಂಸ್ಕೃತ ಹಾಗೂ ದ್ರಾವಿಡ ಈ ಎರಡು ಭಾಷಾಪರಂಪರೆಗಳ ಮೂಲಗಳಿಂದ

ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಸಂಸ್ಕೃತ ಮೂಲದಿಂದ ಒಗಟು ಪದದ ವ್ಯುತ್ಪತ್ತಿಮೂಲವನ್ನು ಕಂಡುಕೊಳ್ಳುವ ಸಂದರ್ಭದಲ್ಲಿ, ಸಂಸ್ಕೃತದ 'ಬೃಹತ್ಕಥಾ'ವೇ ಪ್ರಾಕೃತದಲ್ಲಿ 'ವಡ್ಡಕಹಾ' ಆಗಿ, ಅದೇ ಕನ್ನಡಕ್ಕೆ ಬಂದಾಗ ಒಡ್ಡಕಥೆ–ಒಡಗತೆ ಆಯಿತೆಂದು ವಾದಿಸಲಾಗಿದೆ. (The Riddle in Indian life lore and literature, Durga Bhagawat. P.73, ಉದ್ಧೃತ: ಸೋಮಶೇಖರ ಇಮ್ರಾಪುರ:1976:viii) ಸಂಸ್ಕೃತದ 'ಬೃಹತ್ಕಥಾ'ದ ಹಿನ್ನೆಲೆಯಲ್ಲಿ, ಶಬ್ದಸಾಮ್ಯದ ಸಂಸ್ಕೃತ ವ್ಯುತ್ಪತ್ತಿಮೂಲದ ಈ ವಾದವನ್ನು ಇನ್ನಷ್ಟು ವಿಸ್ತರಿಸಿ, ಸಂಸ್ಕೃತದ ಬೃಹತ್ಕಥಾದಂತೆ, ಕನ್ನಡದಲ್ಲಿ ಒಗಟು ಪದಕ್ಕೆ ಸಂವಾದಿಯಾಗಿ ದೊರೆಯುವ ಒಡಗತೆ, ಒಡಚುಕತೆ, ಒಡಸುಕತೆ, ಒಡ್ಡಿದ ಕತೆ, ಒಗಟುಕತೆ ಈ ಪದಗಳ ಶಬ್ದಸಾಮ್ಯದಿಂದ ಒಗಟು ಪದದ ವ್ಯುತ್ಪತ್ತಿಮೂಲವನ್ನು ಒಡಕತೆ>ಒಡಗತೆ> ಒಗತೆ>ಒಗಟೆ>ಒಗಟು ಎಂಬುದಾಗಿ ಪುನಾರಚಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. (ವಿವೇಕ ರೈ:೧೯೭೧:X) ಒಡಚು ಎಂದರೆ ಬಿಡಿಸು, ಹಿಂಜು ಎಂದರ್ಥ. ಆದ್ದರಿಂದ ಒಡಚುವ ಕತೆ ಎಂದರೆ ಸಮಸ್ಯೆಯ ಸಿಕ್ಕನ್ನು ಬಿಡಿಸುವ ಕತೆ ಎಂಬ ಅರ್ಥವನ್ನೂ ನೀಡಲಾಗಿದೆ. (ಸುಧಾಕರ:೧೯೭೦:xiii)

ಆದರೆ, ಈ ವಾದವನ್ನು ನಿರಾಕರಿಸಿ, ಒಡಗತೆ ಅನ್ನುವುದು ಒಗಟಿನ ಪ್ರಭೇದವೇ ಹೊರತು ಒಟ್ಟು ಒಗಟಿನ ಮೂಲವಲ್ಲ ಅನ್ನುವ ವಾದವನ್ನೂ ಮಂಡಿಸಲಾಗಿದೆ. ಈ ಸಂದರ್ಭದಲ್ಲಿ, ಸಂಸ್ಕೃತ ಶಬ್ದಸಾಮ್ಯಕ್ಕಿಂತ, ದ್ರಾವಿಡದ ಇತರ ಭಾಷೆಗಳಲ್ಲಿಯ ವಿಡಿಕಥಾ (ತೆಲುಗು), ವಿಡಿಕಾದಾಯ್ (ತಮಿಳು), ವಿಡಿಕದ (ಮಲಯಾಳಿ) ಪದಗಳೇ ಅರ್ಥ ಮತ್ತು ಶಬ್ದರಚನೆಯಲ್ಲಿ ಕನ್ನಡದ ಒಡಗತೆಯೊಂದಿಗೆ, ಹೆಚ್ಚಿನ ಸಂಬಂಧವನ್ನು ಪಡೆಯುತ್ತವೆ ಎಂದೂ ವಾದಿಸಲಾಗಿದೆ. ತೆಲುಗಿನ 'ಪೊಡಪುಕಥಲು' ಎಂಬ ರೂಪವು ಕನ್ನಡದಲ್ಲಿ ಒಡಪುಕಥೆ–ಒಡಗತೆಯಾಗಿರಬೇಕೆಂದು ಊಹಿಸಲಾಗಿದೆ. ಸಂಸ್ಕೃತದ 'ಬೃಹತ್ಕಥೆ' ಎಂದರೆ 'ದೊಡ್ಡ ಕಥೆ', ಅದರಂತೆ ಪ್ರಾಕೃತದ 'ವಡ್ಡಕಹಾ' ಕೂಡಾ 'ದೊಡ್ಡಕಥೆ' ಎಂಬ ಅದೇ ಅರ್ಥ ಹೊಂದಿರುವುದರಿಂದ, ಕನ್ನಡದ ಒಗಟಿಗೂ, ಅವುಗಳಿಗೂ ಈ ವಿಚಾರದಲ್ಲಿ ಯಾವ ಸಂಬಂಧವೂ ಇಲ್ಲ ಎಂಬುದಾಗಿ ವಾದಿಸಲಾಗಿದೆ. (ಸೋಮಶೇಖರ ಇಮ್ರಾಪುರ :೧೯೭೬: viii). ಒಡಚುವ ಕತೆ > ಒಡಗತೆ ಆಗುವುದು ಎಷ್ಟು ಸುಲಭವೋ ಬೃಹತ್ಕಥಾದಿಂದ ಒಡಗಥೆ (ಬೃಹತ್ಕಥಾ ಒಡಗಥೆ) > ಆಗುವುದೂ ಅಷ್ಟೇ ಕಷ್ಟವೆನಿಸುತ್ತದೆ ಎಂಬುದಾಗಿ ಅಭಿಪ್ರಾಯಪಡ ಲಾಗಿದೆ. (ರಾಗೌ:೧೯೭೦: viii)

ಕನ್ನಡದಲ್ಲಿ, ಒಗಟು ಪದಕ್ಕೆ ಸಂವಾದಿಯಾಗಿ ಒಂಟು, ಒಡಪು ಪದಗಳು ಬಳಕೆಯಲ್ಲಿದ್ದು, ಇವುಗಳಲ್ಲಿ 'ಒಂಟು' ಅನ್ನುವ ರೂಪ ಒಗಟಿನ ಗ್ರಾಮ್ಯರೂಪವಾಗಿದ್ದು, ಒಗಟು ಮತ್ತು ಒಡಪುಗಳು ಪರಸ್ಪರ ಒಂದೇ ಅನ್ನುವ ವಾದ ಅಲ್ಲದೆಯೇ, ಅವೆರಡು ಪರಸ್ಪರ ಭಿನ್ನ ಅನ್ನುವ ವಾದವೂ ಇದೆ. (ಬೆಟಗೇರಿ ಕೃಷ್ಣಶರ್ಮ; ಹೆಸರ ಹೇಳ್ತೀನಿ ಒಡಪಕಟ್ಟಿ: ೧೯೭೧: vi – vii; ಉದ್ಧೃತ; ನಂ ತಪಸ್ವಿಕುಮಾರ್:೧೯೭೯:೮) ಒಗೆ ಅಥವಾ ಎಸೆ ಎಂಬರ್ಥದಲ್ಲಿ ಒಗಟೂ; ಒಡೆ– ಒಡೆಸು (ಬಿಡಿಸು) ಎಂಬರ್ಥದಲ್ಲಿ ಒಡಪೂ ಬಂದಿರಬೇಕೆಂದು ಪ್ರತಿಪಾದಿಸಲಾಗಿದೆ. (ರಾಗೌ:೧೯೭೦:vi) ಒಗಟು ಪದಕ್ಕೆ 'ಒಗೆ' ಧಾತು ಮೂಲವಿದ್ದು, ಬಿಡಿಸಬೇಕಾದದ್ದು ಎಂಬ ಅರ್ಥವಿರುವುದಾಗಿ, 'ಒಗೆ' ಅಂದರೆ 'ಸವಾಲು ಹಾಕು' 'ಎಸೆ' ಎಂಬ ಅರ್ಥಗಳಲ್ಲಿ ಒಗಟು ಪದದ ಅರ್ಥವಿವರಣೆಯನ್ನು ನೀಡಲಾಗಿದೆ. (ಸಿ.ಪಿ.ಕೆ:೧೯೬೭:೬೦; ಉದ್ಧೃತ ಲಕ್ಕಪ್ಪಗೌಡ:೧೯೭೩:xiv). ಒಗೆ– ಅಂದರೆ ಹೊರಹೊಮ್ಮು, ಬೆಳಕಿಗೆ ಬರುವುದು, ಒಗೆಯುವುದು ಎನ್ನುವ ಅರ್ಥದಲ್ಲಿ ಒಗಟು ಪದಕ್ಕೆ ತೋರಿಕೆಯ ಅರ್ಥದಿಂದ ಬೇರೊಂದು ಹೊಸ ಅರ್ಥ ಹೊಮ್ಮುವುದು ಎನ್ನುವ ಅರ್ಥವಿವರಣೆಯನ್ನು ನೀಡಲಾಗಿದೆ. ಒಗೆ– ಎನ್ನುವುದಕ್ಕೆ ಗೂಢಾರ್ಥದಲ್ಲಿ ಮೋಸಗೊಳಿಸಿ ಬಂಧಿಸು, ಬೀಳಿಸು ಅನ್ನುವ ಅರ್ಥಗಳ ಜೊತೆಗೆ, ಮಾತಿನ ಮೋಸದ ಬಲೆಯಲ್ಲಿ ಸಿಕ್ಕಿಸಿಹಾಕಿಸಿ ಬಿಡಿಸಿಕೊಳ್ಳುವ ಸವಾಲನ್ನು ಒಡ್ಡು ಅನ್ನುವ ಅರ್ಥವನ್ನೂ ಮುಂದಿಡಲಾಗಿದೆ. (ಪಂಡಿತಾರಾಧ್ಯ:೧೯೭೬:೩೫)

ಒಗಟುಗಳಂತೆ, ಒಡಪುಗಳಲ್ಲಿ ಸಮಸ್ಯೆಗಳಾಗಲಿ, ಗೂಢತೆಯಾಗಲಿ ಇಲ್ಲದಿರುವುದು ಮಾತ್ರವಲ್ಲ, ಒಗಟುಗಳಂತೆ ಒಡಪುಗಳು ಸಾರ್ವತ್ರಿಕವಾಗಿ ಬಳಕೆಯಾಗದೆ, ಉತ್ತರಕರ್ನಾಟಕದ ಮದುವೆ ಮುಂತಾದ ಮಂಗಲ ಸಂದರ್ಭಗಳಲ್ಲಿ ಮಾತ್ರ ಒಡಪುಗಳು ಬಳಕೆಯಾಗುತ್ತವೆ ಅನ್ನುವ ಕಾರಣಗಳಿಂದ ಒಗಟು ಮತ್ತು ಒಡಪು ಇವು, ಒಂದೇ ಅರ್ಥದ ಪದಗಳಲ್ಲ ಎಂಬುದಾಗಿ ಪ್ರತಿಪಾದಿಸಲಾಗಿದೆ. (ಉದ್ಧೃತ; ನಂ ತಪಸ್ವಿಕುಮಾರ್:೧೯೭೯:೯) ಒಡಪುಗಳ ಮುಖ್ಯ ಲಕ್ಷಣ ಕೇಳುವವರಿಗೆ ಸವಾಲನ್ನು ಒಡ್ಡುವುದು ಅಲ್ಲ; ಬದಲಾಗಿ, ಮಾತಿನ ಬೆಡಗಿನಿಂದ ಅವರನ್ನು ರಂಜಿಸುವುದು. ಒಡಪುಗಳು, ವ್ಯಕ್ತಿಯ ಗುಣಸ್ವಭಾವಗಳಿಗೆ ಸಂಬಂಧಿಸಿದ ಚಮತ್ಕಾರದ ಉಕ್ತಿ ಎಂದು ಹೇಳುತ್ತಾ, ಈ ಲಕ್ಷಣಗಳಿಂದಲೇ, ಒಗಟಿಗಿಂತ ಒಡಪುಗಳು ಭಿನ್ನ ಎಂಬುದಾಗಿ ಗುರುತಿಸಿಕೊಳ್ಳಲಾಗಿದೆ. (ಪಂಡಿತಾರಾಧ್ಯ:೧೯೭೬:೨೯) ಉಳಿದ ಜಾನಪದ

ಪ್ರಕಾರಗಳಂತೆ, ಒಗಟುಗಳ ಅಭಿವ್ಯಕ್ತಿಗೆ ಸಾಂಸ್ಕೃತಿಕ ಸಂದರ್ಭಗಳಿಲ್ಲ ಎಂದಿದ್ದರೂ. ಒಡಪುಗಳಂತೆ, ಕರ್ನಾಟಕದ ಕೆಲವು ಸಮುದಾಯಗಳಲ್ಲಿ ಮದುವೆ ಸಂದರ್ಭದಲ್ಲಿ ಒಗಟುಗಳನ್ನು ಹೇಳುವ ಆಚರಣಾತ್ಮಕ ಸಂದರ್ಭಗಳಿದ್ದು, ಮದುವೆಯ ಗಂಡು ಮತ್ತು ಹೆಣ್ಣಿನ ನಡುವೆ ಪಾರಸ್ಪರ್ಯಕ್ರಿಯೆಯಾಗಿ, ಒಗಟುಗಳು ಭಾಷಿಕ ಆಟವಾಗಿ ಬಳಕೆಯಾಗುತ್ತವೆ ಎಂಬುದಾಗಿ, ಒಗಟು ಬಳಕೆಯ ಸಂದರ್ಭದ ಅರ್ಥವಿವರಣೆಯನ್ನು ನೀಡಲಾಗಿದೆ. (ಹಿರಿಯಣ್ಣ)

ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಒಗಟು ಪದವನ್ನು ಸಂಯುಕ್ತ ಪದವೆಂದು ಪರಿಭಾವಿಸಿಕೊಂಡು, ಅದರ ನಿಷ್ಪತ್ತಿಯನ್ನು ಹುಡುಕುವ ಪ್ರಯತ್ನವೂ ನಡೆದಿದೆ. (ಪಂಡಿತಾರಾಧ್ಯ, ೧೯೭೬:೨೭–೪೪). ಈ ಬಗೆಯಲ್ಲಿ, ಒಂಟು ಅನ್ನುವ ಒಗಟಿನ ಗ್ರಾಮ್ಯರೂಪವನ್ನು ಒಗಟು ಪದದ ನಿಷ್ಪತ್ತಿ ಮೂಲದಲ್ಲಿ ಗುರುತಿಸಲಾಗಿದೆ. ಆಡುಮಾತಿನಲ್ಲಿ ಒಗಟು ಪದ ಒಂಟು ಎಂದಾಗಿದ್ದು, ಅನುನಾಸಿಕ ಧ್ವನಿಯುಕ್ತ ಸಂಯುಕ್ತ ಪದವಾಗಿರುವ 'ಒಗಂಟು' ರೂಪದಲ್ಲಿ ಒಗಟಿನ ಪೂರ್ವರೂಪವನ್ನು (ಒಗಂಟು>ಒಂಟು>ಒಗಟು) ಗುರುತಿಸಲಾಗಿದೆ. ಈ ಸಂದರ್ಭದಲ್ಲಿ, ನಿಫ + ಅಂಟು >ನಿಫಂಟು ಆದಂತೆ, ಒಗೆ + ಅಂಟು > ಒಗಂಟು ಹೀಗೆ, ಸಂಧಿ ಆಗಿರಬಹುದೇ ಅನ್ನುವ ಪ್ರಮೇಯವನ್ನು ಮುಂದಿಡಲಾಗಿದೆ. ಒಗಂಟು ಪದದ ಸಂಧಿವಿಂಗಡಣೆಯನ್ನು ಒಗೆ+ಅಂಟು ಅನ್ನುವ ಬಗೆಯಲ್ಲಿ ಅಲ್ಲದೆಯೇ, ಒರ್+ಅಂಟು > ಒರ್ಗಂಟು > ಒಗಂಟು ಎಂಬುದಾಗಿಯೂ ಒಗಂಟು ಪದದ ಸಂಧಿ ವಿಂಗಡಣೆಯನ್ನು ಮಾಡಲಾಗಿದೆ. ಆದರೆ, ತಮಿಳು, ತೆಲುಗು ಭಾಷೆಗಳಲ್ಲಿ ಒಗೆ, ಉಗು ರೂಪಗಳು ಸಿಗುವುದರಿಂದಾಗಿ, ಒರ್+ಗಂಟುವಿಗಿಂತ ಒಗೆ+ಅಂಟುವಿಗೆ ಹೆಚ್ಚಿನ ಸಾಧ್ಯತೆ ಇದೆ ಎಂಬುದಾಗಿ ವಾದಿಸಲಾಗಿದೆ. ಆ ಮೂಲಕ, ಒಗೆ ಮತ್ತು ಅಂಟುಗಳ ಸಂಬಂಧವನ್ನು ದ್ರಾವಿಡ ಭಾಷಾ ಪರಿಸರದೊಳಗೆ ಗುರುತಿಸಲೂ ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಅಂಟು ಎಂದರೆ ಒಂದು ಕ್ರಮದಲ್ಲಿ ಜೋಡಿಸಿದ, ವ್ಯವಸ್ಥೆಗೊಳಿಸಿದ ಎಂದೂ, ಹಾಗೆಯೇ ಒಗೆ– ಅಂದರೆ, ವ್ಯಾಖ್ಯಾನಾಪೇಕ್ಷಿ, ಸವಾಲು ಇತ್ಯಾದಿಗಳನ್ನು ಒಂದು ಕ್ರಮದಲ್ಲಿ ಜೋಡಿಸುವುದು, ಪರಸ್ಪರ ವಿನಿಮಯ ನಡೆಸುವುದು ಎಂದೂ ಅರ್ಥೈಸಲಾಗಿದೆ. (ಪಂಡಿತಾರಾಧ್ಯ:೧೯೭೬:೩೬–೩೭).

ಒಗಂಟುವಿನ ಅನುನಾಸಿಕ ರೂಪ ನಿರನುನಾಸಿಕವಾಗಿ ಒಗಟು ಆಗಿದ್ದು, ಈ ಅನುನಾಸಿಕ ರೂಪ ನಿರನುನಾಸಿಕವಾಗುವ ಪ್ರಕ್ರಿಯೆಯಲ್ಲಿ ಒಗಂಟುವಿನಲ್ಲಿನ

ಅನುನಾಸಿಕ ಧ್ವನಿಯು ಲೋಪವಾಗಿ, ಈ ಧ್ವನಿಲೋಪದ ಪರಿಹಾರವಾಗಿ ಆದಿ ಹ್ರಸ್ವಸ್ವರ ಓ ಎಂದು ದೀರ್ಘವಾಗಿ (ಪರಿಹಾರದೀರ್ಘ) ಒಗಂಟು> ಓಗಂಟು ಆಗಿ, ಆಮೇಲೆ > ಒಗಟು ಆಗಿದೆ ಎಂದೂ ವಾದಿಸಲಾಗಿದೆ. (ಪಂಡಿತಾರಾಧ್ಯ, ೧೯೭೬, ೩೮–೩೯) ಅನುನಾಸಿಕ ವ್ಯಂಜನ ಗುಚ್ಛವು ದ್ವಿವ್ಯಂಜನವಾಗಿ ಪರಿವರ್ತಿತವಾಗಿ ಒಗಂಟು> ಒಗಟ್ಟು> ಓಗಟು> ಒಗಟು ಅನ್ನುವ ಇಂದಿನ ರೂಪಕ್ಕೆ ಬಂದಿರಬಹುದು ಎಂದೂ ವಾದಿಸಲಾಗಿದೆ. (ಪಂಡಿತಾರಾಧ್ಯ:೧೯೭೬:೩೯). ಆ ಮೂಲಕ ದ್ರಾವಿಡ ಮೂಲವನ್ನೇ ಪುರಸ್ಕರಿಸಲಾಗಿದೆ.

ಒಗಟು ಪದಕ್ಕೆ ಒಂಟು, ಒಡಪು ಪದಗಳಲ್ಲದೆಯೇ, ಕನ್ನಡದಲ್ಲಿ ಒಡಗೆ, ಒಡಚುವ ಕತೆ, ಒಡ್ಡಿದಕತೆ ಈ ಮುಂತಾದ ಸಂವಾದಿಪದಗಳು ದೊರೆಯುವುದ ರಿಂದ ಒಗಟು ಪದದ ವ್ಯುತ್ಪತ್ತಿಮೂಲವನ್ನು ಈ ಸಂಧಿಯಾದ ಸಂಯುಕ್ತ ಪದದ ಹಿನ್ನೆಲೆಯಲ್ಲಿ ವಿವೇಚಿಸಿಕೊಳ್ಳಲಾಗಿದೆ. ಕನ್ನಡದಲ್ಲಿ ಕತೆ ಎನ್ನುವ ರೂಪ ಒಗಟುವಿನೊಡನೆ ಕೂಡಿ ಒಗಟು+ಕತೆ> ಒಗಟುಕತೆ>ಒಡಗತೆ ಎಂದಾಗಿದೆ ಎನ್ನಲಾಗಿದೆ. ಅಂದರೆ ಕತೆಯ ರೂಪದಲ್ಲಿರುವ (ಕಥಾತ್ಮಕವಾದ) ಒಗಟುಗಳು ಎಂದೂ, ಒಗಟನ್ನು ಹೊಂದಿರುವ ಕತೆಗಳು ಒಗಟುಕತೆ, ಒಡಗತೆ ಎಂಬುದಾಗಿ ಅರ್ಥೈಸಲಾಗಿದೆ. ಆ ಮೂಲಕ ಒಗಟುಕತೆಗಳನ್ನು ಒಗಟಿನ ಇನ್ನೊಂದು ಪ್ರಕಾರವಾಗಿ ಗುರುತಿಸಲಾಗಿದೆ. ಒಗಟಿಗೆ ಒಡಗೆ, ಒಡಚುವ ಕತೆ, ಒಡ್ಡಿದ ಕತೆ ಮುಂತಾದ ಹೆಸರುಗಳಿದ್ದರೂ ಒಡಗತೆ ಅನ್ನುವುದು ಒಗಟಿನ ಪ್ರಭೇದವೇ ಹೊರತು, ಒಟ್ಟು ಒಗಟಿನ ಮೂಲವಲ್ಲ ಅನ್ನುವ ವಾದವನ್ನೂ ಮಂಡಿಸಲಾಗಿದೆ. (ಸೋಮಶೇಖರ ಇಮ್ರಾಪುರ:೧೯೭೬: vi). ಒಗಟುಕತೆಗಳೂ, ಕಥಾರಹಿತ ಒಗಟುಗಳೂ ಇದ್ದು ಮುಂದೆ ಒಗಟು ಕತೆ ಎಂಬ ಅರ್ಥ ವಿಸ್ತಾರವಾಗಿ, ಕಥಾರಹಿತ ಒಗಟುಗಳೂ ಒಗಟುಕತೆಗಳೆಂದೇ ಹೆಸರು ಪಡೆದಿರಬಹುದು ಎಂಬ ಅಭಿಪ್ರಾಯವೂ ಇದೆ (ಹಾಮಾನಾ:೧೯೭೪).

ಒಗಟುಗಳ ಸ್ವರೂಪವನ್ನು ಗಮನಿಸಿದರೆ ಕತಾರೂಪದ ಒಗಟುಗಳು ಇವೆಯಾದರೂ, ಈ ವಿವರಣೆಯ ಪ್ರಕಾರ, ಎಲ್ಲ ಒಗಟುಗಳೂ ಕತೆಯ ಪರಿವೇಷವನ್ನು ಹೊಂದಿರುತ್ತವೆ ಎಂದೇನಿಲ್ಲ. ತಮಿಳು, ತೆಲುಗು, ಮಲಯಾಳಂ, ತುಳು ಭಾಷೆಗಳಲ್ಲಿ ಕತೆಯ ಹಿನ್ನೆಲೆ ಇಲ್ಲದ ಒಗಟುಗಳನ್ನೂ ಕತೆ ಎಂದೇ ಹೇಳಲಾಗಿದೆ. (ಪಂಡಿತಾರಾಧ್ಯ:೧೯೭೬:೪೩) ಕನ್ನಡದ ಒಗಟುಕತೆಗೆ ಸಮಾನವಾದ ರೂಪಗಳು ಜ್ಞಾತಿ ಭಾಷೆಗಳಲ್ಲಿವೆ. ಈಗಾಗಲೇ ಪ್ರಸ್ತಾವಿಸಿರುವಂತೆ,

ತುಳು– ಎದುರುಕತೆ, ಮಂಡೆಕತೆ, ತಮಿಳು– ವಿಡುಗದ್ಯೆ ಅಂದರೆ ಬಿಡಿಸಬೇಕಾದ ಕತೆ (ಸಮಸ್ಯೆ), ತೆಲುಗು– ಪೊಡುಪು ಕಥ, ಒಡ್ಡಿಕಥ, ಮಲಯಾಳಂ– ಕಡಂ ಕಥ ಅಂದರೆ, ಉತ್ತರವನ್ನು ಹೇಳಲಾರದೆ ಹೋದಾಗ ಅದನ್ನು ಕಡಪಡೆದಂತೆ (ಶ್ಯಾಮಲಕುಮಾರಿ:೧೯೭೨:ಉದ್ಧೃತ ಪಂಡಿತಾರಾಧ್ಯ:೧೯೭೬:೪೨) ಅನ್ನುವ ಕನ್ನಡದ ಒಗಟಿಗೆ ಇರುವ ಈ ಎಲ್ಲ ಹೆಸರುಗಳು ದ್ರಾವಿಡದ ಬೇರೆ ಬೇರೆ ಭಾಷೆಗಳಲ್ಲಿ ಕಾಣಬರುತ್ತವೆ. ಕನ್ನಡದಲ್ಲಿ ಮುಂಡಿಗೆ ಎನ್ನುವುದು ಇದೇ ಬಗೆಯುದು ಎಂಬುದು ವಿದ್ವಾಂಸರ ಅಭಿಪ್ರಾಯ (ಚಿದಾನಂದ ಮೂರ್ತಿ:೧೯೬೬:೧೦೧–೧೦೪).

ತುಳುವಿನಲ್ಲಿ ಒಗಟುಗಳಿದ್ದರೂ ಅವುಗಳನ್ನು ಒಗಟುಗಳು ಎನ್ನುವುದಿಲ್ಲ. ಒಗಟುಗಳನ್ನು ಎದುರುಕತೆ, ಮಂಡೆಕತೆ ಎಂದೂ ಹೇಳುತ್ತಾರೆ. ಎರಡು ಗುಂಪುಗಳು ಎದುರು ಬದಿರಾಗಿದ್ದು (ಒಬ್ಬೊಬ್ಬರೂ ಇರಬಹುದು) ಎದುರು ಗುಂಪಿನವರಿಗೆ ಸವಾಲಿನ ರೂಪದಲ್ಲಿ ಎದುರುಕತೆಯನ್ನು ಹೇಳಲಾಗುತ್ತದೆ. (ವಿವೇಕ ರೈ:೧೯೭೧:x) ಎದುರುಗುಂಪಿನವರು ಇದನ್ನು ಬಿಡಿಸಿ ಉತ್ತರ ಹೇಳಬೇಕು. ಉತ್ತರ ಕೊಟ್ಟ ಬಳಿಕ ಉತ್ತರ ಕೊಟ್ಟವರು ಇನ್ನೊಂದು ಎದುರುಕತೆಯನ್ನು ಎದುರುಗುಂಪಿನವರಿಗೆ ಸವಾಲಾಗಿ ಹೇಳಬೇಕು. ಇದಕ್ಕೆ ಎದುರು ಗುಂಪಿನವರು ಉತ್ತರವನ್ನು ಕೊಡಬೇಕು. ಹೀಗೆ, ಪರಸ್ಪರ ಎದುರಾಗಿ ಪಾರಸ್ಪರ್ಯಕ್ರಿಯೆಯಾಗಿ ಎದುರುಕತೆಯನ್ನು ಹೇಳುತ್ತಿರುತ್ತಾರೆ. ಈ ಕಾರಣದಿಂದ ಒಗಟನ್ನು ಎದುರುಕತೆ ಎನ್ನಲಾಗಿದೆ. ಒಂದು ವೇಳೆ ಉತ್ತರವನ್ನು ಕೊಡಲು ಸಾಧ್ಯವಾಗದೆ ಇದ್ದಾಗ, ತಲೆ (ಮಂಡೆ) ತಗ್ಗಿಸಬೇಕಾಗುತ್ತದೆ. ಅಂದರೆ ಸೋಲು ಒಪ್ಪಿಕೊಳ್ಳಬೇಕು. ಈ ಕಾರಣದಿಂದ ಒಗಟಿಗೆ ತುಳುವಿನಲ್ಲಿ ಮಂಡೆಕತೆ ಎನ್ನುತ್ತಾರೆ. ಜನಪದದ ಈ ಭಾಷಿಕ ಆಟದಲ್ಲಿ ಸೋಲು ಸೋಲು ಅಲ್ಲ; ಸೋಲು ಅಂತಿಮವೂ ಅಲ್ಲ. ಸೋತವನು ಮತ್ತೆ ಗೆಲ್ಲುವ ಅವಕಾಶವಿದೆ. ಆತ ತನ್ನ ಎದುರಿನವನಿಗೆ ಉತ್ತರಿಸಲು ಸಾಧ್ಯವಾಗದಿರುವ ಎದುರುಕತೆಯನ್ನು ಒಡ್ಡಿದಾಗ ಸೋತವ ಮತ್ತೆ ಗೆಲ್ಲುತ್ತಾನೆ. ಹೀಗೆ, ಜನಪದದ ಈ ಭಾಷಿಕ ಆಟದಲ್ಲಿ ಸೋಲು ಗೆಲುವಿನ ಪಾರಸ್ಪರ್ಯ ಕ್ರಿಯೆ ನಡೆಯುತ್ತಿರುತ್ತದೆ. ಇಬ್ಬರು ಅಥವಾ ಎರಡು ಗುಂಪುಗಳ ಮಧ್ಯೆ ಒಂದು ಬಗೆಯ ಭಾಷಿಕ ಆಟವಾಗಿ ವಿನೋದವಾಗಿಯೂ ವಿವೇಕವಾಗಿಯೂ ಎದುರುಕತೆ ಅಥವಾ ಮಂಡೆಕತೆ ನಿರ್ವಹಣೆಗೊಳ್ಳುತ್ತಿರುತ್ತದೆ. ತುಳುವಿನಲ್ಲಿ ಒಗಟು ರೂಪಕ್ಕೆ ಎದುರುಕತೆ ಅಥವಾ ಮಂಡೆಕತೆಯ ಜೊತೆಗೆ ನರಿಪುಕತೆ ಅನ್ನುವ ಇನ್ನೊಂದು ಹೆಸರೂ ಇದೆ.

'ನರಿಪು' ಅಂದರೆ ತುಳುವಿನಲ್ಲಿ ಒಡೆಯು ಎಂಬರ್ಥವಿದೆ. ಒಗಟನ್ನು ಒಡೆದು ಅದರ ಉತ್ತರವನ್ನು ಹೇಳಬೇಕಾದ ಕಾರಣದಿಂದ ಇದಕ್ಕೆ ನರಿಪುಕತೆ ಎಂಬ ಹೆಸರಿದೆ. ಎದುರುಕತೆ, ಮಂಡೆಕತೆ ಎಂಬ ಪದಗಳ ಜೊತೆಗೆ ತುಳುವಿನ ನರಿಪುಕತೆ ಅನ್ನುವ ಪದವೂ ಒಗಟುಗಳ ಸ್ವರೂಪವನ್ನು ವಿವರಿಸುವುದಕ್ಕೆ ಇನ್ನೊಂದು ಆಯಾಮವನ್ನು ಒದಗಿಸುತ್ತದೆ.

ವರ್ಗೀಕರಣದ ಸಮಸ್ಯೆ

ಮೇಲೆ ಪ್ರಸ್ತಾವಿಸಿರುವ ಒಗಟು ಪದದ ಎಲ್ಲ ಬಗೆಯ ವ್ಯಾಖ್ಯಾನಗಳನ್ನು ಗಮನಿಸಿದರೆ, ಭಾಷಿಕ ರಚನೆಯ ನೆಲೆಯಲ್ಲೇ ಒಗಟು ಪದದ ನಿಷ್ಪತ್ತಿಯನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಅದರಲ್ಲೂ ಸಾಹಿತ್ಯವೆಂದು ಪರಿಕಲ್ಪಿಸುವ ಮತ್ತು ವರ್ಗೀಕರಿಸುವ ಭಾಷಿಕ ಪಠ್ಯಗಳನ್ನು ಅಭ್ಯಾಸ ಮಾಡುವ ಸಾಹಿತ್ಯವಿಭಾಗಗಳಲ್ಲೇ ಜಾನಪದದ ಪರಿಕಲ್ಪನೆ ಮತ್ತು ಅಧ್ಯಯನ ಸಾಗಿಬಂದಿರುವುದರಿಂದ ಒಗಟುಗಳ ಅಧ್ಯಯನದಲ್ಲೂ ಭಾಷಿಕ ಹಾಗೂ ಸಾಹಿತ್ಯಿಕ ಗೃಹೀತಗಳೇ ನಿರ್ಣಾಯಕವಾಗುವುದನ್ನು ಗಮನಿಸಬಹುದಾಗಿದೆ. ಆಧುನಿಕ ಕಾಲದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಒಡಮೂಡುವ ಕನ್ನಡ ನಾಡುನುಡಿಯ ಅನುಸಂಧಾನಗಳು ಪ್ರಮುಖವಾಗಿ, ಎರಡು ಧಾರೆಗಳಲ್ಲಿ ಪುನರ್ ಸಂಘಟಿತಗೊಳ್ಳುತ್ತವೆ. ಒಂದು ಸಂಸ್ಕೃತ ಧಾರೆ. ಅದಕ್ಕೆ ಎದುರಾದ ದ್ರಾವಿಡದ ಇನ್ನೊಂದು ಧಾರೆ. ಒಗಟು ಪದದ ನಿಷ್ಪತ್ತಿಯ ಸಂದರ್ಭದಲ್ಲೂ ಈ ಎರಡು ಬಗೆಯ ಗ್ರಹಿಕೆಯ ನೆಲೆಗಳನ್ನು ಕಾಣುತ್ತೇವೆ.

ಜನಪದದ ಭಾಷಿಕ ಅಭಿವ್ಯಕ್ತ ರೂಪಗಳನ್ನು ಸಾಹಿತ್ಯ ಪರಿಕಲ್ಪನೆಯಲ್ಲಿ ಸಾಹಿತ್ಯ ಪ್ರಕಾರಗಳಾಗಿ ಪರಿಭಾವಿಸಿಕೊಳ್ಳುವ, ವರ್ಗೀಕರಿಸಿಕೊಳ್ಳುವ, ವಿಭಜಿಸಿಕೊಳ್ಳುವ ಕಾರಣದಿಂದಲೋ ಎನೋ, ಒಗಟು ಅನ್ನುವ ಪದದ ಜೊತೆಗೆ ಕಂಡುಬರುವ ಒಡಚುಕತೆ, ಒಡಗತೆಯಲ್ಲೂ ಕತೆಯ ರೂಪವನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತೇವೆ. ಈ ಬಗೆಯಲ್ಲಿ ಪರಿಕಲ್ಪಿಸುವ, ವರ್ಗೀಕರಿಸುವ ಕ್ರಿಯಾಚರಣೆಯನ್ನು ಸಾಹಿತ್ಯವನ್ನು ಅಭ್ಯಾಸಮಾಡುವ ವರ್ಗವೇ ಮಾಡುತ್ತಿರುವುದರಿಂದ ಸಾಹಿತ್ಯದ ಪರಿಕಲ್ಪನೆಯಲ್ಲಿಯೇ ಜನಪದದ ಭಾಷಿಕ ಅಭಿವ್ಯಕ್ತಿಗಳನ್ನು ಸಾಹಿತ್ಯ ಎಂದು ಪರಿಕಲ್ಪಿಸುವ ಮತ್ತು ಸಾಹಿತ್ಯ ಪ್ರಕಾರಗಳಾಗಿ ವರ್ಗೀಕರಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಒಗಟು ಅನ್ನುವುದು ಕತೆಯ ರೂಪದ್ದು ಅಲ್ಲ ಅನ್ನುವ ನಮ್ಮ ಪೂರ್ವಗೃಹೀತದ ಕಾರಣದಿಂದಾಗಿ 'ಒಡಕತೆ'

ಒಗಟಿನ ನಿರ್ವಚನದಲ್ಲಿ ಒಗಟಾಗುತ್ತದೆ, ಸಮಸ್ಯೆಯಾಗುತ್ತದೆ. ಹೀಗಾಗಿ, ಒಡಕತೆಯಲ್ಲಿ ಕತೆಯನ್ನು ಹುಡುಕುವ ನಾವು ಕತೆ ಇರುವ ಒಡಕತೆಯನ್ನು ಒಗಟಿನ ಇನ್ನೊಂದು ಬಗೆಯಾಗಿ, ಪ್ರಕಾರವಾಗಿ, ಪ್ರಭೇದವಾಗಿ ವರ್ಗೀಕರಿಸಿಕೊಳ್ಳುತ್ತೇವೆ. ನಮ್ಮೀ ವರ್ಗೀಕರಣದ ಮೂಲಕ ಒಗಟಿನ ನಿರ್ವಚನದಲ್ಲಿ ವಿವರಿಸಲಾಗದ, ಒಗಟಾದ, ನಮ್ಮ ಅರಿವಿನ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತೇವೆ. ನಮ್ಮ ಆಡುಮಾತಿನ ಭಾಷಿಕ ರೂಪಗಳನ್ನು ಗಮನಿಸಿದರೆ ಕತೆ ಅನ್ನುವ ಪದ ದಿನನಿತ್ಯದ ನಮ್ಮ ಮಾತಿನಲ್ಲಿ ಅಲ್ಲಲ್ಲಿ ಕೇಳಿಬರುತ್ತದೆ. ಕತೆ ಅನ್ನುವುದು ನಿರ್ದಿಷ್ಟ ಸಾಹಿತ್ಯ ಪ್ರಕಾರವಾಗಬೇಕಾಗಿಲ್ಲ. 'ಅವನದೊಂದು ದೊಡ್ಡ ಕತೆ' ಅನ್ನುತ್ತೇವೆ. 'ಅದೊಂದು ದೊಡ್ಡ ಕತೆ' ಅನ್ನುತ್ತೇವೆ. ಈ ಎಲ್ಲ ಮಾತಿನ ರೂಪಗಳಲ್ಲಿ ಬರುವ ಕತೆ ನಮ್ಮ ಸಾಹಿತ್ಯ ಪ್ರಕಾರದ ಕಲ್ಪನೆಯ ಕತೆಯಲ್ಲ. ಈ ಅರ್ಥದಲ್ಲಿ ಕನ್ನಡದ ಒಡಕತೆ, ಒಡಗತೆ ಇರಬಹುದು ತುಳುವಿನ ಎದುರುಕತೆ, ಮಂಡೆಕತೆ, ನರಿಪುಕತೆ ಇರಬಹುದು, ತಮಿಳಿನ ವಿಡುಗದೈ ಇರಬಹುದು, ತೆಲುಗಿನ ಪೊಡುಪುಕಥ, ಒಡ್ಡಿಕಥ ಇರಬಹುದು, ಮಲಯಾಳಂನ ಕಡಂಕಥ ಇರಬಹುದು ಇವೆಲ್ಲ ಒಗಟುಗಳನ್ನು ನಿರೂಪಿಸುವ ಸಂವಾದಿ ಪದಗಳಾಗಿರಬಹುದು. ಬಹುಷ: ನಮ್ಮ ಜನಪದದ ಭಾಷಿಕ ಸ್ವರೂಪಗಳನ್ನು ಗಮನಿಸಿದಾಗ ಸಾಹಿತ್ಯ ಪ್ರಕಾರಗಳ ನೆಲೆಯಲ್ಲಿ ಜಾನಪದ ವಿದ್ವಾಂಸರು ಹುಟ್ಟುಹಾಕಿರುವ ವರ್ಗೀಕರಣಗಳು ಕಂಡುಬರುವುದಿಲ್ಲ. ನಿರ್ದಿಷ್ಟ, ನಿಖರ, ಖಚಿತ ವರ್ಗೀಕರಣಗಳನ್ನು ಇಟ್ಟುಕೊಳ್ಳದೆಯೇ ಜನಪದದಲ್ಲಿ ಜನಪದ ಬದುಕಿನ ಭಾಷಿಕ ಮುಂತಾದ ಹಲವಾರು ಕ್ರಿಯಾಚರಣೆಗಳು ಅವು ಒಂದರೊಳಗೊಂದು ಬೆಸೆದುಕೊಂಡು, ಮೈಗೂಡಿಕೊಂಡು ಭಾಷೆಯಲ್ಲಿ ನಿರ್ವಹಣೆಗೊಳ್ಳುತ್ತಿರುತ್ತದೆ. ಕ್ರಿಯಾಪದ, ನಾಮಪದಗಳೆಂದು ವ್ಯಾಕರಣಕಾರರು ವರ್ಗೀಕರಿಸಿಕೊಳ್ಳುವ ವ್ಯಾಕರಣಶಾಸ್ತ್ರದ ವರ್ಗೀಕರಣದ ಸೂತ್ರಗಳನ್ನು ಮೀರಿಕೊಂಡೇ ಜನಪದದ ಭಾಷೆಯಲ್ಲಿ ನಾಮಪದವೇ ಕ್ರಿಯಾಪದವಾಗಿ, ಕ್ರಿಯಾಪದವೇ ನಾಮಪದವಾಗಿ ಒಂದರೊಳಗೊಂಡು ಬೆಸೆದುಕೊಂಡು ನಿರ್ದಿಷ್ಟ, ನಿಖರ, ಖಚಿತ ವರ್ಗೀಕರಣಗಳಿಲ್ಲದೆಯೇ, ಭಾಷೆಯಲ್ಲಿ ನಿರ್ವಹಣೆಗೊಳ್ಳುತ್ತಿರುವುದನ್ನು ನಾವು ಕಾಣಬಹುದು.

ಒಗಟುಗಳ ಲಕ್ಷಣ ಸ್ವರೂಪ

ಒಗಟುಗಳ ಉಗಮ ವಿಕಾಸ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ದೇವುಡು ನರಸಿಂಹ ಶಾಸ್ತ್ರಿಯವರು 'ಕರ್ನಾಟಕ ಸಂಸ್ಕೃತಿ', ಹಾಮಾ ನಾಯಕ

'ಸುವರ್ಣಸಂಚಯ', ಸಿಂ.ಪಿ. ಲಿಂಗಣ್ಣ 'ಜನಾಂಗದ ಜೀವಾಳ', ಜೀ ಶಂ ಪ 'ನಮ್ಮ ಜನಪದ ಸಾಹಿತ್ಯ', 'ಕನ್ನಡ ಒಗಟುಗಳು', ಸಿ.ಪಿ.ಕೆ. 'ಜಾನಪದ ಪ್ರತಿಭೆ'ಯಲ್ಲೂ (೧೯೬೭), ರಾಗೌ 'ನಮ್ಮ ಒಗಟುಗಳು', ಸುಧಾಕರ 'ಹೊನ್ನ ಬಿತ್ತೇವು ಹೊಲಕೆಲ್ಲ', 'ಜನಪದ ಬೆಡಗಿನ ವಚನಗಳು' (೧೯೭೦), ಎಮ್ ಎಸ್ ಲಠ್ಠೆಯವರು 'ಉತ್ತರ ಕರ್ನಾಟಕದ ಒಗಟುಗಳು' (೧೯೭೪), ಸೋಮಶೇಖರ ಇಮ್ರಾಪುರ 'ಸಾವಿರದ ಒಗಟುಗಳು' (೧೯೭೬), ಪಂಡಿತಾರಾಧ್ಯ 'ಪ್ರಥಮ' (೧೯೭೬) ನಂ ತಪಸ್ವಿಕುಮಾರ್ 'ಕನ್ನಡ ಒಗಟುಗಳ ಸಮೀಕ್ಷೆ' (೧೯೭೯), ರಾಗೌ 'ನಮ್ಮ ಒಗಟುಗಳು', ಅಂಬಳಿಕೆ ಹಿರಿಯಣ್ಣ 'ಜಾನಪದ : ಕೆಲವು ವಿಚಾರಗಳು' (೧೯೮೪), 'ಜಾನಪದ ರಾಚನಿಕ ಅಧ್ಯಯನ'(೨೦೦೪) ಕೃತಿಗಳಲ್ಲೂ ಹಾಗೂ ಇನ್ನಿತರ ಕೃತಿಗಳಲ್ಲೂ ಸಾಕಷ್ಟು ವಿವರವಾಗಿ ನಿರೂಪಿಸಲಾಗಿದೆ. ಈ ಎಲ್ಲ ವಿವರಣೆಗಳನ್ನು ಇಲ್ಲಿ ಕ್ರೋಢಿಕರಿಸಿಕೊಳ್ಳಲಾಗಿದೆ.

ಒಗಟುಗಳ ಲಕ್ಷಣವನ್ನು ವಿವರಿಸಿಕೊಳ್ಳುತ್ತಾ, ಸಾಮಾನ್ಯವಾಗಿ ಒಗಟುಗಳು ಪದ್ಯರೂಪದಲ್ಲಿರುತ್ತವೆ ಇಲ್ಲವೆ, ಸಾಮಾನ್ಯವಾದ ಹೇಳಿಕೆಗಳಾಗಿರುತ್ತವೆ ಎನ್ನಲಾಗಿದೆ. ಪದ್ಯರೂಪದ ಒಗಟು ಪ್ರಾಸಾನುಪ್ರಾಸಗಳಿಂದ ನಿಯೋಜಿತವಾಗಿದ್ದು, ಛಂದೋಬದ್ಧ ಅಭಿವ್ಯಕ್ತಿಯಾಗಿರುತ್ತದೆ. ಒಗಟಿನ ಸೌಂದರ್ಯಕ್ಕೆ ಕಾರಣಭೂತವಾದದ್ದು ಅದರಲ್ಲಿನ ಲಯಬದ್ಧತೆ. ಈ ಕಾವ್ಯರೂಪ ಅದರ ಗಾಢ ಪರಿಣಾಮಕ್ಕೂ ಬುದ್ಧಿ ಪ್ರಚೋದನೆಗೂ ಬಹುಮಟ್ಟಿಗೆ ನೆರವಾಗಿದೆ. ಒಗಟು ಸಂಕ್ಷಿಪ್ತರೂಪದ್ದು. ಅಷ್ಟೇ ಅಡಕವಾದದ್ದು. ಅದರ ರಚನೆ ತುಂಬ ಒಪ್ಪ, ಹಾಗೆಯೇ ಆಕರ್ಷಕ. ಅದರಲ್ಲೂ ಜನಪ್ರಿಯ ಒಗಟುಗಳು ತುಂಬ ಚಿಕ್ಕವು. ಬಹುತೇಕ ಕಾವ್ಯಾತ್ಮಕವಾದುವು. ತರ್ಕಬದ್ಧ ಹಾಗೂ ಸೂತ್ರಪ್ರಾಯವಾದ ರೀತಿ ಅದರದು ಎಂಬುದಾಗಿ ಒಗಟಿನ ಸ್ವರೂಪವನ್ನು ಗುರುತಿಸಿಕೊಳ್ಳಲಾಗಿದೆ.

ಕರೀ ಹುಡುಗಿ ಕಾಲುಂಗುರ ಇಟ್ಟಾಳ
ಸರ್ರನೆ ಹೋಗಿ ಭರ್ರನೇ ಬರ್ತಾಳ (ವಾಲಿ ೩– ೬೯)

ಒನಕೆ

ಒಗಟು ಅಡಕವಾದ ಅರ್ಥಪೂರ್ಣವಾದ ಮಾತು, ದ್ವಂದ್ವಾರ್ಥದ ಪ್ರಚ್ಛನ್ನ ಹೇಳಿಕೆ. ಅನುಮಾನದ ಮೂಲಕ ಅರ್ಥಾನ್ವೇಷಣೆಗೆ ಹೊರಡಲು ಪ್ರೇರೇಪಿಸುವ ಸಂದಿಗ್ಧ ಪ್ರಾಸಬದ್ಧ ರಚನೆ. ಕೂಡಲೆ ಕಾರಣ ಕೊಡಲಾಗದ ಸಮಸ್ಯೆ. ಇವು ಮನುಷ್ಯನ ಕಲ್ಪನಾ ಚಾತುರ್ಯಕ್ಕೆ ಸಾಕಷ್ಟು ವ್ಯಾಯಾಮವನ್ನು

ಒದಗಿಸುವ ಕೌಶಲಪೂರ್ಣ ಪದ್ಯಘಟಕಗಳು. ಇವು ಬುದ್ಧಿಗಮ್ಯವೇ ಹೊರತು ಭಾವಗಮ್ಯವಲ್ಲ. ಅರ್ಥಗೋಪನ ಕ್ರಿಯೆಯಲ್ಲಿ ಕೇಳುಗನ ಊಹನೆ ಮತ್ತು ಬುದ್ಧಿಮತ್ತಿಕೆಗಳನ್ನು ಪ್ರಚೋದಿಸುವ ಸಲುವಾಗಿ ಇವು ಅನಿವಾರ್ಯ ಶಾಬ್ದಿಕ ಸಂಕೇತವನ್ನು ತಾಳಿರುತ್ತದೆ. ಒಗಟು ಅನುಕ್ತವಸ್ತುವೊಂದರ ಅರ್ಥವಿಶದತೆಯ ಪ್ರತಿಪಾದನೆಯಾಗಿದ್ದು, ಅಭಿವ್ಯಕ್ತಿಯಲ್ಲಿನ ಅಸ್ಪಷ್ಟತೆಯನ್ನು ಅಧ್ಯಯನ ಮಾಡುವುದರ ಮೂಲಕ ಗೋಪನಗೊಂಡ ಅರ್ಥವನ್ನು ಅನ್ವೇಷಿಸಲು ಓದುಗ ಅಥವಾ ಕೇಳುಗನನ್ನು ಕೆರಳಿಸುವುದೇ ಇದರ ಆಶಯವಾಗಿದೆ.

ಅತ್ತೂರು ಹೆಣ್ಣಿಗೆ ನಿತ್ತೀಲಿ ಬಸಿರು
ಕಿತ್ತೂರು ಹೆಣ್ಣಿಗೆ ಮ್ಯಾತೇಲಿ ಬಸಿರು
ಮುಂಡೆ ಬಸಿರು ಮೊಳಕೈಯಲ್ಲಿ (ಲಗೌ ೫)

ನವಣೆ, ಜೋಳ, ರಾಗಿ

ಅಭಿವ್ಯಕ್ತಿಯಲ್ಲಿನ ಅಸ್ಪಷ್ಟತೆಗೆ ಇದೊಂದು ಉದಾಹರಣೆ. ನೈಸರ್ಗಿಕವಾಗಿ ಹೆಣ್ಣು ಬಸಿರಾಗುವುದು ಹೊಟ್ಟೆಯಲ್ಲೇ ಆದರೂ, ಮೇಲಿನ ಒಗಟಿನಲ್ಲಿ ಹೆಣ್ಣು ನೆತ್ತಿ, ಮ್ಯಾತೆ (ಗಂಟಲು ಕೆಳಗಿನ ಭಾಗ) ಹಾಗೂ ಮೊಳಕೈಯಲ್ಲಿ ಅಸಹಜವಾಗಿ ಬಸಿರಾಗಿದ್ದಾಳೆ. ಲೋಕದ ಸತ್ಯದಲ್ಲಿ ನಿಜಕ್ಕೂ ಇದು ಅಸಂಭವ! ಹಾಗಾಗಿ ಇದು ಒಗಟಾಗಿದೆ. ವಿಸ್ಮಯಲೋಕ ಎನಿಸುವ ಹಾಗೆ, ನವಣೆ ಬಸಿರಾಗುವುದು ನೆತ್ತಿಯಲ್ಲಿ; ಜೋಳ ಗರ್ಭ ಧರಿಸುವುದು ಮ್ಯಾತೆಯಲ್ಲಿ; ರಾಗಿಗೆ ಹೊಟ್ಟೆ ಬಂದಿರುವುದು ಮೊಳಕೈಯಲ್ಲಿ. ಜನಪದದ ಉತ್ಪಾದಕ ಆಹಾರ ಬೆಳೆಗಳಾದ ನವಣೆ, ಜೋಳ, ರಾಗಿ ಒಗಟಿನ ಒಡಲಲ್ಲಿ ಉತ್ಪಾದಕ ಶಕ್ತಿಯಾಗಿರುವ ಹೆಣ್ಣಾಗಿ ರೂಪಾಂತರಗೊಂಡಿವೆ. ರಾಗಿಯ ಗರ್ಭವನ್ನು ಮುಂಡೆ ಬಸಿರು ಎಂದಿರುವುದರಲ್ಲೂ ಔಚಿತ್ಯವಿದೆ. ರಾಗಿಯ ಪೈರು ನೆತ್ತಿಯಲ್ಲಿ ಗರ್ಭಾವಸ್ಥೆಗೆ ಬರುವ ಮುಂಚೆ ಕೆಲವು ಸಲ ದನಗಳನ್ನು ಬಿಟ್ಟು ಮೇಯಿಸುತ್ತಾರೆ. ನೆತ್ತಿ (ಕೇಶ) ಬೋಳಾಗಿ ಮೇಲೇರುತ್ತಿದ್ದ ಜೀವರಸ ಅತ್ತ ಇತ್ತ ನುಗ್ಗಿ ಕವಲುಗಳೊಡೆದು, ಒಂದೊಂದು ಕವಲೂ ಗರ್ಭ ಧರಿಸುತ್ತದೆ. ಹೀಗೆ ಮಂಡೆ ಬೋಳಾಗಿ ಅಸಹಜವಾಗಿ ಗರ್ಭ ಧರಿಸುವವಳು ಮುಂಡೆಯಲ್ಲವೇ? (ಲಕ್ಕಪ್ಪಗೌಡ: ೧೯೭೩:xviii)

ಒಗಟುಗಳು ಬುದ್ಧಿಪ್ರಧಾನವಾದವುಗಳು. ಬದುಕಿನ ಗಂಭೀರ ಉತ್ಪನ್ನಗಳು. ಇವು ಸಾಮಾನ್ಯವಾಗಿ ಊಹನೆಯ ಮೇಲೆ ಉತ್ತರವನ್ನು ಹುಡುಕುವ, ಕೇಳಿದ

ಕೂಡಲೆ ದಿಗ್ಭ್ರಮೆ ಹಿಡಿಸುವ, ರಹಸ್ಯಾರ್ಥವುಳ್ಳ ಪ್ರಶ್ನಾರ್ಥಕ ಹೇಳಿಕೆಗಳೇ ಆಗಿವೆ. ಪ್ರತಿಯೊಂದು ಒಗಟಿನಲ್ಲೂ ಸಮಸ್ಯೆಯೊಂದಿದ್ದು, ಇದು ಸುಲಭವಾಗಿ ಬಿಡಿಸಲಾರದ ರೀತಿಯಲ್ಲಿ ನಿಯೋಜಿತವಾಗಿರುತ್ತವೆ. ನೈಜಾರ್ಥವನ್ನು ಮುಚ್ಚಿಟ್ಟು ಉದ್ದೇಶಪೂರ್ವಕವಾಗಿಯೇ ಓದುಗನ್ನು ಅಥವಾ ಕೇಳುಗನನ್ನು ಊಹಾ ಲೋಕದಲ್ಲಿ ಸಂಚಾರ ಮಾಡಿಸಿ ವಿಚಿತ್ರ ಕಲ್ಪನೆಗಳಲ್ಲಿ ತೊಡಗಿಸಿ ಅವನ ಬುದ್ಧಿಯನ್ನು, ಪ್ರತಿಭೆಯನ್ನು, ಲೋಕಾನುಭವವನ್ನು ಒರೆಗಿಕ್ಕುವ ಒಗಟು ಜನಪದ ಮತಿಯ ಅದ್ಭುತ ಸೃಷ್ಟಿ ಎನ್ನಲಾಗಿದೆ. (ಲಕ್ಕಪ್ಪಗೌಡ:೧೯೭೩:xiv)

ಒಗಟುಗಳು ಪೂರ್ವನಿಗದಿತವಾಗಿದ್ದು, ಉತ್ತರವನ್ನು ಒಳಗೊಂಡು ಸಾಂಕೇತಿಕತೆಯನ್ನು ಹೊಂದಿದಂತಹವುಗಳಾಗಿರುತ್ತವೆ. (ಎಫ್‌ಎಫ್‌ಸಿ:೨೦೦೫: ನಂ.೨೯:) ಜೀವನ್ಮರಣದ ಪ್ರಶ್ನೆ, ಎಂಬಂತೆ ಒಗಟುಗಳು ಉತ್ತರ ಗೊತ್ತಿಲ್ಲದವರನ್ನು ಪೇಚಿಗೆ ಸಿಲುಕಿಸುವ ಒಂದು ಮಾಧ್ಯಮ. ರೂಪಕಾತ್ಮಕತೆ ಮತ್ತು ದ್ವಂದ್ವಾರ್ಥತೆಯಿಂದಾಗಿ ಒಗಟುಗಳು ನಮ್ಮನ್ನು ಮಂತ್ರಮುಗ್ಧ ಲೋಕಕ್ಕೆ ಕೊಂಡೊಯ್ಯುವ ಜೊತೆಗೆ, ನಮ್ಮನ್ನು ಗೊಂದಲಗೊಳಿಸುತ್ತವೆ ಕೂಡಾ. ಅಂತೆಯೇ, ಅವು ವಿನೋದವನ್ನುಂಟು ಮಾಡುವ ಮೂಲಕ ನಮ್ಮನ್ನು ಕಾಲಕಳೆಯುವ ಹಾಗೂ ಮಾಡುತ್ತವೆ. (ಮೂಲ ದುರ್ಗಾಭಾಗವತ್; ಕನ್ನಡಕ್ಕೆ ವಿವೇಕ ರೈ:೧೯೮೮:೨೫)

ಒಗಟು ಪ್ರಯತ್ನಪೂರ್ವಕವಾದ ಸೃಷ್ಟಿ, ಪ್ರಜ್ಞಾಪೂರ್ವಕವಾದ ಸಾಹಿತ್ಯಕ್ರಿಯೆ. ಇದರಲ್ಲಿ ಒಡ್ಡಿದ್ದು ಒಂದಿದ್ದರೆ, ಒಡೆಸುವುದು ಮತ್ತೊಂದು ಇರುತ್ತದೆ. ಗುಪ್ತವಾಗಿರುವ ಮೊದಲನೆಯದನ್ನು ಎರಡನೆಯದು ವ್ಯಕ್ತಗೊಳಿಸಬೇಕಾಗುತ್ತದೆ. ಹೀಗಾಗಿ, ಒಗಟಿನ ಪ್ರಧಾನವಾದ ಲಕ್ಷಣವೊಂದೆಂದರೆ ಅರ್ಥಗೋಪನ. ವಾಸ್ತವ ಅರ್ಥವನ್ನು ಮುಚ್ಚಿಡುವ ವ್ಯಾಖ್ಯೆಯೇ ಒಗಟು. ಇದರಲ್ಲಿ ಮೊದಲು ಗಮನಕ್ಕೆ ಬರುವುದು ಪ್ರಶ್ನೆ; ಎರಡನೆಯದಾಗಿ ನಿಲ್ಲುವುದು ಉತ್ತರ. ಪ್ರಶ್ನೆಯಲ್ಲಿ ಸಂಗತಿ ರೂಪಕದ ರೂಪದಲ್ಲಿ ಗೋಪ್ಯವಾಗಿದ್ದು, ಹೀಗೆ ಗೋಪನಗೊಂಡ ಅರ್ಥ ಉತ್ತರದಲ್ಲಿ ಪ್ರಕಾಶನಗೊಂಡಾಗ ನಿಯೋಜಿತ ನಿಜ ಉದ್ದೇಶಪೂರ್ಣವಾಗಿ ವ್ಯಕ್ತಗೊಳ್ಳುತ್ತದೆ. ಯಾವುದೇ ರೀತಿಯ ಒಗಟಿನಲ್ಲಿ ಈ ಗೋಪನ ಅಂಶ ಪ್ರಧಾನವಾದುದು (ದುರ್ಗಾಭಾಗವತ: ಉದ್ಧೃತ, ರಾಗೌ:೧೯೭೦:೯)

ಒಗಟಿನ ಒಡಲಲ್ಲಿ ತರ್ಕನೇ ಪ್ರಧಾನವಾಗಿರುತ್ತದೆ. ತರ್ಕದ ಗುಣನೇ ಒಗಟಿನ ಉತ್ತರವನ್ನು ಕಂಡುಕೊಳ್ಳುವ ಸೂಚನೆಗಳನ್ನು ಒದಗಿಸುತ್ತದೆ. ತರ್ಕ

ಪ್ರಧಾನವಾದುದರಿಂದಲೇ ಒಗಟಿನ ಉತ್ತರ ಸ್ವೇಚ್ಛೆಯಾಗಿರುವುದಿಲ್ಲ. ತರ್ಕ ಪ್ರಧಾನವಾಗಿದ್ದರೂ ಒಗಟು ಯಾಕೆ ಒಗಟು ಆಗುತ್ತದೆ ಎಂದರೆ ಒಗಟಿನ ಒಡಲಲ್ಲಿ ದ್ವಂದ್ವಾರ್ಥಗಳು ಅಥವಾ ವೈರುಧ್ಯಗಳು ಇರುವುದರಿಂದ.

ಬಂಗಾರ ಗುಬ್ಬಿ
ಬಾಲ್ಲೆ ನೀರ ಕುಡಿತದ (ಲಠ್ಠೆ ಭಾಗ ೨–೫೪)
ದೀಪ

ಮೇಲಿನ ಒಗಟಿನ ಗುಬ್ಬಿ ಅದರಲ್ಲೂ ಬಂಗಾರದ ಗುಬ್ಬಿ ತನ್ನ ಬಾಲದಲ್ಲಿ ನೀರು ಕುಡಿಯುತ್ತಿದೆ. ಹೀಗಾಗಿ, ಒಗಟಿನ ಒಡಲಲ್ಲಿ ಕಂಡುಬರುವ ಒಗಟಿನ ಸತ್ಯ ಅದು ನಿತ್ಯದ ಬದುಕಿನಲ್ಲಿ ಕಂಡುಬಂದ ಸತ್ಯವಲ್ಲ! ಅವಾಸ್ತವಿಕ ಸತ್ಯ. ಹಾಗಾಗಿಯೇ ಒಗಟಾಯಿತು. ವಾಸ್ತವಿಕವಾಗಿ, ಬಂಗಾರದ ಗುಬ್ಬಿ ಇರುವಂತಹದು ಅಲ್ಲ. ಅಂತೆಯೇ, ಗುಬ್ಬಿ ಬಾಲದಲ್ಲಿ ನೀರು ಕುಡಿಯುವುದೂ ಇಲ್ಲ. ಈ ವಿವರಣೆಯ ಪ್ರಕಾರ, ಇಲ್ಲಿ ತರ್ಕಬದ್ಧತೆ ಇಲ್ಲ ಎಂದೆನಿಸಿದರೂ, ಒಗಟಿನ ಪ್ರತಿಮೆ ಮತ್ತು ಉತ್ತರದ ನಡುವೆ ತರ್ಕಬದ್ಧತೆ ಇದೆ. ಒಗಟಿನ ಉತ್ತರದಲ್ಲಿರುವ ದೀಪ, ಉರಿಯುವಾಗ ಅದು ಬಂಗಾರದ ಬಣ್ಣದಲ್ಲಿ ಗೋಚರವಾಗುವುದು ಹಾಗೂ ಉರಿಯುತ್ತಾ ಇರುವಾಗ ಅದು ಬಂಗಾರದ ಗುಬ್ಬಿಯಂತೆ ಭಾಸವಾಗುವುದು, ಬಾಲದಂತೆ, ದೀಪದಬತ್ತಿ ಎಣ್ಣೆಯಲ್ಲಿ ಅದ್ದಿಕೊಂಡು ಎಣ್ಣೆಯನ್ನು ಹೀರುತ್ತಿರುವುದು ಇವು ಒಗಟು ಪ್ರತಿಮೆ ಮತ್ತು ಉತ್ತರದ ನಡುವಿನ ಸಾದೃಶ್ಯ ಗ್ರಹಿಕೆಯ ತರ್ಕ. ಒಗಟಿನ ಒಡಲಲ್ಲಿರುವ ಈ ತರ್ಕ, ಒಗಟಿನ ರೂಪಕಾತ್ಮಕತೆಯನ್ನು ನಿರ್ಮಾಣಮಾಡುತ್ತದೆ. ಅಂದರೆ, ಒಗಟು ಪ್ರತಿಮೆ ಹಾಗೂ ಉತ್ತರದ ನಡುವಿನ ಸಾದೃಶ್ಯದ ತರ್ಕ ಒಗಟನ್ನು ಬಿಡಿಸಿ ಉತ್ತರವನ್ನು ಕಂಡುಕೊಳ್ಳುವ ಸೂಚನೆಯನ್ನು ಒದಗಿಸುತ್ತದೆ. ಹೀಗಾಗಿ, ಒಗಟಲ್ಲಿ ಸೂಚಕ ಮತ್ತು ಸೂಚಿತ ಅಥವಾ ಪ್ರತಿಮೆ ಮತ್ತು ಉತ್ತರವನ್ನೊಳಗೊಂಡ ಸಾವಯವ ಸಂರಚನೆಯಲ್ಲಿ ಸಾದೃಶ್ಯ ಗ್ರಹಿಕೆಯ ತರ್ಕವನ್ನು ಕಾಣಬಹುದು. ಮನುಷ್ಯ ತನ್ನ ಭಾವಪ್ರಪಂಚದಲ್ಲಿ ಅನುಭವಕ್ಕೆ ದಕ್ಕದಿರುವುದನ್ನು ತನ್ನ ಅನುಭವಕ್ಕೆ ತಂದುಕೊಳ್ಳುವುದು ಈ ವಸ್ತುಪ್ರಪಂಚದದ ಸಾದೃಶ್ಯ ಗ್ರಹಿಕೆಯ ಮೂಲಕನೇ!

ಒಗಟಿನಲ್ಲಿ ಎರಡು ಸದೃಶ ವಸ್ತುಗಳಿರುತ್ತವೆ. ಉಪಮಾನ ಮತ್ತು ಉಪಮೇಯ. ಮೊದಲನೆಯದು ವಾಚ್ಯವಾಗಿದ್ದರೆ ಎರಡನೆಯದು

ಸೂಚ್ಯವಾಗಿರುತ್ತದೆ. ಎಷ್ಟೋ ಸಮಯದಲ್ಲಿ ಒಂದಕ್ಕೊಂದಕ್ಕೆ ಸಾಮರಸ್ಯ ಕಂಡುಬರುವುದಿಲ್ಲ. ವಾಚ್ಯವಾದ ಉಪಮಾನಗಳ ಮೂಲಕ ಸೂಚ್ಯವಾದ ಉಪಮೇಯ–ಉತ್ತರವನ್ನು–ಕಂಡುಹಿಡಿಯಬೇಕಾಗುತ್ತದೆ. ಒಗಟಿಗೆ ಕೊಡುವ ಹೋಲಿಕೆಗಳು ಸಾಮಾನ್ಯವಾಗಿ ಬಾಹ್ಯಪ್ರಪಂಚದ ವಸ್ತುಚಿತ್ರಗಳೇ ಆಗಿರುತ್ತವೆ. (ಸಿ.ಪಿ.ಕೆ. ಉದ್ಧೃತ, ರಾಗೌ:೧೯೭೦:೧೩) ಪರಸ್ಪರ ವಿರೋಧ ಹಾಗೂ ಅಸಂಬದ್ಧತೆಗಳು ಕೂಡಾ ಒಗಟಿನ ಗಮನಾರ್ಹ ಲಕ್ಷಣಗಳಾಗುತ್ತವೆ. ರೂಪಕದಿಂದ ಒಗಟು ತನ್ನ ಕಲಾತ್ಮಕತೆಯನ್ನೂ ಗೂಢಾರ್ಥತೆಯನ್ನೂ ಕಾಯ್ದುಕೊಂಡಿದೆ. ವಾಸ್ತವವನ್ನು ಅಗೋಚರಗೊಳಿಸಿದ ಈ ರೀತಿಯ ರೂಪಕಾಭಿವ್ಯಕ್ತಿ ಹಾಗೂ ಸಾಂಕೇತಿಕತೆ ಮನುಷ್ಯನ ಬೌದ್ಧಿಕ ಸಾಮರ್ಥ್ಯಕ್ಕೆ ಒರೆಗಲ್ಲಾಗಿದೆ, ಸವಾಲಾಗಿದೆ.

ಒಗಟಿನಲ್ಲಿ ಎರಡು ವಸ್ತುಗಳಿರುತ್ತವೆ. ಒಂದು, ಹೋಲಿಕೆಯ ವಸ್ತು; ಮತ್ತೊಂದು, ಹೋಲಿಸಿಕೊಳ್ಳುವ ವಸ್ತು. ಒಂದು ವ್ಯಕ್ತ, ಮತ್ತೊಂದು ಅವ್ಯಕ್ತ. ಎರಡಕ್ಕೂ ಕೆಲವು ಸಮಾನ ಗುಣಗಳಿರುತ್ತವೆ. ಹಾಗೆಯೇ, ಸಮಾನವಲ್ಲದ ಲಕ್ಷಣಗಳೂ ಇರುತ್ತವೆ. ಸಮಾನ ಗುಣಗಳು ಪೊಸಿಟಿವ್‌ನಲ್ಲಿದ್ದು, ಸಮಾನವಲ್ಲದ ಗುಣಗಳು ನೆಗೆಟಿವ್‌ನಲ್ಲಿರುತ್ತವೆ. ಹೋಲಿಕೆಯ ವಸ್ತುವಿನ ಚಿತ್ರದ ಮೂಲಕ ಹೋಲಿಸಿಕೊಳ್ಳುವ ವಸ್ತುವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಅನ್ವೇಷಿಸಬೇಕಾಗುತ್ತದೆ.

ಮೊಗ್ಗಾಗಿ ಅರಳುವುದು ಪುಷ್ಪ ತಾನಲ್ಲ
ಸೂರ್ಯ ಕಿರಣಕ್ಕೂ ಅದು ಬಾಡುವುದಿಲ್ಲ.

ಈ ಒಗಟಿನ ಉತ್ತರ ಕೊಡೆ. ಮಡಿಚಿಟ್ಟು ಮೊಗ್ಗಾಗಿದ್ದ ಕೊಡೆ ಬಿಡಿಸಿದಾಗ ಹೂವಾಗಿ ಅರಳುತ್ತದೆ. ಮೊಗ್ಗಾಗಿದ್ದು, ಹೂವಾಗಿ ಅರಳುವ ಈ ಗುಣ ಹೂವಿಗೂ ಕೊಡೆಗೂ ಇರುವ ಸಮಾನ ಗುಣ. ಅಂದರೆ, ಹೋಲಿ ಮತ್ತು ಹೋಲಿಸಿಕೊಳ್ಳುವ ಉಪಮಾನ ಮತ್ತು ಉಪಮೇಯ ಈ ಎರಡು ವಸ್ತುಗಳ ನಡುವೆ ಸಮಾನ ಗುಣವಿದೆ. ಆದರೆ ಇಲ್ಲಿ ಇದು ಒಗಟಾಗಿರುವುದು ಯಾಕೆಂದರೆ, ಅದು ಪುಷ್ಪ ತಾನಲ್ಲ ಅನ್ನುವ ಕಾರಣಕ್ಕಾಗಿ. ಯಾಕೆಂದರೆ, ಅದು ಪುಷ್ಪ ಆಗಿರುತ್ತಿದ್ದರೆ ಅದು ಸೂರ್ಯಕಿರಣಕ್ಕೆ ಬಾಡಬೇಕಾಗಿತ್ತು. ಆದರೆ ಒಗಟಿನ ಪ್ರಕಾರ ಅದು ಸೂರ್ಯಕಿರಣಕ್ಕೂ ಬಾಡುವುದಿಲ್ಲ. ಹಾಗಾಗಿಯೇ ಒಗಟಾಯಿತು. ಹಾಗಾದರೆ, ಮೊಗ್ಗಾಗಿದ್ದು ಹೂವಾಗಿ ಅರಳಿ ಸೂರ್ಯಕಿರಣಕ್ಕೆ ಬಾಡದ ಆ ಹೂವು

ಯಾವುದು ಇರಬಹುದು. ಹೀಗೆ ಕೊಟ್ಟಿರುವ ವಸ್ತುವಿನ ಮೂಲಕ ಕೊಡದಿರುವ ವಸ್ತುವಿನ ಚಿತ್ರವನ್ನು ಊಹನೆಯ ಆಧಾರದ ಮೇಲೆ ಕಂಡುಕೊಂಡು ಒಗಟನ್ನು ತರ್ಕಬದ್ಧವಾಗಿಯೇ ಬಿಡಿಸಬೇಕಾಗುತ್ತದೆ; ಒಗಟಿಗೆ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ.

ಒಗಟು ಪ್ರಾಥಮಿಕವಾಗಿ ಒಂದು ಪ್ರಶ್ನೆಯನ್ನೂ, ಎರಡನೆಯದಾಗಿ ಒಂದು ಉತ್ತರವನ್ನೂ ಒಳಗೊಂಡಿರುತ್ತದೆ. ಪ್ರಶ್ನೆಯಲ್ಲಿ ಒಂದು ಸಂಗತಿಯು ರೂಪಕದ ರೂಪದಲ್ಲಿ ಅಡಕವಾಗಿರುತ್ತದೆ. ಉತ್ತರದಲ್ಲಿ ಗೂಡಾರ್ಥವು ಬಯಲಾಗುವ ಮೂಲಕ ಧ್ವನಿತವಾದ ವಿಚಾರದ ನಿಜವಾದ ಅರ್ಥವು ಸಂಪೂರ್ಣವಾಗಿ ವ್ಯಕ್ತವಾಗುತ್ತದೆ. ರೂಪಕದ ಗುಣವೇ ತಳಹದಿಯಾಗಿರುವ ಒಗಟಿನಲ್ಲಿ ಗೌಪ್ಯ ಅದರ ಪ್ರಮುಖ ಕಾರ್ಯವಾಗಿರುತ್ತದೆ. ರೂಪಕವೇ ಒಗಟಿನ ಸಂವೇದನೆಯ ತಳಹದಿ. ರೂಪಕ ಮತ್ತು ಸಾಂಕೇತಿಕತೆ ಒಗಟಿನ ದೊಡ್ಡ ಲಕ್ಷಣ. ರೂಪಕಗಳು ಪ್ರಧಾನವಾಗಿ ಹೋಲಿಕೆ, ಸಾಹಚರ್ಯಗಳ ಮಾನಸಿಕ ಪ್ರಕ್ರಿಯೆ ಮತ್ತು ಸಾದೃಶ್ಯಗಳ ಗ್ರಹಿಕೆ (ಅಂಬಳಿಕೆ:೨೦೦೪:).

ಬಣ್ಣಾ ಉಟ್ಕಂಡಿ ಮಣ್ಣಲ್ ಆಡ್ತದೆ (ಶಾಂ ನಾ – ಅನುಬಂಧ ೩೦)

ಮಣ್ಣಿಲಿ ಚಿನ್ನದ್ಬೇರು (ಶಾಂ ನಾ ೧೪೧)

ಅರಶ್ಣ

ಸಾಮಾನ್ಯವಾಗಿ ಒಗಟಿನಲ್ಲಿ ಒಂದು ವಸ್ತು (theme), ಆ ವಸ್ತುವಿನ ರೂಪ ಅಥವಾ ಕಾರ್ಯದ ಕುರಿತ ವಿವರಣೆ (comment) ಹಾಗೂ ಇಂತಹ ವಸ್ತು ವಿವರಣೆಗಳಿಗೆ ಒಟ್ಟಾಗಿ ಒಂದು ವರ್ಣನಾಂಶ (descriptive element) ಇರುತ್ತದೆ. ಇಂತಹ ವರ್ಣನಾಂಶಗಳನ್ನು ಬೇರೆ ಬೇರೆ ರೀತಿಯಾಗಿ ಜೋಡಿಸುವುದರ ಮೂಲಕ ಬೇರೆ ಬೇರೆ ಒಗಟುಗಳು ರಚನೆಯಾಗಬಹುದಾಗಿದೆ. (ಪಂಡಿತಾರಾಧ್ಯ:೧೯೭೬:೧೮).

ಒಗಟುಗಳು ಭಿನ್ನ ಭಿನ್ನ ಸ್ವರೂಪಗಳಲ್ಲಿ ಗೋಚರಿಸುತ್ತವೆ. ನೇರವಾದ ಅರ್ಥವನ್ನೊಳಗೊಂಡ ವಾಚ್ಯಾರ್ಥದ ಒಗಟುಗಳು ಒಂದು ಬಗೆಯವಾದರೆ, ಆಲಂಕಾರಿಕ ಅರ್ಥದ ಒಗಟುಗಳು ಇನ್ನೊಂದು ಬಗೆಯವು. ಈ ಬಗೆಯ ಒಗಟುಗಳಲ್ಲಿ ತೋರಿಕೆ ಅರ್ಥ ಒಂದು ಆಗಿದ್ದು, ನಿಜವಾದ ಅರ್ಥ ಬೇರೆಯೇ ಆಗಿರುತ್ತದೆ.

ತೋರಿಕೆ ಅರ್ಥ ಒಂದು, ನಿಜವಾದ ಅರ್ಥ ಇನ್ನೊಂದು ಇರೋ ಒಗಟಿನಲ್ಲಿ ಎರಡು ವರ್ಣನಾಂಶಗಳಿರುತ್ತವೆ. ಉದಾಹರಣೆಗೆ: "ಚಿಕ್ಕ ಮನೆಗೆ ಚಿನ್ನದ ಬೀಗ". ಈ ಒಗಟಿನಲ್ಲಿ ಚಿಕ್ಕ ಮನೆ ಮತ್ತು ಚಿನ್ನದ ಬೀಗ ಅನ್ನುವ ಎರಡು ವರ್ಣನಾಂಶಗಳಿದ್ದು, ಇವು ಜೋಡಣೆಗೊಂಡು ಒಗಟಾಗಿದೆ. ತೋರಿಕೆಯ ಅರ್ಥದಲ್ಲಿ ವರ್ಣಿಸಿರೋದು ಚಿನ್ನದ ಬೀಗ ಹಾಕಿರುವ ಚಿಕ್ಕ ಮನೆಯನ್ನು. ನಿಜವಾದ ಅರ್ಥದಲ್ಲಿ ಇರುವುದು ಮೂಗು ಮತ್ತು ಮೂಗುತಿ. ಹೀಗಿದ್ದರೂ, ತೋರಿಕೆಯ ಅರ್ಥಕ್ಕೂ ನಿಜವಾದ ಅರ್ಥಕ್ಕೂ ವ್ಯತ್ಯಾಸ ಇದೆ. ಆದರೂ ವಿರೋಧವೇನೂ ಇಲ್ಲ. ಆದರೆ ಅದು ಒಗಟಾಗಿದ್ದು ಒಗಟಿನ ವರ್ಣನಾಂಶದ ವೈರುಧ್ಯದಲ್ಲಿ. ಒಗಟಿನ ಸತ್ಯದಲ್ಲಿ ಕಾಣುವ ಮನೆ ದೊಡ್ಡ ಮನೆಯಲ್ಲ ಅದು, ಚಿಕ್ಕಮನೆ. ಚಿಕ್ಕ ಮನೆಗೆ ಹಾಕಿದ್ದೂ ಚಿನ್ನದ ಬೀಗ. ಹಾಗಾಗಿ, ಇದು ವಾಸ್ತವಿಕ ಸತ್ಯ ಅಲ್ಲ. ಯಾಕೆಂದರೆ, ಬುದ್ಧಿ ಇದ್ದವರು ಚಿಕ್ಕಮನೆಗೆ ಚಿನ್ನದ ಬೀಗ ಹಾಕಿಯಾರೇ? ಒಗಟಿನ ಸತ್ಯ ವಾಸ್ತವಿಕ ಸತ್ಯಕ್ಕೆ ವಿರೋಧವಾಯಿತು. ಹಾಗಾಗಿಯೇ ಇದು ಒಗಟಾಯಿತು.

ಕೆಲವು ಒಗಟುಗಳ ಸ್ವರೂಪದಲ್ಲಿ ಒಂದು ವಾಕ್ಯ ರಚನೆಯೇ ಅಭಿವ್ಯಕ್ತಿಯ ಕನಿಷ್ಟತಮ ಘಟಕ. ಇಂಥ ಘಟಕಗಳನ್ನು ಬೇರೆ ಬೇರೆ ರೀತಿ ಜೋಡಿಸುವುದರಿಂದ ಅನೇಕ ಬಗೆಯ ಒಗಟುಗಳನ್ನು ಉತ್ಪಾದಿಸಬಹುದು. ಅಥವಾ ಇಂತಹ ಘಟಕಗಳನ್ನು ವೈರುಧ್ಯ ವಿನ್ಯಾಸದಲ್ಲಿ ಜೋಡಿಸುವ ಮೂಲಕ ಸರಪಳಿ ರೂಪದ ಒಗಟುಗಳನ್ನೂ ರಚಿಸಬಹುದು. ಸರಪಳಿ ರಚನೆಯ ಒಗಟಲ್ಲಿ ಪ್ರತಿಯೊಂದು ಘಟಕವೂ ಪ್ರತ್ಯೇಕವಾದ ಒಗಟು. ಇವು ಪ್ರತ್ಯೇಕವಾದ ಒಗಟುಗಳಾಗಿದ್ದರೂ ಒಂದೇ ಬಗೆಯ ಅರ್ಥದ ಸಂಬಂಧ ಇವಕ್ಕೆ ಇರುತ್ತದೆ. ಈಗಾಗಲೇ ಗಮನಿಸಿರುವಂತೆ, ವೈರುಧ್ಯ ಇದರ ಲಕ್ಷಣ. ಆದರೂ ಇದು ಒಂದೇ ಉತ್ತರವನ್ನು ಬಯಸುವ ಸರಪಳಿ ರೂಪದ ಒಗಟು ಅಲ್ಲ. ಯಾಕೆಂದರೆ, ಒಗಟಿನಲ್ಲಿ ರೂಪ ಮತ್ತು ಕ್ರಿಯೆಯ ವರ್ಣನಾಂಶಗಳು ಪ್ರತ್ಯೇಕ ಪ್ರತ್ಯೇಕವಾದ ಉತ್ತರಗಳನ್ನು ನಿರೀಕ್ಷಿಸುತ್ತವೆ.

ನೋಡಿದವ ಹೋಗಲಿಲ್ಲ
ಹೋದವ ಹರೀಲಿಲ್ಲ
ಹರಿದವ ತಿನ್ನಲಿಲ್ಲ
ತಿಂದವ ಬಡಿಸಿಕೊಳ್ಳಲಿಲ್ಲ
ತಿನ್ನದವ ಫಜೀತಿಯಾದ (ವಾಲಿ ೪–೧೫)

ಕಣ್ಣು, ಕಾಲು, ಕೈ, ಬಾಯಿ, ಬೆನ್ನು

ಮೇಲಿನ ಒಗಟಲ್ಲಿ ಮೊದಲ ವರ್ಣನಾಂಶ ನೋಡಿದವ ಹೋಗಲಿಲ್ಲ ಅನ್ನುವಲ್ಲಿ ಕೊನೆಯ ಪದ ಹೋಗಲಿಲ್ಲ ಹಾಗೂ ಎರಡನೆಯ ವರ್ಣನಾಂಶದ ಮೊದಲನೆಯ ಪದ ಹೋದವ ಇವು ಪರಸ್ಪರ ವೈರುಧ್ಯದ ಅಂಶವನ್ನು ಒಳಗೊಂಡಿವೆ. ಹೀಗಿದ್ದೂ, ಅದು ಸರಪಳಿ ರೂಪದಲ್ಲಿದೆ. ಹಾಗೆಯೇ ಹೋದವ ಹರೀಲಿಲ್ಲ ಅನ್ನುವ ಎರಡನೆಯ ವರ್ಣನಾಂಶದ ಕೊನೆಯ ಪದ ಹಾಗೂ ಹರಿದವ ತಿನ್ನಲಿಲ್ಲ ಅನ್ನುವ ಮೂರನೆಯ ವರ್ಣನಾಂಶದ ಮೊದಲನೆಯ ಪದ ವೈರುಧ್ಯದಲ್ಲಿದ್ದು, ಅದೇ ರೂಪ ಮತ್ತು ಗುಣ ಇದೆ. ಉತ್ತರದಲ್ಲಿರುವ ವಸ್ತುವಿನ ರೂಪ ಮತ್ತು ಕಾರ್ಯದ ವರ್ಣನಾಂಶಗಳು ಪರಸ್ಪರ ವೈರುಧ್ಯದ ವಿನ್ಯಾಸದಲ್ಲಿ ಜೋಡಣೆಗೊಂಡು ಈ ವೈರುಧ್ಯವು ಸರಪಳಿಯಾಗಿ ಮುಂದುವರಿಯುವ ಮೂಲಕ ಸರಪಳಿ ರೂಪದ ಒಗಟು ನಿರ್ಮಾಣವಾಗುತ್ತದೆ.

ಇನ್ನು ಕೆಲವು ಒಗಟುಗಳ ವರ್ಣನಾಂಶಗಳು ಎದುರುಬದುರಾಗಿರುತ್ತವೆ. ವಿರೋಧವೇ ಇಲ್ಲಿಯ ಮುಖ್ಯ ಲಕ್ಷಣ. ಒಂದು ವರ್ಣನಾಂಶ ಒಂದು ವಸ್ತುವನ್ನು ವರ್ಣಿಸಿದರೆ ಇನ್ನೊಂದು ವರ್ಣನಾಂಶ ಅದಕ್ಕೆ ವಿರುದ್ಧವಾಗಿರುವ ವಿಷಯವನ್ನು ಹೇಳುತ್ತದೆ.

ಮರದ ಮೇಲೆ ಹಣ್ಣು
ಹಣ್ಣಿನ ಮೇಲೆ ಮರ (ಚಂ ಸೆ ೨೦೧)

ಅನಾನಸು

ಮೇಲಿನ ಒಗಟಿನಲ್ಲಿ ವರ್ಣನಾಂಶಗಳ ಪರಸ್ಪರ ವೈರುಧ್ಯ ಒಗಟಿನ ಪ್ರಧಾನ ಲಕ್ಷಣವಾಗಿರುತ್ತದೆ. ಒಂದು ವರ್ಣನಾಂಶ ಒಂದು ವಸ್ತುವನ್ನು ವರ್ಣಿಸಿದರೆ ಇನ್ನೊಂದು ವರ್ಣನಾಂಶ ಅದಕ್ಕೆ ವಿರುದ್ಧವಾಗಿರುವ ಇನ್ನೊಂದು ವಸ್ತುವನ್ನು ಒಳಗೊಂಡು ಇರುತ್ತದೆ. ಅಂದರೆ, ಮೊದಲನೆಯ ವರ್ಣನಾಂಶ ವಸ್ತುವಿನ ಸಹಜ ರೂಪ ಅಥವಾ ಗುಣವನ್ನು ವರ್ಣಿಸಿದರೆ ಎರಡನೆಯ ವರ್ಣನಾಂಶ ಮೊದಲನೆಯ ವರ್ಣನಾಂಶವನ್ನು ಅಲ್ಲಗಳೆಯುತ್ತದೆ. ಈ ಒಗಟಿನ ಸ್ವರೂಪದಲ್ಲಿರುವ ಪರಸ್ಪರ ವೈರುಧ್ಯದ ಗುಣವನ್ನು ಇನ್ನೊಂದು ರೀತಿಯಲ್ಲೂ ಗುರುತಿಸಿಕೊಳ್ಳಬಹುದು. ಒಂದು ವಸ್ತು ಒಂದು ಕೆಲಸವನ್ನ ಮಾಡಿದರೆ ಅದು ಇನ್ನೊಂದು ಕೆಲಸವನ್ನು ಮಾಡಲಾರದು ಅನ್ನೋದು ಇನ್ನೊಂದು ರೀತಿ.

ಇನ್ನು ಕೆಲವು ಸರಪಳಿ ರೂಪದ ಒಗಟಿನಲ್ಲಿ ವರ್ಣನಾಂಶಗಳಲ್ಲಿ ಪರಸ್ಪರ ವೈರುಧ್ಯದ ವಿನ್ಯಾಸವಿಲ್ಲದೆ ಪ್ರತಿ ವರ್ಣನಾಂಶಗಳ ಕೊನೆಯ ಪದಗಳು

ಪುನರಾವರ್ತನೆಯಾಗುವ ಮೂಲಕ ಸರಪಳಿ ರೂಪದ ಒಗಟುಗಳು ರಚನೆಗೊಳ್ಳುವುದನ್ನು ಕಾಣಬಹುದು. ಇಂತಹ ಸರಪಳಿ ರೂಪದ ಒಗಟುಗಳಲ್ಲಿ ಒಂದು ಘಟಕದ ಉತ್ತರದಿಂದ ಮತ್ತೊಂದು ಘಟಕವು ಆರಂಭವಾಗುತ್ತದೆ.

ಕಂಬ
ಕಂಬದ ಮೇಲೆ ಡಿಂಬ
ಡಿಂಬದ ಮೇಲೆ ಬಾಗೂರು
ಬಾಗೂರು ಮೇಲೆ ಮುಗೂರು
ಮೂಗೂರ ಮೇಲೆ ಕಣ್ಣೇಗಾರ
ಕಣ್ಣೇಗಾರದ ಮೇಲೆ ಕರಿಗುಡ್ಡ
ಕರೀಗುಡ್ಡದ ಮೇಲೆ ಕುರಿಹಿಂಡು ಮೇಯುತ್ತದೆ (ಇ ೪೩೭)

ಕಾಲು, ಮೈ, ಮೋರೆ, ಮೂಗು, ಕಣ್ಣು, ತಲೆ, ಹೇನು

ಪಳಿಮ್ಯಾಲ ಪಳಿ
ಪಳಿಮ್ಯಾಲ ಗಿಳಿ
ಗಿಳಿಮ್ಯಾಲ ದೀಪ
ದೀಪದ ಮ್ಯಾಲ ಗುಡ್ಡ
ಗುಡ್ಡದ ಮ್ಯಾಲ ಕಡ್ಡ
ಕಡ್ಡದಾಗದ ದಾರಿ
ದಾರಿಮ್ಯಾಲ ಎಮ್ಮಿ (ವಾಲಿ ೪–೧೯)

ತುಟಿಗಳು, ಮೂಗು, ಕಣ್ಣು, ತಲೆ, ಕೂದಲು, ಬೈತಲೆ, ಹೇನು

ಮೇಲಿನ ಸರಪಳಿ ರೂಪದ ಒಗಟುಗಳಲ್ಲಿ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಕಂಡರೆ, ಇನ್ನೂ ಕೆಲವು ಸರಪಳಿ ರೂಪದ ಒಗಟುಗಳಲ್ಲಿ ಒಂದೇ ಉತ್ತರ ಇರುತ್ತದೆ. ಆದರೆ, ಇಂತಹ ಸರಪಣಿ ರೂಪದ ಒಗಟುಗಳು ವರ್ಣನಾಂಶಗಳ ವೈರುಧ್ಯದಲ್ಲಿ ರೂಪುಗೊಳ್ಳದೆ ಮೇಲಿನ ಒಗಟಿನಂತೆ ಪದಗಳ ಪುನರಾವರ್ತನೆಯೊಂದಿಗೆ ರೂಪುಗೊಳ್ಳುತ್ತವೆ.

ಅಕ್ಕಕ್ಕ ಭಾವಿ ನೋಡು
ಭಾವಿ ಮ್ಯಾಲಿನ ಗಿಡ ನೋಡು
ಗಿಡದ ಮ್ಯಾಲಿನ ಕಾಯಿ ನೋಡು
ಕಾಯಿ ತಿಂದವರ ಬಾಯಿ ನೋಡು (ವಾಲಿ ೨–೭)

ನೇರಿಲ ಹಣ್ಣು

ಒಗಟಿನ ಒಡಲಲ್ಲಿರುವ ವರ್ಣನಾಂಶಗಳು ವಾಸ್ತವವನ್ನು ಸೂಚಿಸುತ್ತಲೇ ಅದನ್ನು ನಿರಾಕರಿಸುತ್ತಾ ವಾಸ್ತವವನ್ನು ಭ್ರಮಾತ್ಮಕಗೊಳಿಸುತ್ತವೆ. ಪರಸ್ಪರ ವೈರುಧ್ಯದ ಆಕೃತಿಯಲ್ಲಿ ವರ್ಣನಾಂಶಗಳ ಜೋಡಣೆ ಒಂದನ್ನು ಹೌದು ಅಂತ ಹೇಳುತ್ತಲೇ ನಾವು ಹೌದು ಅಂತ ಅಂದುಕೊಂಡಿದ್ದನ್ನು ಇನ್ನೊಂದು ವರ್ಣನಾಂಶ ಅದು ಅಲ್ಲ ಅಂತ ಹೇಳುತ್ತದೆ. ಒಗಟುಗಳ ರೂಪಕಾತ್ಮಕತೆ ಹಾಗೂ ದ್ವಂದ್ವಾರ್ಥತೆಯ ವಿನ್ಯಾಸ ಉತ್ತರವನ್ನು ಕಂಡುಕೊಳ್ಳುವಲ್ಲಿ ನಮ್ಮನ್ನು ಯೋಚಿಸುವಂತೆ ಮಾಡುತ್ತದೆ. ಈ ನೆಲೆಯಲ್ಲಿ ಒಗಟುಗಳನ್ನು ಬುದ್ಧಿಗಮ್ಯ ಎನ್ನಲಾಗಿದೆ. ಒಗಟಿಗೆ ಕೊಡುವ ಹೋಲಿಕೆಗಳು ಸಾಮಾನ್ಯವಾಗಿ ಬಾಹ್ಯಪ್ರಪಂಚದ ವಸ್ತುಚಿತ್ರಗಳೇ ಎಂದೆನಿಸಿದರೂ ಒಗಟಿನ ಒಡಲಲ್ಲಿರುವ ಪರಿಕರಗಳು ಪ್ರಕೃತಿ ಮತ್ತು ಸಂಸ್ಕೃತಿಗೆ ಸಂಬಂಧಿಸಿದ್ದು. ಈ ಎಲ್ಲ ಪರಿಕರಗಳು ವೈರುಧ್ಯದ ವಿನ್ಯಾಸದಲ್ಲಿ ಜೋಡಣೆಗೊಂಡಿರುವ ಕಾರಣ ಒಗಟು ಸಂಸ್ಕೃತಿಗೆ ವಿರುದ್ಧವಾಗಿ ಪ್ರಕೃತಿಯನ್ನು ಉತ್ತರ ಅಂತ ಹೇಳುತ್ತದೆ. ಅಥವಾ ಪ್ರಕೃತಿಗೆ ವಿರುದ್ಧವಾಗಿ ಸಂಸ್ಕೃತಿಯನ್ನು ಉತ್ತರ ಅಂತ ಹೇಳುತ್ತದೆ. ಒಗಟಿನ ನಿರ್ವಹಣೆಯಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ ಕುರಿತ ಮನುಷ್ಯನ ಗ್ರಹಿಕೆ ಮತ್ತು ತಿಳುವಳಿಕೆಯ ನಡುವೆ ಪಾರಸ್ಪರ್ಯ ಕ್ರಿಯೆ ನಡೆಯುತ್ತಿರುತ್ತದೆ. ಆದರೆ ಜನಪದದ ಗ್ರಹಿಕೆಯಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ ವಿರುದ್ಧ ಸ್ಥಿತಿಯಲ್ಲಿ ಇರುವಂತದು ಅಲ್ಲ. ಯಾಕೆಂದರೆ, ಜನಪದದ ಅರಿವು ರೂಪುಗೊಳ್ಳುವುದೇ ಪ್ರಕೃತಿ ಮತ್ತು ಸಂಸ್ಕೃತಿಯ ಮುಖಾಮುಖಿಯಲ್ಲಿ. ಜನಪದ ಪ್ರಕೃತಿಯ ಅರಿವನ್ನು ಸಂಸ್ಕೃತಿಯಾಗಿಸುತ್ತದೆ. ಅಂತೆಯೇ ಸಂಸ್ಕೃತಿಯ ಅರಿವನ್ನು ಪ್ರಕೃತಿಯಾಗಿಸುತ್ತದೆ. ಹೀಗಾಗಿ ಸಂಸ್ಕೃತಿ ಮತ್ತು ಪ್ರಕೃತಿಯ ಇರವಿನ ಜೊತೆಗೆ ಅದರ ಮುಂದುವರಿಕೆಗೆ ಪ್ರಕೃತಿ ಮತ್ತು ಸಂಸ್ಕೃತಿಯ ಮುಖಾಮುಖಿಯಲ್ಲಿ ಹೊಂದುವ ಜನಪದದ ಅರಿವು ಕೂಡಾ ಬಹಳ ಮಹತ್ವದ್ದೆನಿಸುತ್ತದೆ.

ಒಗಟುಗಳ ಸ್ವರೂಪವನ್ನು ಗಾದೆಗಳ ಸ್ವರೂಪದ ಜೊತೆಗೆ ವಿವೇಚಿಸುವಾಗ, ಎ.ಕೆ. ರಾಮಾನುಜನ್ ಅವರು ನೀತ್ಯಾತ್ಮಕ ಹೇಳಿಕೆಗಳಾಗಿ ಗಾದೆಗಳನ್ನು ವ್ಯಾಖ್ಯಾನಿಸಿದರೆ, ಒಗಟುಗಳನ್ನು ತಾರ್ಕಿಕ ಆಟಗಳು ಎಂದು ವ್ಯಾಖ್ಯಾನಿಸುತ್ತಾರೆ. ಪ್ರಕೃತಿ ಮತ್ತು ಸಂಸ್ಕೃತಿಯ ಅಂಶಗಳನ್ನು ಸಂಯೋಜಿಸಿಕೊಳ್ಳುತ್ತಾ ಗಾದೆಗಳು ನೀತ್ಯಾತ್ಮಕವಾದ ಬೋಧನೆಯನ್ನು ಮಾಡಿದರೆ, ಪ್ರಕೃತಿ ಮತ್ತು ಸಂಸ್ಕೃತಿಯ ಸಂಗತಿಗಳನ್ನು ತಾರ್ಕಿಕವಾಗಿ ಜೋಡಿಸಿಕೊಳ್ಳುತ್ತಾ ಒಗಟುಗಳು ಕಾವ್ಯಾತ್ಮಕವಾದ ತಾರ್ಕಿಕ ಆಟವನ್ನು ಆಡುತ್ತವೆ ಎನ್ನುತ್ತಾರೆ. (ರಾಮಾನುಜನ್ ಎಕೆ:೧೯೮೭)

ಗಾದೆ ಹಾಗೂ ಒಗಟುಗಳು ಜನಪದದ ಭಾಷಿಕ ಸಿದ್ಧಪಠ್ಯಗಳಾಗಿದ್ದರೂ, ಗಾದೆಗಳಿಗೆ ದ್ರವೀಕೃತ ಗುಣವಿದ್ದರೆ, ಒಗಟುಗಳಿಗೆ ಘನೀಕೃತ ಗುಣವಿದೆ. ಗಾದೆಗಳಲ್ಲಿ ಘನೀಕೃತಗೊಂಡಿರುವ ಅರ್ಥ ಪೂರ್ವನಿಗದಿತವಾಗಿದ್ದರೂ, ಮಾತಿನ ಏರಿಳಿತ ಧ್ವನಿ ಭಾರದ ಧಾಟಿ (ಸಹಪಠ್ಯ), ಯಾರು ಯಾರಿಗೆ ಯಾವಾಗ ಯಾವ ಗಾದೆಯನ್ನು ಹೇಳಿದರು ಎಂಬೀ ಸಂದರ್ಭಕ್ಕೆ (ಸಾನಿಧ್ಯ) ಅನುಸಾರವಾಗಿ ಗಾದೆಯ ಅರ್ಥಗಳು ದ್ರವೀಕೃತಗೊಳ್ಳುತ್ತವೆ. ಸಹಪಠ್ಯ, ಸಾನಿಧ್ಯದ ಸನ್ನಿವೇಶಗಳು ಗಾದೆಗಳ ಸಿದ್ಧ ಪಠ್ಯಗಳಿಗೆ ವಿಭಿನ್ನ ಅರ್ಥವ್ಯಾಖ್ಯಾನಗಳನ್ನು ಒದಗಿಸುತ್ತವೆ. ಹೀಗಾಗಿ, ಸಿದ್ಧಪಠ್ಯಗಳಾಗಿ ಘನೀಕೃತಗೊಂಡಿರುವ ಗಾದೆಗಳ ಅರ್ಥಗಳು ಸಹಪಠ್ಯ, ಸಾನಿಧ್ಯಕ್ಕೆ ಅನುಗುಣವಾಗಿ ದ್ರವೀಕೃತಗೊಳ್ಳುತ್ತಿರುತ್ತವೆ. ಈ ಅರ್ಥದಲ್ಲಿ ಗಾದೆಗಳು ದ್ರವೀಕೃತ ಪಠ್ಯ ಗುಣವನ್ನೊಂದಿದ್ದು, frozen formಗಳಾಗಿ ಕಂಡುಬರುತ್ತವೆ. ಆದರೆ, ಒಗಟುಗಳ ಪ್ರತಿಮೆ ಮತ್ತು ಉತ್ತರಗಳು ವಿಭಿನ್ನವಾಗಿದ್ದರೂ ಒಗಟುಗಳ ಒಡಲಲ್ಲಿ ಸಾಂದ್ರಗೊಂಡ, ಸ್ಥಿರೀಕೃತಗೊಂಡಿರುವ ಅರ್ಥವಿರುವುದರಿಂದ, ಒಗಟುಗಳು ಘನೀಕೃತ ಪಠ್ಯ ಫಿಕ್ಸ್ಡ್ ಫಾರ್ಮ್‌ಗಳಾಗಿರುತ್ತವೆ.(Gwyn Prins:1992:pp.121, (ed.Burke Peter)

ಒಗಟಿನ ಸ್ವರೂಪವನ್ನು ಗಮನಿಸಿದರೆ ಗಾದೆಗಳ ಹಾಗೆ ನೀತ್ಯಾತ್ಮಕತೆ ಅದರ ಭಾಷಿಕ ನಿಯೋಗವಾಗದೆ ಅವು ಒಂದು ಬಗೆಯ ಭಾಷಿಕ ಆಟಗಳಾಗಿ ಗೋಚರಗೊಳ್ಳುತ್ತವೆ. ಹೀಗಾಗಿಯೇ, ಬುದ್ಧಿವಂತಿಕೆಯ ಅಂಶ ಒಗಟುಗಳಲ್ಲಿ ಪ್ರಕಟಗೊಳ್ಳುತ್ತಿರುತ್ತದೆ. ಈ ಬುದ್ಧಿವಂತಿಕೆ ಒಗಟನ್ನು ಕಟ್ಟುವ ಮತ್ತು ಒಗಟನ್ನು ಒಡೆದು ಅದಕ್ಕೆ ಉತ್ತರವನ್ನು ಕಂಡುಕೊಳ್ಳುವ ಈ ಎರಡೂ ಗುಂಪುಗಳಲ್ಲಿರುತ್ತವೆ. ಒಗಟಿನ ಭಾಷಿಕ ನಿರ್ವಹಣೆ ಕೇವಲ ಬುದ್ಧಿವಂತಿಕೆಯ ಪ್ರದರ್ಶನ ಮಾತ್ರವಾಗಿರದೆಯೇ, ತನ್ನ ಇರವಿನ ಬಗೆಗಿನ ಅರಿವನ್ನು ಭಾಷೆಯಲ್ಲಿ ಕಟ್ಟುವ ಮನುಷ್ಯನ ಭಾಷಾ ಕೌಶಲದ ಕಲಾವಂತಿಕೆಯೂ ಆಗಿರುತ್ತದೆ. ಒಗಟಿನ ಸ್ವರೂಪವನ್ನು ಗಮನಿಸಿದರೆ, ಮೇಲೆ ಉಲ್ಲೇಖಿಸಿರುವಂತೆ, ಒಗಟುಗಳಲ್ಲಿ, ಸಂಸ್ಕೃತಿ ಮತ್ತು ಪ್ರಕೃತಿಯನ್ನು ಗ್ರಹಿಸುವ ಮನುಷ್ಯನ ಯೋಚನಾಕ್ರಮವನ್ನು ಕಾಣುತ್ತೇವೆ. ಸಂಸ್ಕೃತಿ ಮತ್ತು ಪ್ರಕೃತಿಯ ಅರಿವನ್ನು ಒಗಟಾಗಿ ಜೋಡಿಸುವ ಬೌದ್ಧಿಕ ಭಾಷಿಕ ತಂತ್ರಗಾರಿಕೆಯನ್ನು ಒಗಟುಗಳಲ್ಲಿ ಕಾಣುತ್ತೇವೆ. ಪ್ರಕೃತಿ ಮತ್ತು ಸಂಸ್ಕೃತಿಯ ಅರಿವು ಒಗಟುಗಳ ಒಡಲಿಗೆ ವಿಭಿನ್ನವಾಗಿ ವರ್ಗಾವಣೆಯಾಗುತ್ತಿರುತ್ತದೆ. ಸಂಸ್ಕೃತಿಯಿಂದ ಪ್ರಕೃತಿಗೆ ಮಾತ್ರವಲ್ಲ, ಪ್ರಕೃತಿಯಿಂದ ಸಂಸ್ಕೃತಿಗೆ; ಹಾಗೆಯೇ ಸಂಸ್ಕೃತಿಯಿಂದ ಸಂಸ್ಕೃತಿಗೆ;

ಪ್ರಕೃತಿಯಿಂದ ಪ್ರಕೃತಿಗೆ ಹೀಗೆ ಮನುಷ್ಯನ ಅರಿವು ವರ್ಗಾವಣೆಗೊಳ್ಳುವ ವಿನ್ಯಾಸದಲ್ಲಿರುತ್ತದೆ. ಈ ವರ್ಗಾವಣೆಯ ತರ್ಕವೇ ಒಗಟಿನ ಒಡಲನ್ನು ರೂಪಿಸುತ್ತಿರುತ್ತದೆ.

ಒಗಟಿನ ಸ್ವರೂಪವನ್ನು ಗಮನಿಸಿದರೆ, ಅದರ ಭಾಷಿಕ ಒಡಲಲ್ಲಿ ಯಾವುದೋ ಒಂದು ಸಮಸ್ಯೆ ಇರುತ್ತದೆ. ಈಗಾಗಲೇ ಸೂಚಿಸಿರುವಂತೆ, ಅದೊಂದು ಭಾಷಿಕ ಆಟವಾಗಿರುವುದರಿಂದ, ಅದನ್ನು ಒಡೆದು ಅಥವಾ ಬಿಡಿಸಿ ಉತ್ತರವನ್ನು ಹೇಳುವಂತಿರುತ್ತದೆ. ಹೀಗಾಗಿ ಒಗಟಿಗೆ ಒಂದು ಸಂದರ್ಭ ಅನ್ನುವುದು ಇಲ್ಲದಿದ್ದರೂ ಮದುವೆಯ ಸಂದರ್ಭದಲ್ಲಿ ಕೆಲವು ಕಡೆಗಳಲ್ಲಿ ಒಗಟು ಬಳಕೆಯಾಗುವುದನ್ನು ಕಾಣಬಹುದು. ಒಗಟಿನ ಒಡಲಲ್ಲಿ ಸ್ವಾಭಾವಿಕವಾಗಿ ಪ್ರಶ್ನೋತ್ತರ ಸಂರಚನೆ ಇರುವ ಕಾರಣದಿಂದಲೇ ಹೆಣ್ಣು ಗಂಡಿನ ನಡುವೆ ಪಾರಸ್ಪರ್ಯ ಕ್ರಿಯೆಯನ್ನು ಉಂಟುಮಾಡುವ ಸಾಮಾಜಿಕ ಉದ್ದೇಶದಿಂದಲೇ ಮದುವೆಯ ಸಂದರ್ಭದಲ್ಲಿ ಒಗಟನ್ನು ಪರಸ್ಪರ ಒಡ್ಡಲಾಗುತ್ತದೆ. ಈ ನೆಲೆಯಲ್ಲಿ ಗಂಡು ಮತ್ತು ಹೆಣ್ಣನ್ನು ಬೆಸೆಯುವ ಒಗಟಿನ ಸಾಮಾಜಿಕ ಭಾಷಿಕ ನಿಯೋಗವನ್ನು ಗುರುತಿಸಿಕೊಳ್ಳಬಹುದಾಗಿದೆ.

ಜ್ಞಾನವನ್ನು ಅಥವಾ ನೈತಿಕ ಬೋಧನೆಯನ್ನು ಹಾಸ್ಯದ ರೀತಿಯಲ್ಲಿ ಕೊಡುವುದು ಒಗಟಿನ ಅಂತಿಮ ಉದ್ದೇಶ. ಆದ್ದರಿಂದ ಒಗಟಿನ ಪ್ರಾಯೋಗಿಕ ಉದ್ದೇಶವು ಗಾದೆಯಂತೆಯೆ ಶೈಕ್ಷಣಿಕವಾದುದು. ಆದರೂ ಪ್ರಾಚೀನತೆಯ ದೃಷ್ಟಿಯಿಂದ ಒಗಟಿನ ಬೇರುಗಳು ಗಾದೆಗಿಂತ ಹೆಚ್ಚು ಆಳಕ್ಕೆ ಇಳಿದಿವೆ. ಒಗಟಿನ ಸಾಂಸ್ಕೃತಿಕ ಹಿನ್ನೆಲೆ ಕೂಡಾ ಹೆಚ್ಚು ವಿಸ್ತಾರವಾದುದು. ಗಾದೆಯಲ್ಲಿ ಕಾಣುವಂಥ ಸಂಸ್ಕ್ಲಿಪ್ತತೆ, ಹಾಸ್ಯಮತ್ತು ಪ್ರಾಸಗುಣ ಇವು ಒಗಟಿನಲ್ಲೂ ಇದೆ. ಆದರೆ ಒಗಟನ್ನು ಗಾದೆಯಿಂದ ಬೇರ್ಪಡಿಸುವುದು ಅದರ ರೂಪಕ ಗುಣ. ಗಾದೆಯಲ್ಲಿ ಅದು ಇಲ್ಲದಿದ್ದರೂ ನಡೆಯುತ್ತದೆ.

ಒಗಟು ಇತರ ಯಾವುದೇ ಕಂಠಸ್ಥ ಪರಂಪರೆ ಅಥವಾ ಪರಂಪರಾಗತ ಸಾಹಿತ್ಯಕ ರೂಪಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜನಪ್ರಿಯ ಕಲ್ಪನೆಯ ಮೇಲೆ ಪ್ರಭಾವ ಬೀರಿದೆ. ಅದರ ರಚನೆಯು ವ್ಯವಸ್ಥಿತ ಹಾಗೂ ಆಕರ್ಷಕ. ರಹಸ್ಯದ ಅಂಶವು ಅದಕ್ಕೆ ಒಂದು ವಿಶೇಷ ಅಂದವನ್ನೂ ಘನತೆಯನ್ನೂ ತಂದುಕೊಡುತ್ತದೆ. ಆದ್ದರಿಂದ ಪ್ರಾಚೀನ ಕಾಲದಿಂದಲೂ ಒಗಟಿನ ಸ್ವರೂಪ ಮತ್ತು ಸಂಗತಿಗಳು ತತ್ತ್ವಶಾಸ್ತ್ರಜ್ಞರಿಗೆ ಮತ್ತು ಸಾಹಿತ್ಯವಿಮರ್ಶಕರಿಗೆ ಬಹಳ

ಪ್ರಮುಖವೆನಿಸಿದ್ದವು. ಗ್ರೀಸ್‌ನಲ್ಲಿ ಅರಿಸ್ಟಾಟಲ್ ಮತ್ತು ಭಾರತದಲ್ಲಿನ ವೇದಾಂತಿಗಳು– ಮುಖ್ಯವಾಗಿ ಲಾಕ್ಷಣಿಕರು– ಅದಕ್ಕೆ ಗಮನಕೊಟ್ಟಿದ್ದರು. ಮಧ್ಯಕಾಲೀನ ಯುಗದ ಬಳಿಕ, ಫ್ರೇಜರ್ ಒಗಟನ್ನು ಮತ್ತೆ ಎತ್ತಿಕೊಂಡು ವೈಜ್ಞಾನಿಕವಾಗಿ ಅಭ್ಯಾಸಮಾಡುವವರೆಗೆ, ಅದು ವಿದ್ವಾಂಸರ ಆಸಕ್ತಿಯಿಂದ ದೂರವಾಗಿತ್ತು. ಮಾನವಕುಲದ ವಿವಿಧ ಜನಾಂಗಗಳಲ್ಲಿ, ನಾಗರಿಕ ಮತ್ತು ಅನಾಗರಿಕ ಎರಡರಲ್ಲೂ, ವಿಭಿನ್ನ ಸಂದರ್ಭಗಳಲ್ಲಿನ ಒಗಟಿನ ಬಳಕೆಯು ಅತ್ಯಂತ ರಹಸ್ಯಮಯವಾಗಿ ಫ್ರೇಜರನಿಗೆ ಕಾಣಿಸಿತು. ಸಾಮಾನ್ಯವಾಗಿ ಮನೋರಂಜಕ ಒಗಟುಗಳಿಗಿಂತ ಮತಪ್ರಕ್ರಿಯೆಗೆ ಸಂಬಂಧಿಸಿದ ಒಗಟುಗಳು ಆತನನ್ನು ಬಹಳವಾಗಿ ಆಕರ್ಷಿಸಿದುವು. ಈ ಒಗಟುಗಳ ಪ್ರಾಯೋಗಿಕ ಬಳಕೆಯ ವೈವಿಧ್ಯ ಮತ್ತು ವೈದೃಶ್ಯಗಳು ಫ್ರೇಜರನ್ನು ಮುಗ್ಧಗೊಳಿಸಿದುವು. ಶೋಕದ ಹಾಗೂ ಸಂತೋಷದ ಸಂದರ್ಭಗಳೆರಡಕ್ಕೂ ಸಮಾನವಾಗಿ ಹೊಂದಿಕೆಯಾಗುವ ಹಾಗೆ ಯಾವ ಸಾಮಾನ್ಯ ತತ್ತ್ವದ ಮೇಲೆ ಒಗಟು ರಚಿತವಾಗಿದೆ ಎಂಬುದನ್ನು ಕಂಡುಕೊಳ್ಳಲು ಫ್ರೇಜರ್ ವಿಫಲನಾದ. ಬದುಕಿನ ಪ್ರಮುಖ ಘಟ್ಟಗಳಲ್ಲಿ ಮತ್ತು ಕಠಿಣ ಪರಿಸ್ಥಿತಿಗಳನ್ನು ಎದುರಿಸುವಲ್ಲಿ ಬಳಸುವುದೇ ಮತಾಚರಣೆಯ ಒಗಟಿನ ಉದ್ದೇಶವೆಂದು ಕಾಣುತ್ತದೆ. ಬಹಳ ಪ್ರಾಚೀನ ಕಾಲದಿಂದಲೂ ಮನವಕುಲದ ಎಲ್ಲ ಜನಾಂಗಗಳಲ್ಲಿ ಈ ಪದ್ಧತಿಯು ರೂಢಿಯಲ್ಲಿದೆ. ಒಂದು ಹಳ್ಳಿ, ಸಮುದಾಯ ಅಥವಾ ಕುಟುಂಬದ ಭವಿಷ್ಯವು ಸಂಕಷ್ಟಕ್ಕೊಳ್ಳಗಾದಾಗ ಆ ಮಾರಿಯನ್ನು ಆಚರಣೆಯ ಮೂಲಕ ತೊಲಗಿಸಲು ಒಗಟುಗಳನ್ನು ಬಳಸುತ್ತಿದ್ದರು. ಕೃಷಿಗೆ ಸಂಬಂಧಿಸಿದಂತೆ ಮಳೆ ಬರಿಸುವುದು, ನಾಟಿ ಹಾಕುವುದು, ಕೊಯ್ಯುವುದು, ಮತ್ತು ಸುನ್ನತಿ, ಬೇಟೆ, ಮದುವೆ, ಉತ್ತರಕ್ರಿಯೆ– ಇಂತಹ ಪ್ರಮುಖ ಸಂದರ್ಭಗಳಲ್ಲಿ ಒಗಟುಗಳು ಬಳಕೆಯಾಗುತ್ತಿದ್ದುವು. ಇದು ಒಗಟಿನ ಸಾಮಾನ್ಯ ಸಾಂಸ್ಕೃತಿಕ ಹಿನ್ನೆಲೆ. (ರಾಗೌ ೧೯೭೦)

ವರ್ಗೀಕರಣ ಮತ್ತು ಅಧ್ಯಯನ ಕ್ರಮ

ಒಗಟುಗಳನ್ನು ನಾವಿಂದು ಜನಪದ ಸಾಹಿತ್ಯವೆಂದು ಪರಿಕಲ್ಪಿಸಿಕೊಳ್ಳುವ ಮತ್ತು ವರ್ಗೀಕರಿಸಿಕೊಳ್ಳುತ್ತಿರುವ ವಿಧಾನವು ಪಾಶ್ಚಿಮಾತ್ಯ ಜಾನಪದ ಅಧ್ಯಯನದಿಂದ ಕೊಡಮಾಡಿರುವುದು. ಪಾಶ್ಚಿಮಾತ್ಯ ವಿದ್ವಾಂಸರ ಪರಿಕಲ್ಪನೆ ಮತ್ತು ವರ್ಗೀಕರಣ ಸೂತ್ರಗಳು ಇದೇ ರೀತಿ ನಮ್ಮಲ್ಲೂ ಜಾನಪದವನ್ನು

ಪರಿಕಲ್ಪಿಸಿಕೊಳ್ಳುವ, ವರ್ಗೀಕರಿಸಿಕೊಳ್ಳುವ ವಿಧಾನವನ್ನು ರೂಪಿಸಿವೆ. ಜಾನಪದ ಅಧ್ಯಯನದ ಆರಂಭಿಕ ಸನ್ನಿವೇಶದಲ್ಲಿ ಜಾಗತಿಕವಾಗಿ ಜಾನಪದವನ್ನು ನಿರ್ದಿಷ್ಟ ವರ್ಗೀಕರಣಗಳಲ್ಲಿ ಗುರುತಿಸಿಕೊಳ್ಳಲಾಯಿತು. ಮಾನವಶಾಸ್ತ್ರ ಮತ್ತು ಜನಾಂಗೀಯ ಅಧ್ಯಯನದ ಭಾಗವಾಗಿ, ಜಗತ್ತಿನ ಬೇರೆ ಬೇರೆ ದೇಶಭಾಷೆಗಳ ಜಾನಪದವನ್ನು ಅದರಲ್ಲೂ ಮುಖ್ಯವಾಗಿ ಜನಪದ ಕತೆಗಳನ್ನು ಅಭ್ಯಾಸ ಮಾಡಿದ ಸಂದರ್ಭದಲ್ಲಿ ಜನಪದ ಕತೆಗಳಲ್ಲಿ ಕಂಡುಬರುವ ಸಮಾನತೆಯ ಅಂಶಗಳನ್ನು ಪರಿಗಣಿಸಿ, ದೇಶ ಭಾಷೆಗಳ ನಿರ್ದಿಷ್ಟತೆಯಿಂದ ಜನಪದ ಕತೆಗಳನ್ನು ಪ್ರತ್ಯೇಕಿಸಿ ಅವುಗಳನ್ನು ವರ್ಗ ಮತ್ತು ಆಶಯಗಳ ಸಾಮಾನ್ಯೀಕೃತ ನೆಲೆಯಲ್ಲಿ ವರ್ಗೀಕರಿಸಲಾಯಿತು. ಜಾನಪದ ವರ್ಗೀಕರಣದಲ್ಲಿ ಸಮರ್ಥವಾದ ವರ್ಗೀಕರಣವನ್ನು ಸೂಚಿಸಲು ಜಾನಪದ ವಿದ್ವಾಂಸರಿಂದ ಹಲವಾರು ಪ್ರಯತ್ನಗಳು ನಡೆದಿವೆ. ಸ್ಟಿತ್ ಥಾಮ್ಸನ್, ಆರ್.ಎಸ್.ಬಾಗ್ಸ್, ರಿಚರ್ಡ್ ಡಾರ್ಸನ್, ಅಲೆನ್ ಡಂಡೆಸ್ ಮುಂತಾದವರು ಬಾಗ್ಸ್ ವರ್ಗೀಕರಣ ಸೂಚಿ ವಿಶಾಲ ವ್ಯಾಪ್ತಿಯುಳ್ಳದ್ದಾದ್ದರಿಂದ ಅದನ್ನೇ ಬಳಸಿದ್ದಾರೆ. ಬಾಗ್ಸ್ ವರ್ಗೀಕರಿಸುವ ಸಾಹಿತ್ಯಿಕ ಬಗೆ ಮತ್ತು ಭಾಷಿಕ ಬಗೆ ಇವುಗಳನ್ನು ಒಟ್ಟು ಸೇರಿಸಿ ಆರ್ಚರ್ ಟೇಲರ್ ಶಾಬ್ದಿಕ ಬಗೆ ಎಂಬುದಾಗಿ ಗುರುತಿಸಿಕೊಳ್ಳುತ್ತಾನೆ. ಬಾಗ್ಸ್ ವರ್ಗೀಕರಣದಲ್ಲಿ ಒಗಟುಗಳು ಸಾಹಿತ್ಯಿಕ ಬಗೆಯಾಗುವುದಿಲ್ಲ. ಬದಲಾಗಿ, ಭಾಷಿಕ ಬಗೆಯಾಗಿ ಗುರುತಿಸಲ್ಪಟ್ಟಿದೆ. ಆರ್ಚರ್ ಟೇಲರ್ ಬಾಗ್ಸ್ ವರ್ಗೀಕರಿಸುವ ಸಾಹಿತ್ಯಿಕ ಹಾಗೂ ಭಾಷಿಕ ಬಗೆ ಇವೆರಡನ್ನೂ ಒಟ್ಟು ಸೇರಿಸಿ ಶಾಬ್ದಿಕ ಬಗೆ ಎನ್ನುತ್ತಾನೆ. ಹೀಗಾಗಿ ಆರ್ಚರ್ ಟೇಲರ್‌ನ ವರ್ಗೀಕರಣದಲ್ಲಿ ಒಗಟುಗಳು ಶಾಬ್ದಿಕ ಬಗೆಯಲ್ಲಿ ಗುರುತಿಸಲ್ಪಡುತ್ತವೆ.

ಆರ್. ಎಸ್. ಬಾಗ್ಸ್



ಆರ್ಚರ್ ಟೇಲರ್

ಸಾಹಿತ್ಯಿಕ ಬಗೆ + ಭಾಷಿಕ ಬಗೆ = ಶಾಬ್ದಿಕ ಬಗೆ

ಒಗಟುಗಳ ವರ್ಗೀಕರಣ

ಭಾಷಿಕ ಅಭಿವ್ಯಕ್ತಿಯಾದುದರಿಂದಲೇ ಒಗಟುಗಳನ್ನು ಜಾನಪದ ಅಧ್ಯಯನದಲ್ಲಿ ಜನಪದ ಸಾಹಿತ್ಯವಾಗಿ ಪರಿಭಾವಿಸಿ, ಅದನ್ನು ಒಂದು ಜಾನಪದ ಪ್ರಕಾರವಾಗಿ ವರ್ಗೀಕರಿಸಿಕೊಂಡು ನಡೆದಿರುವ ಅಧ್ಯಯನಗಳು ಸಾಕಷ್ಟು ನಮ್ಮ ಮುಂದಿವೆ. ಈ ಬಗೆಯ ಅಧ್ಯಯನಗಳಲ್ಲಿ ಒಗಟುಗಳ ಶಾಬ್ದಿಕ ಒಡಲನ್ನು ಎರಡು ನೆಲೆಗಳಲ್ಲಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಿರುವುದನ್ನು ಗಮನಿಸಬಹುದು. ೧). ಸಾಹಿತ್ಯಿಕ ಅಥವಾ ಕಲಾತ್ಮಕ ನೆಲೆ ೨). ಸಾಂಸ್ಕೃತಿಕ ನೆಲೆ. ಈ ಬಗೆಯ ಅಧ್ಯಯನಗಳು ನಮ್ಮಲ್ಲಿ ನಡೆದಿರುವುದು ವಿಶೇಷವಾಗಿ ಕನ್ನಡ ಸಾಹಿತ್ಯದ ವಿಭಾಗಗಳಲ್ಲಿ ಅನ್ನುವ ಅಂಶವನ್ನೂ ಗಮನಿಸಬಹುದಾಗಿದೆ.

ಒಗಟುಗಳ ರಾಚನಿಕ ಅಧ್ಯಯನವನ್ನು ಮಾಡಿರುವ ಮಾದರಿಗಳನ್ನು ಗಮನಿಸಿದರೆ, ಒಗಟುಗಳನ್ನು ಪ್ರಶ್ನೆಯ ಭಾಗ ಮತ್ತು ಉತ್ತರದ ಭಾಗ ಎಂದು ಪ್ರತ್ಯೇಕಿಸಿ ಅವುಗಳಲ್ಲಿ ವ್ಯಕ್ತಗೊಳ್ಳುವ ಸಾಂಸ್ಕೃತಿಯ ಅಂಶಗಳನ್ನು ನಿರ್ದಿಷ್ಟ ಬಗೆಗಳಲ್ಲಿ ವರ್ಗೀಕರಿಸಿ ಗುರುತಿಸಲಾಗಿದೆ. ಜೊತೆಗೆ, ಅದರ ಭಾಷಿಕ ಲಕ್ಷಣಗಳಲ್ಲಿ ಕಲಾತ್ಮಕತೆಯ, ಸಾಹಿತ್ಯಿಕತೆಯ ಅಂಶಗಳನ್ನು ಗುರುತಿಸಿಕೊಳ್ಳಲಾಗಿದೆ. ಒಗಟಿನ ಸ್ವರೂಪದಲ್ಲಿರುವ ಪ್ರಶ್ನೆಯ ಭಾಗ ಮತ್ತು ಉತ್ತರದ ಭಾಗವನ್ನು ಪ್ರತ್ಯೇಕ ಪ್ರತ್ಯೇಕ ಘಟಕಗಳಾಗಿ ಗ್ರಹಿಸದೆ, ಪ್ರಶ್ನೆ ಮತ್ತು ಉತ್ತರವನ್ನು ಸಮಗ್ರವಾಗಿ ಸಂರಚನಾತ್ಮಕ ಏಕಕವಾಗಿ (ಸ್ಟ್ರಕ್ಚರಲ್ ಯುನಿಟ್) ಗ್ರಹಿಸಿ ಅದರ ಸ್ವರೂಪವನ್ನು ಸಂರಚನಾತ್ಮಕವಾಗಿ ವಿಶ್ಲೇಷಿಸುವ ಬೇರೊಂದು ಮಾದರಿಯನ್ನು ಜಾನಪದ ವಿದ್ವಾಂಸರಾಗಿರುವ ಮರಾಂಡ ಅವರ ಅಧ್ಯಯನದಲ್ಲಿ ಕಾಣಬಹುದು. ಸೊಲೊಮನ್ ದ್ವೀಪದ ಲಾವೊ ಜನಾಂಗದ ಒಗಟುಗಳ ಸಂರಚನಾತ್ಮಕ ಅಧ್ಯಯನವನ್ನು ಕೈಗೊಂಡಿರುವ ಮರಾಂಡ ಅವರು ಒಗಟುಗಳ ತಾರ್ಕಿಕ ಸಂರಚನೆಯ ಗುಣಲಕ್ಷಣಗಳನ್ನು ಮತ್ತು ಅಂತಹ ಸಂರಚನೆಗಳನ್ನು ನಿರ್ಮಾಣ ಮಾಡುವ ಪ್ರಕ್ರಿಯೆಗಳನ್ನು 'A Tree Grows : Transformation of a Riddle metaphor' ಎಂಬ ಲೇಖನದಲ್ಲಿ ಶೋಧಿಸುತ್ತಾರೆ.

ಒಗಟಿನ ಸ್ವರೂಪದಲ್ಲಿರುವ ಪ್ರಶ್ನೆಯ ಭಾಗ ಮತ್ತು ಉತ್ತರದ ಭಾಗವನ್ನು ಪ್ರತ್ಯೇಕ ಪ್ರತ್ಯೇಕ ಘಟಕಗಳಾಗಿ ಗ್ರಹಿಸದೆ, ಪ್ರಶ್ನೆ ಮತ್ತು ಉತ್ತರವನ್ನು ಸಮಗ್ರವಾಗಿ ಸಂರಚನಾತ್ಮಕ ಏಕಕವಾಗಿ (ಸ್ಟ್ರಕ್ಚರಲ್ ಯುನಿಟ್) ಗ್ರಹಿಸಿ ಅದರ ಸ್ವರೂಪವನ್ನು ಸಂರಚನಾತ್ಮಕವಾಗಿ ವಿಶ್ಲೇಷಿಸುತ್ತಾರೆ. ಹೀಗಾಗಿ ಒಗಟುಗಳ ಸ್ವರೂಪವನ್ನು ವಿಶ್ಲೇಷಿಸುವುದಕ್ಕೆ ಮರಾಂಡ ಅವರ ವಿಧಾನ ಹೆಚ್ಚು ಸಮಂಜಸವಾಗಿ ಕಾಣುತ್ತದೆ.

ಮರಾಂಡ ಅವರ ಪ್ರಕಾರ ಸಂರಚನೆ ಎಂದರೆ, ಸಮಗ್ರವಾದ ಸಂಗತಿಯೊಂದು ಒಳಗೊಂಡಿರುವ ವಿವಿಧ ಅಂಶಗಳು ಸಂಘಟಿತವಾಗಿರುವ ಆಂತರಿಕ ಸಂಬಂಧ. ಹೀಗಾಗಿ, ಸಂರಚನಾ ವಿಶ್ಲೇಷಣೆ ಎಂಬುದು, ಸಂರಚನೆಯೊಂದು ವ್ಯವಸ್ಥೆಗೊಂಡಿರುವ ಬಗೆಯನ್ನು ಕಂಡುಕೊಳ್ಳುವ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ. (ಎಲ್ಲಿ ಕೊಂಗಸ್ ಮರಾಂಡ ಮತ್ತು ಪಿಯಾರೆ ಮರಾಂಡ:೧೯೭೧:೧೬) ಮರಾಂಡ ಅವರ ವಾದದ ಪ್ರಕಾರ ಜಾನಪದ ಅಧ್ಯಯನದಲ್ಲಿ ವಸ್ತು, ಶೈಲಿ, ಸಂರಚನೆ ಮತ್ತು ಕಾರ್ಯ ಇವುಗಳು ಬಹಳ ಉಪಯುಕ್ತ. ಮಾತ್ರವಲ್ಲ, ಅವುಗಳು ಅವಶ್ಯ ಕೂಡಾ. ಯಾಕೆಂದರೆ, ಅವೆಲ್ಲವೂ ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಜನಪದ ಸಾಹಿತ್ಯದ ಸಂರಚನಾತ್ಮಕ ಅಧ್ಯಯನದಲ್ಲಿ ಡೀಪ್ ಸ್ಟ್ರಕ್ಚರ್ ಮತ್ತು ಸರ್ಫೇಸ್ ಸ್ಟ್ರಕ್ಚರ್‌ನ ನಡುವಿನ ವ್ಯತ್ಯಾಸಗಳಂತಹ ವ್ಯತ್ಯಾಸಗಳು ಮೌಖಿಕ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳಲು ಮತ್ತು ವಿಶ್ಲೇಷಿಸಲು ಸಹಾಯ ಮಾಡುತ್ತವೆ ಎಂಬುದಾಗಿ ಮರಾಂಡ ಅವರು ವಾದಿಸುತ್ತಾರೆ. (ಎಲ್ಲಿ ಕೊಂಗಸ್ ಮರಾಂಡ ಮತ್ತು ಪಿಯಾರೆ ಮರಾಂಡ:೧೯೭೧:೨೦)

ಮರಾಂಡ ಅವರ ಅಧ್ಯಯನದ ಪ್ರಕಾರ ಒಗಟಿನಲ್ಲಿ ಎರಡು ಭಾಗಗಳಿರುತ್ತವೆ: ಒಂದು, ಒಗಟಿನ ಪ್ರತಿಮೆ. ಮತ್ತೊಂದು, ಒಗಟಿನ ಉತ್ತರ. ಒಗಟಿನ ಪ್ರತಿಮೆ ಪ್ರಶ್ನೆಯಾಗಿರುತ್ತದೆ (ಅದು ಬಹುಮಟ್ಟಿಗೆ ಪ್ರಶ್ನೆಯ ರೂಪದಲ್ಲಿ ಇರುವುದಿಲ್ಲ). ಉತ್ತರವನ್ನು ಒಳಗೊಳ್ಳುವಂತೆ ಪ್ರತಿಮೆಯನ್ನು ಕಟ್ಟಲಾಗುತ್ತದೆ. ಒಗಟುಗಳಲ್ಲಿ ಅನೇಕ ಉತ್ತರಗಳನ್ನು ಹೊಂದಿರುವ ಪ್ರತಿಮೆಗಳಿವೆ. ಅದೇ ರೀತಿ, ಅನೇಕ ಒಗಟಿನ ಪ್ರತಿಮೆಗಳಿಗೆ ಒಂದೇ ಉತ್ತರವೂ ಇರುವುದಿದೆ. ಆದರೆ ಇದರ ಅರ್ಥ ಒಗಟಿನ ಉತ್ತರ ಯಾದೃಚ್ಛಿಕ ಎಂದಾಗುವುದಿಲ್ಲ.

ಒಂದೇ ಪ್ರತಿಮೆಗೆ ವಿಭಿನ್ನ ಉತ್ತರ

ನೀರಲ್ಲಿ ಹುಟ್ಟಿ ನೀರಲ್ಲಿ ಬೆಳೆದು
ನೀರು ಸೋಕಿದರೆ ನಾ ಉಳಿಯಲಾರೆ (ಇ ೬೬೯)

ನೀರಲ್ಲಿ ಹುಟ್ಟುವುದು
ನೀರಲ್ಲಿ ಬೆಳೆವುದು
ನೀರ ಕಂಡರೆ ಜರಗುವುದು (ರಾಗೌ ೩೧೯)

ನೀರಲ್ಲೆ ಹುಟ್ಟುತ್ತೆ ನೀರಲ್ಲೆ ಬೆಳೆಯುತ್ತೆ ನೀರು ಕಂಡ್ರೆ ಹೆದರುತ್ತೆ
(ಲ ಗೌ ೬೮೯)

ನೀರಿನಲ್ಲಿ ಹುಟ್ಟಿ
ನೀರಿನಲ್ಲಿ ಬೆಳೆದು
ನೀರು ಕಂಡರೆ ಹರಿದೋಡುವುದು (ಚಂ ಸೆ ೧೬೩)

ನೀರಿನಲ್ಲಿ ಹುಟ್ಟಿ
ನೀರಿನಲ್ಲಿ ಬೆಳೆದು
ನೀರು ಬಿದ್ರೆ ನಿರ್ನಾಮವಾಗುತ್ತದೆ (ಸು ೩೪೩)
ಉಪ್ಪು

ನೀರಲ್ಲೆ ಹುಟ್ಟಿ ನೀರಲ್ಲೆ ಬೆಳೆದು ನೀರು ಕಂಡರೆ ನಡುಗುವಳು
ಕಾಗದ (ಲ ಗೌ ೬೮೭)

ನೀರಲ್ಲೆ ಹುಟ್ಟುತ್ತದೆ
ನೀರಲ್ಲೆ ಬೆಳೆಯುತ್ತದೆ
ನೀರಲ್ಲೆ ಕ್ಷಣಕ್ಕೆ ಸಾಯುತ್ತದೆ (ರಾ ಗೌ ೩೧೮)
ನೀರಿನ ಗುಳ್ಳೆ

ಹಗಲೆಲ್ಲಾ ಹಾರ್ಯಾಡತತಿ
ರಾತ್ರೆಲ್ಲಾ ಮಲಗತತಿ (ಲಠ್ಠೆ ಭಾಗ ೫–೨೯೫)
ಕಸಬರಿಗೆ

ಹಗಲೆಲ್ಲ ತಿರುಗುತ್ತೆ
ರಾತ್ರಿಯೆಲ್ಲ ಮಲಗುತ್ತೆ (ಜೀಶಂಪ ೨೮೧)
ಕುಡಿಲು

ಅನೇಕ ಪ್ರತಿಮೆಗಳಿಗೆ ಒಂದೇ ಉತ್ತರ

ಎಲ್ಲರಿಗೂ ಮುಖ ತೋರಿಸಿ
ಬೆನ್ನು ಕೆರೆದರೆ ನಾ ಕೆಟ್ಟೆ (ಚಂ ಸೆ ೫೪)
ಕುಳಿತರೆ ಮುನಿ

ಹಾರಿದರ ಹನುಮಂತ
ಕೂಗಿದರ ರಾವಣ
ನಾನ್ಯಾರು (ಇ ೪೦೬)

ಕೂಗುವೆ ರಾವಣನಲ್ಲ
ಹಾರುವೆ ಹನುಮಂತನಲ್ಲ
ಸುಮ್ಮ ಕೂಡುವೆ ಮುನೀಶ್ವರನಲ್ಲ (ಇ ೪೦೯)

ಕೆರ್ಯಾಗ ಕೆಂದ ಹುಡುಗ ಕೇಕರಸ್ತಾನ (ಇ ೪೧೨)

ತಣ್ಣಗೆ ನುಣ್ಣಗೆ ಮೈಯುಳ್ಳವನೆ
ಗೋಲಗುಲಗುಂಜಿ ಕಣ್ಣವನೆ
ಕೆಸರು ಕಂಡರೆ ಕಾಲು ಕಿಸಿಯೋನೆ
ನಿನ್ನ ಹೆಸರೇನು (ಚಂ ಸೆ ೧೩೨)

ನಾಲ್ಕು ಕಾಲಿನ ನಗಾರಿ
ಬಾಲವಿಲ್ಲದ ಕೊದಾರಿ (ಲ ಗೌ ೬೬೬)

ಬಾಲಿಲ್ಲದ ಬಟಾರಿ
ನಾಕ್ಕಾಲಿನ ಕಠಾರಿ
ಇದ ಹೇಳ್ದೋರ್ಗೆ
ಚಿನ್ನದ ಕಠಾರಿ (ರಾ ಗೌ ೩೪೮)

ಹಾರಿದರೆ ಹನುಮಂತ
ಕುಳಿತರೆ ಮುನಿ
ಕೂಗಿದರೆ ಕಾಡಿನೊಡಯ (ಇ ೧೦೬೬)

ಹಾರಿದರೆ ಹನುಮಂತ
ಕೂತರೆ ಮುನಿ
ಕೂಗಿದರೆ ಕಾಡಿನೊಡೆಯ (ಚಂ ಸೆ ೨೫೦)

ಹಾರಿದರೆ ಹನುಮಂತ
ಕೂಗಿದರೆ ರಾವಣ
ಕುಳಿತಲ್ಲಿ ಮುನಿರಾಯ (ಇ ೧೦೫೭)

ಹಾರಿದರೆ ಹನುಮಂತ ಕೂಗಿದರೆ ಹೆಬ್ಬುಲಿ (ಲ ಗೌ ೧೦೪೧)

ಕಪ್ಪೆ

ಒಗಟಿನ ಸಂರಚನಾತ್ಮಕ ಅಧ್ಯಯನದಲ್ಲಿ ಮರಾಂಡ ಅವರು ಕಾವ್ಯಮೀಮಾಂಸೆಯ ಮೂರು ಪರಿಭಾಷೆಗಳನ್ನು ಬಳಸಿಕೊಳ್ಳುತ್ತಾರೆ. (೧). ಸಾದೃಶ್ಯತೆ (analogy) (೨). ರೂಪಕ (metaphor) (೩). ಅಜಹಲ್ಲಕ್ಷಣೆ (metonymy). ಸಾದೃಶ್ಯತೆಯನ್ನು ಅರಿಸ್ಟಾಟಲನ ವ್ಯಾಖ್ಯೆಯ ಪ್ರಕಾರ, "ನಾಲ್ಕು ಪದಗಳಿರುವಾಗ, ಎರಡನೆಯದು ಮತ್ತು ಮೊದಲನೆಯದಕ್ಕೆ ಇರುವ ಸಂಬಂಧ ಮತ್ತು ನಾಲ್ಕನೆಯದು ಮತ್ತು ಮೂರನೆಯದಕ್ಕೆ ಇರುವ ಸಂಬಂಧ ಒಂದೇ ರೀತಿ ಇದ್ದಾಗ ಅಲ್ಲಿ ಸಾದೃಶ್ಯವಿದೆ ಎನ್ನಬಹುದು."

A / B = C / D

ಕಾವ್ಯಮೀಮಾಂಸೆಯಲ್ಲದೆ ಸಾದೃಶ್ಯತೆಯ ಸ್ವರೂಪವನ್ನು ಭಾಷಾವಿಜ್ಞಾನ ಮತ್ತು ಮಾನವಶಾಸ್ತ್ರದಲ್ಲಿ ಬಳಕೆಯಲ್ಲಿರುವಂತೆಯೂ ಸೂಚಿಸಲಾಗಿದೆ.

A : B :: C : D

ದೇವರು ಒಳಗೆ ಗಂಧ ಹೊರಗೆ (ಲ ಗೌ ೬೩೩)
ಏಡಿ, ಏಡಿ ಕುಣಿ ಮಣ್ಣು

ದೇವರು : ಗಂಧ :: ಏಡಿ : ಮಣ್ಣು

ಈ ನಾಲ್ಕು ಪದಗಳಲ್ಲಿ ಎರಡನೆ ಪದವಾಗಿರುವ ಗಂಧ ಮತ್ತು ಮೊದಲನೆಯ ಪದವಾಗಿರುವ ದೇವರು ಇವುಗಳ ನಡುವಿನ ಪರಸ್ಪರ ಸಂಬಂಧ ಹಾಗೂ ನಾಲ್ಕನೆಯ ಪದವಾಗಿರುವ ಮಣ್ಣು ಮತ್ತು ಮೂರನೆಯ ಪದವಾಗಿರುವ ಏಡಿ ಇವುಗಳ ನಡುವಿನ ಪರಸ್ಪರ ಸಂಬಂಧ ಒಂದೇ ಆಗಿದ್ದು, ಅವುಗಳ ನಡುವೆ ಸಾದೃಶ್ಯವಿದೆ.

ಮುಂದೆ ರಾಜಾ ಹಿಂದೆ ಪ್ರಜಾ (ಶಾಂ ನಾ ೨೧೭)
ಬಾಳೆ ಗೊನೆ–ಹಣ್ಣು

A : B :: C : D

ರಾಜ:ಮುಂದು :: ಸೈನ್ಯ:ಹಿಂದು

ಈ ಒಗಟಿನ ಸಂರಚನೆಯಲ್ಲಿ ರಾಜ ಮುಂದಿದ್ದು, ಸೈನ್ಯ ಹಿಂದಿದೆ. ಇದು ಒಗಟಿನ ಸತ್ಯ. ಆದರೆ ವಾಸ್ತವಿಕ ಸತ್ಯ ಬೇರೆ. ರಾಜ ಹಿಂದಿದ್ದು

ರಾಜನ ರಕ್ಷಣೆ ಮಾಡುವ ಸೈನ್ಯ ಮುಂದಿರುವುದು ವಾಸ್ತವಿಕ ಸತ್ಯ. ಆದರೆ ಒಗಟಿನ ಸತ್ಯ ವಾಸ್ತವಿಕ ಸತ್ಯಕ್ಕೆ ವಿರುದ್ಧವಾದುದು. ಹಾಗಾಗಿ ಇದು ಒಗಟಾಯಿತು. ಒಗಟಿನ ಒಡಲಿಗೆ ಈ ವೈರುಧ್ಯನೇ ಕಾರಣ. ಇಲ್ಲಿ ಪ್ರಕೃತಿಯ ಸಂಗತಿಗಳು ಸಂಸ್ಕೃತಿಯ ವೈರುಧ್ಯದಲ್ಲಿ ಜೋಡಣೆಗೊಳ್ಳಬಹುದು. ಅಂತೆಯೇ ಸಂಸ್ಕೃತಿಯ ಅಂಶಗಳು ಪ್ರಕೃತಿಗೆ ವಿರೋಧವಾಗಿ ಜೋಡಣೆಗೊಳ್ಳಬಹುದು. ರಾಜ ಮತ್ತು ಸೈನ್ಯದ ರಾಜ್ಯ ವ್ಯವಸ್ಥೆಯ ವಾಸ್ತವಿಕ ತಿಳುವಳಿಕೆ ಒಗಟಿನ ಉತ್ತರವನ್ನು ಕಂಡುಕೊಳ್ಳುವ ರೂಪಕವನ್ನು/ಪ್ರತಿಮೆಯನ್ನು ಸೃಷ್ಟಿಸುತ್ತದೆ. ಬಹುಷಃ ಈ ತಿಳುವಳಿಕೆ ವರ್ತಮಾನದ ತಿಳುವಳಿಕೆಯಾಗಿರಬೇಕಾಗಿಲ್ಲ. ಒಗಟಿನ ರೂಪದಲ್ಲಿ ದಾಖಲಿತಗೊಂಡಿರುವ ಪೂರ್ವ ತಿಳುವಳಿಕೆ ವರ್ತಮಾನದಲ್ಲಿ ಬಳೆಕೆಯಾಗುತ್ತಿರುತ್ತದೆ.

ಮರಾಂಡ ಅವರು ವಾದಿಸುವಂತೆ, ಸಾದೃಶ್ಯ ಎನ್ನುವುದು ಮನಸ್ಸಿನ ಒಂದು ಪ್ರಕ್ರಿಯೆ. ಪದಗಳ ನಡುವೆ ಇರುವ ಎರಡು ರೀತಿಯ ಸಂಬಂಧಗಳನ್ನು ಗುರುತಿಸುವ ಮೂಲಕ ಇದು ನಡೆಯುತ್ತದೆ. ಅವುಗಳೆಂದರೆ, ಸಾಮ್ಯ ಮತ್ತು ಸಾಮೀಪ್ಯ (ನಿಕಟತೆ). ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಸಾಮ್ಯತೆ ಮತ್ತು ನಿಕಟತೆಗಳು ಅನುಕ್ರಮವಾಗಿ ರೂಪಕ ಮತ್ತು ಅಜಹಲ್ಲಕ್ಷಣೆಗಳಾಗಿರುತ್ತವೆ. ಮೇಲಿನ ಸಾದೃಶ್ಯದ ಸೂತ್ರದಲ್ಲಿ, ಸಂರಚನಾತ್ಮಕವಾಗಿ ಒಂದೇ ಸ್ಥಾನದಲ್ಲಿರುವ ಪದಗಳು ಒಂದು ರೂಪಕವನ್ನು ನಿರ್ಮಿಸುತ್ತವೆ (A ಮತ್ತು C ಅಥವಾ B ಮತ್ತು D). A 'ಸೂಚಕ'ವಾದರೆ C 'ಸೂಚಿತ'ವಾಗುತ್ತದೆ. ಹಾಗೆಯೇ B 'ಸೂಚಕ'ವಾದರೆ D 'ಸೂಚಿತ'ವಾಗುತ್ತದೆ. ಅಂದರೆ, A ಮತ್ತು C ನಡುವಿನ ಸಂಬಂಧ ರೂಪಕಾತ್ಮಕವಾದುದು.

ಸೂತ್ರದ ಒಂದೇ ಬದಿಯಲ್ಲಿರುವ ಪದಗಳು (A ಮತ್ತು B) ಅಜಹಲ್ಲಕ್ಷಣೆಯ ಸಂಬಂಧವನ್ನು ಹೊಂದಿವೆ. ಅಂದರೆ ಅಜಹಲ್ಲಕ್ಷಣೆಯು ವಾಕ್ಯ ನಿರ್ಮಾಣದ ಮೂಲಕ ಎರಡು ಪದಗಳ ನಡುವೆ ಉಂಟಾಗುವ ಸಂಬಂಧವಾದರೆ, ರೂಪಕವು ರೂಪಾವಳಿಯ ಮೂಲಕ (paradigmatic) ಆಗುವ ಸಂಬಂಧ. ರೂಪಕವೆಂದರೆ, ಎರಡು ಘಟಕಗಳನ್ನು (A/B) ಒಳಗೊಂಡಿರುವ ಒಂದು ಸಂಕೇತ ಎನ್ನಬಹುದು.



A : B :: C : D

ಸಾಮಿಪ್ಯ/ನಿಕಟತೆ ಎಂಬುದನ್ನು ಅಜಹಲ್ಲಕ್ಷಣೆ ಆಧರಿಸುತ್ತದೆ. ಒಗಟಿನ ರೂಪಕಗಳಲ್ಲಿ ಎರಡು 'ವಿರೋಧಿ' ಘಟಕಗಳನ್ನು (ರಾಜೆ ದುಂಬು ಸೈನ್ಯ ಪಿರವು) ಒಂದೇ ಸ್ಥಳಕ್ಕೆ ತಂದು ಅವುಗಳನ್ನು ಒಂದು ದೊಡ್ಡ ಘಟಕದ ಭಾಗಗಳಾಗಿ ತೋರಿಸಲಾಗುತ್ತದೆ. ಮತ್ತು ಅವುಗಳ ನಡುವೆ ನಿಕಟತೆಯನ್ನು ನಿರ್ಮಿಸಲಾಗುತ್ತದೆ (ರಾಜ::ಸೈನ್ಯ). ಆ ಮೂಲಕ ಅವು ಅಜಹಲ್ಲಕ್ಷಣೆಯ ಸಂಬಂಧಕ್ಕೆ ಒಳಗಾಗುತ್ತವೆ. (ಅಜಹಲ್ಲಕ್ಷಣೆ=ಹೇಳಬೇಕಾದ ವಸ್ತುವಿಗೆ ಬದಲಾಗಿ ಲಕ್ಷಣವಾಚಿಯನ್ನು ಉಪಯೋಗಿಸುವುದು). ಆ ಮೂಲಕ ರೂಪಕಗಳು ಮತ್ತು ಅಜಹಲ್ಲಕ್ಷಣೆಗಳು ಒಂದಾಗುತ್ತವೆ. ಇದು ರೂಪಕ ಮತ್ತು ಅಜಹಲ್ಲಕ್ಷಣೆಯ ನಡುವಿನ ಭಿನ್ನತೆಯನ್ನು ಹೋಗಲಾಡಿಸುವುದಿಲ್ಲ. ಆದರೆ ಇದು, ಸಾದೃಶ್ಯದ ಮೂಲಕ ನಡೆಯುವ ಯೋಚನಾ ಪ್ರಕ್ರಿಯೆಯ ಒಂದು ಭಾಗವಾಗಿರುತ್ತದೆ.

ಒಗಟಿನಲ್ಲಿರುವ ಸೂಚಕಗಳು ಅದರ ಪ್ರತಿಮೆಯ ತಿರುಳು ಆಗಿದ್ದರೆ, ಉತ್ತರ ಅದರ ಸೂಚಿತವಾಗಿರುತ್ತದೆ. ಅವುಗಳ ನಡುವಿನ ಸಾಮ್ಯತೆಯು ಸಂರಚನಾತ್ಮಕವಾದುದು ಮತ್ತು ಒಗಟಿನ ಪ್ರತಿಮೆಯು ಈ ಸಾಮ್ಯತೆ ಯಾಕೆ ಮತ್ತು ಹೇಗೆ ಇದೆ ಎಂಬುದನ್ನು ತೋರಿಸುತ್ತಿರುತ್ತದೆ. ಆದರೆ, ಒಗಟಿನ ರೂಪಕಗಳು ದೈನಂದಿನ ಸಾಮಾನ್ಯ ರೂಪಕಗಳಿಗಿಂತ ಭಿನ್ನವಾಗಿರುತ್ತವೆ. ದೈನಂದಿನ ಭಾಷೆಯಲ್ಲಿ ರೂಪಕಗಳು ಸಾಂಪ್ರದಾಯಿಕವಾಗಿರುತ್ತವೆ, ಸಂದಿಗ್ಧತೆಯಿಲ್ಲದವುಗಳಾಗಿರುತ್ತವೆ. ಯಾಕೆಂದರೆ, ಅವು ಸಂವಹನದ ಉದ್ದೇಶಕ್ಕಾಗಿ ಹಾಗೇ ಇರಬೇಕಾದ್ದು.

ಆದರೆ ಒಗಟಿನ ಪ್ರತಿಮೆಯ ಅರ್ಥ, (ಯೋಚನೆಯ) ಆಟದ ಕೆಲವು ನಿಯಮಗಳನ್ನು ಅನುಸರಿಸಿ ಕಂಡುಕೊಳ್ಳಬೇಕಾದುದು. ಕಾವ್ಯಾತ್ಮಕ

ರೂಪಕಗಳಂತೆ, ಒಗಟಿನ ಪ್ರತಿಮೆಗಳು ಹೊಸ ಒಳನೋಟಗಳನ್ನು ನೀಡುತ್ತವೆ. ಆದರೆ, ಕಾವ್ಯಕ್ಕಿಂತ ಭಿನ್ನವಾಗಿ, ಪೂರ್ವನಿಗದಿತವಾದ ವ್ಯವಸ್ಥೆಗಳನ್ನು ನೆನಪಿಗೆ ತಂದುಕೊಳ್ಳುವಂತೆ ಮಾಡುತ್ತವೆ.

ಒಗಟಿನ ಸಂರಚನೆಯನ್ನು ಸಂರಚನಾತ್ಮಕ ಏಕಕವಾಗಿ ಪರಿಭಾವಿಸುವ ಮರಾಂಡ ಅವರು ಒಗಟಿನ ಸಂರಚನೆಯಲ್ಲಿ ಈ ಕೆಳಗಿನ ಭಾಗಗಳನ್ನು ಈ ಹೆಸರುಗಳಿಂದ ಹೆಸರಿಸುತ್ತಾರೆ. ದತ್ತಪದ (ಒಗಟು ರೂಪಕ), ಗುಪ್ತಪದ (ಉತ್ತರ), ವಾಸ್ತವ ಗ್ರಹಿಕೆ, ಮಿಥ್ಯಾ ಗ್ರಹಿಕೆ. ಈ ಪದಗಳು ಮತ್ತು ಗ್ರಹಿಕೆಗಳ ನಡುವಿನ ಅಸಮತೋಲನವನ್ನು ನಿವಾರಿಸುವ ಮೂಲಕ ಒಗಟಿನ ಉತ್ತರವನ್ನು ಕಂಡುಕೊಳ್ಳಬಹುದು.

ಅವನಿಗೆ ಎರಡು ಕಣ್ಣು
ನನಗೆ ಮೂರು ಕಣ್ಣು

ಮರಾಂಡ ಅವರ ವಿಧಾನದ ಪ್ರಕಾರ ಮೇಲೆ ಉಲ್ಲೇಖಿಸಿರುವ ಒಗಟಿನ ಸಂರಚನೆಯನ್ನು ಹೀಗೆ ವಿವರಿಸಬಹುದು

ಆಧಾರ ವಚನಗಳು
Premisses

	ಮಾಹಿತಿಗಳು Terms	ಸ್ಥಿರ Constant	ಚರ Variable
ದತ್ತ ಪದ Given	ಮನುಷ್ಯ [i]	ಕಣ್ಣುಗಳಿವೆ [ii]	ಮೂರು ಪ್ರತಿಮೆ [iv]
ಗುಪ್ತಪದ Hidden	ತೆಂಗಿನಕಾಯಿ [v]		ಎರಡು ಉತ್ತರ [iii]

ಸಂರಚನಾತ್ಮಕ ಏಕಕವಾಗಿರುವ ಒಗಟಿನ ಸಂರಚನೆಯಲ್ಲಿ ಮರಾಂಡ ಪ್ರತಿಪಾದಿಸುವ ಐದು ಅಂಶಗಳು ಈ ರೀತಿ ಇವೆ.

ದತ್ತಪದ–ಸೂಚಕ ಇದು ಒಗಟಿನ ತಿರುಳು

ಸ್ಥಿರ ಗ್ರಹಿಕೆ (constant premises) ಸಾಮಾನ್ಯ ಅಂಶ

ಗುಪ್ತವಾದ ಚರ ಗ್ರಹಿಕೆ (hidden variable)
ದತ್ತ–ಚರ ಗ್ರಹಿಕೆ
ಗುಪ್ತಪದ–ಉತ್ತರ

ಸಂರಚನಾತ್ಮಕ ಅಧ್ಯಯನಕ್ಕೆ ಅನುಕೂಲಕರ ಭಾಷಿಕರೂಪಗಳಾದುದು ರಿಂದಲೇ ಜಗತ್ತಿನ ಬೇರೆ ಬೇರೆ ಭಾಷೆಗಳ ಗಾದೆ ಒಗಟುಗಳ ಬಗ್ಗೆ ಸಂರಚನಾತ್ಮಕ ಅಧ್ಯಯನಗಳ ಮಾದರಿಗಳನ್ನು ಕಾಣಬಹುದು.

ಮರಾಂಡ ಅವರ ಪ್ರಕಾರ ಒಂದು ಭಾಷಾ ಸಂಸ್ಕೃತಿಯು ಮಾಡುವ ವರ್ಗೀಕರಣವನ್ನು ಗ್ರಹಿಸುವ ಮತ್ತು ಒಗಟಿನ ನಿಯಮಗಳನ್ನು ಕಂಡುಕೊಳ್ಳುವ ಮೂಲಕ ಒಂದು ಸೂಕ್ತ ಸಂಸ್ಕೃತಿಯಿಂದ ಯಾವೆಲ್ಲ ಒಗಟುಗಳು ಹುಟ್ಟಿಕೊಳ್ಳಬಲ್ಲವು ಎಂಬುದನ್ನು ಊಹಿಸಲು ಸಾಧ್ಯವಿದೆ (ಪುಟ–೧೩೬) ಪದರಚನಾ ನಿಯಮಗಳನ್ನು ಕಲಿತರೆ, ಸರಿಯಾದ ಪದಗಳನ್ನು ಸೃಷ್ಟಿಸಲು ಸಾಧ್ಯವಿರುವ ಹಾಗೆ ಅಥವಾ ವಾಕ್ಯರಚನಾ ನಿಯಮ ತಿಳಿದುಕೊಂಡರೆ, ಅಂತಹ ವಾಕ್ಯಗಳನ್ನು ರಚಿಸಲು ಸಾಧ್ಯ. ಮರಾಂಡ ವಾದಿಸುವಂತೆ, ಜನರು ಒಗಟುಗಳನ್ನು ಕಲಿತು ನೆನಪಲ್ಲಿ ಇಟ್ಟುಕೊಳ್ಳುವುದಿಲ್ಲ. ಬದಲಾಗಿ, ಒಗಟನ್ನು ಕಟ್ಟುವ ನಿಯಮಗಳನ್ನು ನೆನಪಲ್ಲಿ ಇಟ್ಟುಕೊಳ್ಳುತ್ತಾರೆ. ಒಗಟು ನಿರ್ಮಾಣದ ನಿಯಮಗಳು ಒಂದು ಸಂಸ್ಕೃತಿಯಲ್ಲಿ ಊರ್ಜಿತವಾಗಿವೆಯೆಂದಾದರೆ, ಹೊಸ ಹೊಸ ಒಗಟುಗಳು ಸೃಷ್ಟಿಯಾಗುತ್ತಿರಬೇಕು.

ಮರಾಂಡ ಅವರ ಪ್ರಕಾರ ಒಗಟು ಕಟ್ಟುವ ಪ್ರಕ್ರಿಯೆಯ ನಿಯಮಗಳನ್ನು ಹೀಗೆ ಪಟ್ಟಿ ಮಾಡಬಹುದು:

(೧) ಒಂದು ಮೂಲ ಒಳನೋಟದ ಆಧಾರದಲ್ಲಿ ಎರಡು ಗಣಗಳ ನಡುವಿನ ಸಮತೋಲನವನ್ನು ಸ್ಥಾಪಿಸುವ ರೂಪಕಗಳನ್ನು ಒಗಟುಗಳು ಎನ್ನಬಹುದು. ಈ ಗಣಗಳು ಸಾಮಾನ್ಯವಾಗಿ ಸಾಂಸ್ಕೃತಿಕ ಅಥವಾ ನೈಸರ್ಗಿಕ, ಮಾನವ ಅಥವಾ ಪ್ರಾಣಿಗಳು, ಪ್ರಾಣಿಗಳಲ್ಲೂ ಸಾಕುಪ್ರಾಣಿಗಳು ಅಥವಾ ಕಾಡುಪ್ರಾಣಿಗಳು ಹೀಗೆ ಯಾವುದಾದರೂ ಸಂಗತಿಗಳಾಗಿರುತ್ತವೆ.

(೨) ಎರಡು ಗಣಗಳ ನಡುವಿನ ವೈರುಧ್ಯ ಹೆಚ್ಚಾಗಿದ್ದಷ್ಟು ಒಗಟಿನ ರೂಪಕ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಹೀಗಾಗಿ, ದ್ವಿಗುಣ ವೈರುಧ್ಯಗಳು ಇದ್ದಾಗ ಒಗಟು ಹೆಚ್ಚು ಎದ್ದು ಕಾಣುತ್ತದೆ. (ಉದಾಹರಣೆಗೆ, ಕಾಡುಪ್ರಾಣಿಗಳು

ಮತ್ತು ಸಾಂಸ್ಕೃತಿಕ ಸಂಗತಿಗಳು ಎಂಬಂತೆ ಇದ್ದಾಗ). ಆದರೆ ಯಾವುದೇ ಪೂರ್ವ ಸಿದ್ಧಾಂತ ವರ್ಗೀಕರಣ ಒಂದು ಆರಂಭವಷ್ಟೇ. ಯಾಕೆಂದರೆ, ಒಗಟುಗಾರರು ಇಂತಹ ವರ್ಗೀಕರಣವನ್ನು ಒಡೆಯುತ್ತಾರೆ.

(೩) ಆರಂಭದ ಮೂಲ ಒಳನೋಟವು ಎರಡು ಗಣಗಳಿಗೂ ಸಮಾನವಾದ ಒಂದು ಅಂಶವನ್ನು ಆಧರಿಸಿರುತ್ತದೆ.

(೪) ಅತೀ ಸರಳ ಒಗಟುಗಳು ತಿರುಳು ವಾಕ್ಯಗಳೆನ್ನಬಹುದು. ಅಲ್ಲಿ ನಾಲ್ಕು ಭಾಗಗಳಿರುತ್ತವೆ; ಎರಡು ಗಣಗಳನ್ನು ಹೋಲಿಸಲಾಗುತ್ತದೆ. ಅವು ಎರಡು ಪದಗಳೆನ್ನಬಹುದು. ಇನ್ನೊಂದು ಸಮಾನ ನಿಯೋಗ ಅಥವಾ ಅಂಶ. ಆಮೇಲೆ ಒಂದು ಮಿಥ್ಯಾ ಗ್ರಹಿಕೆ, ಆ ಬಳಿಕ ಉತ್ತರ.

(೫) ಸಂಕೇತದ ಒಳಗಿರುವ ಉತ್ತರವನ್ನು ಕಂಡುಕೊಳ್ಳುವುದೆಂದರೆ, ಮಿಥ್ಯಾಗ್ರಹಿಕೆಯನ್ನು ಗುರುತಿಸುವುದು ಮತ್ತು ಗ್ರಹಿಕೆಯು ನಿಜಗೊಳ್ಳುವ ಪದವನ್ನು ಗುರುತಿಸುವುದು. ಇಂತಹ ಅನೇಕ ಪದಗಳನ್ನು ಕಂಡುಕೊಳ್ಳಲು ಸಾಧ್ಯವೆಂದಾದರೆ, ಆ ಒಗಟಿಗೆ ಅನೇಕ ಉತ್ತರಗಳಿರುತ್ತವೆ.

(೬) ಎರಡು ಗಣಗಳ ಶೋಧನೆ ಮತ್ತು ಪರಸ್ಪರ ಹೋಲಿಸಬಹುದಾದ ಅಂಶಗಳನ್ನು ಕಂಡುಕೊಳ್ಳುವ ಮೂಲಕ ಒಗಟಿನಲ್ಲಿ ಪರಿವರ್ತನೆ ನಡೆಯುತ್ತದೆ. ಹೆಚ್ಚು ಹೆಚ್ಚು ಸಮಾನ ಅಂಶಗಳನ್ನು ಗುರುತಿಸಲು ಸಾಧ್ಯವಾದಾಗ ಹೆಚ್ಚು ಹೆಚ್ಚು ಪರಿವರ್ತನೆಗಳನ್ನು ಕಟ್ಟಬಹುದು. ಎಲ್ಲ ಸಾಮಾನ್ಯ ಅಂಶಗಳು ಮುಗಿಯುವವರೆಗೆ ಪರಿವರ್ತನೆಗಳು ಮುಂದುವರಿಯಬಹುದು.

(೭) ಹೀಗಾಗಿ 'ಒಗಟ'ನ್ನು ಕಟ್ಟುವುದೆಂದರೆ, ಒಂದು ಭಾಷಿಕ ಸಮಾಜದಲ್ಲಿ ನಡೆಯುವ ವರ್ಗೀಕರಣ ಪ್ರಕ್ರಿಯೆಯ ಒಂದು ವ್ಯವಸ್ಥಿತ ಶೋಧನೆ ಎಂದು ಹೇಳಬಹುದು.

(೮) ಒಗಟು ರೂಪಕಗಳ ವಿಶಿಷ್ಟತೆಯೆಂದರೆ, ಅವುಗಳು ತಿರುವು ಮುರುವುಗೊಳ್ಳಬಲ್ಲವು. ಹೀಗಾಗಿ ಅವು ದೈನಂದಿನ ಸಾಮಾನ್ಯ ರೂಪಕಗಳಿಗಿಂತ ಭಿನ್ನ.

(೯) ಹೋಲಿಸುವ ಗಣಗಳಿಗೆ (ಸೆಟ್) 'ಪೂರಕ' ಗಣಗಳು ಇರುವುದಾದರೆ, (ಗಂಡು ಒಂದು ಗಣ, ಹೆಣ್ಣು ಪೂರಕ ಗಣ ಅಥವಾ ಹೆಣ್ಣಿಗೆ ಗಂಡು) ಇಂತಹ ಒಗಟುಗಳಿಗೆ ಪರಿವರ್ತನೆ ಕೂಡಾ ಇರುತ್ತದೆ.

(೧೦) ಈ ಮೇಲಿನ ನಿಯಮಗಳ ಮೂಲಕ ಒಗಟುಗಳು ಉತ್ಪಾದನೆಯಾಗುವ ಪ್ರಕ್ರಿಯೆ ಹೇಗಿರುತ್ತದೆ ಎಂದರೆ, ಒಂದು ಸಂಸ್ಕೃತಿಯೊಳಗಿನ 'ವರ್ಗೀಕರಣ'ವನ್ನು ತಿಳಿದುಕೊಂಡರೆ, ಸಾಧ್ಯವಿರುವ ಎಲ್ಲ ಒಗಟುಗಳನ್ನು ಊಹಿಸಬಹುದು. ಹೀಗೆ ಸೃಷ್ಟಿಸಲಾದ ಒಗಟುಗಳ ಸಂಖ್ಯೆ ಆ ಸಂಸ್ಕೃತಿಗಳಲ್ಲಿ ಇರುವ ಒಗಟುಗಳಿಗಿಂತ ಹೆಚ್ಚಾಗಿರಬಹುದು. ಯಾಕೆಂದರೆ, ಭಾಷಿಕ ರೂಪಗಳಂತೆಯೇ, (ಪದ, ವಾಕ್ಯ) ಇಲ್ಲಿಯೂ ಒಂದು ಸಂಸ್ಕೃತಿಯು ಸಾಧ್ಯವಿರುವ ಎಲ್ಲ (ಒಗಟಿನ) ನಮೂನೆಗಳನ್ನು ವಾಸ್ತವದಲ್ಲಿ ಬಳಸಿಕೊಳ್ಳುವುದಿಲ್ಲ.

ಮಾನವಶಾಸ್ತ್ರಜ್ಞ ಸ್ಟಾನ್ಲಿ ತಂಬಯ್ಯ ಆಚರಣೆಯೊಂದು ಆವಿಷ್ಕಾರಗೊಳ್ಳುವ ವಿನ್ಯಾಸವನ್ನು ವಿಶ್ಲೇಷಿಸುವ ಸಂದರ್ಭದಲ್ಲಿ, ವಿಜ್ಞಾನಪೂರ್ವದ ಪಾರಂಪರಿಕ ಸಮಾಜ ಮತ್ತು ವಿಜ್ಞಾನಕೇಂದ್ರಿತ ಆಧುನಿಕ ಸಮಾಜಗಳ ನಡುವಿನ ಯೋಚನಾ ಸ್ವರೂಪದಲ್ಲಿ ಮೂಲಭೂತ ವ್ಯತ್ಯಾಸಗಳು ಇವೆಯೇ ಎನ್ನುವ ಚರ್ಚೆಯನ್ನು ಮಾಡುತ್ತಾನೆ. ಈತನ ವಾದದ ಪ್ರಕಾರ ಎಲ್ಲ ಕಾಲದಲ್ಲೂ ಮಾನವ ಸಾದೃಶ್ಯ ರೂಪದಲ್ಲಿಯೇ ಯೋಚಿಸಿರುತ್ತಾನೆ. ಆದ್ದರಿಂದ ಮಾಂತ್ರಿಕತೆ ಮತ್ತು ವಿಜ್ಞಾನದ ಅಭಿವ್ಯಕ್ತಿಗಳೆರಡರಲ್ಲೂ ಸಾದೃಶ್ಯ ಸ್ವರೂಪದ ಯೋಚನೆ ಹಾಗೂ ಕ್ರಿಯೆಗಳು ಒಳಗೊಂಡಿರುತ್ತವೆ. ಹೀಗಿದ್ದರೂ, ತಂಬಯ್ಯ ಪ್ರಕಾರ, ಮಾಂತ್ರಿಕತೆ ಮತ್ತು ವಿಜ್ಞಾನದ ಅಭಿವ್ಯಕ್ತಿಗಳು ಬೇರೆ ಬೇರೆ ಮಾದರಿಯ ಸಾದೃಶ್ಯಗಳ ಲಕ್ಷಣಗಳನ್ನು ಒಳಗೊಂಡಿರುತ್ತವೆ. ಈ ಕಾರಣದಿಂದ ಅವುಗಳ ಸಮಂಜಸತೆಯನ್ನು ಒಂದೇ ಮಟ್ಟದ ಮಾಪಕಗಳಿಂದ ಅಳೆಯುವುದು ಸಮರ್ಪಕವೆನಿಸದು. ವಿಜ್ಞಾನಪೂರ್ವದ ಮಾಂತ್ರಿಕತೆಯನ್ನು ಇಂದ್ರಿಯಾನುಭವಕ್ಕೆ ದಕ್ಕುವ ಪ್ರಮಾಣನಿಷ್ಠ ವೈಜ್ಞಾನಿಕ ವಿಧಾನಕ್ರಮಗಳಿಂದ ಪರಿಶೀಲಿಸಿದಲ್ಲಿ ಅವುಗಳ ಗುಣಾತ್ಮಕ ಮತ್ತು ಸೃಜನಾತ್ಮಕ ಮೌಲ್ಯಗಳು ಕೆಲವೊಮ್ಮೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತವೆ ಮತ್ತು ಅವುಗಳ ಪ್ರೇರಕ ಮೌಲ್ಯಗಳು ಅಪಮೌಲ್ಯಗೊಳ್ಳುತ್ತವೆ. ತಂಬಯ್ಯ ವಾದಿಸುವಂತೆ, ಮಾಂತ್ರಿಕತೆ ಅನ್ವಯಿಕ ವಿಜ್ಞಾನದ ಪರಿಮಿತಿಯೊಳಗೆ ಬರುವಂತಹದಲ್ಲ.

ಕನ್ನಡಂಗಳ ಒಗಟುಗಳು ಜನಪದ ಸಮಾಜದ ಸಾದೃಶ್ಯದ ಯೋಚನಾಕ್ರಮವನ್ನು ರೂಪಕವಾಗಿಸುತ್ತಿವೆ. ಪ್ರಕೃತಿ ಮತ್ತು ಸಂಸ್ಕೃತಿಯ ಸಾದೃಶ್ಯದ ಜನಪದ ಗ್ರಹಿಕೆಯ ನೆಲೆಗಳು ಒಗಟುಗಳಲ್ಲಿ ರೂಪಕಾತ್ಮಕತೆಯನ್ನು ಹೊಂದುತ್ತವೆ. ಲೋಕದ ಇರವನ್ನು ತನ್ನ ಅನುಭವಕ್ಕೆ ತಂದುಕೊಳ್ಳುವ ಸಂದರ್ಭದಲ್ಲೆಲ್ಲ ಮಾನವ ಭಾಷೆಯ ವಿವರಣೆಯ ಮೂಲಕ ನಿರಂತರವಾಗಿ

ತನ್ನ ಅನುಭವಕ್ಕೆ ತಂದುಕೊಳ್ಳುವ ಪ್ರಯತ್ನವನ್ನು ಮಾಡುತ್ತಿರುತ್ತಾನೆ. ಭಾಷೆಯ ವಿವರಣೆಯ ಮೂಲಕ ಎಲ್ಲಿ ತನ್ನ ಅನುಭವಕ್ಕೆ ತಂದುಕೊಳ್ಳುವುದಕ್ಕೆ ಸಾಧ್ಯವಾಗದಿರುವ ಸಂಗತಿಗಳನ್ನು ಆತ ಸಾದೃಶ್ಯದ ಗ್ರಹಿಕೆಯ ಮೂಲಕ ಅವನ್ನು ತನ್ನ ಅನುಭವಕ್ಕೆ ತಂದುಕೊಳ್ಳುವ ಪ್ರಯತ್ನವನ್ನು ಮಾಡುತ್ತಿರುತ್ತಾನೆ. ಸಾದೃಶ್ಯದ ಗ್ರಹಿಕೆಗಳು ಭಾಷೆಯಲ್ಲಿ ರೂಪಕಗಳನ್ನು ಪ್ರತಿಮೆಗಳನ್ನು ಸೃಷ್ಟಿಸುತ್ತವೆ. ಆ ಮೂಲಕ ಶಬ್ದಕ್ಕೆ ಭಾಷೆಗೆ ಮಾಂತ್ರಿಕತೆಯನ್ನು ಒದಗಿಸುತ್ತದೆ. ಮಾಂತ್ರಿಕತೆಯೇ ಪ್ರಧಾನವಾಗಿರುವ ವಿಜ್ಞಾನಪೂರ್ವ ಸಮಾಜದ ರೂಪಕಾತ್ಮಕ ಗ್ರಹಿಕೆಯ ನೆಲೆಗಳನ್ನು ನಾವು ಈ ಬಗೆಯಲ್ಲೇ ಗ್ರಹಿಸಬೇಕಾಗಿದೆ. ಆ ಮೂಲಕ ಒಗಟು ಪ್ರತಿನಿಧಿಸುವ ಜನಪದ ಸಮಾಜವನ್ನು ಗ್ರಹಿಸಬೇಕಾಗಿದೆ. ವಸಾಹತುಶಾಹಿ ಆಧುನಿಕತೆ ಅತಾರ್ಕಿಕ, ಅವೈಜಾನಿಕವೆಂದು ಅಪಮೌಲ್ಯಗೊಳಿಸಿದ 'ಜನಪದ' ಸಮಾಜವನ್ನು ಅವುಗಳ ರೂಪಕಾಭಿವ್ಯಕ್ತಿಯ ಮೂಲಕ ಜ್ಞಾನಪದ ಸಮಾಜಗಳಾಗಿ ಮರುಸಂಯೋಜಿಸಬೇಕಾಗಿದೆ. ವಸಾಹತುಶಾಹಿ ಆಧುನಿಕತೆಯ ವ್ಯಕ್ತಿನಿಷ್ಠ ಅಹಮಿಕೆಯನ್ನು ದಾಟಿಕೊಳ್ಳುವುದಕ್ಕೆ ವಿಜ್ಞಾನಪೂರ್ವ ಜನಪದದ ಸಾಮುದಾಯಿಕ ರೂಪಕಾತ್ಮಕತೆಯ ಲೋಕಗ್ರಹಿಕೆ, ಲೋಕಜ್ಞಾನದ ತಿಳಿವನ್ನು ಹೊಂದಬೇಕಾಗಿದೆ. ಕನ್ನಡಂಗಳ ಒಗಟುಗಳ ಸಂಪಾದನೆ ಈ ಬಗೆಯಲ್ಲಿ ಒಂದು ವಿನೀತ ಪ್ರಯತ್ನ ಅಷ್ಟೇ.

ಪ್ರೊ. ಬಿ. ಶಿವರಾಮ ಶೆಟ್ಟಿ
ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ– ೫೭೪ ೧೯೯

ಪರಿವಿಡಿ

೧. ಕನ್ನಡಂಗಳ ಒಗಟುಗಳು ೧–೫೬೭

೨. ಸಂಪಾದಿತ ಒಗಟು ಕೃತಿಗಳು ೫೬೮–೫೬೯

೩. ಪರಾಮರ್ಶನ ಗ್ರಂಥಗಳು ೫೭೦–೫೭೨

ಸಾವಿರಾರು ಹಕ್ಕಿಗಳು
ಒಮ್ಮೆಲೇ ನೀರಿಗಿಳಿಯುತ್ತವೆ (ವಾಲಿ ೫–೩೦)
ಅಕ್ಕಿ ಕಾಳು

ಬೆಟ್ಟ ಉಂಟಿತ್ತು ಬಿದಿರು ತಡೆದಿತ್ತು (ಲ ಗೌ ೭೮೬)
ಅಕ್ಕಿ ಬಸಿಯುವುದು

ಒಂದು ಮನೆ ಕೆಳಗೆ ಹುಲ್ಲು ಮುಲ್ಗಳು (ಶಾಂ ನಾ ೨೯೩)
ಅಕ್ಕಮೂಟೆ

ಅಕ್ಕಕ್ಕಾ ಇವನೆಂತಾ ಚಲುವಾ
ಚಲುವನಾದರೇನು ನಿಲುವಂಗಿ ತೊಡುವಾ
ನಿಲುವಂಗಿ ತೊಟ್ಟರೇನು ರಾಜ್ಯವನಾಳುವಾ
ರಾಜ್ಯವನಾಳಿದರೇನು ನೀರಿಗೆ ಬಿದ್ದರೆ ಸಾಯುವಾ (ಶಾಂ ನಾ ೨೯೨)

ಕರೆಹೂ ಕಯ್ಯಲ್ಲಿ
ಹೆಕ್ಕಲು ಬರುವದಿಲ್ಲ
ಬಾಯಲ್ಲಿ ಹೆಕ್ಕಲು ಬರುತ್ತದೆ (ಶಾಂ ನಾ ೨೯೧)

ಬಿಳಿಯ ಕಣ್ಣಿಗೆ ಕರಿಯ ಕಪ್ಪು (ಲ ಗೌ ೭೬೯)
ಅಕ್ಷರ

ಬಿಳಿಯ ಹೊಲದಲ್ಲಿ
ಕರಿಯ ಬೀಜವನ್ನು
ಹಾಕಿರುವುದು ಕೈಯಲ್ಲಿ
ಆರಿಸುವುದು ಬಾಯಿಯಲ್ಲಿ (ಚಂ ಸೆ ೧೮೫೫)
ಅಕ್ಷರ–ಓದು

ಬಿಳಿ ಹೊಲದಾಗ ಕರೆ ಸಾಲು (ಇ ೭೫೪೪)
ಅಕ್ಷರಗಳು

ಸೋಲಾಪುರ ಬೀಜಾ
ಬಿತ್ತಾಕ ಬತ್ತದ ಕಿತ್ತಾಕ ಬರಾಲ (ಲಠ್ಠೆ ಭಾಗ ೫, ೨೮೭)
ಅಕ್ಸಾರ

ಕಾಯಿಲೆ ಇಲ್ಲ
ಕಸಾಲೆ ಇಲ್ಲ
ಕೊರಗೋನು ಯಾರು (ಸು ೨೦೪)

ಜಗಳಿಲ್ಲ ಜೂಟಿಲ್ಲ
ಬಡಿತಾನ ಒದೀತಾನ
ಬ್ಯಾನಿಲ್ಲ ಬ್ಯಾಸರಿಕಿಲ್ಲ
ನೆಳ್ಳತಾನ ತಿಣಕತಾನ (ವಾಲಿ ೭–೨೧)

ಜಗಳಿಲ್ಲ ತಂಟೆಯಿಲ್ಲ
ಹೊಡಿತಾನ ಒದೀತಾನ
ಬ್ಯಾನಿಲ್ಲ ಬ್ಯಾಸರ್ಕಿಲ್ಲ
ನೆಳ್ಳತಾನ ತಿಣಕತಾನ (ಲಠ್ಠೆ ಭಾಗ ೫–೧೬೧)

ಬ್ಯಾನಿಲ್ಲದ ನೆಳ್ಳತಾನ (ಲಠ್ಠೆ ಭಾಗ ೫–೨೩೨)
ಅಗಸ

ಕತ್ತಲಾಯ್ತು ಪೋರಿ ಹೊರಗಾಯ್ತು
ಬೆಳಕಾಯ್ತು ಪೋರಿ ಒಳಗಾಯ್ತು (ವಾಲಿ ೩–೭೯)

ನಸುಕಿನ್ಯಾಗೆದ್ದು ನಿದ್ದಿಗಣ್ಣಾಗ ಅದನ
ಹಿಡಿಯದ ಹೊರತು ಗತಿಯಿಲ್ಲ (ಇ ೬೩೧)

ಬೆಳಗಾತು ಹೆಣ್ಣು ಒಳಗಾತು (ಇ ೭೬೭)

ಹಗಲ ಹೊತ್ತ ಒಳಗ
ರಾತ್ರಿ ಹೊತ್ತ ಹೊರಗ (ಲಠ್ಠೆ ಭಾಗ ೫ –೨೯೩)
ಅಗಳಿ

ಅಟ್ಟು ಉಂಡು ಸಿಕ್ಕಿ ಕೊಂಡ್ರು (ಲ ಗೌ–೩೬)

ಎದ್ದೇಟ್ಗೆ ಹೋಗಿ ಅದನ್ನೇ ಮುಟ್ತಿ (ಲ ಗೌ– ೨೨೨)

ಹಗಲೆಲ್ಲಾ ಒಳಗಿರುತ್ತೆ
ರಾತ್ರಿಯಾಗುತ್ತಲೆ ಹೊರಗೆ ಬರುತ್ತೆ (ಲ ಗೌ–೯೭೧)
ಅಗುಳಿ

ಜ್ವರಾ ಇಲ್ಲದೆ ನೆಳ್ಳಾವಾ
ಚಳಿ ಇಲ್ಲದೆ ಬೆಂಕಿ ಕಾಸಾವಾ
ಜಗಳ ಇಲ್ಲದೆ ಜುಟ್ಟ ಹಿಡ್ಯಾಂವಾ
ಇವರು ಯಾರು (ವಾಲಿ ೬–೪೪)
ಅಗಸ, ಕಮ್ಮಾರ, ಹಜಾಮ

ರೋಗವಿಲ್ಲದೆ ನರಳುವವನೊಬ್ಬ
ಸಳಿ ಇಲ್ಲದೆ ಬೆಂಕಿ ಕಾಯುವವನೊಬ್ಬ
ತಪ್ಪಿಲ್ದೆ ಜುಟ್ಟು ಹಿಡಿಯುವನೊಬ್ಬ (ರಾಗೌ ೪೨೩)
ಅಗಸ, ವಾಜ, ಹಜಾಮ

ತಾಯಿ ಮಗಳು ಚೊಚ್ಚಲ ಬಸಿರು (ಇ ೫೭೫)
ಅಗಿ–ಸಸಿ

ಕೆಂಪು ಕೆನ್ನೆ ಹುಡುಗಿ
ಎಲ್ಲರ ಮನೆ ಹುಡುಗಿ
ಮುಟ್ಟಾಕ ಹೋದರ ಕಟ್ಟ ನ ಕಡಿತಾಳ (ಇ ೪೫೨)
ಅಗ್ನಿ

ಗಿಡ್ಡ ಹುಡುಗಾ ಗುಡ್ಡಾ ನಡುಗಿಸತಾನ (ಇ ೪೮೬)
ಅಟಂಬಾಂಬು

ಬಾಯಾಗ ಕುಂಡಿ
ಕುಂಡ್ಯಾಗ ಬಾಯಿ (ವಾಲಿ ೩– ೧೭)

ಬಾಯಿ ಮ್ಯಾಲ ಬಾಯಿ (ಲ ಗೌ ೭೫೧)
ಅಡಕಲು

ಅಂಕ ಡೊಂಕ 'ಅ'
ಅವನ ತಮ್ಮ 'ಸಾ'
ನಾಲ್ಕು ಮೂಲೆ 'ಬೆ' (ಲಠ್ಠೆ ಭಾಗ ೪–೨೯)
ಅಡಕಿ, ಸಾಸವಿ, ಬೆಲ್ಲ

ಕೆರಿದಂಡಿಮ್ಯಾಲ
ಮೂಗಾರ ಸೂಳೇರ
ಎದರ ಮಿಂಡ ಬಂದಂತ
ಕೆರ್ಯಾಗ ಹಾರಿಕೊಂಡ್ರ
ಒಬ್ಬಾಕಿ ಮುಳಗಿದಳ
ಒಬ್ಬಾಕಿ ಕರಗಿದಳ
ಒಬ್ಬಾಕಿ ತೇಲಿದಳ (ಲಠ್ಠೆ ಭಾಗ ೪–೭೯)
ಅಡಕಿ, ಸುಣ್ಣ, ಎಲಿ

ಅಂಬಾರದ ಹಣ್ ತಗಂಡು
ಶಿವನ ಪಾದ ತಗಂಡು
ಮಲ್ಗೆ ಹೂ ತಕುಂಡು
ಕೆರೆ ಬತ್ತಿದ ಗಳಿಗ್ಗೆ ಬಾ (ನಾ ಗೌ ೩೫)
ಅಡಕೆ, ಎಲೆ, ಸುಣ್ಣ, ದೀಪ

ಆರು ತಿಂಗಳಿಗೊಂದು ಬೆಳೆ
ಮೂರು ತಿಂಗಳಿಗೊಂದು ಬೆಳೆ
ದಿನೊಪ್ಪತ್ತಿಗೆ ಬರುವುದೊಂದು ಬೆಳೆ
ಅವುನ್ನೆಲ್ಲಾ ಒಂದು ಕಣಕ್ಕಾಕಿ
ಮುವ್ವತ್ತೆರಡು ಎತ್ತು ಕಟ್ಟಿ ಅರುದ್ರೆ
ಎಲ್ಲ ಕೆಂಪು ಧಾನ್ಯವಾಗುತ್ತೆ (ನಾ ಗೌ ೪೬)
ಅಡಕೆ, ಎಲೆ, ಸುಣ್ಣ, ಬಾಯಿ, ಹಲ್ಲು, ತಾಂಬೂಲ

ಆಕಾಶದ ಗಿರಿಗಿರಿ ಮೊಟ್ಟೆ
ಕೇಸುನಾಯ್ಕ್ನ ಕತ್ತೆ
ಬೆಟ್ನ ತುದಿ ಬೆಣ್ಣೆ (ಶಾಂ ನಾ ೧೩೨)
ಅಡ್ಕೆ–ಎಲೆ–ಸುಣ್ಣಾ

ಅಕ್ಕಿ ಅಕ್ಕಿ ಅಗಳಕ್ಕಿ
ತಾಮ್ರದ ಅಕ್ಕಿ ತಂಗಿಯಲ್ಲೊಡೆದು
ಜಂಪಲಮ್ಮನ ಜೊಂಪೆಯಲ್ಲಿ ಕಟ್ಟ
ಆರು ತಿಂಗಳ ಅನ್ನದ ಬುತ್ತಿ (ಲ ಗೌ ೧೨)

ಶುಕ್ರಿ ದನ ನಿಂತುಕೊಂಡು ಕರು ಹಾಕ್ತದೆ (ಲ ಗೌ ೯೦೧)

ಉದ್ದೊಂದು ಮರದಲ್ಲಿ ಕಾವಿ ಸಂನ್ಯಾಸಿ (ಸು ೯೮)
ಅಡಕೆಕಾಯಿ

ತಾಯಿ ಪಾತಾಳಕ್ಕೆ
ತಂದೆ ಆಕಾಶಕ್ಕೆ
ಮಗ ವ್ಯಾಪಾರಕ್ಕೆ
ತೊಟ್ಟಿಲಿನ ಶಿಶು ದೇವರಿಗೆ (ಇ ೫೮೨)
ಅಡಕೆ ಮರ ಅಥವಾ ತೆಂಗಿನ ಮರ (ಬೇರು, ತುದಿ, ಕಾಯಿ, ಗರಿ)

ಆಟ್ಟಂ ಬಟ್ಟಂ ಆರ್ಯಾಣನಾದಾಗ
ಅಣ್ಣ ಅಟ್ಟಾ ಏರ್ಯಾನ (ಇ ೬೧)

ಅರಸಾನ್ಹಕ್ಕಿ ರೆಕ್ಕೆ ಕೊಯ್ದರೆ ಬಟ್ಟಲ ತುಂಬ ರೊಕ್ಕ (ಇ ೧೨೬)

ಆನೇ ಹೊಟ್ಟೀಲಿ ಅರವತ್ತು ರೊಟ್ಟಿ (ರಾ ಗೌ ೭೭)

ಉದ್ದ ಮರದ ಮೇಲೆ ಕೆಂಪು ಸನ್ಯಾಸಿ (ಚಂ ಸೆಟ್ಟಿ ೪೩)

ಒಳನಾರು ಹೊರನಾರು ತೆಂಗು ನಾನಲ್ಲ
ಒಳಗೆ ಹರಳುಂಟು ಮಾಣಿಕ್ಯವಲ್ಲ
ಹಾಗಾದರೆ ನಾನು ಯಾರು
ಯಳ್ಯಾಗಸ್ರು ಅದಕ್ಕಾ
ಇಪ್ಪತ್ತೆಂಟು ಯೆಸ್ರು (ಮಂ ೧.೫–೭೯)
ಅಡಿಕೆ

ಅಪ್ಪ ಅಪ್ಪ ಮರದುದ್ದ ನೋಡು
ಹಾರು ಬಡ್ಡಿಮಗ ಹತ್ತೂದ ನೋಡು
ಹತ್ತಿಂಬೆಕಾಯ ಕುಯ್ಯೋದ ನೋಡು
ಕೂದಿಂಬೆಕಾಯಿ ಅಗಿಯೋದು ನೋಡು
ಅಗಿದಿಂಬೆಕಾಯ ಉಗಿಯೋದು ನೋಡು (ರಾ ಗೌ ೨೬)

ಕಡಕಡ ಕಪ್ಪು
ನಡುತಾವ್ ಕೆಂಪು
ಯಮಕಳ ಕೆಲ್ಸ
ಎಡಗೈಲಿ ತುರುಕು (ರಾ ಗೌ ೧೬೫)

ನಾಲ್ಕು ವಸ್ತು ನಾಲ್ಕು ಬಣ್ಣ
ಪಿಂಜರೆಯಲ್ಲಿ ಸೇರಿದರೆ
ಒಂದೇ ಬಣ್ಣ (ರಾ ಗೌ ೩೦೨)
ಅಡಿಕೆ, ಎಲೆ

ಆಕಾಶದಲ್ಲಿ ಗಂಡು
ಅಂತರದಲ್ಲಿ ಹೆಣ್ಣು
ಭೂಮಿಯಲ್ಲಿ ಕೂತಿರೋದು ಮಣ್ಣು
ಒಡೆದರೆ ಗಜಲಿಂಬೆ ಹಣ್ಣು
ಒಡೆದರೆ ಒಡೀಬಹುದು
ಒಡಿದಿದ್ದರೆ ಮೂರ್ದಿನ
ನೀರು ತನಕ್ಕೊಂಡು ಬಿದ್ದಿರಬೋದು (ರಾ ಗೌ ೬೮)

ಆರು ತಿಂಗಳಿಗೊಂದು ಬೆಳೆ
ಮೂರು ತಿಂಗಳಿಗೊಂದು ಬೆಳೆ
ದಿನ ಒಪ್ಪತ್ತಿಗೆ ಒಂದು ಬೆಳೆ
ಒಕ್ಕಣೆ ಒಂದೇ ಕಣ ಒಂದೇ ಹೊತ್ನಲ್ಲಿ (ಲ ಗೌ ೧೫೭)
ಅಡಿಕೆ, ಎಲೆ, ಸುಣ್ಣ

ಬೆಂದದ್ದೊಂದು ಬೇಯದ್ದೊಂದು
ಸುಟ್ಟದ್ದೊಂದು ಸುಡದ್ದೊಂದು (ಸು ೩೯೨)
ಅಡಿಕೆ, ಎಲೆ, ಸುಣ್ಣ, ಹೊಗೆಸೊಪ್ಪು

ಉದ್ದ ಮರದಲ್ಲಿ ಕೆಂಪು ಸನ್ಯಾಸಿ (ರಾ ಗೌ ೧೦೧)

ಉದ್ದಾನೆ ಮರದಲ್ಲಿ ಕೆಂಪು ಮನುಷ್ಯರು (ಲ ಗೌ ೧೯೮)

ಒಳನಾರು ಹೊರನಾರು ತೆಂಗು ತಾನಲ್ಲ
ಒಳಗೆ ಹರಳುಂಟು ಮಾಣಿಕ್ಯವಲ್ಲ
ಇದ ಹೇಳಬಲ್ಲ ಜಾಣರಿಗೆ ಅರಿದಿಲ್ಲ (ಲ ಗೌ ೨೯೫)
ಅಡಿಕೆ ಕಾಯಿ

ಸೊಯ್ಯಾನೆ ಬಂತು ಮಟಗಿಕೊಂಡು ಕುಂತ್ಯು (ಇ ೯೭೯)
ಅಡಿಕೆ ಗೊನೆ

ಉಂಡ ಉಟ್ಟ
ಬಿಲಕ್ಕೆ ಕೈ ಇಕ್ಕಿದ (ಸು ೧೦೨)
ಅಡಿಕೆ ಚೀಲ

ಅಪ್ಪ ಆಕಾಶಕ್ಕೆ ಹೋದ್ರ
ಅವ್ವ ಪಾತಾಳಕ್ಕೆ ಹೋದ್ಲು
ಮಗ ವ್ಯಾಪಾರಕ್ಕೆ ಹೋದ್ರ
ಮಗಳು ಮದುವೀಗ ಹೋದ್ಲು (ಇ ೧೦೫)
ಅಡಿಕೆ, ಬಾಳೆ

ಅಪ್ಪ ಆಕಾಶಕ್ಕೆ
ಅವ್ವ ಪಾತಾಳಕ್ಕೆ
ಮಗ ವ್ಯಾಪಾರಕ್ಕೆ
ಮಗಳು ಮದುವೆಗೆ (ರಾ ಗೌ ೨೯)

ಒಂಟ್‌ಕಾಲ್ ಕೊಕ್ಕರೆಗೆ ನೂರೆಂಟ್ ಮೊಟ್ಟೆ (ಜೀಶಂಪ ೮೫)

ಒಂಟ್‌ಕಾಲ್ ಪಕ್ಷಿ ಒಂಭೈನೂರು ತತ್ತಿ ಜೀಶಂಪ ೮೮)

ಒಂಟಿ ಕಾಲಿನ ಹಕ್ಕಿಗೆ ಒಂಭೈನೂರು ಮೊಟ್ಟೆ (ಚಂ ಸೆ ೬೨)

ಒಂಟಿ ಕಾಲು ಕೊಕ್ಕೆರೆಗೆ ನೂರಾ ಎಂಟು ತತ್ತಿ (ಇ ೨೬೬)

ತಂದೆ ಪಾತಾಳಕ್ಕೆ ಹೋಗಿದ್ದಾನೆ
ತಾಯಿ ಆಕಾಶಕ್ಕೆ ಹೋಗಿದ್ದಾಳೆ
ಅಣ್ಣ ಪೇಟೆಗೆ ಹೋಗಿದ್ದಾನೆ
ಅಕ್ಕ ಮದುವೆಗೆ ಹೋಗಿದ್ದಾಳೆ (ಚಂ ಸೆ ೧೩೩)
ಅಡಿಕೆ ಮರ

ಅಪ್ಪಾ ಉದ್ದಣಾ ಅವ್ವೆ ಸಿಂಗಾರ್ಸೋಳೆ
ಮಗಾ ಗುಡ್ಡುಡ್ಡೆಂಪಣ್ಣಾ (ಶಾಂ ನಾ ೧೨೮)

ಅಪ್ಪೋತ್ಯಾ ಆಕಾಸ್ಕೆ
ಅವ್ವೋತೀದ್ಮುದೀಕೆ
ಅಣ್ಣೋತ್ಯಾ ಅಂಗ್ಡೀಗೆ (ಶಾಂ ನಾ ೧೨೯)

ಅಂಬಾರ್ತುರಿಗೆ ಗಿಡ್ಗಾ ಮೊಟ್ಟೀ ಹಾಕ್ತೀದ (ಶಾಂ ನಾ ೧೩೦)
ಅಡ್ಕಿ ಮರಾ

ಅಬ್ಬೆ ಪಾತಾಳಾ ಅಪ್ಪಾ ಆಕಾಶಾ
ಮಗಾ ಯಾಪಾರಿ ಮಗು ಸುಂದರಿ (ಶಾಂ ನಾ ೧೨೩)

ಅಪ್ಪಾ ಉದ್ಕಾಲ್ಬಂಟಾ ಅಬ್ಬೆ ಸಿಂಗಾರ್ಗವ್ರಿ
ಮಗಾ "ಚುಟ್ಟಾ ಬುಡೆ"(ಚಿಣಿ ಪಿಣಿ ಪೊರಾ) (ಶಾಂ ನಾ ೧೨೪)

ಅಪ್ಪಾ ಜಾಂಬವಾ
ಅಬ್ಬೆ "ಸಿಂಗಾರ್ಸೂಳೆ' (ಪತಿವ್ರತೆ)
ಮಗಾ "ಮೂರ್ತಿ" (ಮುಂಗಟಾ) (ಶಾಂ ನಾ ೧೨೫)

ಉದ್ಮರದ್ಮೆಲೆ ಕೆಂಪ್ಸನ್ಯಾಸಿ (ಶಾಂ ನಾ ೧೨೬)

ಮಗ್ಳು ಮಂಗ್ಳೂರಿಗೋಗಿ ಮದ್ವೆಸಾಗ್ಸಾಕ ಬತ್ತು
ಅಬ್ಬೆ ತಲ್ಗೊಡೆಗೇ ಇರ್ತು (ಶಾಂ ನಾ ೧೨೭)
ಅಡ್ಕೆ ಮರಾ

ಅಪ್ಪ ಮುಗಿಲಿಗಿ
ಅವ್ವ ಪಾತಾಳಕ
ಮಗ ವ್ಯಾಪಾರಕ (ವಾಲಿ ೨– ೧೮)
ಅಡಿಕೆಯ ಮರ

ಅಪ್ಪ ಆಕಾಶಕ್ಕ
ಅವ್ವ ಪಾತಾಳಕ್ಕ
ಮಗ ಮುದುವಿಗಿ (ವಾಲಿ ೨– ೧೦)
ಅಡಿಕೆ ಮರ, ಅಡಿಕೆ

ಬಂಗಾರದ ಬಟ್ಟಲು ತಿರು ತಿರುಗಿ ಬೀಳುವದು (ಇ ೭೮೧)
ಅಡಿಕೆ ಮರದ ಫಲವನ್ನು ಮುಚ್ಚಲ್ಪಟ್ಟ ಹೊಂಬಾಳೆ

ಅಮ್ಮ ಅಂಬಾರಕೆ
ಅಪ್ಪ ಪಾತಾಳಕೆ
ಅಣ್ಣ ಪೇಟೆಗೆ
ಅಕ್ಕ ಮದುವೆಗೆ (ಸು ೩೭)
ಅಡಿಕೆ ಮರ, ಬೇರು, ಅಡಿಕೆ ಹೊಂಬಾಳೆ

ಒಂಟಿ ಕಾಲು ಕೊಕ್ಕರೆಗೆ
ಎಂಟು ನೂರು ಮೊಟ್ಟೆ (ಸು ೧೩೪೪)
ಅಡಿಕೆ ಮರ ಮತ್ತು ಕಾಯಿ

ಸಾಲಾಗಿ ನಿಂತಿಹರು
ಕಾಲಾಳು ಸೈನಿಕರು
ಬೆಳ್ಳಿಯನು ಹೋಲುವರು
ಕದನಗೈಯುವರು (ಇ ೯೩೭)
ಅಡಿಕೆಯ ಗೊನೆ

ಅಂಕುಡೊಂಕು ಅ
ಅವನ ತಮ್ಮ ಸಾ
ನಾಲ್ಕು ಮೂಲೆ ಬೆ (ಜೀಶಂಪ ೪೯)
ಅಡಿಕೆ, ಸಾಸಿವೆ, ಬೆಲ್ಲ

ಅತ್ತೆ ಕಾಯಿ ಮಾವನ ಕಾಯಿ ಸವತಿ ಕಾಯಿ
ಎಲೆಗೊಂದು ಕಾಯಿ ಭೋಗಿಗೊಂದು ಕಾಯಿ
ಇದು ಹೇಳಿದವರಿಗೆ ಎಲ್ಲ ಕಾಯಿ (ಚಂ ಸೆ ೧೨೦)
ಅತ್ತಿಕಾಯಿ, ಮಾವಿನ ಕಾಯಿ, ಸೌತೆಕಾಯಿ,
ಅಡಿಕೆ, ಸೀಗೆಕಾಯಿ, ಸೋರೆಕಾಯಿ
ಅಡಿಕೆ, ಸುಣ್ಣ, ಎಲೆ

ಕೆರೆ ಏರಿ ಮೇಲೆ
ಮೂರು ಜನ ಸೂಳೇರು ಹೋಗ್ತಿದ್ದರು
ಎದುರಿಗೆ ಗಂಡ ಬಂದ ಅಂತ ಕೆರೆಗೆ ಹಾರಿದರು
ಒಬ್ಬಳು ಮುಳುಗಿ ಹೋದಳು
ಒಬ್ಬಳು ಕರಗಿ ಹೋದಳು
ಒಬ್ಬಳು ತೇಲಿ ಹೋದಳು (ಲ ಗೌ ೪೬೯)
ಅಡಿಕೆ, ಸುಣ್ಣ, ಎಲೆ

ತಳ್ಳೂರು ಗೌಡುನ ಹೆಂಡ್ತಿ
ತೊಡೇಲಿ ಬಸುರಾಯ್ತಳೆ (ನಾ ಗೌ ೧೩೩)
ಅಡಿಕೆ ಹೊಂಬಾಳೆ

ಬೆಳ್ಳಿ ಬಟ್ಲು ಗಿರ್ ಗಿರ್‌ನೆ ತಿರ್ಗ್ ಬೀಳ್ತು (ಶಾಂ ನಾ ೧೩೧)
ಅಡ್ಕೆ ಹೊಂಬಾಳೆ

ಈರುಳ್ಳಿ ಸತ್ತರೆ ಅಳೋರು ಯಾರು (ಲ ಗೌ ೧೮೫)
ಅಡಿಗೆಯವನು

ಹುಲ್ಲಾಗ ಹುಲಿ ಮಲಗೈತಿ (ಇ ೧೦೯೫)
ಅಡಿಗೆ ಹಾಕದ ಮಾವಿನಹಣ್ಣು

ಮೂರು ಕಾಲಿನ ಮಾನಪ್ಪ
ಬೀಗರು ತಂದಾರ ನೋಡಪ್ಪ (ವಾಲಿ ೩– ೩೨)
ಅಡ್ಡಣಿಗೆ (ಮುಕ್ಕಾಲು ಮಣಿ)

ಅಂಕಡೊಂಕ ಕಬ್ಬಿನ ಕಟಂಜಣದ ಮ್ಯಾಗ
ಮಲ್ಲಿಗಿ ಹೂವು ಹಾಸಿಗಿ ಮ್ಯಾಗ (ಇ ೧೮)
ಅಡ್ಡಣಿಗೆ–ಅನ್ನದ ಗಂಗಾಳ

ಅಡ್ಲಾಗೆಲ್ಲ ಬಿದುರ್ಗೂಟ (ನಾ ಗೌ ೨೩)

ಅವರನ್ನೆಣಿಸಬಹುದು
ಅವರ ನಿರಿಗೆ ಎಣಿಸಾಕಾಗೋದಿಲ್ಲ (ಲ ಗೌ ೮೮)

ಉಟ್ಟಿರೋದು ಒಂದು ಸ್ಯಾಲೆ
ನೆರಿಗೆಗೆ ಲೆಕ್ಕವೇ ಇಲ್ಲ (ಸು ೯೪)

ಉತ್ತ ನೆಲದಲ್ಲಿ ಸುತ್ತ ನಿಂತಿದೆ (ರಾ ಗೌ ೯೫)

ಎದುರು ದಿಣ್ಣೇಲಿ ಬಿದಿರು ಗೂಟ (ಸು ೧೧೩)

ಒಳ್ಳೆ ಜಾಗದಲ್ಲಿ ಬೆಳ್ಳಿ ಕೊಡೆ (ಸು ೧೩೩)

ಅಂಡಳ್ಳ ತುಂಡ್ ಮೊಗ್ಗು (ಮಂ ೧.೪–೬)

ಕರಿಯ ಕಲ್ಲಮೇಲೆ
ಬಿಳಿಯ ರಂಗವಲ್ಲಿ ಹಾಕಿ
ಪಾತ್ರದಾಕೆ ತಕ್ಕತ್ಯೆ ಮಾಡತಾಳ (ಇ ೩೪೯)

ಕಳ್ಳಿ ಗಿಡದಡೆ
ಬೆಳ್ಳೀ ಬಟ್ಟಲು (ಸು ೧೯೬)

ಪಾತಾಳದಿಂದ ಬರವ್ಳೆ
ಪಗ್ಡೆಕಾಯಿ ನೆರ್ಯವ್ಳೆ
ಹೆಣ್ಣೇ ನಿನ್ನ ಹೆಸರೇಳು (ಮಂ ೧.೪–೫೪)

ಪಾತಾಳದಿಂದ ಬರೋಳೆ
ಪಗಡೆಕಾಯಿನ ನೆರಿಯೋಳೆ
ಹೆಣ್ಣೆ ನಿನ್ನ ಹೆಸರ್ಹೇಳೆ (ರಾ ಗೌ ೩೩೩)

ಪಾತಾಳದಿಂದ ಬರುವವಳೇ
ಪಗಡೆ ಕಾಯಿನ ನಿರಿಯವಳೇ
ನಿನ್ನ ಹೆಸರೇಳೆಣ್ಣೆ ಸುಣ್ಣದ ತಿಳಿಯವಳೇ (ಲ ಗೌ ೭೨೩)

ಬೆಟ್ಟದಲ್ಲಿ ಭಾವ ಕೂಗಿದರೆ
ಕೆಳಗೆ ಅಕ್ಕ ಮಕ್ಕಳ ಹಡೆದ್ಲು (ರಾ ಗೌ ೩೬೬)

ಬೇಲೀ ಕಟ್ಟೂದಲ್ಲಾ ಬೀಜಾ ಬಿತ್ತೂದಲ್ಲಾ
ನೀರಾಕುದಲ್ಲಾ ವರ್ಹಕ್ಕೊಂದ್ಬೆಳೆ (ಶಾಂ ನಾ ೧೩೭)

ರಕ್ತವಿಲ್ಲದ ಮಾಂಸ (ನಾ ಗೌ ೨೦೦)

ಹಸಿರು ತೆವರಿ ಮೇಲೆ ಮೊಸರು ಚೆಲ್ಲಾಡಿದೆ (ಲ ಗೌ ೧೦೦೯)

ಹೊತ್ತು ನೀರು ಹುಯ್ಯಲಿಲ್ಲ
ಸುತ್ತ ಬೇಲಿ ಹಾಕಲಿಲ್ಲ
ಕೊತ್ತಿ ಗೊಬ್ಬರ ಇಕ್ಕಲಿಲ್ಲ
ಅದರ ಹೆಸರೇ ಒಂದು ಚೆಂದ (ಸು ೫೩೦)
ಅಣಬೆ

ಬೆಟ್ಟ ಬೆಟ್ಟಕ್ಕೂ ಬೆಳ್ಳಿ ತಟ್ಟೆ (ಶಾಂ ನಾ ಅನುಬಂಧ ೪)
ಅಣ್ಣು

ವಂದ್ಮರಕ್ಕೆ ವಂದೇ ಬೀರು (ಶಾಂ ನಾ ೧೩೮)
ಅಣ್ಣೆ

ಮುರಿದೆ ಮೂರು ರೊಟ್ಟೀನ
ಅಣ್ಣ ತಮ್ಮಂದಿರಿಬ್ಬರಿಗೆ ಹಂಚು (ಸು ೪೧೪)
ಅಣ್ಣ ಒಬ್ಬ, ತಮ್ಮಂದಿರು ಇಬ್ಬರು

ಅಮಲ ಕಮಲದ ಹೂವು
ಜಿಂಕೆ ಪಾಗುಡದ ಹೂವು
ಹೂವುಂಟು ಗಮನವಿಲ್ಲ (ರಾ ಗೌ ೩೬)
ಅಣ್ಣೇಹೂವು

ನಿಮ್ಮವ್ವ ಅವುರ್ಗೆ ಅತ್ಕಂಡದೆ
ನಿಮ್ಮಪ್ಪ ಅವುರ್ಗೆ ನ್ಯಾತಾಡ್ತದೆ (ಮಂ ೧.೨–೧೧)
ಅತ್ಗಡುಕು, ಓಲೆ

ಸಂಜೇಲಿ ಸೂತ್ಗ ಆಗಿ
ಸರ್ಹೊತ್ತಿಗೆ ಬಸರಾಗಿ
ಮುಂಜಾವಕ್ಕೆ ಮಗ ಹಡುದ್ಲು (ಜೀಶಂಪ ೨೫೦)
ಅತ್ತಿ

ಟಪ್ಪ ಗುಡಗುಡಿ (ಲಠ್ಠೆ ಭಾಗ ೪–೧೦೫)
ಅತ್ತಿಕಾಯಿ

ಹಣ್ಣಿನಾಗ ಹಣ್ಣ ಯಾವ ಹಣ್ಣ (ಲಠ್ಠೆ ಭಾಗ ೪–೧೭೭)
ಅತ್ತಿಹಣ್ಣ

ವೊಳಗೆ ಉಳಕು
ಮ್ಯಾಲ್ ತಳಕು (ಮಂ ೧.೪–೭೨)
ಅತ್ತಿಹಣ್ಣು

ಅತ್ತಿ ಹತಗೊಂಡಾಳ
ಮಾವ ಜೋತಾಡತಾನ (ವಾಲಿ ೫–೪೪)
ಅತ್ತಿಹಣ್ಣು–ಮಾವಿನ ಹಣ್ಣು

ಅತ್ತಿ ಹರಿಗೊಂಡಾಳ
ಮಾವ ಜೋತಾಡತಾನ (ಇ ೯೩)
ಅತ್ತೀಹಣ್ಣು–ಮಾವಿನಹಣ್ಣು

ಅಗಲ್ದ ಹೂವ
ಬಗಲ್ದ ಹೂವ
ಸಾವಿರ ಕೊಟ್ರೂ
ಸಿಗಲ್ದ ಹೂವ (ಲಠ್ಠೆ ಭಾಗ ೪–೯) ಅತ್ತಿ ಹೂ

ಒಂದು ಸೇರು ಭತ್ತ
ಮೈಸೂರು ಸುತ್ತ
ಸುಲಿದರೆ ಸಿಪ್ಪಿಲ್ಲ
ತಿಂದರೆ ರುಚಿಯಿಲ್ಲ (ರಾ ಗೌ ೧೩೯)
ಅನಕಲ್ಲು

ಗಟ್ಟಿದ ಕೆಳಗಿನ ಭಟ್ಟ
ತಲೆಯಲ್ಲೊಂದು ಬುಟ್ಟ
ಬುಡದಲ್ಲೊಂದು ಗುಟ್ಟ (ಇ ೪೬೦)

ಗಿಡ
ಗಿಡದ ಮೇಲೆ ಕಾಯಿ
ಕಾಯಿ ಮೇಲೆ ಗಿಡ (ಲ ಗೌ ೫೧೨)
ಅನಾನಸ್

ಚಿನ್ನದ ಗೋಡೆಗೆ ಪಚ್ಚೆಯ ಆವರಣ
ಗೋಡೆಯೊಳಗೆ ಕಪ್ಪಿನ ಸಾಸಿರ ಮಣಿಗಳು (ಚಂ ಸೆ ೧೨೭)

ಮರದ ಮೇಲೆ ಹಣ್ಣು
ಹಣ್ಣಿನ ಮೇಲೆ ಮರ (ಚಂ ಸೆ ೨೦೧)
ಅನಾನಸು

ಗಟ್ಟದ್ಮೆಲಣ್
ಬಟ್ಟಂಗೆ ಮೇಲೂ ಜುಟ್ಟಾ
ಕೆಳಂಗೂ ಜುಟ್ಟಾ (ಶಾಂ ನಾ ೧೩೫)

ತಲೆ ಮೆಲ್ಜುಟ್ಟಾ ಮುಕ್ಳೀಲ್ಗುಟ್ಟಾ (ಶಾಂ ನಾ ೧೩೪)

ಹಣ್ಣಿನ್ಮೆಲ್ಗೆಡಾ ಗಡದ್ಮೆಲ್ಹಣ್ಣು (ಶಾಂ ನಾ ೧೩೫)
ಅನಾನಸ್ಸು

ಲೆಕ್ಕವಿಲ್ಲದ ಸಂಖ್ಯೆ
ಅದು ಒಬ್ಬನ ಹೆಸರು (ರಾ ಗೌ ೪೨೪) (ವಾಲಿ ೧–೪೮)
ಅನಂತ

ಕಂಚಿನ ತಟ್ಟೆ ಕುಸುಮೇ ರಾಶಿ
ಐದು ಮಂದಿ ಆಡ್ತಾರೆ ಇಬ್ಬರು ನೋಡುತ್ತಾರೆ
ಬಿಳೀ ಕಾವಲುದಾರರ ದಾಟಿ
ಒಳಗಡೆಗೆ ಹೋದರೆ
ಪರೀಕ್ಷಕನೊಬ್ಬ ಬಾರದೂರಿಗೆ ಕಳುಹಿಸುತ್ತಾರೆ (ಚಂ ಸೆ ೯೪)
ಅನ್ನ–ಊಟ

ಕರಿಯ ಕಾಂತಣ್ಣನಿಗೆ
ಬಿಳಿಯ ಮುಂಡಾಸು (ಚಂ ಸೆ ೮೮)
ಅನ್ನ ಬೇಯುವಾಗ ಮೇಲೆ ಬರುವ ನೊರೆ

ತಿಳ್ಳ ತಿನ್ನುತ್ತೇವೆ
ಮಟ್ಟೆ ಗುಡ್ಡೆ ಹಾಕುತ್ತೇವೆ (ಲ ಗೌ ೬೦೫)
ಅನ್ನ–ಮಡಕೆ

ಸಾವಿರಾರು ಹಕ್ಕಿಗಳು
ಒಂದೇ ಸಾರಿಗೆ ನೀರಿಗಿಳೀತವೆ (ರಾ ಗೌ ೪೪೮)
ಅನ್ನಕ್ಕೆ ಅಕ್ಕಿ ಹಾಕುವುದು

ಗುಡಿಯೆಲ್ಲಾ ಕರ್ರಗ
ದೇವರಿದ್ದಾನ ಬೆಳ್ಳಗ (ಇ ೫೦೦)

ಗುಡಿಯೇನೊ ಕರ್ರಗ
ದೇವ್ರ ಮಾತ್ರ ಬೆಳ್ಳಗ (ಲಠ್ಠೆ ಭಾಗ ೪–೯೩)
ಅನ್ನದ ಗಡಿಗಿ

ಗುಡಿಸುತ್ತ ಕರ್ರಗೆ
ಗುಡಿ ದೇವರು ಬೆಳ್ಳಗೆ
ಗುಡಿ ಪೂಜಾರಪ್ಪ ನೆಟ್ಟಗೆ
ಅವನ ಹೆಂಡ್ತಿ ಬಟ್ಟಗೆ (ಸು ೨೫೧)
ಅನ್ನದ ತಪ್ಪಲೆ, ಅನ್ನ, ಸೌಟಿನ ಕಾವು, ಸೌಟಿನ ಬಟ್ಟಲು

ಬೆಟ್ ಕಿತ್ ಬರ್ವಾಗಾ ಬೆದ್ರ್ ಹಿಂಡು ತಡೆತು (ಶಾಂ ನಾ –ಅನುಬಂಧ ೧)
ಅನ್ನದ ಮಡಕೆಯಲ್ಲಿ ಚಿಪ್ಪು

ಧರೆ ಧರಿಸ್ತದೆ ಬೇಲಿ ತಡೀತದೆ (ಲ ಗೌ ೬೩೭)
ಅನ್ನ ಬಸಿಯುವುದು

ಹಾರಿದರೂ ಪಕ್ಷಿಯಲ್ಲ
ಚೀರಿದರೂ ಪಶುವಲ್ಲ
ಮಾಯವಾದರೂ ಮಂತ್ರ ಅಲ್ಲ
ವೇಗವಿದ್ದರೂ ಮನಸ್ಸಲ್ಲ
ಇಹಲೋಕ ಬಿಡಿಸಿದರೂ ಯಮ ಅಲ್ಲ (ಇ ೧೦೬೫)
ಅಪೋಲೋ

ಕರಿಗುಡ್ಡೆ ಮೇಲೆ ಕೆಂಪಿ ದನಾ ರಾಶಿ (ಶಾಂ ನಾ ೨೬೬)

ವಂದ್ಮುದ್ದಿ ಮಡ್ಲಲ್ಬೆಂಕಿ ಹಾಯ್ಕಂಡಿರ್ತು (ಶಾಂ ನಾ ೨೬೫)
ಅಬ್ಬಸ್ಗೆ

ಶಿವರಾತ್ರೀಲಿ ಹೋಗೋಣ ಅಂದ್ರೆ ಸೀರೆಯಿಲ್ಲ
ಉಗಾದೀಲಿ ಮಕ್ಕಳು ಬಿಡೊಲ್ಲ (ಲ ಗೌ ೯೦೦)
ಅಮಟೆ ಮರ ಶಿವರಾತ್ರಿಯಲ್ಲಿ ಬೋಳು; ಯುಗಾದಿಯಲ್ಲಿ ಕಾಯಿ

ಬೆಸ್ಗೆಲಿ ಅಪ್ನ ಮನೆಗ್ಹೋಪೊ ಹೇಳ್ದ್ರೆ ಉಡೂಲ್ಸೀರಿಲ್ಲೆ
ಮಳೆಗಾಲ್ದಲ್ಲಿ ಹೋಪೊ ಹೇಳ್ದ್ರ ಚಳ್ಳೆಪಿಳ್ಳೆ ಮರಿ (ಶಾಂ ನಾ ೧೩೯)
ಅಮ್ಟೆಮರಾ

ಮೆನೂ ಗಿಡ ಕೆಳ್ಗೂ ಗಿಡ (ಶಾಂ ನಾ ೧೩೬)
ಅಮ್ರುತ್ಬಾಳೆ

ಅದಿನ್ಯೆದ್ ದಿನ ಅರಿಯಲ್ಲ
ಅದಿನ್ಯೆದ್ ದಿನ ಬೈಳಿಯಲ್ಲ (ಮಂ ೨.೧–೪)
ಅಮಾವಾಸ್ಯೆ ಕತ್ತಲು

ಊರ ತುಂಬ ತಿರಗ್ಯಾಡತಾವ
ಮಾಡದಾಗ ಬಂದ ಕೂಡತಾವ (ಲಠ್ಠೆ ಭಾಗ ೫–೭೫)
ಅಯ್ಯನ ಕೋಲ

ಅಪ್ಪ ಅಪ್ಪ ಮರ ನೋಡ
ಮರದ ತುಂಬ ಎಲಿನೋಡ
ಎಲಿ ತುಂಬ ತೂತ ನೋಡ
ತೂತನಾಗಿನ ಮಾತನೋಡ (ಲಠ್ಠೆ ಭಾಗ ೫–೧೯)
ಅಯ್ಯನಾರ ಹಿಟ್ಟ

ಅರಮನೆಯಲ್ಲಿ ಇರುವುದು
ಕರೆದಲ್ಲಿ ಬರುವುದು
ತನ್ನ ಬಳಗವ ತಾನೇ ಕೊರೆವುದು (ಲ ಗೌ ೭೭)
ಅರ

ಕೆಂಪ್ಪೂರಿ ಮಣ್ಣಲ್ಲುಲಿ (ಶಾಂ ನಾ ೧೪೦)

ಬಣ್ಣಾ ಉಟ್ಟಕಂಡಿ ಮಣ್ಣಲ್ ಆಡ್ತದೆ (ಶಾಂ ನಾ –ಅನುಬಂಧ ೩೦)

ಮಣ್ಣಿಲಿ ಚಿನ್ನದ್ಬೇರು (ಶಾಂ ನಾ ೧೪೧)
ಅರಶ್ಣಾ

ಅಂಗಯ್ಗೆ ಅಂಗ್ರಸಾ (ಗಂಗಾಧರ)
ಮುಂಗಯ್ಗೆ ಮುಂಗ್ರಸಾ
ಪೊರ್ನ ಬಾಯ್ಗೆ ಪಾದ್ರಸಾ (ಶಾಂ ನಾ –ಅನುಬಂಧ ೯)
ಅರ್‌ಶ್ಣಾ

ಮಣ್ಣಾಗೈತಿ ಚಿನ್ನದ ಬೇರು (ವಾಲಿ ೨–೯೮)
ಅರಿಷಿಣ

ಜಾತಿ ಜಮಾಲು ಗಿಡ ಜಾತಿ ಪರಿಮಳ ಗಿಡ
ಹತ್ತಕ್ಕೂ ಬೇಕಾದುದೊಂದು ಬಹುಮಾನ ಗಿಡ (ಲ ಗೌ ೫೬೯)

ನೆಲದೊಳಗಿರುವುದು ರಾಮಚಂದ್ರ (ಲ ಗೌ ೭೧೨)

ಸೂಳೆ ಮನೆ ಮುಂದೆ ಸುರಗಿ ಮರಹುಟ್ಟಿ
ಕೊಂಬಿನ ತಗರಿಗೆ ತಗುಲಿ ಕೂಗೋ ಹುಂಜನಿಗೆ ತಗುಲಿ
ಸಮುದ್ರದಲಿರೋ ಕುಂಚಿ ಮೀನಿಗೆ ತಗುಲಿ
ಒಡೆದರೆ ಒಡೀಬಹುದು (ಲ ಗೌ ೯೬೨)
ಅರಿಶಿನ

ಚಿನ್ನದ ಬಾಚಣಿಗೆ ಮಣ್ಣಲ್ಲಿ ಹುಗಿದಿಟ್ಟವರೆ (ಲ ಗೌ ೫೫೨)
ಅರಿಷಿನ ಕೋಲು

ಅಂಕು ಡೊಂಕು ಅ
ಅವನ ತಮ್ಮ ಸಾ
ಕರಗುಂಡು ಮೆ
ನಾಲ್ಕು ಚೌಕ ಬೆ (ಲ ಗೌ ೯೯)
ಅರಿಷಿನ–ಸಾಸಿವೆ–ಮೆಣಸು–ಬೆಲ್ಲ

ಹಿತ್ಲಾಲ್ ಕೆಂಪಣ್ಣಾ
ಗುಡ್ಡಮೇಲೆ ಹುಲಿಯಣ್ಣ
ಹೊಳೆಲ್ ಮೀಯ್ಸಣ್ಣ (ಶಾಂ ನಾ –ಅನುಬಂಧ ೧೩)
ಅರ್‌ಶ್ಣಾ, ಹುಲಿ, ಮೀನು

ಸೂಳೆಮನೆ ಸುಂದ್ರು ಸೀಗೆಗಿಡ ಹುಟ್ಟಿ
ಅವಳಿಗೆ ತಾಕಿ
ಅವಳ ಗಂಡನಿಗೆ ತಾಕಿ
ಕಟ್ಟಿರೋ ಕುರೀಗ್ತಾಕಿ
ಆಡು ಕೋಳಿಗ್ತಾಕಿ ಬಂದರೆ
ಇದು ಏನು (ಜೀಶಂಪ ೨೬೪)
ಅರಿಷಿನದ ಪುಡಿ

ತುಸ ಬೀಜ ಪಟರಾಕ್ಷ (ಲ ಗೌ ೬೦೭)
ಅರಳಿ ಮರ

ಬಿಳಿ ಎತ್ತ ಬೇಲಿ ಜಿಗೀತೈತಿ (ವಾಲಿ ೫–೫೨)

ಹುಟ್ಟುತ್ಲೆ ಹಾರ್ಯಾಡತೈತಿ (ಇ ೧೦೮೯)
ಅರಳು

ಹಾಳು ಬಾವೀಲಿ ಹದ್ದು ಉಡುಕುತ (ಲ ಗೌ ೧೦೪೬)
ಅರಳು ಹುರಿಯುವುದು

ಅಬ್ಬೆ ರಾಡಿ ಮಗ್ಳು ಬೋಳಿ ಶಾಂ ನಾ ೨೯೦)

ಮಿಂದ್ಮಿಂದ್ ಗಾಡ್ಗತನಾ ಹುಡೀತೀದ (ಶಾಂ ನಾ ೨೮೯)
ಅರೂಕಲ್ಲ

ನಮ್ಮಜ್ಜಿ ಮುಕ್ಕೀಲಿ ನಿಮ್ಮಜ್ಜಿ ತಲೆ (ಶಾಂ ನಾ ೨೮೭)

ವಬ್ ಮುದ್ಕಾ ಮನೆಸುತ್ತಾ ಹೇತಾಕ್ತಾ (ಶಾಂ ನಾ ೨೮೮)

ಅರೂಕಲ್ಲು (ವಳಕಲ್ಲು)

ಕಳ್ಳೆ ಕುಯ್ಯೊಕ್ಕೊಂದಳ್ಳ
ರಗುತ ತುಂಬಕ್ಕೊಂದು ಗಡ್ಗ
ಬಾಡ ತುಂಬಕ್ಕೊಂದು ಯಡ್ಗ (ಮಂ ೧.೫–೪೮)

ಸಂತಲೊಂದು ಗುಂಟ ತಂದು
ಮನ್ಮಂದ್ಯೆಲಾ ಎಟ್ಗಂಡ್ರು (ಮಂ ೧.೫–೮೪)

ಅರ್ಕಡ್ಡಿ

ಕಾಡ್ನಿಂದ ಬಂದು
ಕದಿನಿಂದ್ಲಾಗ ಕೂತ್ಕತು (ಮಂ ೧.೫–೪೯)

ಅರ್ಕಡ್ಡಿ (ದೊಣ್ಣೆ)

ಸಂದ್ಯಾಗ ಸಂದಿ ಯಾವ ಸಂದಿ
ಅಲಸಂದಿ (ಇ ೯೭೪) (ಲಠ್ಠೆ ಭಾಗ ೪–೧೬೭) (ವಾಲಿ ೫–೧೦)

ನಾ ಹೇಳೋದ ಅಲ್ಲ
ನೀ ತರೋದ ಅಲ್ಲ
ದುಡ್ಡ ಕೊಟ್ರೂ ಪ್ಯಾಟ್ಯಾಗ ಸಿಗೋದ ಇಲ್ಲ (ಲಠ್ಠೆ ಭಾಗ ೪–೧೨೪)

ಅಲ್ಲಾ

ಅಂಕ ಡೊಂಕ ಅ
ಅದರ ತಮ್ಮ ಸು
ಕರಿಗಂಡು ಮೆ (ಲಠ್ಠೆ ಭಾಗ ೪–೩೦)

ಅಂಕಡೊಂಕಾ ಅ ಅಂದಾ
ಅವರ ತಮ್ಮ ಸು ಅಂದಾ
ಕರೆಕಳು ಮೆ ಅಂದಾ ನೀ ಏನ ಅಂದಿ (ಇ ೨೨)

ಅಲ್ಲಾ–ಸುಂಠಿ–ಮೆಣಸು

ಹುಡುಗಿ ಆದ್ಲು ಹುವ್ವ ಮುಡಿದ್ಲು
ಅಜ್ಜಿಯಾದ್ಲು ಗೆಜ್ಜೆ ಕಟ್ಟಿದ್ಲು (ಸು ೫೨೪)

ಅವರೆ ಅಥವಾ ತೊಗರಿತಳ್ಳು

ಮಾವಿನ ಕಾಯ್ನಂಗೆ ಆಕಾರ
ಬೆಟ್ಟು ಗಾತ್ರ ಬೆಟ್ಟುದ್ದ
ಎಡೆದು ನೋಡಿದ್ರೆ ಐದಾರು ಕಾಳು (ರಾ ಗೌ ೩೯೦)

ಅಂಕದ ಬಂಕದ ಮನೆಯವಳೆ
ಸೋರಂಕಣದ ಒಳಗಿರೋಳೆ
ಸುಗ್ಗಿಲೇಕೆ ಬಡವಾದೆ
ಸೋದರ ಮಾವನ ಮಗಳೆ (ನಾ ಗೌ ೧೩)
ಅವರೆಕಾಯಿ

ಹುಡುಗಿ ಆದ್ಲು ಹೂ ಮುಡುದ್ಲು
ಮುದುಕಿ ಆದ್ಲು ಗಿಲಕಿ ಹಿಡಿದ್ಲು (ಜೀಶಂಪ ೨೮೮)
ಅವರೇಕಾಯಿ

ಹುಡುಗಿ ಆಗ್ಬೇಕೂ ಅಂತಾಳೆ
ಹೂ ಮುಡಿಬೇಕೂ ಅಂತಾಳೆ
ಮುದ್ಕಿ ಆಗ್ಬೇಕೂ ಅಂತಾಳೆ
ಗಿಲ್ಕೆ ಅಲ್ಲಡಿಸ್ತಾಳೆ (ಲ ಗೌ ೧೦೬೩)

ತೆಳ್ಳಂದು ಎಲೆ
ಬೆಳ್ಳಂದು ಹುವ್ವ
ಮರ ಮರಕೂ
ತಳ್ಳಾಡೋ ಮರ ಯಾವುದು (ಸು ೩೦೬)
ಅವರೆ ಗಿಡ

ಹುಡ್ಗಿಯಾದ ಮೂರು ಹೂ ಮುಡ್ದ
ಕೋರಿಯಾದ ನಾಕ್ ಜನಕ್ಕ ಬೇಕಾದ
ಮುದ್ಕಿಯಾದ ಗಿಲ್ಕಿ ತಂಕ್ಕಂಡ (ಮಂ ೧.೪–೮೭)
ಅವರೆ ತಳ್ಳು (ತರಳು)

ತೆಳ್ಳಂದು ಗಿಡದಾಗೆ ಪುಳ್ಳೆ ಆಯೋಳೆ
ಬೆಳ್ಳಂದು ಹುವ್ವಿನ ಹೆಸರ್ಹೇಳೆ (ಸು ೩೦೭)
ಅವರೆ ಹುವ್ವ

ಅಕ್ಕಾರಕ್ಕಾ ಮುಕ್ಕಾರಕ್ಕಾ
ಕುಮ್ಮಕ್ಕ ಕುಸುರಕ್ಕ
ಅಚ್ಚಾಕೈಲಿ ಪಚ್ಚಾಕಡಗ
ಅಚ್ಚೋರುಂಟು ಕಳೆಯೋರಿಲ್ಲ (ಮಂ ೧.೨–೧)
ಅಸಲು, ಅಧಿಕಾರ

ಅಕ್ಕಡಕ್ಕ ಪಕ್ಕಡಕ್ಕ
ನೀಲಕ್ಕ ನಿಂಗಕ್ಕ
ಅಕ್ಕನ ಶೈಲಿ ಪಚ್ಚೆ ಕಡಗ
ತೊಡುವರುಂಟು
ಕಳೆಯೋರಿಲ್ಲ (ರಾ ಗೌ ೨)
ಅಸಿರು (ಹಚ್ಚೆ)

ಗಾಣ ತಿರುಗ್ತಿತ್ತು
ಉಪ್ಪು ಉದುರ್ತಿತ್ತು (ಮಂ ೧.೫೫–೫೩)
ಅಸೀಟು

ಆಸ್ರುತ್ತಾ ಪಸ್ರುತ್ತಾ
ಪಲ್ಲಕಿತ್ತ ನಾರತಾ ಬೇರತಾ (ಮಂ ೧.೨–೩)
ಅಸ್ರು (ಹಚ್ಚೆ)

ಏರಿ ಮ್ಯಾಲೊಂದು ಏಸ್ಲುಗುಟ್ಟಿ
ಕಿತ್ರು ಬರ್‌ದು ಅತ್ರು ಬರ್‌ದು (ಮಂ ೧.೨–೪)
ಅಸ್ಲು

ಅಪ್ಪಪ್ಪಾ ಮರದ ಉದ್ದ ನೋಡು
ಆರೊ ಬಡ್ಡಿ ಅಕ್ಕಿ ನೋಡು
ನೀರಿಲ್ಲದ ಕೆರೆ ತುಂಬದ ನೋಡು
ಸುಣ್ಣಿಲ್ಲದ ಗ್ವಾಡೆ ವೊಳೆಯೋದು ನೋಡು (ಮಂ ೧.೪–೧೦)
ಅಳಮಾ, ತೆಂಗಿನಮರ, ಎಳ್ನೀರು, ತೆಂಗಿನಕಾಯಿ

ಕುಂಡಿ ಹರದ ಕೊಳ್ಗಿ ಬಿದ್ದದ (ಲ ಭಾಗ ೪–೭೭)

ಬಾಗಲಾ ಹಾಕಿ
ಭಾಗವತ್ರ ಆಡ್ತಾರ (ಲ ಭಾಗ ೪–೧೩೬)

ಬಿಳಿ ಎತ್ತ ಬೇಲ್ಯಾಗ ಜಿಗಿತತಿ (ಲ ಭಾಗ ೪–೧೩೯)
ಅಳ್ಳ

ಮರವನ್ನು ಹತ್ತುವನು ಮಂಗವಲ್ಲ
ಬಾಲತೋರವಿದ್ದರೂ ನರಿಯಣ್ಣನಲ್ಲ
ಹಲ್ಲುಗಲೂ ಚೂಪಿಹವು ಬಾವಲಿಯು ಅಲ್ಲ (ಚಂ ಸೆ ೨೦೨)

ಹತ್ತಲಾರದ ಮರಕೆ
ಹತ್ತಿದವನು ಜಾಣ
ಹತ್ತಿ ನಿಂಬೆ ಹಣ್ಣನ್ನು
ಕೂದವನು ಜಾಣ (ರಾ ಗೌ ೪೬೮)

ಅಳಿಲು

ಕುಂಟ ಎತ್ತು ಬೇಲಿ ಜಿಗೀತೈತಿ (ಇ ೪೪೧)

ಜಿಗದ ಹಲ್ಲು ಕಿಸೀತೈತೆ
ಕಿಸದ ಬಾಯಾಗ ಬೀಳತೈತಿ (ಇ ೫೫೨)

ಬಿಳಿ ಎತ್ತು ಬೇಲ ಜಿಗಿತೈತಿ (ಇ ೭೪೮)

ಬಿಳಿ ಎತ್ತು ಬೇಲಿ ಜಿಗೀತೈತಿ (ಇ ೫೫೩)

ಅಳ್ಳು

ಅಯ್ಯ ಜೋಗಿ
ನಿನ್ನ ಮೈಯೆಲ್ಲ ಬೂದಿ
ಕೈಯಲ್ಲಿ ಪಾತ್ರೆ
ಕಂಕಳಲ್ಲಿ ರುದ್ರಾಕ್ಷಿ (ಮಂ ೧.೪–೧೧)

ಅಳ್ಳೆಕಾಯಿ

ಅಂಗ ಬಂಗಾರದ ಹಕ್ಕಿ
ನುಂಗಿತೊಂದರ ಗಿಣಿಯ
ಅಂಗೈ ಹೊರಗೆ
ಅಂಗಾಲು ಹೊರಗೆ
ತಿಂಗಳೊಳಗೆ ಹೇಳಿದೋರು ಜಾಣರು (ಸು ೬೩)
ಅಂಗ ಮಂಗನ ಅಕ್ಕಿ
ಒಂದು ಅರಗಿಣಿ ನುಂಗಿತು
ಅಂಗಾಲ ಹೊರಗೆ ತಲೆಹೊರಗೆ (ಜೀಶಂಪ ೧೦)

ಅಂಗೈ ಹೊರಗೆ ತಲೆ ಹೊರಗೆ
ಪುರುಷನಾ ನುಂಗಿತು ತಂಗಿ ನೀ ಬಲ್ಲೆಯಾ ಹೇಳೆ (ಚಂ ಸೆ ೩೦)

ಕಯ್ಯುಂಟು ಕಾಲಿಲ್ಲ ಸಿವಿರರಿದ ಮುಂಡ
ಮೆಯ್ಯಲ್ಲಿ ನವಗಾಯ ಒಂಭತ್ತು ತುಂಡ
ಓಡಿ ಬಂದೊಯ್ಯನೇ ಹೆಗಲೇರಿ ಕೊಂಡ
ಕಯ್ಯ ಬೆಟ್ಟೆಸೆದರೆ ತಾ ಮುದುರಿಕೊಂಡ (ಲಠ್ಠೆ ಭಾಗ ೫, ೧೧೧)

ಕುತಿಗಿ ಅಯ್ತಿ ತಲಿಯಿಲ್ಲಾ
ತೋಳತಿ ಬೆರಳಿಲ್ಲಾ
ದಡಾ ಅಯ್ತಿ ಕಾಲಿಲ್ಲಾ (ಲಠ್ಠೆ ಭಾಗ ೫, ೧೩೩)

ಕೈ ಅದಾವು ಕಾಲಿಲ್ಲ
ಮುಂಡ ಅಯ್ತಿ ತೆಲಿ ಇಲ್ಲ (ಲಠ್ಠೆ ಭಾಗ ೫, ೧೩೮)

ಕೈಯುಂಟು ಕಾಲಿಲ್ಲ
ತಲೆ ಹರಿದ ಮುಂಡ
ಹೊಯ್ಯವಾಳಿಸಿ ತನ್ನ ತಾ ಹೊಯ್ಸಿಕೊಂಡ
ಮೈಯಲ್ಲಿ ನೂರಾರು ಗಾಯಗಳ ಕೆಂಡ
ಒಯ್ಯನಿದ ಪೇಳಿದವ ಮೂರ್ಲೋಕ ಗಂಡ (ಚಂ ಸೆ ೧೧೦)

ದೇಹವುಂಟು ಮುಖವಿಲ್ಲ ಕಾಲಿಲ್ಲ (ಲ ಗೌ ೬೩೪)

ರಂಗ ಬಂಗಾರದ ಹಕ್ಕು ನುಂಗಿತೊಂದರಗಿಣಿ
ಅಂಗೈ ಅಂಗಾಲು ಹೊರಗೋ ಜಾಣಾ
ಗಳೊಳಗ ಹೇಳೋ ತಿಳಿದರ (ಇ ೯೦೫)

ಹುಯ್ಯೆ ಹುಯ್ಯೆ ಎಂದರೆ ಹೆಗಲೇರಿಕೊಂಡ
ಹೆಗಲೇರದಿದ್ದರೆ ತಾ ಮುದುರಿಕೊಂಡ
ಕೈಯಿಲ್ಲ ಕಾಲಿಲ್ಲ ಶಿರವಿಲ್ಲದ ಮುಂಡ (ಲ ಗೌ ೧೦೬೬)

ಅಂಗಿ

ಐದು ಮನೆಗೆ ಒಂದೇ ಅಂಗಳ (ಲ ಗೌ ೨೬೨)

ಅಂಗೈ

ಕೆಂಪು ನೋಡಿ ಎಂಟು ಹಣ ಕೊಟ್ಟೆ
ಕೆಳಗಿಳದು ನೋಡಿ ಕೆಟ್ಟೆ (ಸು ೨೩೦)

ಅಂಚು ಕೆಟ್ಟ ಸೀರೆ

ಅವ್ವಾ ಕೂತಿದ್ದ ಮಗ ಓಡಾಡುತ್ತಿದ್ದ (ಮಂ ೧.೫–೧೬)

ಅಂಡೆ, ಚಪ್ಪಲಿ

ಅವ್ವ ಕೂತಿದ್ದಾಳೆ
ಮಗಳು ಓಡಾಡ್ತಾಳೆ (ರಾ ಗೌ ೫೦)
ಅಂಡೆ, ಚೆಂಬು

ಗುಂಡೀಲಿ ಗುಟ್ರಿಕೆ ಹಾಕ್ತದೆ (ಲ ಗೌ ೫೨೬)
ಅಂಬಲಿ

ಒಂದ ಮನಿಗಿ ನಾಕ ಕೆಸರಗಂಬ
ನಾಕ ಹಾಲಗಂಬ ಎಡ್ಡ ನೀಟಗಂಬ (ಲಠ್ಠೆ ಭಾಗ–೧ ೨೧)
ಆಕಳ ಕಾಲು, ಮೊಲಿ, ಕೋಡ

ಜಂಭ ನೀಲಹಣ್ಣ ಜಗಜಗಿ ಬರತಾವ
ನಾಕಭಾವಿ ನೀರ ಏಕ ಆಗತಾವ (ಲಠ್ಠೆ ಭಾಗ–೫ ೧೬೨)
ಆಕಳ ಕೆಚ್ಚಲ

ಜಂಬಾ ನೀಲದ ಹಣ್ಣ
ಜಲ್ಲುಸಿ ಹೊಡದರ
ನಾಕೂ ಮೂಲಿ ಏಕಾಟ (ಲಠ್ಠೆ ಭಾಗ ೧–೪೦)
ಆಕಳ ಮಲಿ

ಜಂಬೂನೀರಲ ಹಣ್ಣ ಜರಜರದ ಬೀಳ್ತಾವ
ನಾಕ ಬಾಂವಿ ನೀರ ಒಂದಾ (ಲಠ್ಠೆ ಭಾಗ–೫ ೧೬೩)
ಆಕಳ ಮೊಲಿ

ಗರಾಗರಾ ಮೇಯ್ತು ಸಂಬಾರ್ಬಟ್ಲು ತುಂಬ್ತು (ಶಾಂ ನಾ ೨೩)

ನಾಕ್ ಹಸಿಗುಟ್ಟಾ ಯಡ್ಡು ವಣಗುಟ್ಟಾ (ಶಾಂ ನಾ ೨೨)

ನಾಕು ಹಸಿಕೊಂಬೆ
ಎರಡು ಒಣಕೊಂಬೆ
ಎರಡು ಮಿಣಿ ಮಿಣಿ
ಎರಡು ಲಟಪಟ
ಒಂದು ಬೀಸಣಿಕೆ (ವಾಲಿ ೬–೪೬)
ಆಕಳು

ವಂದಕ್ಕಂಗೆ ನಾಕ್ಮೊಲೆ
ಮತ್ತಂದಕ್ಕಂಗೆ ಯರಡ್ಮೊಲೆ
ಪಕ್ಕದಕ್ಕಂಗೆ ಮೊಲ್ಯೇ ಯೆಲ್ಲೆ (ಶಾಂ ನಾ ೨೧)
ಆಕಳು–ಆಡು–ಕೋಳಿ

ಉಂದ್ಗಿಡ ಅಯ್ಯಾತಿ ಹಣ್ ಕುಡ್ತಿದ (ಶಾಂ ನಾ ೨೪)
ಆಕ್ಕ

ಊರಿಗೆಲ್ಲಾ ಒಂದೇ ಕಂಬ್ಳಿ (ರಾ ಗೌ ೧೦೪)

ಹರಿಗಿಲ್ಲದೆಲೆ ಯಾವುದು (ಲ ಗೌ ೧೦೦೨)
ಆಕಾಶ

ಎಲ್ಲಾ ಉಂಟು ಮೂರಿಲ್ಲ (ಲ ಗೌ ೨೩೭)
ಆಕಾಶಕ್ಕೆ ಏಣಿಯಿಲ್ಲ, ಸಮುದ್ರಕ್ಕೆ ಸೇತುವೆ ಇಲ್ಲ, ಅಂಗೈಯಲ್ಲಿ ರೋಮ ಇಲ್ಲ

ಕಟ್ಟ ಇಲ್ಲದ ಕೆರ್ಯಾಗ
ತಟ್ಟ ತೇಲತಾ ಸಾಗ್ಯಾದ (ವಾಲಿ ೧–೧೦)

ಕಟ್ಟಿ ಇಲ್ದ ಕೆರ್ಯಾಗ
ಬೆಳ್ಳಿ ಬಟ್ಲ ತೇಲ್ತಾದ (ವಾಲಿ ೧–೩೫)

ಕಟ್ಟೆ ಇಲ್ದ ಕೆರೇಲಿ
ತಟ್ಟೆ ತೇಲ್ಕೊಂಡ್ಹೋಯ್ತದೆ (ಜೀಶಂಪ ೧೦೩)
ಬಾವಿ ಮನೆಯೋನೆ
ಬನ್ನೇರು ಘಟ್ಟದೋನೆ
ಬಾರಯ್ಯ ನಮ್ಮನೆ ಅಳಿಯೂಟಕ್ಕೆ (ಸು ೩೬೭)
ಆಕಾಶ, ಚಂದ್ರ

ಮಜ್ಗೆ ಬೊಡ್ಡೆಲಿ ಬೆಣ್ಣೆ ತೇಲ್ತು (ಶಾಂ ನಾ ೯)

ಕಟ್ಟೆಯಿಲ್ಲ ಗದ್ಕೆರೆಲಿ ಬೆಳ್ಳಿಬಟ್ಲು ತೇಲ್ತು (ಶಾಂ ನಾ ೧೦)

ನೀಲಿ ಸಮುದ್ರದಲ್ಲಿ ಬೆಳ್ಳಿ ತಟ್ಟೆ ತೇಲುತ್ತೆ
ನೀರ ಮೊಗೆಮೊಗೆದು ಹೂಯುತ್ತೆ (ಲ ಗೌ ೭೦೦)
ಆಕಾಶ, ಚಂದ್ರ, ಬೆಳುದಿಂಗಳು

ಪರಾತದಾಗ ಚುರಮರಿ
ಒಂದು ಕಡೆ ಸಪ್ಪರಚಂದ
ಆಕಾಶದ ನಕ್ಷತ್ರಗಳು, ಚಂದ್ರ (ವಾಲಿ ೧–೨)

ನೀಲಿ ಕೆರ್ಯಾಗ ಬಿಳಿ ಹೂವ
ಆಕಾಶದಲ್ಲಿ ನಕ್ಷತ್ರಗಳು (ವಾಲಿ ೧–೩)

ಅಕ್ಕ ಅಕ್ಕ ಏರಿ ನೋಡೆ
ಏರಿ ತುಂಬ ಗಾರೆ ನೋಡೆ
ಗಾರೆ ತುಂಬ ಗಿಡ ನೋಡೆ
ಗಿಡದ್ತುಂಬ ಕಾಯ್ನೋಡೆ (ಜೀಶಂಪ ೫೫)

ಅಡ್ಕೆ ಆಯಿನಾರಿ ಚಾಪೆ ಮಡಿಸನಾರೆ (ಮಂ.ಕ.) (ಮಂ ೨.೧–೩)

ಅಪ್ಪಾ ಚೆಲ್ಲಿದ ಹೂನಾ
ಅವ್ವಾ ಆಯಲಾರಳು
ಅವ್ವಾ ಹಾಸಿದ ಚಾಪೆನಾ
ಅಪ್ಪಾ ಸುತ್ತಲಾರ (ಮಂ ೨.೧–೫)

ಅಮ್ಮನ ಹಾಸಿಗೆ
ಸುತ್ತಕಾಗೋದಿಲ್ಲ
ಅಪ್ಪನ ದುಡ್ಡು
ಎಣಿಸಕಾಗೋದಿಲ್ಲ (ಜೀಶಂಪ ೧೨)

ನೀಲಿ ಕೆರೇಲಿ ಬಿಳಿ ಮೀನು (ಜೀಶಂಪ ೧೮೯)

ಹಗಲು ಹಾಳುದೋಟ ರಾತ್ರಿ ಹೂದೋಟ
ಹೂವ ನೋಡುವವರುಂಟು ಮುಡಿಯುವರಿಲ್ಲ (ಲ ಗೌ ೯೬೭)
ಆಕಾಶ, ನಕ್ಷತ್ರ

ಅಪ್ಪಗ ಹಾಸಿಗಿ ಹಾಸಲಾಕ ಬರೂದಿಲ್ಲ
ಅವ್ವಗ ಕಡಬ ಎಣಸಲಾಕ ಬರೂದಿಲ್ಲ
ಆಕಾಶ, ನಕ್ಷತ್ರಗಳು (ವಾಲಿ ೧–೧)

ಒಂದ ಮರ
ಮರದಾಗ ಅಳ್ಳ
ಅಳ್ಳಿನಾಗ ಖೊಬ್ರಿಗುಂಡ (ಲಠೈ ಭಾಗ ೨–೨೪)
ಆಕಾಶ, ನಕ್ಷತ್ರ, ಚಂದ್ರ

ಬಟಾಯಲೊಳಗೊಂದು ಬೆಳ್ಳಿ ರೂಪಾಯಿ (ಸು ೩೫೮)
ಆಕಾಶ ಮತ್ತು ತುಂಬು ಚಂದಿರ

ಮೇಲೆ ಸಮುದ್ರ
ಅಡೇ ಹಡಗು (ಸು ೪೨೯)
ಆಕಾಶ, ಮೋಡ

ಕೆತ್ತಲಾರದ ಹಲಗೆ
ಹೊಸೀಲಾರದ ಹಗ್ಗ
ತಿದ್ದಲಾಗದ ಬಸವ (ಸು ೨೨೦)

ಆಕಾಶ, ಹಾವು, ಹುಲಿ

ಅತ್ತೆ ಹಾಸ್ಗೆ ಯತ್ತೊಲ್ಬತ್ತಿಲ್ಲೆ
ಮುತ್ನಮಣಿ ಹೆಕ್ಕೂಲ್ಬತ್ತಿಲ್ಲೆ (ಶಾಂ ನಾ ೫)

ಅತ್ಯೋರ್ಹಸೆ ಯತ್ಲಾರೆ ಬಿದ್ಮುತ್ಹೆಕ್ಲಾರೆ (ಶಾಂ ನಾ ೪)

ನನ್ತಂದೆ ಚೀಲ್ದಲ್ಲಿ ದುಡ್ತುಂಬಿದ್ದು ಲೆಕ್ಕಾ ಮಾಡೂಲಾಗ್ತಿಲ್ಲೆ (ಶಾಂ ನಾ ೬)
ಬೆಳ್ಳಿ ಬಟ್ಲಲ್ಲಿ ಮುತ್ತುಂಬಿದ್ದು (ಶಾಂ ನಾ ೧)

ಹಿತ್ಲ ತುಂಬಾ ಹೂಗು ಆಯೂಲ್ಬತ್ತಿಲ್ಲೆ ಮೆಡೂಲ್ಬತ್ತಿಲ್ಲೆ (ಶಾಂ ನಾ ೩)

ಹಿತ್ಲೆ ತುಂಬಾ ಹೂಗು ಆಯೂಲೆ ಕಯ್ಮಾತ್ರುಟ್ಟಿಲ್ಲೆ (ಶಾಂ ನಾ ೨)

ಆಕಾಶಾ ತಾರಕ್ಲು

ಕಾಲ ಮ್ಯಾಲ್ಕ ಮಾಡಿ ನೀರ ಕುಡೀತತಿ
ಮೂಗಿನಾವ ಬರ್ತಾನ ನೀ ಲಗು ಹೋಗು
ನಿನಗಿದನ್ಯಾವ್ದ ಹೇಳಿತು ತಲಿಯಿಲ್ಲದ್ದು
ನನಗ್ಹೇಳಿತು ಒಂದಾ ನಾಲಗಿದು (ಲಠ್ಠೆ ಭಾಗ–೩–೨೬)

ಆಡ, ಆನಿ, ಏಡಿ, ಗಂಟೆ

ಒಂದು ಕೆರೆಗೆ ಎರಡು ತೂಬು (ವಾಲಿ ೪–೪೧)

ಆಡಿನ ಕೆಚ್ಚಲು, ಮೊಲೆಗಳು

ಸರ್ ಸಟ್ ಬ್ಯಾ ಪಟ್ ಗುಡು ಗುಟ್ಟಂ (ಇ ೯೨೭)

ಆಡಿನ ಹಿಕ್ಕಿ

ಅಲ್ಲೀ ಬುಳು ಬುಳು ಇಲ್ಲೀ ಬುಳು ಬುಳು
ಕಲ್ಯಾಣದ ತನಕಾ ಬುಳು ಬುಳು (ಇ ೧೩೬)

ಆಡಿನ ಹಿಕ್ಕೆ

ಅಕ್ಕ ತಂಗೀರು ಅಲ್ಲಾ ಚಿಲ್ಲೀರು
ಚಿಕ್ಕಪಟ್ಟಣದಲ್ಲಿ ಹೋಗಿ ಚಿಗುರು ಕುಯ್ತಾರೆ (ಲ ಗೌ ೫)

ಕಾಲು ಸಣ್ಣ ಕೈ ಸಣ್ಣ
ಬೆಟ್ಟದ ಮೇಲೆ ಬೆರಕೆ ಸೊಪ್ಪು ಕುಯ್ಯುತ್ತದೆ (ಲ ಗೌ ೪೪೩)

ತೊಂಡೆ ಕೆರೆ ಏರಿ ಮೇಲೆ
ತಲೆ ಕೆಳಗೆ ಮಾಡಿ ಕಾಲು ಮೇಲ್ ಮಾಡಿ ನೀರು ಕುಡೀತದೆ (ಲ ಗೌ ೬೨೨)

ಪುಟ್ಟ ಹೊತ್ತುಕೊಂಡು ಪುನಾಸು ಬಿಟ್ಟುಕೊಂಡು
ಬೆಟ್ಟದ ಮೇಲೆ ಬೆರಕೆ ಸೊಪ್ಪು ಕೊಯ್ತಾಳೆ (ಲ ಗೌ ೭೩೧)
ಆಡು

ಅಂಗಾಲು ಮೇಲಾಗಿ ನೀರು ಕುಡಿವಾತ
ಇಂದಿನಾ ಹಬ್ಬಕ್ಕೆ ನಿನ್ನ ಹೊಸನಾತ (ವಾಲಿ ೬– ೯)
ಆಡು (ಮೇಕೆ)

ಅಂಗಾಲು ಮೇಲಾಗಿ ನೀರು ಕುಡಿವಣ್ಣಾ
ಮೂಗಿನವ ಬರುತಿಹನು ಕಡೆಗೆ ಸಾರಣ್ಣಾ
ನಿನಗಾರು ಹೇಳಿದರು ತಲೆಯಿಲ್ಲದಣ್ಣಾ
ನನಗೊಬ್ಬ ಹೇಳಿದನು ಕರುಳಿಲ್ಲದಣ್ಣಾ (ವಾಲಿ ೬–೪೧)
ಆಡು, ಆನೆ, ಏಡಿ, ಗಂಟೆ

ಅಂಗಾಲು ಮೇಲಾಗಿ ನೀರು ಕುಡಿವಾತ
ಮೂಗಿನವ ಬರುತಾನೆ ಅತ್ತತ್ತ ಸಾರು
ನಿನಗಾರು ಪೇಳಿದರು ಕರಳಿಲ್ಲದವನೆ
ನನಗೊಬ್ಬ ಹೇಳಿದನು ತಲೆಯಿಲ್ಲದವನು (ಚಂ ಸೆ ೨೯)
ಆಡು, ಆನೆ. ಮೊಸಳೆ, ಏಡಿ

ಅಕ್ಕ ತಂಗಿಯರು ಮುಳ್ಳಿನ ಬನದಲ್ಲಿ
ಚಿಗುರನ್ನು ಕೊಯ್ಯುತ್ತಾರೆ (ವಾಲಿ ೬–೩೧)
ಆಡುಗಳು

ಅಕ್ಕ ತಂಗೇರು
ಜಕ್‌ಮಲ್‌ಗಿತ್ತೇರು
ಮಕ್ಕಳ್ ಕರ್ಕೊಂಡು
ಚುಂಚುನಗಿರಿ ಬೆಟ್ಟಕ್ಕೆ
ಚಿಗುರು ಬಿಡ್ಸೋದಕ್ಕೆ ಹೋಗ್ತಾರೆ (ನಾ ಗೌ ೫)

ಅಲ್ಲಿ ಪಿಳಿ ಪಿಳಿ
ಇಲ್ಲಿ ಪಿಳಿ ಪಿಳಿ
ಕಲ್ಲೊಳಗೂ ಪಿಳಿ ಪಿಳಿ (ನಾ ಗೌ ೪೦)
ಆಡುಗಳು ಮತ್ತು ಮರಿಗಳು

ಅಂಕುಬಂಕಾದ ಆಲದ ಮರ
ಅದರ ಮ್ಯಾಲ ಕಂಚಿನ ಫಲ
ಅದರ ಮ್ಯಾಲ ಮಲ್ಲಿಗಿ ರಾಸಿ (ಲಠ್ಠೆ ಭಾಗ–೪–೩೧)
ಆಢಣಗಿ, ತಳಿಗಿ, ಅನ್ನ

ಸುತ್ತ ಬೇಲಿ ಕಟ್ಟೋ ಹಾಗಿಲ್ಲ
ನಿಂತ ನೀರು ಹುಯ್ಯೋ ಹಾಗಿಲ್ಲ
ಬೆಳೆ ಬರೋದು ತಪ್ಪೋದಿಲ್ಲ (ಇ ೯೫೭)
ಆಣಜಿ

ಅಲ್ಲೂ ಇಲ್ಲ ಇಲ್ಲೂ ಯ ಇಲ್ಲ
ಬಾಜಾರದಾಗಿಲ್ಲ
ಮುಡು ಕೊಟ್ರೂ ಸಿಗೊದಿಲ್ಲ (ಇ ೧೩೮)

ಸ್ವರ್ಗದಿಂದ ಬಂದ ಹಣ್ಣು
ಕೊಟ್ಟಾಗ ಇತ್ತು ಇಟ್ಟಾಗ ಇಲ್ಲ
ಆಣೆಕಲ್ಲು (ಶಾಂ ನಾ ೨೭೪)

ಸರದಾರ ಸಾಬರ ತೋಟದಲ್ಲಿ
ಬರದಾರ ಸಾಬರ ಬೆಳ್ಳುಳ್ಳಿ
ಅಗಿದರೆ ಸಿಪ್ಪೆಯಿಲ್ಲ
ನುಂಗಿದರೆ ಬೀಜವಿಲ್ಲ (ರಾ ಗೌ ೪೪೧)
ಆನಕಲ್ಲು

ನಾಡಿನಾಗಿಲ್ಲ
ನಾಡಿನ ಅಂಗಡ್ಯಾಗಿಲ್ಲ
ತಂದೊಂದ ತಿಂದ್ರ
ಬೀಜನೂ ಇಲ್ಲ (ಲಠ್ಠೆ ಭಾಗ–೨ ೪೪)
ಆನಿಕಲ್ಲ

ಕರಿಯಪ್ಪ ಕರಿಯಪ್ಪ
ಎಷ್ಟು ಎತ್ತರ ಎಷ್ಟು ದಪ್ಪ
ಇದ್ದರೂ ಬೆಲೆ ಸತ್ತರೂ ಬೆಲೆ (ಲ ಗೌ ೩೯೯)

ಕರ್ಯಾಪ್ಪ ಕರ್ಯಾಪ್ಪ
ಎಷ್ಟ ಉದ್ದ ಎಷ್ಟ ದಪ್ಪ
ನೀ ಇದ್ರೂ ಬೆಲಿ ಸತ್ರೂ ಬೆಲಿ (ಲಠ್ಠೆ ಭಾಗ ೩– ೨೩)

ಕೃಷ್ಣ ದೇವರಿಗೆ ಹಿಂದಕ್ಕೂ ಬಾಲ ಮುಂದಕ್ಕೂ ಬಾಲ (ಲ ಗೌ ೪೬೪)
ಬಿಸಲ್ವಾಡಿ ಬೆಟ್ಟದ ಮೇಲೆ ಎಸಲ್ಗೆ ಮರ ಹುಟ್ಟಿ
ಹೆಸರಿಗೆ ಎಂಬತ್ತು ಕುಸಲಿಗೆ ಮೂವತ್ತು
ಒಗಟೊಡೆದವನಿಗೆ ಕಜ್ಜಾಯ ತುಪ್ಪ (ಲ ಗೌ ೭೬೪)

ಸತ್ರೂ ಸಾವ್ರಾ ಎದ್ರೂ ಸಾವ್ರಾ (ಶಾಂ ನಾ ೨೫)
ಆನೆ

ಗಾಳಿಯಿಲ್ಲದೆ ಇರುವುದು ಮರವಲ್ಲ
ನೀರಿನಲ್ಲಿರುವುದು ಮೊಸಳೆಯಲ್ಲ
ಸಾಧು ಪ್ರಾಣಿಯಿದು ಕುರಿಯಲ್ಲ (ಚಂ ಸೆ ೧೧೭)
ಆಮೆ

ಒಬ್ಬ ಯಜಮಾನ ನೂರಾರು ಸಂತೆ ಆಳುವನು
ಆ ಸಂತೆಗೆ ಯಾರು ಯಜಮಾನ? (ಲ ಗೌ ೨೬೯)
ಆಯಾ ಸಂತೆಯ ವಾರ

ತಟ್ಟೆ ಆಡುತ್ತೆ ತಮಾಷೆ ಮಾಡುತ್ತೆ ಮುಟ್ಟಿದರೆ ಕಚ್ಚುತ್ತೆ (ಲ ಗೌ ೫೮೦)
ಆರತಿ

ಎಲೆ ಉಂಟು ಅಡಿಕೆ ಉಂಟು ವೀಳ್ಯ ತಾನಲ್ಲಲ್ಲ
ಜಡೆಯುಂಟು ಮಡಿಯುಂಟು ತಪಸಿ ಮೊದಲಲ್ಲ
ಒಡಲಲ್ಲಿ ಹಾಲುಂಟು ಕಾಮಧೇನು ತಾನಲ್ಲ
ಇದ ಹೇಳಬಲ್ಲ ಜಾಣರಿಗೆ ಸಮನಿಲ್ಲ (ಚಂ ಸೆ ೫೬)

ಸುಸಾ ಬೀಜ ಅಟವೃಕ್ಷ (ಜೀಶಂಪ ೨೬೨)
ಆಲದ ಮರ

ಜಡೆದ್ರೂ ಮುನ್ಯಲ್ಲಾ ಹಾಲೆದ್ರೂ ಬಾಳ್ಳ್ಯಲ್ಲಾ (ಶಾಂ ನಾ ೧೪೨)
ಆಲ್ದ ರಾ

ಮ್ಯಾಲಿಂದ ಬಿದ್ದ ಬತ್ತಾಸ
ಹಿಡಿಯೂದರಾಗ ಕರಗ್ತಾದ
ಆಲಿಕಲ್ಲು (ವಾಲಿ ೧–೫೨)

ಅಪ್ಪಾಜಿಗೌಡರ ತೋಟ
ಎಪ್ಪತ್ತೈದು ಗೂಟ
ಬಗ್ಗು ಹುಣಸೆ
ಬಾಗು ಹುಣಸೆ
ಬಗ್ಗಿದರೆ ಜಲದ ಹುಣಸೆ
ನಾನು ತಿನ್ನುವ ಹಣ್ಣು
ರಾಜರ ತೋಟದಲ್ಲಿಲ್ಲ
ಸಿಪ್ಪೆಯಿಲ್ಲ ಬಿತ್ತವಿಲ್ಲ ಹಾಗೇ ನುಂಗುವುದು (ಲ ಗೌ ೬೭)

ಎಡೆದರೆ ಸಿಪ್ಪೆಯಿಲ್ಲ
ತಿಂದರೆ ಬಿತ್ತವಿಲ್ಲ
ಭೂಮಿಯಲ್ಲಿಲ್ಲ
ಆಕಾಶದಲ್ಲಿಲ್ಲ (ಲ ಗೌ ೨೧೫)

ಆನಕಲ್ ಮಳೆ ಹೂದು
ಜೇನ್‌ಕಲ್ ಕೆರೆ ತುಂಬಿ
ಕೊಳ್ಳುವವರವರೆ ತಿನ್ನೋರಿಲ್ಲ (ಜೀಶಂಪ ೬೫)

ನಾ ತಿನ್ನೋ ಹಣ್ಣು ಭೂಮೀಲಿ ಇಲ್ಲ
ಭೂಲೋಕದಲ್ಲಿಲ್ಲ
ರಾಮರಾಯರ ತೋಟದಲ್ಲಿಲ್ಲ
ಬುಡನ್ ಸಾಬರ ಅಂಗಡಿಲ್ಲಿಲ್ಲ
ಎಡದರೆ ಸಿಪ್ಪಿಲ್ಲ
ತಿಂದರೆ ರುಚಿಯಿಲ್ಲ (ಲ ಗೌ ೬೫೯)

ನಾನ್ತಿನ್ನೋದೊಂದ್ಹಣ್ಣು
ಭೂಮೀಲಿಲ್ಲ
ಭೂಲೋಕದಲ್ಲಿಲ್ಲ
ಅಕ್ಕ ಮಾರಿ ತೋಟದಲ್ಲಿಲ್ಲ
ರಾಜಸಾಬಿ ದಿನದಲ್ಲಿಲ್ಲ (ಜೀಶಂಪ ೧೮೨)

ಭೂಮೀಲಿ ಬೆಳೆಯೋದಲ್ಲ
ತೋಟದ ಸಾಬಿ ಮಾರೋದಲ್ಲ
ಅಗಿದರಿ ಬೀಜ ಇಲ್ಲ
ಸುಗಿದರೆ ಸಿಪ್ಪೆಯಿಲ್ಲ
ಮಳೆ ಬಂದಾಗ ಬೆಳೆ ಆಯ್ತದೆ (ಲ ಗೌ ೮೦೫)

ಭೂಲೋಕದಲ್ಲಿಲ್ಲ
ಅಂಗಡೀಲಿಲ್ಲ
ಔಷಧಿಗೆ ಬರ್ತದೆ (ಲ ಗೌ ೮೦೭)

ಸ್ವರ್ಗದಿಂದ ಬಂತು
ಬಂದಾಗ ಇತ್ತು ಇಟ್ಟಾಗ ಇಲ್ಲ (ಚಂ ಸೆ ೨೨೧)
ಆಲಿ ಕಲ್ಲು

ನಾ ತಿಂದ ಹಣ್ಣು
ಭೂಮಿಲಿಲ್ಲ
ಭೂಲೋಕದಲ್ಲಿಲ್ಲ
ತೋಟದಲ್ಲಿ ಬೆಳೆಯೋದಿಲ್ಲ
ಸಂತೇಲಿ ಮಾರೋದಿಲ್ಲ (ಮಂ.ಕ.) (ಮಂ ೨.೧–೨೦)

ನಾ ತಿಂದ ಹಣ್ಣು
ಭೂಲೋಕದಲ್ಲಿಲ್ಲ
ಆಕಾಶದಲ್ಲಿಲ್ಲ
ರಾಜಸಾಬ್ರು ತ್ವೋಟದಲ್ಲೂ ಇಲ್ಲ
ಅಗದ್ರೆ ಬಿತ್ತಿಲ್ಲ ಎಡದ್ರೆ ಸಿಪ್ಪಿಲ್ಲ (ಮೈ.ಕ.) (ಮಂ ೨.೧–೨೧)
ಆಲೀಕಲ್ಲು

ಹೊಳೆ ಹೊಲದಲ್ಲಿ
ಮರಳು ಗುಡ್ಡೇಲಿ
ಒಂದಿಳ್ಳಿಕಾಯ್ ಗಾತ್ರ
ಒಂದ್ ಬೊಡ್ಡೇಲಿ ಐದಾರಿರ್ತವೆ (ರಾ ಗೌ ೫೦೮)
ಆಲೂಗೆಡ್ಡೆ

ಒಂದು ಕುಣೀಲಿ ಇಬ್ರು ಉಚ್ಚೆ ಹೂಯ್ತಾರೆ (ಲ ಗೌ ೩೪೬)

ಮೂರು ಜನ ನಾರಿಯರು ಒಂದೆ ಬಾಯಲ್ಲಿ ಉಗುಳುತ್ತಾರೆ (ಲ ಗೌ ೮೬೫)
ಆಲೆ ಕಣೆ

ವಟ್ಟಿದ ಬಣಮಿ ಸುಟ್ಟರ ಪುಣ್ಣ್ಯ
ಕಟ್ಟಿದ ಕರಿಮಣಿ ಕಡಿದರ ಪುಣ್ಣ್ಯ
ತುಂಬಿದ ಕೊಡ ವಡದರ ಪುಣ್ಣ್ಯ (ಲಠ್ಠೆ ಭಾಗ–೫, ೨೬೮)
ಆವುಗಿ, ಬೇಡಿ, ಟೆಂಗ

ಆಕಾಸಕ್ಕಿಂತ ಅಗ್ಗ
ಭೂಮಿಗಿಂತ ಭಾರ (ಮಂ ೧.೩–೨)
ಆಸೆ

ಕೆಳಗಿನ ಗದ್ದೆಯ ನೀರಿನಲ್ಲಿ
ಮೇಲಿನ ಗದ್ದೆಯ ಬೆಳೆಯಾಗುತ್ತದೆ **(ಚಂ ಸೆ ೧೦೮)**

ನೀರಿದ್ದ ಕೆರೆ ಬರಡು ನೀರಿಲ್ಲದ ಕರಿಯಲ್ಲಿ ಬೆಳೆ (ಶಾಂ ನಾ ೪೨೭)

ಮಲಣ್ಣ ಗೆದ್ದಲಿ ಬೆಳೆ ಕಳಗಣ್ ಗೆದ್ದೆಲಿ ನೀರು (ಶಾಂ ನಾ ೪೨೯)

ಹಿಂದ್ಕುಟ್ ಮುಂದ್ಕುಟ್ ತಂದಾ
ಸಾವಿರಕಣ್ಣವಳ್ತಂದಾ
ಸೂಜಿ ಮುಕ ದವ್ಳ್ ತಂದಾ (ಶಾಂ ನಾ ೪೨೮)
ಇಡ್ಲಿ

ಇಟ್ಟಾಯಿತ್ಲೆ ಜುಟ್ಟು ಕುಣಿಸ್ತು (ಮಂ ೧.೫–೧೮)
ಇಡುಗಲು

ಹಳ್ಳದಲ್ಲಿ ಸಿಳ್ಳೆಕ್ಯಾತ (ಸು ೫೦೬)
ಇಣಚಿ (ಅಳಿಲು)

ಕಬ್ಬಿಣ್ಣದ ಕಡಾಯ
ಬೆಳ್ಳಿ ನೆರಾಯ
ನೀರೈತಿ ಮೀನಲ್ಲ (ಇ ೩೩೭)

ಸುಟ್ಟ ಹೆಣಾನ ತಿರುಗಿ ಸುಡತಾರ (ಇ ೯೪೯)
ಇದ್ದಲಿ

ಸುಟ್ಟ ಹೆಣಾ ಸುಡತಾರ (ಲಠೈ ಭಾ–೫, ೨೭೯)
ಇಲ್ಲಿ

ಒತ್ತೊಕ್ಕೊಂದು ಮುತ್ತು (ಮಂ ೨.೧–೧೩)

ಮಿಣಕ ಪಿಣಕ್ಕಾ (ಮಂ ೨.೧–೨೫)

ಹಸುರು ಹಾಸಗಲ್ಲು
ಮುತ್ತಿನ ಚಾಪಗಲ್ಲು
ಕಾಲು ತೊಳಿದರೆ
ಕೈಗೆ ನೀರಿಲ್ಲ (ಸು ೫೦೧)

ಹಸುರು ಹಾಸ್ಕಲ್ಲು
ಮುತ್ತಿನ ಮಾಸಕಲ್ಲು
ಮೊಳಕಾಲ್ ನೆನೆಯುತ್ತೆ
ಮೊಗೆಯಾಕೆ ನೀರಿಲ್ಲ (ಜೀಶಂಪ ೨೭೨)

ಹುತ್ತಕೆ ಮೂರು ಮುತ್ತು (ಸು ೫೨೫)
ಇಬ್ಬನಿ

ಭತ್ತಕ್ಕ ಮುತ್ತು ಪೋಣಿಸೇತಿ (ಇ ೭೯೨)

ಬತ್ತಕ ಮೂರ ಮುತ್ತ (ಲಠ್ಠೆ ಭಾ–೨, ೫೦)
ಇಬ್ಬನ್ನಿ

ಬತ್ತಕ್ಕೆ ಮೂರು ಮುತ್ತು
ಇಬ್ಬನಿಗೊಬ್ಬಣ್ಣ
ಬಿಸಿಲಿಗೆ ಬಿರಿಯಣ್ಣ
ಕೆಕ್ಕರಿಕೆಗೆ ಕೆರೆಯಣ್ಣ
ಗೋಡಿಗೆ ಗೊರೆಯಣ್ಣ (ಲ ಗೌ ೭೪೦)
ಇಬ್ಬನಿ, ಬಿಸಿಲು, ಮಿಣಿಕೆಹಣ್ಣು, ಗೋಡು, ಗುದ್ಲಿ

ಕಾಯ ಕಥಲಕ
ಹೂವು ಜತನಕ
ತಪ್ಪಲಕ ನಹಿ (ಇ ೩೮೩)
ಇಮಟ್ಯಾನ ಕಂಟಿ, ಅನ್ನ

ನಾನೊಂದ ಕೀಟ
ಮೊದಲಾಕಸಾರ ಇಲಿಯಲ್ಲಿದೆ ಹುಲಿಯಲ್ಲಿಲ್ಲ
ಎರಡನೇ ಅಕಸಾರ ಕರುವಿನಲ್ಲಿದೆ ಕತ್ತೆಯಲ್ಲಿಲ್ಲ
ಮೂರನೇದ್ದ ಆವೆಯಲ್ಲಿದೆ ಆನೆಯಲ್ಲಿಲ್ಲ (ಲಠ್ಠೆ ಭಾಗ ೩–೪೭)
ಇರವಿ

ಏರಿ ಮೇಲೆ ಎಳ್ಳು ಚೆಲ್ಲಿವೆ (ಜೀಶಂಪ ೮೨)

ಕರಿ ಎತ್ತು ಕಾಲ್ವೆ ದಾಟಲಾರದು (ಜೀಶಂಪ ೧೧೯)
ಇರವೆ

ಯಾರೂ ಹತ್ತದ ಮರಕ್ಕೆ
ಕರಿಯಣ್ಣ ಹತ್ತಾನೆ (ಜೀಶಂಪ ೨೪೪)
ಇರವೆ, ಗೊದ್ದ

ಕಪ್ಪುಂಟು ಕಾಗಿಯಲ್ಲ
ನಾಲ್ಕು ಕಾಲುಂಟು ಪ್ರಾಣಿಯಲ್ಲ
ಸಿಕ್ಕವರನ್ನ ಸಿಕ್ಕಲ್ಲೇ ಕಡಿತೈತಿ
ಪರೇಡ ಮಾಡತೈತಿ (ಇ ೩೩೪)

ಗಿಡ್ಡ ಹುಡುಗ ಒಡ್ಡ ಹಾಕ್ತಾನ (ವಾಲಿ ೬– ೨೪)

ಯಾರೂ ಹತ್ತದ ಮರದಾಗ
ಕಿರಿಮಗ ಓಡ್ಯಾಡತಾನ (ಇ ೯೦೦)
ಇರುವೆ

ಕಾನಾಗಿರ ಕರಿಬೀಳದ ಹುಡುಗ
ರೆಕ್ಕೆ ಮುಚ್ಚದ ಪಕ್ಷಿಯ ಹೇಳು
ತೋಟದಾಗಿರ ತಾಟಗಿತ್ತಿ ಹುಡುಗಿ
ಎಲೆ ದುಂಡಗಿನ ಮರ ಹೇಳು (ಲ ಗೌ ೪೩೯)
ಇರುವೆ, ಪತಂಗ, ಬಾವುಲಿ, ಈರುಳ್ಳಿ

ಕಟ ಕಟ ಕಿಟ ಕಿಟ
ಜಾನಕಿ ಜಂಜೂತಿ
ನೀನು ಕಟ್ಟಿದ ಮನೆಗೆ
ಕಂಬವೇ ಇಲ್ಲ (ಸು ೧೬೫)

ಗುಡುಗುಡು ಗುಮ್ಮ
ಗುದ್ದಲಿ ತಮ್ಮ
ಯಾಕೋ ಕೊಮ್ಮ
ನಾಕೇ ಕಾಲು (ಸು ೨೫೪)

ಚೆಂದೇನ ಚಾಮಾಲೇನ
ರುದ್ರೇನ ರುಕಮಿಯೇನ
ಚಂದಾಳ ತೊಲಿಮ್ಯಾಲ ಹೊಂದ್ಯೊಂದ್ಸಿ ನಡಿತಾಳ (ಲಠ್ಠೆ ಭಾ–೩–೩೮)

ಹಗಲಿಗೆ ಗುಡಿಸಲ ನಿದ್ರೆ
ರಾತ್ರಿಗೆ ದುಡಿತ (ಶಾಂ ನಾ ೨೬)

ಹಸಿರ ಕಣ್ಣಿನವಳ
ಹಂಡ ಬಂಡಿನವಳ
ನಿನಗೂಡ ಯಾತ್ರ ಮಾತಾ
ಘಾತಕ ರಂಡಿ (ಲಠೈ ಭಾ–೩–೬೫)
ಇಲಿ

ಕಟ್ಟ ಕಟಾ ಕಟಾ
ಕಿಟ್ಟ ಕಿಟಿ ಕಿಟಿ ಕಿಟೀ
ಜಾನಕೀ ನಿನ್ನ ಮನೀಗೆ ಕಂಬಾನೇ ಇಲ್ಲ (ಇ ೩೧೧)
ಇಲಿ (ಗುದ್ದು)

ಕತ್ತಲೆ ಮನೇಲಿ ಕರಿಯಣ್ಣ ಬಂದ (ಸು ೧೭೬)
ಇಲಿ ಅಥವಾ ಹೆಗ್ಗಣ

ಬಲ್ಯಾಗ ಬಲಿ ಯಾವ ಬಲಿ (ಲಠೈ ಭಾಗ ೫–೨೦೭)
ಇಲಿ ಬಲಿ

ಕಟಕಟ ಕಿಟಿಕಿಟಿ ಜಾನಕಿ ಜಾಂಬವತಿ
ನಾನು ಕಟ್ಟಿದ ಮನೆಗೆ ಕಂಬವೇ ಇಲ್ಲ (ಲ ಗೌ ೩೬೨)
ಇಲಿ ಬಿಲ

ಹೊನ್ನ ಅಕಸಾರ ಮ್ಯಾಲ
ಹೊಂದಿಸಿ ಕೂತಾಳ
ಚನ್ನಿ ಚನಮಲ್ಲಿ ರುದ್ರಿ
ರಾಜಿ ನಿಲಗಂಗಾ ಬಾಗೀರತಿ
ಇತತ ಬಾರ ನಿನಗೊಂದು ಮಾತ ಹೇಳತೀನಿ (ಲಠೈ ಭಾಗ ೩–೬೭)
ಇಲಿ, ಬೆಕ್ಕ

ಕಟಕಟ ಕಿಟಕಿಟಲ್ಲ
ಜಂಬೂಕಿ ಜಾನಕಿ
ನೀ ಕಟ್ಟಿದ ಮನೆಗೆ ಕಂಬವಿಲ್ಲ (ಚಂ ಸೆ ೭೪)
ಇಲಿಯ ಬಿಲ

ಕಂಬ
ಕಂಬದ ಮೇಲೆ ಕುಂಬ
ಕುಂಬದ ಮ್ಯಾಲೆ ಜಾಲೂರು
ಜಾಲೂರು ಮೇಲೆ ಜಾರಿಕೊಂಡು
ಬರುವ ರಾಜನ ಹೆಸರೇನು (ಇ ೪೪೦)
ಇಲಿ ರಾಜ

ಬೆಳ್ಳಿ ಗಿಂಡೀಲಿ ಚಿನ್ನದ ಚೂರು (ಚಂ ಸೆ ೧೯೧)
ಇಲೆಕ್ಟಿಕ್ ಬಲ್ಬು

ಉದ್ದನ್ನ ಹೆಂಗಸಿನ ಬದ್ದೆಲ್ಲ ಹುಳುಕ
ಅವಳು ಕೊಟ್ಟ ಹಾಲು ಬಲು ರುಚಿ (ವಾಲಿ ೨–೪೪)

ಉದ್ದ ಹೆಂಗಸು ಮೈಯೆಲ್ಲಾ ತರಿತರಿ (ಲ ಗೌ ೧೯೩)

ಉದ್ದಾನೆ ಹೆಂಗಸಿಗೆ ಬದ್ದೆಲ್ಲ ಹರಕು (ಲ ಗೌ ೧೯೭)
ಈಚಲ ಮರ

ಹುಟ್ಟುತಲೆ ಕೆಂಪುಂಟು ಹವಳ ತಾನಲ್ಲ
ಬೆಳೆಯುತಲೆ ಕಪ್ಪಾಗಿದೆ ಮಸಿಯು ತಾನಲ್ಲ
ಅದನ್ನು ಹೇಳಿದವನು ಬಲು ಜಾಣ (ಶಾಂ ನಾ–ಅನುಬಂಧ ೩೯)
ಈಚಲ ಹಣ್ಣು

ಗುದ್ದಲಿ ಊರಲಿಲ್ಲ ಗುಳಿ ಮಾಡಲಿಲ್ಲ
ತಿಂಗಳಿಗೆ ಒಕ್ಕಳ ಕಾಯಿ ತಪ್ಪದೆ ಬಿಡ್ತಿತ್ತು (ಸು ೨೫೬)
ಈಚಲು ಕಾಯಿ

ಅವ್ವ ತಲೆಗೆದರಿ
ಮಗಳು ಸುಭದ್ರೆ (ರಾಗೌ ೪೬)

ಉದ್ದನೆ ಹೆಂಗಸಿಗೆ
ಬದ್ದೆಲ್ಲ ಹುಳುಕು
ಅವಳು ಕೊಟ್ಟ ಹಾಲೆಲ್ಲ ಬಹುರುಚಿ (ರಾಗೌ ೯೯)

ನಿನ್ನ ನೋಡಿದರೆ ಮತ್ತೇರ್ತದೆ
ಮೈ ನೋಡಿದರೆ ಉರುಕರುಕು (ಸು ೩೩೮)
ಈಚಲು ಮರ

ಅಡಕಿಯಷ್ಟು ಹೆಂಡಿ ತಂದು
ಅರವತ್ತ ಮನಿ ಸಾರಿಸಿ
ಅವರ ಹೆಂಡಿ ಅವರಿಗಿ ಕೊಟ್ಟ (ಲಠ್ಠೆ ಭಾ–೫, ೧೦)

ಅದ್ದೆಲಿ ಕೊಟ್ಟ ತುಪ್ಪ ತಂದ
ಮಗಾ ಮಲ್ಲಪ್ಪ ಉಂಡ
ಅಳ್ಯಾ ಚಂದ್ರಪ್ಪ ಉಂಡ
ಹ್ಯಾಂಗಿದ್ದ ತುಪ್ಪ ಹಾಂಗಾ ಇತ್ತ
ಏನ ಹೇಳ (ಲಠ್ಠೆ ಭಾ– ೫, ೧೮)

ಒಂದ ಹೋಳಿಗಿ
ಒಂಬತ್ತ ಮಂದಿ ಊಟಾ ಮಾಡ್ತಾರ (ಲಠೈ ಭಾ–೫, ೧೦೨)

ಗುಂಡನ ಮಾರಿ ಗುರಸಿದ್ದಾ
ಹಿಂದಕ ನಮಗ ಕರಸಿದ್ದಾ
ಕುಂಡಿ ಹಚ್ಚಿ ಬರಸಿದ್ದಾ (ಲಠೈ ಭಾ–೫, ೧೫೨)
ಈ ಬತ್ತಿ

ಅವರೆಕಾಳು ಗಾತ್ರ ಬಂಗಾರ
ಮನೆ ಮಕ್ಕಳಿಗೆಲ್ಲ ಸುಂಗಾರ (ಸು ೪೯)

ಒಂದು ಹೋಳಿಗೆ
ನೂರಾಳಿಗೆ (ಸು ೧೫೨)
ಈಬತ್ತಿ (ವಿಭೂತಿ)

ಅಯ್ಯಗ ಮೂರ ಅಪ್ಪಗ ಮೂರ ಅವ್ವಗ ಎಡ್ಡಾ (ಲಠೈ ಭಾ–೫, ೨೩)
ಈಬತ್ತಿ ಪಟ್ಟ

ಅಗ್ನಿ ಪ್ರಭುಲಿಂಗನಯ್ಯ
ರುದ್ರಭೂಮಿಯಲ್ಲಿದ್ದೇನಯ್ಯ
ಗುದ್ದಲಿ ಶಾಂತವೀರಯ್ಯ ಬಂದು
ಎಬ್ಬಿಸಿಕೊಂಡು ಬಂದಾರಯ್ಯ
ಬಸವನ ಪಟ್ಟ ಏರಿದೆನಯ್ಯ
ಹೊಸ ಪ್ಯಾಟೀಗೆ ನಡೆದೆನಯ್ಯ
ಅನ್ನ ಶಾಂತವೀರರ ಜೊತೆಗೆ
ಸ್ವರ್ಗಲೋಕ ಸೇರಿದೆನಯ್ಯ (ವಾಲಿ ೨–೮೧)

ಅಡೀಲಿ ಗುಂಜು ನಡು ತಾಮ್ರ
ಮೇಲೆ ಚಿನ್ನದ ಕಿರೀಟ (ರಾಗೌ ೧೫)

ಅಡ್ಡ ಕುಯ್ದರೆ ಚಕ್ರವಲ್ಲ
ಉದ್ದ ಕುಯ್ದರೆ ಶಂಖವಲ್ಲ
ಮೂಸಿದರೆ ವಾಸನೆ
ಬಿಡಿಸಿದರೆ ಹತ್ತಿಪ್ಪತ್ತು (ಜೀಶಂಪ ೧೩) (ಜೀಶಂಪ ೩೪)

ಅತ್ತಲಿಂದ ಒಬ್ಬ ಯೋಗೇಶ್ವರ ಬಂದ
ಜಾಗ ಒಳ್ಳೇದು ಅಂತ ಮೂರು ತಿಂಗಳು ನೆಲಗೊಂಡ
ಗುದ್ದಲಿ ಹಂಪಲಿ ಬಂದು ಎಬ್ಬಿಸಿಕೊಂಡು ಹೋದ
ಶಿಲಾ ಸಿದ್ಧಲಿಂಗಪ್ಪನೋರ ಎದುರುಗೊಳ
ಅನ್ನದ ಮಾಂತಪ್ಪನೋರ ಸಂಗಡ ವಿಗ್ರಹವಾದ (ಸು ೩೨)

ಅಂಗಡಿಯಿಂದ ತರೋದು
ಮುಂದಿಟ್ಕೊಂಡು ಅಳೋದು (ಸು ೬೧)

ಕೆಳಗೆ ಗುಂಜು ನಡುವೆ ತಾಮ್ರ
ಮೇಲೆ ಹೂವಿನ ಕಿರೀಟ (ವಾ ೨–೧೬)

ಅಂಗ್ಡಿಯಿಂದ ತರೋದು
ಮನೇಲಿ ಕುತ್ಕೊಂಡ್ ಅಳೋದು (ಜೀಶಂಪ ೯)

ಏಳು ಅಂಗಿ ಮ್ಯಾಲೆ ಒಂದು ಹರಕು ಅಂಗಿ (ಇ ೨೫೯)

ಕಾಲಿಲ್ಲದ ಕೋಳಿಗೆ
ಕಾಸ್ಕೊಟ್ಟು ತಂದು
ಕೊಯ್ನಾಗ ಅಳ್ತಾರೆ (ರಾಗೌ ೧೯೮)

ಕಾವಿ ಕಮಂಡಲ ಧರಿಸಿದೊರ್ಯಾರು
ಮೂರು ತಿಂಗಳು ಭೂಮೀಲಿದ್ದೋರ್ಯಾರು

ಕೆಂಡಗಣ್ಣಿನಂತಹ
ಲಿಂಗಾ ದೇವರಂತೆ
ನೆಲಮಾಳಿಗೆಯೊಳಗೆ
ಮೂರು ತಿಂಗಳು ಇದ್ದರಂತೆ
ಗುದ್ದಲಿ ಗುರುಶಾಂತಪ್ಪೋರು
ಬಂದು ಅಬ್ಬರಿಸಿದಾಗ
'ಹರ' 'ಹರ' ನರಮುಟ್ಟಿತೆಂದು
ಎಬ್ಬರಿಸಿದರು (ರಾಗೌ ೨೧೬)

ಕೆಂಪು ಕೋಳಿ ಕೆಸರಾಗೆ ಮೊಟ್ಟೆ ಇಕ್ಕಿತು (ಸು ೨೩೨)

ಗುದ್ದರೆ ಗೂದೆ ಕಡಕೊಳ್ತು (ರಾಗೌ ೨೩೫)

ಗುದ್ದಿದರೆ ಗೂದಿ ಹೊರಬಿತ್ತು (ವಾಲಿ ೨–೪೯)

ಗುದ್ದೇಟಿಗೆ ಗೂದ್ ಕಡ್ಕತ್ತು (ಮಂ ೧.೪–೪೩)

ಗುದ್ಲಪ್ಪನವರು ಎಬ್ಬಿಸಿದವರ್ಯಾರು (ಜೀಶಂಪ ೧೨೮)

ಚೋಟುದ್ದ ಹುಡುಗಿ ಹತ್ತಾರು ಸೀರೆ ಸುತ್ತಿದ್ದಾಳೆ (ಲ ಗೌ ೫೬೫)

ತಳ ತಾಮ್ರ ನಡ ಪಚ್ಚೆ ಕೊನೆ ಮುತ್ತು (ಸು ೨೯೬)

ತಿಪಟೂರು ಬಸಪ್ಪ ಅಬಟೂರು ಸಂತೆಗೆ ಹೋಗಿ
ಕಾಡಬಸಪ್ಪನವರ ಕಾಲಿಗೆ ತಿಕ್ಕಿದರೆ ಜಜ್ಜಿಪಜ್ಜಿ (ಲ ಗೌ ೬೦೩)

ತೋಳು ತಾಮ್ರ
ನಡು ಪಚ್ಚೆ
ಗೊನೆ ಮುತ್ತು (ಜೀಶಂಪ ೧೭೬)

ಬಣ್ಣ ವುಟ್ಟಕೊಂಡು ಬದೀಲಿ ಕೂತವ್ಳೆ (ಮಂ ೧.೪–೫೭)

ಬಣ್ಣ ವುಟ್ಟಕೊಂಡು ಮಣ್ಣಿಗೆ ಮರೆಯಾದ (ಮಂ ೧.೪–೫೮)

ಬುಡ್ಡ ಬುಸುಗ ಮುಳ್ಳಾಗೆ ಹೂಣ (ಸು ೩೭೯)

ಮರಳ್ಳಿ ಸಂತೇಲಿ
ಮರಿ ತಂದು ಕುಯ್ಯುಯ್ಯ ಖಂಡ (ಲ ಗೌ ೮೨೩)

ಮೂಗೂರ ಮುದುಕಿಗೆ
ಗುದ್ದು ಗುದ್ದಿದ ತಾವೆಲ್ಲ ಗೂದೆ ಕಡ್ಕತ್ತು (ಲ ಗೌ ೮೫೪)

ಮೂಗೂರು ಸಂತೇಲಿ
ಒಂದು ಮುದುಗುರಿ ತಂದು ಕುಯ್ದರೆ ಬರಿ ಚರ್ಮ (ಸು ೪೧೯)

ಮ್ಯಾಲ ಕಳ್ಳಿ ಬಡ್ಡಾ ಗ ಬೆಳ್ಳಿ (ವಾಲಿ ೨–೬೬)

ಲಂಗದ ಮೇಲೆ ಲಂಗ (ಲ ಗೌ ೮೯೪)

ಈರುಳ್ಳಿ

ಅಡ್ಡ ಕೊಯ್ದ್ರೆ ಚಕ್ರಾ ಉದ್ದಕ್ಕೊಯ್ದ್ರೆ ಶಂಕಾ
ಮೂಸಿರೆ ವಾಸ್ನೆ ಬಿಡ್ಸಿರೆ ಹತ್ತಿಪ್ಪತ್ತು (ಶಾಂ ನಾ ೧೪೫)

ಅಂಗ್ಡಿಂದ ತತ್ತೊ ಮುಂದಿಟ್ಟಾ ತೀಡ್ತೊ (ಶಾಂ ನಾ ೧೪೮)

ಅಂಬಾರ ಬಟ್ಟಾ ತುಂಬಾರೆ ಬಟ್ಟಾ ಯೇಳುಪದರಿನ ತೊಟ್ಟಾ
ಪೇಟೆಗೆ ಹೋಗಿ ಕಷ್ಟಾಪಟ್ಟು ವಲೆಮುಂದೆ ಜೀವಾ ಬಿಟ್ಟಾ (ಶಾಂ ನಾ ೧೪೬)

ಕೊಂಡೋರೆ ಕೊಲ್ತೊ ಕೊಂದೋರೆ ತೀಡ್ತೊ (ಶಾಂ ನಾ ೧೪೭)

ವಂದಜ್ಜಿಗೆ ಹಸ್ತಿ ಕೋಡು (ಶಾಂ ನಾ ೧೪೪)
ಉಳ್ಳಾಗಡೆ

ಆಂ ಬ್ರಂ ಭಟ್ಟಾ
ತುಂ ಬ್ರಂ ಭಟ್ಟಾ
ಏಳ ಪದರಿನ ಅಂಗಿ ತೊಟ್ಟಾ
ಹೈದರಾಬಾದಕ್ಕ ಕಾಲಿಟ್ಟ
ಮುಂಬೈಕ ಹೋಗಿ ಜೀವ ಬಿಟ್ಟಾ (ಇ ೧೭೫)

ಮ್ಯಾಲೆ ಕಳ್ಳಿ
ಬಡ್ಯಾಗ ಬೆಳ್ಳಿ (ಇ ೮೪೮)

ಕಾವಿಕಮಂಡಲ ಧರಿಸಿದೋರ್ಯಾರು
ಮೂರುತಿಂಗಳ ಭೂಮೀಲಿದ್ದೋರ್ಯಾರು
ಗುದ್ದಪ್ಪನವರನು ಎಬ್ಬಿಸಿದವರ್ಯಾರು (ಇ ೩೯೨)

ಚೋಟುದ್ದ ಹುಡುಗಿ
ಹತ್ತಾರ ಸೀರಿ ಸುತ್ತ್ಯಾಳ (ಲಠ್ಠೆ ಭಾ–೪, ೧೦೦)

ಜುಟ್ಟಾ ಬಿಟಗೊಂಡ
ರೊಟ್ಟಿಗ ಬಂದಾನ (ಲಠ್ಠೆ ಭಾ–೪, ೧೦೨)

ದುಡ್ಡ ಕೊಟ್ಟ ತರೋದು
ಮುಂದಿಟಗೋಂಡ ಅಳೋದು (ಲಠ್ಠೆ ಭಾ–೪, ೧೨೧)
ಉಳ್ಳಾಗಡ್ಡಿ

ರೊಕ್ಕ ಕೊಟ್ಟು ತರ್ತಾರೆ
ಮುಂದೆ ಕುಳಿತು ಅಳ್ತಾರೆ (ಇ ೯೧೧)
ಉಳ್ಳಾಗಡ್ಡೆ

ಅಂಚಿ ಇಲ್ಲದ ತಪ್ಪಲ ಯಾವದು (ಲಠ್ಠೆ ಭಾ–೪, ೩೫)

ದುಡ್ಡು ಕೊಟ್ಟು ತಂದು
ಮುಂದ ಕುಂತು ಅಳತಾರ (ವಾಲಿ ೫– ೫)
ಉಳ್ಳಿಗಡ್ಡಿ

ಕಣ್ಣೀರ್ಬಿಡ್ತೇ ಚಾಕೊ ಹಾಕ್ತರ ಅಡ್ಡ ಕೊಯ್ದರೆ ಚಕ್ರವಲ್ಲ (ಶಾಂ ನಾ ೧೪೯)
ಉಳ್ಳಿಗೆಂಡೆ

ಅಡ್ಡಕೊಯ್ಯಲು ಚಕ್ರಾಧಾರಿ
ನಿಟ್ಟಕೊಯ್ಯಲು ಶಂಖಾಧಾರಿ
ಮೂಸಿ ನೋಡಲು ನಿರಾಧಾರಿ (ಲಠ್ಠೆ ಭಾ–೪, ೧೯)

ಅಡ್ಡ ಕೊಯ್ದರೆ ಚಕ್ರವಲ್ಲ
ಉದ್ದ ಕೊಯ್ದರೆ ಶಂಖವಲ್ಲ
ಮೂಸಿದರೆ ವಾಸನೆ
ಬಿಡಿಸಿದರೆ ಹತ್ತಿಪ್ಪತ್ತು (ಲಠ್ಠೆ ಭಾ–೪, ೨೦)

ಕ್ಯಾಂವಿ ಕಮಂಡಲ ಧರಿಸಿದವರ್ಯಾರು
ಮುರ ತಿಂಗಳು ಭೂಮಿಲಿ ಇದ್ದವರ್ಯಾರು
ಗುದ್ಲಪ್ಪನವರು ಎಬ್ಬಿಸಿದವರ್ಯಾರು (ಲಠ್ಠೆ ಭಾ–೪, ೭೩)

ಬುಡಕ ಬೆಳ್ಳಿ ಮ್ಯಾಲ ಕಳ್ಳಿ (ಲಠ್ಠೆ ಭಾ–೪, ೧೪೨)
ಉಳ್ಳಿಗಡ್ಡಿ

ಜುಟ್ಟಾ ಬಿಟಗೊಂಡು ರೊಟ್ಟೀಗೆ ಬಂದಾನ (ಇ ೫೫೬)

ಯಾಕೋ ರಾಮಭಟ್ಟ
ಒಂಬತ್ತ ಪದರಿನ ಅಂಗಿ ತೊಟ್ಟಿ
ಮನ್ಯಾಗ ಬಂದ ಜೀವಾ ಬಿಟ್ಟಿ (ಇ ೮೯೬)
ಉಳ್ಳೇಗಡ್ಡಿ

ಅಪ್ಪ ಸಾಯುವಾಗ
ಮಗಳು ಅಳುತ್ತಾಳೆ (ರಾಗೌ ೩೨)
ಈರುಳ್ಳಿ ಕುಯ್ಯುವುದು

ಮಂಡಲದ ಗುಡ್ಡ
ಮಸಾಣದ ಹೊಲಕ್ಕೆ ಮಧ್ಯೆ ಒಂದು ನರಿ
ನರೀ ತಲೆ ಮೇಲೆ ಒಂದು ಸಿಂಗಾರದ ಗರಿ (ಲ ಗೌ ೮೩೧)
ಈರುಳ್ಳಿ ಪೈರು

ಬಿಳಿ ಕೋಳಿ ಕರಿ ತತ್ತಿ ಇಡತೈತಿ (ವಾ ೨–೨೬)
ಈರುಳ್ಳಿ ಬೀಜ

ಸಂತೇಲಿ ಕೆಂಪಣ್ಣ ಹಾರಾಡ್ತಾನೆ (ರಾ ಗೌ ೪೩೯)

ಹಾದೀಲಿ ಕೆಂಪಕ್ಕ ಹಾರಾಡ್ತಾಳೆ (ಲ ಗೌ ೧೦೩೯)
ಈರುಳ್ಳಿ ಸಿಪ್ಪೆ

ಹಸುರು ಕೋಲಿಗೆ
ಮುತ್ತಿನ ತುರಾಯಿ (ಸು ೫೦೦)
ಈರುಳ್ಳಿ ಹುವ್ವ

ಹಸಿರು ಕೋಲಿಗೆ ಮುತ್ತಿನ ತುರಾಯಿ (ವಾಲಿ ೨–೨೩)
ಈರುಳ್ಳಿ ಹೂವು

ಹಸಿರು ಕೋಲಿಗೆ ಮುತ್ತಿನ ತುರಾಯಿ (ಇ ೧೦೪೬)

ಹಸರ ಕೋಲಿಗೆ
ಮುತ್ತಿನ ತುರಾಯಿ (ಲಠೈ ಭಾ–೪, ೧೪೪)
ಉಳ್ಳಾಗಡ್ಡಿ ಹೂ

ದೊಡ್ಡಳ್ಳಿ ಮರ ದಡ್ಡನೆ ಬೀಳ್ತು
ಸಂತೇರೆಲ್ಲ ಚೆಲ್ಲಾಪಿಲ್ಲಿ (ಲ ಗೌ ೬೩೬)
ಉಳ್ಳಾಗಡ್ಡಿ, ಜವಳಿಕಾಯಿ, ಹೀರೇಕಾಯಿ

ದಿಗ್ ದಿಗ್ ಬರತಾದ ದಿನ್ನಿ ಏರತಾದ
ನೀರ ಕಂಡರ ಹಿಂದಕ ಸರಿತಾದ (ವಾಲಿ ೫–೧೨)
ಉಕ್ಕುವ ಹಾಲು

ಹಳ್ಳದ ದಂಡಿಮ್ಯಾಗ ಒಬ್ಬ ಉಣ್ಣಾಕ ಕುಂತಿದ್ದ
ಉಣುವಾಗ ಹಳ್ಳ ಬಂದ್ರ
ಏನ ಮಾಡಬೇಕು (ಲಠೈ ಭಾ–೫, ೩೦೦)
ಉಗಳಬೇಕು

ಅಬ್ಬಬ್ಬಾ ಅಂತ ಬಂತು
ಬೇವು ಬೆಲ್ಲ ಕೇಳು (ರಾ ಗೌ ೩೩)

ಗಾದ್ಯಾಗ ಗಾದಿ ಯಾಗಾದಿ (ಲಠೈ ಭಾ–೫, ೧೪೬)
ಉಗಾದಿ

ಅಂಬನಾಂಗ ಓಡತೈತಿ
ಕೊಂಬನಾಂಗ ಕೂಗತೈತಿ
ಜಂಬುನೇರಳೆ ಮರ ಜಗ್ಗಂತೈತಿ (ವಾಲಿ ೩–೧೧೯)

ಹಾವಿನಾಂಗ ಹೋಗತೈತಿ ಹಾವಲ್ಲ
ಸಾವಿರ ಮಂದೀನ ನುಂಗತೈತಿ ರಾಕ್ಷಸಲ್ಲ (ವಾಲಿ ೩–೧೨೩)
ಉಗಿಬಂಡಿ

ಅರಸ ಮಕ್ಕಳಿಗಿ
ಅರತಲಿ ಕುಲಾಯಿ (ಲಠ್ಠೆ ಭಾ–೧, ೩)
ಉಗುರ

ಅರಸು ಮಕ್ಕಳಿಗೆ ಅರದೆಲೆ ಕುಲಾವಿ (ಚಂ ಸೆ ೧೯)

ನಿಮ್ಮ ಕೊಟ್ಟಾರಕ್ಕೆ ಬಂದು
ನನ್ನ ಕತಾರಿ ಮುರಿದ್ಹೋಯ್ತು
ಎಷ್ಟು ಬೆಸಕೆ ಹಾಕಿದರೂ ಸೇರೊಲ್ಲ (ರಾ ಗೌ ೩೧೪)
ಉಗುರು

ಕೊಲ್ಲಿಲ್ಲಾ ಕಳ್ಳಿಲ್ಲಾ ತಲೆ ಕತ್ರಸ್ಕೊಳ್ತಾ (ಶಾಂ ನಾ ೭೪)

ಚಂದ್ ಮರಕ್ಕೆ ವಂದೆ ಹಾಳೆ (ಶಾಂ ನಾ ೭೫)
ಉಗ್ರು

ಯಾವ ಬೆನಕಾ
ಅಜ್ಜನ ಬೆನಕಾ
ಉಗುಳಾಕೆ ಬರತೈತಿ
ತಿನ್ನಾಕ ಬರೋದಿಲ್ಲ (ಇ ೯೦೧)
ಉಗುಳು

ಅಂಬು ಹರಿದು ಹೋಯ್ತು
ಗುಂಭ ಕುಂತ್ಕೊತ್ತು (ರಾ ಗೌ ೬೪)
ಉಚ್ಚೆ, ಕಕ್ಕಸು

ಹಾವು ಹರೀತದೆ
ಗೂಬೆ ಕೂತದೆ (ಸು ೫೧೩)
ಉಚ್ಚೆ, ಹೇಲು

ಸರಕಾರದ ಕಟ್ಟೀಮ್ಯಾಲೆ ಸರಗುಡ ಹಾವು
ಹಿಡಿರು ತಂದಾವಗ ಹಿಡಿಹೊನ್ನು (ಇ ೯೭೮)
ಉಡದಾರ

ಪಳ್ಳ ಗಿಡದಾಗ ಕಳ್ಳ ಕುಂತಾನ (ಇ ೬೯೮)

ಬೆಲ್ಲದ ಗಡಿಗ್ಯಾಗ ಬುಲ್ಲಿ ಒಂದದ (ಲಠ್ಠೆ ಭಾ–೪, ೧೪೯)

ಸೊಪ್ಪಿ ತಿಂತಾರ
ಬೀಜಾ ಒಗಿತಾರ (ಲಕ್ಕೆ ಭಾ–೪, ೧೬೬)

ಉತ್ತತ್ತಿ

ಓಣಿಯಲ್ಲಿ ಹುಟ್ಟುವುದು
ಓಣಿಯಲ್ಲಿ ಬೆಳೆವುದು
ಓಣಿಯಲ್ಲಿ ಹೋಗುವವರ
ಸೆರಗು ಹಿಡಿದು ನಿಲ್ಲಿಸುವುದು (ರಾ ಗೌ ೧೬೦)

ಓಣ್ಯಾಗ ಹುಟ್ಟತೈತಿ ಓಣ್ಯಾಗ ಬೆಳಿತೈತಿ
ಓಣ್ಯಾಗ ಬರುವವರ ಸೆರಗಿಡ್ಡದು ಎಳೀತೈತಿ (ವಾಲಿ ೨– ೫೯)

ಉತ್ತರಾಣಿ

ಬೇಲ್ಯಾಗ ಇರೋದು ಹಚ್ಚಗ ಕಾಣೋದು
ಹಾದೀಲೆ ಹೋಗವರ್ನ ಸೆರಗು ಹಿಡಿದು ತರತೈತಿ (ಇ ೭೭೫)

ಬೇಲ್ಯಾಗ ಇರ್ತದ ಬಿಚ್ಚಿಗೊಂಡ
ಕೂಡ್ರತದ ಹೋಗಬರೊ ನಾರೇರ
ಸೆರಗ್ಹಿಡದ ಎಳಿತದ (ಲಕ್ಕೆ ಭಾ–೫, ೨೩೦)

ಹಾದೀಲಿ ಹುಟ್ಟೋದು
ಹಾದೀಲಿ ಬೆಳೆಯೋದು
ಹಾದೀಲಿ ಹೋಗುವವರನ್ನೆಲ್ಲ
ಸೆರೆಗ್ಹಿಡಿದು ನಿಲ್ಲಿಸುವುದು (ಲ ಗೌ ೧೦೪೦)

ಹಾದ್ಯಾಗ ಇರುವುದು
ನಾಲಿಗೆ ಚಾಚುವುದು
ಹೋಗುವನಾರ್ಯಾರ
ಸೆರಗಿಡದು ಎಳೆಯುವದು (ಇ ೧೦೬೨)

ಹಾದ್ಯಾಗ ಹುಟ್ಟುವುದು
ಹಾದ್ಯಾಗ ಬೆಳೆಯುವುದು
ಹಾದಿಕಾರನ್ನ ಸೆರೆಹಿಡಿದು ಜಗ್ಗುವರು (ಇ ೧೦೬೩)

ಉತ್ತರಾಣಿ ಕಡ್ಡಿ

ದಾರ್ಯಾಗ ಕೂತ್ಕೊಂಡು
ಹೋಗುವವರನ್ನ ಬರುವವರನ್ನ ಕೂಡೇ ಎಳೀತೈತಿ
ನಿಲ್ಲದಿದ್ರ ಹತಿಗೊಂಡು ಮನೀಗೆ ಬರತೈತಿ (ಇ ೬೧೦)
ಉತ್ತರಾಣಿ ಗಡ್ಡಿ

ಓಣೀಲಿ ಹುಟ್ಟೋದು
ಓಣೀಲಿ ಬೆಳೆಯೋದು
ಹೋದ ನಾರಿಯರ ಸೆರಿಗ್ಹಿಡಿದು ನಿಲ್ಲಿಸೋದು
ಹಾಗಾದರೆ ನಾನ್ಯಾರು (ಇ ೩೦೯)
ಉತ್ತಾಣಿ ಕಡ್ಡಿ

ಸಿಪ್ಪಿ ತಿಂತರೆ ಬೀಜ ಒಗಸ್ತರೆ (ಲ ಗೌ ೯೪೧)
ಉತ್ತುತ್ತಿ

ಕರಿಯ ಕುಳ್ಳನಿಗೆ ಬಿಳಿಯ ಹರಿನಾಮ (ಇ ೩೫೧)

ಕರಿಯ ಹಸ ಬಿಳಿಯ ಹಸ
ನೀರಿಗೆ ಹೋಗ್ತವೆ
ಕರಿದು ಹೋಗ್ತದೆ
ಬಿಳಿದು ಬರ್ತದೆ (ರಾ ಗೌ ೧೭೬)

ಕರಿ ಸೀರೆ ಮಾರಮ್ಮ
ಪೇಟೇಲಾದರೆ ಇರ್ತೀಯಮ್ಮ
ರೊಕ್ಕ ಕೊಟ್ಟರೆ ಬರ್ತೀಯಮ್ಮ (ಲ ಗೌ ೪೦೮)

ಕರೀ ಭಟ್ಟಗ ಬಿಳೀ ನಾಮಾ (ಇ ೩೬೧)
ಉದ್ದಿನ ಕಾಳು

ಕರಿ ಪೋರಂಗೆ ಬಿಳಿ ನಾಮಾ (ಶಾಂ ನಾ ೧೪೩)
ಉದ್ದಿನ್ಕಾಳು

ಕರೇ ಕುರಿ ಬಿಳೇ ಕುರಿ
ಮೇಯ್ಕೊಂಡು ಕೆರೆಗೆ ಹೋದುವು
ಮನೆಗೆ ಬರುವಾಗ್ಗೆ
ಬಿಳೇ ಕುರಿ ಬಂದುವು
ಕರೇ ಕುರಿ ಬರಲಿಲ್ಲ (ಸು ೧೮೭)
ಉದ್ದಿನ ಬೇಳೆ

ಕರಿ ಕುದುರೆ ಕೆರೆಗೆ ಹೋಗಿ
ಬಿಳೀ ಕುದುರೆಯಾಗಿ ಬಂತು (ಲ ಗೌ ೪೦೯)

ಕರಿ ಮನುಷ್ಯನಿಗೆ ಬಿಳಿ ನಾಮ (ಲ ಗೌ ೩೯೧)

ಕರಿಯ ಗಿಡ್ಡನಿಗೆ ಬಿಳಿಯ ನಾಮ (ಚಂ ಸೆ ೮೩)
ಕರಿಯ ಸೀರೆಯ ಗರ್ತಿ
ಪೇಟೆಯೊಳಗೆ ಸಿಕ್ಕಿ
ರೊಕ್ಕ ಕೊಟ್ಟರೆ ಬರ್ತಿ (ಚಂ ಸೆ ೮೬)
ಉದ್ದು

ಕರಿ ಕಣ್ಣು ಹೋಯ್ತು
ಬಿಳಿ ಕಣ್ಣು ಬಂತು (ಲ ಗೌ ೩೯೫)
ಉದ್ದು, ಉದ್ದಿನ ಬೇಳೆ

ಸಡ್ಯಾಗ ಬಿತ್ತಾನಿಲ್ಲ
ಗಡ್ಡಿ ಬೆಳೆದ ನಾಟಾನಿಲ್ಲ
ಅದಿಲ್ದ ಬಾಳೆ ಆಗಾಂಗಿಲ್ಲ (ಲಠ್ಠೆ ಭಾ–೪, ೧೫೯)
ಉಪ್ಪ

ಒಂದು ದಿನಸ್ಗೆ ವೊಟ್ಟಿಲ್ಲ (ಮಂ ೧.೪–೨೬)

ಕಣ ಮಾಡಲಿಲ್ಲ ರಾಶಿ ಒಕ್ಕಲಿಲ್ಲ
ಜಳ್ಳು ಹಿಡಿಯಲಿಲ್ಲ ತಟ್ಟಲಿಲ್ಲ
ಮೆಟ್ಟು ಹತ್ತಲಿಲ್ಲ ತೂರಲಿಲ್ಲ
ಪುಟ್ಟ ಹೊತ್ತು ಮಾರಿದರೆ ಹಿಡಿ ತುಂಬ ಹೊನ್ನು (ಲ ಗೌ ೩೬೯)

ಕೊಬ್ಬಿರದ ಮೇಟಿ ಹೊಟ್ಟಿಲ್ಲದ ರಾಶಿ (ಲ ಗೌ ೪೯೨)

ಗಿಡ ಕೊಡಲಾರದು
ಮರ ಬೆಳಸಲಾರದು
ಇದಲ್ಲದೆ ಊಟ ಸೇರದು (ಶಾಂ ನಾ ೪೩೦)

ಗಿಡ ಕೊಡಲಾರದು
ಮರ ಬೆಳೆಸಲಾರದು
ಅದಿಲ್ಲದೆ ಊಟ ಸೇರಲಾರದು (ಚಂ ಸೆ ೧೧೮)

ಚಿಟ್ ಕುಡಿಕೇಲಿರೋ ಪುಟ್‌ಮಾಮ ಕಾಳ್‌ಮಾಮ ಕರೀತಾನೆ ಬಾರ್‌ಮಾಮ
(ಸು ೨೭೪)

ನೀನಿಲ್ಲದೆ ಊಟವಿಲ್ಲ (ಲ ಗೌ ೬೮೫)

ನೀರಲ್ಲಿ ಹುಟ್ಟಿ
ನೀರಲ್ಲಿ ಬೆಳೆದು
ನೀರು ಸೋಕಿದರೆ
ನಾ ಉಳಿಯಲಾರೆ (ಇ ೬೬೯)

ನೀರಲ್ಲಿ ಹುಟ್ಟುವುದು
ನೀರಲ್ಲಿ ಬೆಳೆವುದು
ನೀರ ಕಂಡರೆ ಜರಗುವುದು (ರಾಗೌ ೩೧೯)

ನೀರಲ್ಲೆ ಹುಟ್ಟುತ್ತೆ
ನೀರಲ್ಲೆ ಬೆಳೆಯುತ್ತೆ
ನೀರು ಕಂಡ್ರೆ ಹೆದರುತ್ತೆ (ಲ ಗೌ ೬೮೯)

ನೀರಾಗ ಹುಟ್ಟತೈತಿ
ನೀರಾಗ ಹಾಕಿದರ ಸಾಯತೈತಿ (ವಾಲಿ ೫೫–೫೧)

ನೀರಿನಲ್ಲಿ ಹುಟ್ಟಿ
ನೀರಿನಲ್ಲಿ ಬೆಳೆದು
ನೀರು ಕಂಡರೆ ಹರಿದೋಡುವುದು (ಚಂ ಸೆ ೧೬೩)

ನೀರಿನಲ್ಲಿ ಹುಟ್ಟಿ
ನೀರಿನಲ್ಲಿ ಬೆಳೆದು
ನೀರು ಬಿದ್ರೆ ನಿರ್ನಾಮವಾಗುತ್ತದೆ (ಸು ೩೪೩)

ರಾಜಘಟ್ಟದ ಕೇರೀ ಮೇಲೆ
ಬೀಜವಿಲ್ಲದ ಮರ ಹುಟ್ಟಿ
ರಾಜರಾಜರಿಗೆಲ್ಲ ಬೇಕಾದ ವಸ್ತು (ಲ ಗೌ ೮೮೮)

ಸಮುದ್ರದಲ್ಲಿ ಹುಟ್ಟಿ
ಸರ್ವರಿಗೂ ಬೇಕಾಗಿ
ಬೆಲೆಯಲ್ಲಿ ಕಿರಿದಾಗಿ
ಊಟಕ್ಕೆ ಮುಂದಾಗಿ
ನೋಟಕ್ಕೆ ಹಿಂದಾಗಿ
ಉಳಿದಿರುವದು ಏನದು (ಇ ೯೨೩)

ಸೂರ್ಯನೇ ತಂದೆ
ಸಮುದ್ರವೇ ತಾಯಿ
ನನ್ನ ಬಿಟ್ಟು ಊಟ ಮಾಡುವವರಿಲ್ಲ (ಚಂ ಸೆ ೨೩೩)

ಸೆರಗು ಇಲ್ಲದ ಸೆಲ್ಲೆ
ಬೀಜ ಇಲ್ಲದ ಪಲ್ಲೆ
ನೆಚ್ಚಿಲ್ಲದ ಹೆಂಗಸು
ನಿಧಾನ ಇಲ್ಲದ ಗಂಡಸು (ಇ ೯೬೭)

ಸೋಲ ಇಲ್ಲದೆ
ಸಾರಿಗೆ ಹಾಕ್ತಾರೆ (ರಾಗೌ ೪೬೧)
ಉಪ್ಪು

ಹೊಟ್ಟಿಲ್ದ ರಾಶಿ
ಕಬ್ಬಿಣದ ಮೇಟಿ (ಜೀಶಂಪ ೨೯೪)
ಉಪ್ಪು, ಸೇರು

ಅಗರಕ್ಕ ಬಗರಕ್ಕ
ಬಾಯ್ ನೀರು ಬಕಬಕ್ಕ (ಸು ೧೧)

ಅಡಿಗೆ ಮನೆಯಲ್ಲಿ ಮಾವಿನ್ಮರಾ ಹತ್ತೂಲಕ್ಕೊಡತ್ತಿಲ್ಲೆ (ಶಾಂ ನಾ ೪೩೧)
ಉಪ್ಪಿನಕಾಯಿ

ಎಲೆಗೊಂದು ಕಾಯಿ
ತಲೆಗೊಂದು ಕಾಯಿ
ಜಾಣನಿಗೊಂದು ಕಾಯಿ
ಜಗದೀಶನಿಗೊಂದು ಕಾಯಿ (ವಾಲಿ ೩–೧೧೨)
ಉಪ್ಪಿನಕಾಯಿ, ಸೀಗಿಕಾಯಿ, ಪಗಡೆಕಾಯಿ, ಟೆಂಗಿನಕಾಯಿ

ಎಲೆಗೊಂದು ಕಾಯಿ
ತಲೆಗೊಂದು ಕಾಯಿ
ಜಾಣಗೊಂದು ಕಾಯಿ
ಜಗದೀಶಗೊಂದು ಕಾಯಿ
ನೀ ಒಡದು ಹೇಳದಿದ್ರ ದನ ಕಾಯಿ (ಇ ೨೫೧)
ಉಪ್ಪಿನಕಾಯಿ, ಶೀಗೆಕಾಯಿ, ತಂಬೂರಿಕಾಯಿ, ತೆಂಗಿನಕಾಯಿ

ಕಳ್ಳಿ ಕಮಾನ ಬೆಳ್ಳಿ ಇಮಾನ
ಅದರ ಮ್ಯಾಗ ಕುಳಿತಾನ ಕರಿ ಜವಾನ (ಲಠ್ಠೆ ಭಾ–೪, ೬೬)
ಉಪ್ಪಿನಕಾಯಿ, ಸೀಗೇಕಾಯಿ, ತಂಬೂರಿಕಾಯಿ, ಟೆಂಗಿನಕಾಯಿ

ಎಲೆಗೊಂದ್ಕಾಯಿ
ತಲೆಗೊಂದ್ಕಾಯಿ
ಜಾಣನಿಗೊಂದ್ಕಾಯಿ
ಜಗದೀಶನಿಗೊಂದ್ಕಾಯಿ (ಜೀಶಂಪ ೭೭)
ಉಪ್ಪಿನಕಾಯಿ, ಸೀಗೆಕಾಯಿ, ಪಗಡೆಕಾಯಿ, ತೆಂಗಿನಕಾಯಿ

ಚಿಕ್ಕ ಏರಿಮ್ಯಾಲೆ ಸಾಲ್ ಗೊಬ್ಬಿಮರ (ಮಂ ೧.೧–೮)

ಸಣ್ಣೇರಿ ಮ್ಯಾಲೆ ಸಾಲ್ ಗೊಬ್ಬಿಮರ (ಮಂ ೧.೧–೧೫)
ಉಬ್ಬು

ತೆಗ್ಗಿನಾಗ ಕುಂತ
ಎದ್ದೆದ್ದ ನೋಡ್ತತಿ (ಲಠ್ಠೆ ಭಾ–೨, ೪೨)
ಉರಿ

ತಾಯಿ ತಟ್ಲಿಯಂತಾಕಿ
ಮಗಳು ಮುತ್ತಿನಂತಾಕಿ (ಇ ೫೭೭)
ಉರಿ, ದೀಪ

ಕಲ್ಲ ಖಣಿ ನೀರ ಡಮಕ
ಬೆಳ್ಳಿ ದಂಟ ಬಂಗಾರ ತೆನಿ (ವಾಲಿ ೩–೩)
ಉರಿಯುವ ಚಿಮಣಿ

ಹೊಂಬಣ್ಣದಲ್ಲಿ ಹೊಳೆಯುತಿಹಳು
ತಾ ಕನ್ನೆ ದಿಂಬಿನಲಿ
ಮೂರು ಬಣ್ಣದಲಿ ಸಂಪನ್ನೆ
ಉಂಬದಕೆ ಕರೆಸಿಕೊಂಬಳು
ಚೆಲ್ವ ಚೆನ್ನೆ (ರಾ ಗೌ ೫೦೭)
ಉರಿಯುವ ದೀಪ

ಉತ್ತೊಲ್ದಲ್ಲಿ ತೆಕ್ಕಡುಸ್ಕೊಂಡು ಬಿದ್ದಿತ್ತು (ಮೈ.ಕ.) (ಮಂ ೧.೫–೨೬)
ಉಳಗ್ಗ

ಉತ್ತ ಹೊಲದಲ್ಲಿ
ತೆಕ್ಕೆ ಮಡಿಸ್ಕೊಂಡು ಮಲಗಿದೆ (ರಾ ಗೌ ೯೭)
ಉಳುವ ಹಗ್ಗ

ಉತ್ತ ಹೊಲದಲ್ಲಿ ತೆಕ್ಕ ಹುಯ್ಕೊಂದು ಮಲಗಿದೆ (ಸು ೯೫)
ಉಳೋ ಹಗ್ಗ

ಅಪಾರ ಮಕ್ಕವಂತ
ಒಂದೊತ್‌ನಲ್ಲಿ ಎಚ್ಚರ
ತಲೇಲಿ ಕರಾಪು
ನಮ್ಮವ್ರು ಯಾರೆಂದು ಅರಿದಿದ್ದವ (ಮಂ ೨.೨–೫)

ಉತ್ತೊಲ್ದಲ್ಲಿ ತೆಕ್ಕಮ್ಮಡಿಚ್ಕಂಡು ಮನಗದೆ ಅಂದ್ರ (ಮಂ.ಕ.) (ಮಂ ೧.೫–೨೭)

ಕತ್ತಗ್ ಕಟ್ಟದೊ ಚಿನ್ನ
ಇಕ್ಲಲ್ ಬಾಗ್ಲ ಕನ್ಹ
ನನಗೇನು ಬಂತು ಸುಣ್ಣ (ಮಂ ೧.೫–೪೦)
ಉಳ್‌ಮಿಳಿ

ತಲೆಮೇಲೆ ಹರಳು
ಬಾಯಲ್ಲಿ ಬೆರಳು (ರಾಗೌ ೨೬೬)

ಹಿಡ್ಕೊ ಆ ಹುಡುಗನ
ಹೊಟ್ಟಾ್ಯಗ ಬಟ್ಟ ಹೆಟ್ಟಾ್ಯನ (ಇ ೧೦೮೨)
ಉಂಗುರ

ಉಂಡ್ಬಂದಾ ಗೊಟೆಗ್ಹಾರ್ದಾ (ಶಾಂ ನಾ ೨೯೪)
ಉಂಡಲೆ

ಉಂಡ ಉಟ್ಟ ಗೋಡೆ ನೆಗೆದ (ಸು ೧೦೧)

ಗೊಣ್ಣೆ ಸುರುಕಿ ಗೋಡೆ ದುಮುಕಿ ಉಂಡೆಲೆ
ಆಮಕ್ಕೀಮರಕ್ಹಾರ್ತುಗಿಣಿ
ಪಟ್ಟೆ ರಂಗೂನ್ನ ಕೂಗ್ತುಗುಣಿ
ಪಟ್ಟಣಕ್ಹೋಗಿ ಸಾರ್ತುಗಿಣಿ (ಜೀಶಂಪ ೬೩)

ಉಂಡ ತಿಂದ ಗೋಡೆ ಧುಮುಕಿದ (ಚಂ ಸೆ ೪೪)
ಊಟದ ಎಲೆ

ಅರ್ಧಚಂದ್ರಾಕಾರದೊಳಿಹುದು
ಮುದ್ದುಕೊಟ್ಟರೆ ಗದ್ದಲಿ (ಚಂ ಸೆ ೧೪)
ಊದುವ ಕೊಂಬು

ಡೊಂಕ ಬಿಂಕದ ಆಲದ ಮರ
ಆಲದ ಮರುದ್ ಮ್ಯಾಲೆ ಅಲ್ಲೆ ಚಪ್ಪರ
ಅಲ್ಲೆ ಚಪ್ಪರದ ಮ್ಯಾಲೆ ಕಂಚಿನ ತೇರು
ಕಂಚಿನ ತೇರ್ ಮ್ಯಾಲೆ ಮೂರು ಮಳ್ಳಿನ ಗುಡ್ಡೆ
ಮಳ್ಳಿನ್ ಗುಡ್ಡೆ ಮ್ಯಾಲೆ ಜೋರು ಮಳೆ
ಜೋರು ಮಳೆ ಮ್ಯಾಲೆ ಸಿನ್ಕ ಮಳೆ
ಸಿನ್ಕ ಮಳೆ ಮ್ಯಾಲೆ ಐದು ಜನ ಸೂಳೇರು ನಾಟ್ಯ ಆಡ್ತಾರೆ (ಮಂ ೧.೪–೪೮)
ಊಟ ಮಾಡುವುದು

ಆಡ್ತದೆ ಕುದುರೆ
ಓಡ್ತದೆ ಕುದುರೆ
ನೀರು ಕಂಡರೆ
ಹಿಂಬದಿ ನಿಲ್ತದೆ (ರಾಗೌ ೭೪)

ಆರು ಮೈಲು ಓಡುವ ಕುದುರೆ
ನೀರು ಕಂಡಲ್ಲಿ ನಿಲ್ಲುವ ಕುದುರೆ (ಚಂ ಸೆ ೪೦)
ಊರೆಲ್ಲಾ ತಿರುಗುತ್ತಾನೆ
ಮನೆಗೆ ಬಂದರೆ ಮೂಲೇಲಿ ಕೂರುತ್ತಾನೆ (ಚಂ ಸೆ ೪೭)

ನಾನೊಂದು ಜತೆ ಎತ್ತು ತಂದೆ
ಎಡದ್ದು ಬಲಕ್ಕಾಗುವುದಿಲ್ಲ
ಬಲದ್ದು ಎಡಕ್ಕಾಗುವುದಿಲ್ಲ (ಚಂ ಸೆ ೧೫೫)
ಎಕ್ಕಡ

ಎಲುಬಿಲ್ಲದ ಕುದುರೆ ಹತ್ತಿಕೊಂಡು
ನಾಲಗೆಯಿಲ್ಲದ ನಾಯನಿಡಿದು
ಗಿಡವಿಲ್ಲದ ದೇಶಕ್ಕೆ ಹೋಗಿ
ತೊಡೆಯಿಲ್ಲದ ಮೃಗವನ್ನು ಹಿಡಿದರಂತೆ (ಚಂ ಸೆ ೫೫)
ಎಕ್ಕಡ, ಬಲೆ, ಕೆರೆ ಮತ್ತು ಮೀನು

ಮೊಲೆಗಿಂತ ಮೆತ್ತಗಿರುವ
ಕಾಯಿ ಯಾವುದು? (ರಾಗೌ ೪೧೬)
ಎಕ್ಕದ ಕಾಯಿ

ಆಗರ ಎಲೆ ಬೀಗರ ಸುಣ್ಣ
ಬಂಕಾಪುರದ ಬಾಳೆ ಹಣ್ಣ (ವಾ ೨–೧೩)
ಎಕ್ಕಿಯ ಗಿಡ

ಮೂಗನೂರ ಮಾವಿನಕಾಯಿ
ಬೇಗನೂರ ಬೇವಿನಕಾಯಿ
ಗೋಣಿಗೆರೆ ಮೆಣಸಿನಕಾಯಿ
ಇವು ಮೂರು ಸೇರಿದರೆ ಒಂದೇ ಕಾಯಿ (ಇ ೮೭೦)
ಎಕ್ಕೆ ಕಾಯಿ

ವಿಳ್ಯೆದ ಎಲಿ ಅದರಾಗ ಸುಣ್ಣ
ಜಬಲ್‌ಪೂರ ಬಾಳಕಾಯಿ
ಇಜಾಪುರ ಮಲ್ಲಿಗಿ ಹೂವ (ವಾಲಿ ೨–೭೩)
ಎಕ್ಕೆಯ ಗಿಡ

ಊರ ಮುಂದೆ ಅಕ್ಕ ತಂಗೀರಿಬ್ಬರು
ಕಣ್ಣಿಗೆ ಕಾಡಿಗೆ ಇಲ್ಲದೆ
ಅತ್ಕೊಂಡು ಹೋಗ್ತಾರೆ (ಸು ೧೦೫)
ಎಣ್ಣೆ ಇಲ್ಲದೆ ಕಿರುಗುಟ್ಟುವ ಗಾಡಿ ಚಕ್ರಗಳು

ಕತ್ತಲೆ ಮನೆಯಲ್ಲಿ ಕರಿ ದೆವ್ವ (ರಾಗೌ ೧೭೦)

ಕತ್ತಲೆ ಮನೇಲಿ ಕರೇ ದೆವ್ವ (ಸು ೧೭೪)
ಎಣ್ಣೆ ಗಡಿಗೆ

ಕತ್ತಲ ಮನ್ಯಾಗ ಕರಿ ಎಮ್ಮಿ ಕಟ್ಯಾದ (ಲಠ್ಠೆ ಭಾಗ ೫–೧೦೯)
ಎಣ್ಣೆ ಗುಂಡಿಗಿ

ಕತ್ಲೆ ಮನೇಲಿ ಕಳ್ಳರು ಕುಂತವರೆ (ಜೀಶಂಪ ೧೦೮)
ಎಣ್ಣೆಗುಂಭ

ಹೆಟ್ಟುವುದು ಮೂರು ಬೆಟ್ಟು
ಬೀಳುವುದು ಒಂದು ತೊಟ್ಟು (ಲ ಗೌ ೧೦೭೦)
ಎಣ್ಣೆ–ತುಪ್ಪ

ಚಿಂತಾಮಣಿ ಕೆರೇಲಿ ಚಿಣಿಮಿಣಿ ಹಕ್ಕಿ
ಕೆರೆ ಬತ್ತಿದರೆ ಹಕ್ಕಿ ಹಾರಿ ಮಾಯ (ಚಂ ಸೆ ೧೨೮)
ಎಣ್ಣೆ–ದೀಪ

ಹಾದಿಲಿ ಹೋಗೋ ಜೋಗತಿ
ಹಾಡತಾ ಹೋಗತಾಳ (ಇ ೧೦೫೬)
ಎತ್ತಿನ ಕೊರಳಿನ ಗಂಟಿ

ಹಾದಿ ಹೋಗು ಪಾರ
ಹಾಡಕೊಂತ ಹೋಕ್ಕಾನ (ಇ ೧೦೬೪)
ಎತ್ತಿನ ಕೊಳ್ಳಾನ ಗಂಟಿ

ಹಗಲೆಲ್ಲ ಮುಗಿಲ ನೋಡತತಿ
ಬೆಳತನಾ ಜಂತಿ ನೋಡತೈತಿ? (ಇ ೯೮೮)
ಎತ್ತಿನ ಕೋಡು

ಎರಡು ಒಣಾವು
ನಾಲ್ಕು ಹಸೇವು
ಒಂದು ಚೌರಿ
ಒಂದು ಡೊಳ್ಳು (ಇ ೨೩೮)
ಎತ್ತಿನ ಕೋಡುಗಳು, ಕಾಲುಗಳು, ಬಾಲ ಹಾಗೂ ಹೊಟ್ಟೆ

ಏರಿಮ್ಯಾಲೆ ಇಬ್ರು ಸೂಳೇರು
ಕಣ್ಣಿಗ್ ಕಪ್ಪಿಲ್ದೆ ಅಳ್ತಾ ಅಳ್ತಾ ವೋಯ್ತಿದ್ರು (ಮಂ ೧.೫–೨೮)
ಎತ್ತಿನ ಗಾಡಿ

ಎರಡು ಹಾಸಣಿಗೆ ಎರಡು ಬೀಸಣಿಗೆ
ಎರಡು ಚಿಣಿಮಿಣಿ ಎರಡು ಲೊಟಪಟೆ (ಲ ಗೌ ೨೩೨)
ಎತ್ತು

ಒಂದು ರೊಟ್ಟಿ ಸುಟ್ಟಿ
ಎರಡ್ರೊಟ್ಟಿ ಸುಟ್ಟಿ
ನಿಮ್ಮ್‌ಮನ ಮಂದಿಯೆಲ್ಲಾ ತಿಂದ್ರು
ಹಾಗು ಇಂಕ್ರ ಮಿಕ್ಕದೆ (ಮಂ ೧.೫–೩೫)

ವೊಂಟು–ವೊಂಟು ವಡಿನಾರಿ
ಎಂಟೆಮ್ಮೆ ಕರಿನಾರಿ (ಮಂ ೧.೧–೨೦)
ಎದೆಹಾಲು

ಊಟದ ಮುಂದಾಗಿ ಉಣ್ಣಾದ್ಯಾವುದಾ
ಉಂಡ್ ಬುಡದ್ಯಾವುದಾ
ಗಂಡ ಮುಟ್ಟದೇ ಇದ್ದ ಜಾಗ ಯಾವ್ದಾ (ಮಂ ೧.೧–೬)
ಎದೆಹಾಲು, ಕಣ್ಣಿನಗುಳ್ಳೆ

ಅಕ್ಕವ್ವ ಅಕ್ಕವ್ವ ಗುಡ್ಡಾ ನೋಡ
ಗುಡ್ಡದಾಗಿನ ಗುಡಿ ನೋಡ
ಗುಡಿಯೊಳಗಿನ ಖಂಬಾ ನೋಡ
ಖಂಬದಾಗಿನ ನೀರ ನೋಡ (ಲಠ್ಠೆ ಭಾ– ೪, ೪)
ಎಮ್ಮಿ ಕೆಚ್ಚಲ ಮೊಲಿಹಾಲ

ಎರಡು ಕಿಲಿಕಿಲಿ
ಎರಡು ಪಟಪಟ
ಎರಡು ಒಣಮರ
ನಾಲ್ಕು ಹಸಿಮರ (ರಾಗೌ ೧೧೨)
ಎಮ್ಮೆ

ಕರಿಕಲ್ಲ ಕೆಳಗ ನಾಕಲಿಂಗ (ಲಠ್ಠೆ ಭಾಗ ೧–೨೭)

ಪಡೀ ಬುಡಕ ನಾಲ್ಕು ಮಂದಿ
ತುಡಗರು ಕುಂತಾರ (ಇ ೬೯೬)

ಸವರ ಸವರ ಮೆಡತು (ಲ ಗೌ ೯೨೧)
ಎಮ್ಮೆ ಮೊಲೆ

ಕರ್ರನ್ ಕಾಕಾ ಮನೀ ಹೊಕ್ಕ
ಮನೀ ಬಿಡಿಸಿ ಗಿಡದಾಗ ನಕ್ಕ (ಇ ೩೪೫೫)
ಎಮ್ಮೆಯ ಕೆಚ್ಚಲ ಮೊಲೆಗಳು

ಕತ್ತಲ ಮನ್ಯಾಗ ಕತ್ತಿ ಬಿಸತೈತಿ (ವಾಲಿ ೪– ೩೯)

ಕತ್ತಲ ಮನ್ಯಾಗ ಕಳ್ಳಾ ಕತ್ತೀ ಬೀಸ್ಯಾಡತಾನ (ಇ ೩೨೫೫)
ಎಮ್ಮೆಯ ಬಾಲ

ಅಕ್ಕ ಅತ್ತರೆ
ತಂಗೀನೂ ಅಳ್ತಾಳೆ (ಲ ಗೌ ೪)

ಅಕ್ಕವ್ವ ಅತ್ತರ
ತಂಗೆವ್ವನೂ ಅಳತಾಳ (ಲಠ್ಠೆ ಭಾಗ ೧–೧)

ಬಾರೆಯ ಮೇಲೆ ಆರು ಮಿಕ ಮೇಯ್ತಾ ಇವೆ
ತಲೆ ನೋಡಿದರೆ ಆರು
ಕಾಲು ನೋಡಿದರೆ ಹದಿನಾರು (ಲ ಗೌ ೭೫೫೫)
ಎರಡು ಜಿಂಕೆ ನಾಲ್ಕು ನವಿಲು

ಬಿಸಿಲಿಗಿ ಬಿರಿಯಣ್ಣ (ಲಠೈ ಭಾ–೫, ೨೨೧)
ಎರಿಮಣ್ಣ

ಹೊಲ್ದಾಗ ಹೊಲಾ ಯಾವ ಹೊಲಾ (ಲಠೈ ಭಾ–೫, ೩೦೮)
ಎರಿಹೊಲಾ

ಕಪ್ಪುಂಟು ಕಾಗಿಯಲ್ಲ
ಗಿಡ ಯೇರುವದು ಮೃಗವಲ್ಲ
ನಾಲ್ಕು ಕಾಲುಗಳುಂಟು ಪ್ರಾಣಿಯಲ್ಲ
ಹಾಗಾದರೆ ಯೇನು (ಲಠೈ ಭಾ–೩, ೨೨)
ಎರುವಿ

ಚಿಕ್ಕಬೋರನಿಗೆ
ಮಣ್ಣಿನ ಕೆಲಸ (ರಾ ಗೌ ೨೪೪)
ಎರೆಹುಳು

ಹಣ್ಣ ಹಸುರ
ಆಕಾರ ಹಲವು
ಎಲ್ಲಾ ಗಿಡದಾಗ ಇರತಾವ (ಲಠೈ ಭಾ–೪, ೧೭೦)
ಎಲಿ

ಬಣ್ಣ ಹಸುರು
ಆಕಾರ ಹಲವು
ಎಲ್ಲ ಗಿಡಗಳಲ್ಲಿ ನಾನಿರುವೆ
ಆದರೆ ನಾನು ಯಾರು (ರಾಗೌ ೩೪೪)
ಎಲೆ

ಒಂದು ತೇಲತೈತಿ
ಒಂದು ಮುಳುಗತೈತಿ
ಒಂದು ಕರಗತೈತಿ
ಮೂರೂ ಕೂಡಿದ್ರ ರಕ್ತಾ ಸುರಿತೈತಿ (ಇ ೨೯೯)
ಎಲಿ, ಅಡಿಕೆ, ಸುಣ್ಣ

ಒಂದ ತೇಲತತಿ
ಒಂದ ಮುಳಗತತಿ
ಒಂದ ಕರಗತತಿ (ಲಠೈ ಭಾ–೪, ೪೯)
ಎಲೆ, ಅಡಕಿ, ಸುಣ್ಣ

ಒಂದು ತೇಲುತ್ತೆ
ಒಂದು ಮುಳುಗುತ್ತೆ
ಒಂದು ಕರಗುತ್ತೆ (ಲ ಗೌ ೩೦೦)

ಕೆರೆ ಏರಿ ಮೇಲೆ ಮೂವರು
ಒಬ್ಬನು ತೇಲುವನು
ಒಬ್ಬನು ಮುಳುಗುವನು
ಮತ್ತೊಬ್ಬ ಕರಗುವನು (ಇ ೪೧೫)

ಮೂರು ಜನ ಗೆಳೆಯರು ನೀರಿಗೆ ಬಿದ್ದರೆ
ಒಬ್ಬನು ತೇಲುತ್ತಾನೆ
ಮತ್ತೊಬ್ಬ ಮುಳುಗುತ್ತಾನೆ
ಮಗದೊಬ್ಬ ಕರಗುತ್ತಾನೆ (ಚಂ ಸೆ ೨೦೮)

ಮೂರು ಜನ ಗೆಳೆಯರು ನೀರಿಗೆ ಬಿದ್ದರೆ
ಒಬ್ಬನು ತೇಲುತ್ತಾನೆ
ಮತ್ತೊಬ್ಬನು ಮುಳುಗುತ್ತಾನೆ
ಮಗದೊಬ್ಬ ಕರಗುತ್ತಾನೆ (ಇ ೮೭೪)

ಮೂರು ಬಗೆ ಹಕ್ಕಿ
ಗೂಡಿಗೆ ಹೋಗ್ತಾವೆ
ಬರೋಹೊತ್ತಿಗೆ ಒಂದೇ ಬಗೆಯಾಗ್ತವೆ (ರಾ ಗೌ ೪೦೧)

ಹಸುರಂಗಿ ಅಮಲ್ದಾರ
ಕೆಂಪು ಟೋಪಿ ದಫೇದಾರ
ಹೊಟ್ಟೆ ಬಂದ ಶೇಕದಾರ (ಜೀಶಂಪ ೨೭೯)
ಎಲೆ ಅಡಿಕೆ ಸುಣ್ಣ

ಅಂತರದ ಹಸಿರು
ಆಕಾಶದ ಹಣ್ಣು
ಭೂಮಿ ಗಿಣ್ಣು
ಮೂರು ಕೂಡಿದರೆ ಒಂದು ಹಣ್ಣು (ಲ ಗೌ ೧೧೯)
ಎಲೆ, ಅಡಿಕೆ, ಸುಣ್ಣ (ತಾಂಬೂಲ)

ಮೂರು ಬಣ್ಣದ ಹಕ್ಕಿ
ಒಂದು ಗೂಡಿಗೆ ಹೋದುವು
ಬರುವಾಗ ಒಂದು ಬಣ್ಣದ ಹಕ್ಕಿ
ಹೊರ ಬಂತು (ಸು ೪೨೪)
ಎಲೆ, ಅಡಿಕೆ, ಸುಣ್ಣ–ಕೆಂಪು ಉಗುಳು

ಆ ಹಿತ್ಲದಿಂದ ಒಬ್ಬಾ
ಈ ಹಿತ್ಲದಿಂದ ಮತ್ತೊಬ್ಬಾ
ಆಚಾರಿ ಮನೆಯಿಂದ ಇನ್ನೊಬ್ಬ (ಶಾಂ ನಾ – ಅನುಬಂಧ ೩೬)
ಎಲೆ, ಅಡಿಕೆ, ಸುಣ್ಣಾ

ಮೂರು ಜನ ಮುತ್ತೈದೇರು
ನೀರು ತರಲು ಹೋಗಿ
ನೀರಲ್ಲಿ ಜಾರಿದರು
ಒಬ್ಬಳು ತೇಲಿದಳು
ಇನ್ನೊಬ್ಬಳು ಕರಗಿದಳು
ಮತ್ತೊಬ್ಬಳು ಮುಳುಗಿದಳು (ಲ ಗೌ ೮೬೨)

ನೀರಾಗ ತೇಲತೈತಿ
ನೀರಾಗ ಕರಗತೈತಿ
ನೀರಾಗ ಮುಳುಗತೈತಿ (ಇ ೬೭೨)
ಎಲೆ, ಸುಣ್ಣ, ಅಡಿಕೆ

ಕೆಂಪನ್ನ ಕುಡುಗ ಕ್ಯಾಕರಸ್ತಾನ (ಇ ೪೫೦)

ಹಸರು ತಿಂತೈತಿ ರಕ್ತಾ ಕಾರತೈತಿ (ಇ ೧೦೨೮)
ಎಲೆ ಅಡಿಕೆ

ಅಂತರದ ಸೂಳೆ
ಆಕಾಶದ ಮಿಂಡಗಾರ
ಭೂಮಿ ತೂಕದಲ್ಲಿರೋ ಸೂಳೆ ಎಲ್ಲಾರ್ನೂ ಕೆಡಿಸಿದಳು (ಲ ಗೌ ೧೨೭)
ಎಲೆ, ಅಡಿಕೆ, ಹೊಗೆಸೊಪ್ಪು

ಅಂಬಾರ ಹಸಿರು
ಭೂಮಿ ಕೆಸರು
ಮರದ ಗೋಟು
ಮದ್ದಿನ ಕಡ್ಡಿ (ಸು ೭೦)
ಎಲೆ, ಸುಣ್ಣ, ಅಡಿಕೆ, ಹೊಗೆಸೊಪ್ಪು

ಅಂಬಾರ ಹಸಿರು
ಭೂಮಿ ಕೆಸರು
ಮರದ ಗೋಟು
ಮದ್ದಿನ ಕಡ್ಡಿ (ಸು ೭೦)
ಎಲೆ, ಸುಣ್ಣ, ಅಡಿಕೆ, ಹೊಗೆಸೊಪ್ಪು

ಮೂರು ಕಣದಲ್ಲಿ ಬೆಳೆಯೋದ್ನಾ
ಒಂದು ಕಣದಲ್ಲಿ ಹಾಕ್ಕೊಂಡು
ವಕ್ಕಣೆ ಮಾಡೋದು (ಮಂ ೧.೪–೬೯)
ಎಲೆ ಅಡಿಕೆ ಅಗಿಯುವುದು

ಮಿಂಚಿಲ್ಲದ ಗುಡುಗು ನೋಡಲು ಕರ್ರಗು
ಅಜ್ಜಿಯ ಕೈಯಲ್ಲಿ ತಿರುಗು (ಇ ೮೮೮)
ಎಲೆ ಅಡಕೆ ಕುಟ್ಟುವ ಕಲ್ಲು

ಉಂಡುಂಡ ಕೈ ಇಟಗೊಂತಾರ (ಲಠ್ಠೆ ಭಾ–೫, ೭೩)
ಎಲಿ ಚಂಚಿ

ಉಂಡು ಉಟ್ಟಾ
ಬಿಲಕ್ಕ ಕೈ ಇಟ್ಟಾ (ವಾಲಿ ೩– ೧೨೯)
ಎಲೆ ಚಂಚಿ

ಆಯಿ ಉಂಡು ಮುತ್ತಾ್ಯನ ಕಿಸೇದಾಗ
ಕೈ ಅಡಸತಾಳ (ವಾಲಿ ೮–೧೯)

ಉಂಡ್ಕಂಡು ಉಟ್ಕಂಡು ಬಿಚ್ಕೊಂಡು ಕೂತ್ಗೊಂಡ್ರು (ಲ ಗೌ ೨೦೪)
ಸಂಚಿ (ಎಲಡಕೆ ಚೀಲ)

ಹಾದ್ಯಾಗ್ ಹೋಗ ಅಜ್ಜಿ
ಹೋರ್ನಾಗ್ ಕೈ ಇಟ್ಗಂತ ಹೋಕತಿ (ಲ ಗೌ ೧೦೩೪)

ಉಂಡ ಉಟ್ಟ
ಬಿಲಕ್ಕೆ ಕೈ ಎಟ್ಟ (ರಾ ಗೌ ೯೦)
ಎಲೆ ಅಡಿಕೆ ಚೀಲ

ಅಜ್ಜಿ ಹೋಗ್ತಾ ಹೋಗ್ತಾ ಕುಣಿಗೆ ಕೈ ಹೆಟ್ಟುತ್ತೆ (ಲ ಗೌ ೨೨)
ಎಲೆ ಅಡಿಕೆಯ ಚೀಲ

ಇನ್ನೊರ್ಕೊಯ್ಯಂಡಿ
ಮುನ್ನುರ್ಸೊಲ್ಕಂಡಿ
ಕೊಣ್ಣ ಮರಿ ಮೆಟ್ಕಂಡಿ
ಸಿಂವ್ದ್ ಮರಿ ಹಿಡ್ಕಂಡಿ
ಸುಟ್‌ಮನೆ ಆಚೆ ಹಾಕಿ
ಸುಡಿದಿದ್ ಮನೆ ಈಚೆ ಹಾಕಿ ಬರ್ಬೇಕು (ಶಾಂ ನಾ–ಅನುಬಂಧ ೪೮)
ಎಲೆ, ಅಡ್ಕೆ, ಮೆಟ್ಟು, ದುಡ್ಡು, ಹಂಚ್ಕಮನೆ, ಹುಲ್ಮನೆ

ಅಚ್ಚಿ ಇಚ್ಚಿಗೆ ಅಕ್ಕಿ ದೋಣಿ
ನೆಡೂಗೆ ಕಾಯ್ದೋಣಿ (ಶಾಂ ನಾ ಅನುಬಂಧ ೧೬)
ಎಲೆರೊಟ್ಟಿ

ಹಸುರು ಸೀರೆಗರ್ತಿ
ಸಂತೇ ಬೀದೀಲಿರ್ತಿ
ರೊಕ್ಕ ಕೊಟ್ಟರೆ ಬರ್ತಿ (ಜೀಶಂಪ ೨೭೦)
ಎಸರುಕಾಳು

ಹಸರ ಕೊಡ
ತುಂಬಾ ಸೀನೀರ (ಲಕ್ಷ್ಮೆ ಭಾ–೪, ೧೯೫)
ಎಳಗಾಯಿ (ಟೆಂಗ)

ಹಸಿರು ಕೊಡದಾಗ
ಸಿಹಿನೀರು ತುಂಬೈತಿ (ಇ ೧೦೫೦)
ಎಳ ತೆಂಗಿನಕಾಯಿ

ಒಂದ ಮಡಕಿ
ಮಡಕ್ಯಾಗ ಕುಡಕಿ
ಕುಡಕ್ಯಾಗ ಸಮುದ್ರ (ಲಕ್ಷ್ಮೆ ಭಾ–೪, ೫೦)
ಎಳನೀರ

ಒಂದು ಮಡಿಕೆ
ಮಡಿಕೆ ಒಳಗೆ ಕುಡಿಕೆ
ಕುಡಿಕೆ ಒಳಗೆ ಸಮುದ್ರ (ಲ ಗೌ ೩೩೮)

ಕಪ್ಪೆ ಕಾಣದ ಕೈಲಾಸದ ನೀರು (ಲ ಗೌ ೩೮೬)

ನೀರಿಗೆ ಹೋಗಬೇಡ
ನೀರ್ನಲ್ಲಿ ಕಾಲಿಡಬೇಡ
ನೀರ್ತರ್ದೆ ಬರಬೇಡ (ಜೀಶಂಪ ೧೮೭೭)

ನಿಂತ ನೀರು ತರೋ ಹಂಗಿಲ್ಲ
ಹರಿಯೋ ನೀರು ಮೊಗೆಯೋ ಹಂಗಿಲ್ಲ
ನೀರು ತರದೆ ಮನೆಗೆ ಬರೋ ಹಂಗಿಲ್ಲ (ಸು ೩೪೧)

ಹಕ್ಕಿ ಹಕ್ಕಿ ಹಾರಲಾದರ ಹಕ್ಕಿ
ತಾಮ್ರದ ಹಕ್ಕಿ ತಂತಿ ಹಕ್ಕಿ
ಫಲಹಾರ ಸ್ವಾಮಿ ಪಾದಕ್ಕೆ ಬಿದ್ದು
ಹರಿದಾಳಮ್ಮನ ಚೊಂಪೆ ಕಟ್ಟಿ
ಹೆಸರು ಹೇಳಿದವರಿಗೆ ಮೊಸರನ್ನ (ಲ ಗೌ ೯೬೫)

ಹುಣಸೆ ಹಣ್ಣು ಹಚ್ಚಬೇಡ
ಮುಣ್ಣು ಹಾಕಿ ಬೆಳಗಬೇಡ
ನೀರು ಮೊಗೀ ಬೇಡ
ನೀರಿಲ್ಲದೆ ಮನೆಗೆ ಬರಬೇಡ (ಲ ಗೌ ೧೦೬೫)
ಎಳನೀರು

ಮಳೆಯಿಲ್ಲದೆ ಕೆರೆಗೆ ನೀರು ಬರುವುದು ನೋಡು
ಅಗಸ ಒಗೆಯದೆ ಬಟ್ಟೆ ಮಡಿಯಾಗುವುದು ನೋಡು (ಲ ಗೌ ೮೨೮)
ಎಳೆನೀರು

ಅಟ್ಟ ಆರೆಣದಾಗ
ಅಕ್ಕ ಅಡಕಿಲ ಏರಸ್ಯಾಳ (ಲಠ್ಠೆ ಭಾ–೪, ೧೩)
ಎಳ್ಳ

ಹೇನು ಗಾತ್ರ ಹಸು
ಎಡಗೈ ಗಾತ್ರ ಕೆಚ್ಚಲು
ಹಾಲು ಹೊತ್ತು ಮಾರುವರು
ಗಿಣ್ಣು ಕುಯ್ದು ಮಾರುವರು (ರಾ ಗೌ ೫೦೨)

ಕರಿ ಗಿಡ್ಡನಿಗೆ ಬಡದ್ರೆ ಬಿಳಿ ಕಾಳು (ಮಂ ೧.೪–೩೨)
ಎಳ್ಳು

ಎಂಟು ಕಾಲಾಕಿ ಗಂಟು ಮಾರ್ಯಾಕಿ
ನೆಂಟ ಬರಗೊಡದ ಒಳಗ ಹೋಗ್ತಾಳ (ಇ ೨೩೨)

ಕಳ್ಳಿಲ್ಲದಾತ ಅಂಗ್ಳಿಲ್ಲದೆ ಮಾತಾಡುತ್ತೆ (ಲ ಗೌ ೪೨೭)

ದೇವರ ಒಳಗ ಮಣ್ಣ ಹೊರಗ (ಇ ೬೨೧)

ನಾಕ್ ಹಲ್ಲತ್ತಿ ಯರ್ಡ್ ಬಾಯ್ಗತ್ತಿ (ಶಾಂ ನಾ ೨೭)
ಬೇಟೆಗೆ ಹೋದವರು ಮೂವತ್ತು ಜನ
ಹೊಡೆದವು ಮೂರು ಮಿಕ
ಆಳಿಗೆ ಒಂದೊಂದು ತೊಡೆ ಬರಬೇಕು
ಅವು ಯಾವ ಮಿಕ (ಲ ಗೌ ೭೯೫)
ಏಡಿ

ದೇವರು ಒಳಗೆ ಗಂಧ ಹೊರಗೆ (ಲ ಗೌ ೬೩೩)
ಏಡಿ, ಏಡಿ ಕುಣಿ ಮಣ್ಣು

ಅಕ್ಕ ಅಕ್ಕ ಏರಿ ನೋಡೆ
ಏರಿ ಮ್ಯಾಗಳ ಗಾರೆ ನೋಡೆ
ಗಾರೆ ಮ್ಯಾಗಳ ನೀರು ನೋಡೆ (ಸು ೨)
ಏಡಿಕಾಯಿ

ಹತ್ತು ಕಾಲು ತಗಡಿ ಬಿಗಡಿ ಸತ್ತು ಬಿದ್ದಿದೆ
ನಾಲ್ಕು ಕಾಲು ತಗಡಿ ಬಿಗಡಿ ಕಾದು ಕೂತಿದೆ
ಎರಡು ಕಾಲು ತಗಡಿ ಬಿಗಡಿ ಹಾರಿಹೋಯಿತು (ಲ ಗೌ ೯೮೪)
ಏಡಿ, ನಾಯಿ, ಗಿಡುಗ

ಹತ್ ಕಾಲ್ ತಗ್ಡಿ ಬಿಗ್ಡಿ ಸತ್ ಬಿದ್ದದೆ
ನಾಕ್ ಕಾಲ್ ತಗ್ಡಿ ಬಿಗ್ಡಿ ನೋಡ್ತಾ ಕುಳ್ತದೆ
ಎರ್ಡ್ ಕಾಲ್ ತಗ್ಡಿ ಬಿಗ್ಡಿ ಹೊತ್ಕಾ ಹೋಗ್ತದೆ (ಶಾಂ ನಾ ೨೮)
ಏಡಿ–ನಾಯಿ–ಹದ್ದು

ಅಂಬಾರು ಅಂಬಾರು ಹಾರುತ್ತೆ
ನೀರು ನೀರು ಕಾರುತ್ತೆ (ಚಂ ಸೆ ೩೩)

ಒಂಟಿ ಕಾಲಿನ ಕೊಕ್ಕರೆ
ಬಾವಿಯಲ್ಲಿ ಬಗ್ಗಿ ಬಗ್ಗಿ
ನೀರು ಕುಡಿಯುತ್ತೈತಿ (ಇ ೨೬೮)

ಒಂಟಿಕಾಲು ಕೊಕ್ಕರೆ ನೀರು ಕುಡಿಯುತ್ತದೆ (ಜೀಶಂಪ ೯೭)
ಏತ

ದಾರೀಲಿ ಹೋಗುತಿದ್ದೆ
ದಾರೀಲಿ ಒಬ್ಬ ಮರ ಕಡಿಯುತಿದ್ದ
ಅದು ಯಾತಕ್ಕೆ ಅಂದೆ
ಅವನು ಹೂಂ ಅಂದ ಅದು ಏನು (ಲ ಗೌ ೬೨೮)
ಏತದ ಮರ

ಕೆರೆ ನೀರು ಹೆಂಗದೆ (ಸು ೨೨೫)
ಏರಿಯಿಂದ

ಅಕ್ಕ ಅಕ್ಕ ಗಿಡ ನೋಡೆ
ಗಿಡದ ತುಂಬ ಜಡೆ ನೋಡೆ
ಆಡೆ ಬಿಚ್ಚಿ ವಾಸನೆ ನೋಡೆ (ಜೀಶಂಪ ೪೧)

ಹೊರಗೆ ಬಿಳಿ ಮುಸುಕು
ಒಳಗೆ ಕರೀ ಮಣಿಗಳು (ಲ ಗೌ ೧೦೭೮)
ಏಲಕ್ಕಿ

ಕೂತೂರಕ್ಕನ ಕುಂಡೆ ಮೇಲೆ ಬಸಿರು
ನಿಂತೂರಕ್ಕನ ನೆತ್ತಿ ಮೇಲೆ ಬಸಿರು
ಮಾಳೂರಕ್ಕನ ಮಂಡೆ ಮೇಲೆ ಬಸಿರು (ಲ ಗೌ ೪೬೨)
ಏಲಕ್ಕಿ, ಬಾಳೆಗೊನೆ, ಅಡಿಕೆಕಾಯಿ

ಅಂಬು ಅರ್ಕಂತು
ಗಂಬ ಕೂತ್ಕಂತು (ಮಂ ೧.೫೫–೪)
ಏಲು, ಉಚ್ಚೆ

ಸ್ವಾಮಿ ಮಗಳು ಬುದ್ದಿವಂತಿ ಅದಾಳ
ಬೇಸ ಅದಾಳ ಸುಖವಂತಿ ಅದಾಳ
ಶಾನ್ಯಾಳ ಅದಾಳ ಆಯಿತಾ ಬರತಾಳ (ಇ ೯೪೮)
ಏಳು ದಿನಗಳ ಹೆಸರುಗಳು

ಗಂಗಳದೋರ ಅಪ್ಪ ಉಣ್ಣದಲೆ ಸತ್ತ (ಲ ಗೌ ೫೦೪)
ಎಂಜಲು ಸಾರಿಸುವುದು

ಐದ ಮಂದಿ ತೂರತಾರು
ಬತ್ತೀಸ ಮಂದಿ ತುಳಿತಾರು (ಲಠೈ ಭಾಗ ೧–೧೬)
ಐದಬಟ್ಟ ಮೂವತ್ತೆರಡ ಹಲ್ಲ

ತಲೆ ಸವರಿದೊಂದು ಸೇರು ತುಪ್ಪಕ್ಕೆ
ಐದು ರೂಪಾಯಿ ಆದರೆ
ಪೂರ್ತಿ ಸೇರಿಗೆ ಎಷ್ಟಾಗ್ತದೆ (ಸು ೨೯೫)
ಐದು ರೂಪಾಯಿ

ಕೋಟ್ಯಾನಗಟ್ಲೆ ರೂಪಾಯಿ ಹಾಳು
ಮಾತಿನಗಟ್ಲೆ ಮನಿ ಹಾಳು
ನನ್ನ ಬಿಟ್ಟರ ಅವನ ಮನಿ ಹಾಳು (ಇ ೪೨೭)
ಒಡಪು

ಎಳ್ಳು ಕಾಳಿನಷ್ಟು ಎಲಿ ಸಣ್ಣ
ಅದರ ಹೂವಿನ್ಯಾಗ್ ಮೂರು ಬಣ್ಣ
ಇದ ಒಡಚಿದವನು ನಮ್ಮಣ್ಣ (ಲ ಗೌ ೨೫೧)
ಒಡವಿನ ಗಿಡ

ಎದ್ದಿ ಎದ್ದಿ ಕುಣಿವರ್ದು ಒಂದ್ತಂಡಾ
ಬಿದ್ ಬಿದ್ದಲ್ಲಿ ಇರ್ವರ್ದು ಒಂದ್ತಂಡಾ
ಕವಚಿ ಮಗುಚಿ ಹಾರ್ವರ್ದು ಒಂದ್ತಂಡಾ (ಶಾಂ ನಾ ಅನುಬಂಧ ೪೫)
ವಡೆ, ಇಡ್ಲಿ, ದೋಸೆ

ಎಲಿ ಭಾಳ ಸಣ್ಣ
ಹೂವು ಮೂರು ಬಣ್ಣ (ವಾಲಿ ೨–೭೫)
ಒಡೇನ ಕಂಟ

ಸುತ್ತ ಬೇಲಿ ನಡಕ ಕೀಲಿ (ಲಠ್ಠೆ ಭಾ–೫, ೨೮೧)
ಒಡ್ಯಾಣ

ಎಳ್ಳಿನಕಿಂತ ಎಲಿ ಸಣ್ಣ ಹೂವ ಮೂರ ಬಣ್ಣ (ಲಠ್ಠೆ ಭಾ–೫, ೮೬)
ಒಡ್ಯಾನ ಗಿಡ

ಕುಳ್ಳ ಮನುಷ್ಯ ಗುಡ್ಡ ಸುತ್ತುತಾನೆ (ಲ ಗೌ ೪೫೫)
ಒಣಗು

ಅರಸನಿಗೆ ಮೈಯೆಲ್ಲಾ ಜಡ್ಡು (ಲ ಗೌ ೭೯)
ಒಣದ್ರಾಕ್ಷಿ

ಕುತನಿ ಚೀಲದಾಗ ರತ್ನ ತುಂಬ್ಯಾವ (ಇ ೪೦೫)
ಒಣ ಮೆಣಸಿನಕಾಯಿ

ಲಾಲಮಗ ಲೋಲಮಗ
ಥೈಯಂ ಥೈಯಾರೆ (ಲಠೈ ಭಾ–೫, ೨೬೫)
ಒಣ ಮೆಣಸಿನಕಾಯಿ ಕುಟ್ಟೋದ

ಕರಿ ಸೀರಿ ಉಡತಿ
ಕಾಲುಂಗರಾ ಇಡತಿ
ಸರ್ರನೆ ಹೋಗಿ ಭರ್ರನೆ ಬರತಿ (ಲಠೈ ಭಾ–೫, ೧೧೫)

ಕರ್ರನಾಕಿ ಕಾಲುಂಗುರದಾಕಿ
ಸರಕ್ಕನ ಹೋಕ್ಕಾಳ ಬರಕ್ಕನ ಬರತಾಳ (ಇ ೩೪೩)

ನೋವಿಲ್ಲ ಬ್ಯಾನಿಲ್ಲ ದೆವ್ವ ಥೈಥೈ ಅಂತೈತಿ (ಇ ೬೯೫)
ಒನಕಿ

ಆಕಾಶದಲ್ಲಿ ಆಡೊ ಗಿಡ್ಗ
ಗಿಡಗನ ಹೊಟ್ಟೇಲಿ ಬೆಳ್ಳಿ ಕಡ್ಗ
ಅದ ಬಿಡಿಸಿದನೆ ಮೈಸೂರ ಹುಡ್ಗ (ಜೀಶಂಪ ೬೨)

ಇಡದ್ರೆ ಒಂದು ಹಿಡಿ
ಬುಟ್ರೆ ಒಂದು ತಬ್ಬು (ಮಂ ೧.೫–೨೧)

ಅಂಬಾರದಲ್ಲೊಂದು ಗಿಡುಗ
ಅದರ ಕಾಲಿಗೊಂದು ಕಡಗ
ಅದನ್ನು ಮಾಡಿದೋನೊಬ್ಬ ಬಡಗಿ ಹುಡುಗ (ಲ ಗೌ ೧೩೬)

ಅಂಬಾರದಾಗಾಡೋ ಹುಡುಗ
ಅದರ ಕೈಯಾಗೆ ಪಚ್ಚೆ ಕಡಗ
ಅದನ್ನು ಮಾಡ್ದೋನು ಬಡಗಿಯೋರ ಹುಡುಗ (ಸು ೭೫)

ಅಂಬಾರ್ದಲ್ಲಾಡೊ ಗಿಡ್ಗ
ಅದರ ಕಾಲಿಗೆ ಪಚ್ಚೆ ಕಡ್ಗ
ಅದನ್ಮಾಡ್ದೋನು ಬಡಗಿ ಹುಡ್ಗ
ಬಂಟ ನೀನಿದ ತಿಳಿದ್ದೇಳೊ (ಜೀಶಂಪ ೧೫)

ಕಣ್ಣೆರಡು ಕಾಲೊಂದು ಕುಣಿದಾಡುತಿಹಳು
ಬಣ್ಣಿಸಿ ನೋಡಿದರೆ ಮೂರಕ್ಷರದವಳು
ಹೆಣ್ಣು ಮಕ್ಕಳ ಕೂಡೆ ಒಡನಾಡುತಿಹಳು (ಚಂ ಸೆ ೭೭)

ಕರಿ ಮೋರೆಯವಳಿಗೆ ಬಿಳಿ ಕಡಗ (ಲ ಗೌ ೩೯೨)

ಕರಿಯ ಮೈಯ ಗರತಿ
ಕಾಲುಂಗುರ ಇಡುತಿ
ಕುಳಿಯಲ್ಲಿ ಕುಣಿಯುವೆ
ಏರಿನಲ್ಲಿ ಕೂರುವೆ (ಚಂ ಸೆ ೮೭)

ಕರಿ ಸೀರೆ ಉಟ್ಟಿದ್ದಾಳೆ
ಕಾಲುಂಗರ ತೊಟ್ಟಿದ್ದಾಳೆ
ಸರ್ ಅಂತಾ ಹೋಗ್ತಾಳೆ
ಬರ್ ಅಂತಾ ಬರ್ತಾಳೆ
ಕರೆದವರ ಮನೆಮನೆಗೆ ಹೋಗ್ತಾಳೆ (ಶಾಂ ನಾ ೨೯೬)

ಕರೀ ಸೀರಿ ಉಟ್ಟಾಳ
ಕಾಲಾಗ ಕಡಗಾ ಹಾಕ್ಯಾಳ
ಕರೆದವರ ಕೈಯಾಗ ಕುಣಿತಾಳ (ಇ ೩೫೭)

ಕರೀ ಸೀರೋಳರ ಕಾಲುಂಗುರದೋಳೆ
ನೆರೆ ಮನೆಗೆ ಹೋದ್ರೆ ಬಿರ್ರನೆ ಬಾರೆ (ಸು ೧೮೫)

ಕರೀ ಹುಡುಗಿ ಕಾಲುಂಗುರ ಇಟ್ಟಾಳ
ಸರ್ರನೆ ಹೋಗಿ ಭರ್ರನೇ ಬರ್ತಾಳ (ವಾಲಿ ೩–೬೯)

ಕರೇ ಮುಂಡೆಗೆ ಕಂಚಿನ ಕಾಲುಂಗುರ (ಸು ೧೮೯)

ಕರ್ಕಿ ಕಾಲುಂಗುರದೋಳೆ
ಬಿರ್ನೋಗಿ ಸರ್ರನೆ ಬಾರೆ (ಜೀಶಂಪ ೧೧೨)

ಕರ್ರನೆ ಕಾಲುಂಗುರದವಳೆ
ಸರ್ರನೆ ಹೋಗಿ ಬಿರ್ರನೆ ಬಾ (ಚಂ ಸೆ ೮೨)

ಕಾಡಿನಲ್ಲಿ ಹುಟ್ಟೋದು
ಕಾಡಿನಲ್ಲಿ ಬೆಳೆಯೋದು
ನಾರಿಯರ ಮುಂದುಗಡೆ ಕುಣೂ ಬತ್ತಾಳೆ ಕೆಳೀಕೂ ಬತ್ತಾಳೆ (ಲ ಗೌ ೪೪೪)

ಕೆಂಪಯ್ಯನ ತೋಟದಲ್ಲಿ ಮಲ್ಲಿಗೆ ಹೂವು
ಬೀಗ ಬಿತ್ತಾರ ನಡುವೆ ಚಿತ್ತಾರ
ಕಾಗೆ ಕರ್ರ್ ಅಂತು ಕೋಳಿ ಕೊಕ್ ಅಂತು
ಕರ್ಕಿ ಕಾಲುಂಗರದವಳೆ ನೆರಮನೆಗೆ ಹೋದವಳೆ ಬಿರ್ರನೆ ಬಾರೆ (ಲ ಗೌ ೪೮೩)

ಮನೆ ಮನೆಗೆಲ್ಲ ಹೆಬ್ಬಾವು (ಇ ೮೧೯)

ಮರದಲ್ಲೇ ಹುಟ್ಟೋದು
ಮರದಲ್ಲೇ ಬೆಳಿಯೋದು
ನಾರೀರ ಮುಂದೆ ಕುಣಿಯೋದು (ಇ ೮೨೧) (ಜೀಶಂಪ ೨೨೬)

ಸಣ್ಣ ಮುಖದಾ ಬಾಲೆ
ನುಣ್ಣಾನೆ ಮೈಯವಳೆ
ಹೆಣ್ಣು ಮಕ್ಕಳ ಕೂಡಿ
ಒಡನಾಡುತಿಹಳೆ (ರಾ ಗೌ ೪೩೪)

ಸರ್ ಅಂತಾ ಹೋಗ್ತಾಳೆ
ಬರ್ ಅಂತಾ ಬರ್ತಾಳೆ
ಕರೆದವರ ಮನೆಮನೆಗೆ ಹೋಗ್ತಾಳೆ (ಶಾಂ ನಾ ೨೯೬)

ಸರ್ರನೆ ಹೋಗಿ ಬರ್ರನೆ ಬರ್ತಾಳೆ (ಇ ೯೩೪)

ಸರ್ರನೆ ಹೋಗಿ ಬಿರ್ರನೆ ಬಾ (ಚಂ ಸೆ ೮೨)

ಸರ್ರನೆ ಹೋಗುತ್ತೆ ಭರ್ರನೆ ಬರುತ್ತೆ (ಚಂ ಸೆ ೨೨೦)

ಒನಕೆ

ಕರೀ ಸೀರಿ ಉಟ್ಟಾಳ
ಕಾಲುಂಗುರ ಇಟ್ಟಾಳ
ಮ್ಯಾಲಕ ಹೋಗತಾಳ
ಕೆಳಗೆ ಬರತಾಳ (ವಾಲಿ ೩–೧೪)

ಒನಿಕೆ

ಮನಿಗುಂದ್ಹೆಬ್ಬಾವ (ಶಾಂ ನಾ ೨೯೫)

ಒನ್ಕೆ

ಕರಿಯವ್ಳೆ
ಕಾಲುಂಗರ್ದವ್ಳೆ
ನೆರಮನೆಗೋದ್ರೆ ಬಿರಬಿರನೆ ಬಾ (ಮಂ ೧.೫–೪೪)

ವನ್ಕೆ

ನಿಮ್ಮಜ್ಜಿ ಮುಕಳ್ಯಾಗ ನಮ್ಮಜ್ಜನ ತಲೆ (ವಾಲಿ ೮–೩೭)

ಒರಳು, ಕಲ್ಲು

ಕಲ್ಲ ಕಣ ಕಬ್ಬಿಣ ಮೇಟ
ಚಂದರ ರಾಸಿ (ವಾಲಿ ೩–೯೭)

ಒರಳು, ಹಾರಿ, ಕಾರಪುಡಿ

ಅಕ್ಕಗ ಬಾಯಾಕ ಹಾಕಿದ್ರ ತಂಗೀ ಬಾಯಾಗ ಹಾಯತೈತಿ (ಇ ೧೦)

ಅಂಗಳದಲ್ಲಿ ಆಡೋದು ಅಂಗಲ್ಲ ಮಂಗಲ್ಲ
ತಿಂಗಳಿಗೊಡೆಯೋನು ಕಡುಜಾಣ (ಲ ಗೌ ೧೦೨)

ಮುಳಗಡ್ಡಿ ಮೇಲೆ ಮುಳಗಡ್ಡಿ
ಅದರ ಮೇಲೆ ತೊಂಬೈನೂರ ಪಟ್ಟಣ
ಆ ಊರ ತಳವಾರನ ಹೆಂಡತಿ
ತಳ ಇಲ್ಲದ ಕೊಡ ಹೊತ್ತು
ಜಲ ಇಲ್ಲದ ಬಾವಿಗೆ ಹೋದಳು (ಇ ೮೫೮)
ಒರಳು ಕಲ್ಲು (ಮುಳಗಡ್ಡಿ, ಭತ್ತ, ಪಟ್ಟಣ, ನೆಲ್ಲು, ಭಾವಿ, ಒರಳುಕಲ್ಲು)

ಹೊಳ್ಳು ಗಿಡದಾಗ ಕಳ್ಳ ಕುಂತಾನ (ವಾಲಿ ೩–೯)
ಒರೆ–ಕತ್ತೆ

ಅಕ್ಕನ ಬಾಯಾಗ ಹಾಕಿದ್ರ
ತಂಗಿ ಬಾಯಾಗ ಹೋಗ್ತತಿ (ಲಠ್ಠೆ ಭಾ–೫, ೩)

ಈಟ ಪಾರಾ ಗಿದ್ನಕ್ಕಿ ಹೊರ್ತಾನ (ಲಠ್ಠೆ ಭಾ–೫, ೬೩)

ಈಟ ಹುಡುಗ ಗಿದ್ನಕ್ಕಿ ಹೊರ್ತಾನ (ಲಠ್ಠೆ ಭಾ–೫, ೬೫)

ಗಿಡ್ಡನ ಹುಡುಗ ಗಿದ್ನ ಅಕ್ಕಿ ಹೊರತಾನ (ಇ ೪೮೭)
ಒಲೆ

ಅಕ್ಕನ ಮನೆಯ ಬೆಳಕು ತಂಗಿಯ ಮನೆಯಲ್ಲಿ ಕಾಣುತ್ತೆ (ಚಂ ಸೆ ೨)

ಈಟೆ ಹುಡುಗ ಗಿದ್ನಕ್ಕಿ ಹೊರ್ತಾನೆ (ಲ ಗೌ ೧೪೦)

ಚಿಕ್ ಚಿಕ್ ಗುಡಿ
ಬಗ್ಗಿ ಬಗ್ಗಿ ನೋಡ್ತೀವಿ (ಸು ೨೬೩)

ಪುಟ್ಟ ಪುಟ್ಟ ದೇವಸ್ಥಾನ
ತಗ್ಗಿ ಬಗ್ಗಿ ನಮಸ್ಕಾರ (ಇ ೭೦೪)

ಹಲ್ಲು ನಾಲಗೆ ಇಲ್ಲ ಸೊಲ್ಲು ಸೋಜಿಗವಲ್ಲ
ಕೊಲ್ಲದೇ ಮೃಗವ ಹಿಡಿಯುವುದು
ಲೋಕದೊಳಗೆಲ್ಲ ಠಾವಿನಲಿ ಸರ್ವಜ್ಞ (ಚಂ ಸೆ ೨೪೦)

ಹುಗ್ಗಿ ದೇವಸ್ಥಾನಕ್ಕೆ ಬಗ್ಗಿ ಬಗ್ಗಿ ಸಲಾಮು (ಲ ಗೌ ೧೦೫೬)

ಮೂರು ಕಾಲಿನ ರಾಣಿ
ಎಲ್ಲರ ಮನಿಯಾನ ಜಾಣಿ
ಕಟ್ಟಿಗೆ ತಿಂದು ನೀರು ಕುಡಿಯುವಳು (ವಾಲಿ ೩–೮೭)

ಸಣ್ಣ ಗುಡಿ ಬಾಗಿ ನಮಸ್ಕಾರ (ವಾಲಿ ೩–೧೦೬)
ಒಲೆ

ಅಕ್ಕ ಹಾಕದದ್ದು
ತಂಗಿಗೆ ವೋಯ್ತು (ಮಂ ೧.೫–೫)
ಒಲೆ, ಓಗಲೆ

ಅಗಲ ಬಾಯಾಗ ನಿಗರಿಸಿ ಇಟ್ಟರ
ಕೆಂಪಗ ಉರಿದು ಬೆಳ್ಳಗ ಉಳೀತು (ವಾಲಿ ೮–೨)
ಒಲೆ, ಕಟ್ಟಿಗೆ, ಉರಿ, ಬೂದಿ

ಅಗಲ ಬಾಯಾಗ ನಿಗರಿಸಿ ಇಟ್ಟರ
ಕೆಂಪಗ ಹತ್ತಿ ಬಿಳಿದು ಬಿತ್ತು
ಒಲೆ, ಕಟ್ಟಿಗೆ, ಬೆಂಕಿ, ಬೂದಿ (ವಾಲಿ ೧–೨೨)

ಪುಟ್ಟಪುಟ್ಟ ದೇವರಿಗೆ ಬಗ್ಗಿಬಗ್ಗಿ ನಮಸ್ಕಾರ (ಚಂ ಸೆ ೧೭೪)

ಪುಟ್ಟ ಪುಟ್ಟ ದೇವಸ್ಥಾನ
ಬಗ್ಗಿ ಬಗ್ಗಿ ನಮಸ್ಕಾರ (ರಾ ಗೌಸಿಸಿ೫)

ಬರಿಗುಡಿಯಮ್ಮನಿಗೆ ಬಗ್ಗಿಕೊಂಡು ಸಲಾಮು (ಲ ಗೌ ೭೪೧)
ಒಲೆ ಊದುವುದು

ಕಟಕಟೆ ಜಗ್ಲಿ ಮೇಲೆ
ಬರ್ಕಂಡಿರೋದೇನಮ್ಮ
ನೆಟ್ಟಗಿರೋದೇನಮ್ಮ
ಬೆಳ್ಳಗಿರೋದೇನಮ್ಮ (ಜೀಶಂಪ ೧೨೪)
ಒಲೆ, ಮಡಕೆ, ಕವೆಗೋಲು, ಹಿಟ್ಟಿನ ಕೋಲು, ಹಸಿ ಹಿಟ್ಟು

ನಮ್ಮನ್ಯಾಗ್ ಮೂವಾರ್ ಹೆಣಗರದಾರೆ (ಲ ಗೌ ೬೫೦)
ಒಲೆಯ ತೋಳು

ಅಗಲ್ಸ ಕಂಡ್ ತಗಲ್ಸ ಕಂಡ್
ಪೆಟ್ಟೆ ಕೆಂಪಾಗಿ ಬೈಳಗೆ ಬಿತ್ತು (ಮಂ ೧.೫–೭)
ಒಲೆ, ಸೌದೆ, ಕೆಂಡ, ಬೂದಿ

ಅಗಲಿಸಿದ್ದಕ್ಕೆ ನಿಗರಿಸಿ ಇಟ್ಟರೆ
ಕೆಂಪಗೆ ಹತ್ತಿ ಬೆಳ್ಳಗೆ ಉಳೀತು (ರಾ ಗೌ ೯)
ಒಲೆ, ಸೌದೆ, ಬೆಂಕಿ, ಬೂದಿ

ಮಳಕಾಲೂಚ ಪಾರ
ಮುಗಲುದ್ದ ಚಂಡಕಿ (ಲಠ್ಠೆ ಭಾ–೫, ೨೪೩)
ಒಲಿ, ಹೊಗೆ

ಅಕ್ಕನ ಬಾಯಿಗೆ ಹಾಕಿದರೆ
ತಂಗಿಯ ಬಾಯಿಗೆ ಹೋಗುವುದು (ಲ ಗೌ ೭)
ಒಲೆ, ಹೋಗೊಲೆ

ಕಲ್ಲ ಕಳಮಾಡಿ
ಕಬ್ಬಿಣವ ಮೇಟ ಮಾಡಿ
ಇಲ್ಲದ ನಾಯಿ ಹಿಡಕೊಂಡು
ಶಿರಸವಿಲ್ಲದ ಕುದುರೆ ತೆಕ್ಕೊಂಡು
ಇಲ್ಲದ ಮಿಕ ತರೋದಕ್ಕೆ ಅಡವಿಗ್ಹೋದ (ರಾ ಗೌ ೧೮೫೫)
ಒಳಕಲ್ಲು, ಒನಕೆ, ಗುದ್ದಲಿ, ಕೊಡಬೆ, ಮೀನು

ಮೈಸೂರು ಉರಿಕಾತಿ
ಮಂಚಕಾರ ಮುದ್ದಣ್ಣ ಮುಟ್ಯಾಡಿ
ಪಾಲಿನವರು ತಿಕ ತೊಳೆದ ನೀರ
ನಮ್ಮ ಮನೆ ದೇವರಿಗೆ ಎಡೆ ಮಾಡ್ತೀವಿ (ಲ ಗೌ ೮೭೧)
ಒಳಕಲ್ಲು ತೊಳೆದ ನೀರು

ಮುಟ್ಟದ ಕೂಡಲೇ ಮಾರಿತಿರುವಿ
ಮೈ ಮುಚಗೊಳ್ಳತೈತಿ (ವಾಲಿ ೨–೧೧೫)

ಮುಟ್ತುತ್ತೆ ಮಾರೀ ತಿರುವಿ
ಮೈ ಮುಚಗೊಳ್ಳತೈತಿ (ಇ ೮೫೩)
ಒಳಮುಚಗ

ತಾಯಿ ರಂಡೆ
ಮಗಳು ಬೋಳಿ (ಇ ೫೮೧)
ಒಳ್ಳು–ಗುಂಡು

ಕಲ್ಲು ಕಣಕಣ
ಕಬ್ಬಿಣ ಮೇಟಿ
ಚಂದರ ರಾಶಿ (ಇ ೩೭೫)
ಒಳ್ಳು, ಹಾರಿಕೋಲು, ಕಾರಪುಡಿ

ಒಂದು ತೊಟ್ಟು
ಅನ್ನೇರಡು ಕಾಯಿ
ಮೂನ್ನೂರ ಅರವತ್ತೈದು ಹೂ (ಮಂ ೨.೧–೧೨)
ಒಂದು ವರ್ಷ, ಹನ್ನೆರಡು ತಿಂಗಳು, ಮುನ್ನೂರ ಅರವತ್ತೈದು ದಿನ

ಕಾಲೈತಿ ಕೊಳಗಿಲ್ಲ
ಬಾಲೈತಿ ಜಂವಿಯಲ್ಲ (ವಾಲಿ ೬–೧೭)

ಕೊಂಬೆಯಿಲ್ಲ ಬೇರಿಲ್ಲ ಗಿಡ ಮರ ಮಾತ್ರ ಬೆಳೆಯುತ್ತವೆ (ಇ ೪೫೭)

ಬಾಲೈತೆ ಜವಿ ಇಲ್ಲ
ಗಂಗೆದೊಗಲೈತಿ ಇಣಿಯಿಲ್ಲ
ಕಾಲದಾವು ಕೊಳಗಿಲ್ಲ (ಇ ೭೩೯)
ಓತಿಕಾಟ

ಹಾಲೆ ಮೇಲೆ ಉರಿಯೋದು (ರಾ ಗೌ ೪೯೨)

ಕಿಲ್ಕೀರ ಕಲ್ಲಪಾತ
ದುಂಡುಂಟು ಗಂಬಲಿಲ್ಲ (ಮಂ ೧.೨–೬)
ಓಲೆ

ಕಪ್ಪೆ ಕಲಕದ ಬಾವಿ
ಏಡಿ ಮುಳುಗದ ಬಾವಿ
ಆಕಾಶದ ಬಾವಿ
ಅರಬಾವಿ (ಸು ೧೭೯)
ಓಲೆ, ಬುಗುಡಿ, ಜುಮ್ಕೆ

ಅಂಡಗಳ್ಳಿ ಮುಂಡಗಳ್ಳಿ
ಮಾತುಗಳ್ಳೀ ದುಂಡು ಸಂಪಗೆ
ನಾಲೋರು ಅಕ್ಕ ತಂಗೇರು
ಮನೇಲವರೆ (ಸು ೬೮)
ಓಲೆ, ಬುಗುಡಿ, ಮುರ, ಜುಮ್ಕೆ

ಅಯ್ಯಾ ಭಾವ
ಮೈತುಂಬ ಬೂದಿ
ತಲಿಮ್ಯಾಲ ರುದ್ರಾಕ್ಷಿ (ಇ ೧೨೧೧)
ಬೆಡಲ

ಒಂದ ಕಾಯಿ ಮೂರ ಬ್ಯಾಳಿ (ಲಠ್ಠೆ ಭಾಗ ೫–೯೨)

ಒಂದ ಮನ್ಯಾಗ ಮೂರ ಮಂದಿ ಅಕ್ಕತಂಗೇರ
ಒಬ್ಬರ ಮಾರಿ ಒಬ್ಬರಿಗ ಕಾಣಲ್ಲ (ಲಠ್ಠೆ ಭಾಗ ೫–೯೪)

ಮೂರ ಮೂಲಿ ಕಾಯಿ
ಗೀರಿ ಗೀರಿ ಕಾಯಿ
ಹೀರಿ ಕಾಯಿ ಅಂದೀರಿ ಅಲ್ಲಾ
ಅಟ್ರ ಆಡು ಕಾಯಿ
ತುಪ್ಪಾ ಬಸು ಕಾಯಿ
ತಿಪ್ಪದ ಹಿಪ್ಪರಿ ಕಾಯಿ ಅಂದೀರಿ ಅಲ್ಲಾ (ಲಠ್ಠೆ ಭಾಗ ೫–೨೫೫)
ಬೆಡಲ ಕಾಯಿ

ಏರಿ ಮ್ಯಾಲ ಮೂರು ಮಂದಿ
ಮುಸುಕಿನ ಸೂಳೇರು
ಎಷ್ಟು ಮಳೆ ಬಂದರೂ ನೆನೆಯುವುದಿಲ್ಲ
ಬಿಸಿಲಿಗೆ ಮಾತ್ರ ಬಾಯಿ ಬಿಡತಾರ (ವಾಲಿ ೨–೫೮)

ಮೈಯೆಲ್ಲಾ ಬೂದಿ
ತಲೆಯಲ್ಲಿ ಸಂಡಿಗೆ
ಕೈಯಲ್ಲಿ ಹಪ್ಪಳ (ಚಂ ಸೆ ೨೧೦)

ಮೈಯೆಲ್ಲಾ ಬೂದಿ
ತಲೆಯೆಲ್ಲ ರುದ್ರಾಕ್ಷಿ
ಕೈಯಲ್ಲಿ ಹಪ್ಪಳ (ಇ ೮೮೩)

ಯಾಕ ಜೋಗಿ ಮೈಯೆಲ್ಲಾ ಬೂದಿ
ತೆಲಿಮ್ಯಾಗ ಚಕ್ರ ಕೈಯಾಗ ಛತ್ರಿ (ಲಠ್ಠೆ ಭಾಗ ೫–೨೬೦)
ಬೆಡಲ ಗಿಡ

ಗಿಣ್ಣು ಗಿಣ್ಣು ಕೋಲ ಬೆತ್ತದ ಕೋಲೇನಲ್ಲ
ಮುಳ್ಳು ಮುಳ್ಳು ಕಾಯಿ ಹಲಸಿನ ಕಾಯೇನಲ್ಲ
ಕಾಯಿಗೆ ಮೂರು ಕಣ್ಣು ತೆಂಗಿನ ಕಾಯೇನಲ್ಲ (ಇ ೪೮೯)
ಟೊಡಲ ಬೀಜ

ಹಗಲೆಲ್ಲಾ ಪ್ರವಾಹ
ರಾತ್ರಿಯೆಲ್ಲಾ ಬರೀ ನೆಲ (ಚಂ ಸೆ ೨೩೪)
ಅಂಗಡಿ ಬೀದಿ

ಕೈಕಾಲು ಉಂಟದಕೆ ಶಿರವಿಲ್ಲ ನೋಡಿ
ಹಿಡಿದರೆ ಹೆಗಲೇರುವುದರ ರೂಢಿ
ರಾಯರೆಲ್ಲರಿಗೆ ಪ್ರಿಯವಿದು ಉತ್ತರವ ನೀಡಿ (ವಾಲಿ ೩–೧೧೬)
ಅಂಗಿ

ಅರಬ್ಬೀ ದೇಶದ ಜನರ ಮಿತ್ರ ನಾನೊಬ್ಬ
ಧರಿಸಿರುವೆ ಬೆನ್ನಲ್ಲಿ ಹಸನಾದ ಡುಬ್ಬ
ಮರುಭೂಮಿ ವರ್ತಕಗೆ ನಾನೇ ನಾವಾಗಿರುವೆ
ಸರ್ಕಸ್ಸಿನೊಂದಿಗೆ ನಿಮ್ಮೂರಿಗೆ ಬರುವೆ (ಇ ೧೨೮೮)
ಒಂಟೆ

ಹೋಳ್ಯಾಗ ಏಳ್ ಎಮ್ಮಿ
ಒಂಡ್ಯಾಗ ಹತ್ ಎಮ್ಮಿ
ಮನ್ಯಾಗ ಹಿಂಡ ಎಮ್ಮಿ
ಒಟ್ಟು ಎಷ್ಟು ಎಮ್ಮಿ (ಇ ೧೧೨೩)
ಒಂದು

ದೂರದಿಂದ ಬಂದ ಕಾಗಿ
ಕೆರೆಯಲ್ಲಿ ಮಿಂದ ಕಾಗಿ
ಆರಿಕಲ್ಲ ಮೇಲೆ ಆರ ಕಾಗಿ
ಮರದ ಮೇಲೆ ಆರ ಹತ್ತ ಕಾಗಿ
ಒಟ್ಟೆಷ್ಟು ಕಾಗಿ (ಇ ೬೧೯)
ಒಂದು ಕಾಗೆ

ಮರದ ಮ್ಯಾಲೆ ನೂರು ಕಾಗೆ ಇರ್ತವೆ
ಬಂದೂಕದಿಂದ ಒಂದು ಕಾಗೆ ಹೊಡೆದರೆ
ಮರದ ಮ್ಯಾಲೆ ಇನ್ನೆಷ್ಟು ಕಾಗೆ ಉಳಿದುವು (ಸು ೪೦೦)
ಒಂದೂ ಇಲ್ಲ

ಕೆರೆಯಾಗ್ ಮುಣಗೇಳ್ ಕಾಗಿ
ದಂಡಿಮ್ಯಾಳ್ ಹತ್ತ್‌ಕಾಗಿ
ಮರಕ್ಕಾರ್ ಕಾಗಿ
ಒಟ್ನಾ ೈಗೆ ಏಸ್ ಕಾಗಿ (ಲ ಗೌ ೪೬೮)

ನೀರಿನಿಂದ ಏಳು ಕಾಗೆ
ಮರದಲ್ಲಿ ಹತ್ತು ಕಾಗೆ
ಬಿಸಿಲಿನಲ್ಲಿ ಆರು ಕಾಗೆ
ಎಂದರೆ ಎಷ್ಟು ಕಾಗೆ (ಚಂ ಸೆ ೧೬೦)
ಒಂದೇ ಕಾಗೆ

ಓಡಿ ಓಡಿ ಹೋಗುತ್ತಾನೆ ದಿಣ್ಣೆ ಹತ್ತುತ್ತಾನೆ ತಗ್ಗು ಇಳಿಯುತ್ತಾನೆ (ಲ ಗೌ ೩೫೬)
ಕಕ್ಕಸು ಗೋಡೆ

ಮಂಡ್ಯದ ದೊರೆ
ದಂಡ್ಹತ್ತಿ ಬರುವಾಗ
ಮಂಡಿ ಮೇಲೆ ಕೈ
ಮಂಡೆ ಮೇಲೆ ಸೆರಗು (ರಾ ಗೌ ೩೭೯)
ಕಕ್ಕಸ್ಸಿಗೆ ಕೂತಾಗಿನ ಆಕಾರ

ಆ ಕಾಲು ಡಾಂಕುತ್ತ
ಈ ಕಾಳು ಡಾಂಕುತ್ತ
ತುರು ತುರಿ ಉದುರುತ್ತ
ಪನ್ನೀರು ಚೆಲ್ಲುತ್ತ
ಬಂದಿನೇಯ ರಾಯರುಗಳೆ
ಬಂದಿನೇಯ ರಾಯರುಗಳೆ (ರಾ ಗೌ ೬೭)

ನೆಲ ಒರಗಿಕೊಂಡು
ಬೆದೆ ಮಾಡುವುದು (ರಾ ಗೌ ೩೨೫)
ಕಕ್ಕಸ್ಸು ಮಾಡುವುದು

ಅಪ್ಪ ಸಿಗಸ್ತಾನ
ಅವ್ವ ಹಾಕೊತಾಳ (ಲಠ್ಠೆ ಭಾಗ ೫–೨೦)
ಕಚ್ಚಿ ಸೀರಿ ನೀರಗಿ

ಅಪ್ಪಾ ಹಾಕ್ತಾನ ಅವ್ವ ಹೊಯ್ಕೊಳ್ಳತಾಳ (ಇ ೧೦೬)
ಕಚ್ಚೆ–ನಿರಿಗೆ

ಕಪ್ಪಗಿದೆ ಕಾಗೆಯಲ್ಲ
ಗಿಡವೇರುವುದು ಮಂಗವಲ್ಲ
ತಲೆ ದೊಡ್ದದು ಆನೆಯಲ್ಲ
ನಡು ಸಣ್ಣ ಸಿಂಹವಲ್ಲ (ಚಂ ಸೆ ೮೧)
ಕಟ್ಟಿರುವೆ

ಕರೀ ಮಣಿ ಸರ ಕೊರಳಿಗೆ ಆಗೋಲ್ಲ (ಚಂ ಸೆ ೮೯)
ಕಟ್ಟಿರುವೆಯ ಸಾಲು

ಆ ಬೆಟ್ಟಕ್ಕೂ
ಈ ಬೆಟ್ಟಕ್ಕೂ
ಕಬ್ಬಿಣದ ಸರಪಣಿ (ಸು ೮೨)

ಹಳ್ಳದಾಗೆ ಅಜ್ಜಿ ಹಾಕಿಸ್ತಾಳೆ (ಸು ೫೦೪)
ಕಟ್ಟಿರುವೆ ಸಾಲು

ನಿಮ್ಮ ಸಮದೋರು ಬಂದು
ಕೈಹಿಡಕೊಂಡ್ರೆ ಏನೆಂತ ಬಿಡಿಸಿಕೊಳ್ತೀರಿ (ರಾ ಗೌ ೩೧೩)
ಕಡಗ

ಅವ್ವನ ಮುಂದ ದೆವ್ವ ಕುಣಿತದ (ಲಠೈ ಭಾಗ ೫–೩೪)

ಕರಿಕಲ್ಲ ಮ್ಯಾಲ ಬಿಳಿರಂಗ ಹೋದ
ಪದ್ಮಾವತಿ ಬಂದ ಪಾತರಾಡತಾಳ (ಲಠೈ ಭಾಗ ೫–೧೧೪)

ತಿರಗ ತಿರಗ ಜಲುಟಿ
ತಿರಗ ಬ್ಯಾಡ ಜಲೂಟಿ
ಏಳೂರ ಗೌಡ ಬಂದ್ರ
ಅಂಜ ಬ್ಯಾಡ ಜಲೂಟಿ (ಲಠೈ ಭಾಗ ೫–೧೭೦)

ಹಗೆದಾಗ ಹಾಂವ ಕೂಗ್ಯಾಡ್ತತಿ (ಲಠೈ ಭಾಗ ೫–೨೯೦)
ಕಡಗೋಲ

ಬಡಗ್ಯಾ ಮಾಡ್ಯಾಣ ಹೊಸ ಮಣಿ
ಅದರಾಗ ಕುಂತಾಳ ಚಿಂತಾಮಣಿ
ನಾಲ್ಗಿ ಅದ ಮಾತ ಇಲ್ಲ (ಲಠೈ ಭಾಗ ೫–೨೦೫)
ಕಡಗೋಲ (ರೇವಗಿ)

ಒಬ್ಬಗ ಒಂಬತ್ತು ಮೂಗ (ವಾಲಿ ೩–೩೪)

ಒಳ್ಳೇ ಹುಡುಗಿಗೆ ಒಂಭತ್ತು ಬೈತಲೆ (ಚಂ ಸೆ ೬೧)

ಕರಿಯ ಕಲ್ಲಮೇಲೆ
ಬಿಳಿಯ ರಂಗವಲ್ಲಿ ಹಾಕಿ
ಪಾತ್ರದಾಕೆ ತಕ್ಕತೈ ಮಾಡತಾಳ (ಇ ೩೪೯)

ಗುಡುಗುಡುತಿರುವೆ ಮೇಘವಲ್ಲ
ಕಟ್ಟಿಹಾಕಿದರೂ ಕಳ್ಳನಲ್ಲ
ಹತ್ತು ಮುಖಗಳಿವೆ ರಾವಣನಲ್ಲಾ (ಶಾಂ ನಾ ೨೯೮)

ನಮ್ಮ ಮನ್ಯಾಗ ಒಬ್ಬಾಕಿ ಕರೆ ಮುದುಕಿ ಅದಾಳ
ಆಕಿ ತಲಿ ಗೀರಗೀರ ಉಳಿದದ್ದೆಲ್ಲಾ ದುಂಡಗ (ಇ ೬೩೩)

ಹಗೆದಾಗ ಹಾವು ಬೋರಾಡತೈತಿ (ಇ ೯೯೫)

ಹಾರೂರ ಹುಡಗೀಗ ಹತ್ತಬೇತಾಲಿ ಬಿದ್ದಾವ (ಇ ೧೦೬೮)

ಕಡಗೋಲು

ಕಾನೀಲುಟ್ಟು ಕಡುಬೆಂಡಾಡ್ತು
ವಡ್ತಿ ಕಂಡ್ರೆ ನೆಗನೆಗದ್ ಹಾರ್ತು (ಶಾಂ ನಾ ೨೯೭)

ಕಡಗ್ಲು

ಉತ್ತರಾಸದ ಮೇಲೆ ಮುತ್ತಿನ ಚೆಂಡ್ಮಡಗಿ
ಬಂದ ಬಂದವರಿಗೆಲ್ಲ ಮುತ್ತು ಕೊಡ್ತದೆ (ಲ ಗೌ ೧೯೧)

ಕೂತ ಜಾಗಕೆ ಬರ್ತದೆ
ಆಯಸ್ಸು ಕೇಳಾಕೆ
ಅದರ ಮನೆ ಜೇಡಿ ಮಣ್ಣಿನದು
ಅವರೆ ಹುಳಾನ ತಿಂತದೆ
ಅದೂ ಊರ್ತದೆ
ಒಂತಾವು ನಿಲ್ಲೋದಿಲ್ಲ (ರಾ ಗೌ ೨೧೪)

ನಡ ಸಣ್ಣ ನಾಗರ ಬಣ್ಣ
ಮುಟ್ಟೋಕೆ ಹೋದ್ರೆ ಹೆಟ್ಟೋಕೆ ಬರ್ತಾನೆ (ಸು ೩೨೭)

ನಡು ಸಣ್ಣ
ನಾಗರ ಬಣ್ಣ
ಹಿಡಿಯಕೋದ್ರೆ ಕಡಿಯಕ್ಕ ಬತ್ತದೆ (ಮಂ ೨,೨–೧೧)

ಸುತ್ತು ಮುತ್ತ ಬೇಲಿ ಹಾಕಿ
ಸುಂದರಗ್ನ ಜ್ವಾಳ ಬಿತ್ತಿ
ವಡ್ಯೋರೊನ್ನೆಲ್ಲಾ ಕಡಿಯಾಕ್ ಬತ್ತಾದೆ (ಮಂ ೨.೨–೧೬)
ಕಡಜ

ಉತ್ತರಾಸದ ಮೇಲೆ
ಮೂರು ಮುತ್ತು ಹುಯ್ಕೊಂಡು
ಹೋಗ್ಬರೋರ್ನೆಲ್ಲ ಸುಂಕ ಕೇಳ್ತದೆ (ರಾ ಗೌ ೯೬)

ಹನ್ನೆರಡು ಕಂಬದ ಹಟ್ಟಿಗೆ ಕಬ್ಬಿಣ ಸೋಕಿಸಿಲ್ಲ (ಲ ಗೌ ೯೯೪)
ಕಡಜದ ಗೂಡು

ಟಾಕು ಟೀಕಿನ ಮನೆ
ಐಗರುಗೊಂಬಿನ ಮನೆ
ಬಾಚಿ ಮುಟ್ಟದ ಮನೆ
ಬಡಗಿ ಕಟ್ಟದ ಮನೆ (ಜೀಶಂಪ ೧೬೦)
ಕಡಜನ ಗೂಡು

ಚುಟುಕ ಚುಂಗಿ
ಬೋಲ್‌ಬೋಲ ಬಂಗಿ
ಹಿಡಿಲಿಕ್ಕೆ ಹೋದರ
ಕಡಿಲಿಕ್ಕೆ ಬರತೈತಿ (ಲಠೈ ಭಾಗ ೩–೪೧)

ನಡಾ ಸಣ್ಣ ನಾಗರ ಬಣ್ಣ
ಹಿಡ್ಯಾಕ ಹೋದ್ರ ಕಡ್ಯಾಕ ಬರ್ತತಿ (ಲಠೈ ಭಾಗ ೩–೪೬)
ಕಡಜಿರಗಿ

ನಡಾ ಸಣ್ಣ ನಾಗರ ಬಣ್ಣ
ಹಿಡಿಲಾಕ ಹ್ವಾದರ ಸಿಗಲಾರದಣ್ಣ
ಸಿಕ್ಕರೆ ಕಚ್ಚದೆ ಬಿಡಲಾರದಣ್ಣ (ವಾಲಿ ೬–೨೮)
ಕಡಜೀರಿಗೆ

ಹಂಡು ಎತ್ತು ಕೂಡಿ ಹೊತ್ಕ ಸೆಗಣಿ ಹಾಕೇವು (ಇ ೧೦೮೧)
ಕಡಜೀರಿಗಿ ಹುಟ್ಟು

ಅದರದರ ಅಂತರು
ಚದುರಿಗೆ ಚಪ್ಪರು
ಮೇಲೊಂದು ಕಳಸ (ರಾ ಗೌ ೨೪)
ಕಡಬಿನ ಚೆಟ್ಟ

ಅಟ್ಟಕ್ಕ ಆರಕಣ್ಣ
ಬೆಟ್ಟಕ್ಕ ಮೂರಕಣ್ಣ (ಲಠ್ಠೆ ಭಾಗ ೪–೧೫)
ಕಡಬಿನ ಪಾತ್ರೆ, ಟೆಂಗ

ಅಗಟಿಗೆ ಆರು ಕಣ್ಣು
ಬಿಗುಟಿಗೆ ಮೂರು ಕಣ್ಣು
ಚಿಂತಾಮಣಿಯಮ್ಮನಿಗೆ ಒಂದೇ ಕಣ್ಣು (ಲ ಗೌ ೧೬)
ಕಡಬಿನ ಪಾತ್ರೆ, ತೆಂಗಿನಕಾಯಿ, ಸೂಜಿ

ಡುಮ್ಮಡುಮ್ಮಿಯರಿಬ್ಬರು
ಹುಳುಕ್ಕಾ ಕೊಳಕ್ಕಾರು ಇಬ್ಬರು
ಚಂದಾನ ಚೆಲುವ್ಯಾರಿಬ್ಬರು (ಇ ೫೬೧)
ಕಡಬು–ದೋಸೆ–ಹೋಳಿಗೆ

ಬಂಡಿಕಾಯಿ ತಿಂದರೆ ಗಿಂಡ ರಸ ಇಲ್ಲ (ಇ ೭೮೩)
ಕಡಲಿಕಾಯಿ

ಇಟೀಟ ಗಿಡಗಿಡಕ್ಕ ಗೋಣೆ ಹುಳ್ಳಾ ಕುಂತಾವು (ಇ ೧೮೫)
ಕಡಲಿಬುಡ್ಡಿ

ಅಗಿದರೆ ಸಿಪ್ಪೆ
ನುಂಗಿದರೆ ಬಿತ್ತ (ಸು ೧೫)

ಎರೆ ಮಣ್ಣು ಎರೆ ಮಣ್ಣು ಹೆಂಟ್ಯಾಡ
ಹೂ ಜೋತಾಡ ಕಾಯಿ ನ್ಯಾತಾಡ (ರಾ ಗೌ ೧೧೩)

ಐವತ್ನರಿಗೊಂದೇ ಬಾಲ (ಜೀಶಂಪ ೮೩)

ಒಂಟಿಗಾಲು ಬಸಪ್ಪನಿಗೆ ಕುಂಟುಗಾಲು ಗೆಜ್ಜೆ (ಸು ೧೩೬)

ಒಂದು ಅಜ್ಜಿಗೆ ಇಬ್ಬರು ಮಕ್ಕಳು (ಲ ಗೌ ೩೪೧)

ಗಿಡಗಿಡಕೂ ಬುಡುಬುಡಿಕೆ (ಸು ೨೪೯)

ಪೆಟ್ಟಿಗೆ ತೆಗೆದರೆ ಕೃಷ್ಣ ಹುಟ್ಟಿದ (ರಾ ಗೌ ೩೩೭)

ಭೂಮೀಲೇ ಬೆಳೆದು ಭೂಮಿ ವಳಗೇ ಅಡಗಿ
ಕೈಕೈ ಚಾಚಿ ಬಾಯ್‌ನೀರ ಕರೆಯುತ್ತೆ (ಲ ಗೌ ೮೦೬)

ಹುಟ್ಟುತ್ಲೆ ಮಗಾ ಹುರಿಗೆಜ್ಜೀ ಕಟ್ಟಾ್ಯನ (ಇ ೧೦೯೧)

ಬಂಡಿ ಕಾಯಿ ತಿಂದ್ರೂ
ಗಿಂಡಿ ರಸಾ ಹೊಂಡಾಗಿಲ್ಲ (ಲಠ್ಠೆ ಭಾಗ ೪–೧೫೦)

ಹಡಗಡಗ ಮರವಾಗಿ
ಬುಡದುಂಬೆ ತಳ್ಳಾಗಿ
ತಿನ್ನದರ ತಿರುಳ
ಉಗಿಯದರ ಸಿಪ್ಪೆ (ಸು ೪೯೦)

ಹಡಗಡಲೆ ಗಿಡವಾಗಿ
ಗಿಡತುಂಬೆ ತಾಳಾಗಿ
ಪಂಚ ಪತಿರಾಗಿ
ಪನ್ನೀರಾಗಿ
ತಿನ್ನೋದು ಬೀಜ
ಉಗಿಯೋದು ಸಿಪ್ಪೆ (ಸು ೪೮೯)
ಕಡಲೆ ಕಾಯಿ

ಸುಟ್ಟ ಮೀನ ಸಂತಿಗೆ ಹೋಯ್ತು (ವಾಲಿ ೨–೪೨)

ಹುಡುಗಿ ಹೋದಳೆ
ಮುದುಕಿ ಆದಾಳೆ
ಗಿಲಕಿ ಆಡ್ಯಾಳೆ (ಲ ಗೌ ೧೦೬೨)
ಕಡಲೇ ಕಾಯಿ

ತಿಂದರ ಬೀಜ
ಉಗುಳಿದರೆ ಚಪ್ಪಿ (ಇ ೫೪೭)

ಹುಟ್ಟುತ್ಲೆ ಮಗಾ
ಹುರಿಗೆಜ್ಜಿ ಕಟ್ಯಾನ (ಲಠ್ಠೆ ಭಾಗ ೪–೨೦೯)
ಕಡ್ಲಿಕಾಯಿ

ಇಟಿಟೆ ಕಾಯಿ ಪಪ್ಪಳ ಕಾಯಿ
ತಿನ್ನಲೇ ಬೀಜ ಉಗುಳಲೇ ಸೊಟ್ಟಿ (ಲಠ್ಠೆ ಭಾಗ ೪–೩೯)
ಕಡ್ಲಿಕಾಯಿ, ಶೇಂಗ

ವಾಗಗಾ ಬರ್ ಬರದೇ ವಾದ
ಬರಾಗ ಕುಟುಕ್ತಾ ಬಂದ (ಮಂ ೧.೪–೭೦)
ಕಡ್ಲೆಕಾಯಿ

ಗಿಡ ನೋಡಿದ್ರೆ ನೂರಾರು ರೆಕ್ಕೆ
ಎಲೆ ನೋಡಿದ್ರೆ ಒಂದು ಭತ್ತದ ಉದ್ದ ಭತ್ತದ ಗಾತ್ರ
ಗಿಡದ ತುಂಬ ಬರೀ ಕಾಯಿಯ
ಎಡದು ಕಡಿದ್ರೂ ಬೇಳೆ
ಬಡದ್ರೂ ಬೇಳೆ (ರಾ ಗೌ ೨೩೦)
ಕಡ್ಲೆ ಕಾಳು

ಅಡಿ ಅಡಿ ಆಲದ್ಮರ
ಯಡ್ಗೆ ತುಂಬ ಕಾಯಿ ಬುಡ್ತು
ಪಣ್ಣೀರು ಪಂಚಪತ್ರ
ಅಗುದ್ರೆ ಅಡ್ಕೆ ಉಗುದ್ರೆ ಸಿಪ್ಪೆ (ಮಂ ೧.೪–೭)
ಕಡ್ಲೇಕಾಳು

ಗಿಡ್ಡನ್ನ ಗಿಡದಾಗ ಗಿಣಿ ಮುಕರ್ಯಾವು (ಇ ೪೮೦)

ಸಾಲ ಹಿಡಿದೇನಂತಾಳ ಸಣ್ಣಕ್ಕಿ ಅದೇನಂತಾಳ
ದೊಡ್ಡಕ್ಕಿ ಅದೇನಂತಾಳ ಗೆಜ್ಜಿ ಕಟ್ಟೆನಂತಾಳ
ಮುದಿಕಿ ಅದೇನಂತಾಳ ದಂಡಿ ಕಟ್ಟೆನಂತಾಳ (ವಾಲಿ ೨– ೭೭)
ಕಡಲೆ ಗಿಡ

ಗಿಡ್ಡ ಗಿಡ
ಚಿಕ್ಕ ಚಿಕ್ಕ ಎಲಿ
ಗಿಡದ ತುಂಬಾ ಕಾಯಿ
ಕಾಳಿನಾಗೆರಡು ಬ್ಯಾಳಿ (ವಾಲಿ ೨–೪೮)

ಗಿಡ್ಡ ಹುಡುಗ ಗೆಜ್ಜೀ ಕಟ್ಟ್ಯಾನ (ವಾಲಿ ೨–೧೦೯)
ಕಡಲೆಯ ಗಿಡ

ಮುಳುಗಡ್ಡಿ ಮ್ಯಾಲೆ ಮುಳುಗಡ್ಡಿ
ಅದರ ಮ್ಯಾಲೆ ತೊಂಬೈನೂರು ಪೊಟ್ಟಣ
ಆ ಊರ ತಳವಾರನ ಹೆಂಡ್ರು
ತಳವಿಲ್ಲದ ಹರವಿ ತಕ್ಕೊಂಡು
ಜಲವಿಲ್ಲದ ಬಾವಿಗೆ ನೀರಿಗೆ ಹೋದಳು (ಸು ೪೧೫)
ಕಡವಾಡು, ಒರಳು ಕಲ್ಲು

ತಿರುತಿರುಗಿದ ಹಂಗೆಲ್ಲ ನೆಟ್ಟಗೆ ನೆಗೆನೆಗೆದು ಕೂತುಕೋತಾನೆ (ಲ ಗೌ ೬೦೪)
ಕಡಾಣಿ

ಅವ್ವ ಗರತಿ
ಮಗಳು ಸೂಳೆ (ಲ ಗೌ ೮೯)
ಕಡಾಯಿ–ಚೆಂಬು

ಅವ್ವ ಪುತನಗಾತಿ
ಮಗಳು ದರಬಾರ್‌ಗಾತಿ (ಸು ೫೨)
ಕಡಾಯಿ, ತಪ್ಪಲೆ, ಬಿಂದಿಗೆ

ನಡ ಸಣ್ಣ ನಾಗರ ಬಣ್ಣ
ಹಿಡಿಯಾಕೆ ಹೋದರ ಕಡಿಯಾಕ ಬರತೈತಿ (ಇ ೬೨೭)
ಕಡುಜೀರಿಗೆಹುಳ

ಅಟ್ಟಕ್ಕೆ ಆರು ಕಣ್ಣು
ಬೆಟ್ಟಕ್ಕೆ ಮೂರು ಕಣ್ಣು (ಲ ಗೌ ೩೫)
ಕಡುಬಿನ ಪಾತ್ರೆ–ತೆಂಗಿನಕಾಯಿ

ಅಬಲಕ ದುಬಲಕ ಅವರಿಬ್ರು (ಇ ೧೧೦)

ಅವ್ವನ ಮುಂದೆ ದೆವ್ವ ಒದ್ದಾಡತೈತಿ (ಇ ೧೪೬)

ಅರ್ಧಚಂದ್ರ ಸಮಂ ವಸ್ತು
ಕಕಾರಾದಿ ಬಕಾರಾಂತ್ಯ (ಚಂ ಸೆ ೧೩)
ಕಡುಬು

ಅವ್ವನ ಮುಂದ ದೆವ್ವ ಕುಂತೈತಿ (ಇ ೧೪೦)

ಎದ್ದಾಗ ಹೆಣ್ಣಿಗ್ಹೋದ
ಮದ್ದಾನಕ್ಕೆ ಮದುವೆಯಾಯ್ತು
ಸಂಜೆಗೆ ಸೋಬನಾಯ್ತು
ಹೊತ್ತಾರೆಗೊಂದು ಮಗುವಾಯ್ತು (ಸು ೧೧೨)

ಅಂಕಣ್ಣ ಆಡ್ತಾನೆ
ಬಿಂಕಣ್ಣ ಬಿಗೀತಾನೆ
ಕೋಲು ಚಿಕ್ಕಣ್ಣ ಕುಣೀತಾನೆ (ಸು ೫೬)

ತುಂಬಿದ ಕೆರೇಲಿ ದೊಂಬ ಕುಣೀತಾನೆ (ಸು ೩೦೪)

ಹಗೇದಲ್ಲಿ ಹಾವು ಕೂಗ್ತದೆ (ಲ ಗೌ ೯೭೩)
ಕಡೆಗೋಲು

ಕರಿ ಕುದುರೆ ಕಟ್ಟಿತ್ತು ಬಿಳಿ ಕುದುರೆ ಬಿಟ್ಟಿತ್ತು (ಲ ಗೌ ೩೯೪)
ಕಡೆಯುವ ಮಂತು

ಅಡಿಗೇ ಮನೇಲಿರುತ್ತೇನೆ ಹೆಂಗುಸಲ್ಲ
ಕೆಲಸ ಮಾಡುತ್ತೇನೆ ಜೀವವಿಲ್ಲ
ಸುತ್ತಿ ಸುತ್ತಿ ದಣೀತ್ತೇನೆ ಗಾಣ ಅಲ್ಲ
ಇದನ್ನು ಹೇಳದಿದ್ದವರಿಗೆ ಬುದ್ದಿ ಇಲ್ಲ (ಚಂ ಸೆ ೧೦)

ತಾಯಿ ದಡ್ಡೆ ಮಗಳು ತಿರುಗಣೆ (ಚಂ ಸೆ ೧೩೭)
ಕಡೆಯುವ ಕಲ್ಲು

ಏರಿ ಹಿಂದಿನವಳು
ಈಟೀಟ ಗಿಡಕ ಚೀಟಿ ಕಟ್ಟೀನಿ
ಹಾಟ್ಯಾ ಬಂದು ಹರಕೊಂಡು ಹ್ವಾದಾ (ಇ ೨೦೫)
ಕಡ್ಡಲಿ ಗಿಡ

ಚಿಕ್ಕ ಮನ್ಯಾಗ ಐವತ್ತು ಮಂದಿ ಸಿಪಾಯಿರ
ಒಳಗಿಂದ ಒಬ್ಬ ಹೊರಗ ಬಂದ್ರ
ಉರಿಕಾರಿ ಸಾಯ್ತಾನ (ಲಠೈ ಭಾಗ ೫–೧೫೮)
ಕಡ್ಡಿ ಪೆಟ್ಟಿಗಿ

ಏಲಕ್ಕಿ ಗೊನೆಯವಳು
ಹೆತ್ತ ಮಕ್ಕಳ ಹೆರರಿಗೆ ಕೊಟ್ಟು
ಬರೀ ತೊಟ್ಲಾ ತೂಗುವವಳು (ವಾಲಿ ೨–೮೩)
ಕಣಗಿಲ ಹೂವು

ಸಾಸುವೆಯಷ್ಟು ಸಗಣಿ
ಅರಮನೆ ಸಾರಿಸಿ
ಗುರುಮನೆ ಸಾರಿಸಿ
ಇನ್ನಷ್ಟು ಉಳೀತ್ಯೆತೆ (ನಾ ಗೌ ೨೧೩)

ಕಲ್ಲ ಕಣಕಣ
ಹೂವು ಜಣಜಣ
ಹೂಬಳ್ಳಿ ತೊಡ್ರ ಬಡ್ರ (ಇ ೩೬೭)
ಕಣಕ–ರೊಕ್ಕ–ಶ್ಯಾವಗಿ

ನಡುಸಣ್ಣ ನಾಗರಬಣ್ಣ
ಹಿಡಿಯಾಕೋದ್ರೆ
ಕಡಿಯಾಕ್ ಬರ್ತದೆ (ಜೀಶಂಪ ೧೮೦)

ಕಣಜ

ಒಬ್ಬೆ ಮೇಲೆ ಮಂಡಲದ ಹಾವು (ಲ ಗೌ ೨೮೦)

ಕಣಜಕ್ಕೆ ಮಡೆ ಸುತ್ತುವುದು

ನಡು ಸಣ್ಣ ನಾಗರ ಬಣ್ಣ
ಹೊಡೆಯಲು ಹೋದರೆ ಕಡಿಯಲು ಬರುತ್ತೆ (ಚಂ ಸೆ ೧೪೭)

ಕಣಜದ ಹುಳ

ಕನಡ್ಯಾಳ ಹೊಲಾ
ಕತ್ತೂರಿ ಬೇಲಿ
ಕಸ ಬಿದ್ರ ಜೀಂವಾ
ಕಸಿವಿಸಿ ಆಗತತಿ (ಲಠೈ ಭಾಗ ೧–೨೪)

ಬಿಳಿ ಅರಿಮನೆ ಕರಿ ಪಿಟ್ಟೆ (ಶಾಂ ನಾ ೯೫)

ಮಂಜಪ್ಪ ಸೆಟ್ರ ಮುಂಬಾಗಿಲದಾಗ
ಕತ್ತೂರಿಯಂತಾ ಗಿಡಾ
ಆ ಗಿಡಕ್ಕ ಹೂವ ಬಿದ್ರ
ಲೋಕೆಲ್ಲಾ ಹಾಳ (ಲಠೈ ಭಾಗ ೧–೪೭)

ಸುತ್ತು ಮುತ್ತು ಬೇಲಿಕಟ್ಟೆ
ಸುವಾಸ್ನಿಗಿಡು ನಿಟ್ಟೆ
ಹೂಂವಾದ್ರೆ ಹಾಳಾಗೋತೀದ (ಶಾಂ ನಾ ೯೬)

ಕಣ್ಣ

ರಾತ್ರಿ ಏಳುತ್ತದೆ ಬೆಳಗ್ಗೆ ಮಲಗುತ್ತದೆ (ಇ ೯೦೮)

ಹಗಲೆಲ್ಲ ಮಲಗಿರ್ತದೆ
ಇರುಳೆಲ್ಲ ಎದ್ದಿರ್ತದೆ (ಸು ೪೮೫)

ಹಗಲೆಲ್ಲಾ ಮಲಗಿರ್ತದ
ರಾತ್ರಿ ಎದ್ದಿರ್ತದ (ಲಠೈ ಭಾಗ ೫–೨೮೯)

ಕಣ್ಣಿ

ಅಂಬಾರದ್ಮೇಲೆ ಮೂರು ಗದ್ದೆ ಮಾಡಿ
ಹಿಡಿಕಡ್ಡಿ ಬೇಲೀ ಮಾಡಿ
ಪಂಪೂಳ್ಗೆ ನೀರ್ತಂದು
ಕುಂಬಾರ್ಗಂಡ್ನಾ ಕಾಯೂಲ್ಕುಳ್ಸಿಕ್ಕಿದ್ದೆ (ಶಾಂ ನಾ ೮೩)

ಅಕ್ಕ ಅತ್ತರೆ ತಂಗೀನೂ ಅಳ್ತಾಳೆ (ಲ ಗೌ ೪)

ಅಕ್ಕ ತಂಗೆರಿಬ್ಬರು
ವಬ್ಬರ್ನೊಬ್ಬರು ನೋಡಲ್ಲ
ಆದ್ರೆ ವಬ್ಬರಿಗೆ ನೋವಾದ್ರೆ ಇಬ್ರೂ ಅಳ್ತಾರೆ (ಮಂ ೧.೧–೧)

ಅಕ್ಕವ್ವ ಅತ್ತರ
ತಂಗೆವ್ವನೂ ಅಳತಾಳ (ಲಠೈ ಭಾಗ ೧–೧)

ಅಕ್ಕಾ ತಂಗಿ ಕತ್ತಿ ತೆಕ್ಕಂಡಿ ಹೊಡ್ಕತ್ರು (ಶಾಂ ನಾ ೮೯)

ಅಚಲ ಭದ್ರ ಪೆಟ್ಟಿಗೆ ಮುಚ್ಚಳಾ
ಮುಚ್ಚಿದರೂ ಶಬ್ದ ಇಲ್ಲಾ
ತೆಗೆದರೂ ಶಬ್ದ ಇಲ್ಲಾ (ಇ ೪೩)

ಅಚೀಗೆ ಬದ್ರಿಗೆ ಸಪ್ನ ಹೊರೆ
ನೆಡೂಗೆ ಹೊಳೆ (ಶಾಂ ನಾ ೭೭)

ಅಚೇಚೆ ಬದಿಗೆ ಬೇಲಿ
ಬೇಲಿನೆಡ್ಗೆ ಗುಡ್ಡಾ
ಗುಡ್ಡದ್ನೆಡ್ಗೆ ಪೊರಾ (ಶಾಂ ನಾ ೭೯)

ಅಣ್ಣಪ್ಪನ ತ್ವಾಟ
ಹೂ ಬಿಟ್ಟರೆ ಹಾಳು (ರಾ ಗೌ ೧೭)

ಅರೆಕಲ್ಲ ಮೇಲೆ ಕೀರೆ ಚೆಲ್ಲಿ
ಇರ ನುಗ್ಗದ ಹಾಗೆ ಬೇಲಿ ಹಾಕಿ
ಕಲ್ಲು ಬಿದ್ದರೆ ಹಾಳು (ರಾ ಗೌ ೪೦)

ಇದೊಂದು ಕೊಳ
ಸುತ್ತಲೂ ಮರಗಳು
ಹೂವಿಲ್ಲ ಕಾಯಿಲ್ಲ (ವಾಲಿ ೪– ೨೫)

ಎರಡು ಹಕ್ಕಿ ಗೂಡಿನ್ಯಾಗ ಕುಂತುಗೊಂಡು ನೋಡತಾವು (ಇ ೨೪೬)

ಏಡಿ ಕುಣಿಯೊಳಗೆ ಸನ್ಯಾಸಿ ಕುಣೀತಾನೆ (ಲ ಗೌ ೨೫೪)

ಏಳು ಸುತ್ತಿನ ಬೇಲಿ
ಸಾಸವೆ ಗಾತ್ರ ಬಿದ್ದರೆ ತೋಟವೆ ಹಾಳು (ರಾ ಗೌ ೧೨೨)

ಊರ ಮುಂದೆ ಕೆರೆಯುಂಟು
ಕೆಸರಿಲ್ಲ ನೀರುಂಟು (ಸು ೧೦೪)

ಒಂದು ಕೊಳ
ಕೊಳದಲ್ಲೊಂದು ಮಂಟಪ
ಮಂಟಪದಲ್ಲೊಬ್ಬ ಮನುಷ್ಯ
ಕೊಳದ ಸುತ್ತಲೂ ಮರ
ಹೂವು ಕಾಯಿ ಬಿಡುವುದಿಲ್ಲ (ರಾ ಗೌ ೧೪೦)

ಒಂದು ಸಾವಿರ ರೂಪಾಯಿಯ ತೋಟ
ಒಂದು ಸಾಸಿವೆ ಗಾತ್ರ ಕಲ್ಲು ಬಿದ್ದರೂ ಹಾಳು (ಲ ಗೌ ೩೦೩)

ಕಡೆ ಬಿಳಿದು ನಡುಗಸ್ತು ಉಡುವ ವಸ್ತ್ರವಲ್ಲ
ಬಿಡದೆ ನೀರುಂಟು ಮಡುವಲ್ಲ (ಇ ೩೧೪)

ಕಡೆ ಬಿಳೀದು ನಡುಕಪ್ಪು ವಸ್ತ್ರವಲ್ಲ
ನೀರುಂಟು ಅದರಲ್ಲಿ ಕೆರೆಯಿದಲ್ಲ (ವಾಲಿ ೪–೧೧)

ಕಡೆ ಬೆಳ್ದು ನಡು ಕರ್ದು
ಉಡೂವಸ್ತ್ರಲ್ಲೆ ನೀರಿದ್ರು ಕೆರೆಯಲ್ಲೆ (ಶಾಂ ನಾ ೯೧)

ಕತ್ತಾ ಗಿಂಡಿ ತಾರಗಿಂಡಿ ಮುಚ್ಲಾ ತೆಗದ್ರ ಮುನ್ನೂರ್ಗಿಂಡಿ (ಶಾಂ ನಾ ೮೧)

ಕಪ್ಪುಂಟು ಕಸ್ತೂರಿ ಅಲ್ಲ
ಜಲವುಂಟು ಕೊಳವಲ್ಲ
ರೆಕ್ಕೆ ಉಂಟು ಪಕ್ಷಿಯಲ್ಲ (ಸು ೧೭೭)

ಕಪ್ಪುಂಟು ಕಸ್ತೂರಿಯಲ್ಲ
ಜಲವುಂಟು ಕೊಳವಲ್ಲ
ರೆಕ್ಕೆಯುಂಟು ಪಕ್ಷಿಯಲ್ಲ (ವಾಲಿ ೪–೮)

ಕಪ್ಪುಂಟು ಕಸ್ತೂರಿಯಲ್ಲ
ಬಿಳುಪುಂಟು ಸುಣ್ಣವಲ್ಲ
ಜಲವುಂಟು ಬಾವಿಯಲ್ಲ
ರೆಕ್ಕೆಯುಂಟು ಪಕ್ಷಿಯಲ್ಲ
ಇದ ಹೇಳಬಲ್ಲ ಜಾಣನಿಗೆ ಕಂಡಿತಲ್ಲಾ (ಇ ೩೩೬)

ಕಪ್ಪುಂಟು ಕಸ್ತೂರಿಯಲ್ಲ
ಬಿಳುಪುಂಟು ಸುಣ್ಣವಲ್ಲ
ಜಲವುಂಟು ಬಾವಿಯಲ್ಲ
ರೆಕ್ಕೆಯುಂಟು ಪಕ್ಷಿಯಲ್ಲ
ಹಾಗಾದರೆ ನಾನ್ಯಾರು (ಜೀಶಂಪ ೧೧೪೪)

ಕಬ್ಬಿಣದ ಕದ ಡಬ್ಬನೆ ಹಾಕಿದರೆ ಮುಂದಿಂದೆಲ್ಲಾ ಕತ್ತಲಾ (ಇ ೩೪೦)

ಕಾಗೀಕಿಂತ ಕರೀದು
ಗುಬ್ಬೀಕಿಂತ ಬಿಳೀದು
ತಾ ನೋಡದರ ಸಣ್ಣದು
ಮಾಡು ಕೆಲಸ ದೊಡ್ಡದು (ವಾಲಿ ೪–೨೦)

ಕಾಗೆಗಿಂತ ಕಪ್ಪು
ಸುಣ್ಣಕ್ಕಿಂತ ಬಿಳಿ (ರಾ ಗೌ ೧೯೩)

ಕಾಗೆಗಿಂತ ಕಪ್ಪು
ಸುಣ್ಣಕ್ಕಿಂತ ಬಿಳಿ
ನೋಡಿದರೆ ಸಣ್ಣದು
ಸಮುದ್ರಕ್ಕಿಂತ ದೊಡ್ಡದು (ಚಂ ಸೆ ೯೬)

ಕಾಗೆಗಿಂತ ಕಪ್ಪು
ಸುಣ್ಣಕ್ಕಿಂತ ಬೆಳುಪು
ಸಮುದ್ರಕ್ಕಿಂತ ದೊಡ್ಡದು
ನೋಡಿದರೆ ಸಣ್ಣದು (ಸು ೨೦೨)

ಕಾನಲ್ವಂದು ಕಡ್ಲೆ ಬಿತ್ತಿ ಯೀಲಿಕುಂಚ್ನ ಬೇಲಿಕಟ್ಟಿ
ಗೊರ್ನ ತಮ್ನು ಕಾವಲಿಟ್ಟು (ಶಾಂ ನಾ ೮೪)

ಕಾನಲ್ಲಿ ಕಡ್ಲೆ ಬಿತ್ತಿ ಹೀಲಿ ಬೇಲಿ ಕಟ್ಟಿ
ಜಾನ ಎಂಬ ಹುಡುಗನನ್ನು ಕಾವಲು ಕೊಟ್ಟಿದೆ (ಲ ಗೌ ೪೩೮)

ಕಿಸಗೊಂಡು ಕೂತುಗೊಂಡ್ರೆ ಕಸ್ಕಂಡ್ ಬೀಳ್ತು (ಲ ಗೌ ೪೫೧)

ಕೊನೆಯೂ ಇಲ್ಲ ಮೊದಲೂ ಇಲ್ಲ
ಮಧ್ಯದಲ್ಲಿ ನಿಂತಿರುತ್ತೆ
ನನಗೂ ಇದೆ ನಿನಗೂ ಇದೆ (ಇ ೪೨೪)

ಕಂಚಿನ ಕದ
ಕಬ್ಬಿಣದ ರಾಡ್ ಮುಂಡ್ಗೆ
ಅದ 'ದಡ್' ಅಂದ್ರೂ
ಶಬ್ದ ಕೇಳುಸೋದಿಲ್ಲ (ನಾ ಗೌ ೮೬)

ಕಂಬ
ಕಂಬದ ಮೇಲೆ ದಿಂಬ
ದಿಂಬದ ಮೇಲೆ ಕೃಷ್ಣ
ಕೋಟೆಯಮೇಲೆ
ಎರಡು ಮುತ್ತುಗಳು ಹೋರಾಡುತ್ತವೆ (ಶಾಂ ನಾ ೯೩)

ಕಂಬ
ಕಂಬದ ಮ್ಯಾಲ ದಿಂಬ
ದಿಂಬದ ಮ್ಯಾಲ
ನಾಗಲೋಟಿಯ ಮ್ಯಾಲ
ಬೊಂಬೆರಡು ಕುಣಿತಾವ (ಲತ್ಥೆ ಭಾಗ ೧–೩೨)

ಕಂಬ
ಕಂಬದೊಳಗ ಡಿಂಬ
ಡಿಂಬದೊಳಗೆ ಎರಡು ಗೊಂಬೆಗಳು ಆಡುತ್ತಿರುವುವು (ಇ ೪೩೯)

ಗೂಡಲ್ಲಿ ಕೂತ್ಕೊಂಡು
ನಾಡೆಲ್ಲ ನೋಡ್ತದೆ (ಸು ೨೫೭)

ಗೂಡಿನಾಗ ಕುಂತು ನಾಡೆಲ್ಲ ನೋಡತೈತಿ (ವಾಲಿ ೪–೨೨)

ಗೂಡಿನ್ಯಾಗಿನ ಪಕ್ಷಿ ನಾಡೆಲ್ಲಾ ನೋಡತೈತಿ (ಇ ೫೧೦)

ಗೂಡೇಲ್ಕುಂತ್ಕೊಂಡ್
ಊರೆಲ್ಲ ನೋಡುತ್ತೆ (ಜೀಶಂಪ ೧೪೫)

ಗೂಡ್ನಲ್ಲಿ ಕೂಸು ನಾಡ್ನೆಲ್ಲಾ ನೋಡ್ತು (ಶಾಂ ನಾ ೭೬)

ಚಿಕ್ಕದೊಂದು ತೋಟ
ಹೂ ಬಿಟ್ಟರೆ ಹಾಳು (ಜೀಶಂಪ ೧೫೬)

ಚಿನ್ನ ಚಿನ್ನ ಪೆಟ್ಗೆ
ಚಿನ್ನಾರೆ ಪೆಟ್ಗೆ
ಪ್ರಪಂಚಕೆಲ್ಲ ಎರಡೇ ಪೆಟ್ಗೆ (ಜೀಶಂಪ ೧೫೩)

ಚಿನ್ನ ವರಕೆ ಮೇಲೆ
ಪಿಣ್ಣೇರಿ ಕೂತು
ಕಣ್ಣಾಣು ಕಾಣೆ (ರಾ ಗೌ ೨೫೩)

ಡಿಂಬ
ಡಿಂಬದ ಮೇಲೆ ಕೋಟೆ
ಕೋಟೆಯ ಒಳಗೆ ಇಬ್ಬರು ಹುಡುಗರು ನಾಟ್ಯ ಮಾಡ್ತಾರೆ (ಲ ಗೌ ೫೭೮)

ತುಂಬಿದ ಪೆಟ್ಟಿಗೆ ಶಬ್ದವೇ ಇಲ್ಲ
ಎರೆದರೂ ಇಲ್ಲ ಮುಚ್ಚಿದರೂ ಇಲ್ಲ (ಇ ೬೦೬)

ತ್ವಾಟಪ್ಪನ ತ್ವಾಟ ಹೂ ಬಿಟ್ಟರ ಹಾಳಾಗುತ್ತದೆ (ವಾಲಿ ೪–೨೯)

ದ್ಯಾವಪ್ಪನ ತ್ವಾಟಾ
ಹೂ ಬಿಟ್ಟರ ಹಾಳ (ವಾಲಿ ೪–೧೨)

ನಿನ್ನ ನೋಡಿ ನಿನ್ನನೆ ಗಿಬುಕುತ್ತದೆ (ಲ ಗೌ ೬೮೨)

ನೀಲಾವಾರದ ತೋಟ
ಜಾಲಾವಾರದ ಬೇಲಿ
ಹೂ ಬಿಟ್ರೆ ತೋಟ ಹಾಳು (ಸು ೩೪೪)

ನೂರ್ರೂಪಾಯಿನ ತೋಟ
ನೂರ್ರೂಪಾಯಿನ ಬೇಲಿ
ಅದುರೊಳೀಕೆ ಎಳ್ಳುಗಾತ್ರಮಣ್ ಬಿದ್ರೆ
ತೋಟವೇ ಹಾಳು (ನಾ ಗೌ ೧೬೩)

ಬಿಳಿ ಕುಡಿಕೆಯೊಳಗೆ
ಕರಿ ಕುಡಿಕೆ
ಅದರ ಸುತ್ತ ಗರಿಕೆ (ರಾ ಗೌ ೩೫೪)

ಬಿಳಿ ಕೊಟಡಿಯಲ್ಲಿ
ಕರಿ ಕಳ್ಳನ ಓಡಾಟ
ಹೊರಕ್ಕೆ ಬರಲು ದಾರಿಯೇ ಇಲ್ಲ (ರಾ ಗೌ ೩೫೧)

ಬಿಳಿಯುಂಟು ಹಾಲಲ್ಲಾ
ಕಪ್ಪುಂಟು ಕಾಡಿಗೆಯಲ್ಲಾ
ಬೆಳಕುಂಟು ದೀಪವಲ್ಲಾ
ನೀರುಂಟು ಕೊಡವಲ್ಲಾ (ಶಾಂ ನಾ ೯೪)

ಬಿಳೆ ಬಾಯ್ಲಲ್ಲಿ ಕಪ್ ಮನಶಾ ಕುಣೀತಾ (ಶಾಂ ನಾ ೮೨)

ಬೆಳಿ ಸಮದ್ರಲ್ಲಿ ಕಪ್ ಗುಳ್ಳೆ ಯದ್ದಿದ್ದು (ಶಾಂ ನಾ ೮೬)

ಬೆಳಿ ಸಮದ್ರಲ್ಲಿ ಕರೀ ಬೋಟಿ (ಶಾಂ ನಾ ೯೨)

ಬೆಳೀ ಕಲ್ಲು ಕರಿ ಪಿಟ್ಟೆ (ಶಾಂ ನಾ ೮೭)

ಬೆಳೀ ಬಟ್ಟಲ್ಲಿ ಕಪ್ ದ್ರಾಕ್ಷೆ (ಶಾಂ ನಾ ೮೮)

ಬೆಳೀ ಮಜ್ಗೆ ಕಪ್ ಬೆಣ್ಣೆ (ಶಾಂ ನಾ ೯೦)

ಬೆಳೆದ್ರಿ ಮೇಲೆ ಕರೀದ್ತೇಲ್ತು (ಶಾಂ ನಾ ೭೮)

ಮತ್ತೆ ಬಿಳಿದಾಗಿದ್ದು
ಮಧ್ಯದಲ್ಲಿ ಕಪ್ಪಾಗಿ
ಹೊಳೆಯುವ ನಾನಾರು (ಚಂ ಸೆ ೨೨೯)

ರೆಕ್ಕೆಯುಂಟು ಪಕ್ಷಿಯಲ್ಲ
ನೀರುಂಟು ಬಾವಿಯಲ್ಲ
ಬಿಳಿಯುಂಟು ಬೆಣ್ಣೆಯಲ್ಲ
ಕಪ್ಪುಂಟು ಕಾಡಿಗೆಯಲ್ಲ (ಲ ಗೌ ೮೯೨)

ಸಾವಿರ ರೂಪಾಯಿ ತೋಟಕ್ಕೆ
ನೂರು ರೂಪಾಯಿ ಬೇಲಿ
ಒಂದು ಕಲ್ಲು ಬಿದ್ರೆ ತಡೆಯೋದಿಲ್ಲ (ಜೀಶಂಪ ೨೫೩)

ಸಾವಿರ ರೂಪಾಯೀ ತೋಟ
ನೂರು ರೂಪಾಯಿ ಬಟ್ಟೆ
ಸಾಸಿವೆಗಾತ್ರ ಕಲ್ಲು ಬಿದ್ದರೆ ಹಾಳು (ಇ ೯೩೯)

ಸುಕ್ರಪ್ಪ ತೋಟಾ ಚದ್ರಂಗಿ ಹೂಗು (ಶಾಂ ನಾ ೮೦)

ಸುತ್ತ ಗರಿಕೆ ಮಧ್ಯೆ ಕುಡಿಕೆ (ಜೀಶಂಪ ೨೫೯)

ಸುತ್ತ ಮುತ್ತ ಬೇಲಿ ಕಟ್ಟ
ಸುವ್ವರಯ್ಯನ ಕಾವಲಿಟ್ಟು
ಹೂ ಬಿಟ್ರೆ ತೋಟ ಹಾಳು (ಸು ೪೭೫)

ಸುತ್ತಮುತ್ತಲೂ ಬೇಲಿ ಹಾಕಿ
ಸುವ್ವಾರಯ್ಯನ ಕಾವಲಿಟ್ಟು
ತೋಟದಲ್ಲಿ ಹೂ ಬಿಟ್ಟರೆ ಮನೆ ಹಾಳು (ಚಂ ಸೆ ೨೨೮)

ಸುತ್ತಿನಲಿ ಕೆಂಪಿರುವೆ
ಸುವ್ವಾಲೆ ಕಟ್ಟೆ ಕಟ್ಟೆ
ಸುವ್ವಾಲೆ ಗೆಡಾ ನೆಟ್ಟಿ
ರಾಮೂಪೊರ್ನ ಕಾಯೂಲ್ಕುಳ್ಳಿ (ಶಾಂ ನಾ ೮೫)

ಸಂದೇಗಂಟ ಬಡುದ್ರು ಡಬ್ಬನ್ನಾದಿಲ್ಲ (ಮೈ.ಕ.) (ಮಂ ೧.೧–೧೩)

ಸಂದೇನು ಬಡುದ್ರು ಸದ್ದಾಗ್ದು (ಮಂ.ಕ.) (ಮಂ ೧.೧–೧೪)

ಹೂವು ಹೂವಿಗೆ
ಯಾವ ಹೂವು ಮೇಲು (ರಾ ಗೌ ೫೦೦)

ಕಣ್ಣು

ಕಂಬ
ಕಂಬದ ಮೇಲೆ
ದಿಂಬ
ದಿಂಬದ ಮೇಲೆ
ನಾಗಾಲೋಟಿಯ ಮೇಲೆ
ಕೃಷ್ಣಕೋಟಿಯ ಮೇಲೆ
ಎರಡು ಭರಣಿಗಳಲ್ಲಿ ಎರಡು ರತ್ನಗಳು ಓಡಾಡುತ್ತವೆ (ಇ ೪೩೮)

ಕಂಬ
ಕಂಬದ ಮ್ಯಾಲ
ಡಿಂಬ
ಡಿಂಬದ ಮ್ಯಾಲ
ಎರಡು ಪಕ್ಷಿ ಹಾರಾಡತಾವ (ವಾಲಿ ೪–೧೭)

ಕಣ್ಣುಗಳು

ಅಕ್ಕ ತಂಗಿಯ ಮನೆಗೆ ಹೋಗುವ ಹಾಗಿಲ್ಲ
ತಂಗಿ ಅಕ್ಕನ ಮನೆಗೆ ಹೋಗುವ ಹಾಗಿಲ್ಲ
ಆದರೆ ಇಬ್ಬರ ಮನೆಯೂ ಅಕ್ಕಪಕ್ಕದಲ್ಲಿ (ಲ ಗೌ ೯)
ಎರಡು ಕಣ್ಣುಗಳು

ನಿಂತಾವ್ಲೆ ಐಕೆ
ನಿನ್ನುನ್ನೆ ಮಿಸುಗುತ್ತೆ (ನಾ ಗೌ ೧೫೮)
ಕಣ್‌ರೆಪ್ಪೆ

ಸಪ್ಪಳಿಲ್ಲದ ಚಪ್ಪಳಿ ಬಡಿತದ (ಲಠ್ಠೆ ಭಾಗ ೧–೪೯)
ಕಣ್ಣ ರೆಪ್ಪಿ

ಸಂದೆಯವರೆಗೆ ಬಡಿದರೂ ಸದ್ದಿಲ್ಲ (ಸು ೪೬೧)
ಕಣ್ಣ ರೆಪ್ಪೆ

ದೊಗರು ಸುತ್ತ ಮಗರು (ಸು ೩೨೩)
ಕಣ್ಣು ಮತ್ತು ಎವೆ

ನಿನ್ನ ನೋಡಿ ನಿನ್ನನೆ ಗಿಬುಕುತ್ತದೆ (ಲ ಗೌ ೬೮೨)

ನೂರಾರು ಗರಿ ಶ್ರೀರಾಮರ ಏರಿ
ಏರಿ ಮೇಲೆ ನಿಂತು ಕೈ ಬೀಸಿ ಕರೆ (ಇ ೬೭೯)
ಕಣ್ಣುರೆಪ್ಪೆ

ಕೊಳದ ಸುತ್ತಲೂ ಮರ
ಆದರೆ ಹೂವು ಕಾಯಿ ಬಿಡುವುದಿಲ್ಲ (ಲ ಗೌ ೪೯೩)
ಕಣ್ಣು–ರೆಪ್ಪೆ

ಮೆಲ್ನ ಕೇರಿ ಅಕ್ಕಾ
ಕೆಳ್ಗ್ನ ಕೇರಿ ತಂಗಿ
ಜಿಗ್‌ಜಿಗ್‌ನೆ ಹೊಡದಾಡ ಕೊಳ್ತಾರೆ (ಶಾಂ ನಾ ಅನುಬಂಧ ೩೪)
ಕಣ್ಣಿನ ರೆಪ್ಪೆ

ಸಾಲ ಹುಣಚಿ ಗಿಡಾ ಸಪ್ಪಳಿಲ್ಲದ ಬಡಿತಾವ (ಲಠ್ಠೆ ಭಾಗ ೧–೫೦)
ಕಣ್ಣಿನ ಎವಿ

ಸಪ್ಪಳಿಲ್ಲದನ ಚಪ್ಪಾಳಿ ಹಾಕತೈತಿ (ಇ ೯೨೬)

ಸಾಲುಗಿಡ ಸಪ್ಪಳಿಲ್ಲದ ಬೀಳತಾವ (ಇ ೯೩೫)
ಕಣ್ಣಿನ ಎವೆ

ಸಾಲ ಗಿಡಗಳು ಬಿದ್ದರ ಸಪ್ಪಳಿಲ್ಲ (ವಾಲಿ ೪–೧೬)
ಕಣ್ಣಿನ ಎವೆಗಳು

ಕಬ್ಬಿಣ ಕದ
ಡಬ್ಬುಕ್ಕನ ಹಾಕಿದರೂ ಸಪ್ಪಳ ಇಲ್ಲಾ (ಇ ೩೩೯)
ಕಣ್ಣು ಎವೆ

ತುಂಡೇರಿ ಮೇಲೆ ಸಾಲು ಗೊಬಳಿ ಮರ (ಲ ಗೌ ೬೧೦)

ನಿನ್ನನ್ನೆ ಹಿಡಕೊಂಡು ನಿನ್ನನ್ನೆ ಹೊಡೆಯುತ್ತೆ (ಲ ಗೌ ೬೭೯)

ಗರಿ ಮ್ಯಾಲೆ ಗರಿ
ಶ್ರೀರಾಮರ ಏರಿ
ಕೈಬೀಸಿ ಕರಿ (ಸು ೨೪೭)
ಕಣ್ಣರೆಪ್ಪೆ ಮತ್ತು ಹುಬ್ಬು

ಏರಿ ಮ್ಯಾಲೆ ಸಾಲು ಗೊಬ್ಬಳಿ ಮರ (ಸು ೧೨೨)
ಕಣ್ಣ ಹುಬ್ಬು

ದಾರಿ ಉದ್ದಕ್ಕೂ ಸಾಲುಮರ (ಸು ೩೨೦)
ಕಣ್ಣು ಹುಬ್ಬಿನ ಕೂದಲು

ಅಂಗೈ ಅಗಲದ ಗದ್ದೆ
ಮುಂಗೈ ಅಗಲದ ತೆವರಿ
ತಿರುಗೋವು ಎರಡೇರು (ಸು ೬೫)
ಕಣ್ಣು, ಹುಬ್ಬು ಮತ್ತು ಎರಡು ಪಾಪೆಗಳು

ಸಂದೆಗಂಟ ಬಡಿದ್ರೂ
ಸದ್ದಾಗುವುದಿಲ್ಲ (ರಾ ಗೌ ೪೪೨)
ಕಣ್ಣಿನ ಹುಬ್ಬು

ಅಂದಗಾತಿ ಬಿಳಿಯಕ್ಕ ಅತ್ತಿತ್ತ ಕದಲೋಳಲ್ಲ
ಚಂಚಲಗಾತಿ ಕರಿಯಕ್ಕ ಒಂದ್ಕಡೆ ನಿಲ್ಲೋಳಲ್ಲ (ಲ ಗೌ ೧೩೨)
ಕಣ್ಣಿನ ಬಿಳಿಗುಳ್ಳೆ, ಕರಿಗುಳ್ಳೆ

ಸಣ್ಣೇರಿ ಮೇಲೆ ಸಾಲುಗೊಬ್ಬಳಿ ಮರ (ರಾ ಗೌ ೪೩೫)

ಸಾವಿರ ಸಲ ಬಡುದ್ರು ಸದ್ದಾಗಲ್ಲ (ಮಂ ೧.೧–೧೮)

ಸಾಸಿವೆ ಗಾತ್ರದ ತೊಪ್ಪೇಲಿ
ಸಾವ್ರಂಕಣದ ಮನೆ ಸಾರಿಸಿ
ಆಗೂ ಇಂಕ್ರ ಮಿಕ್ಕದ ಅಂದ್ರೆ (ಮಂ ೧.೧–೧೯)

ಸಾಸಿವೆ ಕಾಳುಗಾತ್ರ ಸಗಣಿ ತಗೊಂಡು
ಎರಡು ಮನೆ ಸಾರಿಸಿದರೂ ಇನ್ನೂ ಉಳಿದಿರ್ತದೆ (ಸು ೪೬೮)
ಕಣ್‌ಕಪ್ಪು

ಗುಲಗಂಜಿ ದಪ್ಪ ಗೋಮಾಯಿ ಹೋಗಿ
ಮನೆಯಲ್ಲ ಸಾರಿಸಿ ವಾಪಸ್ ಬರುತ್ತೆ (ಲ ಗೌ ೫೨೨)
ಕಣ್ಣು ಕಪ್ಪು

ನೋಡಿದಾಂವ ತಿನುದಿಲ್ಲ
ಹರದಾಂವ ತಿನುದಿಲ್ಲ
ತಿಂದಾಂವ ರುಚಿ ನೋಡೋದಿಲ್ಲ (ಲಠೈ ಭಾಗ ೧–೪೧)
ಕಣ್ಣು, ಕೈ, ಬಾಯಿ

ನೋಡಿದವ ಹೋಗಲಿಲ್ಲ
ಹೋದವ ಹರೀಲಿಲ್ಲ
ಹರಿದವ ತಿನ್ನಲಿಲ್ಲ
ತಿಂದವ ಬಡಿಸಿಕೊಳ್ಳಲಿಲ್ಲ
ತಿನ್ನದವ ಫಜೀತಿಯಾದ (ವಾಲಿ ೪–೧೫)
ಕಣ್ಣು, ಕಾಲು, ಕೈ, ಬಾಯಿ, ಬೆನ್ನು

ನೋಡಿದವನು ಸುಮ್ಮಗವನೆ
ಕೇಳಿದವನು ಸುಮ್ಮಗವನೆ
ಮಧ್ಯೆ ಇರೋನು ಸುಮ್ಮಗಿರ (ಲ ಗೌ ೭೧೪)
ಕಣ್ಣು–ಕಿವಿ–ಬಾಯಿ

ಕುರ್ಚಿಯ ಮೇಲೆ ಐದು ಅಣ್ಣತಮ್ಮಂದಿರು ಕುಳಿತರೂ
ಒಬ್ಬರನ್ನೊಬ್ಬರು ಮುಟ್ಟುವದಿಲ್ಲ (ಇ ೪೦೪)
೨ ಕಣ್ಣು ೨ ಕಿವಿ ೧ ಮೂಗು

ಒಂದು ಮಣೆಯ ಮೇಲೆ ಐವರು ಸಹೋದರರು
ಮಣೆಯನ್ನು ಎಲ್ಲರೂ ಮುಟ್ಟಿದರೂ
ಪರಸ್ಪರರನ್ನು ಮುಟ್ಟಲಾರರು (ವಾಲಿ ೪–೧೩)
ಎರಡು ಕಣ್ಣು, ಎರಡು ಕಿವಿ, ಒಂದು ಮೂಗು

ಎರಡು ಕೆರೆಗೆ ಒಂದೇ ಏರಿ (ಚಂ ಸೆ ೫೩)
ಕಣ್ಣುಗಳು ಮತ್ತು ಮೂಗು

ಕಂಬ
ಕಂಬದ ಮ್ಯಾಲ ಲಕ್ಷ ಕೋಟೀಮ್ಯಾಲ
ಭರಣ್ಯಾಗ ಎರಡು ದುಡ್ಡು ಓಡ್ಯಾಡತಾವ (ಇ ೪೩೫)
ಕಣ್ಣುಗುಡ್ಡಿ

ಪೆಟ್ಟಿಗೆಯಲ್ಲಿನ ಕಳ್ಳ
ಬಾಗಿಲು ತೆರೆದರೂ ಹೊರಗೆ ಬರುವುದಿಲ್ಲ (ಇ ೭೦೯)
ಕಣ್ಣುಗುಡ್ಡೆ

ಬಿಳಿಯ ಕೊಠಡಿಯಲ್ಲಿ ಕರೀ ಕಳ್ಳನ ಓಡಾಟ
ಹೊರಕ್ಕೆ ಬರೋಕೆ ದಾರಿಯಿಲ್ಲ (ಲ ಗೌ ೭೭೦)
ಕಣ್ಣು ಗುಳ್ಳೆ

ನಾವೂಟ ಮಾಡೂವಾಗ
ಏನ್ ಬುಟ್ಕೊಂಡೂಟ ಮಾಡೇಕು (ನಾ ಗೌ ೧೫೨)
ಕಣ್ಣು ಬಿಟ್ಟುಕೊಂಡು

ನೋಡುವವರಿಬ್ಬರು
ಮಾಡುವವರೈವರು
ತಿನ್ನುವರು ಮೂವತ್ತೆರಡು ಮಂದಿ (ಇ ೬೯೪)
ಕಣ್ಣು–ಬೆರಳು–ಹಲ್ಲು

ಏರಿ ಹಿಂದಿನವಳು
ಏಲಕ್ಕಿ ಗೊನೆಯವಳು
ಹೆತ್ತ ಮಕ್ಕಳ ಹೆರರಿಗೆ ಕೊಟ್ಟು
ಬರೀ ತೊಟ್ಲಾ ತೂಗುವವಳು (ವಾಲಿ ೨– ೮೩)
ಕಣಗಿಲ ಹೂವು

ಬಿತ್ತು ಬಿತ್ತು ದೂರ ಬಿತ್ತು (ಲ ಗೌ ೭೬೦)
ಕಣ್ಣೋಟ

ಅಪ್ಪಾ ಅಂದ್ರೆ ಬರೋದಿಲ್ಲ
ಅಮ್ಮಾ ಅಂದ್ರೆ ಬರೋದಿಲ್ಲ
ಕೈಹಿಡ್ದ್ ಕರ್ದ್ರೆ ಬತ್ತದೆ (ಜೀಶಂಪ ೫)

ಅಪ್ಪಾ ಅಂದ್ರ ಬರಾಂಗಿಲ್ಲ
ಅವ್ವಾ ಅಂದ್ರೂ ಬರಾಂಗಿಲ್ಲ
ಕೈ ಹಿಡದ ಕರದ್ರ ಬರತತಿ (ಲಠೈ ಭಾಗ ೫–೨೨)

ಕದ

ಆತೈತಿ ಬಾತೈತಿ ಜೋತೈತಿ (ಇ ೧೭೦)

ಕದ–ಗಡಿಗಿ–ಜೋಳಿಗಿ

ಕುಳ್ಳಿ ಕುಣ ಕುಣದ ಬಸರಾಗತಾಳ (ಲಠೈ ಭಾಗ ೫–೧೩೪೪)

ಕದಿರ

ಕುಳ್ಳಿ ಕುಣಿಕುಣೀತಾ ಬಸುರಾದ್ಲು (ಲ ಗೌ ೪೫೬)

ಕದಿರು

ನಾ ಹೊಂದಿರುವೆ ಎರಡು ಕೈಗಳನ್ನು
ಆದರೂ ನಾನಲ್ಲ ಮಾನವನು
ಹಿಡಿಯುವೆ ನಿಮ್ಮಯ ಕಿವಿಗಳನು
ಆದರೂ ಶತ್ರು ನಾನಲ್ಲ ಮಿತ್ರನು
ಏರುವೆ ನಿಮ್ಮಯ ಮೂಗನು
ನಾ ಮಾಡಲಾರೆ ತೊಂದರೆಯನ್ನು
ಹಾಗಾದರೆ ನಾನ್ಯಾರು (ಲ ಗೌ ೬೭೫)

ಕನ್ನಡಕ

ಎಲ್ಲರಿಗೂ ಮುಖ ತೋರಿಸಿ
ಬೆನ್ನು ಕೆರೆದರೆ ನಾ ಕೆಟ್ಟೆ (ಚಂ ಸೆ ೫೪)

ನಕ್ಕರೆ ನಗುವುದು ಕಪಿಯಲ್ಲ
ಕಂಡವರ ಮನ ಸೆಳೆಯುವುದು ನಾನಾರು ಹೇಳಿ (ಲ ಗೌ ೮೩೨)

ನಕ್ಕರೆ ನಗ್ತದೆ
ಅತ್ತರೆ ಅಳ್ತದೆ
ಎಡ ಬಲವಾಗ್ತದೆ
ಬಲ ಎಡವಾಗ್ತದೆ (ಸು ೩೨೬)

ನಾ ತಂದಿದ ನಿನಗ
ಹಿಂಗ್ಯಾಕ ನೋಡ್ತಿ ನನಗ (ಲಠೈ ಭಾಗ ೫–೧೯೧)

ನಾ ತಂದೀನಿ ನಿನ್ನ
ನೀ ಯಾಕ ನೋಡ್ತಿ ನನ್ನ (ಇ ೬೩೯)

ನಿನಗ ತಂದೀನಿ ನಾ
ನನಗ್ಯಾಕ ನೋಡ್ತಿ ನೀ
ನಿನಗೇನು ಮಾಡ್ತೀನಿ ನಾ (ವಾಲಿ ೩–೭೮)

ಮಾಡಿದ್ದೆ ಮಾಡುವುದು ಮಗುವಲ್ಲ
ಕನ್ನಡಿ

ತೆಗ್ಗಿನಾಗ ಬಸರಾಗ್ತದ
ಒಡ್ಡಿಗಿ ಬಂದ ಹಡಿತದ (ಲಠ್ಠೆ ಭಾಗ ೫–೧೭೨)
ಕಪಲಿ

ಅಕ್ಕ ತೌರಿಗೆ ಹೋಗುವಾಗ
ಸರ್ರನೆ ಹೋಗುತ್ತಾಳೆ
ಗಂಡನ ಮನೆಗೆ ಬರುವಾಗ
ನಿಧಾನವಾಗಿ ಕಣ್ಣೀರು ಸುರಿಸುತ್ತ ಬರುತ್ತಾಳೆ (ವಾಲಿ ೧–೫೦)
ಕಪಲಿ ಹೊಡೆಯುವ ಕ್ರಿಯೆ

ಹೋಗತ ಹಂಗ ಹೋಗತೈತಿ
ಬರತ ಬಸರಾಗತೈತಿ (ಇ ೧೧೧೪೪)
ಕಪ್ಪಲಿ

ಗುಗ್ಗರಿ ಮೆಯ್ಯಾಕಿ ಗುಲ್ಗಂಜಿ ಕಣ್ಣಾಕಿ
ಕೆಸ್ರಾಗ ಕಿಸ್ಗಾಲ ಹಾಕಾಕಿ (ಲಠ್ಠೆ ಭಾಗ ೩–೩೫)

ಹಾರುತ ಹುಲಿ ಜಿಗಿಯುತ ಹುಲಿ
ಭಪ್ಪರೆ ಹುಲಿಗ ಬಾಲಾನೆ ಇಲ್ಲ (ಲಠ್ಠೆ ಭಾಗ ೩–೬೬)
ಕಪ್ಪಿ

ಕೆರ್ಯಾಗ ಕೆಕ್ಕರಸತತಿ
ಬನಿವ್ಯಾಗ ಬಡಬಡಸ್ತತಿ (ಲಠ್ಠೆ ಭಾಗ ೩–೩೦)
ಕಪ್ಪಿ, ಟೆಂಗಿನಕಾಯಿ, ಕುಡಗೋಲ

ಕೆರ್ಯಾಗ ಖ್ಯಾಕರಸ್ತತಿ
ಬಣವ್ಯಾಗ ಬಡಬಡಸ್ತತಿ
ಗುಡ್ಯಾಗ ಗುಡಗುಡಸ್ತತಿ (ಲಠ್ಠೆ ಭಾಗ ೩–೨೯)
ಕಪ್ಪಿ, ನಾಯಿ, ಗಂಟೆ

ಎಲ್ಲರಿಗೂ ಮುಖ ತೋರಿಸಿ
ಬೆನ್ನು ಕೆರೆದರೆ ನಾ ಕೆಟ್ಟೆ (ಚಂ ಸೆ ೫೪೪)

ಕುಳಿತರೆ ಮುನಿ
ಹಾರಿದರ ಹನುಮಂತ
ಕೂಗಿದರ ರಾವಣ
ನಾನ್ಯಾರು (ಇ ೪೦೬)

ಕುಳಿತರೆ ಮುರ್ಡೇಶ್ವರಾ
ಹಾರಿದರೆ ಹಣಮಂತಾ
ಕೂಗಿದರೆ ರಾವಣ (ವಾಲಿ ೬–೩೪)

ಕೂಗುವೆ ರಾವಣನಲ್ಲ
ಹಾರುವೆ ಹನುಮಂತನಲ್ಲ
ಸುಮ್ಮ ಕೂಡುವೆ ಮುನೀಶ್ವರನಲ್ಲ (ಇ ೪೦೯)

ಕೆರ್ಯಾಗ ಕೆಂದ ಹುಡುಗ ಕೇಕರಸ್ತಾನ (ಇ ೪೧೨)

ಗುಗ್ಗರ ಮೈ ಗುಲಗುಂಜಿ ಕಣ್ಣು
ಕೆಸರಾಗ ಕಿಸಗಾಲ ಹಾಕಿ ನಡೀತಾರ (ವಾಲಿ ೬–೨೧)

ತಣ್ಣಗೆ ನುಣ್ಣಗೆ ಮೈಯುಳ್ಳವನೆ
ಗೋಲಗುಲಗುಂಜಿ ಕಣ್ಣವನೆ
ಕೆಸರು ಕಂಡರೆ ಕಾಲು ಕಿಸಿಯೋನೆ
ನಿನ್ನ ಹೆಸರೇನು (ಚಂ ಸೆ ೧೩೨)

ನಾಲ್ಕು ಕಾಲಿನ ನಗಾರಿ
ಬಾಲವಿಲ್ಲದ ಕೊದಾರಿ (ಲ ಗೌ ೬೬೬)

ಬಾಲಿಲ್ಲದ ಬಟಾರಿ
ನಾಕ್ಕಾಲಿನ ಕಠಾರಿ
ಇದ ಹೇಳ್ದೋರ್ಗೆ
ಚಿನ್ನದ ಕಠಾರಿ (ರಾ ಗೌ ೩೪೪೮)

ಬಾಲಿಲ್ಲದ ಬಟಾರಿ
ನಾಲ್ಕು ಕಾಲಿನ ವಟಾರಿ
ಇದ ಹೇಳಿದವರಿಗೆ ಚಿನ್ನದ ಕಠಾರಿ (ವಾಲಿ ೬–೨೯)

ಹಾರಿದರೆ ಹನುಮಂತ
ಕುಳಿತರೆ ಮುನಿ
ಕೂಗಿದರೆ ಕಾಡಿನೊಡಯ (ಇ ೧೦೬೬)

ಹಾರಿದರೆ ಹನುಮಂತ
ಕೂಗಿದರೆ ರಾವಣ
ಕುಳಿತಲ್ಲಿ ಮುನಿರಾಯ (ಇ ೧೦೫೭)

ಹಾರಿದರೆ ಹನುಮಂತ
ಕೂತರೆ ಮುನಿ
ಕೂಗಿದರೆ ಕಾಡಿನೊಡೆಯ (ಚಂ ಸೆ ೨೫೦)

ಹಾರಿದರೆ ಹನುಮಂತ
ಕೂಗಿದರೆ ಹೆಬ್ಬುಲಿ (ಲ ಗೌ ೧೦೪೧)
ಕಪ್ಪೆ

ಕುಂತ್ರೆ ಮುರ್ಡೇಶ್ವರಾ ಹಾರದ್ರೆ ಹನ್ಮಂತಾ (ಶಾಂ ನಾ ೩೧)

ಹಾರದ್ರೆ ಹನ್ಮಂತಾ ಕೂಗದ್ರೆ ರಾವ್ಣಾ (ಶಾಂ ನಾ ೩೨)

ಹಾಳ್ ಬಾವಿಲಿ ಮೊಳ್ಕೊಗ್ತು (ಶಾಂ ನಾ ೩೦)
ಕೆಪ್ಪೆ

ಕೆರ್ಯಾಗ ಕ್ಯಾಕರಸತೈತಿ
ಗುಡ್ಯಾಗ ಗುಣಗುಣಸತೈತಿ (ವಾಲಿ ೬–೪೮)
ಕಪ್ಪೆ, ಗಂಟೆ

ಕೆರೆಯೊಳಗ ಕೆಕ್ಕರಸತೈತಿ
ಗುಡಿಯಾಗ ಗುಡಗುಡಿಸತೈತಿ
ಬಣವ್ಯಾಗ ಬಡಬಡಸತೈತಿ (ಇ ೪೧೩)
ಕಪ್ಪೆ, ಗಂಟೆ, ನೇರ್ಕೊಲ

ಆಕಳೈತಿ ಬಾಲಿಲ್ಲ
ಕರಾ ಉಣತೈತಿ ಮಲಿ ಇಲ್ಲ
ಹಿಂಡ ಐತಿ ಕಾವಲಿಲ್ಲ
ಜಪ್ಪಿಸುವ ಕಳ್ಳಗ ಕಾಲಿಲ್ಲ (ವಾಲಿ ೬–೨೩)
ಕಪ್ಪೆ, ಹಾವು

ಅಕ್ಕಟ್ಟ ಮಕ್ಕಟ್ಟ
ಮರಕ ಮೂವತ್ತ ಕಟ್ಟ (ಲಠ್ಠೆ ಭಾಗ ೪–೨೪)

ಅರಲಾಗ ಹುಟ್ಯೇತಿ
ಪಳಾಪಳಾ ಅಂತೈತಿ
ಮಂಚಾ ಹಾಕ್ತೈತಿ
ಗಾಳಿ ಬೀಸ್ತೈತಿ
ಎಲ್ಲಾರ ಬಾಯಾಗ ಉಚ್ಚಿ ಹೊಯ್ತತಿ (ಲಠ್ಠೆ ಭಾಗ ೪–೨೫)

ತಿನಬೇಕಂತ ಬಗಸಿ ಸಂತ್ಯಾಗ ಹ್ವಾದ್ರ
ರೊಕ್ಕಾ ಕೊಟ್ರ ಖಿಟಗಿಮುರ್ದ ಕಯ್ಯಾಗ ಕೊಟ್ರ (ಲಠ್ಠೆ ಭಾಗ ೪–೧೧೨)

ಕಬ್ಬು

ಪಟ್ಟೋಳಿ ಸೀರಿ ಮಗ್ಗಿ ಕುಬಸ (ಲಠ್ಠೆ ಭಾಗ ೪–೧೩೦)

ಕಬ್ಬು, ಸೀತಾಫಲ ಹಣ್ಣು

ಅಂಕುಡೊಂಕಿನ ಮರ
ಸಂಕೋಲೆ ಮರ
ಕಬ್ಬಿದೋರ ಬಾಯಿಗೆ
ಉಚ್ಚೆ ಹುಯ್ಯೋ ಮರ (ಸು ೫೯)

ಕಬ್ಬಿನ ಜಲ್ಲೆ

ಕೆಂದೆತ್ತಿಗೆ ಹದಿನಾರು ಗೋಮಾಳೆ (ಸು ೨೨೬)

ಕಬ್ಬಿನ ಜಲ್ಲೆಯ ಗೆಣ್ಣುಗಳು

ಕವ್ವಳ್ದ ಮನೇಲಿ
ಗುಟ್ರು ಹಾಕ್ತು (ಮಂ ೧.೫–೪೭)

ಕಬ್ಬಿನ ಹಾಲು (ಹಿಂಡಿ)

ಅಕ್ಕಕ್ಕ ತಂಗೇರು
ಅವರ್ಯಾವ ಕುಲದೋರು
ಚಿಕ್ಕ ಜಾಲಿ ಮರಕ್ಕ ಚಿಗರ್ಹೆತ್ತಿಕೊಂಡರು (ಜೀಶಂಪ ೩೫)

ಅಗರಂ ಬೆತೊಗರಿ ಸಿಂಬೆ
ಬಾಣನ ಮಗಳು ಶೂಲಕ್ಕೆ ಬಿದ್ದಳು (ಜೀಶಂಪ ೩೦)

ಅರಲಾಗ ಹುಟ್ಯಾನ ಹಸಿರು ಮಗಾ
ಎಲ್ಲಾರ ಬಾಯಾಗ ಏನ ಹೊಯ್ತಾನ (ಇ ೧೨೫)

ಅಂಕಾಡೊಂಕಾ ಶಂಕಾ ಪಾಳಾ
ಕಚ್ ದೋರ್ಬಾಂಯ್ಗೆ ಉಚ್ಚೆ (ಶಾಂ ನಾ ೧೫೧)

ಅಂಕುಡೊಂಕಿನ ಮರ
ಸಂಕೋಲೆ ಬಿಗಿದ ಮರ
ಕಚ್ಚಿದವರ ಬಾಯಿಗೆ ನೀರು ಹೊಯ್ಯುವ ಮರ (ಚಂ ಸೆ ೨೨)

ತಲೆ ತರಿದ್ಹಾಕಿ ರವಕ ಕಳದ್ಹಾಕಿ
ಎರಡು ತೊಡೆ ಮಧ್ಯೆ ಸಿಕ್ಕತ್ತು (ಲ ಗೌ ೫೮೮)

ತಿಂದರ ರಸ
ಉಗುಳಿದರ ಕಸ (ಇ ೫೮೮)

ನಿನ್ನ ಸಿಟ್ಟು ಸುಟ್ಟು ನನ್ನ ಬಟ್ಟ ಕಡ್ಡಿ (ಇ ೬೬೪)

ರಾಡ್ಯಾಗ ಹುಟ್ಟತೈತಿ
ಚಿರ ಚಿರ ಅಂತೈತಿ
ಪಕ್ಕ ಬೀಸತೈತಿ
ಪಗಡೀ ಆಡತೈತಿ
ಕಚ್ಚಿದವರ ಬಾಯಾಗ ಉಚ್ಚಿಹೊಯ್ತೈತಿ (ಇ ೯೦೭)

ಸೋಲು ಸೋಲು ಸತ್ತತ್ತಿ ಮರ
ಯಾಪಾರ ಬಂದ್ರೆ ಯಪ್ಪತ್ತು ರೂಪಾಯಿ (ಸು ೪೮೨)
ಕಬ್ಬು

ನಿನ್ನ ಸಿಟ್ಟ ಸುಡ್ಲಿ ಬಟ್ಟ ಮುರೀಲಿ
ನಿನ್ನ ಮಾಯಾ ಸುಡ್ಲಿ ಗಲ್ಲಾ ಕಡೀಲಿ
ನಿನ್ನ ಖುಷಿ ಸುಡ್ಲಿ ಕುಬಸಾ ಹರೀಲಿ (ವಾಲಿ ೨–೭೧)
ಕಬ್ಬು, ಪೇರಲ ಹಣ್ಣು, ಬಾಳೆ ಹಣ್ಣು

ಆಡು ಮೇಯ್ತಿತ್ತು
ಬಾಡು ಬೇಯ್ತಿತ್ತು
ಚಕ್ಕಳ ಒಣಗ್ತಿತ್ತು (ಸು ೮೧)
ಕಬ್ಬು, ಹಾಲು, ಸಿಪ್ಪೆ

ಸ್ವೊಳ್ಳೆ ಕುಯ್ಯೊಕೊಂದಳ್ಳ
ರಗುತ ತುಂಬಕೊಂದು ಗಡ್ಗೆ
ಬಾಡ ತುಂಬಕೊಂದು ಯಡ್ಗೆ (ಮಂ ೧.೪–೮೨)
ಕಬ್ಬುಹಾಲು ಹಿಂಡುವುದು

ಅಪೂರ್ವವಾದ ವಸ್ತು ತವರು ಮನೆ ಕೆಸರು (ಇ ೧೦೮)
ಕಮಲ

ಚಳಿಜ್ವರ ಇಲ್ಲದೆ ಬೆಂಕಿ ಕಾಯಿಸುವನಾರು (ಇ ೫೧೮)
ಕಮ್ಮಾರ

ಅಯ್ಯನಾ ತಕ್ಕಾಬಂದೊ ಹತ್ಜನಾ ಕೊರ್ದೊ
ಮುವತ್ತೆರಡ್ಜನಾ ತಿಂದೊ
ವಬ್ಬಂವಾ ರುಚಿ ನೋಡ್ದಾ (ಶಾಂ ನಾ ೯೭)
ಕಯ್ಪೆರಳು–ಹಲ್ಲು–ನಾಲ್ಗೆ

ಹಬಲಿ ದುಬಲ್ಯಾರ ಇಬ್ಬರ
ಹೊಟ್ಟಿ ಢುಮ್ಮಕ (ಲಠೈ ಭಾಗ ೪–೧೪೦)
ಕರ್ಚಿಕಾಯಿ

ಬಿಳಿ ಕಪ್ಪೆ
ಹೊಟ್ಟೆಯೊಳಗೆ ಕರಿಮರಳು (ರಾ ಗೌ ೩೫೮)
ಕರ್ಜಿಕಾಯಿ

ಅರೆ ಡಂಬರ ಬಂದಾರ
ಕಾರಿ ಕಂಟ್ಯಾಗ ಇಳದಾರ
ಮುತ್ತಿನ ಡೇರೆ ಹೊಡೆದಾರ (ಇ ೧೪೧)
ಕರ್ಜುಟಗಿ ಹುಳ

ತಟ್ಟೇಲಿ ಇರ್ತದೆ
ಮುಟ್ಟಿದರೆ ಕಚ್ತದೆ (ಸು ೨೯೨)
ಕರ್ಪೂರ

ಸತ್ ಸತ್‌ಗುವೆ ವೋಯ್ತಾಳೆ ನನ್ನಪ್ಪ ಗಣಿ (ಮಂ ೨.೨–೧೫)

ಸತ್ತು ಸಂತೆ ಬುಡ ಪೆಟ್ರಗಣ್ಣ (ಮಂ ೧.೪–೭೫)
ಕರ್ಮೀನು

ಚರಚರ ಕೊಯ್ತತಿ ಕತ್ತಿ ಅಲ್ಲ
ಮಿಣಿ ಮಿಣಿ ಮಿಂಚತತಿ ಮಿಂಚಲ್ಲ
ಪಟಿಗ್ಯಾಗ ತುಂಬತತಿ ದಾಗಿನ ಅಲ್ಲ (ಲಠೈ ಭಾಗ ೫–೧೫೫)

ಹಲ್ಲುಂಟು ಮೃಗವಲ್ಲ
ಸೊಲ್ಲು ಸೋಜಿಗವಲ್ಲ
ಕೊಲ್ಲುವುದು ತನ್ನ ನಂಬಿದವರ (ಇ ೧೦೨೩)

ಹೋಗುಮುಂದ ಕೊರಿತೈತಿ
ಬರೊಮುಂದ ಕೊರಿಯೂದಿಲ್ಲ (ಇ ೧೧೧೫)

ಹೋಗ್ತ ಕೊಯ್ತತಿ ಬರ್ತ ಕೊಯ್ಯತತಿ (ಲಠೈ ಭಾಗ ೫–೩೧೦)
ಕರಗಸ

ಕೆಂದೆತ್ತ
ಕೆರ್ಯಾಗ ಈಸತತಿ (ಲಠೈ ಭಾಗ ೪–೮೧)
ಕರಚಿಕಾಯಿ

ಹೊಟ್ಟಿಗುಬ್ಬಿ ಹೊಳಿ ಈಸ್ಯಾಡತೈತಿ (ಇ ೧೧೦೦)
ಕರಚೀಕಾಯಿ

ಅದರಾಗ ಇದನ್ನ ಹಾಕಿ
ಇದರಾಗ ಅದನ್ನ ಹಾಕಿ
ಮದರಂಗಿ ಪುಡಿ ಹಾಕಿ
ಅದನ್ನ ಇನ್ನೊಬ್ಬರ ಕೈಯಾಗಿಟ್ಟು
ಇನ್ನೊಬ್ಬರ ಕೈಯಾಗಿಂದ ಮತ್ತೊಬ್ಬರ ಹೊಟ್ಟಾ ್ಯಗಿಟ್ಟು
ಆ ಮನಿಯಾಕಿ ಅದನ್ನ ಬೇಡತಾಳ (ಇ ೯೮)
ಕರಜೀಕಾಯಿ

ಯಾರು ಮರ ಏರಿದ್ರೂ
ಕುಂಡೀಲೇರಾವ್ರ ಇಲ್ಲ (ಇ ೮೯೯)
ಕರಡಿ

ಇಲ್ಲಿ ಮಿಂಚು ಅಲ್ಲಿ ಮಿಂಚು
ಕಲ್ಯಾಣತನಕ ಮಿಂಚು ಮಿಂಚು (ಇ ೧೯೦)
ಕರಡಿಗೆ

ದಾರೆಯಿದ್ರೂ ಹೀರೆ ಕಾಯಲ್ಲಾ
ಹುಳಿಯಿದ್ರೂ ಹುಣ್ಸೆಯಲ್ಲಾ
ಬಂಗಾರ್ದ ಬಣ್ಣಾ ಬಾಳೆ ಹಣ್ಣಲ್ಲಾ (ಶಾಂ ನಾ ೧೫೦)
ಕರಬಲಕಾಯಿ

ಬಡವ ತಗದಾಕಿದ್ದ
ಸಾವ್ಕಾರ ತಗದ್ ಜೇಬ್ಗಾಕ್ಕಂಡ (ಮ.ಕ.) (ಮಂ ೧.೫–೭೨)

ಬಡ್ವ ಇಟ್ಟಬುಟ್ಟ
ಬಲ್‌ಗಾರ ಎತ್ತಿ ಜೇಬ್ಗಾಕ್ಕಂಡ (ಮೈ.ಕ.) (ಮಂ ೧.೫–೭೩)

ಕರವಸ್ತ್ರ

ಯಾರೂ ಬರದ ದಾರಿಯಲ್ಲಿ ಬಂದವರು ಯಾರು
ಯಾರೂ ಹೋಗದ ದಾರಿಯಲ್ಲಿ ಹೋದವರು ಯಾರು (ಲ ಗೌ ೮೮೧)

ಕರ್ಣ, ಧರ್ಮರಾಯ

ಕಪ್ಪುಂಟು ಕಾಗೆಯಲ್ಲ
ಮರವೇರುವುದು ಮಂಗವಲ್ಲ
ನಾಲ್ಕು ಕಾಲುಗಳುಂಟು ಪ್ರಾಣಿಯಲ್ಲ (ಲ ಗೌ ೩೮೫)

ಕರಿ ಇರುವೆ

ಕೆಂದ ಎತ್ತು ಕೆರ್ಯಾಗ ಈಸುತೈತಿ (ಇ ೪೪೩)

ಕೆಂದ ಎತ್ತು ಕೆರೆಯಾಗ
ಕೈಹಿಡಿದ್ರ ಹೊಟ್ಟಾ್ಯಗ (ಇ ೪೪೪)

ಕರಿಗಡುಬು

ಗದಾನ ಗುದಿಗಿ ಅವಳ್ಯಾರು
ಚೆಂದಾನ ಚೆಲುವಿ ಅವಳ್ಯಾರು
ತಾತನ ತೂತ ಅವಳ್ಯಾರು
ಕಡಾಯಿ ಬಸವಿ ಅವಳ್ಯಾರು (ವಾಲಿ ೫–೩೩)

ಕರಿಗಡಬು, ಹೋಳಿಗೆ, ದೋಸೆ, ವಡೆ

ಬೆಟ್ಟದ ಸುತ್ತ ಬೆಳ್ಳಿ ಹೊಳೆ (ಲ ಗೌ ೭೮೩)

ಕರಿಗುಳ್ಳೆ ಸುತ್ತ ಬಿಳಿಗುಳ್ಳೆ

ಆತನೆ ಈತನೆ ಸೀತಂಗಿ ರಾಯನೆ
ಸೀತೆಯ ಕೊಳ್ಳಲಿರುವೊ ಪದಕ ಎಣಿಸುವವನಿಗೆ
ಆರು ಬಳ್ಳ ಅರವತ್ತು ಕಜ್ಜಾಯ (ಲ ಗೌ ೧೪೭)

ಕರಿಮಣಿ

ಬಗ್ಗಿದರೆ ಬಾಯಿಗೆ ಬರುತ್ತೆ
ಎದ್ದರೆ ಎದೆಗೆ ಹೊಡೆಯುತ್ತೆ (ರಾ ಗೌ ೩೪೦)
ಕರಿಮಣಿಸರೆ

ಇಂಗಲುಗಣ್ಣಿನವಳು ಸಂತೆಗೆ ಹೋಗ್ತಾಳೆ (ಲ ಗೌ ೧೭೮)

ಸತ್ತರೂ ಸಂತೆ ಬಿಡ ಪೊಟರೆಗಣ್ಣಿನ ವೀರತ್ತಪ್ಪ (ಲ ಗೌ ೯೦೮)

ಗುದ್ದರಗಣ್ಣಿ ಸಂತೆಗೆ ಹೋದ್ಲು (ಸು ೨೫೫)

ಸತ್ತವನನ್ನು ಸಂತೆಗೆ ಹೊತ್ಕೊಂಡು ಹೋದರು (ಸು ೪೫೫)
ಕರಿಮೀನು

ಹುಟ್ಟುತಲೆ ಹಸಿರುಂಟು ಪಚ್ಚೆ ತಾನಲ್ಲ
ಬೆಳೆಯುತಿರೆ ಕೆಂಪುಂಟು ರತ್ನ ತಾನಲ್ಲ
ಕಟ್ಟಕಡೆಗದು ಕಪ್ಪು ಕಸ್ತೂರಿಯಲ್ಲ
ಸೃಷ್ಟಿಸಿದ ಶಿವರಾಯ ಅದನೆಲ್ಲ ಬಲ್ಲ (ವಾಲಿ ೨–೬೫)
ಕರಿ ಮೆಣಸು

ಹೆಸರಿನ್ಯಾಗ ಹೆಸರ ಯಾವ ಹೆಸರ (ಲಠ್ಠೆ ಭಾಗ ೪–೨೧೫)
ಕರಿಹಸರ

ಬೆಳ್ಳಿ ಅಲ್ಲ ಬಂಗಾರ ಅಲ್ಲ
ಇದ್ಲಿ ಯಾಕ ಇದಿರಿಗಿ ಬಂತು
ಕಣಾ ಇಲ್ಲ ಕಟ್ಟ ಇಲ್ಲ
ರಾಗೋಲ ಯಾಕ ಇದಿರಿಗಿ ಬಂತು (ವಾಲಿ ೪–೩೫)
ಕರಿ ಹುಡುಗಿ ಹಲ್ಲು ಹಾಯ್ದವ

ಸುತ್ತ ಸುತ್ತ ಕರೀ ಗೋಡೆ
ಅದಕ್ಕೆರಡು ಬಾಗಿಲು
ಹಾಕಿಕೊಳ್ಳುವವರುಂಟು
ತಿನ್ನುವವರೇ ಇಲ್ಲ (ಲ ಗೌ ೯೫೧)

ಸುತ್ತ ಮುತ್ತ ಬೇಲಿ ಕಟ್ಟಿ
ಸುಂದ್ರಮ್ಮನ ಜೋಳ ತೊಳ್ದು
ಕೇಳೋರುಂಟು ತಿನ್ನೋರಿಲ್ಲ (ಜೀಶಂಪ ೨೬೧)
ಕರೀಮಣಿ

ಕಾಯಿ ಕಣಕಣ
ಹೂವು ಮಿಣಮಿಣ
ಬಾಯಿ ತೊಡ್ರಬಡ್ರ (ಇ ೩೮೪)
ಕರೆಗಡಬು–ಅನ್ನ

ಜೋಗದಾಗ ಹುಟ್ಟಿದ ಮಾವಾ
ಅಲ್ಲೇ ಕುಂತು ಇಲ್ಲಿ ಹಲ್ಲು ಕಿಸಿತಾನ ಗುಂಡ್ಯಾ (ಇ ೫೫೭)
ಕರೆಂಟು ಬಲ್ಬು

ಡಬಲವ್ವ ಡುಬಲವ್ವ ಇಬ್ಬರು
ಹುಳಕವ್ವ ಟೊಕರವ್ವ ಇಬ್ಬರು
ಸುಗುಣ ಸುಂದರಿ ಇಬ್ಬರು (ವಾಲಿ ೫–೧೬)
ಕರ್ಚಿಕಾಯಿ, ಪುರಿ. ದೋಸೆ, ಬ್ರೆಡ್, ಹೋಳಿಗೆ

ಅಂಗೈಯಗಲ ಗದ್ದೆ
ಮುಂಗೈ ಗಾತ್ರ ಏರಿ
ಉಗುರ್ ನೀರ್ನಲ್ಲಿ
ಪಸುಲ್ ತಗೀತಾರೆ (ನಾ ಗೌ ೧೭)
ಕಲ್ಪತ್ತು, ಗಂಧದಕೊರಡು, ನೀರು ಮತ್ತು ಗಂಧ

ಹೋಗಕಾರೆ ಸಣ್ಣಾ ಬರಾಕಾರೆ ದೊಡ್ಡಾ (ಶಾಂ ನಾ ೯೯೯)
ಕಲ್ಲಿ

ಅವ್ವಾ ಕಿವಿ ಹರಕಿ
ಮಗಾ ಹೊಟ್ಟಿ ಢುಮ್ಮಣ್ಣ (ಲಠ್ಠೆ ಭಾಗ ೪–೨೬)
ಕಲ್ಲಂಗಡಗಿ

ಮ್ಯಾಲ ಹಸಿರು ಒಳಗ ಕೆಂಪು
ತಿಂದರ ತಂಪು (ವಾಲಿ ೨–೫೩)
ಕಲ್ಲಂಗಡಿ

ಮೇಲೆ ಹಸಿರು
ಒಳಗೆ ಕೆಂಪು
ತಿಂದರೆ ತಂಪು (ರಾ ಗೌ ೪೧೦)

ಹಸರ ಕ್ವಾಟಿ
ಕ್ವಾಟ್ಯಾಗ ಕೆಂಪ ಅರಮನಿ
ಅರಮನ್ಯಾಗ ಕಪ್ಪ ಸೈನಿಕರ (ಲಠ್ಠೆ ಭಾಗ ೪–೧೯೦)

ಹಸಿರು ಕೋಟೆ
ಕೆಂಪು ಅರಮನೆ
ಕರಿ ಸೈನಿಕರು (ಇ ೧೦೪೨)
ಕಲ್ಲಂಗಡಿ

ಕಿವಿ ಹರಕಿ
ಮಗ ಢಬಲೇ ಖಾನ (ಇ ೪೦೩)
ಕಲ್ಲಂಗಡಿ ಬಳ್ಳಿಯ ಎಲೆ ಮತ್ತು ಹಣ್ಣು

ಏ ಹುಡುಗಿ ನೀನು ರಸ
ನಿನ್ನ ಹೊಟ್ಟೆಯೊಳಗೆ ಪಾದರಸ (ಲ ಗೌ ೨೬೦)

ಒಂದು ದೊಡ್ಡ ಕೋಟೆ ತುಂಬ
ಕೆಂಪು ಜನ ಕಾವಲು
ಕೋಟೆಯೊಳಗೆ ಕೆಂಪೇ ಕೆಂಪು (ಇ ೨೭೩)

ಹಸರ ಹಸರಾಣಿ
ತುಂಬಿದ ತತ್ರಾಣಿ
ಹೆಸರ ಒಡಿದಿದ್ರ ನಿಮ್ಮಪ್ಪನಾಣೆ (ವಾಲಿ ೨–೩೪)
ಕಲ್ಲಂಗಡಿ ಹಣ್ಣು

ಹಸಿರು ಕೋಟ್ಯಾಗ ಬಿಳಿಕೋಟೆ
ಮುತ್ತದರಾಗ ಕೆಂಪು ಕೋಟೆ
ಅದರಾಗ ನೋಡಿದರ ಕರಿ ಸಿಪಾಯರು (ವಾಲಿ ೨–೬೯)
ಕಲ್ಲಂಗಡಿಯ ಹಣ್ಣು

ಆಟ ಸಾಗರದಂಥ ಮರ
ಎಲೆನಾದ್ರೂ ಎಣಿಸಬಹುದು
ಕಾಯ ಎಣಿಸಕಾಗೋದಿಲ್ಲ
ಫಲ ನೋಡಿದ್ರೆ ನಿಂಬೆ ಹಣ್ಣಿನ ಗಾತ್ರ
ಒಳಗೆ ಕೂತದೆ ಕೆಂಬೂತ (ರಾ ಗೌ ೭೩)
ಕಲ್ಲತ್ತಿ ಕಾಯಿ, ಸೀಬೆ

ಒಟ್ತೀವಿ ಒಟ್ತೀವಿ
ಅಷ್ಟು ಒಟ್ತೀವಿ
ಎಷ್ಟು ಒಟ್ಟಿ ಬೇಯಿಸಿದರೂ
ಬೇಯುವುದಿಲ್ಲ (ರಾ ಗೌ ೧೨೪)

ನೀರಿನಲ್ಲಿದ್ದರೂ ಕೊಳೆಯುವುದಿಲ್ಲ
ತೆಗೆದರೂ ಕೊಳೆಯುವುದಿಲ್ಲ (ಲ ಗೌ ೬೯೪)

ಸಣ್ಣಕ್ಕಿ ಒಳಗೆ ಸಣ್ಣ ಹನುಮಂತರಾಯ (ಸು ೪೫೪)

ಸಾಲು ಸಾಲು ಹೊಂಗೇ ಮರ
ನೀರನಲ್ಲಿರೋ ನಿಂಬೆಮರ
ರಾಯರು ಬತ್ತಾರೆ ಹೆದರಬೇಡ (ಜೀಶಂಪ ೨೫೬)
ಕಲ್ಲು

ಮನೆ ಗಾತ್ರ ಆನೆ
ಎಲ್ಲಿ ಚುಚ್ಚಿದ್ರೂ ಒಂದು ತೊಟ್ಟು ರಕ್ತವಿಲ್ಲ (ಲ ಗೌ ೮೧೮)
ಕಲ್ಲುಬಂಡೆ

ಹೊರಗೆಲ್ಲ ಸಿಹಿ ಒಳಗೆಲ್ಲಾ ಸಿಹಿ
ಮೈಯೆಲ್ಲಾ ಸಿಹಿ ನಮ್ಮ ಚಿಳ್ಳಪ್ಪಂದು (ಇ ೧೧೦೯)
ಕಲ್ಲು ಸಕ್ಕರೆ

ತಳವಿಲ್ಲದ ಹರವಿ ತಕ್ಕೊಂಡು
ಜಲವಿಲ್ಲದ ಬಾವಿಗೆ ಹೋಗ್ತಾರೆ (ಲ ಗೌ ೫೮೯)
ಕಲ್ಲೊರಳು

ಹಿತ್ತಲಲ್ಲಿರುವದು ಕಿಚ್ಚಲ್ಲ ಕೀಳಲ್ಲ
ಉಪ್ಪಿನ ಹಂಗು ಅದಕಿಲ್ಲ (ಶಾಂ ನಾ ಅನುಬಂಧ ೨೭)
ಕವಳ

ಮಾದಿಗ ಮುಣಗಿದರೆ
ಬಡಿಗ್ಯಾ ಹೊಯ್ಯೋತಾನ (ವಾಲಿ ೮–೧೮)
ಕವಲಿ ಕ್ರಿಯೆ

ಮೂಡ್‌ಗಡಿಂದ ಯಾಳ್ದೆಮ್ಮೆ ತಗಂದ್ ಬಂದ್ನೆಪ
ಅದರಾಗೊಂದ್ ರಕ್ತ ಕರೀತತಿ ಒಂದ್ ಹಾಲ್ ಕರೀತತಿ (ಲ ಗೌ ೮೫೭)
ಕವಳೇಹಣ್ಣು, ಕಾಯಿ

ಒಂದು ಬಿಟ್ಟೆ
ಎರಡು ಹಿಡಿದೆ (ಸು ೧೫೦)
ಕವೆಗೋಲು, ಹಿಟ್ಟನಕೋಲು

ಮೂರು ಪಕ್ಷಿಗಳು ಗೂಡಿಗೆ ಹೋಗುವಾಗ ಬೇರೆಬೇರೆ ಬಣ್ಣ
ಹೊರಗೆ ಬರುವಾಗ ಒಂದೇ ಬಣ್ಣಾ (ಶಾಂ ನಾ ೪೩೨.)

ಹೋಗ್ವಾಗ್ ಕರಿಬಳೆ ಹಸ್ರಿದನಾ
ಬರ್ವಾಗಾ ಕೆಂಪದನಾ (ಶಾಂ ನಾ ೪೩೩)
ಕವ್ಳಾ

ಮೂನ್ನೂರೆಕ್ಕರೆ ಬಯಲು
ಅರ್ ಬಿದ್ದ ಮೇಲೆ ಕುಯ್ಯಲು (ಮಂ ೧.೧–೧೨)
ಕಸ ಅಥವಾ ಹೊಕ್ಕಳು

ಬೆಟ್ಟದ ಮ್ಯಾಲೊಂದು ಕೊಂಟು
ಕೊಂಟಗದ್ಸಾರ್ ಕಣ್ಣು
ಅದನ್ನೊಡದ್ವೋರ್ಗೆ ಮೈಸೂರೆಣ್ಣು (ಮಂ ೧.೫–೭೫)
ಕಸದ ಪೊರಕೆ

ನಮ್ಮನ್ಯಾಗ ಒಂದು ನೆಲ ನೆಕ್ಕ ದೇವ್ರೈತಪ (ಲ ಗೌ ೬೫೫)
ಕಸಪೊರಕೆ

ಸಾವರೆ ಮಕ್ಕಳಿಗಿ ಒಂದಾ ಉಡದಾರ (ಲಠೈ ಭಾಗ ೫–೨೭೬)
ಕಸಬರಗಿ

ಸಾವಿರ ಮಕ್ಕಳಿಗೆ ಒಂದೇ ಉಡಿದಾರ (ಚಂ ಸೆ ೨೨೩)
ಕಸಬರಿಕೆ

ಅರ್ಧ ಚಂದ್ರನಾಂಗ ಐತಿ
ಮುದ್ದು ಕೊಟ್ಟರ ಗದ್ದರಸತೈತಿ (ವಾಲಿ ೩–೧೧೫)
ಕಹಳೆ

ಅಲ್ಲಾಡಿಸಿದ್ರೆ ನೀರು ಕಡದ್ರೆ ಹಾಲು (ಶಾಂ ನಾ ೧೫೩)

ಎಲೆಯಿಲ್ಲದೆ ಹೂವಿಲ್ಲದೆ ಕಾಯಿಲ್ಲದೆ
ಬೆಳೆಯುವ ಸಸ್ಯ ಯಾವುದು (ವಾಲಿ ೨–೪೫)

ಕಳ್ಳದನ ಹುಲ್ಲ ಕೊಟ್ರ
ಹಾಲ ಕೊಡುದುಲ್ಲ
ಕಲ್ಲಲೆ ಕುಟ್ಟಿದರ ಹಾಲ ಸುರಸ್ತದ (ಲಠೈ ಭಾಗ ೫–೧೨೩)

ಮೇವು ಹಾಕಿದರೆ ಹಿಂಡುವದಿಲ್ಲ
ಕಲ್ಲು ಹಾಕಿದರೆ ಹಿಂಡುತ್ತದೆ (ವಾಲಿ ೨–೧೧ಳ)

ಹುತ್ತಕೆ ಮೂರು ಮುತ್ತು (ಸು ೫೨೫)

ಹುಲ್ಲ ಹಾಕಿದರ ಹಿಂಡುದಿಲ್ಲ
ಕಲ್ಲ ಹಾಕಿದರ ಹಿಂಡತೈತಿ (ವಾಲಿ ೨–೯೬)

ಕಳ್ಳಿ

ಕಳ್ಳ ಪಶು ಹುಲ್ಲು ಕೊಟ್ಟರೆ ತಿನ್ನದು
ಕಲ್ಲು ಕುಟ್ಟಿದರೆ ಹಾಲು ಕರೆಯುವುದು (ಚಂ ಸೆ ೯೩)

ಕಳ್ಳಿಗಿಡ

ಅಯ್ಯಯ್ಯ ಚೆನ್ನವ್ವ ಎಲ್ಲಿಟ್ಟಿದ್ದಿ
ಅಯ್ಯ ನಮ್ಮವ್ವ ಚಿನ್ನವ್ವನ ಕರದ
ಚೆನ್ನವ್ವನ ಕೇಳ
ರನ್ನದ ಅಡಕಲದ ಮುಂದ ಇಟ್ಟಿರಬೇಕ (ಲಠ್ಠೆ ಭಾಗ ೫–೨೪ಳ)

ಕಸಬರಗಿ, ಮಸಿ ಅರವಿ

ಅಲ್ಲಿ ಇಟ್ಟಿಲ್ಲ
ಅಪ್ಪನ ಮನೆಗೆ ಕೊಟ್ಟಿಲ್ಲ
ನಮ್ಮರಮನೆಯಲ್ಲಿ ಇಟ್ಟಿದ್ದೇನೆ (ರಾ ಗೌ ೪೧)

ಮೂಲೇಲಿ ಮುದುಕಿ ಕೂತದೆ (ರಾ ಗೌ ೪೦೭)

ಕಸಬರಲು

ಮನಿ ಮಾಡೋ ಗರತಿ
ಹೊಲಸೇಸು ಮಾಡುತಿ (ಇ ೮೧೪ಳ)

ಮನಿಯಲ್ಲಾ ಅಡ್ಡಾಡಿ
ಮೂಲ್ಯಾಗ ಕುಂದರತಾನ (ಇ ೮೧೫)

ಮನಿ ಒಳಗಿನ ಹುಡುಗಿ ನೆಲಾ ನೆಕ್ಕತೈತಿ (ಇ ೮೧೬)

ಮಲ್ಲಾಡ ಎಮ್ಮಿಗಿ ಮೈತುಂಬ ಕಣ್ಣ (ಲಠ್ಠೆ ಭಾಗ ೫–೨೪೦)

ಹಗಲೆಲ್ಲಾ ಹಾರ್ಯಾಡತತಿ
ರಾತ್ರೆಲ್ಲಾ ಮಲಗತತಿ (ಲಠ್ಠೆ ಭಾಗ ೫–೨೯೫)

ಕಸಬರಿಗಿ

ನೆಲ ನೆಕ್ಕು ದೇವರು
ಮೂಲ್ಯಾಗ ಕುಂತೈತಿ (ಇ ೬೮೯)

ನೆಲ ನೆಕ್ಕುವದಾದರೂ ನಾಲಿಗೆಯಲ್ಲ (ಇ ೬೮೭)

ರಾತ್ರಿಯೆಲ್ಲ ಮಲಗಿರುತ್ತದೆ
ಬೆಳಗಾಗುತ್ತಲೇ ಎದ್ದು ನಿಲ್ಲುತ್ತದೆ (ವಾಲಿ ೩–೫೫)

ಸಾವಿರ ಮಂದಿಗೆ ಒಂದೇ ಉಡದಾರ (ಇ ೯೩೮)
ಕಸಬರಿಗೆ

ಅಡಿಗಿ ಆಯ್ತು ಅಂಬಲಿ ಆಯ್ತು
ಹಾದರಗಿತ್ತಿ ಕಾಲಾಗ ಹಾದಿ ಕಾಯಬೇಕಾಯ್ತು (ವಾಲಿ ೩–೯೩)

ನೋಡಲು ಕಪ್ಪಾದರೂ ಬೆಲೆ ಹೆಚ್ಚು (ಇ ೬೯೩)
ಕಸ್ತೂರಿ

ತುಸಾ ಕೊನಲಿ
ಕಸನೆಲ್ಲ ಮೇಯ್ತು (ಸು ೩೦೩)
ಕಳೆಗುದ್ದಲಿ

ಹುಲ್ಲು ಹಾಕಿದರೆ ಹಾಲು ಕೊಡುವದಿಲ್ಲ
ಕಲ್ಲು ಹಾಕಿದರೆ ಹಾಲು ಕೊಡುತ್ತದೆ (ಶಾಂ ನಾ ೧೫೪೪)

ಹೊಡ ಹೊಡ್ಸಾಂಗ ಹಾಲ್ಕೊಡುದನಾ (ಶಾಂ ನಾ ೧೫೨೨)
ಕಳ್ಳಿ

ಹುಲ್ಲುಹಾಕಿದರೆ ಹಿಂಡೂದಿಲ್ಲ
ಕಲ್ಲ ಹಾಕಿದರ ಹಿಂಡತೈತಿ (ಇ ೧೦೯೪)
ಕಳ್ಳಿ ಅಥವಾ ತೆಂಗಿನಕಾಯಿ

ಮೂಡಲು ಸೀಮೆಯಿಂದ ಒಂದು ಹಸು ತಂದು
ಕಲ್ ಹಾಕಿದರೆ ಕರೆಯುತ್ತೆ, ಹುಲ್ ಹಾಕಿದರೆ ಕರೆಯೊಲ್ಲ (ಲ ಗೌ ೮೫೮)
ಕಳ್ಳಿಬೇಲಿ

ಒಂಟೊಂಟು ಒಡೀನಾರೆ
ಎಂಟೆಮ್ಮೆ ಕರೀನಾರೆ
ಹಾಲುಂಟು ಬೆಣ್ಣೆಯಿಲ್ಲ (ರಾ ಗೌ ೧೨೬)

ಒಂಟೊಂಟು ಒಡೀಲಾರೆ
ಕುಂಟೆಮ್ಮೆ ಕರೀಲಾರೆ
ಹಾಲುಂಟು ಮೊಸರಿಲ್ಲ (ಸು ೧೪೦)

ಒಂಟೊಂದು ವಡಾರ್ ಗಂಟ
ನಿಮ್ಮಪ್ಪನ್ ಕಚ್ಚೆ ಪವಡೇ ಬರೀ ಸರ್ಗಂಟು (ಮಂ ೧.೫–೩೦)

ಕಲ್ಲಿಟ್ರೆ ಕರ್ಯತ್ತೆ
ವುಲ್ಲಿಟ್ರೆ ಕರ್ಯಲ್ಲ (ಮಂ ೧.೫–೪೫)
ಕಳ್ಳಿಹಾಲು

ನಮ್ಮನ್ಯಾಗ್ ಒಂದು ಎಮ್ಮೇತಿ
ಹುಲ್ಲಾಕಿದ್ರ್ ಹಾಲ್ ಕೊಡದುಲ್ಲ
ಕಲ್ಲಾಕಿದ್ರ್ ಹಾಲ್ ಕೊಡ್ತತಿ (ಲ ಗೌ ೬೪೮)
ಕಳ್ಳೀಮರ

ಒಂದು ಬಟ್ಟಲು ಹಾಲು
ಕುಡಿಯೋನೊಬ್ಬ ಹುಟ್ಟಿಲ್ಲ (ರಾ ಗೌ ೧೩೩)
ಕಳ್ಳೀಹಾಲು

ಆಕಾಶ ಭರಂ ಶೆಟ್ಟಿ
ಭೋಗಿ ನಿಂಗಪ್ಪ ಶೆಟ್ಟಿ
ಮೂಲೆ ಗುಡುಂ ಶೆಟ್ಟಿ (ಲ ಗೌ ೧೩೮)
ಕಳ್ಳು–ಸಾರಾಯಿ–ಹೆಂಡ

ಇಟಿಟ ಪಾರ ದಿಲ್ಲಿಗಿ ಹೋಯ್ತು
ದೋಣಿ ತಂತು ನೀರಾಗ ಬಿತ್ತು
ಸತ್ತಾ ಹೋತು (ಲಠೈ ಭಾಗ ೫–೫೭)

ಇಟಿಟೆ ಪಾರ ಜೀರಗಿ ತಂತು
ಜೀವಾನ ಬಿಡ್ತು (ಲಠೈ ಭಾಗ ೫–೫೮)

ಒಬ್ಬ ಬ್ರಾಹ್ಮಣ ಕಾಸಿಗಿ ಹೊಂಟಿದ್ದಾ
ನೀರ ಕಂಡ್ರ ಜೀವಾ ಬಿಡತಿದ್ದಾ (ಲಠೈ ಭಾಗ ೫–೮೮)

ಗರಗರ ಅಂತು ಗಕ್ಕನೆ ನಿಂತು
ಪುಕ್ಕ ಕೆದರಿ ಕನ್ನಂಗಾಡಿ ರಾಯರತಕೆ ಹೋಗಿ
ರಾಣಿತಕೆ ಬಂತು (ಲ ಗೌ ೫೦೩)

ದಂಡಗೀ ನಮ್ಮಣ್ಣ
ದಳವಾಯಿಗೀ ನಮ್ಮಣ್ಣ
ನೀರಿಗಿ ನಮ್ಮಣ್ಣ ಅಲ್ಲ (ಇ ೬೨೪)

ನೀರಲ್ಲೆ ಹುಟ್ಟಿ ನೀರಲ್ಲೆ ಬೆಳೆದು ನೀರು ಕಂಡರೆ ನಡುಗುವಳು (ಲ ಗೌ ೬೮೭)

ಮಾರೀ ಮಾರೀ ಬಿಡಿಸಿಕೊಂಡು
ಊರು ಕೇರೊ ತಿರುಗಿಕೋತ
ದೂರಿಂದ ಬಂದೀರಿ
ಬಾಗಿಲ್ದಾಗ ಬಂದೀರಿ
ಏನು ಸುದ್ದಿ ತಂದೀರಿ (ಇ ೮೪೩)

ಸರ್ಕಾರಕ್ಕೆ ಹೋಗುತ್ತೆ
ದರ್ಬಾರ್ ಮಾಡುತ್ತೆ
ನೀರು ಕಂಡ್ರೆ ಹೆದರುತ್ತೆ (ಲ ಗೌ ೯೧೬)

ಕಾಗದ

ಬಿಳಿ ಹೊಲದಲ್ಲಿ
ಕರಿ ಎಳ್ಳು ಕಾಯಿ
ತಿನ್ನೋದಕ್ಕಲ್ಲ
ತಿಳಿಯೋದಕ್ಕೆ (ಲ ಗೌ ೭೬೫)

ಬಿಳೀ ಹಲ್ಲಿ ಮೇಲೆ ಕರೀ ಚುಕ್ಕಿ (ಲ ಗೌ ೭೭೨)

ಕಾಗದ–ಅಕ್ಷರ

ಕರ್ರನ್ನ ಕಾಕಾ ಮನಿಹೊಕ್ಕ
ಮನಿ ಬಿಡಿಸಿ ಗಿಡದಾಗ ನಕ್ಕ (ವಾಲಿ ೬–೪೭)

ಕರ್ರನ್ನ ಕಾಕಾ ಮನೀ ಹೊಕ್ಕ
ಮನೀ ಬಿಡಿಸಿ ಗಿಡದಾಗ ನಕ್ಕ (ಇ ೩೪೪)

ಕಾಗೆ

ಸಾಸಿವೆಯಷ್ಟು ಸೆಗಣಿ
ಎರಡು ಮನೆ ಸಾರಿಸಿ ಇನ್ನೂ ಉಳದ್ಯೆತಿ (ಇ ೯೪೬)

ಸಾಸಿವೆಯಷ್ಟು ಸಗಣಿ ತಕ್ಕೊಂಡು
ಅಟ್ಟ ಸಾರಿಸಿ ಬೆಟ್ಟ ಸಾರಿಸಿ ಮನೆ ಸಾರಿಸಿ
ಅದರಲ್ಲಿ ಸಾಸಿವೆ ಗಾತ್ರ ಸಗಣಿ ಉಳೀತು (ಲ ಗೌ ೯೩೮)
ಕಾಡಿಗೆ

ಮೋರೆ ಕೆಂಪಗೆ ಮಾಡಿ
ನೀರು ಕುಡಿಯುತ್ತದೆ (ವಾಲಿ ೩–೭೬)
ಕಾದ ಕಬ್ಬಿಣ

ಕರಿ ಎತ್ತ ಕೈ ಹಚ್ಚಗೊಡುವದಿಲ್ಲ (ವಾಲಿ ೩–೨೧)
ಕಾದ ಹಂಚು

ಅರೆಮೇಲೆ ಗರಿ
ತಲೆಮೇಲೆ ಗರಿ
ಅದನ್ನು ಬಿಡ್ಡೆಸದವನು ಮೈಸೂರು ಮರಿ (ಜೀಶಂಪ ೨೪)

ಸರಕಾರದ ಒಡ್ಡಿನ್ಯಾಗ ಸರ್ಪ ಬಿದ್ನೈತಿ (ಇ ೯೨೯)

ಸರಕಾರಿ ಒಡ್ಡಿನ ಮ್ಯಾಲ ಸರ್ಪ ಬಿದ್ದೈತಿ
ಹಿಡಕೊಂಡು ಬಂದರ ಹಿಡಿ ಬಂಗಾರ ಕೊಡತೀನೆ (ವಾಲಿ ೧–೧೬)

ಹಗಲು ಹಸಿರು ಬಣ್ಣ ಕೆಂಪು ದ್ರಾಕ್ಷೆ ಬಣ್ಣ
ಮೂರು ತಿಂಗಳಲ್ಲಿ ಒಡಚಿದವರಿಗೆ ಮುಕ್ತಿ ಕೊಡ್ತಾನೆ
ಆರು ತಿಂಗಳಲ್ಲಿ ಒಡಚಿದವಂಗೆ ಆನೆ ಕೊಡ್ತಾನೆ
ಈಗಲೇ ಒಡಚಿದವರಿಗೆ ಹೆಣ್ಣು ಕೊಡ್ತಾನೆ (ಲ ಗೌ ೯೬೯)
ಕಾಮನ ಬಿಲ್ಲು

ಒಡ್ಡೆಮ್ಮೆ ಒಡ್ಡಿದೆ
ಗೊಡ್ಡೆಮ್ಮೆ ಕರೀತ (ಸು ೧೨೮)
ಕಾಮನಬಿಲ್ಲು ಮತ್ತು ಮಳೆ

ಅಕರಣ್ಣ ಬಕರಣ್ಣ ಅವನೊಂದು ಜಾತಿ
ಸರಪಣಿ ಸಿದ್ದೇಗೌಡ ಇವನೊಂದು ಜಾತಿ
ಮುಳ್ಳು ಜೋಗೀಗೌಡ ಮತ್ತೊಂದು ಜಾತಿ
ಮೂವರೂ ಸೇರಿದ ದಿನ ಮನೆಯಲ್ಲಿ ಹಬ್ಬ (ಲ ಗೌ ೧)
ಕಾಯಾಲು, ಶ್ಯಾವಿಗೆ ಪರ್ಪು

ಅಗಡೇರು ಪಗಡೇರು
ಹೆತ್ ಮಕ್ಕಳ್ನ ಯಾರಿಗೆ ಕೊಟ್ಟರೋ
ಬರೇ ತೊಟ್ಟಿಲು ತೂಗ್ತಾರೆ (ಸು ೧೦)
ಕಾಯಿ ಕಿತ್ತುಕೊಂಡ ತೆಂಗಿನಮರ ಅಥವಾ ಅಡಿಕೆಮರ

ಈಟ ಪಾರ ಸುದ್ದಿ ಮುಟ್ಟಸತಾನ (ಲಠ್ಠೆ ಭಾಗ ೫–೬೨)
ಕಾರ್ಡ

ಸಂತ್ಯಾಗಿದ್ದ ನಾಲ್ಕು ಎಮ್ಮಿ ತಂದೀನಿ
ಒಂದು ಕಳೀತು
ಒಂದು ಸಿಕ್ಕೀತು
ಒಂದು ಬಂತು
ಒಂದು ಹೋತು (ಇ ೯೭೧)
ಕಾರಹುಣ್ಣಿವೆ, ಸೀಗಿಹುಣ್ಣಿವೆ, ಬನದ ಹುಣ್ಣಿವೆ, ಹೋಳಿಹುಣ್ಣಿವೆ

ಮೈಸೂರು ಸುತ್ತ
ಒಂದ್ಹಿಪ್ಪಿಡಿ ಬತ್ತ (ಜೀಶಂಪ ೨೪೦)
ಕಾರೆಕೆಂಗು

ಆಡೊ ಕಂಬ
ನಡು ಮಡಕಿ
ಕಡಿ ಕುಡಿಕಿ
ಮ್ಯಾಗ ಹುಲ್ಲ (ಲಠ್ಠೆ ಭಾಗ ೫–೩೧೨)
ಕಾಲ, ಧಡ, ತಲಿ, ಕೂದಲ

ಅಣ್ಣ ತಮ್ಮ ಇಬ್ಬರು
ನಾ ಮುಂದೆ ತಾ ಮುಂದೆ ಎನ್ನುತ್ತಾರೆ
ಆದರೆ ಯಾರೂ ಮುಂದೆ ಹೋಗುವುದಿಲ್ಲ (ರಾ ಗೌ ೧೬)

ಅಣ್ಣ ತಮ್ಮಂದಿರಿಬ್ಬರೂ
ನಾ ಮುಂದೆ ತಾ ಮುಂದೆ ಎನ್ನುತ್ತಾರೆ
ಆದರೆ ಯಾರೂ ಮುಂದೆ ಹೋಗುವುದಿಲ್ಲ (ವಾಲಿ ೪–೭)
ಕಾಲುಗಳು

ಇಬ್ಬರು ಸಮೀಪ ಹೋದ್ರು
ಹತ್ತು ಜನಾ ಹಿಡಿದು ಬಿಟ್ರು
ಮೂವತ್ತೆರಡು ಜನಾ ತಿಂದ್ರು
ಒಬ್ಬಾವ ಮಾತ್ರ ಸಂತಸಪಟ್ಟ (ವಾಲಿ ೪–೩೬)
ಕಾಲುಗಳು, ಬೆರಳುಗಳು, ಹಲ್ಲುಗಳು, ನಾಲಿಗೆ

ಅವ್ನೆಳ್ಕಂಡ ನೀ ಕಳ್ಕಂಡೆ (ಲ ಗೌ ೯೫)
ಕಾಲು–ಚಪ್ಪಲಿ

ಹತ್ತುವವರು ಇಬ್ಬರು
ಕೆಡುಹುವವರು ಹತ್ತು ಜನ
ತಿಂದವರು ಮೂವತ್ತೆರಡು ಜನ
ರುಚಿ ನೋಡಿದವ ಒಬ್ಬ (ರಾ ಗೌ ೪೭೧)
ಕಾಲು, ಬೆರಳು, ಹಲ್ಲು, ನಾಲಿಗೆ

ಅತ್ತಕಡೆ ಇತ್ತಕಡೆ ಎರಡಾಲದ ಮರ
ಆಲದ ಮರದ್ಮೇಲೆ ಒಂದಂಬ್ಲಿಗಡ್ಗೆ
ಅಂಬಲಿಗಡಿಗೆ ಮೇಲೆ ಪಿಟಾರಿ ಚೆಂಬು
ಪಿಟಾರಿ ಚೆಂಬಿನ ಮೇಲೆ ಗರ್ಕೆ ಹುಲ್ಲು
ಗರ್ಕೆ ಹುಲ್ಲ ಕುರಿ ಮೇಯ್ತವೆ (ಜೀಶಂಪ ೫೭)
ಕಾಲು, ಮುಂಡ, ರುಂಡ, ಕೂದಲು, ಹೇನು

ಕಂಬ
ಕಂಬದ ಮೇಲೆ ಡಿಂಬ
ಡಿಂಬದ ಮೇಲೆ ಬಾಗೂರು
ಬಾಗೂರು ಮೇಲೆ ಮೂಗೂರು
ಮೂಗೂರ ಮೇಲೆ ಕಣ್ಣೇಗಾರ
ಕಣ್ಣೇಗಾರದ ಮೇಲೆ ಕರಿಗುಡ್ಡ
ಕರೀಗುಡ್ಡದ ಮೇಲೆ ಕುರಿಹಿಂಡು ಮೇಯುತ್ತದೆ (ಇ ೪೩೭)
ಕಾಲು, ಮೈ, ಮೋರೆ, ಕಣ್ಣು, ತಲೆ, ಹೇನು

ಡೊಂಕು ಪಂಕಿನವು ಎರಡು ಆಲದ ಮರ
ಆಲದ ಮರದ ಮ್ಯಾಲೆ ಅಂಬಲಿ ಮಡಕೆ
ಅಂಬಲಿ ಮಡಕೆ ಮ್ಯಾಲೆ ಪಿತಾರ್ ಚೆಂಬು
ಪಿತಾರ್ ಚಂಬಿನ ಮ್ಯಾಲೆ ಗರಿಕೆ ಹುಲ್ಲು
ಗರಿಕೆ ಹುಲ್ಲಿನಲ್ಲಿ ಕುರಿ ಮೇಯ್ತವೆ (ಸು ೨೮೯)
ಕಾಲು, ಹೊಟ್ಟೆ, ತಲೆ, ಕೂದಲು, ಹೇನು (ಮನುಷ್ಯ)

ದೊಣ್ಣೆ ದೊಣ್ಣೆ ಮೆಲೆ ಚರ್ಗಿ
ಚರ್ಗಿ ಮೆಲೆ ಸಿದ್ದಿ
ಸಿದ್ದಿ ಮೆಲೆ ಬೊಳೆ
ಬೊಳೆ ಮೆಲೆ ಕರ್ಡಾ (ಶಾಂ ನಾ ೯೮)
ಕಾಲು–ಹೊಟ್ಟೆ–ಕೊರಳು

ಅಗಟ ಆಲದ ಮರ
ತೊಗಟೆ ಇಲ್ಲದ ಗೋಣಿಮರ
ನೂರೊರ್ಷ ನೀರಲ್ಲಿದ್ರು
ಕರಗದ ಮರ (ನಾ ಗೌ ೧೪)
ಕಾಲು, ಹೊಟ್ಟೆ, ತಲೆ, ತಲೆಗೂದಲು, ಹೇನು

ಕಂಬ
ಕಂಬದ ಮೇಲೆ ಕುಂಭ
ಕುಂಭದ ಮೇಲೆ ಕೊಳಗ
ಕೊಳಗದ ಮೇಲೆ ಮೈದಾನ
ಮೈದಾನದಲ್ಲಿ ಹಸು ಓಡಾಡ್ತದೆ (ಲ ಗೌ ೪೩೪)
ಕಾಲು, ಹೊಟ್ಟೆ, ತಲೆ, ನೆತ್ತಿ, ಹೇನು

ಕಂಬ
ಕಂಬದ ಮೇಲೆ ಗುಂಬ
ಗುಂಬದ ಮೇಲೆ ಬಾಗೂರು
ಬಾಗೂರಿನ ಮೇಲೆ ಮೂಗೂರು
ಮೂಗೂರಿನ ಮೇಲೆ ಕಣ್ಣೂರು
ಕಣ್ಣೂರಿನ ಮೇಲೆ ಕರಿಘಟ್ಟ
ಕರಿಘಟ್ಟದ ಮೇಲೆ ಕುರಿ ಹಿಂಡು (ಸು ೧೯೯)
ಕಾಲು, ಹೊಟ್ಟೆ, ಬಾಯಿ, ಮೂಗು, ಕಣ್ಣು, ತಲೆ, ಹೇನು (ಮನುಷ್ಯ)

ಇಬ್ಬರು ಸಮೀಪ ಹೋದ್ರು
ಹತ್ತು ಜನಾ ಹಿಡಿದು ಬಿಟ್ರು
ಮೂವತ್ತೆರಡು ಜನಾ ತಿಂದ್ರು
ಒಬ್ಬಾವ ಮಾತ್ರ ಸಂತಸಪಟ್ಟ (ವಾಲಿ ೪– ೩೬)
ಕಾಲುಗಳು, ಬೆರಳುಗಳು, ಹಲ್ಲುಗಳು, ನಾಲಿಗೆ

ಉದ್ದನ ಮದ್ದು ಸಾಲು ಬಿದ್ದಾನ
ಎತ್ತೋರಿಲ್ಲ ಕೇಳೋರಿಲ್ಲ (ಇ ೨೧೫೫)
ಕಾಲುದಾರಿ

ಬೀಳ್ತತಿ ಏಳ್ತತಿ ಕಣ್ಣಿಗ್ ನುಣ್ಣಗೆ ಕಾಣ್ತತಿ
ನಿಂತ್ಹತ್ತೇಲಿ ನಿಲ್ಲದಿಲ್ಲ (ಲ ಗೌ ೭೮೦)
ಕಾಲುವೆ ನೀರು

ಕಾಲಲ್ಲಿ ಖಣಾ ಖಣಾ
ಸೊಂಟದಲ್ಲಿ ಝಣ ಝಣಾ (ವಾಲಿ ೩–೧೩೦)

ಉಗಳ ಹಚ್ಚೀ ಒತ್ತೂದು
ಕಣ್ಣ ಮುಚ್ಚಿ ಕುಡಿಯೂದು (ವಾಲಿ ೮– ೫೧)
ಕಾಲುಂಗುರ–ಕಷಾಯ

ಕಾಲಲ್ಲಿ ಖಣಾ ಖಣಾ
ಸೊಂಟದಲ್ಲಿ ಝಣ ಝಣಾ (ವಾಲಿ ೩–೧೩೦)
ಕಾಲುಂಗುರ, ಒಡ್ಯಾಣ

ಉಗಳ ಹಚ್ಚೀ ಒತ್ತೂದು
ಕಣ್ಣ ಮುಚ್ಚಿ ಕುಡಿಯೂದು (ವಾಲಿ ೮–೫೧)
ಕಾಲುಂಗುರ–ಕಷಾಯ

ಕಾಲಲ್ಲಿ ತಣತಣ
ಸೊಂಟದಲ್ಲಿ ಜಣಜಣ
ಗಂಟ್ನಲ್ಲಿ ಪಿಣಿಪಿಣಿ (ರಾ ಗೌ ೧೯೬)
ಕಾಲುಂಗುರ, ಗೆಜ್ಜೆ ಪಟ್ಟಿ (ಡಾಬು), ಕುಪ್ಪೆ

ಉಗಳ ಹಚ್ಚಿ ಒತ್ತೂದು
ಕಾಲೆತ್ತಿ ಹೆಟ್ಟೋದು (ಲಠ್ಠೆ ಭಾಗ ೫೫–೬೭)
ಕಾಲುಂಗ್ರ, ಸುಣ್ಣ

ಹೊಲಾ ಎಲ್ಲಾ ತಿರಿಗಿ ಮೂಲಿ ಹಿಡಿತತಿ (ಲಠ್ಠೆ ಭಾಗ ೫೫–೩೧೨)
ಕಾಲ್ಮರಿ

ಕರಿ ಮಂಚದ ಮೇಲೆ
ಹಾಕುವ ಹಾಸಿಗೆ
ತೆಗೆಯುವ ಹಾಸಿಗೆ (ರಾ ಗೌ ೧೮೨)
ಕಾವಲಿ, ದೋಸೆ

ತಾಯಿ ತಂದೆ ಕರ್ರಗೆ
ಮಗಳು ಬೆಳ್ಳಗೆ
ಮೊಮ್ಮಗಳು ರಜಗೆಂಪು (ಲ ಗೌ ೫೯೭)
ಕಾವಲಿ, ಮುಚ್ಚಳ, ಹಿಟ್ಟು, ದೋಸೆ

ಕರಿಯ ಕುದುರೆಯ ಮೇಲೆ
ಒಬ್ಬರು ಹತ್ತುತಾರೆ ಒಬ್ಬರು ಇಳಿಯುತ್ತಾರೆ (ಲ ಗೌ ೪೦೫)
ಕಾವಲಿ, ರೊಟ್ಟಿ

ಆಕಾಶದ ನಡು
ವೇದದ ಆದಿ
ನಾರಿಯ ಕೊನೆ
ಇವು ಕೂಡಿ ಹರಿಯುವ
ನದಿ ಯಾವದು (ವಾಲಿ ೧–೩೨)

ಆಕಾಶದ ನಡು
ವೇದದ ಆದಿ
ನಾರಿಯ ತಲೆ
ಇವುಗಳ ಸಹಾಯದಿಂದ
ಹರಿಯುವ ನದಿ ಯಾವುದು (ಇ ೧೫೭)
ಕಾವೇರಿ

ಅಪ್ಪೆಯ ಹಣ್ಣು ದುಪ್ಪನ ಬಿತ್ತು
ಹೆಕ್ಕುವವರುಂಟು ತಿನ್ನುವವರಿಲ್ಲ (ಇ ೧೦೯)
ಕಾಸಗದ ಹಣ್ಣು

ಸಾವಿರ ರೂಪಾಯಿನ 'ಎತ್ತು ಒಂದೇ ಹಗ್ಗ' (ಲ ಗೌ ೯೩೭)
ಕಾಸಿನ ಸರ

ಕಿಲಕೀರೆ ನೆಲಪಾತಿ
ಎಲೆಯುಂಟು ಅಗಲವಿಲ್ಲ (ಜೀಶಂಪ ೧೩೧)
ಕಾಸು

ಕಾಳೇಗೌಡ ಮುದ್ದೇಗೌಡ
ಗುದ್ದಾಡಿಕೊಂಡು ಗುಹೆ ಸೇರ್ತಾರೆ (ಲ ಗೌ ೪೪೬)
ಕಾಳು–ಮುದ್ದೆ ಬಾಯಿಗೆ ಸೇರು

ಇದೊಂದು ಮಿಕಾ
ನಾಯಿಯಂಗ ಬಾಲ
ಒಂಟಿಯಂಗ ಗೋಣ
ಆ ಗೋಣ ಮ್ಯಾಲ ಹಸರ ಕೆಂಪ ಬಿಳಿ ಬಣ್ಣ
ಅದು ಹಸ್ತಾಗ ತಿಂತಾದ ಮುಕಳೀಲೆ ಮಣ್ಣ
ಅದರ ಬಾಯಿಲೆ ಬೀಳ್ತಾವ ರತನ (ವಾಲ ೨–೧೧)
ಕಾಳು ತುಂಬಿದ ಜೋಳದ ದಂಟು

ಹೊಟ್ಟೀ ತುಂಬಾ ಕಾಳ
ಬಾಯಿ ಮ್ಯಾಲ ಪರಸಿಕಲ್ಲ (ವಾಲಿ ೩–೧೩೮)

ಹೊಟ್ಟೆ ತುಂಬಾ ಉಂಡರೂ
ಬಾಯಾಗ ಮಣ್ಣು (ಇ ೧೧೦೫)
ಕಾಳು ತುಂಬಿದ ಹಗೆ

ತೆಳ್ಳನ ಪೋರಿಗಿ ಹಿಂದ ಮಲಿ (ವಾಲಿ ೭–೧೬)
ಕಾಳು ಹಸನ ಮಾಡುವ ಮೊರ

ಸೊಂಡಿ ಮೂಗಪ್ಪ
ತಲಿಲೆ ನೀರ ಕುಡೆಪ್ಪ (ಲಠ್ಠೆ ಭಾಗ ೫–೨೮೪)
ಕಿಟ್ಟಲಿ

ಚಿಕ್ಕ ಚಿಕ್ಕ ಪೆಟ್ಟಿಗೆ
ಚಿನಾಲಿ ಪೆಟ್ಟಿಗೆ
ಮಕ್ಕಳ ಕಂಡರೆ ಅಳಿಸುವ ಪೆಟ್ಟಿಗೆ (ಲ ಗೌ ೫೩೯)
ಕಿತ್ತಲೆ ಹಣ್ಣು

ಚಿಕ್ಕ ಚಿಕ್ಕ ಪೆಟ್ಟಿಗೆ
ಪೀಯಾನ ಪೆಟ್ಟಿಗೆ
ಮಕ್ಕಳ ಕಂಡಲ್ಲಿ ಅಳಿಸೋ ಪೆಟ್ಟಿಗೆ (ಇ ೫೨೭)
ಕಿತ್ತಳೆ ಹಣ್ಣು

ಅಂಕಡೊಂಕದ ಭಾವಿ
ಶಂಕಚಕ್ರದ ಭಾವಿ
ಹೊಕ್ಕು ನೋಡಿದರ ಮುಕು ನೀರಿಲ್ಲ ಅರಲೈತಿ (ಇ ೧೯)

ಅಂಕಡೊಂಕದ ಭಾವಿ
ಹೊಕ್ಕ ನೋಡಿದ್ರ ಮುಕ್ಕ ನೀರಿಲ್ಲ (ಲಠ್ಠೆ ಭಾಗ ೧–೫)

ಅಂಕುಡೊಂಕಾದ ಬಾವಿ
ಶಂಕ ಚಕ್ರದ ಬಾವಿ
ಹಣಕಿ ನೋಡಿದರೂ ತುಣುಕು (ಚಂ ಸೆ ೨೧)

ಅಂಕು ಡೊಂಕು ಬಾವಿ
ಶಂಕ ಚಕ್ರದ ಬಾವಿ
ಬೊಮ್ಮಯ್ಯ ಕಟ್ಟಿಸಿದ ಬಾವಿ
ಇಣಕಿ ನೋಡಿದರ ಒಂದು ತೊಟ್ಟು ನೀರಿಲ್ಲ (ವಾಲಿ ೪– ೫)

ಅಂಕು ಡೊಂಕು ಬಾವಿ
ಶಂಕು ಚಕ್ರದ ಬಾವಿ
ಬೊಮ್ಮಯ್ಯ ಕಟ್ಟಿಸಿದ ಬಾವಿ
ಇಣಿಕಿ ನೋಡಿದರೆ ಒಂತೊಟ್ಟು ನೀರಿಲ್ಲ (ಸು ೬೦)

ವಕ್ಕರ ಬಕ್ಕರವಾದ ಬಾವೀಲಿ ಒಂದು ತೊಟ್ಟೂ ನೀರಿಲ್ಲ (ಲ ಗೌ ೮೯೭)

ಶಂಖ ಚಕ್ರದ ಭಾವ್ಯಾಗ
ಮೂರು ಮೂಲಿ ಭಾವ್ಯಾಗ
ಗುಬ್ಬಿ ಕುಡದೇನೆಂದರೆ ನೀರಿಲ್ಲ (ಇ ೯೨೦)

ಶಂಖದ ತರ ಬಾವಿ
ಬಗ್ಗಿ ನೋಡಿದರೆ ಒಂತೊಟ್ಟು ನೀರಿಲ್ಲ (ಸು ೪೪೯)

ಕಿವಿ

ತೊಗಲು ತೊಟ್ಟಿಲ್ದಾಗ ಮಗು ಜೋಲಾಡತೈತಿ (ಇ ೫೯೬)

ಕಿವಿ ಓಲೆ

ಸಣ್ಣ ಗಡಿಗೇಲಿ ಪಿನ್ ಪಲ್ಯ (ಲ ಗೌ ೯೦೪)

ಕಿವಿಯ ಗುಗ್ಗೆ

ಅಂಗಣಿ ಕುಡಿಕೇಲಿ
ಇಂಗಣಿ ಮದ್ದು (ರಾ ಗೌ ೫೪)

ಕಿವಿಯೊಳಗಿನ ಗುಗ್ಗೆ

ಒಂದು ಬಿದಿರು ಒಡೆದು ಒಂಬತ್ತು ಮನೆ ಕಟ್ಟಿ
ಚಾಟಿ ಕಟ್ಟಿ ಚದುರಂಗ ಕಟ್ಟಿ
ನೋಡೋಕೆ ಬಂದು ನೇತ್ಹಾಕಿಕೊಂಡ್ರು (ಲ ಗೌ ೩೦೫)

ಕೀಚುಬಾಲದ ಹಕ್ಕಿ (ಕೂಳಿ)

ಕೀಳು ಮೇಲಾಗಿ ಮೇಲು ಕೀಳಾಗಿ
ಭೂಮಿಗೆ ಮುಟ್ಟದೆ
ಮುಗಿಲು ಮುಟ್ಟದೆ
ಮಧ್ಯದಲಿ ವಾಸಿಸುವ ನಾನಾರು? (ರಾ ಗೌ ೨೦೪)

ಕೀಚುಬಾಲದ ಹಕ್ಕಿ (ತೊಲಿಹಕ್ಕಿ)

ಕುರಿ ಕುಯ್ತಾ
ಅದರ ಬಾಡು ಬೇಯ್ತಾ
ಅದು ಎದ್ದು ಮೇಯ್ತಾ (ರಾ ಗೌ ೨೧೧)

ಕೀರೆ

ಅತ್ತ ಕೊಂಟು
ಇತ್ತು ಕೊಂಟು
ನಿಮ್ಮಪ್ಪನ ತಲೆ ಕೊಂಟು (ರಾ ಗೌ ೧೯)

ಒಂಟೊಂಟು ಓಡೀನ ಕೊಂಟು
ನಿಮ್ಮತ್ತೆ ತಲೆಕೊಂಟು (ಜಿಶಂಪ ೧೦೧)

ಕೀರೆಗೆಡ್ಡೆ

ಒಬ್ಬ ಬಚ್ಚಾಲಿಯ ಮುಂದಲೆಯನ್ನು
ಮೂವತ್ಮೂರು ಸಾರಿ ಕೊಯ್ದರೂ
ಅವಳ ಮಾಸು ನಮ್ಮ ಗಂಟಲಲ್ಲಿ (ರಾ ಗೌ ೧೫೮)

ಕುರಿ ಕುಯ್ಯುತ್ತೇ
ಬಾಡು ಬೆಯ್ಯುತ್ತೇ
ಕುರೋಗಿ ಮಾಳ್ದಲ್ಲಿ ಮೇಯುತ್ತೇ (ಮಂ ೧.೪–೩೭)

ಕೀರೆಸೊಪ್ಪು

ಈಟೀಟ ಹುಡುಗ ಬಾಗಿಲ ಕಾಯತೈತಿ (ಇ ೨೦೮)

ಎದೆಯ ಮೇಲೆ ಕಣ್ಣುಂಟು
ಕೈಯನ್ನೇ ನುಂಗುವದುಂಟು
ಕಾಯುತಿರುವೆ ನಿಮ್ಮ ಗಂಟು (ವಾಲಿ ೩–೮೩)

ಕಣ್ಣಿದೆ ಹೊಟ್ಟೆಯ ಮೇಲೆ
ಕೈಯನ್ನೇ ನುಂಗುತಿದೆ
ತಲೆಯ ಮೇಲೆ ಕಮಾನವಿದೆ
ಹೊಟ್ಟೆಯಲ್ಲಿ ಕಲ್ಲುಗಳಿವೆ
ಸಿರಿವಂತರ ಗೆಳೆಯ ನಾನಾರು ಹೇಳಿ (ವಾಲಿ ೩– ೬೦)

ಕೈ ಹಾಕಿದರೆ ಬಾಯಿ ಬಿಡತೈತಿ (ವಾಲಿ ೩–೧೦೫)

ಚಿಟಗುಬ್ಬಿ ಮಠಾ ಕಾಯ್ತೈತಿ (ಇ ೫೨೯)

ಮಾಟ ನನ ಮಗ ಮನಿ ಕಾಯ್ತತಿ (ಲಠೈ ಭಾಗ ೫–೨೪೬)

ಮಾಟನ್ನ ಮಗು ಮನೆ ಕಾಯುವುದು (ಇ ೮೪೦)
ಕೀಲಿ

ಎದೆಯ ಮೇಲೆ ಕಣ್ಣುಂಟು
ಕೈಯನ್ನೇ ನುಂಗುವುದುಂಟು
ತಲೆಯ ಮೇಲೆ ಬಾಲ ಉಂಟು
ಹೊಟ್ಟೆಯಲ್ಲಿ ಹಲ್ಲು ಉಂಟು
ಕಾಯುತಿರುವೆ ನಾನು ಗಂಟು
ಹಾಗಾದರೆ ನಾನು ಯಾರು (ಇ ೨೩೭)
ಕೀಲಿಕಾಯಿ

ಯಾಕ್ರಿ ಮಂತ್ರಿ
ಸಿಗಿಸಿಗೊಂಡ ನಿಂತ್ರಿ (ಲಠೈ ಭಾಗ ೫–೨೬೧)
ಕೀಲಿ, ಕೀಲಿ ಕೈ

ಉಡದಾರ ಕೆಳಗೆ
ಉದ್ದಂದ ಜೋತಾಡ್ತದ (ಲಠೈ ಭಾಗ ೫–೬೮)

ಉಡದಾರ ಕೆಳಗ
ಉದ್ದಾಂದು ಜೋತಾಡತೈತಿ (ವಾಲಿ ೮– ೫೦)

ಯಾಕೋ ಮಂತ್ರಿ
ಸಿಗಿಸಿಕೊಂಡು ನಿಂತ್ರಿ (ಇ ೮೯೫)

ಯಾಕ್ರೀ ಮಂತ್ರಿ
ಸಿಗಸಗೊಂಡು ನಿಂತ್ರೀ (ವಾಲಿ ೮–೧೧)
ಕೀಲಿ ಕೈ

ರಾಜಾನ ಗುಡ್ಡದ ಮ್ಯಾಲ
ತೇಜಪ್ಪನ ಗಿಡಾ ಹುಟ್ಟಿ
ಬೀಜಾ ಉದರ್ತದ ಹೂವಾ ಉದರಲ್ಲ (ಲಠ್ಠೆ ಭಾಗ ೫–೨೬೪)

ಕುಕ್ಕ (ಕಸದ ಗಿಡ)

ಮೆಲ್ನೋಡ್ತದೆ ಮಣ್ ಕಪ್ತದೆ (ಶಾಂ ನಾ ೩೦೨)

ಕುಟಾರಿ

ಅಗೀತಿದ್ ಹುದೀತೀದ್ ಹೊನ್ಬಂಚಿಂಗಾ (ಶಾಂ ನಾ ೩೦೩)

ಕುಟಾರೆ

ಒಂಟಿ ಗೋಡಿನ ಎಮ್ಮಿ
ಭೂಮಿಯೆಲ್ಲಾ ತಿರುಗಾಡಿ ಬರತೈತಿ (ಇ ೨೬೭)

ಭತ್ತಕ್ಕೆ ಒಬ್ಬ ಅಣ್ಣ (ರಾ ಗೌ ೩೭೭)

ಕುಡಗೋಲ

ಅಂಕಡೊಂಕಣ್ಣ ಬುರ್ ಬುಸ್ಸಣ್ಣಾ
ಹೋಗೂನ ಬಾ ಬಸವಣ್ಣಾ
ಕಡಿಯೂನು ಬಾ ಕೆಂಚಣ್ಣಾ (ಇ ೨೦)

ಕಾನಿಗೆ ಹೋಗುವೆ
ಕರಚಂಡಾಡುವೆ
ಒಡತಿ ಕಂಡಲ್ಲಿ
ಸಿಡಿಸಿಡಿದು ಬೀಳುವೆ (ಇ ೩೮೧)

ಕುರ್ ಕುರ್ ಮೇಯ್ತದೆ ಕುಳ್ಳೆ ಹಾಕಾಕೆ ಪುಟ್ಟಿಯಿಲ್ಲ (ಲ ಗೌ ೪೫೪)

ಹೊಲಾ ಎಲ್ಲಾ ಮೇದು ಬಂದರೂ
ಮಲಗಿದಲ್ಲಿ ಸಗಣಿ ಇಲ್ಲ (ವಾಲಿ ೩–೭೦)

ಕುಡಗೋಲು

ಊರ ಸುತ್ತ ಮೇಯ್ಕೊಂಡು ಬತ್ತದೆ
ವರ್ಸಕೊಂದು ಸಾರಿ ನೀರು ಕುಡೀತದೆ (ಸು ೧೦೬)

ಬೆಳಗಿನಿಂದ ಸಂಜೇವರೆಗೂ ಊರಿನ ಹೊಲ ಮೇದರೂ
ರಾತ್ರಿ ಹೊತ್ತು ಹಿಕ್ಕೆ ಹಾಕೊಲ್ಲ (ಲ ಗೌ ೭೮೮)

ಕುಡಲು

ಒಂದೆತ್ತು ಅನ್ನೆರ್ಡ ಇಳವಾರ
ಉಚ್ಚೇನು ವುಯ್ಯಲ್ಲ
ತೊಪ್ಪೇನು ಇಕ್ಕಲ್ಲ (ಮಂ ೧.೫–೩೯)
ಕುಡುಗಲು

ಬಣವ್ಯಾಗ ಬಡಬಡಸತೈತಿ
ಕೆರಿಯಾಗ ಕೆಕ್ಕರಸತೈತಿ
ಗುಡಿಯಾಗ ಗುಡಗುಡಸತೈತಿ (ಇ ೭೧೯)
ಕುಡುಗೋಲು, ಕಪ್ಪೆ, ತೆಂಗಿನಕಾಯಿ

ಅಕ್ಕನ ಮನ್ಯಾಗ ದೀಪ ಹಚ್ಚಿದರ ತಂಗಿ ಮನ್ಯಾಗ ಬೆಳಕ ಬಿತ್ತು (ಇ ೮)
ಕುಡಿ ಒಲಿ

ಮೀಸ್ಯಾಗ ಮೀಸಿ ಯಾವ ಮೀಸಿ (ಲಠೈ ಭಾಗ ೫–೨೪೮)
ಕುಡಿ ಮೀಸಿ

ಊರಿನ ಸುತ್ತ ಮೇಯುತ್ತೆ
ಅದು ಮಲಗಿದ್ತಾವ ಸಗಣಿ ಇಲ್ಲ (ಜೀಶಂಪ ೭೩)

ಹಗಲೆಲ್ಲ ತಿರುಗುತ್ತೆ
ರಾತ್ರಿಯೆಲ್ಲ ಮಲಗುತ್ತೆ (ಜೀಶಂಪ ೨೮೧)
ಕುಡಿಲು

ಕಂಡುಗ ಗದ್ದೆಗೆ ಆರು ರೂಪಾಯಿ ಕಂದಾಯ
ಮಡ್ಲಿಗೆ ಏನು ಬಿತ್ತು (ಲ ಗೌ ೪೩೦)
ಕುಡ್ಲು

ಬತ್ ಮರ್ನ ಮನೆ ಬಸಪ್ಪ ಕುಣೀತೀದ (ಶಾಂ ನಾ ೨೦೪)
ಕುಡ್ಲೆ

ಜಾಣಿ ಜಾಣಿರ ಕೂಡಿ ಜಂತಿ ಇಲ್ದ ಮನಿಕಟ್ಟಿ
ನೀ ಒಳಗ ನಾ ಹೊರಗ (ಲಠೈ ಭಾಗ ೫–೧೬೪)
ಕುಣಿ

ನಿಂಗನಗೌಡನ ಮಗ
ನಿಂತಲ್ಲೆ ನಿದ್ದಿ ಮಾಡತಾನ (ಲಠೈ ಭಾಗ ೩–೫೦)
ಕುದರಿ

ಕೊಟಗ್ಯಾನ ಪಾರ
ಲಟಕಿ ಹೊಡಿತೈತಿ (ವಾಲಿ ೫–೩೮)
ಕುದಿಯುವ ನುಚ್ಚು

ತಾಯಿ ಚೆಲುವಿ
ತಾಯಿಗಿಂತ ಮಗಳು ಚೆಲುವಿ (ಇ ೫೭೬)
ಕುದುರಿ, ಮರಿ

ಈ ಲೋಕದಾಗ ಮೂರು ವಸ್ತು ಇಲ್ಲ (ಇ ೨೧೧)
ಕುದುರಿಗೆ ಕೋಡು ಇಲ್ಲ, ಅಂಗೈಗೆ ಕೂದಲಿಲ್ಲ, ಮುಗಿಲಿಗೆ ಕಂಬ ಇಲ್ಲ

ನಿಂಗನಗೌಡನ ಮಗ
ನಿಂತಲ್ಲೆ ನಿದ್ದೀ ಮಾಡ್ತಾನ (ಇ ೬೭೮)
ಕುದುರೆ

ತಂದವ್ನೆ ಬಂದವ್ನೆ ಕಾಲೆತ್ತವ್ನೆ ಮೇಲತ್ಯವ್ನೆ
ನನ್ನಂಗ ಮುಚ್ಚಿಕೊಂಡವ್ನೆ (ಲ ಗೌ ೫೯೧)
ಕುದುರೆ–ಸವಾರ

ಕುಣ್ಯಾಗಿನ ಪಾರ ಕುಣಕುಣದ ನೋಡ್ತತಿ (ಲಠೈ ಭಾಗ ೪–೭೫)
ಕುದ್ಯೋನುಚ್ಚ

ಉಂದ ಉಸ್ತಾ ಒಬ್ಬೊಬ್ರ ಕೋಡೆ ಉಂದುಂದ್ಬಣ್ಣಾ (ಶಾಂ ನಾ ೯೯)

ಕರಿಗುಡ್ಡೆಮನೆ ಉಂದ್ರಾಸುಲ್ಲ (ಶಾಂ ನಾ ೧೦೦)
ಕುಲ್ಲ

ಹೋತ್ಯಾ ಪುಟ್ಟಾ ಬತ್ಯಾ ಪುಟ್ಟಾ
ಪುಟ್ಟ ಹೆಜ್ಜಿಗೆ ನೀರ್ಹಾಕ್ವರಿಲ್ಲಾ (ಶಾಂ ನಾ ೩೩)
ಕುನ್ನೆ

ಸುತ್ತೆಲ್ಲಾ ಹೆಂಗಸರು
ಸಂದ್ಯಾಗ ಗಂಡಸರದು (ವಾಲಿ ೮–೩೬)
ಕುಪ್ಪಸದ ಕಂಕುಳ ಅರಿವೆ (ಪ್ಯಾರಿ)

ಅಂದಕಾಯಿ ಚೆಂದಕಾಯಿ
ಬೆಂಕೀಲೆ ಬೆಂದಕಾಯಿ
ಜಾಣರುಡಗ ತಂದಕಾಯಿ
ಜಾಣರುಡಗ ಮುಡಿದ ಕಾಯಿ (ಲ ಗೌ ೧೩೧)
ಕುಪ್ಪಿಗೆ

ಸುತ್ತೆಲ್ಲ ಹೆಂಗಸಿಂದು
ಸಂದ್ಯಾಗ ಗಂಡಸಿಂದು (ಇ ೯೬೨)
ಕುಬುಸದಲ್ಲಿಯ ಕೊಂಕುಳರಿವೆ

ಸಾಲಾಗಿರುವ ಮನೆಯಲ್ಲಿ
ಇಬ್ಬರು ಗೆಳ್ತ್ಯಾರು ಬಿಳಿಸೀರೆ
ಉಟ್ಟು ಬಗ್ಗಿ ಬಗ್ಗಿ ನೋಡ್ತಾರೆ (ಇ ೯೩೬)
ಕುರಡಿ ಕುಕಾರಿ ಕೀಟ

ಕಗ್ಗಳದ ಕಂಬ್ಳಿ ನೆಂಟ
ಒಪ್ಪೊತ್ತಿನಲ್ಲಿ ಹೊಂಟ (ರಾ ಗೌ ೧೬೧)
ಕುರಿ

ಅಂಗಾಲ್ಮೆಲ್ಮಾಡಿ ನೀರ್ಕುಡಿವಾತಾ
ಸುಂಗಾರ್ಬತ್ತದೆ ವಾರಿಯಾಗುತ್ತ
ನಿಂಗೆರ್ ಹೇಳಿದ್ರೋ ಜಿಂಗಿಲ್ಲಾದಾತಾ (ಕೊರಳಿಲ್ಲಾದಾತಾ)
ನಂಗೊಬ್ಬೇಳ್ದಾ ತಲಿಯಿಲ್ಲಾದಾತಾ (ಕರುಳಿಲ್ಲದಾತಾ) (ಶಾಂ ನಾ ೩೪)
ಕುರಿ–ಆನೆ

ಈಟ ಪಾರ
ತೊಟ್ಲ ಬಡ್ದಾ್ಯಗ ಇರತತಿ (ಲಠ್ಠೆ ಭಾಗ ೫–೬೪)
ಕುರಿಪಿ

ಕಲ್ಲು ಕೊಟಾರ
ಕಬ್ಬಿಣದ ಮೇಟ
ಒಕ್ಕೋರುಂಟು
ತೂರೋರು ಇಲ್ಲ (ಸು ೧೯೨)

ಕಲ್ಲು ಕೊಟಾರ ಕಟ್ಟಿ
ಕಬ್ಬಿಣದ ಮೇಟ ಹಾಕಿ
ಒಕ್ಕೆ ತೂರಿ
ಗಟ್ಟ ಬಿಟ್ಟು ಜೊಳ್ಳು ತುಂಬಿಕೊಂಡು ಹೋದ (ಸು ೧೯೩)
ಕುರಿಬಂಡ

ಅಲ್ಲಿ ಬುಳುಬುಳು
ಇಲ್ಲಿ ಬುಳುಬುಳು
ಕಲ್ಯಾಣತನಕ ಬುಳುಬುಳು
ಕುರಿಯ ಹಿಕ್ಕೆ (ವಾಲಿ ೧–೪೬) (ವಾಲಿ ೭–೪)

ಅಲ್ಲಿ ಪುಳುಪುಳು ಇಲ್ಲಿ ಪುಳುಪುಳು
ಶೃಂಗೇರಿ ತನಕ ಪುಳು ಪುಳು (ಲ ಗೌ ೮೭)
ಕುರಿಹಿಕ್ಕೆ

ಮುಂಗಾಲ ಮುಂದೂರಿ ನೀರ ಕುಡಿತಾನ
ಮೂಗಿಲ್ಲದವ ಬರುವ ನೀನತ್ತ ಸಾರು
ನಿನಸಾರು ಹೇಳಿದರೋ ತಲ್ಲೆ ಇಲ್ಲದಾತ
ನನಗೊಬ್ಬ ಹೇಳಿದನು ಕಿವಿ ಇಲ್ಲದಾತ (ಇ ೮೯೦)
ಕುರಿ–ಹುಲಿ, ಏಡಿ–ಕಪ್ಪೆ

ಈಟ ಮಗ ತ್ವಾಟಾನೆಲ್ಲಾ ತಿರಗತಾನ (ಇ ೧೯೬)
ಕುರುಚಿಗಿ

ಚೋಟ ಪಾರಾ
ತ್ವಾಟೆಲ್ಲಾ ತಿರಗತಾದ (ವಾಲಿ ೩–೪೪)

ತುಂಟ ಪಾರಾ ತ್ವಾಟೆಲ್ಲ ಓಡಾಡತಾನ (ವಾಲಿ ೩–೧೦೯)
ಕುರೂಪಿ

ಹೆಂಗಸಿಲ್ದ ಹೂಂಕರಸತಾನ (ಲಠ್ಠೆ ಭಾಗ ೫–೩೦೭)
ಕುರುಬು ನೇಕಾರ

ಅಕ್ಕ ಅಕ್ಕ ತಂಗೇರು
ನಾವೆರಡು ಕುಲದವರು
ಆಡುವ ಮಕ್ಕಳ ನೆರುವರಿಗೆ ಕೊಟ್ಟು
ಬರೀ ತೊಟ್ಟಿಲ ತೂಗುವರು (ನಾ ಗೌ ೨)
ಕುರುಂಬಳೆ (ತೆಂಗಿನಕಾಯಿ ಗೊನೆ)

ಅಜ್ಜ ತೊಟ್ಲು (ಶಾಂ ನಾ ೩೦೦)

ತೊಡೆಯ ಮೇಲೆ ಕೂಡ್ರಿಸುತ್ತೇನೆ ತಾಯಿ ನಾನಲ್ಲ
ನಾಲ್ಕು ಕಾಲುಗಳು ನನಗಿವೆ ಪಶು ನಾನಲ್ಲ
ಎರಡು ಕೈ ನನಗುಂಟು ಮನುಷ್ಯ ನಾನಲ್ಲ (ಚಂ ಸೆ ೧೪೦)

ನಾಲ್ಕು ಕಾಲುಗಳುಂಟು ನಡೆ ಬಾರದೆನಗೆ
ಕಾಲುಗಳ ಮೇಲುಗಡೆ ಉಂಟೊಂದು ಹಲಗೆ
ಬೆನ್ನೊಂದು ಕೈಯೆರಡು ನೋಡು ಮಗು ನನಗೆ
ನನ್ನಲ್ಲಿ ಬಂದರೆ ದಣಿವಾರುವುದು ನಿನಗೆ (ಚಂ ಸೆ ೧೫೭)

ನಾಲ್ಕು ಕಾಲುಗಳುಂಟು ಮೃಗವಲ್ಲ
ಎರಡು ಕೈಯುಂಟು ಮಾನವನಲ್ಲ
ಒರಗಲುಂಟು ಹಾಸಿಗೆಯಲ್ಲ
ಇದ ಹೇಳ ಬಲ್ಲವನಿಗೆ ಅರಿದಲ್ಲ (ಸು ೩೩೫)

ನಾಲ್ಕು ಕಾಲುಂಟು ನಾ ನಡೆಯಲಾರೆ
ಎರಡು ಕಯ್ಯುಂಟು ನಾ ದುಡಿಯಲಾರೆ
ಮೇಲೇರಿ ಕುಳಿತರೆ ನಾ ಬೇಡವೆನಲಾರೆ (ಶಾಂ ನಾ ೩೦೧)

ನಾಲ್ಕು ಕಾಲುಂಟು ಪ್ರಾಣಿಯಲ್ಲ
ಎರಡು ಕೈಗಳುಂಟು ಮನುಷ್ಯನಲ್ಲ
ಜನರು ಸವಾರಿ ಮಾಡುತ್ತಾರೆ ಕುದುರೆ ಅಲ್ಲ
ನನ್ನಲ್ಲಿ ಸುಖ ಪಡುವವರು ಅನೇಕರು
ಹಾಗಾದರೆ ನಾನು ಯಾರು (ರಾ ಗೌ ೩೦೭)

ಕುರ್ಚಿ

ಈಟ್ಕೈತಿ ಆಟ್ಕೈತಿ
ಬಾಳೇ ಮಾಡಕ ಗಟ್ಕೈತಿ (ಇ ೨೧೦)

ಕುರ್ಚಿಗಿ

ಗಬ್ಬದ ಕುದುರೆ
ದಿಬ್ಬ ಹತ್ತಲಾರದು (ಸು ೨೪೪)

ಮೊಟ್ಟೆ ಕೋಳಿ ಬೆಟ್ಟ ಹತ್ತಲಾರದು (ಸು ೪೩೧)

ಕುರ್ಜು

ಕಣ್ಣಿದಾಗ ಕಣ್ಣಿ ಯಾವ ಕಣ್ಣಿ (ಲಠ್ಠೆ ಭಾಗ ೫–೧೦೬)

ಆಯಿದಾಗ ಆಯಿ
ಯಾವ ಆಯಿ (ಲಠ್ಠೆ ಭಾಗ ೫–೫೦)

ಕೊಳ್ಳಾಗ ಎರಡು ಕಾಲು
ತಲಿಮ್ಯಾಲ ಒಂದು ಮೂಗು (ಇ ೪೨೬)

ಕೊಳ್ಳಾಗ ಎರಡು ಬಾಲ
ತಲಿಮ್ಯಾಲೊಂದು ಮೂಗ (ವಾಲಿ ೭–೧೩)

ಕುಲಾಯಿ

ಛೀ ಛೀ ರಂಡೆ
ಕೈಯೆಲ್ಲ ಹರಕೊಂಡೆ
ಹಸರ ಕುಬುಸದ ಮ್ಯಾಲ ಬಂಗಾರ ಗೊಂಡೆ (ಇ ೫೪೫)
ಕುಸಬಿ ಹೂ

ಮುತ್ತಿನಂತಾ ಮಗಾ ಮುಳ್ಳಾಗ ಬಿದ್ದಾನ (ಲಠ್ಠೆ ಭಾಗ ೫–೨೫೦)

ಮುತ್ತಿನಂಥಾ ಮಗಾ ಮುಳ್ಳಾಗ ಬಿದ್ದಾನ (ಇ ೮೫೭)
ಕುಸುಬಿ

ಹದಿನಾರು ತಿದ್ದಿಯವಳು
ಎಂಟು ಕುಬುಸುದವಳು
ಹಿಡಿದರ ಗಸಗ್ಗನ ತಿವಿತಾಳ (ಇ ೧೦೧೦)

ಹಸರ ಕೋಳಿ ಮುಳ್ಳಾಗ ತತ್ತಿ ಹಾಕತೈತಿ (ವಾಲಿ ೨–೨೯)
ಕುಸುಬಿ ಗಿಡ

ಸೊಲ್ಲಾಪುರ ಸಡಕ
ಅದು ಬಹಳ ಕಡಕ
ಮುತ್ತಿನ ಚೆಂಡ ಮುಳ್ಳಿನ ಬೇಲಿ (ವಾಲಿ ೨–೭೪)
ಕುಸುಬಿ ಪೆಂಟ

ಛೀ ಏಳ ರಂಡೆ
ಮೈಯೆಲ್ಲಾ ಹರಕೊಂಡೆ
ಹಸಿರ ಕುಬಸದ ಮ್ಯಾಲ ಬಂಗಾರಗೊಂಡೆ (ವಾಲಿ ೨–೯೦)

ಛೀ ಛೀ ರಂಡೆ
ಮೈಯೆಲ್ಲಾ ಹರಕೊಂಡೆ
ಹಸರ ಕುಬಸದ ಮ್ಯಾಲ ಬಂಗಾರ ಗೊಂಡೆ (ವಾಲಿ ೨–೧೧೨)
ಕುಸುಬಿ ಹೂವು

ಮುತ್ತಿನಂತ ಕೋಳಿ
ಮುಳ್ಳಲೋಗಿ ಮೊಟ್ಟೆ ಇಡುತ್ತೆ (ಮಂ ೨.೧–೨೩)
ಕುಸುಬೆ (ಒಂದು ಬಗೆಯ ಹೂ)

ತಲಿ ಹಿಡೀಲಾಕ ಹೋದರ ಕಡೀತೈತಿ
ಕಾಲ ಹಿಡದರ ಸುಮ್ಮನಾಗತೈತಿ (ವಾಲಿ ೨–೩೫)
ಕುಸುಬೆ ಗಿಡ

ಕಣ್ಣಾಗ ಕಣಾ ಯಾವ ಕಣಾ (ಲಠ್ಠೆ ಭಾಗ ೫–೧೦೮)
ಕುಸ್ತಿಕಣ

ಆನಿ ಹೊಟ್ಯಾಗ ಅರವತ್ತ ರೊಟ್ಟಿ (ಲಠ್ಠೆ ಭಾಗ ೫–೪೭)

ಆನಿ ಹೊಟ್ಟಾ್ಯಗ ಅರವತ್ತು ಮಕ್ಕಳು (ವಾಲಿ ೩–೯೫)

ಆನಿ ಹೊಟ್ಟೇಲಿ ಅರ್ವತ್ತ ಮಕ್ಕಳ (ಲಠ್ಠೆ ಭಾಗ ೫–೪೫)
ಕುಳಬಾನ

ಆನಿ ಹೊಟ್ಟಾ್ಯಗ ಅರವತ್ತು ಮಕ್ಕಳು (ವಾಲಿ ೩–೩೮)
ಕುಳಬಾನ (ಬೆರಣಿಗಳ ಒಟ್ಟಲು)

ಬೆನ್ನಿನ ಮೇಲೆ ಬೇರಿಳಿದವಳೇ
ಮೊಳಕಾಲಿಗೆ ಮೊಲೆ ತಾಗಿದವಳೇ (ವಾಲಿ ೭–೨೨)
ಕುಳಿತು ಎರೆದುಕೊಳ್ಳುವ ಸ್ತ್ರೀ

ಬೆನ್ನಿನ ಮೇಲೆ ಬೇರಿಳಿದವಳೇ
ಮಳಕಂಡಗೆ ಮೊಲೆ ತಾಗಿದವಳೇ (ಶಾಂ ನಾ ಅನುಬಂಧ ೫೨)
ಕುಳಿತು ತಲೆ ಸ್ನಾನ ಮಾಡುತಿರುವ ಸ್ತ್ರೀ

ಹರ್ಕ ದೇವಸ್ತಾನ ಹೊಕ್ದಂದಾ ಹೆರ್ಗಬರಾ
ಸಂದ್ಯೂ ಕರಕರನೆ ಮೇಯುತ್ತದೆ (ಶಾಂ ನಾ ೩೦೫)
ಕುಳೆ

ಆನಿ ಹೊಟ್ಯಾಗ ಅರವತ್ತು ಮಕ್ಕಳು (ಇ ೧೭೨)

ಒಟ್ಟಿದ ಬಣವೆ ಸುಟ್ಟರೆ ಪುಣ್ಯ (ಇ ೨೬೯)

ಕುಳಬಾನ ಅಥವಾ ಹಲಸಿನ ಹಣ್ಣು
ಕುಳ್ಳಿನ ಗೂಡು

ಕೈರೊಟ್ಟೀ ಬಡದು ಗ್ವಾಡಿಗಿಟ್ಟು
ರೊಟ್ಟಿ ಮುರುದು ರೊಟ್ಟೀ ಸುಡತಾರ (ಇ ೪೨೩)
ಕುಳ್ಳು

ಕೈರೊಟ್ಟಿ ಮಾಡಿ ಗ್ವಾಡಿಗಿಡತಾರ
ಈರೊಟ್ಟಿ ಮುರದು ರೊಟ್ಟಿ ಸುಡತಾರ (ವಾಲಿ ೩–೯೮)
ಕುಳ್ಳು

ಸಂದ್ಯೂ ಕರಕರನೆ ಮೇಯುತ್ತದೆ
ಕುರಿ ತಿಕದಲ್ಲಿ ಮೂರು ಹಿಕ್ಕೆಯಿಲ್ಲ (ಲ ಗೌ ೯೨೬)

ಕೂಗತ್ತಿ

ಇಜ್ಯಾಪುರ ಗುಡ್ಡದಮ್ಯಾಲ
ಇಪ್ಪತ್ತಚೀಲಾ ನವಣಿ
ನಿಮ್ಮಪ್ಪನ ಅಪ್ಪ ಬಂದರೂ
ಲೆಕ್ಕ ಹತ್ತಲ್ಲ (ಲಠೈ ಭಾಗ ೧–೮)

ಕಪ್ಪತ ಗುಡ್ಡದ ಮ್ಯಾಲ
ಇಪ್ಪತ ಸೇರ ನವಣಿ ಬಿತ್ತೇತಿ
ಕೋದ ಕೊಯ್ಯತೇವು
ಚಿಗದಾ ಚಿಗತತಿ (ಲಠೈ ಭಾಗ ೧–೨೫)

ಕೂದಲ

ಅಟ್ಟರೆ ಬೇಯೊಲ್ಲ ಸುಟ್ಟರೆ ಬೇಯುತ್ತೆ (ಲ ಗೌ ೩೩)

ಅಳ್ದಲ್ಲೊಬ್ಬ ಕುಳ್ಳ ಕುತ್ಗಂಡು
ಬಂದ್ ಬಂದ್‌ವರಿಗೆಲ್ಲ ಸವಾಲೊಡ್ತಿದ್ದ (ಮಂ ೧.೧–೪)

ಆಸರ ಬಳ್ಳಿ ಸಾಸಿರ ಬಳ್ಳಿ
ನೀರಾಗಿಟ್ಟರ ಕೊಳೆಯದ ಬಳ್ಳಿ (ವಾಲಿ ೪–೩೨)

ಆಸರ ಬಳ್ಳಿ ಸಾಸಿರ ಬಳ್ಳಿ
ನೀರೊಳಗಿಟ್ಟರೆ ಕೊಳೆಯದ ಬಳಿ (ವಾಲಿ ೪–೪೬)

ಆಸರೇ ಬಳ್ಳಿ ಸಾಸಿರ ಬಳ್ಳಿ
ನೀರಲ್ಲಿ ಒಗದರೆ ಕೊಳೆಯದ ಬಳ್ಳಿ (ಇ ೧೮೨)

ಕಟ್ಟಿದರ ಗಂಟು
ಹೆಣೆದರ ಹಾವು (ಇ ೩೮೦)

ಕಡಿದರೆ ಬಾಡೋ ಗಿಡವಲ್ಲ
ನೆಟ್ಟರೆ ಚಿಗರೋ ಗಿಡವಲ್ಲ (ಸು ೧೬೯)

ಕತ್ತಿಗೆ ಹರೀತೈತಿ ಮತ್ತೆ ಬರತೈತಿ (ಇ ೩೨೪)

ಕಪ್ಪಾಗಿ ಬರ್ತಿನಿ ಕೆಂಪಾಗಿ ಹೊಳಿತೀನಿ ಬೆಳ್ಳಗಾಗಿ ಬೀಳ್ತಿನಿ (ಇ ೩೩೨)

ಕಾಗಿಗಿಂತ ಕರ್ರಗ
ದಾರಕಿಂತ ಸಣ್ಣಗ

ಕಾಗೀಕಿಂತ ಕರಿಬಣ್ಣ
ಚಾರದಕಿಂತ ಸಣ್ಣ
ಕಟ್ಟಿದರ ಗಂಟ ಹೆಣದರ ಲಡ್ಡ (ವಾಲಿ ೪–೩೮)

ಕಾಗೆಗಿಂತ ಕಪ್ಪು
ನೂಲಿಗಿಂತ ಸಣ್ಣ
ಎಸೆದರೆ ಹಾವು
ಹೊಸೆದರೆ ಹಗ್ಗ (ಸು ೨೦೧)

ಕಿತ್ತರೆ ಬಾಡುವುದಿಲ್ಲ ನೆಟ್ಟರೆ ಹುಟ್ಟುವುದಿಲ್ಲ (ಲ ಗೌ ೪೪೮)

ತಲೆ ಮೇಲೆ ಕರಿನೂಲು (ರಾ ಗೌ ೨೬೩)

ನೆಟ್ಟರೆ ಹುಟ್ಟುವುದಿಲ್ಲ
ಕಿತ್ತರೆ ಬಾಡುವುದಿಲ್ಲ
ಹಾಗಾದರೆ ಇದು ಏನು? (ರಾ ಗೌ ೩೨೨)

ನೆಟ್ಟರೆ ಚಿಗಿಯುವದಿಲ್ಲ ಕಿತ್ತಿದರೆ ಬಾಡುವದಿಲ್ಲ (ವಾಲಿ ೪–೨೭)

ನೆಟ್ಟಂದು ಕೋಲಿಗೆ ಗಿಣ್ಣಿಲ್ಲ (ಸು ೩೪೮)

ಬರಗಾಲ ಬಿದ್ದರೂ ಬೆಳಿಗೆ ನೀರು ಬ್ಯಾಡ (ಇ ೭೨೫)

ಬೆಳೆಗೆ ಮಳೆ ಭೂಮಿ ಬೇಡ
ಬರಗಾಲದ ಲೆಕ್ಕ ಬೇಡ
ಆದರೂ ಬೆಳೆ ಚೆನ್ನಾಗಿ ಬರುತ್ತದೆ (ಇ ೭೭೩)

ಮರ ಮರಕ್ಕೆಲ್ಲ
ಗೆಣ್ಣಿಲ್ಲದ ಮರ (ನಾ ಗೌ ೧೮೩)

ಸಣ್ಣ ಕೋಲಿಗೆ ಗಿಣ್ಣಿಲ್ಲ (ಲ ಗೌ ೯೦೨)

ರಾಜರ ಮಹಡಿ ಮೇಲೆ
ಸೂಜಿಗಾತ್ರ ಮರ ಹುಟ್ಟಿ
ಕಾಯಿ ಬಿಡಲಿಲ್ಲ
ಹಣ್ಣು ಬಿಡಲಿಲ್ಲ (ಸು ೪೪೧)

ವೊಲದಲ್ಲೋಗಿ ಹುಲ್ಲು ಕಿತ್ಗ ಬಂದು
ಎಷ್ಟು ನೀರಾಕಿ ಬೇಯ್ಸಿದ್ರು ಬೈಯಲ್ಲ (ಮಂ ೧.೧–೨೧)

ಸಣ್ಣ ಕೋಲಿಗೆ ಗೆಣ್ಣಿಲ್ಲ (ಸು ೪೫೩)

ಸಾಸಿರದ ಬಳ್ಳಿ
ಸಾವಿರದ ಬಳ್ಳಿ
ನೀರಲ್ಲಿ ಹಾಕಿದರೆ ನೆನೆಯದ ಬಳ್ಳೀ (ಶಾಂ ನಾ ೧೦೧)

ಸೂಜಿ ಕಣ್ಣು ಕಾಗಿ ಬಣ್ಣ ನಾನ್ಯಾರು (ಇ ೯೬೫)

ಸೂಜಿಗಿಂತ ಸಣ್ಣ
ಅದಕೆ ಮೂರು ಬಣ್ಣ (ಸು ೪೭೯)

ಕೂದಲು

ಪಳಿ
ಪಳಿಮ್ಯಾಲ ಗಿಳಿ
ಗಿಳಿಮ್ಯಾಲ ಗುಡ್ಡ
ಗುಡ್ಡದ ಮ್ಯಾಲ ಕಡ್ಡ
ಕಡ್ಡದೊಳಗೆ ಎಮ್ಮಿಗೊಡ್ಡು ಮೆಯ್ತಾವ (ಇ ೬೯೯)

ಕೂದಲು ಹೇನು

ಮೂರ ಹಾದಿಗಿ ಮೂರ ಕಾಲಿಟ್ಟ
ತುಂಬಿದ ಕೊಡದ ಮ್ಯಾಲ ಕೈ ಇಟ್ಟ
ಹಾದಿಲಿ ಹೋಗಾಕಿ ಮ್ಯಾಲ ನೆದರ ಇಟ್ಟ (ಲಠ್ಠೆ ಭಾಗ ೫–೨೫೪ಳ)

ಕೂರಿಗಿ (ತಾಳ, ಮಂಡಿ, ಎತ್ತಿ)

ಅಟ್ಟಂ ಬಟ್ಟಂ ಆರ್ಯಾಣನಾದಾಗ ಅಕ್ಕುಬಾಯಿ ಮುಕ್ಕ ಹಾಕತಾಳ (ಇ ೫೫೫)

ಅಟ್ಟಂ ಬಟ್ಟಂ ಆರ್ಯಾಣನಾದಾಗ ಅಕ್ಕವ್ವ ಹಾಸು ಹೊಯ್ತಾಳ (ಇ ೫೯)

ಕೂರಿಗೆ

ಮೂರು ಕಾಲ ಮ್ಯಾಲ ಮೂರು ಕೋಲಿಟ್ಟು
ಕೋಲ ಮ್ಯಾಲ ಮಗಿಯಿಟ್ಟು
ಮಗಿ ಮ್ಯಾಲ ಕೈಯಿಟ್ಟು
ಹೋಗವ್ರ ಮ್ಯಾಲ ನೆದರಿಟ್ಟು

ಕೂರಿಗೆಯಿಂದ ಬಿತ್ತುವ ಕ್ರಿಯೆ (ವಾಲಿ ೧–೪೯)

ಭೀಮರಾಯನ ಕುದುರಿ
ಬಿಕ್ಕೊಂಡು ನಿಂತೈತಿ (ಇ ೭೯೩)
ಕೂರಿಗೆ ಶೆಡ್ಡಿ

ಮಡಿವಾಳ ಮಾಚಯ್ಯ (ರಾ ಗೌ ೩೮೦)

ಸಿತನೀರು ಸಿರಕಂಠ ಕಪ್ಪು
ಆತನ ಹೆಸರು ಹೇಳಿದೋರಿಗೆ
ಆರು ಸಾವಿರ ಅಡಿಕೆ ತೋಟ
ಮೂರು ಸಾವಿರ ಎಲೆ ತೋಟ (ಸು ೪೭೦)
ಕೂರೆ

ವಲ್ಲಿ ಮಲ್ಲಣ್ಣ
ಗೋಡೆ ಕೆಂಪಣ್ಣ
ಪಿಟೀಲು ಸುಬ್ಬಣ್ಣ (ಸು ೪೪೬)
ಕೂರೆ, ತಿಗಣೆ, ಸೊಳ್ಳೆ

ಉದ್ದನ ಕುಂಬಳ ಕಾಯಿ
ಹೆಚ್ಚಾಕು ಬರುದುಲ್ಲ
ತಿನ್ನಾಕೂ ಬರುದುಲ್ಲ (ಲಠ್ಠೆ ಭಾಗ ೩–೧೨)
ಕೂಸ

ಮುಂಜಾನೆ ನಾಕ ಕಾಲ ಮಧ್ಯಾಹ್ನ ಎಡ್ಡ ಕಾಲ
ಸಂಜಿಕ ಮೂರ ಕಾಲ (ಲಠ್ಠೆ ಭಾಗ ೫೫–೨೫೩)
ಕೂಸ, ತರುಣ, ಮುದಕ

ಮರದಾಗ ಮರಹುಟ್ಟಿ
ಮರಚಕ್ರ ಕಾಯಾಗಿ
ತಿಂಬಾರ್ದ ಹಣ್ಣ ಬ್ಹಾಳ ಸವಿ (ಲಠ್ಠೆ ಭಾಗ ೩–೫೫)
ಕೂಸು

ಇನ್ನೂರು ಮೂನ್ನೂರು ಗೂಟ ಯಂಕಪ್ಪಯ್ಯನ ತೋಟ
ಒಳಕ್ಕೆ ಹೋದ್ರೆ ಹೊರಕ್ಕೆ ಬರೋ ಶೂರಿಲ್ಲ (ಲ ಗೌ ೧೬೯)

ಹಳ್ಳದಲ್ಲಿ
ಗೊಳ್ಳೆ ಕೆರಿಸ್ಕೋತ್ತದೆ (ರಾ ಗೌ ೪೮೫)
ಕೂಳಿ

ಕಬ್ಬಿಣದ ಕಣವೆ ಕಂಚಿನ ಮೇಟಿ ಹುಲ್ಲೂರು ಪೇಟೆ
ನಲ್ಲೂರಕ್ಕ ನಿನ್ನ ಗಂಡ ಎಲ್ಲಿಗೆ ಹೋಗ್ಯಾನೆ
ತೋಡಿಲ್ಲದ ಕುದುರೆ ತಕ್ಕೊಂಡು
ಗಿಡವಿಲ್ಲದ ಬಾರೆಗೆ ಮಿಕ ಹೊಡಿಯಾಕೆ ಹೋಗ್ಯಾನೆ (ಲ ಗೌ ೩೮೯)
ಕೂಳಿ–ಕೂಳಿ ಗೂಟ–ನೀರು–ಮೀನು

ಆರು ಮೂರು ಗೂಟ
ಶ್ಯಾನುಭೋಗರ ತ್ವಾಟ
ಹೋಗಲಪ್ಪಣೆಯುಂಟು
ಬರಲಪ್ಪಣೆಯಿಲ್ಲ (ರಾ ಗೌ ೭೯)
ಕೂಳಿಗೆ ಬೀಳುವ ಮೀನು

ಬುಡಾ ಅಡವ್ಯಾಗ
ನಡಾ ಊರಾಗ
ತಲಿ ಪಾತಾಳದಾಗ (ಲಠ್ಠೆ ಭಾಗ ೪–೧೪೪)
ಕೂಳೆ, ದಂಟು, ಕಾಳ

ಬಿಸಿಲಿಗೆ ಬಿರಿಯಣ್ಣ (ಸು ೩೭೧)
ಕೆಕ್ಕರಿಕೆ ಕಾಯಿ

ಅಕ್ಕಕ್ಕ ತಂಗೇರು
ಜಕ್ಕ ಮಲ್ಲಿ ದೇವರು
ಹಾಲು ಮೊಸರು ಹೊತ್ಕೊಂಡು ವಾಲಾಡ್ತಾರೆ (ಸು ೩)

ಆವಿನ ಕಲ್ಲು ಮಳೆ ಹುಯ್ತು
ಜೇನಿನಕಲ್ಲು ಕೆರೆ ತುಂಬಿತು
ನಾಲೋರು ಅಕ್ಕತಂಗೇರು
ನೆನೀದಲೆ ಮನೆಗೆ ಬಂದ್ರು (ಸು ೮೭)
ಕೆಚ್ಚಲಿನ ಮೊಲೆಗಳು

ನಾಲ್ಕು ಊರು ನೆನೆವಂಗೆ ಮಳೆ ಬಂದರೂ
ನಾಲ್ಕು ಜನ ನಾರಿಯರು ನೆನೆಯದೆ ಬತ್ತಾರೆ (ಲ ಗೌ ೬೬೩)

ನಾಲ್ಕು ಜನ ಮುತ್ತೈದೆಯರು
ಆಲಿಕಲ್ಲ ಮಳೆ ಹೂದು ಗೋರ್ಕಲ್ಲು ಕೆರೆ ತುಂಬಿದರೂ
ನೆನೆಯದೆ ಮನೆಗೆ ಸೇರುತ್ತಾರೆ (ಲ ಗೌ ೬೭೦)
ಕೆಚ್ಚಲು

ಗದ್ದೆ ಒಂದು
ಗರಿ ನಾಲ್ಕು
ದಿನಸು ಐದು (ಸು ೨೪೩)
ಕೆಚ್ಚಲು, ಮೊಲೆಗಳು, ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ

ಜಂಬುನೇರಿಳೆ ಹಣ್ಣು ಜಗ್ಗಿಸಿ ತೂದರೆ
ನಾಕು ಬಾವಿಯ ನೀರು ಏಕವಾದಾವು (ಲ ಗೌ ೫೬೬)
ಕೆಚ್ಚಲು ಹಾಲು

ಗೇಣಗಲ ನೆಲದಲ್ಲಿ ಐದು ತರ ಧಾನ್ಯ (ಸು ೨೫೮)
ಕೆಚ್ಚಲು, ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ

ಅಹಾವಾರಾ, ಹದಿಮೂರ್ ಹೆಡೆ ದಾರಿಮೆಲೋಪರ್ನ ಕೈಬೀಸಿ ಕರೆತು
(ಶಾಂ ನಾ ಅನುಬಂಧ ೭)

ಹಾ ಮರಾ ಪರ್ವಾತಾಗಿರಿ ಹಾದಿ ಮೆಲ್ಹೋಪರ್ಕರೆತು (ಶಾಂ ನಾ ೨೬೮)

ಹಿಂಡ್ನಲ್ಲುಂತಂಡ್ ಮಿಂಡ್ನ ಕರೆತು (ಶಾಂ ನಾ ೨೬೯)
ಕೆದ್ದೆ

ಮೂರ್ಜನಾ ಹೆಂಗಸ್ರು ವಬ್ಬಾ ಹಿಂಡೊಕ್ಕಾ
ವಬ್ಬಾ ಮರಾ ಹೊಕ್ಕಾ ವಬ್ಬಾ ಕೆರೆ ಹಾರ್ದಾ (ಶಾಂ ನಾ ೨೬೭)
ಕೆದ್ದೆ ಸಂಪ್ಗೆ–ಅಳ್ಳಿಹೂಗು

ನಡುಕೆರೇಲಿ ತಡಿಕೆ ಬಿದ್ದಿದೆ (ಸು ೩೨೮)
ಕೆನೆ ಅಥವಾ ಬಲೆ

ಅಂಗಿಯೊಳಗೆ ಅಂಗಿ (ಶಾಂ ನಾ ೧೫೬)
ಕೆಬೀಜಾ

ಅಂಕುಡೊಂಕಿನ ಬಾವಿ
ಇಣುಕಿ ನೋಡಿದ್ರೆ ನೀರಲ್ಲೆ (ಶಾಂ ನಾ ೧೦೨)
ಕೆಮಿ

ಹಸ್ರ ಕೊಟೆ ವಳಂಗೆ, ಕೆಂಪ್ಕೇಟೆ
ಕೆಂಪ್ಕೇಟೆ ವಳಂಗೆ ಕರಿಕುಳ್ರು (ಶಾಂ ನಾ ೧೫೭)
ಕೆಮುಂಡೆ

ಮನ್ಯಾಗ ನಾಕೆತ್ತು
ಹೊಲದಾಗ ನಾಕ್ಕೆತ್ತು
ಮನೀ ತುಂಬ ಸೂರ್ಯ ಚಂದ್ರಾಮರ ಬೆಳಕು
ನನ್ನ ಸಂಪತ್ತು ಎಷ್ಟು (ಇ ೮೧೩)
ಕೆಮ್ಮುತ್ತ ಹೊಲದಲ್ಲಿ ಕೆತ್ತುತ್ತ, ಬಯಲಿನಲ್ಲಿದ್ದ ದರಿದ್ರ ರೈತ

ಕಲ್ಲು ಮುಳ್ಳು ಕಂಡ ಕಡೆ ನುಗ್ಗೋ ಕೋಣ
ನೀರು ಕಂಡ ಕಡೆ ನಿಲ್ಲೋ ಕೋಣ (ಸು ೧೯೪)
ಕೆರ

ಹಕ್ಕಲದಾಗ ಹಂಡೆತ್ತು ಬಿದ್ದೈತಿ (ಇ ೯೮೨)
ಕೆರ್ಕಲ ಹಣ್ಣು

ಆಚೆ ಮನೆ ಅಜ್ಜಿ 'ಈಚೆ ಮನೆಗೆ ಕಾಲಿಡ್ತು' (ಲ ಗೌ ೧೪೨)
ಕೆಸವಿನ ಚಿಪ್ಪು, ಹಬ್ಬಿತು

ಅಜ್ಜಿಯ ಅರಿವೆ ನೀರೊಳಗೆ ತೊಯ್ದರೂ ನೆನೆಯುವುದಿಲ್ಲ (ಇ ೪೮)
ಕೆಸುವಿನ ಎಲೆ

ಕೊಡೆ ಕೊಡ್ತಾ
ಕೊಡೆ ಕಾವ್ ಕೊಡ್ತಾ
ಹುಲಿಸಪ್ಪ ಜಾಮೀನ್ಕೊಡ್ತಾ (ಶಾಂ ನಾ ಅನುಬಂಧ ೨೨)
ಕೆಸ್ನ ಸಪ್ಪು

ಅರಷಿಣ ಪತ್ತಲುಟ್ಟು
ಅರವತ್ತು ನೀರಿಗಿ ಹೊಯ್ದು
ಅರಸಿಲ್ಲದ ಬಾಲಿ ಬಸುರಾಗ್ಯಾಳ (ಇ ೧೩೦)

ಅರಸಿನದ ಮೈಯಾಕಿ
ಅರವತ್ತು ನೆರಿಯಾಕಿ
ಪುರುಷನಿಲ್ಲದ ಬಾಲಿ ನಾರೀಗೆ ಬಾಳ ಮಂದಿ ಮಕ್ಕಳು (ಇ ೧೩೧)

ಮುಳ್ಳಲ್ಲಿ ಹುಟ್ಟಿ ಮುಳ್ಳಲ್ಲಿ ಬೆಳೆದು
ಮುಳ್ಳು ತಾಕಿದರೆ ಕೆಡುವೆ (ಇ ೮೬೪)
ಕೇದಗೆ

ಗಂಜಿ ಸೀರೆಯನ್ನುಟ್ಟು ಗಂಧದ ಬಟ್ಟನಿಟ್ಟು
ಗಂಡನಿಲ್ಲದ ಬಾಲೆ ಬಸುರಾದಳು (ಲ ಗೌ ೫೦೫)
ಕೇದಿಗೆ ತೆನೆ

ಗಂಜಿ ಸೀರೆಯನ್ನುಟ್ಟು
ಎಂಟು ನಿರಗಿ ಹೊಯ್ದು
ಗಂಡನಿಲ್ಲದ ಬಾಲಿ ಬಸರಾಗ್ಯಾಳಂಬೋದು
ಓದು ಕಲಿತವ ಹೇಳೋ ನನ ಜಾಣ (ವಾಲಿ ೨–೧೦೭)
ಕೇದಿಗೆಯ ತೆನೆ

ಹಿಂಡನಾಗ ಕುಂತುಗೊಂಡು
ಮಿಂಡನ ಕರೀತೈತಿ (ವಾಲಿ ೨–೬೩)
ಕೇದಿಗೆಯ ಹೂವು

ಅಯ್ಯಯ್ಯ ಹೆಣ್ಣೆ ಐಭೋಗದ ಹೆಣ್ಣೆ
ಹಾದೀಲಿ ಹೋಗೋರ್ನ ಕರೆಯೋ ಹೆಣ್ಣೆ (ಲ ಗೌ ೭೦)
ಕೇದಿಗೆ ಹೂ

ಒಂದು ಗಳಾ ತಂದು
ಒಂಬತ್ತ ಮನಿ ಮಾಡಿ
ಸೂಳಿ ಮನಿ ಕಟ್ಟಿ
ಸುಣಗಾರ ಮನಿ ಕಟ್ಟಿ
ಒಂದ ಗಳಾ ಹಂಗ ನಿಂತೈತಿ (ಇ ೨೮೦)

ಒಂದು ಗಳಾ ತಂದು ಒಂಬತ್ತು ಮನಿ ಕಟ್ಟ
ಚೇವರ ಮನಿ ಕಟ್ಟ ಸೂಳಿಯ ಮನಿ ಕಟ್ಟ
ಕೊನೆಗೂ ಒಂದು ಗಳಾ ಉಳಿಯುತ್ತದೆ (ವಾಲಿ ೨–೧೦೩)
ಕೇದಿಗೆ ಹೊಡೆ

ಒಂಬತ್ತು ಬಿಳೀ ಕುದುರೆ ಒಂಬತ್ತು ಕರೀ ಕುದುರೆ
ಒಂದು ದೊಡ್ಡ ಬಿಳೀ ಕುದುರೆ ಒಂದು ಕೆಂಪು ಕುದುರೆ
ದೊಡ್ಡ ಬಿಳೀ ಕುದುರೆ ನೂಕಿದರೆ
ಉಳಿದ ಕುದುರೆಗಳು ಹಳ್ಳಕ್ಕೆ ಬೀಳುತ್ತವೆ (ಲ ಗೌ ೩೫೩)
ಕೇರಂ ಕಾಯಿಗಳು

ಪೈಸ ಮೈದಾಕಿ ಹಿಂದ ಮಲ್ಯಾಕಿ (ಲಠ್ಠೆ ಭಾಗ ೫–೨೦೩)

ಮನ್ಯಾಗಿರು ಕರೆಲಕ್ಷ್ಮಿ ಮಲಿ, ಡುಬ್ಬದ ಮ್ಯಾಲ (ಇ ೮೧೦)

ಮಾರಿ ಮುಂದಕ
ಮಲಿ ಹಿಂದಕ (ಇ ೮೪೪)
ಕೇರುವ ಮರ

ಮನ್ಯಾಗ ಲಕಸಿಮಿ ಮಲಿ ಡುಬ್ಬದಾಗ (ಲಠ್ಠೆ ಭಾಗ ೫–೨೩೮)

ಮಾರಿ ಮುಂದಕ ಮಲಿ ಹಿಂದಕ (ಲಠ್ಠೆ ಭಾಗ ೫–೨೪೭)

ಕೇರೋ ಮರ

ಬಡಿ ಬಡಿ ಭಟ್ಟನಿಗೆ
ಹೆಡಗೆಯಂತಹ ಮುಂಡಾಸ (ಇ ೭೧೭)

ಕೇಸಿನ ಸೊಪ್ಪು

ನನ್ನಜ್ಜಾ ವಂದ್ಸೀರೆ ತಂದಿದ್ದಾ
ನೀರಲ್ ಆದ್ದ ಸ್ರೂವಾ ಅದ್‌ತೇಯಿಲ್ಲೆ (ಶಾಂ ನಾ ೧೫೯)

ಬಡ್ವಟ್ಟಂಗ ಹೆಡಗೆ ಮುಂಡಾಸು (ಶಾಂ ನಾ ೧೬೦)
ವಳಂಗ್ಯೂತ್ಕಂಡಿ ಕಾಲ್ಹೆರಂಗ್ಚಾಚ್ತು (ಶಾಂ ನಾ ೧೬೧)

ಕೇಸ್ಟಿನ್ಟೀಳು

ಅತ್ಲಾಗ ಇತ್ಲಾಗ ಹೊಕ್ಕೈತಿ
ಮತ್ತ ಬಂದ ನಿನ್ನ ಹತ್ರ ನಿಲ್ಲುತೈತಿ (ಇ ೯೭)

ಒಂದು ದುಡ್ಡಿಗೆ ಮೂರು ಗಡಿಗೆಯಾದರೆ
ಗಡಿಗೆ ಕಂಟಕ್ಕ ಏನು ಬಿತ್ತು (ಲ ಗೌ ೩೨೨)

ಒಂದ ದುಡ್ಡಿಗಿ ಮೂರ ಗಡಿಗಿ
ಗಡಿಗಿ ಕಂಟಕ್ಕ ಏನ ಬಿತ್ತು (ಲಠ್ಠೆ ಭಾಗ ೧–೧೮)

ಸಪ್ಪಾದ್ರೆ ಉಪ್ಪಿಗ್ಯಾನ ಹಾಕ್ದರು (ಮೈ.ಕ.) (ಮಂ ೧.೧–೧೬)

ಸಾರ ಸಪ್ಪಾದ್ರೆ ಉಪ್ಪಿಗ್ಯಾನ ಹಾಕ್ದರು (ಮೈ.ಕ.) (ಮಂ ೧.೧–೧೭)

ಕೈ

ನಾನು ಸದಾ ನಿನ್ನ ಸಂಗಡ ಇರುವೆ
ನೀನು ನಡೆದರೆ ನಾನು ನಡೆವೆ
ನಿಂತಲ್ಲಿ ನಿಲ್ಲುವೆ
ನೀನು ಮಾತಾಡೆ ನಾನು ಮೌನ (ರಾ ಗೌ ೨೯೯)

ಕೈಕಾಲು

ಕರೇ ಜಡಿ ಬಿಳೇ ಹೂವು (ಲ ಗೌ ೪೧೫)

ಕೈಗಡಿಯಾರ ಮತ್ತು ಅದರ ಪಟ್ಟಿ

ನಾಲ್ಕು ಬೆರಳು ಒಂದು ಹೆಬ್ಬೆರಳು ನನಗುಂಟು
ಮೂಳೆ ಮಾಂಸಗಳಿಲ್ಲ ಎನಗೆ
ವಿವಿಧ ಗಾತ್ರಗಳಲಿ ಇರಬಲ್ಲೆ ನಾನು
ಒಂಟಿಯಾಗಿದ್ದಾಗ ಚಲಿಸಲಾರೆ
ನಾನು ಯಾರು (ಇ ೬೫೪)

ಬಾಯೀಲೆ ನುಂಗಿ ಬಾಯೀಲೆ ಹೇಲತಾದ (ವಾಲಿ ೩–೩೦)
ಕೈಚೀಲ

ಒಂದು ಬಾಳೆ ಹಣ್ಣಿನ ಚಿಪ್ಪಿನಲ್ಲಿ ಐದು ಕಾಯಿಗಳಿವೆ
ಅಲುಗಾಡಿಸಬಹುದು
ಕೀಳಲು ಬರುವುದಿಲ್ಲ (ಸು ೧೪೩)
ಕೈ ಬೆರಳು

ದೊಂಕಮರಕ್ಕೆ ಸಂಕೋಲೆ ಹಾಕದೆ (ಜೀಶಂಪ ೧೭೯)
ಕೈಬಂದಿ

ನಾನು ಸದಾ ನಿನ್ನ ಸಂಗಡ ಇರುವೆ
ನೀನು ನಡೆದರೆ ನಾನು ನಡೆವೆ
ನಿಂತಲ್ಲಿ ನಿಲ್ಲುವೆ

ಒಂಟಿಗಾಲು ಮನುಷ್ಯ ನಡು ನೀರಿನಲ್ಲಿ ಜಪ ಮಾಡ್ತಾನೆ (ಲ ಗೌ ೨೯೫)
ಕೊಕ್ಕರೆ

ಉದ್ದಟ್ಟಂಗೆ ಗಿಡ್ಡೀ ಹಲ್ಲು (ಶಾಂ ನಾ ೩೦೬)

ಉದ್ಮನೈಂಗೆ ವಂದೇ ಹಲ್ಲು (ಶಾಂ ನಾ ೨೦೭)

ಉದ್ಕಾಲ್ಜಂಗಪ್ಪಾ (ಶಾಂ ನಾ ೩೦೮)
ಕೊಕ್ಕೆ

ಕರಿ ಮನೆ ಶೇಷಯ್ಯ ಗೌಡ್ರನ್ನ ಜುಟ್ಟು ಕಟ್ಟಿ ಅಟ್ಟಕ್ಕಿಟ್ಟರು (ಲ ಗೌ ೪೧೩)
ಕೊಟ್ಟೆ ಕಡುಬು

ಎತ್ತಣಿಂದ ಬಂದರೂ ಕುತ್ತಿಗೆಗೆ ಕೈಹಾಕುವರು (ಚಂ ಸೆ ೫೦)

ತಲಿಮ್ಯಾಗ ಮುಕಳಿ
ಮುಕಳಿಮ್ಯಾಗ ಬಾಯಿ
ಬಾಯಿಮ್ಯಾಗ ಕೈ (ಇ ೫೭೧)
ಕೊಡ

ತೆಲಿಮ್ಯಾಗ ಕುಂಡಿ ಬಾಯಾಗ ಬಳ್ಳ (ಲಠ್ಠೆ ಭಾಗ ೫–೧೭೫)
ಕೊಡ, ಕೈ

ಚಿಕ್ಕ ಚಿಕ್ಕ ಸೀರಿ ಚಿನ್ನದ ಹಳಿ ಸೀರಿ
ರಾತ್ರಿ ಬಿರೂದು ಬೆಚ್ಚನ್ನ ಸೀರಿ (ವಾಲಿ ೩–೧೮)

ಕೆಂಪು ಹೆಣ್ಣಿನ ಕೆಳಗೆ ಇಷ್ಟಗಲ (ವಾಲಿ ೩–೫೨)

ಕೊಡದ ಕೆಳಗಿನ ಸಿಂಬೆ
ಬಂಕಾಪುರದೆತ್ತು ಬಡಬಡ ಬಂತು ಬಾವ್ಯಾಗ ಬಿತ್ತು (ಲ ಗೌ ೭೪೨)
ಕೊಡಪಾನ

ಆದರ್ಗಂಚಿ ಬಿದಿರ್ಮಳ್ಳು
ನುಗ್ಬೋದು ಕಡಿಬಾರ್ದು (ಲ ಗೌ ೫೪)

ಬೆಟ್ಟದ ಮೇಲೊಂದು ತಟ್ಟೆ ತರ್ತಂದು
ಒಂಬೈನೂರು ಎಜ್ಜ ಮಾಡಿ ಒಂಬೈನೂರು ತೊಲೆ ಕೂಡಿ
ನೋಡಕೆ ಬಂದವರೆಲ್ಲ ನೇಣಾಕಿಕೊಂಡು ಸತ್ತರು (ಲ ಗೌ ೭೮೫)

ಹರಿರಗಂಚಿ ಬಿದಿರಮುಳ್ಳು
ಒಳಕ್ಕೆ ನುಗ್ಗಿದರೆ ಹೊರಕ್ಕಿಲ್ಲ (ಲ ಗೌ ೯೮೯)
ಕೊಡಬೆ

ಒಂತ್ತವ ಚಚ್ಚಿ
ಒಂಬೈನೂರು ವೋಳು ಮಾಡಿ
ಇಂದ್ಲಟ್ಟಿ ಕಟ್ಟಿ ಮುಂದ್ಲ ತೊಟ್ಟಿ ಕಟ್ಟಿ
ಆ ತೊಟ್ಟಿಗೆ ಬಂದವರೆಲ್ಲಾ ನ್ಯಾಣ ಹಾಕ್ಕೊಂಡ್ರು (ಮಂ ೧.೪–೨೪)
ಕೊಡಬೆ, ಅಣಬೆ

ಒಂದು ಮಟ್ಟೆ ಕಡ್ಡಿಗೆ ನೂರೊಂದು ಗಂಟುಹಾಕಿ
ಒಂದುಗೂಡಿ
ಒಡೆಯಗೂಡಿ
ಒಡೆಯುವ ಮೂವರು ಗೊಲ್ಲರಗೂಡಿ
ಒಡೆದು ಬಿಟ್ಟರೆ ಮೈಸೂರಿನ ರಾಜರ ಗಂಡುಮರಿ (ಸು ೧೪೭)

ಹಳ್ಳದಾಗೆ ಅಜ್ಜಿ
ಒಳ್ಳು ಕಿಸ್ಕೊಂಡು ಬಿದ್ದವಳೆ (ಸು ೫೦೫)
ಕೊಡಮೆ

ಒಂದು ಬಿದಿರು ಸೀಳಿ
ಒಂಭತ್ತು ಬಾಗಿಲಿಕ್ಕಿ
ನೋಡೋಕೆ ಬಂದ ಸೂಳೆ
ನೇಣು ಹಾಕ್ಕೊಂಡು ಸತ್ತಳು (ಸು ೧೬೦)
ಕೊಡಮೆ ಮತ್ತು ಮೀನು

ಇಟೀಟ ಪೋರಾ ಗಿಡಗಿಡ ಹಾರಾ (ಇ ೧೪೬)

ಒಣ ಮರಕೆ ಗಿಣಿ ಕಚ್ಚಿದೆ (ಸು ೧೨೯)

ಒಣಕು ಮರದಲ್ಲಿ ಕರಿಯಪ್ಪ ಗುಟುರು ಹೋಡೀತಾನೆ (ಲ ಗೌ ೨೬೫)

ಕೇತಮಾರನಳ್ಳಿ ಬಸವಣ್ಣ
ಕಲ್ಲಿಗೆ ತಿಕ ಹಾಕಿ ಮಸೆಯಣ್ಣ (ಸು ೨೩೫)

ದಾರೀ ನಡಿವಾಗ ಮೌನ ಇದ್ದ ಮುನಿ
ಕಾಡಿಗೆ ಹೋಗಿಂದ ಕಿಟಿಕಿಟಿ ಮಾಡ್ತಾನ (ಇ ೬೧೨)

ದಾರಿ ನಡೆವಾಗ ಸುಮ್ಮನಿರುವ
ಕಾಡು ಸೇರಿದೊಡನೆ ಸದ್ದು ಮಾಡುವ (ವಾಲಿ ೩–೨೭)

ಸತ್ತ ಮರದಲ್ಲಿ ಬಸಪ್ಪ ಗಂಟೆ ಹೊಡೆಯುತ್ತಾನೆ (ಲ ಗೌ ೯೦೯)
ಕೊಡಲಿ

ಗಬ್ರಿ
ತಾಯಿಮನೆಗೋಗಾಕಾರೆ ಸುರ್ ಸುರ್ ಹೋಗ್ತು
ಬಪ್ಪಾಗಾ ಹೆಜ್ಜೆ ಹೆಜ್ಜೆಗೂ ಕಣ್ಣೀರ್ ಸುರಿಸ್ತು (ಶಾಂ ನಾ ೩೧೩)

ನನ್ನಜ್ಜಾ ಯಂತಾ ಬಾವಿನಾರೂ ಯಳೀತಾ (ಶಾಂ ನಾ ೩೧೧)

ಬುಡ್‌ಬುಡ್ ಬುಡ್ಡಣ್ಣಾಮ್ ಬಾಲಾತಟ್ ಸೊಗಿಯಣ್ಣಾ (ಶಾಂ ನಾ ೩೧೦)

ಯಾರ್ ಯಿಳಿಗದ್ ಬಾವೀಯೂ ನಮ್ಮನೆ ಅಮ್ಮಾ ಯೇಳಿತು (ಶಾಂ ನಾ ೩೧೨)

ಹೋಗಾಕಾರೆ ಬಳಾಂತಿ ಬರ್ಕಿದ್ರೆ ಬಸ್ರಿ (ಶಾಂ ನಾ ೩೦೯)
ಕೊಡಾ

ಹೋಗ್ವಾಗಿಬ್ಬಾ ಬರ್ವಾಗ್ಮೂರ್ಜನಾ (ಶಾಂ ನಾ ೩೧೪)
ಕೊಡಾ–ಹಗ್ಗ–ನೀರು

ಮಳ್ಯಾಗ ಅಳ್ಳತದ ಮನ್ಯಾಗ ಬಾಡ್ತದ (ಲಠ್ಠೆ ಭಾಗ ೫–೨೪೫)
ಕೊಡಿ (ಛತ್ರಿ)

ಅರಳುವುದು ಹೂವಾಗಿ ಹೂ ಜಾತಿಯಲ್ಲ
ತೊಳೆದ ಕೆಂಡದ ಬಣ್ಣ ಪರಿಮಳವಿಲ್ಲ
ಬಿಸಿಲಿಗೆ ಬಾಡಿ ಬೀಳುವದೂ ಇಲ್ಲ (ಇ ೧೨೭)

ಅರಳುವುದು ಹೂವಾಗಿ ಹೂ ಜಾತಿಯಲ್ಲ
ತೊಳೆದ ಗೆಂಡೆದ ಬಣ್ಣ ಪರಿಮಳವು ಇಲ್ಲ
ಬಿಸಿಲ ಬೇಗೆಗೆ ಬಾಡಿ ಬೀಳುವುದು ಇಲ್ಲ
ಬಗೆಬಗೆಯ ಬಣ್ಣವೂ ಅದಕಿಲ್ಲದಿಲ್ಲ (ಚಂ ಸೆ ೧೮)

ಒಳಗಿದ್ದಾಗ ಮೊಗ್ಗಾಗಿರುವುದು
ಹೊರಗಡೆ ಬಂದಾಗ ಹೂವಾಗರಳುವುದು (ಲ ಗೌ ೨೮೬)

ಒಂದು ಮನೆಗೆ ಒಂದೇ ಕಂಬ (ಚಂ ಸೆ ೬೪)

ಒಂದು ಮಾಳಿಗೆಗೆ ಒಂದೇ ಕಂಬ (ವಾ ೩–೪೮)

ಒಂದು ಮಾಳ್ಗೆಗೆ ಒಂದೇ ಕಂಬ (ರಾ ಗೌ ೧೫೩)

ಕಡ್ಡಿಗಳುಂಟು ಬೆಂಕಿಪೊಟ್ಟಣವಲ್ಲ
ವಸ್ತುವುಂಟು ಮಾರಲು ಅಂಗಡಿಯಲ್ಲ
ಹಿಡಿಕೆಯುಂಟು ಯಾವಾಗಲೂ ಹಿಡಿಯುವುದಿಲ್ಲ (ಲ ಗೌ ೩೬೮)

ಕಡ್ಡೀ ಎತ್ತಿದರ ಬಟ್ಟೆಯೂ ಎತ್ತಿ ನಿಲ್ಲುವದು (ವಾಲಿ ೩–೬೬)

ಕಾಲೆಂಟು ಕವಲೇಂಟು
ಜುಟ್ಟಾ ಹಿಡಿದ್ರೆ ತಲೆತಂಪು (ಶಾಂ ನಾ ೨೧೫)

ಕೆದರಿದರೆ ಒಂದು ತಬ್ಬು
ಮುದುರಿದರೆ ಒಂದು ಹಿಡಿ (ಸು ೨೨೧)

ಗುಡ್ಡದ ಮ್ಯಾಗ ನಿಂತು ಸಡ್ಡು ಹೊಡಿತೈತಿ (ಇ ೪೯೭)

ಚೋಟುದ್ದ ಹುಡಗನಿಗೆ ಮಾರುದ್ದ ಮುಂಡಾಸು (ಲ ಗೌ ೫೬೧)

ನನ್ನ ಬಣ್ಣ ಕಪ್ಪು
ನಾನಿದ್ದಲ್ಲಿ ನಮ್ಮಪ್ಪ ಮಳೆರಾಯ
ಅವನು ಬಂದರೆ ನನ್ನ ತಲೆ ದಪ್ಪ
ನನ್ನ ಎತ್ತಿಕೊಂಡು ಹೊರಟವರ
ತಲೆ ಬಹಳ ಸಣ್ಣ (ರಾ ಗೌ ೨೯೧)

ನಿರಿಗಿ ಎತ್ತಿ ನಿಗರಿಸಿ ಬಿಟ್ಟರ
ಚಳೀಗಿ ಚಾಟ ಬಿಸಲೀಗಿ ತಂಪ (ವಾಲಿ ೮–೫೭)

ನಿಲಗಿ ಎತ್ತು ನಿಗರಿಸಿ ಹಿಡಿ (ವಾಲಿ ೮–೫೨)

ನೀರಿಗಿ ಎತ್ತಿ ನಿಗುರಿಸಿದರ
ಚಳಿಗೆ ಚಾಟು ಬಿಸಲಾಗ ತಂಪು (ಇ ೬೭೧)

ಪರಿಮಳವಿಲ್ಲ ವಾಸನೆಯಿಲ್ಲ (ವಾಲಿ ೩–೧೩)

ಬಗ್ಗಿದರೆ ಮೊಗ್ಗು ಎದ್ದರೆ ಹುವ್ವ (ಸು ೩೫೭)

ಬಿಸಿಲಿಗೂ ಅರಳುತ್ತೆ ಮಳೇಗೂ ಅರಳುತ್ತೆ
ಹೆಂಗಸರು ಗಂಡಸರು ಎಲ್ಲರೂ ಮುಡೀತಾರೆ (ಲ ಗೌ ೭೬೩)

ಬಿಸಿಲಿಗೆ ಬಾಡಂಗಿಲ್ಲ ಮಳಿಗೆ ಕೊಳಿಯ್ಯಂಗಿಲ್ಲ (ಇ ೭೪೪)

ಬಿಸಿಲಲ್ಲಿ ಅರಳುವದು
ಮಳೆಯಲ್ಲಿ ಅರಳುವದು
ಎಲ್ಲರಿಗೂ ಬೇಕಾಗಿರುವದು (ಇ ೭೪೭)

ಮಡಿಸಿದರೆ ಮೊಗ್ಗು ಬಿಡಿಸಿದರೆ ಹೂವು
ಮನ್ಯಾಗ ಬಂದರ ಮುದ್ದಿ ಆಗ್ತಿ
ಹೊರಗ ಹೋದರ ಹರವ ಆಗ್ತಿ (ವಾಲಿ ೩–೧೦೨)

ಮಡ್ಡಿಮ್ಯಾಗ ನಿಂತು ಸೊಡ್ಡ ಹೊಡೀತೈತಿ (ಇ ೮೦೫)

ಮನೆಯಲ್ಲಿ ಮೊಗ್ಗು ಹೊರಗಡೆ ಹೂವು (ಲ ಗೌ ೮೧೩)

ಮೊಗ್ಗರಳಿ ಹೂವಾಗಿ ಪುಷ್ಪ ತಾನಲ್ಲ
ಹಿಗ್ಗಲಿಸಿ ನೋಡಿದರೆ ಪರಿಮಳವೇ ಇಲ್ಲ (ಇ ೮೮೫)

ಮೊಗ್ಗಾಗಿ ಅರಳಿ ಮೂಸಿ ನೋಡಿದರೆ ವಾಸನೆಯಿಲ್ಲ (ಲ ಗೌ ೮೭೮)

ಮೊಗ್ಗಾಗಿ ಅರಳುವುದು
ಅರಳಿ ಮೊಗ್ಗಾಗುವುದು ಹೂ ಜಾತಿಯಲ್ಲ
ಉಗ್ಗಡಿಸಿ ನೋಡಿದರೆ ಪರಿಮಳವು ಇಲ್ಲ
ದುರ್ಗಾಧಿಪತಿಗಳಿಗೆ ಬೇಕಾಯಿತಲ್ಲ (ಇ ೮೮೪)

ಮೊಗ್ಗಾಗಿ ಅರಳುವುದು ಪುಷ್ಪ ತಾನಲ್ಲ
ಸೂರ್ಯ ಕಿರಣಕ್ಕೂ ಅದು ಬಾಡುವದೇ ಇಲ್ಲ (ವಾಲಿ ೩–೯೦)

ಮೊಗ್ಗಾಗಿ ಅರಳುವುದು ಹೂಜಾತಿಯಲ್ಲ
ಉಗ್ಗಡಿಸಿ ನೋಡಿದರೆ ಪರಿಮಳವೆಯಿಲ್ಲ
ದುರ್ಗಾಧಿಪತಿಗೂ ಇದು ಬೇಕಾಯಿತಲ್ಲ (ಚಂ ಸೆ ೨೧೧)

ವಂದ್ ಮನೆಗೆ ವಂದೇ ಕಂಬಾ (ಶಾಂ ನಾ ೩೧೬)

ವಳಂಗ್ ಬಂದ್ರ ಮೊಗ್ಗು
ಹೊರಂಗೋದ್ರೆ ಹೂಗು (ಶಾಂ ನಾ ೩೧೭)

ಹಿಡಿದರೆ ಒಂದು ಹಿಡಿ
ಬಿಟ್ಟರೆ ಒಂದು ತಬ್ಬು (ಸು ೫೧೯)

ಕೊಡೆ

ಅಮ್ಮನ ನೀರಿಗಿ ಅಜ್ಜ ಹಿಡಿತಾನ (ಇ ೧೧೫)

ಆಯಿ ಗಗರ್ಯಾಗ ಮುತ್ಯಾ ಕೈ ಸೇರಸ್ತಾನ (ಲಠ್ಠೆ ಭಾಗ ೫–೫೧)

ಇಡದ್ರೆ ಒಂದು ಹಿಡಿ
ಬುಟ್ರೆ ಒಂದು ತಬ್ಬು (ಮಂ ೧.೫–೨೦)

ಊರೆಲ್ಲಾ ತಿರುಗಾಡಿ ಮನಿಗೆ ಬಂದು
ಗೂಟಕ್ಕ ನೇಣು ಹಾಕಿಕೊಳ್ಳತೈತಿ (ಇ ೨೨೯)

ಒಂದ ಮನೀಗೆ ಒಂದ ಕಂಬ (ಇ ೨೮೪)

ಕರಿ ಮೂಗಿನಕ್ಕಿ
ಮೇಗವಾರದ್ ಬಣ್ಣ
ದೊಡ್ಡವರತಮ್ಮೆ ವೋಯ್ತದೆ
ನಿಂತಂಗೆ ಸಾಯ್ತದೆ (ಮಂ ೧.೫–೪೩)

ಕೈಯಾಗ ಗೂಡ
ಗೂಡದಾಗ ಕುದುರೆ
ಕುದುರಿ ಮ್ಯಾಲೆ ಡೇರೆ
ಕುದುರಿ ಬಗ್ಗಿದರ ಸಾಕು
ಡೇರೆ ಬೀಳುತ್ತದೆ (ಇ ೪೧೮)

ಚೋಟುದ್ದ ಹುಡುಗ ಮಾರುದ್ದ ಮುಂಡಾಸ (ಲಠ್ಠೆ ಭಾಗ ೨–೧೫೯)

ನಿಲಗಿ ಎತ್ತು ನಿಗರಿಸಿಡ (ಲಠ್ಠೆ ಭಾಗ ೨–೧೯೨)

ಮಡಿಸಿದರೆ ಮೊಗ್ಗು ಬಿಚ್ಚಿದರೆ ಹೂವು
ಪರಿಮಳವಿಲ್ಲ ವಾಸ್ನೆ ಇಲ್ಲ (ಜೀಶಂಪ ೨೨೧)

ಮಳಿಗೆ ಬಿಸಿಲಿಗೆ ಅರಳುವುದು
ಎಲ್ಲರ ತಲೆಯ ಮೇಲೆ ಮೆರೆಯುವುದು
ಪರಿಮಳವಿಲ್ಲದ ಹೂವಾದರೂ
ಅದನೆಲ್ಲರೂ ಬಯಸುವರು (ಇ ೮೩೯)

ಮೊಗ್ಗಾಗಿ ಅರಳುವುದು ಪುಷ್ಪ ತಾನಲ್ಲ
ಸೂರ್ಯ ಕಿರಣಕ್ಕೂ ಅದು ಬಾಡುವುದಿಲ್ಲ
ಹಿಗ್ಗಲಿಸಿ ನೋಡಿದರೆ ಪರಿಮಳವೂ ಇಲ್ಲ
ಮುರ್ಗಾಧಿಪತಿಗಳಿಗೆ ಬೇಕಾದುದೂ ಅಲ್ಲ
ಅದ ಹೇಳ ಬಲ್ಲ ಜಾಣರಿಗೆ ಅರಿಯದದೂ ಅಲ್ಲ (ರಾ ಗೌ ೪೧೩)

ಹಿಡಿದರೆ ಹಿಡಿತುಂಬ
ಬುಟ್ಟರೆ ಒಂದು ತೆಬ್ಬು (ರಾ ಗೌ ೪೯೫)
ಛತ್ರಿ

ಆಯಿ ಗಗ್ಗರ್ಯಾಗ
ಮೂತ್ಯಾ ಕೈ ಸೇರಸ್ತಾನ (ವಾಲಿ ೮–೪೯)
ಕೊಡೆ ಏರಿಸುವ ಕ್ರಿಯೆ

ಆಯಿ ಸೀರ್ಯಾಗ ಮುತ್ತ್ಯಾ ಕೈ ಹಾಕ್ಯಾನ (ವಾಲಿ ೮–೧೬)
ಕೊಡೆ ಏರಿಸುವದು

ಗಿಡ್ಡಾನ ಹುಡುಗ ಬಡ್ಡ್ಯಾಗ ಸಿಕ್ಕಾನ (ಲಠ್ಠೆ ಭಾಗ ೫–೧೪೯)
ಕೊಡ್ಲಿ

ಜಾತಿಗೆಟ್ಟವಳು ಮನೇ ಒಳಗವಳೆ (ಲ ಗೌ ೫೬೮)

ಹಚ್ಚನ್ಹಕ್ಕಿ ಪುಚ್ಚ ತರ್ದು
ಕಲ್ಲಾಲಿಟ್ಟು ಕಾರಾ ಅರ್ದು (ಲ ಗೌ ೯೭೪)

ಹಸರ್ಹಕ್ಕಿ ಪುಕ್ಕ ತರ್ದು
ಕಲ್ಲ ಮೇಲಿಕ್ಕಿ ಕಾರ ಅರ್ದು
ಇನ್ನಿಷ್ಟಿಕ್ಕು ಚೆನ್ನಾಗಿದೆ (ಜೀಶಂಪ ೨೭೬)
ಕೊತ್ತಂಬರಿ

ಹಚ್ಚನ್ನಾಕೆ ಪುಚ್ಚ ತೆರದಾಕೆ
ಕಲ್ಲ ಮ್ಯಾಲಿಟ್ಟು ಕಾರ ಅರದಾಕೆ (ವಾಲಿ ೨–೧)
ಕೋತಂಬರಿ

ಹಚ್ಚನ್ನ ಹಕ್ಕಿ ಪುಚ್ಚಾ ತಗದ
ಕಲ್ಲ ಮ್ಯಾಲಿಟ್ಟ ಕಾರಾ ಅರದ (ಲಠ್ಠೆ ಭಾಗ ೪–೧೭೨)
ಕೋತಂಬ್ರಿ

ಎಲಿ ತಿತ್ತಾರ ಎಸಳ ಒಂಭತ್ತು ಬಾಯಿಗೆ ಬಂಗಾರ (ಇ ೨೪೯)

ಬಸೆಟ್ಟಿ ಕೆರಿಮ್ಯಾಲ
ಎಸಳು ಎಂಬತ್ತು
ಕುಸುರು ಮೂವತ್ತು
ಎಲಿ ಚಿತ್ತಾರ
ಬಾಯಿ ಬಂಗಾರ (ಇ ೭೨೭)

ಕತ್ರಂ ಕತ್ರಂ ಕಾನ
ಮುಸ್ತಾ ಅಕಾನ (ಲಠ್ಠೆ ಭಾಗ ೪–೫೭)

ಹುಟ್ಟಿದ ಕೂಡಲೇ ಹುಡುಗ ನಾರತಾನ (ಇ ೧೦೮೩)
ಕೋತಂಬರಿ

ಕೆಂದಾವರೆ ಕೊಣದಲ್ಲಿ ಸೊಸಿ ಹುಟ್ಟ
ಎಸಳು ಎಂಬತ್ತು ಕುಸರಿ ಮೂವತ್ತು
ಹೆಸರು ಹೇಳಿದವರಿಗೆ ಮೊಸರು ಅನ್ನ (ರಾ ಗೌ ೨೧೮)

ಹುಟ್ಟಿದ್ ಕೂಟ್ಲೆ ಹುಡ್ಗಿ ನಾರ್ತತಿ (ಲ ಗೌ ೧೦೫೭)
ಕೊತ್ತಂಬರಿ ಗಿಡ

ಕಲ್ಲು ಮುಳ್ಳಕ್ಕಿ ಕಾರ ಅರೆದು
ನಾನು ಬಿಟ್ಟು ನೋಡ್ತೀನಿ
ನೀನು ನೆಕ್ಕಿ ನೋಡು (ಸು ೧೯೫)
ಕೊತ್ತಂಬರಿ ಚಟ್ನಿ

ಅಚ್ಚ ಬಣ್ಣದಕ್ಕಿ ಕಲ್ಲ ಮೇಲಿಕ್ಕಿ ಕಾರ ಅರೆದು
ಇನ್ನು ರವಷ್ಟು ಬಿಡಕ್ಕ ಚೆನ್ನಾಗದೆ (ಸು ೧೬)
ಕೊತ್ತಂಬರಿ ಸೊಪ್ಪಿನ ಕಾರ

ಅಣೆಗಿಕ್ಕೊಳೊದು ಚಂದ್ರ
ಅಂಗ್ಡಿಗೋಗಿದ್ದೋರು ಬಂದ್ರ
ನನ್ನೇನಾರಂದ್ರ (ಮಂ ೧.೪–೯)
ಕೊತ್ತಂಬರಿ ಸೊಪ್ಪು

ಉದ್ದ ರಾಮಯ್ಯನಿಗೆ ಒಂದೇ ಹಲ್ಲು (ಲ ಗೌ ೧೯೪)
ಕೊನೆ ದೋಟ

ಜುಟ್ಟಿಲ್ಲದ ಹುಡುಗ ಪಟ್ಟಣಕ್ಕೆ ಹೋದ (ಸು ೨೮೫)

ತೊಟ್ಟಿಲ್ಲದ ಕಾಯಿ
ಪಟ್ಟಣಕೆ ಹೋಯ್ತು (ಸು ೩೦೮)
ಕೊಬರಿ ಗಿಟುಕು

ಎದೆನಾಗರ ಬೆದೆಕೋಲು
ಹೆಕ್ಕಳಿಸೋದು ನಿನ್ನ ಎದೆ ಮ್ಯಾಲೆ (ಸು ೧೧೪)
ಕೊರಳ ಸರ

ಒಂಟೊಂದು ವಡಾರ್ ಗಂಟ
ನಿಮ್ಮಪ್ಪನ್ ಕಚ್ಚೆ ಪವಡೇ ಬರೀ ಸರ್ಗಂಟು (ಮಂ ೧.೫–೨೯)
ಕೊಳ್‌ಮುಳ್ಳು

ಕಣ್ಯಾಗ ಕಣ್ಣಿ ಯಾವ ಕಣ್ಣಿ (ಇ ೩೧೮)
ಕೊಳಕಣ್ಣಿ

ಒಂಟೊಂಟು ಒಡೇನ ಗಂಟು
ನಿಮ್ಮಪ್ಪನ ಕಚ್ಚೆ ಪಾವಡೆಲ್ಲಾ ಸರಗಂಟು (ಸು ೧೪೧)
ಕೊಳಕೆ ಮುಳ್ಳು

ಹತ್ತು ಖಂಡುಗದ ಗದ್ದೆಗೆ ಒಂದೇ ಕಡವೆ (ಲ ಗೌ ೯೮೫)
ಕೊಳಗ

ಆತಗ ಆರಕಣ್ಣ
ಬೂತಗ ಮೂರಕಣ್ಣ
ಕೆಂದೆತ್ತಿಗಿ ಒಂದಾ ಕಣ್ಣ (ಲಠ್ಠೆ ಭಾಗ ೪–೩೭)
ಕೊಳಲು, ಟೆಂಗ, ಅಡಿಕೆ

ಅರ್ಲಿಗೆ ಆರಕಣ್ಣ ಬುರ್ಲಿಗೆ ಮೂರಕಣ್ಣ
ಗೌಡರ ಕೆಂದ ಎತ್ತಿಗೆ ಒಂದಾ ಕಣ್ಣ (ಲಠ್ಠೆ ಭಾಗ ೫–೩೧)
ಕೊಳಲು, ಟೆಂಗು, ಗುಲಗಂಜಿ

ಆತಗೆ ಆರು ಕಣ್ಣು
ಭೂತಗೆ ಮೂರು ಕಣ್ಣು
ಕೆಂದೆತ್ತೆಗೆ ಒಂದೇ ಕಣ್ಣು (ಲ ಗೌ ೧೪೬)
ಕೊಳಲು–ತೆಂಗಿನಕಾಯಿ–ಅಡಕೆ

ಅಕ್ಕೆಗೆ ಆರು ಕಣ್ಣು
ಮುಕ್ಕೆಗೆ ಮೂರು ಕಣ್ಣು
ಮುಂದೆ ಹೋಗೋ ಕೆಂದಾಳ ಎತ್ತಿಗೆ ಒಂದೇ ಕಣ್ಣು (ಲ ಗೌ ೧೪)
ಕೊಳಲು–ತೆಂಗಿನಕಾಯಿ–ಅಡಕೆಕಾಯಿ

ಅಕಟ ಅಕಟ ಆರು ಕಣ್ಣು
ಮುಕುಟ ಮುಕುಟ ಮೂರು ಕಣ್ಣು
ಅಜ್ಜೀಗೆ ಒಂದು ಕಣ್ಣು (ಇ ೧)
ಕೊಳಲು–ತೆಂಗಿನಕಾಯಿ–ಅಡಿಕೆ

ಅಕ್ಕಗ ಆರು ಕಣ್ಣು ತೆರದಾನ
ಮಕ್ಕಳಿಗೆ ಮೂರು ಕಣ್ಣು ಮುಚ್ಚ್ಯಾನ
ಮುಂದು ಹೋಗೋ ಕೆಂದ ಎತ್ತಿಗೆ ಒಂದ ಕಣ್ಣು ಕೊಟ್ಟಾನ (ಇ ೬)
ಕೊಳಲು–ತೆಂಗಿನಕಾಯಿ–ಗುಲಗಂಜಿ

ಅಕ್ಕನಿಗೆ ಆರು ಕಣ್ಣು
ಮುಕ್ಕನಿಗೆ ಮೂರು ಕಣ್ಣು
ನಾನಂತೂ ಪಾಪಿ ನನಗೊಂದೇ ಕಣ್ಣು (ವಾಲಿ ೩–೧೨೭)
ಕೊಳಲು, ತೆಂಗಿನಕಾಯಿ, ಸೂಜಿ

ಅಕ್ಕನಿಗೆ ಆರು ಕಣ್ಣು
ಮುಕ್ಕನಿಗೆ ಮೂರು ಕಣ್ಣು
ನನ್ನಂಥ ಪಾಪಿಗೆ ಒಂದೇ ಕಣ್ಣು (ರಾ ಗೌ ೪)
ಕೊಳಲು, ತೆಂಗಿನಕಾಯಿ, ಸೂಜಿ

ಅಕ್ಕರಿಗೆ ಆರು ಕಣ್ಣು
ಮುಕ್ಕರಿಗೆ ಮೂರು ಕಣ್ಣು
ತೋಟದ ಅಜ್ಜನಿಗೆ ಒಂದೇ ಕಣ್ಣು (ಚಂ ಸೆ ೩)
ಕೊಳಲು, ತೆಂಗು, ಅಡಿಕೆ

ಅಕ್ಕರಿಗೆ ಆರು ಕಣ್ಣು
ಮುಕ್ಕರಿಗೆ ಮೂರು ಕಣ್ಣು
ತೋಟದ ಅಜ್ಜನಿಗೊಂದೇ ಕಣ್ಣು (ವಾಲಿ ೨–೭೯)
ಕೊಳಲು, ತೆಂಗು, ಅಡಿಕೆ

ಅಕ್ಕರಿಗೆ (ಅಗ್ಡಂಗೆ) (ಆತಂಗೆ) ಆರ್ಕಣ್ಣೂ
ಮುಕ್ಕರಿಗೆ (ಮಿಗ್ಡಂಗೆ) (ಬೂತಂಗೆ) ಮೂರ್ಕಣ್ಣೂ
ಕೊಂಕ್ಣೀರಣ್ಣಂಗೆ ವಂದೇಕಣ್ಣು (ಶಾಂ ನಾ ೩೨೦)

ಅಟ್ಟಕ್ಕಾರ್ಕಣ್ಣು ಮುಟ್ಟಕ್ಕೂರ್ಕಣ್ಣು
ಚಂದುಳ್ಳಿ ಪೊರ್ಗೆ ವಂದೇಕಣ್ಣು (ಶಾಂ ನಾ ೩೧೯)
ಕೊಳಲು–ತೆಂಗು–ಅಡ್ಕೆ

ಅಕ್ಕರಿಗೆ ಆರು ಕಣ್ಣು
ಮುಕ್ಕರಿಗೆ ಮೂರು ಕಣ್ಣು
ತೋಟದ ಅಜ್ಜನಿಗೊಂದೇ ಕಣ್ಣು (ವಾಲಿ ೨– ೭೯)
ಕೊಳಲು, ತೆಂಗು, ಅಡಿಕೆ

ಬಿಟ್ಟಿಲ್ಲಿದ್ರೆ ಕೊರ್ದು ಮನೇಲಿದ್ರೆ ರಾಜಾ (ಶಾಂ ನಾ ೩೧೮)
ಕೊಳ್ಗಾ

ಬೆಟ್‌ದಲ್ಲಿದ್ ಮುಡ್ದು ಮನೆಗ್ ಬಂದು ತಾನೇ ಯಜಮಾನಾ ಅಂತದೆ
ಕೊಳ್ಗು (ಶಾ ನಾ ಅನುಬಂಧ ೨೦)

ತಲೆಕಪ್ಪು ಕೂದಲಿಲ್ಲ
ಮರವುಂಟು ಎಲೆಯಿಲ್ಲ
ಕೆಣಕಿದರೆ ಬೆಂಕಿ (ಶಾಂ ನಾ ೩೨೧)
ಕೊಳ್ಳಿ

ನೂಕ ನೂಕ ಮೋಟಾಯ್ತು (ಸು ೩೪೬)
ಕೊಳ್ಳಿ (ಉರಿಯುತ್ತಿರುವ ಸೌದೆ)

ಎರಡು ಕೈಗಳುಂಟು ಕಾಲುಗಳೆ ಇಲ್ಲ
ಎರಡು ಕಿವಿಗಳು ಉಂಟು ಕಣ್ಣುಗಳೆ ಇಲ್ಲ
ಡುಬ್ಬವೊಂದೆನಗುಂಟು ಎದೆಯೆ ಇಲ್ಲ
ಮುಂಡವೂ ಉಂಟೆನಗೆ ರುಂಡವಿಲ್ಲ (ಲ ಗೌ ೨೨೬)

ಕೊರಳೊಂದಿದ್ದರೂ ತಲೆಯೆನಗಿಲ್ಲ
ಕರಗಳಿಹವು ಬೆರಳೆನಗಿಲ್ಲ
ಚಲಿಸುತಲಿರುವೆನು ಕಾಲುಗಳಿಲ್ಲ
ಹರುಷದಿ ಜನರನು ನುಂಗುವೆನಲ್ಲ (ಇ ೪೨೫)

ಕೈಯುಂಟು ಕಾಲಿಲ್ಲ ತಲೆಹರಕ ಮುಂಡ
ಮೈಯೆಲ್ಲಾ ನವಗಾಯ ಒಂಬತ್ತು ತುಂಡ
ಬೇಗ ಬೇಗನೆ ಬಂದು ಹೆಗಲೇರಿಕೊಂಡ
ಕೈ ಕಳಚಿ ಬಿಟ್ಟರೆ ತಾ ಮುದುರಿಕೊಂಡ (ರಾ ಗೌ ೨೨೩)
ಕೋಟು

ಬಳ್ಯಾಗ ಬಳಿ ಯಾವ ಬಳಿ (ಲಠ್ಠೆ ಭಾಗ ೪–೧೩೫)
ಕೋಡಬಳಿ

ಮೊಲಕ್ಕ ಕೋಡ ಎಷ್ಟು (ಲಠ್ಠೆ ಭಾಗ ೫–೨೫೮)
ಕೋಡಾ ಇಲ್ಲ

ಉತ್ತರೆಯ ತಾಯಿಯ ತಮ್ಮ ಕತ್ತಲೊಳ್
ಗೆದ್ದಾತನಗ್ರಜನ ಪಿತನ ವಾಹನ (ಇ ೨೧೪)
ಕೋಣ

ಮೂಗ ಕೋಸಿಕೊಂಡು ಮುಗಲ ನೋಡತೈತಿ (ಇ ೮೬೯)

ಮೂಗು ಕೊಯ್ಸಿಕೊಂಡು ಮುಗಿಲು ನೋಡಿದಳು (ವಾಲಿ ೭–೨೪)
ಕೋಲಿ

ಬುಡಾ ಅಡಿವ್ಯಾಗ
ನಡಾ ಊರಾಗ
ತಲೀ ಮನ್ಯಾಗ (ವಾಲಿ ೨–೯೩)
ಕೋಲಿ, ದಂಟು (ಕಣಿಕೆ,) ಕಾಳು

ಹೊಡಿತದೆ ಬಡಿತದೆ
ಮನೆಗೆ ಬಂದು ಬಿದ್ಕೊತ್ತದೆ (ಜೀಶಂಪ ೨೯೬)
ಕೋಲು

ಕಾಡಿನಿಂದ ಬಂದು ಕಾಸಿನಗಲ ಜಾಗದಲ್ಲಿ ಕೂತ್ಕೊಂಡ (ಸು ೨೦೩)
ಕೋಲು ಅಥವಾ ದೊಣ್ಣೆ

ಉದ್ದ ಉದ್ದದವನೇ ಉರಿಮುಕದವನೇ
ಸುದ್ದೀ ಹೇಳೋ ಸೂಳೇ ಮಗನೇ (ಶಾಂ ನಾ ೩೨೨)

ಚಿಗಣಿ ಚಿಣಿಮಿಣಿ ಬಂದ ಕಟ್ಟು ಬಾಯಿಗೆ ಬೀಗ
ಬಂದೋಯ್ತು ರಾಜ್ಯದ ಮೇಲೆ (ಲ ಗೌ ೫೪೯)

ನೋಡಲು ಕರಿಯಪ್ಪ
ಬೀಡೊಳು ಸುಮ್ಮಪ್ಪ
ಕಾಡೊಳು ಡುಮ್ಮಪ್ಪ
ಇವನ್ಯಾರಪ್ಪ (ಚಂ ಸೆ ೧೭೧)
ಕೋವಿ

ಭೂಮಿಯೊಳಗೆ ಬೇರು
ಮೇಲ್ನೋಡಿದ್ರೆ ಚೆಂಡು
ಕೂದ್‌ನೋಡಿದ್ರೆ ಎಲೆಲೆ (ರಾ ಗೌ ೩೭೮)
ಕೋಸು

ಉತ್ತೊಲ್ದಲಿ ತೆಕ್ಕಡಿಚ್ಕೆಂಡು ಮನಗದೆ ಅಂದ್ರೆ (ಮಂ ೨.೨–೬)

ಕಿರೀಟತಿ ರಾಜಾ ಅಲ್ಲ
ವ್ಯಾಳೆ ತಿಳಿಸ್ತದ ಘಡಿಯಾರಲ್ಲ (ಲಠ್ಠೆ ಭಾಗ ೩–೨೭)

ಕಿರೀಟವುಂಟು ಮಹಾರಾಜನಲ್ಲ
ಗಡ್ಡವುಂಟು ಸಾಬಿಯಲ್ಲ (ಇ ೩೯೯)

ಕುತನಿ ಕೊಂಚಿಗಿ
ರತ್ನದ ಗೊಂಡೆ
ಸಾರಂಗ ಪ್ಯಾಟ್ಯಾಗ
ಸಾರಕೋತ ಹೋದರ
ಸತ್ತವರ ಎದ್ದ ಕೂಡತಾರ (ಲಠ್ಠೆ ಭಾಗ ೩–೨೮)

ಮುತ್ತಿನಂಥ ಅವ್ವ ರತ್ನದಂಥ ಮಕ್ಕಳು
ಮೊಲೆ ತೋರು ಅಂದ್ರೆ ನೆಲ ತೋರ್ತಿ (ಲ ಗೌ ೮೪೬)

ಮೊಲೆ ಇಲ್ಲದಮ್ಮನಿಗೆ ಮನೆ ತುಂಬ ಮಕ್ಕಳು (ಸು ೪೩೨)

ಲಂಗಸ್ಥ ಬರೋದು
ತಂಗಿ ಮಕ್ಕಳ್ನೆಲ್ಲ ಅಂಗಳಕ್ಕೆ ಕರಸೋದು (ಇ ೯೧೨)

ಸಂತೋಗ್ಹೋಗೋರ ಗೊಳ್ಳೆಲ್ಲ ಮೇಲಕ್ಕೆ (ರಾ ಗೌ ೪೪೦)

ಹಕ್ಕಿಗೆ ಹಲ್ಲಿಲ್ಲ ತುಪ್ಪಕ್ಕೆ ಜಿಡ್ಡಿಲ್ಲ
ಮಕ್ಕಳ ತಾಯ್ಗೆ ಮೊಲೆ ಇಲ್ಲ (ರಾ ಗೌ ೪೬೪)

ಹೆಕ್ಕಿ ತಿನ್ನುವವನಿಗೆ ಕೆಂಪು ಮುಂಡಾಸ (ಲ ಗೌ ೧೦೬೮)

ವಂದಜ್ಜಿಗೆ ನೂರಾರ್ಪಂಚೆ (ಶಾಂ ನಾ ೩೬)

ವಂದ್ವಟ್ಟಂಗೆ ನೂರಾರ್ಜುಟ್ಟಾ (ಶಾಂ ನಾ ೩೭)

ಸಂತೆಗೆ ಹೋಗೋನ ತಿಕ ತಲೆಕೆಳಕು (ಸು ೪೫೯)

ಸಂತ್ಹೋಗೋನ ತಿಕ ತಳತಳಕಾ (ಮಂ ೨.೨–೧೪)

ಹಳ್ಳಿ ಗಡಿಯಾರಾ ಒಳ್ಳೆ ಆಹಾರಾ (ಶಾಂ ನಾ ೩೮)
ಕೋಳಿ

ಮನೆಯಲ್ಲಿರುವ ಮಗಳಿಗೆ ಮೊಲೆಯಿಲ್ಲ
ಕಾಡಿನಲ್ಲಿರುವ ಮಗನಿಗೆ ಕಣ್ಣಿಲ್ಲ (ಲ ಗೌ ೮೧೭)
ಕೋಳಿ ಕಪ್ಪರಸುಂಟಿ

ಮೂಲೇಲಿ ಮುತ್ತು ಸುರಿದಿದೆ (ರಾ ಗೌ ೪೦೬)

ಮೂಲ್ಯಾಗ ಮುತ್ತು ಸುರುವಿದೆ (ವಾಲಿ ೭–೧೦)
ಕೋಳಿಕಸ

ಹತ್ತು ತಂಡದವರು
ಮುತ್ತಿನ ಪರಾಯದವರು
ಕೆಂಪು ಮುಂಡಾಸದವರು
ಬತ್ತಕ್ಕೆ ಬಂದು ಜಮಾಯಿಸಿದ್ದಾರೆ (ಲ ಗೌ ೯೮೬)
ಕೋಳಿಗಳ ಬಳಗ

ಒಳಗೆ ಸಿಪ್ಪೆ
ಮೇಲೆ ಖಂಡ (ರಾ ಗೌ ೧೫೯)
ಕೋಳಿಗುಂಡಕಾಯಿ

ಸುತ್ತ ಮುತ್ತ ಸುಣ್ಣದ ಗೋಡೆ
ಎಲ್ಲ ನೋಡಿದರೂ ಬಾಗಿಲೇ ಇಲ್ಲ (ಇ ೯೫೪)
ಕೋಳಿ ತತ್ತಿ

ಒಬ್ಬ ಅಜ್ಜಿಗೆ ಒಕ್ಕಳು ಬಟ್ಟೆ (ಲ ಗೌ ೨೭೮)
ಕೋಳಿ ಪುಕ್ಕ

ಊರಲ್ಲಿ ಒಂದು ಹುಡುಗಿ ಮೈನೆರೀಲಿಲ್ಲ
ಕಾಡಲ್ಲಿ ಒಂದು ಮರ ಎಲೆ ಉದುರುವುದಿಲ್ಲ (ಲ ಗೌ ೨೦೮)
ಕೋಳಿ: ಬೈನೆ ಮರ

ಅಟ್ಟಕ್ಕೆ ಹಾರೋದು ಬೇಕೊ?
ಬೆಟ್ಟಕ್ಕೆ ಹಾರೋದು ಬೇಕೊ? (ಸು ೧೯)

ಕೋಳಿ ಮತ್ತು ಮೇಕೆ

ಒಂದು ಸೀಸಾಯಿನಲ್ಲಿ ಎರಡು ತರ ಎಣ್ಣೆ (ಸು ೧೫೬)

ಓಟೆಯಿಲ್ಲದ ಮಾವಿನ ಹಣ್ಣು (ಲ ಗೌ ೩೫೫)

ಕುಪ್ಪಿ ಒಂದರಲ್ಲಿ ತುಪ್ಪ ಎರಡು ಬಗೆ (ಚಂ ಸೆ ೧೦೫)

ಕೆಂಡದಂಥ ಕೆಂಪು
ಉಂಗುರದಂಥ ನುಣುಪು
ಅದ್ನ ಊಟಮಾಡ್ತೀವಿ ಅಂದ್ರೆ
ನಾ ಹೇಳ್ತೀನಿ ಅಂದ (ರಾ ಗೌ ೨೧೭)

ಗಟ್ಟ್ದ ಮೆನ್ನ ಬಯ್ಲಿಕಾಯ ತುರಿಲ್ಲಾ ಬುಡಿಲ್ಲಾ (ಶಾಂ ನಾ ೪೪)

ಗಾರೆ ಬಾವಿಗೆ ದಾರಿ ಇಲ್ಲ (ಲ ಗೌ ೫೦೯)

ಚೊಟ್ಟಿಳ್ಳೆ ಯಲೆಯಿಲ್ಲೆ ಬೆಳಿ ಬದ್ನೆಕಾಯಿ (ಶಾಂ ನಾ ೪೦)

ತುಂಬದ್ಕೊಡಕ್ಕೆ ಬಾಯಿಲ್ಲೆ (ಶಾಂ ನಾ ೪೩)

ತುಂಬದ್ಕೊಡಾ ತುಳ್ಕೊತಿಲ್ಲೆ (ಶಾಂ ನಾ ೪೨)

ಮಾನವಿಲ್ಲದ ಹೆಣ್ಣು ಬಸುರಾಗಿ ಕಣ್ಣಿಲ್ಲದ ಮಗು ಹೆತ್ತಳು (ಲ ಗೌ ೮೩೫)

ಮಾಳೂರು ಬದನೆಗೆ ತೊಟ್ಟಿಲ್ಲ (ಲ ಗೌ ೮೪೨)

ಮೈಸೂರು ಬದನೆ
ಹೊಟ್ಟೆಯೊಳಗೆ ಹೂವಾಯ್ತು
ಹೊಟ್ಟೆಯೊಳಗೇ ಕಾಯಾಯ್ತು
ಹೊಟ್ಟೆಯೊಳಗೇ ಹಣ್ಣಾಗಿ ಹೊರಕ್ಕೆ ಬತ್ತು (ಲ ಗೌ ೮೭೫)

ವಂದ್ಬಾಟ್ಟಿಲಿ ಯರಡ್ತರ್ಮದ್ದು (ಎಣ್ಣೆ) (ಶಾಂ ನಾ ೩೯)

ಸುತ್ತ ನೋಡಿದರೆ ಸುಣ್ಣದ ಗೋಡೆ
ಎತ್ತಾಗಿ ನೋಡಿದ್ರು ಬಾಕಲೆ ಇಲ್ಲ (ಜೀಶಂಪ ೨೬೦)

ಸುತ್ತ ಮುತ್ತ ಬೇಲಿ ಹಾಕಿ
ಸೂಳೇರಮ್ಮನ ಜೋಳ ಬಿತ್ತಿ
ಎತ್ತಾಗಿ ನೋಡಿದರೂ ಕನ್ನವಿಲ್ಲ (ಲ ಗೌ ೯೫೨)

ಸುತ್ತ ಮುತ್ತ ಸುಣ್ಣದ ಗ್ವಾಡೆ
ಯತ್ಲಗ್ ನೋಡಿದ್ರು ಬಾಗ್ಲಿಲ್ಲ (ಮಂ ೧.೪–೭೭)

ಸುತ್ಲೂ ಸುಣ್ಣದ ಗೊಡೆ (ಶಾಂ ನಾ ೪೧)

ಯತ್ಲೂ ದಾರಿಲ್ಲೆ ಹೊಟ್ಟೇಲಿದ್ದ ಹಣ್ಣು ತಟ್ಟನೆ ಬೀಳ್ತು (ಲ ಗೌ ೧೦೭೩)
ಕೋಳಿಮೊಟ್ಟೆ

ಸುತ್ತ ಸುಣ್ಣದ ಗೋಡೆ
ಎತ್ತ ನೋಡಿದರೂ ಬಾಗಿಲೇ ಇಲ್ಲ (ವಾಲಿ ೫–೧೪)
ಕೋಳಿಯ ಮೊಟ್ಟೆ

ಬೀದೀಲಿ ಆಡೋದ ಬಿಡೊ ಮುಂದೆ ಕೂಸೆ
ನಿನಗಿಟ್ಟರ್ಯಾರು ಪಟ್ಟಿ ಕುಪಾಲಿ (ಲ ಗೌ ೭೭೯)

ಬೀದಿಲಿ ತಿರುಗಾಡ
ಮುಂಡೆ ಕೂಸ್ಗೆ
ಕೆಂಪು ಟುಬಾಲಿ (ರಾ ಗೌ ೩೫೯)

ಹಲವು ಮಕ್ಕಳ ತಂದೆ
ತಲೆಯಲ್ಲಿ ಕೊಟ್ಟವಗೆ
ಸಲೆ ಗಳಿಗೆ ಜಾವವರಿವವನ
ಹೆಂಡತಿಗೆ ಮೊಲೆಯಿಲ್ಲ (ರಾ ಗೌ ೪೭೭)
ಕೋಳಿ ಹುಂಜ

ಹಕ್ಕಂಡ್ ತಿಂಬೋಳಿ ಮಗಂಗೆ ಮುತ್ನ ತುರಾಯಿ ಕೆಂಪಿರುಮಾಲು
ಕೋಳಿ ಹುಂಜಾ (ಶಾಂ ನಾ ೪೬)

ಹಲ್ವು ಮಕ್ಳ ತಂದೆ
ತಲೆ ಮೇಲ್ ಜುಟ್ಟಾ (ಶಾಂ ನಾ ೪೫)
ಕೋಳಿ ಹುಂಜಾ

ಸರಕಾರ ಮುಂದೆ ಸರದಾರ ಹಿಂದೆ (ಲ ಗೌ ೯೧೯)
ಕೋಳಿಹೇಂಟೆ–ಮರಿ

ಗಟ್ದ್ ಮೆನ್ನ ಅಜ್ಜಿಗೆ ಪಕ್ತುಂಬ್ಮಕ್ಳ (ಶಾಂ ನಾ ೪೭)
ಕೋಳಿ

ಚಿಕ್ ಚಿಕ್ ಹೋರಿ
ಚಿಕ್ಕಪ್ಪನ ಹೋರಿ
ಸಂಜಿಕ ಬರತೈತಿ ಭಾಪರೆ ಹೋರಿ (ಇ ೫೨೦)

ಚಿಕ್ಕ ಚಿಕ್ಕ ಸೀರಿ
ಚಿನ್ನದ ಹಳಿ ಸೀರಿ
ರಾತ್ರಿ ಬಿರೂದು ಬೆಚ್ಚನ್ನ ಸೀರಿ (ವಾಲಿ ೩–೧೮)

ಚಿಕ್ಕ ಚಿಕ್ಕ ಹೋರಿ
ಚಿನಾರಿ ಹೋರಿ
ಸಂಜಿಗೆ ಬರ್ತತಿ ಬಪ್ಪಾರಿ ಹೋರಿ (ಇ ೫೨೮)

ನಾಲ್ಕೂ ಮೂಲಿಗೆ ಗೊಂಡಿ
ಸಂಜೀಕಿ ಬಾರಾ ರಂಡಿ (ವಾಲಿ ೩–೩೧)

ನಾಲ್ಕು ಮೂಲಿಗೆ ನಾಲ್ಕು ಗೊಂಡೆ
ಸಂಜಿಕ ಬಾ ರಂಡೆ (ಇ ೬೫೮)
ಕೌದಿ

ಮಡಿವಾಳರಿಗೆ ಶತ್ರು
ಮಠದಯ್ಯಗಳ ಮಿತ್ರ
ಕಡುಗಳ್ಳರಿಗೆ ಗಂಡ
ಮಡಿ ಧೋತ್ರಗಳ ಮಿಂಡ (ವಾಲಿ ೮–೩೩)
ಕೌಪಿನ

ಬೆಟ್ಟೆಲ್ಲಾ ಕರಿಕುಬ್ಳಿ (ಶಾಂ ನಾ ಅನುಬಂಧ ೨)
ಕಂಟೆರು

ಭೀಮ ನಿಂತಿದ್ದಾನೆ ಅರ್ಜುನ ಮಲಗಿದ್ದಾನೆ (ಶಾಂ ನಾ ೨೩೪)
ಕಂಬ–ತೊಲೆ

ಖಡಿ ಹುಟ್ಸೆ ಬಾಳಿ ಸಾಯ್ತದ (ಲಕ್ಷೆ ಭಾಗ ೫–೧೪೨)
ಕಂಬದ ಮ್ಯಾಗಿನ ಕಟ್ಟಿ ಗಡಗಿ

ಉಂಡ ಉಟ್ಟ ಕೆಡವಿಕೊಂಡ (ಸು ೧೦೩)
ಕಂಬಳಿ

ಸತ್ತಕುರಿ ಹೊತ್ತವನೇ
ಸತ್ತೆತ್ತು ಏರಿದವನೇ
ಬತ್ ಮರದ ಪ್ರತಿಕೊಯ್ಯುವ ದಾರಿಯವ್ವು (ಶಾಂ ನಾ ಅನುಬಂಧ ೫೩)

ಕಂಬಳಿ ಹೊದ್ದು ಚಪ್ಪಲು ಮೆಟ್ಟಿದವ

ತಂಡಿಲ್ದ ಕಾಸ್ತಾನ (ಲತ್ಯೆ ಭಾಗ ೫–೧೭೭)

ಕಂಬಾರ

ಅಡಮುಟ ಕ್ವಾಣೀಗ
ಮೆಯೆಲ್ಲ ಮುರಾಣಿ (ಲತ್ಯೆ ಭಾಗ ೫–೯)

ಚಿಕ್ಕ ಚಿಕ್ಕ ಹೋರಿ ಚಿಕ್ಕಾಣಿ ಹೋರಿ
ಸಂಜಿಕ ಬರತದ ಬಪ್ಪರೆ ಹೋರಿ (ಲತ್ಯೆ ಭಾಗ ೫–೧೫೬)

ನಾಕ ಮೂಲ್ಗಿ ನಾಕ ಗೊಂಡೆ
ಸಂಜ್ಕ ಬಾರ ನನ ರಂಡೆ (ಲತ್ಯೆ ಭಾಗ ೫–೧೮೯)
ಕಂವದಿ

ನೂರ್ವನ್ರ ಪುಕ್ಳೀಗೆ ಉಂದೇ ಉಡ್ದಾರಾ (ಶಾಂ ನಾ ೪೧೩)

ಕಾಂಜ

ಅಟ್ಟದ ಮೇಲೆ ಪುಟ್ಟ ಲಕ್ಷ್ಮಿ (ಸು ೨೦)

ಅಟ್ಟದ ಮೇಲೆ ಸದಾ ಪುಟ್ಟ ಲಕ್ಷ್ಮಿ ಕುಂತಿರುತ್ತಾಳೆ (ಇ ೫೨)

ಅಟ್ಟದ ಮ್ಯಾಲ ಪುಟ್ಟ ಲಕ್ಷ್ಮಿ (ವಾಲಿ ೩– ೧೧೦)

ಅಡ್ಡಗೊಡೆಯ ಮೇಲೆ ದುಡ್ಡು ಕುಳ್ತೆದೆ (ಶಾಂ ನಾ ಅನುಬಂಧ ೪೯)

ಒಡೊಡವೆಗೆಲ್ಲ ತೂತಿಲ್ಲದ ಒಡವೆ ಯಾವುದು (ಸು ೧೨೭)

ಗುಡ್ಡದ ಮ್ಯಾಲ ಗುಡಿ (ಲತ್ಯೆ ಭಾಗ ೫–೧೫೧)

ಚಿಕ್ಕ ಬೆಟ್ಟದಲ್ಲಿ ಪುಟ್ಟ ಚಂದ್ರ (ರಾ ಗೌ ೨೪೬)

ತೂತಿಲ್ಲದ ಒಡವೆ ದೇವರಿಗೂ ಬೇಕು ದಿಂಡರಿಗೂ ಬೇಕು (ಲ ಗೌ ೬೧೫)

ನಾನೆಟ್ ಗೆಡಾ ನನ್ ಕಣ್ಣಿಗೇ ಕಾಣ್ತಿಲ್ಲೆ (ಶಾಂ ನಾ ೪೧೬)

"ಪದಗಲ್ ಪಾವುಡಗಲ್ ಎಲ್ಲಿಟ್ಟಿದೇ ಸೊಸ್ಮುದ್ದೆ"
"ಅಣ್‌ದಿರ್ ಬಂದಾಗ ಕಟ್‌ಕೊಡಲಿಲ್ಲಾ
ಅಕ್‌ದಿರ್ ಬಂದಾಗ ಬಿಟ್‌ಕೊಡಲಿಲ್ಲಾ
ನೀ ನಿಟ್ಟಲ್ಲೇ ಇಟ್ಟಿದ್ನೇ ಅತ್ಯಮ್ಮಾ" (ಶಾಂ ನಾ ೪೧೫)

ಪೇಟೆ ಮನೆ ಗರತಿ
ಅಂಗಡ್ಯಾಗ ಇರತಿ
ರೊಕ್ಕಾ ಕೊಟ್ರ ಬರತಿ
ಹಣಿಮ್ಯಾಗೇರತಿ (ಇ ೭೧೧)

ಬೆಟ್ಟದ ಮ್ಯಾಲೆ ಕೆಂಪಿನ ಬೊಟ್ಟು (ಸು ೩೮೩)

ಬಂಗಾರದೊಳಗಿನ ಸಿಂಗಾರ (ಇ ೭೯೬)

ಮಂಚದ್ಮೇಲೆ ಮಹಾಲಕ್ಷ್ಮಿ (ಶಾಂ ನಾ ೪೧೪)

ತೂಬಿಲ್ಲದ ನಗ ಯವುದು (ಲ ಗೌ ೬೧೬)

ಹೆಂಗ್ಸು ಇಕ್ಕಿರ ವಡ್ವೆ
ಮಾತಿಲ್ಲದ ವಡ್ವೆ ಯ್ಯಾವುದಾ (ಮಂ ೧.೨–೧೫)
ಕುಂಕುಮ

ಅವ್ವಂದ ಮೆತಗೊಂಡದ
ಅಪ್ಪಂದ ಅಗಳಾಡ್ತದ (ಲಠ್ಠೆ ಭಾಗ ೫–೩೫)
ಕುಂಕುಮ, ತಾಳಿ

ಅವ್ವಂದು ಮೆತಗೊಂಡೈತಿ
ಅಪ್ಪಂದು ಅಗಳಾಡ್ತೈತಿ (ವಾಲಿ ೮–೪೮)
ಕುಂಕುಮ, ತಾಳಿ

ವಗತನ ಒಂದ ಹಿಕಮತಿ ದೊಡ್ಡದ
ಬಂಗಾರದಾಗೊಂದ ಸಿಂಗಾರ ದೊಡ್ಡದ
ಸಕ್ಕರಿಗಿಂತ ರುಚಿ ಭಲೆ ದೊಡ್ಡದ (ಲಠ್ಠೆ ಭಾಗ ೫–೨೬೭)
ಕುಂಕುಮ, ರಾಟಲ(ರಾಟಿ) ಹಲಪುಡಿ

ಅವ್ವಂದು ಕೆಂಪಗ
ಅಪ್ಪಂದು ಬೆಳ್ಳಗ (ಇ ೧೪೩)

ಹೆಂಗಸಿನ ಹತ್ತರ ಕೆಂಪು
ಗಂಡಸಿನ ಹತ್ತರ ಬಿಳಿ (ವಾಲಿ ೮–೨೭)
ಕುಂಕುಮ ವಿಭೂತಿ

ಉತ್ತ ಹೊಲದಲ್ಲಿ ಕೋತಿ ಕುಣೀತದೆ (ರಾ ಗೌ ೯೮)
ಕುಂಟೆ

ಇಲ್ಲಿ ಇದ್ದ ಪ್ರಾಣಿ ಅಲ್ಲೋಗಿ ಮರಿಹಾಕ್ತದೆ (ಶಾಂ ನಾ ಅನುಬಂಧ ೪೩)

ಉಂಡುಂಡ್ದಪ್ಪ ಉಂಡಗಿದೆ (ರಾ ಗೌ ೯೩)
ಕುಂಬಳ

ನನ್ನಜ್ಜ ಮಯ್ಯೆಲ್ಲಾ ಬೂದ್ ಬೂದು (ಶಾಂ ನಾ ೧೫೫೫)
ಕುಂಬ್ಳಾ

ಅವ್ವ ತಟ್ಟೆವ್ವ
ಮಗಳ ಮಾಸುಂದರಿ
ಮಗಾ ತೆರಗುಂಡ (ಲಠ್ಠೆ ಭಾಗ ೪–೨೮)
ಕುಂಬಳ ಎಲಿ, ಹೂ, ಕಾಯಿ

ಕುಳಿತ್ತಲ್ಲೆ ಕುಳಿತಿರುವ ಶೆಟ್ಟಿ
ಕೊಟ್ಟವರಾರೋ ಅವನಿಗೆ ಹೊಟ್ಟೆಯನು ಬಿಟ್ಟಿ (ಇ ೪೦೭)

ಹಗ್ಗ ಹಾಸೈತಿ ಗೂಳಿ ಮಲಗೈತಿ
ಕೊಯ್ಯದ ಹೊರತು
ಕರದ್ರ ಬರೂದಿಲ್ಲ (ಇ ೯೯೧)

ಅಂಬಹಾಸೈತೆ ಗುಂಬ್‌ಕುಳ್ತೈತೆ (ಜೀಶಂಪ ೩೮)

ಅಂಬು ಆರ್ಕೊತ್ತೆ
ಗುಂಬೆ ಕೂತ್ಕತ್ತೆ (ಮಂ ೧.೪–೪)

ಕೋಣ ಹಗ್ಗ ಹಾಸಿಕೊಂಡು ಮಲಗಿದೆ (ಲ ಗೌ ೪೯೫)

ಹಗ್ಗ ಕಟಿಗೊಂಡು ಮಕ್ಕಳು ಬಿದ್ದಾವ (ಇ ೯೯೨)

ಹಗ್ಗ ಮೇಯ್ತದೆ ಕೋಣ ಬಿದ್ಕೊಂಡದೆ (ಮಂ ೧.೪–೮೩)

ಹಗ್ಗ ಹಾಸಿದೆ ಕೋಣ ಮಲಗಿದೆ (ಜೀಶಂಪ ೨೭೩)

ಹಗ್ಗ ಹಾಸೇತಿ ಗೂಳಿ ಮನಗೇತಿ (ಲಠೈ ಭಾಗ ೪–೧೬೯)

ಹಾಸು ಹಗ್ಗದಾಗ ಗೂಳಿ ಮಲಗೈತಿ (ಇ ೧೦೭೪)

ಹೋರಿ ತಡ್ಡ ಹುದಲಾಗ ಸಿಕ್ಕತಿ (ಲಠೈ ಭಾಗ ೪–೨೧೦)

ಕುಂಬಳಕಾಯಿ

ಡುಮ್ಮ ಹೊಟ್ಟೀಯವ ದಿನ್ನಿ ಹತ್ತಲಾರ (ವಾಲಿ ೨–೭೦)
ಕುಂಬಳ ಕಾಯಿ

ಕುಂತಿದ್ದ ಕುಯ್ದು ಹಾಕಿದ್ರು
ನಿಂತಿದ್ದ ಇಳೀ ಬಿಟ್ಟಿದ್ರು (ಸು ೨೧೭)
ಕುಂಬಳಕಾಯಿ ಮತ್ತು ಬದನೆಕಾಯಿ

ಏನಯ್ಯ ಇವತ್ತು ಅರಾಜ್ಞೆ ಮಾಡಬೇಕು
ನಾಳೇ ನಮ್ಮ ಮನ್ಲಿ ಒಂದು ೨೦೦ ಜನ ಡೊಳ್ಳಟ್ಟೋರೊ
ಒಂದು ೩೦೦ ಜನ ಆದ್ರುಕ್ಕುಟ್ಟೋರು
ಒಂದು ೨೦೦ ಜನ ಮಿಂಡಗಾರುನ್ಗೆಲುಟ್ಟೋರು
ಒಂದು ೪೦೦ ಜನ ಗ್ವೊಂಗರುಗಾಲ್ನೋರು
ಒಂದು ೩೦೦ ಜನ ಮೂರು ನಾಮದವರು
ಕಂದಾ ಹಾಕ್ದ ಕರ್ಹಕಾಲು ನಾಲ್ಕು ತಂಕೊಂಡು
ಒಂದು ಬಂಗಾರದ ಬೀಜ
ಒಂದು ಸುಂಗಾರದ ಬೀಜ
ಒಂದು ಮಣ ಮುಚ್ಚ ಬೀಜ ತಕ್ಕೊಂಡು
ಬಂದು ಬಿಡಪ್ಪ ಅಂತ್ಹ ಯ್ಯಾಳದ್ರು (ಮಂ ೧.೪–೨೦)

ಕುಂಬಳಕಾಯಿ, ಹಲಸಿನಕಾಯಿ, ಬದನೆಕಾಯಿ, ಹುಣಸೇಹಣ್ಣು, ಪಡವಲಕಾಯಿ, ಬಾಳೆದಿಂಡು, ಕೊತ್ತಂಬರಿ, ಅರಿಷಿಣ, ಕುಂಕುಮ, ಚಂದ್ರ, ಅತ್ತಿಹರಳು.

ಅಪ್ಪ ಡಬಲಪ್ಪ
ಅವ್ವ ಕೆರಕವ್ವ
ಮಗಳು ಮಾಸುಂದರಿ (ವಾಲಿ ೨–೩೧)

ಕುಂಬಳ ಕಾಯಿ, ಹಿರೇಕಾಯಿ, ಕೋತಂಬರಿ

ಹಗ್ಗ ಹಾಸ್ಯೇನಿ ಎಮ್ಮೀ ಕಟ್ಟೇನಿ (ಇ ೯೯೪)

ಹಸು ಮಲಗಿದೆ ಕರು ಮೆಯ್ತದೆ (ಲ ಗೌ ೧೦೨೩)

ಕುಂಬಳ ಬಳ್ಳಿ
ಹಸು ಮಲಗಿದೆ ಹಗ್ಗ ಮೇಯುತ್ತಿದೆ (ಚಂ ಸೆ ೨೪೬) ಕುಂಬಳ–ಬಳ್ಳಿ

ಅಂಬು ಹರೀತದೆ
ಗುಂಬ ಕೂತದೆ (ಸು ೭೮)
ಕುಂಬಳ ಬಳ್ಳಿ, ಕಾಯಿ

ಹಗ್ಗ ಹಾಸ್ಯಾದ ಗೂಳಿ ಮಲಗ್ಯಾದ (ವಾಲಿ ೨–೫)
ಕುಂಬಳ ಬಳ್ಳಿ, ಕಾಯಿ

ಗೇಣುದ್ದ ಗಿಡ
ಗೆರಸಿ ಅಗಲ ಎಲೆ
ದಿನಕ್ಕೆ ನೂರು ಹಣ್ಣು ಕೆಳಕ್ಕೆ ಬೀಳ್ತವೆ (ಸು ೨೫೯)
ಕುಂಬಾರದ ಚಕ್ರ ಮತ್ತು ಮಡಕೆಗಳು

ಕಟ್ಟಿದ್ದ ಕರಿಮಣಿ ಹರೆವ್ನೆ ಜಾಣ
ಒಟ್ಟಿದ್ದ ಬಣಮಿ ಸುಡವ್ನೇ ಜಾಣ (ವಾಲಿ ೩–೮೧)
ಕುಂಬಾರನ ಆವಿಗೆ

ಗೇಣುದ್ದದ ಪೈರು ಗೆರಸಿ ಅಳ್ತಿ ಎಲೆ ನಿಚ್ಚಗೆ ನೂರು ಕಾಯಿ (ಲ ಗೌ ೫೩೨)
ಕುಂಬಾರನ ಚಾಲಿಗೆ

ಒಂದ ಗೋದಿ ತಂದ ಕಡಬ ಮಾಡಿ
ಅಟ್ಟದ ಮ್ಯಾಲಿಟ್ರ ಅಟ್ಟ ಕಡಕೊಂಡ ಬಿಟ್ಟ
ಇದೇನ ಸುದ್ದಿ ಅಂತ
ವಿಜಾಪುರದವ್ರ ತಗಣಿಗಿ
ಮುಗದಣಾ ಹಾಕ್ಕೊಂಡು
ನೋಡಾಕ ಬಂದರಂತ (ಲಠ್ಠೆ ಭಾಗ ೨–೨೩)
ಕೆಂಡ

ಹತ್ತು ತಲೆ ಕೆಂಪು
ಆರು ತಲೆ ಕಪ್ಪು
ಹಾಗಾದರೆ ನಾನಾರು (ಸು ೪೯೨)
ಕೆಂಡ, ಬೆಂಕಿಕಡ್ಡಿ

ಬಣ್ಣದ ಕೊಂಚಿಗಿ ಮಣ್ಣಾಗ ಮುಚ್ಚ್ಯಾದ
ಕೆಂಪುಗೆಣಸು (ವಾಲಿ ೨–೨)

ಅಮ್ಮಂದರಾಗ ಅಜ್ಜಂದು ಸಿಕ್ಕೈತಿ (ಇ ೧೧೭)
ಕೊಂಕಳರಿವಿ

ತಾಯಿ ಅಗಲಿಸ
ತಂದೆ ತಗಲಿಸ (ರಾ ಗೌ ೨೬೮)
ಕೊಂತ, ಶ್ಯಾವಗೆ

ಹಳ್ಳದ ದಂಡಿ ನಾರಿ
ಉಟ್ಟಾಳ ಹಳದಿ ಸೀರಿ
ಪ್ಯಾಟ್ಯಾಗ ಬಂದಾಳ ಓಡಿ
ಕರಿತಾಳ ಕೈಯ ಮಾಡಿ
ಹಿಡಿಯಾಕ ಹೋದರ ಕಡಿಯಾಕ ಬರ್ತಾಳ (ಇ ೧೦೫೫)

ಹಳ್ಳದ ದಂಡಿ ಪೋರಿ
ಉಟ್ಟಾಳ ಹಳದಿ ಸೀರಿ
ಪ್ಯಾಟ್ಯಾಗ ಬರತಾಳ ಓಡಿ
ಕರಿತಾಳ ಕೈಯ ಮಾಡಿ (ಲಠ್ಠೆ ಭಾಗ ೪–೨೦೦)
ಕ್ಯಾದಗಿ ಹೊಡಿ

ಕರಿಪಾರಗ ಕೆಂಪಟೋಪಿ (ಲಠ್ಠೆ ಭಾಗ ೪–೬೨)

ಕೆಂಪೆತ್ತಿನ ತಿರವುಲಕ ಹ್ವಾದ್ರ
ಕರಿ ಎತ್ತ ತಿರಗತದ (ಲಠ್ಠೆ ಭಾಗ ೪–೮೨)
ಕ್ಯಾರಹಣ್ಣ

ಮಗಳು ಮಾ ಚಲುವಿ
ತಾಯಿ ಅಂಡ್ಹರಿಕಿ
ಮಗಳು ಮಾ ಚಲುವಿ
ತಾಯಿ ತಟ್ಲಿಹಂತಾಕಿ (ಇ ೮೦೦)
ಕ್ಯಾರಹಣ್ಣು, ಸುಣ್ಣದ ಹಣ್ಣು–ಬಾರೀಹಣ್ಣು–ಕುಸುಬೆ, ಗುಲಾಬಿಹೂ

ಮಡಿವಾಳರ ವೈರಿ
ಮಠದಯ್ಯಗ ತರ್ರಿ (ಇ ೮೦೪)
ಕ್ಯಾವಿಬಟ್ಟೆ

ವನದಲ್ಲಿ ಹೆಚ್ಚಾಗಿ ನೀರಿಲ್ಲದ ಕಡೆ ಬೆಳೆಯುವ ಒಣಗಿದ ಗಿಡ
ಆದರೂ ಜನರಿಗೆ ಹೆಚ್ಚು ಪ್ರಯೋಜನಕರ ನಾನಾರು (ಚಂ ಸೆ ೨೧೭)
ಖರ್ಜೂರ

ಊಚನಕಿಂತ ಉಚ್ಚಿ ಸೈ
ಬುಡ್ಡಿಗಿಂತ ಹಾಟ ಸೈ
ಹುಳಕ ಮಾರ್ಯಾಕಿಗಿಂತ ತೊಗಲ ಸೈ (ಲಠ್ಠೆ ಭಾಗ ೪–೪೪)
ಖುಬ್ಬ, ಟೆಂಗ, ಖಾರಿಕ

ಬೆಲ್ಲದ ಗಡಿಗ್ಯಾಗ
ಒಂದಾ ಗೂಗಿ ಕುಂತದ (ಲಠ್ಠೆ ಭಾಗ ೪–೧೪೬)

ಬೆಲ್ಲದ ಗಡಿಗ್ಯಾಗ ಬುಲ್ಲಿ ಕುಂತೈತಿ (ವಾಲಿ ೮–೫೪)
ಖಾರಿಕ ಬೀಜ

ಒಂದು ಹೊರಗ ರುಚಿ
ಒಂದು ಒಳಗ ರುಚಿ'
ಒಂದಂತೂ ಎಲ್ಲಕ್ಕೂ ರುಚಿ (ವಾಲಿ ೫–೪೨)
ಖಾರೀಕು, ತೆಂಗು, ಉಪ್ಪು

ಕೈಯಿಂದ್ರೂ ತಿನ್ನೋದಿಲ್ಲ
ಕಾಲಿದ್ರೂ ನಡೆಯೋದಿಲ್ಲ (ಇ ೪೨೦)

ನಾಲ್ಕು ಕಾಲುಗಳುಂಟು ಪ್ರಾಣಿಯಲ್ಲ
ಎರಡು ಕೈಗಳುಂಟು ಮನುಷ್ಯನಲ್ಲ (ವಾಲಿ ೩–೫೩)

ನಾಲ್ಕು ಕಾಲಿದ್ದರೂ ನಡೆಯಲಾರೆ
ಕೈಗಳೆರಡಿದ್ದರೂ ದುಡಿಯಲಾರೆ
ಬೆನ್ನೇರಿ ಕುಳಿತವಗೆ ಬೇಡವೆನಲಾರೆ (ವಾಲಿ ೩–೧೦೩)

ನಾಲ್ಕು ಕಾಲು ನಡಿಯಾಕಿಲ್ಲ
ಎರಡು ಕೈ ಹಿಡಿಯಾಕಿಲ್ಲ (ಇ ೬೫೭)

ನಾಲ್ಕು ಕಾಲುಂಟು ಪ್ರಾಣಿಯಲ್ಲ
ಎರಡು ಕೈಯುಂಟು ಮನುಷ್ಯನಲ್ಲ
ಬೆನ್ನುಂಟು ಬೇತಾಳನಲ್ಲ (ಇ ೬೫೬)
ಖುರ್ಚಿ

ಏರಿ ಇಲ್ಲದ ಕೆರೆಯಲ್ಲಿ ನೀರು ತುಂಬಿದೆ (ಲ ಗೌ ೨೫೯)
ಗಗನ

ಅಗೀತಾನ ತಗೀತಾನ
ರಾಮಾರಗುತ ಹಳ್ಳಕ್ಕ ಹೋಗಿ
ತೊಳಕೊಂಡ ಬರತಾನ (ಲಠೈ ಭಾಗ ೪–೮)

ಅಗೀತಾನ ತಗೀತಾನ
ರಾಮಾರಗುರ ಹಳ್ಳಕ್ಕೋಗಿ
ತೊಳಕೊಂಡು ಬಂದು ಪ್ಯಾಟ್ಯಾಗ ಮೆರಿತಾನ (ಇ ೨೪)

ಬಣ್ಣದ ಕೊಂಚ
ಮಣ್ಣಾಗ ಮುಚ್ಚೇತಿ (ಲಠೈ ಭಾಗ ೪–೧೩೩)

ಬೆಳ್ಳಿ ಲಂಗದ ಸುಂದರಿಗೆ ಮೈಯೆಲ್ಲಾ ಚಿನ್ನ (ಇ ೭೨೨)

ಬೆಳ್ಳೀ ಚೆಂಡು ಬೆಂಕಿಗೆ ಕರಗತೈತಿ (ಇ ೭೨೧)

ಬೆಳೆಗೆ ಮಳೆ ಭೂಮಿ ಬೇಡ
ಬರಗಾಲದ ಲೆಕ್ಕ ಬೇಡ
ಆದರೂ ಬೆಳೆ ಚೆನ್ನಾಗಿ ಬರುತ್ತದೆ (ಇ ೭೨೩)

ವನವನ ನಾರಿ
ವನ ಸುಂದರಿ
ತಂದೇನ ನೋಡತಿ
ತಿಂದಾ ನೋಡ (ಲಠೈ ಭಾಗ ೪–೧೫೮)

ಹಜನಾಳ ಎತ್ತ
ಗೊಜನಾಳ ಬಿತ್ತ
ಬಾಲಾ ಕಡಿತ
ಪರಲ ಹರಿತ (ಲಠೈ ಭಾಗ ೪–೧೭೫)
ಗಜ್ಜರಿ

ತುಂಬ್ರಿ ಗಿಡದಾಗ ಘುಂಬ್ರಿ ಆಡ್ತದ (ಲಠೈ ಭಾಗ ೫–೧೭೧)
ಗಡಿಗಿ

ಕರೇ ಗುಡಿ ಬಿಳೇ ದೇವರು
ಪುಕ್ಕ ಪೂಜಾರಿ ಹೊಕ್ಕು ಹೊಕ್ಕು ನೋಡತಾನ (ಇ ೩೬೫)
ಗಡಿಗಿ, ಅನ್ನ, ಹುಟ್ಟು

ಕರೆ ಗುಡಿ ಬಿಳೀ ದೇವರು
ಹೊಕ್ಕ ಪೂಜಾರಿ ತಿರುಗಾಡಿ ನೋಡ್ತಾನ (ವಾಲಿ ೩–೯೬)
ಗಡಿಗಿ, ನುಚ್ಚ, ಹುಟ್ಟು

ಕರಿ ಕಲ್ಲಿನ ಮ್ಯಾಲ ಬಿಳಿ ರಂಗೋಲಿ
ಚೆಲ್ಲಿ ಪರಮಾತ್ಮ ಪೈತ ಆಡತಾನ (ಲಠೈ ಭಾಗ ೫–೧೧೮)

ಕರಿ ಗುಡ್ಡ ಬಿಳಿ ನೀರ
ಅದ್ರಾಗ ಕುಂತಾಳ ಚಂಪಾರಾಣಿ (ಲಠೈ ಭಾಗ ೫–೧೧೭)
ಗಡಗಿ, ಮಜ್ಜಿಗಿ, ರೇವಗಿ

ಚಿಂತಿ ಮಾಡ್ತ ಸಂತಿಗೆ ಹೋದೆ
ಬೆನ್ನ ತಟ್ಟಿ ಬೆಲೆ ಮಾಡಿದರು (ವಾಲಿ ೩– ೭೨)
ಗಡಿಗೆ

ಊಟಕ್ಕೆ ಕುಳಿತವರು ಹನ್ನೆರಡು ಜನ
ಊಟಕ್ಕೆ ಇಕ್ಕಿದವರು ಎರಡು ಜನ
ಒಬ್ಬ ಒಬ್ಬನಿಗೆ ಇಕ್ಕುವುದರಲ್ಲಿ
ಇನ್ನೊಬ್ಬ ಹನ್ನೆರಡು ಜನಕ್ಕೆ ಇಕ್ಕುತಾನೆ (ಲ ಗೌ ೨೦೭)

ಊಟಕ್ಕೆ ಕುಳಿತವರು ಹನ್ನೆರಡು ಜನ
ಬಡಿಸುವವರು ಇಬ್ಬರು
ಒಬ್ಬನು ಬಡಿಸುವಷ್ಟರಲ್ಲಿ
ಮತ್ತೊಬ್ಬನು ಹನ್ನೆರಡು ಜನಕ್ಕೂ ಬಡಿಸುತ್ತಾನೆ (ಚಂ ಸೆ ೪೫)

ಒಬ್ಬ ಅಣ್ಣ ಒಬ್ಬ ತಮ್ಮ
ಅಣ್ಣ ಹನ್ನೆರಡು ಮೈಲು ನಡೆಯುವಾಗ
ತಮ್ಮ ಒಂದೇ ಮೈಲು ನಡೆಯುತ್ತಾನೆ (ಚಂ ಸೆ ೬೦)

ಒಬ್ಬನು ಹನ್ನೆರಡು ಮಂದಿಗೆ ಬಡಿಸುವ ತನಕ
ಇನ್ನೊಬ್ಬನು ಒಬ್ಬನಿಗೆ ಬಡಿಸುತ್ತಾನೆ (ಶಾಂ ನಾ ೪೦)

ಮುಟ್ಟಿದರೆ ಬಾಯಿ ಬಿಡುತ್ತೆ (ಲ ಗೌ ೮೪೪)

ಮುಳ್ಳಿದೆ ಮರವಲ್ಲ
ಚಕ್ರವಿದೆ ಗಾಡಿಯಲ್ಲ
ಅಂಕಿಗಳಿವೆ ಲೆಕ್ಕವಲ್ಲ (ವಾಲಿ ೩–೬೪)

ಮುಳ್ಳುಂಟು ಮರವಲ್ಲ
ಅಂಕಿಗಳುಂಟು ಪುಸ್ತಕವಲ್ಲ
ಚಕ್ರವಿದೆ ಗಾಡಿಯಲ್ಲ
ಗಂಟೆಯಿದೆ ಗುಡಿಯಲ್ಲ (ಸು ೪೧೬)

ಮುಳ್ಳುಂಟು ಮರವಲ್ಲ
ಅಂಕಿಗಳುಂಟು ಲೆಕ್ಕದ ಪುಸ್ತಕವಲ್ಲ
ಚಕ್ರವಿದೆ ಗಾಡಿಯಲ್ಲ
ಗಂಟೆಯಿದೆ ದೇವಾಲಯವಲ್ಲ ಏನಿದು (ಇ ೮೬೬)

ಹಣೆಯ ಮೇಲೆರಡು ಕೈ
ಹಣೆಯೇ ಅದಕೆಲ್ಲ ಮೈ
ಕೊಟ್ಟರೆ ಅದಕುಂಟು ಪ್ರಾಣ
ನಾನಾ ಲೋಹದ ತ್ರಾಣ (ಚಂ ಸೆ ೨೩೫)

ಹನ್ನೆರಡು ಕಣ್ಣ ಮೂರೇ ಕೈ
ಒಪ್ಪೊತ್ತು ಊಟಾ ಮಾಡತೈತಿ (ವಾಲಿ ೩–೩೫)
ಗಡಿಯಾರ

ತಾಸಿಗೊಮ್ಮೆ ಓಡು ಮಗಾ
ಮಿನಿಟಿಗೊಮ್ಮೆ ಓಡು ಮೊಮ್ಮಗಾ
ಸೆಕೆಂಡಿಗೊಮ್ಮೆ ಓಡು ಮರಿಮೊಮ್ಮಗಾ
ಇವರ್ನ ದಿನಾ ಕಟಿಗೊಂಡು ದಿನಾ ಕಳದ್ರೂ ಬಿಡಗಡಿಯಿಲ್ಲ (ಇ ೫೮೫)
ಗಡಿಯಾರದ ತಾಸಿನ, ಮಿನಿಟಿನ, ಸೆಕಂಡಿನ ಮುಳ್ಳುಗಳು

ಅಕ್ಕ ಭರ್ಜರಿ ಓಡ್ತಿದ್ರ ತಂಗಿ ಸಾವಕಾಶ ನಡದಾಳ (ಇ ೭)

ಅಕ್ಕ ಹನ್ನೆರಡು ಜನರಿಗೆ ಊಟ ಬಡಿಸೋದ್ರೊಳಗ,
ತಂಗಿ ಒಬ್ಬರಿಗೆ ಬಡಿಸ್ತಾಳ (ಇ ೯)

ಅಕ್ಕ ಹನ್ನೇರಡು ಮನೆಗೆ
ಹೋಗಿ ಬರೋ ಹೊತ್ಗೆ
ತಂಗಿ ಒಂದು ಮನೆಗೆ ಹೋಯ್ತಾಳೆ (ನಾ ಗೌ ೧೧)

ಊಟಕ್ಕೆ ಕುಳಿತವರು ಹನ್ನೆರಡು ಜನರು
ಬಡಿಸುವರು ಇಬ್ಬರು
ಒಬ್ಬನು ಒಬ್ಬನಿಗೆ ಬಡಿಸುವಷ್ಟರಲ್ಲಿ
ಇನ್ನೊಬ್ಬ ಹನ್ನೆರಡೂ ಜನರಿಗೆ ಬಡಿಸುತ್ತಾನೆ (ಇ ೨೨೦)

ದಿನವಿಡೀ ನಡೆಯುವೆವು
ಮೆಲುದನಿಯ ಮಾಡುತ್ತ
ಛಳಿಯಿರಲಿ ಬಿಸಿಲಿರಲಿ ಕತ್ತಲಿರಲಿ
ಸೇರೆವೆಂದಿಗೂ ಹೊಸ ಜಾಗ ಮಾತ್ರ (ಇ ೬೧೪)

ಹನ್ನೆರಡು ಮನೀಗೆ ಹಣಿಕಿ ಹಾಕ್ತಾರ
ಮುದ್ದು ಕೊಟ್ಟು ಮುಂದು ಹೋಗ್ತಾರ (ಇ ೧೦೧೪)

ಹನ್ನೆರಡು ಮಂದಿ ಊಟಕ್ಕೆ ಕುಂತಾರ
ಊಟಕ್ಕ ನೀಡುವರಿಬ್ಬರು
ಒಬ್ಬಾಕಿ ಸಣ್ಣಾಕಿ ಒಬ್ಬಾಕಿ ದೊಡ್ಡಾಕಿ
ಸಣ್ಣವಳು ಒಬ್ಬನಿಗೆ ನೀಡಿದರ
ದೊಡ್ಡವಳು ಹನ್ನೆರಡೂ
ಮಂದಿಗೆ ನೀಡ್ತಾಳ (ಇ ೧೦೧೩)

ಗಡಿಯಾರದ ಮುಳ್ಳುಗಳು

ಊರ ಹೊರಗೊಂದು ಬಣ್ಣದ ಮರ ಹುಟ್ಟೇತಿ
ಬಂದವರಿಗೆಲ್ಲಾ ಬಾಲಾ ಹಿಡಿಸತೈತಿ (ಇ ೨೨೩)

ಗಡ್ಡೀತೇರು, ಹಗ್ಗ

ದಿನ್ವೂ ಬೆಳೆ ದಿನ್ವೂ ಕೊಯ್ಲು (ಶಾಂ ನಾ ೧೦೩)

ಮಳೆಯಿಲ್ದೆ ಬೆಳೆ (ಶಾಂ ನಾ ೧೦೪)

ಗಡ್ಲಾ

ಸೊಂಡಿಲಿದೆ ಆನೆಯಲ್ಲ
ಹತ್ತಿರ ಹಾವು ಇದೆ ಶಿವನಲ್ಲ
ಕೈಗಳು ನಾಲ್ಕಿವೆ ವಿಷ್ಣುವಲ್ಲ
ಇದು ಬಲ್ಲವರಿಗೆ ಅರಿದಿಲ್ಲ (ಚಂ ಸೆ ೨೩೨)

ಗಣಪತಿ

ಸುಟ್ಟಿ ಬೀಜಾ ಬಿತ್ತಿ
ಅಡ್ವಿ ಆಕಾಶೆಲ್ದಿ
ಬೀಜಿಲ್ದೆ ಹೋದ ಹಣ್ಣಾ
ಹುಟ್ ಬಂಜೆ ಮಗಾ ತಿಂತಾನೆ (ಶಾಂ ನಾ ಅನುಬಂಧ ೪೭)

ಕಬ್ಬುಗಣಪತಿ

ಕಾಲಾರು ಕೋಡೆರಡು ದೇಹ ಮೂರುಂಟು
ಬಾಲಗಳೆರಡು ಕಣ್ಣುಗಳು ಹದಿನೆಂಟು
ಮೇಲೆ ಶಿರ ಒಂಭತ್ತು ಕಿವಿಗಳು ನಾಲ್ಕುಂಟು
ಹೇಳಲಿದ ಬಲ್ಲ ಜಾಣರಿಗರಿ ಉಂಟು (ಚಂ ಸೆ ೯೮)

ಗಣಪತಿ, ಏಳು ಹೆಡೆಯ ಸರ್ಪ, ಇಲಿ

ತಮ್ಮಂದು ಇಲಿ
ಅಣ್ಣಂದು ನವಿಲು
ಅಪ್ಪಂದು ಎತ್ತು (ಇ ಖಿಟಟ)
ಗಣಪತಿ–ಷಣ್ಮುಖ–ಶಿವ

ಕಯ್ನಾಕು ಕೆಮಿನಾಕು ಬಾಲೆರ್ದು ಕಾಲಾರು (ಶಾಂ ನಾ ೨೭೯)
ಗಣ್ಣಾ–ಯಲಿ

ಹರಾಯದಲ್ಲಿ ಹಸಿರು ಪರಾಯದಲ್ಲಿ ಕೆಂಪು
ಹರೇವು ಪರೇವು ಮುರಿದರೆ ನಿರಂಜಿ ಹಾಳು (ಲ ಗೌ ೯೯೮)
ಗದ್ದೆ

ಹಾಸಿಗೆ ಹಾಸಿದಲ್ಲುಂಟು ಕೂಸು ಕೂತಲ್ಲುಂಟು
ಮಾಣಿ ಎದ್ದು ಮನೆಗೆ ಹೋದ (ಲ ಗೌ ೧೦೪೫)
ಗದ್ದೆ–ಕೂಳೆ–ಕೆವಿ

ಚರಚರನೆ ಕೊಯ್ಯುವುದು ಕತ್ತಿತಾನಲ್ಲ
ಮಿಣಿಮಿಣನೆ ಮಿಂಚುವುದು ಮಿಂಚುತಾನಲ್ಲ
ಪೆಟ್ಟಿಗೆಯಲಿ ತುಂಬುವುದು ಒಡವೆತಾನಲ್ಲ (ಜೀಶಂಪ ೧೪೮)

ರಸ್ತೆಲೋಗೋದು ಗಾಡಿ
ಗಾಡ್ಗಾಕೋದು ಮೋಡಿ
ನಿಂಗೇನ್ಕೊಡ್ಲಿ ಬೀಡಿ (ಮಂ ೧.೫–೮೦)
ಗರಗಸ

ಬಾಚಿ ಕೋಡು
ಕೆಂಪನೆ ಹಸ
ಚೆಲ್ಲಾಡಿ ಹಾಲು ಕರೀತದೆ (ಲ ಗೌ ೭೪೯)
ಗರಜಿಗೆ ಬೀಡು, ಹಣ್ಣು, ಹಾಲು

ಹಾಲ್ ಹಾಲ್ ಹಸ್ವೀನ್ಹಾಲ್
ಕಾಯ್ ಕಾಯ್ ಬಗ್ರೀಕಾಯ್
ಕೋಡ್ ಕೋಡ್ ಮಿಗ್ನ್ ಕೋಡ್ (ಶಾಂ ನಾ ೧೬೨)
ಗಜ್ಜೂ

ಪತ್ರೆ ಪತ್ರೆಗೆಲ್ಲ ದೊಡ್ಡ ಪತ್ರೆ ಯಾವುದು (ಸು ೩೫೩)
ಗರಿಕೆ ಪತ್ರೆ

ಬೆಳಿ ಭತ್ತಕ ಬರಬೇಕ
ಭತ್ತ ಬಂದ ಬೆಳಿಗಿ ಬೀಜ ಆಗಬೇಕ
ಬೀಜಕ ದಾರಾ ಪೋಣಿಸೊವಷ್ಟೆ ತೂತ ಇರ್ಬೇಕ (ಲಠ್ಠೆ ಭಾಗ ೫–೨೨೭)

ಗಲಗ್ಯಾನ ಬೀಜ

ಹಸುರುಂಟು
ರಸವಿಲ್ಲ (ರಾ ಗೌ ೪೮೩)

ಗಾಜು

ಇಬ್ರು ವೊತ್ಕ ಬಂದುದ್ದ
ಐದು ಜನ ಇಳೀಕ್ಕಂಡ್ರು (ಮಂ ೧.೫–೨೪)

ಏರಿಮ್ಯಾಲೆ ಇಬ್ಬರು ಸೂಳೇರು
ಕಣ್ಣಿಗೆ ಕಪ್ಪಿಲ್ಲದೆ ಅಳ್ತಾ ಹೋಯ್ತಾರೆ (ರಾ ಗೌ ೧೨೦)

ಓಣೇಲಿ ಮುದುಕಿ ಗೊಡಗುಡುತ್ತಾಳೆ (ಲ ಗೌ ೩೫೮)

ಕಟ್ಟು ಕಟ್ಟು ಮರಕಟ್ಟು
ಮರಕೆ ಮೂವತ್ತಾರು ಕಟ್ಟು
ಪಾತಾಳಕ್ಕೆ ಪಗಡೆ ಕಟ್ಟು
ಹೇಳಿದವರ ಕೈಗೆ ಚಿನ್ನದ ಕಟ್ಟು (ಲ ಗೌ ೩೬೪)

ಬಾರೆ ಮೇಲೊಬ್ಬಳು ಹೆಂಗಸು
ತಲೆಗೆ ಎಣ್ಣಿಲ್ಲದೆ ಅಳ್ತಾ ಹೋಗ್ತಾಳೆ (ಲ ಗೌ ೭೫೬)

ಮುಳ್ಳಿರೋ ತಾವು ನುಗ್ಗಲೆ ಕೋಣ
ನೀರಿರೋ ತಾವು ನಿಲ್ಲಲೆ ಕೋಣ (ಜೀಶಂಪ ೨೧೭)

ಮೊಟ್ಟೆಕೋಳಿ ಬೆಟ್ಟಕ್ಹತ್ತಲಾರ್ದು (ಜೀಶಂಪ ೨೪೧)

ಸೂಳೆ ಕಣ್ಣು ಕಪ್ಪಿಲ್ಲದೆ ಆಳ್ತಾ ಬರ್ತಾಳೆ (ಲ ಗೌ ೯೬೧)

ಗಾಡಿ

ಏರಿ ಮೇಲೆ ಇಬ್ರು ಸೂಳೇರು
ಕುಂಯೋ ಪಿಂಯೋ ಅಂತಾರೆ (ಲ ಗೌ ೨೫೬)

ಗಾಡಿಚಕ್ರ

ಇಬ್ಬರು ಶೂರರು ಕಣ್ಣಿಗೆ ತಪ್ಪಿಲ್ಲಾಂತ ಅಳುತ್ತಾ ಬರ್ತಾರೆ (ಚಂ ಸೆ ೪೨)

ಗಾಡಿಯ ಚಕ್ರಗಳು

ಮರನು ಮರನೇರಿ
ತಾ ಮತ್ತೆ ಮರನೇರಿ
ಬಸವನಾ ಕತ್ತೆ ತಿರುಗುತ್ತದೆ (ಇ ೮೨೨)

ಅತ್ತ ಬಾ ಇತ್ತ ಬಾ
ಸುತ್ತ ಬಂದ ಕಿತ್ತ ಬಾ (ಲಠ್ಠೆ ಭಾಗ ೫–೧೫)
ಗಾಣ

ಅಗರ ರಂಬೆ
ತಗರೆ ಸಿಂಬೆ
ಜಾಣನ ಮಗಳು
ಕೊಂಬೇಲವ್ಳೆ (ನಾ ಗೌ ೧೫)
ಗಾಣ, ಎಣ್ಣೆ

ಅಗರಗರಂಬೆ
ತಗರಿ ಸಿಂಬೆ
ಜಾಣನ ಮಗಳು
ಶೂಲಕೆ ಬಿದ್ದಳು (ಸು ೧೩)
ಗಾಣಕ್ಕೆ ಸಿಕ್ಕಿದ ಕಬ್ಬು

ಸುತ್ತಿ ಸುತ್ತಿ ಬರುತ್ತೀಯಾ ನನಗಾಗಿ
ಮೇಲೊಬ್ಬ ಕೂತವ್ನೆ ನಿನಗಾಗಿ
ನನ್ನಿಂದ ನಿನ್ನ ಪ್ರಾಣ ಹತವಾಗಿ (ಲ ಗೌ ೯೫೫)
ಗಾಣದ ಹುಳು–ಮೀನು

ಅಗರರಂಬೆ ತುಗರಿಯ ತೊಟಾ
ಅಜ್ಜಿಗೆ ಮೂರುತಿ ಸೆಟಾ (ಶಾಂ ನಾ ೩೨೮)

ಉಂದೆಮ್ಮಿ ಬಾಲ ಹೆಡ್ದ್ರೆ
ಮೂರೆಮ್ಮೆ ಕಿಲಿತವೆ (ಶಾಂ ನಾ ೩೨೭)

ಕೂಮ್ನ ಮುಕ್ಕೀಲ್ಕೋಲೆಟ್ಟಿದ್ರೆ
ವಾವ್ನ ಗೆದ್ದೆಲಿ ವಾಕ್ಗುಡ್ತು (ಶಾಂ ನಾ ೩೨೫)

ಮೂರ್ಜನಾ ಸನ್ಯಾಸ್ಗೋಳ
ಉಂದೇ ಕಡ್ಗೆ ಉಚ್ಚೀ ಹುಯ್ತಾರ (ಶಾಂ ನಾ ೩೨೬)
ಗಾಣಾ

ಒಂದ ಉದ್ದುದ್ದ
ಒಂದ ಅಡ್ಡಡ್ಡ
ಹಗಲ ಸುತಗೊಂಡಿರ್ತತಿ
ರಾತ್ರಿ ಬಿಚಿಗೊಂಡಿರ್ತತಿ (ಲಠ್ಠೆ ಭಾಗ ೫–೧೦೧)
ಗಾದಿ, ದಿಂಬ

ಸುತ್ತಿ ಸುತ್ತಿ ಬರಬೇಡ ನನಗಾಗಿ
ಮೇಲೊಬ್ಬ ಕುಳಿತವ್ನೆ ನಿನಗಾಗಿ (ರಾ ಗೌ ೪೫೫)
ಗಾಳದ ಮುಳ್ಳು

ಸುತ್ತಿ ಸುತ್ತಿ ಬರಬ್ಯಾಡ ನನಗಾಗಿ
ಮ್ಯಾಲೊಬ್ಬ ಕುಂತಾನ ನಿನಗಾಗಿ (ವಾಲಿ ೬– ೫)
ಗಾಳದ ಹುಳು– ಮೀನಿಗೆ

ಅಂಗಡಿಯಲ್ಲಿ ಮಾರೋಲ್ಲ
ತಕ್ಕಡಿಯಲ್ಲಿ ತೂಗೋಲ್ಲ
ಅದಿಲ್ಲದಿದ್ದರೆ ಆಗೋಲ್ಲ (ಲ ಗೌ ೧೦೧)

ಇಲ್ಲೆ ಇದೆ ಕಣ್ಣಿಗೆ ಕಾಣ್ಸೊಲ್ಲ (ಲ ಗೌ ೧೭೭)

ಇಲ್ಲೇ ಐತಿ ಕಾಣುದಿಲ್ಲ (ಇ ೧೯೨)

ಎಲ್ಲೆಲ್ಲಿಯೂ ಇರುವುದು
ಎಲ್ಲರಲ್ಲಿಯೂ ಇರುವುದು
ಕಣ್ಣಿಗೆ ಕಾಣೋದಿಲ್ಲ
ಮುಟ್ಟಾಕ ಬರೋದಿಲ್ಲ (ಇ ೨೫೬)

ಕಣ್ಣಿಗೆ ಕಾಣೋದಿಲ್ಲ
ಕೈಗೆ ಸಿಗೋದಿಲ್ಲ
ಅದಿಲ್ದಿದ್ದರೆ ಕೆಲ್ಸ ನಡೆಯೋದಿಲ್ಲ (ರಾ ಗೌ ೧೬೭)

ಕಣ್ಣಿಲ್ಲ ಕಾಲಿಲ್ಲ ದೇಹ ಇಲ್ಲ ಆದರೂ ನಡೀತೈತಿ (ಇ ೩೧೯)

ನೆಲೆಗೆ ನಿಲ್ಲದೆ ಹಾರಾಡುವ ಕುದುರೆ ಯಾವುದು (ಸು ೩೫೧)

ನೀರಿಗಿಂದ ತೆಳ್ಳೆಯಾವ್ದಾ
ಭೂಮಿಗಿಂತ ಭಾರ ಯಾವ್ದಾ
ಆಕಾಸಕ್ಕಿಂತ ಅಗ್ಗವಾಗಿರುದ್ಯಾವುದು (ಮಂ ೧.೩–೪)
ಗಾಳಿ (ಮನಸ್ಸು, ಯೋಚನೆ, ಆಸೆ, ದುರಾಸೆ, ಅದೃಷ್ಟ)

ಕೆಂದೆತ್ತು ಕೇರಿ ಕಂಡು ಹೋಯ್ತು
ಬಿಳಿ ಎತ್ತು ಬೀದಿ ಕಂಡು ಹೋಯ್ತು
ನಮ್ಮೆತ್ತು ನಮ್ಮನೆಗೆ ಬತ್ತು (ಲ ಗೌ ೪೭೭)
ಗಾಳಿಧೂಳು, ಹೊಗೆ, ಬೆಂಕಿ

ಅಡ್ಡಡ್ಡ ಹಾರತತಿ ಹಕ್ಕಿ ಅಲ್ಲ
ಎರಡ ಕೋಡಾ ಎತ್ತಲ್ಲ
ಬಾಲ ಅತಿ ಹನಮಂತಲ್ಲ (ಲಠೈ ಭಾಗ ೫–೧೨)

ಆಕಾಶದಲ್ಲಿ ಹಾರ್ತುತ್ತೇನೆ ಪಕ್ಷಿಯಲ್ಲ
ಬಾಲ ಕಿವಿಗಳಿವೆ ಮೃಗವಲ್ಲ
ಇದಕ್ಕೆ ಯಜಮಾನನಿದ್ದಾನೆ ಕುದುರೆಯಲ್ಲ (ಚಂ ಸೆ ೩೬)

ಕಾಲಿಲ್ಲ ಕೊಂಬ ಅದಾವು
ಹದ್ದಲ್ಲ ಮ್ಯಾಗ ಹಾರತತಿ (ಲಠೈ ಭಾಗ ೫–೧೨೮)

ಅಂತರ್ದಲ್ಲಿ ಆರಾಡವ್ನೆ
ಕರ್ದೇಟಿಗೆ ಬರಾವ್ನೆ (ಮಂ ೧.೫–೩)

ಅಂತಲ್ಲೆ ಹಾರುವದು ಅಡಪಕ್ಷಿಯಲ್ಲ
ಅದಕೆರಡು ಕೋಡುಂಟು ಬಸವಣ್ಣನಲ್ಲ
ಅದಕೊಂದು ಬಾಲುಂಟು ಹನುಮಂತನಲ್ಲ (ಇ ೮೯)

ಅಂಬರದಲಾಡುವದು ಪಕ್ಷಿ ತಾನಲ್ಲ
ಕೊಂಬು ಬಾಲಗಳುಂಟು ಹೊಡೆದವರೆ ಇಲ್ಲ
ಜಾಣ ಇದರುತ್ತರವ ಹೇಳು ನೀನಲ್ಲ (ವಾಲಿ ೧–೪೩)

ಅಂಬರದಲ್ಲಿ ಆಡುವುದು
ಪಕ್ಷಿಯು ತಾನಲ್ಲ
ಕೊಂಬು ಬಾಲಗಳುಂಟು
ಮೃಗ ಜಾತಿಯಲ್ಲ

ಅಂಬರದೊಳಗಾಡುವುದು ಪಕ್ಷಿ ತಾನಲ್ಲ
ಕೊಂಬು ಬಾಲಗಳುಂಟು ಮೃಗಜಾತಿಯಲ್ಲ
ಸಂಭ್ರಮದ ಬಿಲ್ಲುಂಟು ಎಸೆವಾತನಲ್ಲ
ಇದ ಹೇಳಬಲ್ಲ ಜಾಣರಿಗೆ ಅರಿದಲ್ಲ (ಸು ೬೯)

ಬಾಲವಿದೆ ಹನುಮಂತನಲ್ಲ
ಹಾರುತಿದೆ ಪಕ್ಷಿಯಲ್ಲ
ಎರಡು ಕೋಡುಗಳಿವೆ ಪ್ರಾಣಿಯಲ್ಲ (ವಾಲಿ ೧ ೪೨)

ಬಿಲ್ಲು ಬಾಣಗಳುಂಟು
ಹೊಡೆಯುವವರು ಇಲ್ಲ
ಇದ ಹೇಳಬಲ್ಲ ಜಾಣನಿಗೆ
ಅರಿಯದೇ ಇದ್ದಿದ್ದಲ್ಲ (ರಾ ಗೌ ೬೨)

ಬಿಲ್ಲಿದ್ದರೂ ಹೂಡಲಾರೆ
ಬಾಲವಿದ್ದರೂ ಬೀಸಲಾರೆ
ಆಗಸದಲ್ಲಿ ನಲಿವ ನಾನಾರು (ಚಂ ಸೆ ೧೧೪)

ಗಾಳಿಪಟ

ಲೀಲೆಯಿಂದ ಹಾರುವದು ಪಕ್ಷಿ ತಾನಲ್ಲಾ
ಬಾಲವುಂಟು ಹನುಮಂತನಲ್ಲಾ
ಇದ ಹೇಳಬಲ್ಲವರಿಗೆ ಒಂದುಂಡೆ ಬೆಲ್ಲಾ (ಶಾಂ ನಾ ೩೨೯)

ಗಾಳಿಪಟಾ

ಆಕಾಶದಲ್ಲಿ ಹಾರುವುದು ಪಕ್ಷಿಯಲ್ಲ
ಬಲವಿಹುದು ಹನುಮಂತನಲ್ಲ
ಬಿಲ್ಲುಬಾಣಗಳುಂಟು ಬೇಡನಲ್ಲ
ಸೂತ್ರವುಂಟು ಕೀಲುಗೊಂಬೆಯಲ್ಲ (ಇ ೧೫೯)

ಕಾಲಿಲ್ಲ ಕೊಂಬುಂಟು ಬಾಲದಾ ಪಕ್ಷಿಯದು
ಮೇಲೆ ಹಾರುವುದು ಹದ್ದಲ್ಲ (ಇ ೩೮೮)

ಗಾಳೀಪಟ

ಒಬ್ಬನಿಗೆ ಒಂದೇ ಹೆಸರು (ರಾ ಗೌ ೧೫೭)

ಗಿಡಗುದ್ದಲಿ

ಎಲೇಲಿ ಕಾಚು ಇಲ್ಲ ಬಾಯಿ ಕೆಂಪಗೆ
ಮಳೆಯಿಲ್ಲ ಮಾರಿಲ್ಲ ಎಲೆ ಹಚ್ಚಗೆ (ಲ ಗೌ ೨೧೩)

ಮಳೆಯಿಲ್ಲ ಮಾಡಿಲ್ಲ ಗುಡ್ಡ ಹಸಿರ
ಎಲಿಯಿಲ್ಲ ಕಾಚಿಲ್ಲ ಬಾಯಿ ಕೆಂಪಗ (ವಾಲಿ ೬–೧೮)

ಮಳೆ ಹುಯ್ಯಲಿಲ್ಲ ಬೆಳೆ ಆಗಲಿಲ್ಲ ಹಸುರಿಗೆ ಇದೆ
ಅಗೀಲಿಲ್ಲ ಉಗೀಲಿಲ್ಲ ಕೆಂಪಗಿದೆ (ರಾ ಗೌ ೩೮೮)
ಗಿಣಿ

ಒಂದು ಬಿದಿರು ಸೀಳಿ
ಒಂಭೈನೂರು ತೊಂಭೈನೂರು
ನಾನೂರು ನರಸೀಪುರ
ಹೇಳಿದೋರಿಗೆ ಚಂದ್ರಗಿರಿ ದೊರೆತನ (ಸು ೧೫೮)
ಗಿಣಿ ಪಂಜರ

ಆಕಾಶ್ದಾಗ ಆನಿ ಸತ್ತತಿ
ಭೂಲೋಕ್ದಾಗ ಸೂತ್ಕ ನಡದತಿ (ಲತ್ಕೆ ಭಾಗ ೨–೧೦)
ಗಿರ್ಯಾಣ

ಅಡವಿಯೆಲ್ಲಾ ಹಚ್ಚಗ
ಅವನ ಬಾಯಿ ಕೆಂಪಗ
ಹಾಡತಾನ ಸಂಪಗ (ಇ ೬೯)

ಎಲೆ ಇಲ್ಲ ಅಡಿಕೆ ಇಲ್ಲ ತುಟಿ ಮಾತ್ರ ಕೆಂಪಗಿದೆ
ಮಳೆ ಇಲ್ಲ ಮೋಡವಿಲ್ಲ ಹೊಲ ಮಾತ್ರ ಹಚ್ಚಗಿದೆ (ಲ ಗೌ ೨೪೫)

ಕಾಚಿಲ್ಲ ಸುಣ್ಣಿಲ್ಲ ಬಾಯಿ ಕೆಂಪಗ
ಮಳಿ ಇಲ್ಲಾ ಮಾರಿಲ್ಲಾ ಎಲಿ ಹಚ್ಚಗ (ಇ ೩೯೪)

ಮಳಿ ಇಲ್ಲ ಮಾರ ಇಲ್ಲ ಗುಡ್ಡ ಹಚ್ಚಗ
ಸುಣ್ಣ ಇಲ್ಲ ಕಾಚ ಇಲ್ಲ ಬಾಯಿ ಕೆಂಪಗ (ಇ ೮೩೮)

ಮಳೆ ಆದರೂ ಹಚ್ಚಗ ಆಗದಿದ್ದರೂ ಹಚ್ಚಗ
ಎಲೆ ತಿಂದರೂ ಕೆಂಪಗ ತಿನ್ನದಿದ್ದರೂ ಕೆಂಪಗ (ಇ ೮೩೭)

ಮಳೆ ಬೆಳೆಯಿಲ್ಲ ಹಸಿರು ಗರಿಗಳು
ಹಣ್ಣು ತಿನ್ನದೆ ಇದ್ದರೂ ಬಾಯಿಲ್ಲ ಕೆಂಪು (ಲ ಗೌ ೮೨೭)

ಮಳೆಯಿಲ್ಲ ಬೆಳೆಯಿಲ್ಲ ಮೈಯೆಲ್ಲಾ ಹಸಿರು
ಎಲೆಯಿಲ್ಲ ಸುಣ್ಣವಿಲ್ಲ ಬಾಯೆಲ್ಲಾ ಕೆಂಪು (ಇ ೮೩೬)

ಮಳೆಯಿಲ್ಲ ಬೆಳೆಯಿಲ್ಲ ಹೊಲವೆಲ್ಲ ಹಸಿರು
ಎಲೆಯಿಲ್ಲ ಸುಣ್ಣವಿಲ್ಲ ಬಾಯೆಲ್ಲ ಕೆಂಪು (ಲ ಗೌ ೮೨೯)

ಮಳೆಯಿಲ್ಲೆ ಬೆಳೆಯಿಲ್ಲೆ ಮಯ್ಯೆಲ್ಲಾ ಹಸ್ರು
ಯಲೆಯಿಲ್ಲೆ ಅಡ್ಡಿಲ್ಲೆ ಬಾಯೆಲ್ಲಾ ಕೆಂಪು (ಶಾಂ ನಾ ೪೮)

ಮುಂಗೈಯೊಳಾಡುವದು
ಹಿಂಗುವದು ಹೊಂಗುವದು
ಸಿಂಗಿಯಲ್ಲಿ ಸಿಳ್ಳು ಬಿಡುತಿಹದು
ಆ ಖಗದ ಸಂಗವನು ಬಲ್ಲವರು ಹೇಳಿ (ಇ ೮೯೧)

ಹಚ್ಚಿನ ಗಿಡದಾಗ ಹನುಮಂತ ಕುಂತಾನ
ಹಿಡಿಯಾಕ ಹೋದರ ಕಡಿಯಾಕ ಬರುತಾನ (ಇ ೯೯೮)
ಗಿಳಿ

ನಮ್ಮನೇಲಿ ವಂದ್ಮಾಣಿದ್ದಾ
ಬಂದೋರೆಲ್ಲಾ ಅವಂಗೆ ಉಡ್ಗೆರೆ ಮಾಡ್ತು (ಶಾಂ ನಾ ೩೩೦)
ಗಿಳಿಗುಟ್ಟಾ

ಅದದ್ಕಸರದದ್ಕಸರದದ್ಕಸರ (ಲ ಗೌ ೫೩)
ಗಿಳಿಯ ಮಾತು

ಎಲೆಯಿಲ್ಲ ಸುಣ್ಣವಿಲ್ಲ
ಬಣ್ಣವಿಲ್ಲ ಕುಂಚವಿಲ್ಲ
ತುಟಿ ಕೆಂಪಗಿರು ನಾನ್ಯಾರು (ಇ ೨೫೩)
ಗಿಳಿಮೂಗು

ಹಸುರಂಗಿ ಅಮಲ್ದಾರ
ಕೆಂಪು ಟೋಪಿ ದಫೇದಾರ
ಹೊಟ್ಟೆ ಬಂದ ಶೇಕದಾರ (ಜೀಶಂಪ ೨೭೯)
ಗಿಳಿಮೂತಿ ಮಾವಿನಕಾಯಿ

ಕೆಳಗೆ ಬಾಗಿಲಿರುವ ಮನೆ
ಖರ್ಚಿಲ್ಲದ ಅರಮನೆ
ಮರದಲ್ಲಿ ತೂಗುವ ತೂಗು ಮನೆ (ವಾಲಿ ೧–೪೧)

ತೊಲೆಗಂಬಗಳ ಅಗತ್ಯವಿಲ್ಲ
ಕಲ್ಲು ಮಣ್ಣು ಹಾಕಿಲ್ಲ
ಕೆಳಗೆ ಬಾಗಿಲಿರುವ
ತೂಗು ಮಂಚದಂತಿರುವ
ನನ್ನರಮನೆ ಯಾವುದು (ರಾ ಗೌ ೨೭೬)

ಬಾಚಿ ಕೆತ್ತದ ಮನೆ
ಬಡಗಿ ಕಟ್ಟಿದ ಮನೆ
ಆಕಾಶದಲ್ಲಿದೆ ನಮ್ಮರಮನೆ (ಸು ೩೬೪)

ಮನೆ ಮ್ಯಾಲೆ ಮನೆ ಕಟ್ಟಿಸಿ
ಹುಲ್ಲುಂಟು ಗಳುವಿಲ್ಲ (ಸು ೩೯೭)
ಗೀಜಗನ ಗೂಡು

ಒಂದು ಬಿದಿರು ಒಡೆದು
ಒಂಬೈನೂರು ಮನೆಕಟ್ಟಿ
ಸಾಲಗೇರಿ ಕಟ್ಟಿ
ಸಕ್ಕರೆ ಪಟ್ಣ ಕಟ್ಟಿ
ನೋಡಾಕೆ ಬಂದ ಸೂಳೆ
ನೇತಾಕ್ಕೊಂಡ್ಲು (ರಾ ಗೌ ೧೪೯)
ಗೀಜುಗನ ಹಕ್ಕಿ

ತಾಕುತೀಕಿನ ಮನೆ
ತಗರುಗಂಟಿನ ಮನೆ
ಬಾಚಿ ಮುಟ್ಟದ ಮನೆ
ಕಬ್ಬಿಣ ಕಾಣದ ಮನೆ
ಆಚಾರಿ ಕಟ್ಟದ ಅರಮನೆ (ಲ ಗೌ ೫೯೪)
ಗೀಜಗನ ಹಕ್ಕಿಯ ಗೂಡು

ಅಡಿವೆಲ್ಲಾ ಹಚ್ಚಗ
ಮೊಲದ ಬಾಯಿ ಕೆಂಪಗ (ಲಠೈ ಭಾಗ ೩–೫)

ಎಲಿ ಇಲ್ಲ ಅಡಿಕಿ ಇಲ್ಲ
ತುಟಿ ಮಾತ್ರ ಕೆಂಪಗ
ಮಳಿ ಇಲ್ಲ ಮಾಡ ಇಲ್ಲ
ಹೊಲಾ ಮಾತ್ರ ಹಚ್ಚಗ (ಲಠೈ ಭಾಗ ೩–೧೫)

ಎಲ್ಯಾಗ ಕಾಚಿಲ್ಲ ಬಾಯಿ ಕೆಂಪಗ
ಮಳಿ ಇಲ್ಲಾ ಮಾರಿಲ್ಲಾ ಎಲಿ ಹಚ್ಚಗ (ಲಠೈ ಭಾಗ ೩–೧೪)
ಗೀಲಿ

ಬಾಗಲಾ ಮುಚಗೊಂಡು
ಭಂಗೇರು ಆಡತಾರ (ವಾಲಿ ೫–೨೧)
ಗುಗ್ಗರಿ (ಕುದಿಯುವ ಕಾಳು)

ಕರ್ಣದೊಳಕ್ಕೆ
ಎರಡು ಗುಲಗಂಜಿ ಸೇರ್ಕೊಂಡು
ಬರ್ರ ಬರ್ರ ಅಂತವೆ (ರಾ ಗೌ ೧೬೬)
ಗುಗ್ಗೆ

ಅಕ್ಕಕ್ಕ ಊರ ನೋಡ
ಊರ ಮ್ಯಾಗಿನ ತೇರ ನೋಡ
ತೇರ ಮ್ಯಾಗಿನ ಗೊಂಬಿ ನೋಡ
ಗೊಂಬಿ ಮ್ಯಾಗಿನ ಸಿಂಬಿ ನೋಡ
ಸಿಂಬಿ ಮ್ಯಾಗಿನ ಬುಟ್ಟಿ ನೋಡ
ಬುಟ್ಟ್ಯಾಗಿನ ಕಸ ನೋಡ
ಕಸದಾಗಿನ ಗುಲಗಂಜಿ ನೋಡ (ಲಠ್ಠೆ ಭಾಗ ೫–೨)
ಗುಡಗುಡಿ, ಸಿಂಬಿ, ತಂಬಾಕ, ಬೆಂಕಿ

ಅರಸನ ಹೆಂಡತಿಗೆ ವರ್ಷಕ್ಕೊಂದೇ ಮುಟ್ಟು (ಲ ಗೌ ೭೬)
ಗುಡಿಸಲಿಗೆ ವರ್ಷಕ್ಕೊಂದೇ ಬಾರಿ ಹುಲ್ಲು ಹೊದಿಸುವುದು

ಆಕಾಶದ ಗೀತ ಹೇಳೋರಾರು (ಚಂ ಸೆ ೩೫)

ಕುದುರೆ ಇಲ್ಲದ ಕೋವಿ (ಸು ೨೧೧)

ಕುದುರೆಯಿಲ್ಲದ ಕೋವಿ (ರಾ ಗೌ ೨೦೮)

ಗುಡ್ಡುದ್ ಮ್ಯಾಲ್ ಮಡ್ಡಮ್ಮ ಸೆಡ್ ಹೊಡೀತಾಳೆ (ಲ ಗೌ ೫೨೧)
ಗುಡುಗು

ಬಾಯಿ ಇಲ್ಲ ಗುಡಗತತಿ
ರೆಕ್ಕಿ ಇಲ್ಲ ಹಾರತತಿ (ಲಠ್ಠೆ ಭಾಗ ೨–೫೧)

ಬಾಯಿಲ್ಲದೆ ಕೂಗುತ್ತೆ ರೆಕ್ಕೆಯಿಲ್ಲದೆ ಹಾರುತ್ತೆ (ಲ ಗೌ ೭೫೩)
ಗುಡುಗು–ಮೋಡ

ಬ್ರಾಹ್ಮಣ ಸುಟ್ಟರೂ ಜನಿವಾರ ಸುಡಲಿಲ್ಲ (ಚಂ ಸೆ ೧೮೩)
ಗುಡ್ಡದ ದಾರಿ

ಅಕ್ಕಕ್ಕ ಭಾವಿ ನೋಡ
ಅರಗಿನ ಭಾವಿ ನೋಡ
ಹೊಕ್ಕ ನೋಡಿದರ ಮುಕ್ಕ ನೀರಿಲ್ಲ (ಇ ೪)
ಗುಣಗಡಗಿ

ಸಂದ್ಯೂ ಕರಗುತ್ತದೆ
ಸಂದೇಲಿ ಬಂದು ಮೂಲೇಲಿ ಕುಂತುಕೊಳ್ಳುತ್ತೆ (ಲ ಗೌ ೯೨೫)

ಹಲ್ಲದ ಎಮ್ಮೆ ಹಡ್ಲು ನೆಕ್ಕುತ್ತೆ (ಲ ಗೌ ೧೦೦೭)

ಹಲ್ಲಿಲ್ಲದ ಎಮ್ಮಿ ಹುಲ್ಲ ನೆಕ್ಕತತಿ (ಲತ್ಯೆ ಭಾಗ ೫–೨೯೭)

ಹಲ್ಲಿಲ್ಲದ ಕೋಣ
ನೊದೆ ಕೆರೀತದೆ (ರಾ ಗೌ ೪೭೮)

ಹಾಳು ಬಾವೀಲಿ
ಕೋಳಿ ಕೆದರ್ತದೆ (ಸು ೫೧೪)
ಗುದ್ದಲಿ

ಮೂಡ್ಲಿಂದ ಮೂರ್ಹಕ್ಕಿ ಬಂದೊ
ಮರಕ್ಕೊಂದ್ಹೋಯ್ತು
ಬಾವಿಗೊಂದ್ಹೋಯ್ತು
ನೆಲಕ್ಕೊಂದ್ಹೋಯ್ತು (ಜೀಶಂಪ ೨೩೭)
ಗುದ್ದಲಿ, ಕೊಡಲಿ, ಗಡಿಗೆ, ಚಪ್ಪಲಿ

ಕಳ್ಳೀ ಕಾಲಾಗೊಂದು ಮಳ್ಳ ಕರಾ ಕಟ್ಟ್ಯಾರ (ಇ ೩೭೯)
ಗುದ್ದಿ

ಹಗಲೆಲ್ಲಾ ಹಾರಾಡಿ ಸಂಜಿಕೆ ಅಂದ್ರ
ಮೂಲಿಗಿ ಕೂಡ್ತತೈತಿ (ಇ ೯೯೦)
ಗುಬ್ಬಿ

ನೀರಲ್ಲಿ ಹುಟ್ಟಿ ನೀರಲ್ಲಿ ಬೆಳೆದು
ಅಲ್ಲೇ ಬೇಗನೆ ಸಾಯುವದು
ಗುರುಳೆ

ಅಡವಿಯಲಿ ಹುಟ್ಟಿದ ಗೋಪಾಲಾ
ನಿನಗೆ ಯಾರಿಟ್ಟರೋ ಸಾಜಿನಬಟ್ಟು (ಶಾಂ ನಾ ೧೬೫)

ಕೆಂಪಂಗಿ ಕರಿತುಪ್ಪಿ ಅಣ್ ಯಾರ್ (ಶಾಂ ನಾ ೧೬೪)

ವಬ್ಬಂಗೆ ಯೆರಡ್ಬಣ್ಣದಂಗಿ (ಶಾಂ ನಾ ೧೬೩)
ಗುರ್ಗುಂಜೆ

ಅಡಬ್ಯಾಗಿರೋ ಗಿಡಗೋವಿಂದ
ನಿನಗ್ಯಾರಿಟ್ಟರೋ ಸಾದಿನ ಬಟ್ಟ (ಲ ಗೌ ೩೭)

ಅಡವ್ಯಾಗಿರೋ ಗಿಡ್ಡ ಭಟ್ಟಾ
ನಿನಗಾರಿಟ್ಟರೋ ಸಾದಿನ ಬಟ್ಟಾ (ಇ ೬೬)

ಅರಸನ ಮಕ್ಕಳಿಗೆ ಅರದಲೆ ಕುಲಾವಿ (ಸು ೪೧)

ಕೆಂದ ಎತ್ಗಿ ಒಂದಾ ಕಣ್ಣ (ಲಠೆ ಭಾಗ ೫–೧೩೫)

ಕೆಂಪ ಮಾಣಿಗಿ ಒಂದಾ ಕಣ್ಣ (ಲಠೆ ಭಾಗ ೫–೧೩೭)

ಕೆಂಪನೆ ಹೆಂಗಸಿಗೆ ಕರಿ ಮೂಗು (ಲ ಗೌ ೪೭೯)

ಕೆಂಪು ಮನುಷ್ಯ ಕಪ್ಪು ಕುಲಾವಿ (ಸು ೨೩೧)

ಕೆಂಪು ಮನುಷ್ಯಾಗ ಕಪ್ಪು ಟೊಪ್ಗಿ (ಇ ೪೫೫)

ಕೆಂಪ್ನವ್ಳಿಗೆ ಕೈಳಿಗಿಷ್ಟಗಲ (ಮಂ ೧.೪–೪೦)

ಗುಡ್ಡದಾಗ ಹುಟ್ಟಿದ ಗುಲಾಲ
ನಿನಗ್ಯಾರಿಟ್ಟಾರ ಕರಿ ಚುಕ್ಕಿ (ವಾಲಿ ೧–೧೭)

ಗುಡ್ಡದಾಗಿರೋ ಗೋವಿಂದ ಭಟ್ಟ
ನಿನಗ್ಯಾರಿಟ್ರೋ ಸಾದಿನ ಭಟ್ಟ (ಇ ೪೯೬)

ದುಗಾಣಿ ಮೂಳಗ ದುಡ್ಡುಪ್ಪೆ ಚಂದಪ್ಪ (ಲಠೆ ಭಾಗ ೫–೧೪೦)

ದುಗಾಣಿ ಮೂಳ ದುಡ್ಡಿನ ಚಂದಪ್ಪ (ಲಠೆ ಭಾಗ ೫–೧೭೯)

ಮೈಯೆಲ್ಲ ಕೆಂಪು ಕಣ್ ಮಾತ್ರ ಕಪ್ಪು (ನಾ ಗೌ ೧೯೬)

ಸುತ್ತಲೂ ಕೆಂಪ್ಗೆ ಮಧ್ಯದಲ್ಲಿ ಕಪ್ಗೆ (ನಾ ಗೌ ೨೧೬)

ಹೊಟ್ಟೆ ಕೆಂಪ್ಗೆ ಕಣ್ಣು ಕರ್ರುಗೆ (ನಾ ಗೌ ೨೪೫)

ಗುಲಗಂಜಿ

ಮುಳ್ಳಿನ ಮನ್ಯಾಗ ಮುಸಿ ಮುಸಿ ನಗ್ತಾಳ (ಇ ೮೬೦)

ಗುಲಾಬಿ

ದೆವ್ವಿನಂತಾ ರಂಡಿ ಬಾಕಲಾಗ್ ಅಡ್ಡ ಬಿದ್ದಾಳ (ಲಠೆ ಭಾಗ ೫–೧೪೨)

ಗುಳಿ(ಅಗಳೀ)

ಮೂರ್ನೂರಡಕ್ಲಾ ಮೂರ್ನೂರ್ಮುಚ್ಲಾ (ಶಾಂ ನಾ ೪೯)
ಗುಳ್ಯಾ

ಹಗಲಲ್ಲೇ ನಿದ್ರಿ ರಾತ್ರಿಯೆಲ್ಲಾ
ತಿರುಗಾಟ–ನಾನ್ಯಾರು? (ಇ ೯೮೭)
ಗೂಗೆ

ಕಣ್ಣಿದ್ದೂ ಹಗಲು ಕುರುಡು (ಇ ೩೨೧)

ಚಿಕ್ಕ ಗೂಡಿನಲ್ಲಿ ಚಿನಾರಿ ಬಗ್ಗಿ ನೋಡ್ತಾಳೆ (ಲ ಗೌ ೫೪೩)

ಹಳ್ಳ ಹೊಲದಲ್ಲಿ
ಬೆಳ್ಳಕ್ಕಿ ಕೂತದೆ (ರಾ ಗೌ ೪೮೬)
ಗೂಬೆ

ಓಣಿ ಓಣಿ ತಿರುಗವ ಭಿಕ್ಷುಕನಲ್ಲ
ತ್ರಿಸೂಲ ಇದ್ದ ಪರಮೇಶ್ವರನಲ್ಲ (ಇ ೩೦೮)
ಗೂಳಿ

ಅಟ್ಟದ ಮೇಲೆ ಪುಟ್ಟಕ್ಕ ಕೂತವ್ಳೆ
ಮುಟ್ಟಿದರೆ ಬಾಯ್ ಬಡ್ಕೋತಾಳೆ (ರಾ ಗೌ ೧೨)
ಗೆಜ್ಜೆ (ಗಂಟೆ)

ಅಣ್ಣ ಬಣ್ಣ ಕೆಂಪು ಬಣ್ಣ
ತಂದು ಕೊಡಣ್ಣ ಬೀಜಿಲ್‌ದಣ್ಣ (ನಾ ಗೌ ೨೪)

ಎಲೆ ಎಲೆ ಬಣ್ಣ ಏಲಕ್ಕಿ ಬಣ್ಣ
ಬೀಜಿಲ್ಲದ ಹಣ್ಣು ತಂದುಕೊಡಿ ಅಣ್ಣ (ಲ ಗೌ ೨೪೪)

ಕುಣ್ಣ ಕುಸುಮ ಮೆಣ್ಸಾಗೆ ಮುಚ್ಚ (ಸು ೨೧೩)

ಕೆರೆ ಏರಿ ಮ್ಯಾಲೊಂದು ಎಸ್ಲಲ್ಗೆಡ್ಡೆ ವುಟ್ಟಿ
ಎಸ್ಲೊಂಬತ್ತು ಕುಸ್ಲೊಂಬತ್ತು
ಆಗ ಎಂಟ್ನೋರು ಗುಂಟೊಂಬೈನೂರು
ವಂಟ ವೊಡದ್ರೆ ಅರ್ವಾಣ್ತುಪ್ಪ
ಅರವತ್ತು ಕಜ್ಜಾಯ (ಮಂ ೧.೪–೪೧)

ಹಜಾರದಲ್ಲಿ ಅಣ್ಣ
ಬಜಾರದಲ್ಲಿ ಬಣ್ಣ
ಬೀಜವಿಲ್ಲದ ಹಣ್ಣ
ತಂದುಕೊಡಣ್ಣ (ರಾ ಗೌ ೪೬೬)

ಹೊಳೆಯೊಳಗೆಲ್ಲ ಬರಿ ಹಂಬೆಯೆ
ಕಿತ್ತು ನೋಡಿದ್ರೆ ಒಳಗಿರೋದು ಗೂಟ
ಅದ ನೋಡಿದ್ರೆ ರಟ್ಟೆಗಾತ್ರ ರಟ್ಟೆಉದ್ದ (ರಾ ಗೌ ೫೦೯)

ಹೋರಿ ತಡ್ಡ ಹುದಲಾಗ ಸಿಕ್ಕತಿ (ಲಠ್ಠೆ ಭಾಗ ೪–೨೧೧)

ಹೋರಿ ತಡ್ಡ ಹಂದಲಾಗ ಸಿಕ್ಕೈತಿ (ವಾಲಿ ೮–೧೪)

ಹೋರಿ ತೊಡ್ಡು ಹುದಲಾಗ ಸಿಕ್ಕೈತಿ (ಇ ೧೧೧೧)
ಗೆಣಸು

ಗುದ್ದಿನೊಳಗ ಎದ್ದೇವಯ್ಯಾ
ಹೋಲಿ ಜಳಕ ಮಾಡೇವಯ್ಯಾ
ಶಿವನ ದಂಡಿಗಿ ಏರೇನಯ್ಯಾ (ಇ ೫೦೭)
ಗೆಣಸು ತೊಳೆಯುವುದು, ತೂಕಮಾಡುವುದು

ಕಾಯಿ ಕಣಾ ಕಣಾ
ಹೂವ ಬನಾಬನಾ
ಅಂಕನ ಬಳಿ ಅಡರ್ ಬಡರ್ (ಲಠ್ಠೆ ಭಾಗ ೪–೭೧)
ಗೆಣಸಿನ ಬಳ್ಳಿ

ಚಿಕ್ಕ ಪೋರನಿಗೆ ಮಣ್ಣಿನ ಕೆಲಸ (ಚಂ ಸೆ ೧೨೩)

ಮೂಡಲ ಸೀಮೆಯಿಂದ
ಮುನ್ನೂರು ಕುರಿ ಬಂದು
ತರಗು ಬಿಟ್ಟು ಮರುಗ ಮೇಯ್ತುವೆ (ಸು ೪೨೦)
ಗೆದ್ದಲು

ಮಂತ್ರಿ ಮನೆ ಕಟ್ಟಿದ
ದೊರೆ ಒಕ್ಕಲು ಬಂದ (ಸು ೪೦೭)
ಗೆದ್ದಲು ಮತ್ತು ಹಾವು

ತಲೆಯಲ್ಲಿ ಗಂಗೆ ಹೊತ್ತವನ
ಮಾಳಿಗೆಯ ಮನೆಯ ಹೊಕ್ಕವನ
ಕಾಳಸರ್ಪನ ಹೆಡೆಯ ತುಳಿದವನ ಹೆಸರೇನು? (ಲ ೫೮೬)
ಗೆದ್ದಲು ಹುಳು

ಅಪ್ಪ ಪುಕ್ಕಿಲೆ ಮಗಾ ಜೋತಾಡ್ತಾ ೪ (ಶಾಂ ನಾ ೧೬೬)
ಗೆರಣ್ಣ

ಅವ್ವನಿಗೆ ನಾಲ್ಕು ಪುಟ್ಟ
ಮಗಳಿಗೆ ಎರಡು ಪುಟ್ಟ
ಮೊಮ್ಮಗಳಿಗೆ ಒಂದೇ ಪುಟ್ಟಾ (ಲ ಗೌ ೯೨)
ಗೆರಸಿ–ಮೊರ–ಕೊಂಗ

ಕೆಂದೆತ್ತಿನ ತಿಕ್ಕೆ
ಕರಿ ಎತ್ತು ಸಿಗಾಕ್ಕೊಳ್ತು (ಸು ೨೨೭)

ತುತ್ತ ತುದ್ಯಾಗ ಮಂಗ್ಯಾಕಿಸಗೊಂಡು ಕುಂತೈತಿ (ಇ ೫೯೧)

ಬೆಣಚಕಲ್ಲು ಬಾರೇಲಿ
ಗಿಣಚಿಕೊಂಡು ಕುಂತವನೆ (ಸು ೩೮೫)
ಗೇರಹಣ್ಣು

ಕಾಯಿ ಒಗರು ಹಣ್ಣು ಸಿಹಿ ಬೀಜ ಹೊರಗೆ
(ಲ ಗೌ ೪೪೦)

ಕೆಂದೆತ್ತಿನ ರಳದಾಗ ಕೆರೆ ಎತ್ತು ಸಿಕ್ಕೊಂಡೈತಿ (ಇ ೪೪೬)
ಗೇರುಹಣ್ಣು

ಅರಸನ ಮಾಮುಸುಕಿನ ಸೂಳೆ
ಕರೆದರೆ ಬರಲ್ಲ
ಕೈಹಿಡಿದು ಎಳೆದರೆ ಬರ್ತಾಳೆ (ಸು ೪೨)

ಇಣಕಿ ಇಣಕಿ ನೋಡುವ ಸೂಳೆಮಗ ಯಾರು (ಲ ಗೌ ೧೬೪)

ಐಶ್ವರ್ಯವಂತ ಬಟ್ಟೇಲಿಟ್ಟು ಭದ್ರಪಡಿಸ್ತಾನೆ
ಬಡವ ಕೈಯಿಂದ ತೆಗೆದು ದೂರ ಒಗೀತಾನೆ (ಲ ಗೌ ೨೬೩)

ತಗದ ಒಗದ (ಸು ೨೯೧)

ತಿಂದ ಕುಡ್ದ ಹಿಡ್ಕಂಡ'
ಎಳ್ಕಂಡ ಮಲ್ಕಂಡ (ಮಂ ೧.೫–೬೬)

ಬಡವರೆಲ್ಲಾ ಬಿಸ್ಹಾಕ್ತಾರೆ
ಪುಣ್ಯವಂತರೆಲ್ಲಾ ಮಡಿಕೊಳ್ತಾರೆ (ರಾ ಗೌ ೩೪೨)

ಬಿಳಿ ಚಡಿ ನೆಲಕ್ ಹೊಡಿ (ಸು ೩೭೨)

ಮಧ್ಯೆ ಗೋಡೆ
ಆ ಕಡೆ ಈ ಕಡೆ ಸೂಳೇರು
ಇಣಕಿ ನೋಡ್ತಾರೆ (ರಾ ಗೌ ೩೮೧)

ಮುಕ್ಕುಡಿಕೇರಿ ಮೊಸರು ತುಂಬಿಕ್ಕಿದೆ (ಸು ೪೧೧)

ಮೂಗಿನೊಳಗಿಂದ
ಎರಡು ಕರ ಬಂದೂ (ರಾ ಗೌ ೩೯೯)

ಸಿಯಾಂ ಸಿದ್ಧಾಂ
ಗೋಡೆಗೆ ಲಟ್ಟಾಂ (ರಾ ಗೌ ೪೫೦)

ಹಾಲು ಇದ್ದರೂ
ಬೆಣ್ಣೆ ಇಲ್ಲ (ರಾ ಗೌ ೪೯೧)

ಗೊಣ್ಣೆ

ಇಬ್ರು ವೊತ್ಕ ಬಂದುದ್ದ
ಐದು ಜನ ಇಳೀಕ್ಕಂಡ್ರು (ಮಂ ೧.೫–೨೩)

ತಗದಾ ಒಗದಾ (ಮಂ ೧.೫–೬೩)

ಗೊಣ್ಣೆ, ಸಿಂಬಳ

ಇಬ್ಬರು ಹೊತ್ತು ತಂದು
ಐದು ಜನ ಇಳುಕಿದರು (ಲ ಗೌ ೧೭೧)

ಗೊಣ್ಣೆ ತೆಗೆಯುವುದು

ಆರು ಕಾಲುಂಟು ಜರಿ ಅಲ್ಲ
ತಲೆಯುಂಟು ಮನುಷ್ಯನಲ್ಲ (ರಾ ಗೌ ೭೮)

ಅಂಟುಂಟು ವಡಿವಾರ
ನಾಗ್ನಳ್ಳಿ ನರ್ಸೀಪುರ
ಗೆಜ್ಜಗನಹಳ್ಳಿ ನುಗ್ಗೇ ಮರ
ಅಲ್ಲೊಬ್ರಾಯ ತವಕನಿದ್ದ ಹಾಂಗಂದ್ರಯಾನ (ಮಂ ೨.೨–೧)

ಕಪ್ಪಾದರೆ ಕಾಗೆಯಲ್ಲ
ತಲೆದಪ್ಪಾದರೆ ಆನೆಯಲ್ಲ
ನಡುಸಣ್ಣವಾದರೆ ಸಿಂಹವಲ್ಲ
ತಾನಾಗಿ ಹತ್ತಿ ಇಳಿಯುವುದು (ಜೀಶಂಪ ೧೨೧)

ಸರಸರನೆ ಹತ್ತುವುದು ಸರ್ಪವಲ್ಲ
ನಾಲ್ಕು ಪಾದಗಳುಂಟು ಬಸವನಲ್ಲ
ಕೊಕ್ಕುಂಟು ಕೂಗೋ ಹುಂಜನಲ್ಲ (ಲ ಗೌ ೯೨೦)
ಗೊದ್ದ

ಮುಟ್ಟಾಗಿದ್ದಳಂತೆ
ಮುಟ್ಟಾಕೆ ಹೋದ್ರೆ
ಎಟ್ಟಾಕೆ ಬರ್ತಾಳೆ (ರಾ ಗೌ ೩೯೨)
ಗೊಬ್ಬಳಿ ಮುಳ್ಳು

ಅಕ್ಕಡೆ ಹೊಟ್ಟೇಳು ಇಕ್ಕಡೆ ಹೊಟ್ಟೇಳು ನಡೂತಾವ ಕೊಗರಳ್ಳಿ (ಲ ೧೧)
ಗೊರಗು

ಪಟೇಲರ ಕುದುರೆ ಬಿಗಿದು ನಿಂತದೆ (ಲ ೭೧೯)

ಭೀಮರಾಯನ ಕುದುರೆ ಬಿಗಿದು ನಿಂತಿತ್ತು (ಲ ಗೌ ೮೦೨)
ಗೋಡೆ

ಅಪ್ಪನು ಕುಳಿತು ಕೊಳ್ಳುತ್ತಾನೆ
ಮಗನು ದುಡಿಯುತ್ತಾನೆ (ಶಾಂ ನಾ ೩೩೧)

ಮೊಡಾ ಓಡ್ತು ಮಳೆ ಬೀಳ್ತು (ಶಾಂ ನಾ ೩೩೨)
ಗೋದಿಕಲ್ಲು

ಅಟ್ಟಂಬಟ್ಟಮ್
ಆರ್ಯಾಣದಾಗ
ಅಕ್ಕವ್ವ ಜಡಿ ಹಾಕ್ತಾಳ (ಲಠ್ಠೆ ಭಾಗ ೪–೧೬)
ಗೋದಿ ತೆನಿ

ಅಟ್ಟಂ ಬಟ್ಟಂ ಆರ್ಯಾಣನಾದಾಗ ಜಕ್ಕವ್ವ ಜಡಿ ಹಾಕ್ಯಾಳ (ಇ ೫೭)

ಅಟ್ಟಂ ಬಟ್ಟಂ ಆರ್ಯಾಣನಾದಾಗ ಜುಟ್ಟಾ ಬಿಟಗೊಂಡು ಕೂತ್ಯೆತಿ (ಇ ೫೪)
ಗೋದಿ ತೆನೆ

ಬಾಗಲಾ ಮುಚಗೊಂಡ
ಬಾಂಗ್ಡಾ ಆಡ್ತಾರ (ಲಠ್ಠೆ ಭಾಗ ೪–೧೩೭)
ಗೋದಿ ಹುಗ್ಗಿ

ನೋಡಿದ್ರೆ ನೆಲ್ಲು ಹುಲ್ಲು
ಅದರಲ್ಲಿ ಹತ್ತಾರು ಕಾಳು
ಅದ ಕುಟ್ಟಿದರೆ ಅಕ್ಕಿ (ರಾ ಗೌ ೩೩೨)
ಗೋಧಿ

ಅಂಗಡಿಯಲ್ಲಿ ಮಾರುವುದಲ್ಲ
ತಕ್ಕಡಿಯಲ್ಲಿ ತೂಗುವದಲ್ಲ
ಇದಿಲ್ಲದೆ ಶುಭಕಾರ್ಯವಾಗುವುದಿಲ್ಲ (ಚಂ ಸೆ ೨೪)
ಗೋಮಯ

ಮುಚ್ಚಿದ ಬಾಗಿಲ ತೆಗೆಯುವದಿಲ್ಲ (ಲಠ್ಠೆ ಭಾಗ ೫–೨೪೯)
ಗೋರಿ

ಸಮಾಧಿ ಕಾಯಿ
ಅತ್ತೆ ಗಂಡನ ಕಾಯಿ
ಇಬ್ಬರು ಹೆಂಡಿರ ಕಾಯಿ (ಲ ಗೌ ೯೧೪)
ಗೋರಿಕಾಯಿ–ಮಾವಿನಕಾಯಿ–ಸೌತೆಕಾಯಿ

ಹಸರ ಸೀರಿ ಉಟ್ಟಾಳ
ಹಳದಿ ಕುಬಸಾ ತೊಟ್ಟಾಳ್
ಹತ್ರ ಹೊದ್ರ ಪರಕ್ನ ಪರಚ್ತಾಳ್ (ಲಠ್ಠೆ ಭಾಗ ೫–೩೦೦)

ಹಸಿರ ಸೀರೆ ಉಟ್ಟಾಳ
ಹಳದೀ ಕುಪ್ಪಸ ತೊಟ್ಟಾಳ
ಹತ್ತಿರ ಹೋದರ ಕರಕ್ಕನೆ ಪರಚುತಾಳ (ಇ ೧೦೪೪)
ಗೋರಂಟಿ ಗಿಡ

ಗಂಜೀ ಸೀರೆಯುಟ್ಟು
ಗಂಧದ ಬಟ್ಟನಿಟ್ಟು
ಗಂಡಿಲ್ಲದ ಬಾಲಿ ಗಬ್ಬ ಆಗ್ತಾಳ (ಇ ೫೧೨)
ಗೋವಿನ ಜೋಳ

ಅಜ್ಜನ ಗೂಟಕ್ಕ ಮುತ್ತು ಬಿಗದಾರ (ಇ ೪೫)

ಮುತ್ತಾ್ಯನ ಸಾಮಾನಕ ಮುತ್ತ ಪೋಣಿಸ್ಯಾರ (ವಾಲಿ ೮–೨೨)

ಹಚ್ಚನ ಹಸುಕು ತಗಿ ನಿನ್ನ ಮುಸುಕು
ನಾ ಬಂದೀನ ನಿನ್ನ ದುಸುಕು (ಇ ೯೯೭)
ಗೋವಿನ ಜೋಳದ ತೆನಿ

ಹಚ್ಚನ್ನ ಹಸಕ
ಬಂದಿನಿ ನಿನ್ನ ಮುಗಸಾಕ
ತೆರೀ ನಿನ್ನ ಮುಸುಕ (ವಾಲಿ ೨–೩೦)

ಹಸರ ಸೀರಿ ಉಟ್ಟಾಳ
ತಲ್ಯಾಗ ಜುಪರಿ ಬಿಟ್ಟಾಳ
ಮುತ್ತಿನಂಥಾ ಹಲ್ಲು ಕಿಸ್ತು
ಬಾಚಾರದಾಗ ಕುಂತು ಬಾ ಬಾ ಅಂತಾಳ (ವಾಲಿ ೨–೨೪)

ಹುಳಕಮಾರಿ ನವಾಬ
ಮುತ್ತಿನಂಗಿ ತೊಟ್ಟಾನ
ಹಸರ ಮುಸುಕು ಸಂಸ್ಯಾನ
ಕೇಸರಿ ಗೊಂಡೆ ತೋರ್ಯಾನ (ಇ ೧೦೯೮)
ಗೋವಿನ ಜೋಳದ ತೆನೆ

ರಾಜನ ಮನೇಲಿ ರಾಣಿ ರಾಗ ಹಾಡುತ್ತಿದ್ದಾಗ
ಪುಂಡಗಾರ ಹೋಗಿ ತಲೆ ಅಲ್ಲಾಡಿಸುತಿದ್ದ (ಲ ಗೌ ೮೮೯)
ಗೌಜಲ ಹಕ್ಕಿ

ಅಬ್ಬಬ್ಬಾ ಅಂತ ಬಂದಾದೆ
ಹೆಬ್ಬಾಗ್ಲಲಿ ಕುಳಿತದೆ
ಗಂಡು ಮಕ್ಕಳಿಗೆಲ್ಲ
ಗಂಗುಂಡೆ ಕಾಯಿ ಜೋಡಿಸು ಅಂತದೆ
ಹೆಣ್ಣು ಮಕ್ಕಳಿಗೆಲ್ಲ
ಹೆಸರುಬ್ಯಾಳೆ ಹಸಿರು ಸೌತೆಕಾಯಿ
ಜೋಡಿಸು ಅಂತದೆ (ರಾ ಗೌ ೩೫)
ಗೌರಿ ಹಬ್ಬ

ಅಡಿಗೆ ಕಂಚಿನ ತೇರಿ ಮೇಲೆ ಹೂವಿನ ತೇರು
ಐದಾಳು ಎಳೆಯೋರು ಎರಡಾಳು ನೋಡೋರು (ಲ ಗೌ ೪೪)
ಗಂಗಳ, ಅನ್ನ, ಕೈಬೆರಳು, ಕಣ್ಣು

ಕಂಚು ಕಣ ಕಣ
ಹೂ ಬಳ ಬಳ
ಹಾವು ಸಳಸಳ
ಯಾಕಲೇ ಮುದುಕಿ ತೊಡ್ರಾಬಡ್ರಾ (ಇ ೪೩೨)
ಗಂಗಾಳ–ಅನ್ನ–ಸಾರು–ಶಾವಿಗೆ

ಭಂಗಾರ ಖಿಳ ಬೆಳ್ಳಿ ಬುಟ್ಟಿ
ಐದಮಂದಿ ಕುಡತಾರ
ಒಂಬತ್ತ ಮಂದಿ ತೂರತಾರ (ಲಠೈ ಭಾಗ ೧–೪೪)
ಗಂಗಾಳ, ಅಂಗೈ, ಬೆರಳ, ಹಲ್ಲ

ವಂದಜ್ಜಿ ಗಡ ಗಡಾ ನಡಗ್ತು (ಶಾಂ ನಾ ೪೩೪)
ಗಂಜಿ ಮೊಡ್ಕೆ

ಗುಡಿಯಾಗ ಕುಂತು
ಗಡಬಡಾ ಮಾಡತೈತಿ (ಇ ೫೦೪)

ಭಟ್ಟನ ಜುಟ್ಟಾ ಹಿಡಿದ ಹೊರತು ಮಾತನಾಡುವದಿಲ್ಲ (ಇ ೭೯೦)

ದಾರೀಯೊಳಗ ಹೋಗ್ತಾನೂ
ಹಾಡಕೋತ ಹೋಗತೈತಿ (ಇ ೬೧೧)

ನನ್ನಜ್ಜಾ ಜುಟ್ಟಾ ಹಿಡ್ದಂಕು ಮಾತೇ ಆಡ್ತ್ನಲ್ಲೆ (ಶಾಂ ನಾ ೨೩೫.)

ನಿಂದರೊಳಗ ನಂದು ಅಳಗಾಡತಾದ (ವಾಲಿ ೮–೨೯)

ನಿಂದರೊಳಗ ನಂದು ಅಳಗಾಡತಾದ (ವಾಲಿ ೮–೨೯)

ಹಾಡಕೊಂತ ಹೋಗ್ತಾನ
ಹಾಡಕೊಂತ ಬರ್ತಾನ (ಇ ೧೦೬೦)
ಗಂಟೆ

ಕಸಮೂಳ ರಂಡಿಗಿ ಹಸಗೆಟ್ಟ ಹೋಗಿದ್ದ
ನೀರತಾ ಅಂತ ಗಂಡಂದರ–ಹೆಂಡತಿ
ನಾ ಅರೆಯೇನ ಸಮ್ಮಕ ಕೂತಿದ್ದ
ಚದರ ಚನ್ನಿಂಗ ಹೋಗಿದ್ದೆ ಅಂದ್ರ
ಅವರೆಲ್ಲಿಗೆ ಹೋದದ್ದು (ಲಠೈ ಭಾಗ ೫–೧೨೦)
ಗಂಡ ಪುಂಡಿ ಬಡಿಯಲು ಹೋಗಿದ್ದ, ಹೆಂಡ್ತಿ ಹತ್ತಿ ಬಿಡಿಸಲು ಹೋಗಿದ್ದಳು

ಕೋರ್ಟುಡುಗನಿಗೆ ವಾಟುನ್ನಿ (ರಾ ಗೌ ೨೨೬)
ಗಂಡಸಿನ ಮೊಲೆ

ಅರೆಕಲ್ಲಿನ ಮೇಲೆ ಮರ ಮೂಡಿದ್ದು ಕಂಡೆ
ಮರದ ಮೇಲೆರಡು ಕರಗಳನು ಕಂಡೆ
ಮುಂದೆ ಅದು ಶಿವನಿಗರ್ಪಿತವಾಗುವದ ಕಂಡೆ (ವಾಲಿ ೩–೨೪)

ಮೂರು ಕಾಲಿನ ಮೂರು ಮುಖದ ರಾಣಿ
ನೀರು ಕುಡಿದು ಕಟ್ಟಿಗೆ ತಿನ್ನುತ್ತಾಳೆ (ಚಂ ಸೆ ೨೦೬)
ಗಂಧದ ಕಲ್ಲು

ತೇದ್ರ ನಾರತತಿ
ಕಿಸದ್ರ ನಾರತತಿ
ಸುಟ್ರ ನಾರತತಿ (ಲಠ್ಠೆ ಭಾಗ ೫–೧೭೪)
ಗಂಧ, ಹೂ, ಊದ

ಮೂರು ಕಾಲಿನ ಕೋತಿ
ಪಾನಿ ಪೀತಿ ಪತಾಪತಾ ಹೇತಿ (ಇ ೮೭೨)
ಗಂಧದ ಕೊರಡು

ಅಡವಿಯಲ್ಲಿ ಹುಟ್ಟಿಹುದು
ಗಿಡಮರನೂ ಆಗಿಹುದು
ಕಡಿದರೆ ಕಂಪು ಕೊಡುತಿಹುದು (ಇ ೭೦)
ಗಂಧದ ಮರ

ಅಂಗಿತೋಳು ಇಂತೋಳು
ಬಂತೋಳು ಬಿರಾಮದೋಳು
ಎಂತೆಂತೋಳು ಕೈಲು ಸರಿಸಾಟಕ್ಕೆ ಹೋಗುತ್ತಾಳೆ (ಲ ಗೌ ೧೩೦)
ಗುಂಗುರ (ನೊಣ)

ಪಿಟೇಲ ಪಾಪ್ಯಾ
ವಲ್ಲಿ ಎಲ್ಯಾ
ಗ್ವಾಡಿ ಕೆಂಪ್ಯಾ
ಮೂಗಾರು ಇವರ
ಮನಸ್ಯಾನ ಗೆಣ್ಯಾರಾ (ಲಠ್ಠೆ ಭಾಗ ೩–೫೧)

ಮಲ್ಲಾಡ ಕ್ವಾಣಕ
ಮುಗದಾಣಾ ಹಾಕಾಕ ಹ್ವಾದ್ರ
ಇರ್ಯಾಕ ಬರತತಿ (ಲಠೆ ಭಾಗ ೫–೫೬)

ರಾತ್ರಿ ಬಂತಂದ್ರ ಹಾಡತ ಬರ್ತಾರಾ ಅಯ್ನೋರ (ಲಠೆ ಭಾಗ ೫–೬೦)
ಗುಂಗಾಡು

ಗುದಗವ್ವ ಹುದ್ಲಾಗ ಸಿಕ್ಕೊಂಡಾಳ (ಲಠೆ ಭಾಗ ೫–೧೫೪೪)
ಗುಂಡ ಕಲ್ಲ

ಉಂಡುಂಡು ಮಲಗೊ
ಗುಂಡಕಲ್ ರಾಮ (ರಾ ಗೌ ೯೪)
ಗುಂಡ ಕಲ್ಲು

ಗುಂಬು ಗುಂಬು ಅನ್ನೋದು ಒಂದು ಊರು
ಚಿಟಿ ಚಿಟಿ ಅನ್ನೋದು ಒಬ್ಬಳು ಹುಡುಗಿ
ಚಿಟ್ಟುಟ್ರಿ ತಬ ಚಿಟ್ಟುಡದಿದ್ರೆ ಬಿಟ್ಟು ಬಾ (ಲ ಗೌ ೫೨೭)
ಗುಂಬ–ಅರಳು

ಅಸಕ ಮುಸಕ
ತೆಗಿನಿನ ಮುಸಕ
ನಾ ಬಂದೇನ ದುಸಕ (ಇ ೧೪೪೮)

ಹಸರ ಅಂಗಿ ತೊಟ್ಟತಿ
ಪಿಸರ ಗಡ್ಡಾ ಬಿಟ್ಟತಿ
ಬಾಜಾರದಾಕುತ್ತು
ಬಾ ಬಾ ಅಂತತಿ (ಲಠೆ ಭಾಗ ೪–೧೪೯)

ಹಸರಂಗಿ ತೊಟ್ಟೈತಿ
ಕೆಂಪು ಮೀಸೆ ಬಿಟ್ಟೈತಿ
ಬಾಜಾರದಾಗ ಕುಂತೈತಿ
ಬಾಬಾ ಅಂತ ಕರಿತೈತಿ (ಇ ೧೦೨೭)
ಗೊಂಜಾಳ ತೆನಿ

ಬಂಕಾಪುರದ ಎತ್ತು
ಬಡಾ ಬಡಾ ಬಂತು
ತುಳಾ ತಿಂತು ಬಾಲಾ ಚೆಲ್ಲಿತು (ಇ ೭೭೬)
ಗೊಂಜ್ಯಾಳ ತೆನಿ

ಕಣ್ಣಿದ್ದು ಕುರುಡು
ಕಿವಿ ಇದ್ದು ಕಿವುಡು
ಬಾಯಿದ್ದು ಮೂಕ (ಇ ೩೨೦)

ಕೈಯುಂಟು ಕೆಲಸ ಮಾಡುವುದಿಲ್ಲ
ಕಾಲುಂಟು ನಡೆಯುವುದಿಲ್ಲ
ಬಾಯುಂಟು ಮಾತಾಡುವುದಿಲ್ಲ
ಇದನ್ನು ಹೇಳಿದವರ ಬಾಯಿಗೆ ಉಂಡೆ ಬೆಲ್ಲ (ಲ ಗೌ ೪೮೮)
ಗೊಂಬೆ

ತಿರುಗುವುದು ಚಕ್ರವಲ್ಲ
ಕಪ್ಪುಂಟು ಕಸ್ತೂರಿಯಲ್ಲ
ಹಾಡುವುದು ಕೋಗಿಲೆಯಲ್ಲ
ಇದ ಹೇಳಬಲ್ಲವರು ಕಂಡಿಹರಲ್ಲ (ಇ ೫೮೭)
ಗ್ರಾಮೋಫೋನ್

ಪೆಟ್ಟಿಗೆ ಒಲೆಯಲಿ ಗರಗರ ತಿರುಗಿಸಿ
ಕಪ್ಪಿನ ದೋಸೆ ಬಲುರುಚಿ ಬಾಯಿಗೆ ಅಲ್ಲ (ಚಂ ಸೆ ೧೭೫)
ಗ್ರಾಮಫೋನು

ಹಸರ ಹನ್ನೊಂದ
ಕುಸರ ಮೂವತ್ತ
ಹಿಡದೇನಂದ್ರ ಫಂಡಿ ಇಲ್ಲ
ಕುತೇನಂದ್ರ ನೆಳ್ಳಿಲ್ಲ (ಲತ್ಥೆ ಭಾಗ ೪–೧೯೭)
ಫೋಲಿಪಲ್ಯಾ

ಅಟ್ಟದ ಮೇಲೊಂದು ಪುಟ್ಟಗುಂಬಳಕಾಯಿ
ಮುಟ್ಟಿದರೆ ಬಾಯಿ ಬಡುಕೊಳ್ಳುತ್ತೆ (ಲ ಗೌ ೨೯)

ಮಾಡಿ ಮೇಲೊಂದು ಪುಟ್ಟ ಸೋರೇಕಾಯಿ ಇದೆ
ಮುಟ್ಟಿದರೆ ಕಿಟ್ಟನೆ ಕಿರಿಚುತ್ತದೆ (ಲ ಗೌ ೮೩೩)
ಘಂಟೆ

ಮುಳ್ಳು ಮುಳ್ಳು ಗಾಡಿ ಬಾಯಲ್ಲಿಟ್ಟರಿ ಕರಗುವಾ ಗಾಡಿ (ಶಾಂ ನಾ ೪೩೫)

ಮುಳ್ಳುಂಟು ಮರವಲ್ಲ
ದುಂಡಗಿರುವೆ ಗಾಲಿಯಲ್ಲ
ನೋಡಿದವರು ಬಿಡುವದಿಲ್ಲ (ವಾಲಿ ೫– ೫೪)

ಸುತ್ತಸುತ್ತಿನ ಚಕ್ರ
ಕರಿದಿರುವ ಕೆಂಪು ಚಕ್ರ
ಎಲ್ಲರ ನಾಲಿಗೆಯ ಮೇಲಾಡುವ ಚಕ್ರ
ಇದರರ್ಥ ಹೇಳಿದವ ಶಕ್ರ (ವಾಲಿ ೫–೩೧)
ಚಕ್ಕಲಿ

ಕಟಕಟಾ ಕುಟುಕುಟು
ಚಾಂಬುದಿ ಕಟ್ಟಿದ ಮನೆಗೆ ಕಂಬವಿಲ್ಲ (ಲ ಗೌ ೩೬೩)

ಮುಳ್ಳು ಮುಳ್ಳಿನ ಚಕ್ರ
ಗಾಡಿಗಾಗದ ಚಕ್ರ
ಮುರಿದು ಮುರಿದು ತಿನ್ನುವ ಚಕ್ರ (ಲ ಗೌ ೮೫೦)

ಸುತ್ತು ಸುತ್ತಿನ ಚಕ್ರ
ಬಹು ಸುಟ್ಟ ಚಕ್ರ
ಎಲ್ಲರ ನಾಲಿಗೇಲು ತಿರುಗುವ ಚಕ್ರ
ಇದ ಹೇಳಿದವ ಶುಕ್ರ (ರಾ ಗೌ ೪೫೬)
ಚಕ್ಕುಲಿ

ಗೇಣುದ್ದ ಗಿಡ
ಗೆಸ್ಸಿ ಅಗ್ಗಳೆ
ಜಿನಕ್ಕ ನೂರು ಕಾಯಿ ತಪ್ಪದೆ ಬುಡ್ತದೆ (ಮಂ ೧.೬–೧)
ಚಕ್ರ (ಕುಂಬಾರ ಬಳಸುವುದು)

ನಡೆ ನಡೆವೆಂಟು ನಡೆ
ತಪ್ಪಿದರೆ ಸೊಲ್ಲು ನಾಲ್ಕು
ತಲೆ ಐದು (ಸು ೩೨೯)
ಚಟ್ಟದಲ್ಲಿರುವ ಹೆಣವನ್ನು ಹೊರುವ ನಾಲ್ಕು ಮಂದಿ

ಅಂಕು ಡೊಂಕಿನ ಮರ
ಅಂಕೋಲೆ ಮರ
ನಾಲ್ಕು ಜನಕ್ಕೆ ಕಷ್ಟ
ಒಬ್ಬನಿಗೆ ಸುಲಭ (ಸು ೫೮)
ಚಟ್ಟ ಹೊರುವ ನಾಲ್ಕು ಮಂದಿ ಮತ್ತು ಹೆಣ

ಎಂಟು ಕಾಲಿನ ಕುರುಜಿನ ಹಿಂದೆ ಹೆಂಗಸರ ವಾದ್ಯ (ಸು ೧೨೦)
ಚಟ್ಟ ಹೊರುವ ನಾಲ್ಕು ಮಂದಿ ಮತ್ತು ಹೆಂಗಸರ ಅಳು

ಕಾಲುಗಳು ಎರಡಿವೆ ತಲೆ ಇಲ್ಲ
ಎರಡು ಕಾಲಿಗೆ ಬೆರಳುಗಳಿಲ್ಲ (ಇ ೩೯೧)

ಚಡ್ಡಿ

ಹುಡುಗ ಕಾಲೆತ್ತುತ್ತಾನೆ ಹುಡುಗಿ ಕೈ ಎತ್ತುತ್ತಾಳೆ (ಲ ಗೌ ೧೦೬೪)

ಚಡ್ಡಿ–ರವಕೆ

ಅಂಗೈಯಗಲ ಗದ್ದೆ
ಮುಂಗೈಯಗಲ ಬದು
ಉಳುವದು ಎರಡು ಎತ್ತು
ಹಾಕುವದು ಹದಿನಾರು ಬೀಜ (ವಾಲಿ ೩–೧೧೭)

ಒಂದು ಪಟ್ಟಣದಲ್ಲಿ ಇಬ್ಬರು ಅರಸರು
ಸೇನೆಯಿದೆ ಕಾಳಗ ಮಾಡ್ತಾರೆ
ಊಟ ಉಡಿಗೆ ಇಲ್ಲ ಮಾತುಕತೆಯಿಲ್ಲ (ಚಂ ಸೆ ೬೮)

ಚದುರಂಗ ಬಲವಿಹುದು ಯುದ್ದವಿಹುದು
ಸಾವುನೋವುಗಳಿಲ್ಲ ಸಂತೋಷವಿಹುದು (ವಾಲಿ ೩–೧೧೪)

ಚದರಂಗದಾಟ

ಕಾಠೆವಾಡದಿಂದ ಎರಡ ಕ್ವಾಣ ತಂದಾರ
ಎಡಕಿಂದ ಬಲಕ ಬರಲ್ದು
ಬಲಕಿಂದ ಎಡಕ ಬರಲ್ದು (ಲಠ್ಠೆ ಭಾಗ ೫–೧೨೫)

ಚಪ್ಪಲ್ಲ

ಊರೆಲ್ಲ ಸುತ್ತಿ ಮೂಲೇಲಿ ಬಂದು ಮುದುರಿಕೊಳ್ತವೆ (ಸು ೧೧೦)

ಚಪ್ಪಲಿ

ಅಕ್ಕ ತಂಗಿಯರಿಬ್ಬರು
ಅಕ್ಕನ ಮನೆಗೆ ತಂಗಿ ಹೋಗೋಲ್ಲ (ಲ ಗೌ ೧೦)

ಅತ್ತಲಿಂದ ಎರಡು ಎತ್ತು ಬತ್ತವೆ
ಅಕ್ಕಡೇದೀಕ್ಕಡೇಕ್ ಬರಲ್ಲ
ಈಕಡೇದ್ ಆಕಡೇಕ್ ಬರಲ್ಲ (ಜೀಶಂಪ ೫೮)

ಊರೆಲ್ಲ ತಿರುಗಿ ಬರ್ತವೆ
ಅಗೌರವದ ಸ್ಥಳದಲ್ಲಿ ನಿಲ್ತದೆ (ಲ ಗೌ ೨೧೧)

ಊರೆಲ್ಲ ಸುತ್ತುತ್ತೆ
ಬಾಗ್ಲಲ್ಲಿ ನಿಲ್ಲುತ್ತೆ (ಜೀಶಂಪ ೭೪)

ಊರೆಲ್ಲಾ ಸುತ್ತಾಡಿ ಮನಿಗೆ ಬಂದು
ಮೂಲ್ಯಾಗ ಕುಂದರತ್ಯೆತಿ (ಇ ೨೨೮)

ಎಡದ್ದು ಬಲಕ್ಕ ಬರೂದಿಲ್ಲ
ಬಲದ್ದು ಎಡಕ್ಕ ಬರೂದಿಲ್ಲ
ಎರಡೂ ಕೈಯಾಗ ಇರೂದಿಲ್ಲ (ಇ ೨೩೪)

ಒಂದು ಜೊತೆ ಗಾಡಿ ಎತ್ತು ತಂದೆ
ಎಡದೆತ್ತು ಬಲಕ್ಕೆ ಬಾಗದು
ಬಲದೆತ್ತು ಎಡಕ್ಕೆ ಬಾಗದು (ಲ ಗೌ ೩೪೪)

ಕಲ್ಲನ್ನು ತುಳಿಯುತ್ತೆ
ಕಲ್ಲನ್ನು ಮೇಯುತ್ತೆ
ನೀರು ಕಂಡ್ರೆ ನಿಲ್ಲುತ್ತೆ (ಲ ಗೌ ೪೧೮)

ಕಲ್ಲನ್ನು ತುಳಿಯುತ್ತೆ
ಮುಳ್ಳನ್ನು ಮೇಯುತ್ತೆ
ನೀರು ಕಂಡ್ರೆ ನಿಲ್ಲುತ್ತೆ (ರಾ ಗೌ ೧೮೭)

ದಿನವೆಲ್ಲ ತಿರುಗಿ
ಬಾಗಿಲ ಹಿಂದೆ ಬಂದು
ಬಚ್ಚಿಟ್ಟುಕೊಂತು (ಜೀಶಂಪ ೧೭೭)

ನೀರಿರುವ ಸ್ಥಳದಲ್ಲಿ ನಿಲ್ಲುವೆ
ಮುಳ್ಳಿರುವ ಕಡೆಯಲ್ಲಿ ನುಗ್ಗುವೆ
ಊರೆಲ್ಲ ಸುತ್ತುವೆ
ಬಾಗಿಲಲ್ಲಿ ಮಲಗುವೆ (ಇ ೬೭೩)

ಮಲ್ಲಾಡದಾಗಿಂದ ಎರಡು ಕ್ವಾಣ ತಂದೀನಿ
ಎಡದ್ದು ಬಲಕ್ಕ ಬರವಲ್ಲದು
ಬಲದ್ದು ಎಡಕ್ಕ ಬರವಲ್ಲದು (ಇ ೮೨೯)

ಮೂಡುಚೋರಿಯಿಂದ
ಒಂದು ಜೊತೆ ಎತ್ತು ಬಂದೋ
ನೀರ್ ಸಿಕ್ಕಿತಾವ್ ಕಣ್ಣೆ ಹಾಕ್ಕೊಂಡೊ (ಜೀಶಂಪ ೨೩೬)

ಮೂಡ್ಲಿಂದ ಎರಡು ಹೋರಿ ಬಂದೋ
ಬಲದ್ದು ಎಡಕ್ ಬರಲ್ಲ
ಎಡದ್ ಬಲಕ್ ಬರಲ್ಲ (ಜೀಶಂಪ ೨೩೫)

ಮುಳ್ಳಿರೋ ತಾವು ನುಗ್ಗಲೆ ಕೋಣ
ನೀರಿರೋ ತಾವು ನಿಲ್ಲಲೆ ಕೋಣ (ಜೀಶಂಪ ೨೩೪)
ಚಪ್ಪಲಿ

ಗುಡದಾಗಿನಿಂದ ಎರಡು ಹೋರಿ ತಂದೀನಿ
ಬಲಕಿಂದು ಎಡಕ್ಕ ಬರುವುದಿಲ್ಲ
ಎಡಕಿಂದು ಬಲಕ್ಕ ಬರುವದಿಲ್ಲ
ಅವುನ್ನ ಸಾಯೂತನಾ ಹಾಂಗ ಹೂಡಬೇಕು (ಇ ೪೯೨)
ಚಪ್ಪಲಿಗಳು

ಕಲ್ಲು ತುಳೀತೈತಿ
ಮುಳ್ಳು ಸಾಯತೈತಿ
ನೀರ ಕಂಡರ ಹಿಂದ ಸರೀತೈತಿ (ವಾಲಿ ೩–೫೦)
ಚಪ್ಪಲು

ಆಚೆಯೆತ್ ಈಚೆ ಕಟ್ಟೂಲಾಗ್ತಿಲ್ಲೆ
ಈಚೆಯೆತ್ ಆಚೆ ಕಟ್ಟೂಲಾಗ್ತಿಲ್ಲೆ (ಶಾಂ ನಾ ೩೩೩)

ಆರ್ ಹರದಾರಿ ವೋಡುವ ಕುದ್ರೆ
ನೀರ್ ಕಂಡಲ್ಲಿ ನಿಲ್ಲುವ ಕುದ್ರೆ (ಶಾಂ ನಾ ೩೩೫)

ಊರೆಲ್ಲ ತಿಗ್ಗ್‌ಬತ್ತು
ಮೂಲೆಲ್ ಕುತ್ಗತ್ತು (ಶಾಂ ನಾ ೩೩೪)
ಚಪ್ಪಲ್ಲು

ಪುಟ್ಟನ ಹೊಟ್ಟೆಗೆ ಚೋಟುದ್ದ ಬಾಲ (ಇ ೭೦೭)
ಚಮಚೆ

ಹಗ್ಗದ್ಲೆ ಬಿಗದವ್ರ ನೆತ್ತಿ ಬಡದ್ರ
ಇದ್ದವ್ರು ಮ್ಯಾಲೆಲ್ಲಾ ಗುಣಗಾಡತಾರ (ಇ ೯೯೩)
ಚರ್ಮವಾದ್ಯ

ನಿನ್ನ ಸಿಟ್ಟಿಗಿ ಬೆಂಕಿ ಬೀಳಲಿ
ನನ್ನ ಬೆರಲು ಮುರಿದೆ (ಲಕ್ಕೆ ಭಾಗ ೪–೧೨೮)

ನಿನ್ನ ಸಿಟ್ಟಿಗೆ ಬೆಂಕಿ ಬೀಳಲಿ
ನನ್ನ ಬೆರಳು ಮುರಿದೆಲ್ಲಾ (ಇ ೬೬೩)
ಚವಳಿಕಾಯಿ

ನಿನ್ನ ಮೂಗ ಚಿವಟಲಿ
ನಿನ್ನ ಗಲ್ಲಾ ಕಡೀಲಿ
ನಿನ್ನ ಡುಬ್ಬಾ ಕೆರೀಲಿ (ವಾಲಿ ೨– ೪೧)
ಚವಳಿಕಾಯಿ, ಬಾರಿಕಾಯಿ, ಹೀರಿಕಾಯಿ

ಯಾರೂ ಹತ್ಲಾರದ್ಮರಾ ನನ್ನಜ್ ಹತ್ತಾ (ಶಾಂ ನಾ ೫೦)
ಚಪ್ಪಿ

ಶಿವರಾತ್ರಿ ಕಳೀತು
ಶಿವಾ ಶಿವಾ ಅಂತ ಹೋಯ್ತು (ರಾ ಗೌ ೪೩೧) (ವಾಲಿ ೧–೪)
ಚಳಿ

ಬಿಳಿ ಇತ್ತು ಕರಿ ಇತ್ತು ಕೊಡೆ ಹಳ್ಕೊದ್ರೆ
ಬಿಳಿ ಇತ್ ಮುಳ್ಗ್ತೀದ ಕರಿ ಇತ್ ತೇಲ್ತೀದ (ಶಾಂ ನಾ ೪೩೬)
ಚಾ

ಎಂಟಣಿ ಕೊಟ್ಟು ಎಳಕಂದ್ ಮಕಂತಳೆ (ಲ ಗೌ ೨೫೨)

ತಣಕ್ಕ ನೆಗೆದು
ತಿಕ ಕಿಸಕತ್ತು (ಮಂ ೧.೫–೬೫)

ಸಂದ್ಯೂ ನಿಂತಿರ್ದೆ ಸಂದೇಲಿ ಬಿದ್ದುಕೊಳ್ತದೆ (ಲ ಗೌ ೯೨೭)
ಚಾಪೆ

ಕಡತಿ ಕ್ಯಾಕರಿಸ್ತದೆ
ಹುಂಜ ಜೂಗರಿಸ್ತದೆ (ಸು ೧೬೮)
ಚಿಕ್ಕಪ್ರಾಯದ ಹೆಂಡತಿ ಮತ್ತು ಮುದುಕ ಗಂಡ

ಗುಡಾರ ತುಂಬ ಗುಗ್ಗರಿ ಬಿದ್ದಾವ (ಇ ೪೯೧)
ಚಿಕ್ಕೆ

ಮಾಳಿಗೆ ಮೇಲೆ ಮಂಡಕ್ಕಿ ಚೆಲ್ಲಿದೆ (ಲ ಗೌ ೮೪೧)
ಚಿಕ್ಕೆ

ಅಂಗಳ ತುಂಬ
ಇಂಗಳ ಕೂಟ (ಲಠೈ ಭಾಗ ೨–೭)

ಬೆಳತನಕ ಕೆಸಿರ್ ತುಂಬಾ ರೊಟ್ಟಿ
ಬಡ ಬಡದ ಇಟ್ಟಿರತೇನಿ ಮುಂಜಾನೆದ್ದು
ತಿನ್ನಾಕ ಹ್ವಾದರ ಒಂದು ರೊಟ್ಟಿ ಇರೂದಿಲ್ಲ (ಇ ೭೯೯)
ಚಿಕ್ಕೆಗಳು

ಚಿಕ್ಕಿ ಚಿಕ್ಕಿ ಚಿಣಿಮಿಣಿಕಿ
ರೆಕ್ಕೆ ರೆಕ್ಕೆ ರಾಮಬಾಣ
ಬಂದೂಕರಾಯಿ ಬೀಗ
ಬಂದುಬಿಟ್ಟ ರಾಜ್ಯದ ಮೇಲೆ (ರಾ ಗೌ ೨೫೦)
ಚಿಟ್ಟೆ

ಸಣ್ಣ ಸಣ್ಣ ಏರಿ ಮಾಡಿ
ಸಣ್ಣ ಸಣ್ಣ ಗಿಡ ನೆಟ್ಟು
ಸಣ್ಣ ಸಣ್ಣ ನೀರು ಹೊಯ್ದ
ಸಣ್ಣ ಹುಡುಗಿ ಬಣ್ಣ ನೋಡಿ (ಲ ಗೌ ೯೦೬)
ಚಿಟ್ಟೆ ಸೇವಂತಿಗೆ

ಬಿಳಿ ವಿಮಾನದಾಗ ಕರಿ ಜವಾನ (ಲಠೈ ಭಾಗ ೪–೧೩೮)
ಚಿತಾಫಲ

ಅಕಟಕಟ ಪಕ್ಷಿಂ
ಮುಕುಟವನ ಧರಿಸಿ
ಕಲ್ಲುಪ್ಪು ಹಾಕಿ ಕರಿಬೇವು ಬೆರೆಸಿ ತಿನ್ನಲು ಬಹುರುಚಿ (ಶಾಂ ನಾ ೪೩೭)

ಒಗಟೊಗಟು ಪಕ್ಷಿ
ಮುಕುಟಾವ ಧರಿಸಿ
ಕಲ್ಲುಪ್ಪು ಬೆರಸಿ
ಕರಿಬೇವು ಹಾಕಿ
ತಿಂದರೆ ಬಹು ರುಚಿ (ಇ ೨೬೨)
ಚಿತ್ರಾನ್ನ

ಅಂಗೈಯಟ ಭಾವಿ
ಭಾಂವ್ಯಾಗ ಬೇರ
ಬೇರಿಗಿ ಬೆಂಕಿ (ಲಠೈ ಭಾಗ ೨–೮)
ಚಿಮಣಿ

ಬಂಗಾರ ಗುಬ್ಬಿ
ಬಾಲದಲ್ಲಿ ನೀರು ಕುಡಿಯುತ್ತದೆ (ವಾಲಿ ೩–೧)
ಚಿಮಣಿ ದೀಪ

ಅಲ್ಲಕ್ಕ ಮಲ್ಲಕ್ಕ ಜಗಳಕ್ಕ ಗಂಟು ಬಿದ್ದರು
ಕುಳ್ಳಕ್ಕ ಬಂದು ಬಿಡಿಸಿದ್ಲು (ಸು ೪೬)
ಚಿಲಕ, ಬೀಗ ಮತ್ತು ಎಸಲು

ಬೆಂಕಿ ಹಾಕ್ಯಾರ ಒಲಿ ಅಲ್ಲ
ಸೀರಿ ಉಡಿಸ್ಯಾರ ಹೆಂಗಸಲ್ಲ (ವಾಲಿ ೩–೧೦೭)
ಚಿಲಿಮಿ

ಬಾಗಿಲ ಭರಮ
ಓಣಿವಜೀರ
ತಿಪ್ಪಿ ತಿರುಕ (ಇ ೭೩೦)
ಚಿಲುಕ, ನಾಯಿ, ಕೋಳಿ

ಈಟೀಟ ಹುಡುಗ ಧೋತರ ಉಡತೈತಿ (ಇ ೨೦೬)
ಚಿಲುಮೆ

ಇಂದುಟ್ಟ್ ಬಾಲೆ ಮರಾ ಹತ್ತ್ಯಾ ಇಳೀತ್ಯಾ (ಶಾಂ ನಾ ೫೧)
ಚಿವ್ಳೆ

ಅಂಗೈ ಅಗಲ ಕಣ
ಆ ಕಣದ ತುಂಬ ರಾಶಿ
ಬಂದ್ ಬಂದವರೆಲ್ಲ
ಅದಕ್ಕೆ ಶರಣಾರ್ಥಿ (ನಾ ಗೌ ೧೯)
ಚಿಲುಮೆ, ಬಂಗಿಸೊಪ್ಪು, ಸೇದುವವರು

ಹಿಂಡ ಉಂಡರೊಳ್ಳಗೆ ಜಿಲ್ಲಾರಿ
ನನ್ನದರೊಳಕ್ಕೆ ನಿನ್ನದು ಬಂದಾದೆ
ತೋರ್ಸಿ ಬಿಲ್ಲಾರಿ (ರಾ ಗೌ ೪೯೪)
ಚೀಟು

ಹೋಗುತ್ತಾ ಹೋಗುತ್ತಾ ಎಮ್ಮೆ ಹಗ್ಗ ಹಾಸಿಕೊಂಡು ಮಲಗ್ಯದೆ (ಲ ಗೌ ೧೦೮೫೫)
ಚೀನೀಕಾಯಿ

ನೀನು ಅಗಲ್ಸೆ ನಾನು ಪೋಣಿಸಿದೆ (ಲ ಗೌ ೬೮೪)
ಚೀಲ–ಕೊಳಗ

ದೊಡ್ಡ ಹಟ್ಟಿಗೆ ದನ ಕೂಡಿ
ಎದ್ದು ನೋಡೋವೊತ್ಗೆ ಒಂದೂ ಇಲ್ಲ (ರಾ ಗೌ ೨೮೯)

ಕತ್ತಲ ಮನ್ಯಾಗ
ಜೀರಿಗಿ ಚೆಲ್ಲಾ್ಯರ
ಕಣ್ಣಿಗಿ ಕಾಣಸ್ತಾವು
ಕೈಗೆ ಸಿಗುದಿಲ್ಲ (ಲಠ್ಠೆ ಭಾಗ ೨–೨೮)
ಚುಕ್ಕಿ

ದೊಡ್ಡ ಹುಂಡೀಲಿ ದನ ಕೂಡಿ
ಎದ್ದು ಬರೋ ಹೊತ್ಗೆ ಒಂದೂ ಇಲ್ಲ (ಸು ೩೨೫)
ಚುಕ್ಕಿಗಳು

ಸಾವಿರಾರು ಕಾಳಿಗೆ
ಒಂದೇ ಕಲ್ಲು (ರಾ ಗೌ ೪೪೭)
ಚುಕ್ಕಿ, ಚಂದ್ರ

ಗಂಗಾಳ ತುಂಬ ಅಡಕಿ
ನಿನಗ ಎಣಸಲಕ್ಕ ಆಗಲ್ಲ
ನಿಮ್ಮಪ್ಪನಿಗೂ ಆಗಲ್ಲ (ಲಠ್ಠೆ ಭಾಗ ೨–೩೫)

ಗಂಗಾಳ ತುಂಬ ರೊಕ್ಕ (ಲಠ್ಠೆ ಭಾಗ ೨–೩೪)

ಇರುಳು ಮಂದೆ ಹಾಕಿದ ಕುರಿ
ಹಗಳು ಮಂಗಳಮಾಯ (ಸು ೯೧)
ಚುಕ್ಕೆ

ಅಟ್ಟದ ಮೇಲಿಂದ ಬಿದ್ದವನನ್ನು
ಕೊಡತಿ ತಗೊಂಡು ಚಚ್ಚಿದರು (ಸು ೨೨)
ಚುಕ್ಕೆ, ಆಕಾಶ

ನುಚ್ಚು ನುಚ್ಚು ಅಡಿಕೆ
ನೂರೊಂದು ಅಡಿಕೆ
ಪಚ್ಚೆ ಮಾವನ ಅಂಗಡಿ
ಪರಂಗಿಯೋರ ಅಂಗಡಿ
ಊರಿಗೆಲ್ಲಾ ಒಂದೇ ಅಂಗಡಿ (ಸು ೩೪೫)
ಚುಕ್ಕೆ, ಚಂದ್ರ

ಬತ್ತದೊಳಗಿನ ಮರಿ
ಪಲ್ಲೆದೊಳಗಿನ ಗಿರಿ
ಕಣಕದೊಳಗಿನ ಕಾಯಿ ಯಾವವು (ವಾಲಿ ೫೫–೫೫)
ಚುರಮುರಿ, ರಾಜಗಿರಿ, ಕರ್ಚಿಕಾಯಿ

ನೆಲ್ಲಿನೊಳಗಿನ ಮರಿ
ಪಲ್ಲೆಯೊಳಗಿನ ಗಿರಿ
ಕಣಕದೊಳಗಿನ ಕಾಯಿ (ಇ ೬೯೧)
ಚೂರಮರಿ–ರಾಜಗಿರಿ–ಕರಚೀಕಾಯಿ

ಮುಂಬೈ ಮೋಟಾರ
ನಾಲ್ಕು ಜನ ಡ್ರಾಯ್‌ವ್ಹರು
ಒಬ್ಬನೆ ಯಾತ್ರಿಕ (ವಾಲಿ ೪–೪೩)
ಚೆಟ್ಟದ ಮೇಲಿನ ಹೆಣ

ಅಗಳಿ ಮ್ಯಾಲ ಜಿಗಳೆಪ್ಪ ಕುಂತಾನ
ಬಂದವರಿಗೆಲ್ಲ ಬೆಂಕಿ ಕೊಡತಾನ (ಲಠ್ಠೆ ಭಾಗ ೩–೧)

ಈಟ ಗುಳ್ಯಾಗ
ಇಟ್ಟಪ್ಪ ಕುಂತಾನ
ಬಂದವರಿಗೆಲ್ಲಾ ಪರಸಾದ ಕೊಡ್ತಾನ (ಲಠ್ಠೆ ಭಾಗ ೩–೧೧)

ಘಾತಕ ರಂಡಿ ಯಾತಕ ಬಂದಿ
ಆಡೊ ಹುಡನರ್ನ ಅಳಸಾಕ ಬಂದಿ (ಲಠ್ಠೆ ಭಾಗ ೩–೩೭)

ಚುಟುಕ ಚುಂಗ್ಯ ಲೋಲೋ ಭಂಗ್ಯಾ (ಲಠ್ಠೆ ಭಾಗ ೩–೪೩)

ಮಣಿ ಮಣಿ ಮಣಿಗಾರ
ಮಣಿ ಸಿಂಗಾರಾ
ಎಲ್ಲಿಗಿ ಹೋಗಿದ್ಯೊ ರಾಜಕುಮಾರ
ನಾ ಮುಟ್ಟಿದೆ ಅದ ಚಲ್ತು (ಲಠ್ಠೆ ಭಾಗ ೩–೫೪)

ಸುಣ್ಣದ ಗಡಿಗಿ ಸುತ್ಹಾಕಾಕ ಬರುದುಲ್ಲ
ಹುಣಚಿಪಕ್ಕಾ ಎಣಸಾಕ ಬರುದಲ್ಲ
ಬಿದರ ಬೆತ್ತಾ ಹಿಡ್ಯಾಕ ಬರುದಲ್ಲ
ನೆಗ್ಗಲ ಮುಳ್ಳ ತುಳ್ಯಾಕ ಬರುದಲ್ಲ (ಲಠ್ಠೆ ಭಾಗ ೩–೬೩)
ಚೇಳ

ಅಗಣಿ ಗೂಟದ ಮೇಲೆ
ಅಪ್ಪಯ್ಯ ಕೂತವನೆ (ಜೀಶಂಪ ೪)

ಅಗಣಿ ಗೂಟದ ಮೇಲೆ
ಅಪ್ಪಯ್ಯ ಕೂತಿದ್ದಾನೆ
ಬಂದವರಿಗೆಲ್ಲ ಬೆಂಕಿ ಕೊಡ್ತಾನೆ (ಚಂ ಸೆ ೪)

ಅಗಣಿ ಗೂಟದ ಮ್ಯಾಲೆ
ಅಪ್ಪಯ್ಯ ಕೂತ್ಕೊಂಡು
ಬಂದು ಬಂದೋರಿಗೆ
ಬೆಂಕಿ ನೀಡ್ತಾನೆ (ಬಿಸಿನೀರು ನೀಡ್ತಾನೆ) (ಸು ೧೨)

ಅಗ್ಗಿ ತುಂಬೆ ಮೇಲೆ
ಅಣ್ಣಯ್ಯ ಕೂತ್ಗಂಡು
ಬಂದಬಂದವರಿಗೆಲ್ಲ ಬೆಂಕಿ ಕೊಡ್ತಾನೆ (ಜೀಶಂಪ ೪೩)

ಅಗಳಿ ಮೇಲೆ ಜಿಗಳಿ ಕುಂತೈತಿ
ಬಂದವರಿಗೆಲ್ಲ ಬೆಂಕಿ ಹೊಡತೈತಿ (ಇ ೨೩)

ಅಗಳಿ ಮ್ಯಾಲ ಜಿಗಳಿ ಕುಂತೈತಿ
ಬಂದವರಿಗೆಲ್ಲಾ ಬೆಂಕಿ ಕೊಡತೈತಿ (ವಾಲಿ ೬–೩೭)

ಅಡ್ಡಗೋಡಿ ಮ್ಯಾಲ ಗಿಡ್ಡ ಬಸವಣ್ಣ ಕುಂತು
ಬಂದವರಿಗೆಲ್ಲ ಪ್ರಸಾದ ಕೊಡತಾನ (ಇ ೭೧)

ಅವರಾಡ್ತಿದ್ರು ನಾನ್ನೋಡ್ತಿದ್ದೆ
ಅವರಳ್ತಿದ್ರು ನಾನ್ಬರ್ತಿದ್ದೆ (ಜೀಶಂಪ ೨)

ಅವರು ಆಡ್ತಾ ಇದ್ದರು ನಾ ನೋಡ್ತಾ ಇದ್ದೆ
ಅವರು ಅಳತಾ ಇದ್ದರು ನಾ ನಗತಾ ಇದ್ದೆ (ವಾಲಿ ೬–೩೩)

ಅಹುದಹುದೇನು
ನೀ ಕೌದಿಯೊಳಗಿದ್ದಾಗ ನಾ ತಿವಿದೇನು
ನೀನು ಹೋಗಿ ಅವರ ಮುಂದ ಹೇಳಬಹುದೇನು
ಅವರು ಬಂದು ನನ್ನನ್ನು ಸಾಯಿಸಬಹುದೇನು (ಇ ೧೪೭)

ಇಟೀಟು ಕುಡಿಕ್ಯಾಗ ಇಟ್ಟಪ್ಪ ಕುಂತಾನ (ಇ ೧೮೪)

ಈಟ ಕುಳ್ಯಾಗ ಕಿಟ್ಟಪ್ಪ ಕುತ್ತಾನು
ಬಂದವರಿಗೆಲ್ಲಾ ಪ್ರಸಾದ ಕೊಡುತಾನ (ಇ ೧೯೪)

ಈಟ ಬಂಟ ದುಡು ದುಡು ಹೊಂಟ
ಆಡೂ ಹುಡುಗನ್ನ ಅಳಿಸಿ ನಿಂತ (ಇ ೨೦೦)

ಈಟೀಟ ಬಂಟ ಕುಡಗೋಲ ತಗೊಂಡ ಹೊಂಟ (ಇ ೧೯೫)

ಕತ್ತಲೆಯ ಮನೆಯಲ್ಲಿ ಮಣಿಯಮ್ಮ ಕೂತ್ಕೊಂಡು
ಬಂದವರಿಗೆಲ್ಲಾ ಬೆಂಕಿ ಕೊಡುತ್ತಾಳೆ (ಚಂ ಸೆ ೮೦)

ಕಿಟ್ಟಕುಳ್ಯಾಗ ಕಿಟ್ಟಪ್ಪ ಕುಂತಾನ (ಇ ೩೯೫)

ಡಾಕ್ಟ್ರು ಬರ್ತಾರೆ
ಇಂಜಕ್ಷನ್ ಕೊಡ್ತಾರೆ
ಕಾಸು ಕೇಳದೆ ಹೋಗ್ತಾರೆ (ಚಂ ಸೆ ೧೩೧) (ವಾಲಿ ೬– ೫೩)

ದಾರಕೆದಾರ
ಮೈಸುಂಗಾರ
ಏನು ಮಾಡದೊ ತೀಟೆ ಬೈರ
ಅವರಾಡ್ತಿದ್ರು ನಾನು ನೋಡ್ತಿದ್ದೆ
ಅವರಳ್ತಿದ್ರು ನಾನು ಬರ್ತಿದ್ದೆ (ಸು ೩೧೯)

ದಾರಂದಾರ ಇಸಂದಾರ
ಅವರಾಡ್ತಿದ್ರು ನಾನು ನೋಡ್ತಿದ್ದೆ
ಅವರಳ್ತಿದ್ರು ನಾನು ನಗ್ತಿದ್ದೆ (ಸು ೩೧೮)

ನೀ ಏಟು ನಿನ್ನ ಬಂದೂಕೇಟು
ನಿನ್ನ ಬಂದೂಕಲೆ ಹೊಡದರ
ನನ್ನ ಬೊಬ್ಬಾಟ ಏಟು (ವಾಲಿ ೬–೧೨)

ಮಣಿ ಮಣಿಗಾರ
ಮಣಿ ಶೃಂಗಾರ
ಯಾರಿಗೆ ಮುಟಿಸಿ ಬಂದೆ
ರಾಜಕುಮಾರ

ಮಣಿ ಮಣಿಗಾರ
ಮಣಿ ಶೃಂಗಾರ
ರಾಜಕುಮಾರ ನೋಡೆ ಮನೋಹರ
ಮುಟ್ಟಿದರೆ ಹರಹರ (ಚಂ ಸೆ ೧೯೭)

ಮಣಿ ಮಣಿ ರಾಜ ಮಣಿ ಶೃಂಗಾರ
ಯಾರಿಗೂ ಬೇಡದ ರಾಜಕುಮಾರ (ಲ ಗೌ ೮೧೦)

ಮಣಿಮಣಿಗಾರ ಮಣಿ ಸುಂಗಾರ
ಯಾರನ್ನ ಮುಟ್ಟಿ ಬಂದ್ಯೊ ಮುದ್ದು ಕುಮಾರ (ಜೀಶಂಪ ೨೨೪)

ಮಣಿ ಮಣಿ ಬಂಗಾರ
ಮಣಿ ಸುಂಗಾರ
ನೋಡಿದರೆ ಮನೋಹರ
ಮುಟ್ಟಿದರೆ ಹರೋಹರ (ಸು ೩೯೬)

ಮಿಣಿ ಮಿಣಿಗಾರ ಮಣಿಸುಂಗಾರ
ಯಾರನ್ನು ಮುಟ್ಟಿಬಂದೆ ರಾಜಕುಮಾರ (ಸು ೪೧೦)

ಮರಿಕೊಡುತ್ಲೆ ಮೂಲೋಕಾ ಸೇರತೈತಿ (ಇ ೮೨೭)

ಮುಳ್ಳು ಮುಕುಳ್ಯಾಗಿಟಗೊಂಡು
ಒಳ್ಳೊಳ್ಳೆಯವರನ್ನೂ ಬಿಡುವುದಿಲ್ಲ (ಇ ೮೬೫)

ಮುಟ್ಟಿದರ ಬಟ್ಟಾ ತಗೋತೈತಿ
ಕೊಂದರ ರಕ್ತ ಇಲ್ಲ
ಬಿಟ್ಟರ ಸಿಗೋದಿಲ್ಲ (ವಾಲಿ ೬–೭)

ಮುಟ್ಟಿದರ ಮುಕಳಿ ಮ್ಯಾಲ ಮಾಡತೈತಿ (ಇ ೮೫೪)

ಮೊಣ್‌ಗಾರ ಮೊಣ್‌ಗಾರ ಮೆಣಸಿನ ಕಾರ
ಎಲ್ಲಿಗೆ ಹೋಗಿದ್ದೆ ರಾಜರ ಬೀದಿಗೆ
ಆಡೋಕೆ ಹೋಗಿದ್ದೆ ಅವರು ಅಳ್ತಾ ಇದ್ರು ನಾನು ಓಡ್ಬಂದೆ (ರಾ ಗೌ ೪೧೪)

ಯಾತಕೆ ಬಂದೆ ಪಾತಕ ಕಂಡೆ
ಆಡೂ ಮಕ್ಕಳನ ಆಳಸಾಕ ಬಂದೆ (ಇ ೮೯೭)

ಯಾತಕ್ಬಂದೆ ಘಾತಕ ರಂಡೆ
ಆ ಹುಡುಗರ್ನ ಅಳಸಾಕೆ (ಜೀಶಂಪ ೨೪೩)

ಶ್ರವಣಗೆರೆ ನೆಂಟ
ಕುಡ್ಲು ತಕ್ಕಂಡ್ ಹೊಂಟ (ಜೀಶಂಪ ೨೪೭)

ಹಲ್ಲುಂಟು ಮೃಗವಲ್ಲ
ಸೊಲ್ಲು ಸೋಜಿಗವಲ್ಲ
ಕಟುಕುವುದು ತನ್ನ ಸೋಂಕಿದವರ (ಇ ೧೦೨೨)
ಚೇಳು

ಅಡ್ಡ ಗ್ವಾಡಿ ಮ್ಯಾಲ
ಗಿಡ್ಡ ಕೂತಾನ (ಲಠೈ ಭಾಗ ೩–೪)
ಚೇಳು (ದೀಪ)

ಚೋಟುದ್ದ ಜಡೆಯವಳೀಗೆ ಮಾರುದ್ದ ಹುವ್ವ (ಸು ೨೪೧)
ಚೌಲಿ

ಮುದ್ದನ ಎತ್ತಿಗೆ ಮುನ್ನೂರು ಮಿಣಿ (ಲ ಗೌ ೪೪೭)
ಚಂಡೆ

ಅಕ್ಕನ ಮನಿಗಿ ದೀಪ ಹಚ್ಚಿದರ ತಂಗಿ ಮನಿಗೂ ಬೆಳಕ (ವಾಲಿ ೧–೧೨)

ಅಟ್ಟಂ ಬಟ್ಟಂ ಆರ್ಯಾಣದಾಗ ಬಟ್ಟನ್ನ ರೊಟ್ಟಿ ಬಿದ್ದೈತಿ (ಇ ೬೦)

ಆಗ್ರದಲ್ಲಿದೆ ಸಾಗರದಲ್ಲಿದೆ
ಜಡೆನಿಂಗನ ಮುಡೀ ಮೇಲಿದೆ ಜಡೆಬಿಲ್ಲೆ (ಲ ಗೌ ೧೪೦)

ಉಕ್ಕಳ ಕಡ್ಲಾ ್ಯಗ ಒಂದ ಹಳ್ಳಿ (ಇ ೨೧೨)

ಒಮ್ಮಣ ಗೋದ್ಯಾಗ ಒಂದ ಹರಳೈತಿ (ಇ ೩೦೩)

ಒಂದು ಹಪ್ಪಳದಲ್ಲಿ ಊರಿಗೆಲ್ಲ ಊಟ ಆಯ್ತು (ಲ ಗೌ ೩೩೬)

ಕಟ್ಟೆ ಇಲ್ಲದ ಕೆರೆಯಲ್ಲಿ
ತಟ್ಟೆ ತೇಲಿ ಹೋಯಿತು (ಚಂ ಸೆ ೭೫)

ಕಟ್ಟೆಯಿಲ್ಲದ ಕೆರೆಯಲ್ಲಿ
ತಟ್ಟೆ ತೇಲುತ್ತದೆ (ಇ ೩೧೩)

ಕವಿಗಳ ಹಾಡಸ್ತೀನಿ
ಮಕ್ಕಳ ಆಡಸ್ತೀನಿ
ಮದುವಿ ಆದವರನ್ನ ಮೈಮರಸ್ತೀನಿ
ಕ್ಷಯ ವೃದ್ಧಿಗಳಿದ್ದರೂ ನಾನಮರ (ವಾಲಿ ೧–೫೫)

ಕವಿಗಳನ್ನು ಹಾಡಿಸುವೆ
ಮಕ್ಕಳನ್ನು ಆಡಿಸುವೆ
ಮದುಮಕ್ಕಳ ಮ್ಯೆ ಮರಸುವೆ
ಅಮರ ನಾನಾದರೂ ವೃದ್ಧಿ ಕ್ಷೀಣಗಳುಂಟು (ಇ ೩೭೬)

ತಾತನ ತಟ್ಟೆ ಥಳಥಳ ಹೊಳೆಯುತ್ತೆ (ಚಂ ಸೆ ೧೩೪)

ತಿಳ ನೀಲ ಕಡಲಲ್ಲಿ ಬೆಣ್ಣೇಮುದ್ದೆ (ಇ ೫೮೯)

ನನಗೆ ಹೇಗೆ ಹೊಲಿದರೂ ಅಂಗಿ ಸರಿಯಾಗುವುದಿಲ್ಲ (ಚಂ ಸೆ ೧೫೦)

ಬಾವೀಲಿ ಬೆಳ್ಳಿ ತಟ್ಟೆ ಬಿದ್ದಿದೆ
ಮುಟ್ಟೋರಿಲ್ಲ ಮೇಲಕ್ಕೆತ್ತೋರಿಲ್ಲ (ಲ ಗೌ ೭೫೮)

ಬೆಳ್ಳನ್ನ ಹಾಲಿನಾಗಾ ಬೆಣ್ಣಿ ಉಂಡಿ ತೇಲತೈತಿ (ಇ ೭೬೮)

ಹಾಸು ಬಂಡೆಯ ಮೇಲೆ
ದಾಸಯ್ಯಾ ಮಲಗ್ಯಾನ
ಏಸು ಮಂದಿ ಎಬ್ಬಿಸಿದರೂ
ಏಳವಲ್ಲ–ಹಾಗಾದರೆ ಅವನ್ಯಾರು? (ಇ ೧೦೭೩)

ಹುಟ್ಟತಲೆ ಎರಡು ಕೋಡು
ಬಟ್ಟಗಾಯ್ತು ಪ್ರಾಯದಿಂದ
ಕರಗಿಹೋಯ್ತು ಕಾರಣದಿಂದ (ಜೀಶಂಪ ೨೯೧)
ಚಂದ್ರ

ಆತಗಾರ್ಕಣ್ಣು
ಬೂತಗೂರ್ಕಣ್ಣು
ಜಡೆಸನ್ನೆಸಿಗೆ ಹನ್ನೆರಡ್ಕಣ್ಣು (ಶಾಂ ನಾ ೧೦)
ಚಂದ್ರ, ಕಾಯಿ, ಸೂರ್ಯ

ಅಕ್ಕನ ಮನೆಗೆ ದೀಪ ಹಚ್ಚಿದರೆ
ತಂಗಿ ಮನೆಗೆ ಬೆಳಕು (ಸು ೯)
ಚಂದ್ರ (ಅಕ್ಕನ ಮನೆ=ಆಕಾಶ, ತಂಗಿ ಮನೆ=ಭೂಮಿ, ದೀಪ =ಚಂದ್ರ, ಬೆಳಕು =ಬೆಳುದಿಂಗಳು)

ಅಂಗೈ ಅಗಲದ ರೊಟ್ಟಿಗೆ
ಲೆಕ್ಕಿಲ್ಲದಷ್ಟ ಉಪ್ಪಿನಕಾಯಿ (ಲಠೈ ಭಾಗ ೨–೬)

ಅಂಗೈ ಅಗಲದ ರೊಟ್ಟಿಗೆ
ಲೆಕ್ಕವಿಲ್ಲದ ಉಪ್ಪಿನಕಾಯಿ (ಜೀಶಂಪ ೫೬)
ಚಂದ್ರ, ನಕ್ಷತ್ರ

ಮುರುಕು ರೊಟ್ಟಿ ಅವರೆ ಕಾಳು
ಹಸಿದವನ ಸಮಯಕ್ಕಿಲ್ಲ (ಚಂ ಸೆ ೨೦೪)
ಚಂದ್ರ–ನಕ್ಷತ್ರ

ಅರ್ಧ ರೊಟ್ಟಿ ಅವರೆಕಾಳು
ಚಂದ್ರ, ನಕ್ಷತ್ರಗಳು (ವಾಲಿ ೧–೨೬)

ಅಬ್ಕೊಟ್ರೊಟ್ಟಿ ಮುರೂಲ್ಬತ್ತೆಲ್ಲೆ
ಅಪ್ಕೊಟ್ಟುಡ್ಡಾ ಲೆಕ್ಕಾ ಮಾಡೂಲ್ಬತ್ತಿಲ್ಲೆ (ಶಾಂ ನಾ ೧೬)
ಚಂದ್ರಾ, ತಾರಕ್ಲು

ನಿದ್ದಿ ಇಲ್ಲದ ಗಂಡಸು
ನಿದ್ದಿ ಇಲ್ಲದ ಹೆಂಗಸು (ಇ ೬೬೧)
ಚಂದ್ರ–ನದಿ

ಚಿಕ್ ಚಿಕ್ ತಾಯಿ
ಬಂಗಾರದ ಕಾಯಿ
ಲೋಕಕ್ಕೆಲ್ಲಾ ಎರಡೇ ಕಾಯಿ (ಸು ೨೬೨)
ಚಂದ್ರ, ಸೂರ್ಯ

ಅಂಗಳದಾಗ ಒಂದ ಗಿಡ
ತಿಂಗಳಿಗೊಂದ ಕಾಯಿ ಬಿಡ್ತದ (ಲಠೈ ಭಾಗ ೨–೪)

ಒಮ್ಮನ ಕಡ್ಲಾ್ಯಗ
ಒಂದಾ ಹಳ್ಳ (ಲಠೈ ಭಾಗ ೨–೧೬)

ಒಂದ ಹಪ್ಪಳಾ
ಊರಿಗೆಲ್ಲಾ ಊಟ (ಲಠೈ ಭಾಗ ೨–೨೧)

ಖಂಡಗ ಕಡಲಿನಾಗ ಒಂದಾ ಹಳ್ಳ (ಲಠೈ ಭಾಗ ೨–೩೩)

ಬಕ್ಕಳ ಕಡ್ಲಾ್ಯಗ ಒಂದಾ ಹಳ್ಳ (ಲಠೈ ಭಾಗ ೨–೪೯)

ಬಾಂವ್ಯಾಗ ಬೆಳ್ಳಿಬಟ್ಲ
ತೇಲತದ (ಲಠೈ ಭಾಗ ೨–೫೫)

ಸರಬದಾಗ ಕೊಬ್ರಿ ಸಿಕ್ಕೈತಿ (ಇ ೯೨೫)
ಚಂದ್ರಾಮ

ಬಂದ್ಬಂದ್ಮುಳ್ಳೀಗೆ ಕಯ್ಯಾಕ್ತರ
ಎಸಳು ಎಂಬತ್ತು ಕುಸುಳು ಮೂವತ್ತು (ಶಾಂ ನಾ ೩೩೬)
ಚಿಂಬ

ಗಟ್ದ್ ಮೆನ್ನ ಜಿಂವ್ತಿಗೆ ಉಂದೇಕಣ್ಣ (ಶಾಂ ನಾ ೩೩೭)

ಚಕಚಕ ಲೇಡಿಗೆ ಉಂದೇಕಣ್ಣು (ಶಾಂ ನಾ ೩೩೮)
ಚೂಂಜೆ

ಕೆಂಪಯ್ಯನ ತೋಟದಲ್ಲಿ
ಗುಂಪು ಮಲ್ಲಿಗೆ ಗಿಡ ಹುಟ್ಟಿ
ಎಸಲು ಎಂಭತ್ತು ಕುಸಲು ಮುವತ್ತು
ಬೀದಿ ಬಿತ್ತಾರ ನಡುವೆ ಚಿತ್ತಾರ (ಸು ೨೨೮)
ಚೆಂಡು ಮಲ್ಲಿಗೆ

ಅಡೆಗುಂಪು
ಮ್ಯಾಲೆ ಕೆಂಪು (ಸು ೨೬)
ಚೆಂಡು ಹುವ್ವ

ಎಸಳು ಎಂಬತ್ತು ಕುಸುಳು ಮೂವತ್ತು
ಅದರ ಹೆಸರು ಹೇಳಿದವರಿಗೆ ಮೊಸರು ಅನ್ನ (ಲ ಗೌ ೨೫೦)
ಚೆಂಡು ಹೂ

ಮೊಲೆಗಿಂತ ಮೊದಲು ಹಿಡಿಯೋದು (ರಾ ಗೌ ೪೧೫)
ಚೆಂಬು

ಅತ್ತಿಂದ ಇತ್ತಿಂದ ಬಂದೋರೆಲ್ಲ
ಕತ್ತಿಗೆ ಕೈ ಹಾಕಿದರು (ಸು ೩೦)
ಚೊಂಬು

ಬಣವೀ ಹಿಂದ
ಬಾರಕೋಲು ಬಿದ್ದೈತಿ (ಇ ೭೧೮)

ಬಣವೆ ಹಿಂದೆ ಚಾವಟಿ ಬಿದ್ದದೆ (ಜೀಶಂಪ ೧೯೮)

ಸಾವಿರ ಕರಿಭಂಟರಿಗೆ ಒಬ್ಬನೇ ನೆಂಟ (ಇ ೯೪೨)
ಜಡೆ

ಕರಿಯ ಹೋರಿಯ ಮೇಲೆ ಬಿಳಿಯ ಹೋರಿ (ಲ ಗೌ ೪೦೩)
ಜಡೆ–ಜಡೆ ಹೂ

ಇಲ್ಲಿ ಮೂಡಿದ ಹೂವು
ಕೊಲ್ಲೂರಿಗೆ ಹೋದರೂ ಬಾಡುವುದಿಲ್ಲ (ಲ ಗೌ ೧೭೬)

ಒಂಟೊಂಟು ಒಡೀನ ಗಂಟು
ನಂಟಿಪುರ ನಾಗಮಂಗಲ
ಒಡಿಸಿದಂಥ ಭೂಪನಿಗೆ
ಎಂಟು ರೊಟ್ಟಿ
ಒಂದು ಸೊಲಿಗೆ ತುಪ್ಪ (ರಾ ಗೌ ೧೨೭)
ಜಡೆಬಿಲ್ಲೆ

ಖಾನ್ಯಾಗ ಖಾನಿ ಯಾ ಖಾನಿ (ಲಠ್ಠೆ ಭಾಗ ೫–೧೪೩)
ಜಮಖಾನೆ

ದಾರದಾಗ ದಾರಾ ಯಾವ ದಾರಾ (ಲಠ್ಠೆ ಭಾಗ ೫–೧೭೮)
ಜಮಾದಾರ

ಅಯ್ಯಣ್ಣನ ಕುದುರೆಗೆ ಮೈಯೆಲ್ಲ ಗಾಯ (ಸು ೩೯)

ಅಯ್ಯಣ್ಣನ ಕುದುರೆಗೆ ಮೈಯಲ್ಲಾ ಗಾಯ (ಇ ೧೧೮)

ಅಯ್ಯಯ್ಯೊ ಜೋಗಿ ಮೈಯೆಲ್ಲ ತೂತು (ಜೀಶಂಪ ೪೫)

ಕಣ್ಣು ಕಣ್ಣು ಸಾವಿರ ಕಣ್ಣು
ದೃಷ್ಟಿಸಿ ನೋಡಲು ಒಂದೇ ಕಣ್ಣು
ಹಾಗಾದರೆ ನಾನ್ಯಾರು (ಇ ೩೨೩)

ಕುದುರೆ ಪಾಯ ಮೈಯೆಲ್ಲ ಗಾಯ (ಲ ಗೌ ೪೫೩)

ಕೈಯಿಲ್ಲ ಕಾಲಿಲ್ಲ
ಪಕ್ಷಿ ತಾನಲ್ಲ
ಮೈಯಲ್ಲಿ ಕಣ್ಣುಂಟು
ನವಿಲು ತಾನಲ್ಲ (ರಾ ಗೌ ೨೨೪)

ಪರ್ವತಪ್ಪನಿಗೆ ಅರುವತ್ತು ಕಣ್ಣು (ಸು ೩೫೪)

ಮುದುಕಿ ಮೈಲಿ ಮುನ್ನೂರು ಕಣ್ಣು (ಲ ಗೌ ೮೪೮)

ಮೂಲೇಲಿರೊ ಮುದುಕಿಗೆ ಮೈಯೆಲ್ಲ ಕಣ್ಣು (ರಾ ಗೌ ೪೦೮)
ಜರಡಿ

ಅಯ್ಯಯ್ಯೊ ಜೋಗಿ ಮೈಯೆಲ್ಲಾ ತೂತು (ಚಂ ಸೆ ೧೭)
ಜಲಡೆ

ಅರೇಕಲ್ಲಿನ್ಮೇಲೊಂದು ರೊಟ್ಟಿ ಸುಟ್ಟಿ
ನಮ್ಮಪ್ಪನೂ ತಿನಾರಾ
ನಿಮ್ಮಪ್ಪನೂ ತಿನಾರಾ (ಮಂ ೧.೫೫–೧೪)

ಒಂದು ರೊಟ್ಟಿ ಯಾರೂ ಮುರಿಯಲಾರರು (ಜೀಶಂಪ ೯೮)

ಒಂದು ರೊಟ್ಟಿ ಸುಟ್ಟಿ
ನಿಮ್ಮಪ್ಪನೂ ತಿನ್ನಲ್ಲ
ನಮ್ಮಪ್ಪನೂ ತಿನ್ನಲ್ಲ (ಮಂ ೧.೫೫–೫೬)

ಕಾಲಿಲ್ಲದವನ ಕೋಲಿಲ್ಲೆ ಹೊಡೆದರ
ಕೂಗುತಾ ಕೂಗುತಾ ಕುಂದಾಪುರಕ ಹೋಗತಾನ (ಇ ೫೯೦)

ದೇವಸ್ಥಾನದ ರೊಟ್ಟೀನ
ನಮ್ಮಪ್ಪನೂ ತಿನ್ನಾರ
ನಿಮ್ಮಪ್ಪನೂ ತಿನ್ನಾರ (ಸು ೩೨೨)
ಜಾಗಟೆ

ಬಿಳಿ ಕುದುರಿ ಬಿಕ್ಕೊಂಡ ನಿಂತ್ಕೈತಿ (ಇ ೭೫೧)
ಜಾಡರ ಮಗ್ಗ

ಕರಿಮರ ಕಿರಿಯೆಲೆ
ಹುವ್ವ ಚಿನ್ನ ಕಾಯಿ ಬೆಳ್ಳಿ (ಸು ೧೮೪೪)
ಜಾಲ

ಇಬ್ಬರು ಅಣ್ಣತಮ್ಮಂದೀರ್ಗೆ ಒಂದೇ ಗೊಳ್ಳೆ (ಲ ಗೌ ೧೭೨)
ಜಾಲಿಮುಳ್ಳು

ಕೆರೆ ಕೆಂಪು ಕಾಲು ಡೊಂಕು
ಅತ್ತ ನೋಡಲ್ಲಿ ಮೀಸೆ ತಿರುವೋದ
ಜಿರಲೆ

ಗಮಗಮ ಗರ್ತಿ
ಯಾವೂರಲ್ಲಿ ಇರ್ತಿ
ತಕ್ಕ ಪೇಟೇಲಿ ಇರ್ತೀನಿ
ರೊಕ್ಕ ಕೊಟ್ಟರೆ ಬರ್ತೀನಿ (ಲ ಗೌ ೫೦೨)

ಚಿಕ್ಕ ಚೀಲದ ಸೀರಮೆ
ಕಲ್ಲಮ್ಮ ಕರೀತಾಳೆ ಬಾರಮೆ (ಸು ೨೬೪)

ಜೀರಿಗೆ

ಆನೆ ಮೇಲೆ ಅಂಬಾರಿ ಝುನಝುನಕ ಹೆಣ್ಣಿನಂಗೆ
ಬಳಕುತ್ತಾ ಇರುವೆ ವೈಯಾರಿ (ಲ ಗೌ ೧೪೯)

ಜುಮಕಿ

ಸಣ್ ಹಕ್ಕಿ ಪಕ್ಕಾ ತಿಕ್ಕಂಡ್ ಬೀಳ್ತದೆ (ಶಾಂ ನಾ ೩೧)

ಜುಮ್ಮನಕಾಯಿ

ಆ ನಾಡಿಂದ ಈ ನಾಡ್ಗೆ ಬಂದೇವಣ್ಣಾ
ಗಿಡಾ ನೋಡಿ ಹೊಯ್ದೇವಣ್ಣಾ
ಫಟಿಂಗ ಭಾಡ್ಯಾ ಫಟ್ಟಂತ ಕಲ್ಲಿಲೆ
ಹೊಡದರ ದಿಕ್ಕಿಗೊಬ್ರ ಆದೇವಣ್ಣ (ಲಠ್ಠೆ ಭಾಗ ೩–೭)

ಎತ್ತಲಿಂದ ಬಂದೇವಪ್ಪ
ಮುತ್ತಿನ ಡೇರೆ ಹೊಡದೇವಪ್ಪ
ಪಾಪಿ ಕೈಯಾಗ ಸಿಕ್ಕೇವಪ್ಪ
ಪರದೇಸಾಗಿ ಹೊಂಟೇವಪ್ಪ (ಲಠ್ಠೆ ಭಾಗ ೫–೧೩)

ಕಟ್ಟಿರುವಿ ಕರಾ ಹಾಕಿ ಎಂಟ ಮಗಿ
ಹಾಲ ಹಿಂಡಿದ್ರ ವಿಜಾಪುರದವರು
ಇದೇನ ಸೋಜಿಗಂತ ರೆಂಟಿ ಕುಂಟಿ
ತಗೊಂಡ ನೋಡಾಕ ಬಂದರಂತ (ಲಠ್ಠೆ ಭಾಗ ೫–೨೦)

ಕಟ್ಟಿರುವಿ ಕಂದ ಹಾಕಿ ಎಂಟ ತಂಬಿಗಿ ಹಾಲ ಹಿಂಡಿ
ಅರಬಸ್ತಾನದವರ ಬಂದ ಇದೇನ ಸೋಜಿಗಂತ
ತಗಣ್ಗೆ ಮುಗದಾಣಾ ಹಾಕೊಂಡ ನೋಡಾಕ ಬರ್ತಾರ (ಲಠ್ಠೆ ಭಾಗ ೫–೧೯)

ಜಗ ಜಗ ಜಗಟಿ ಬಗಲಾಗ ರಗಟಿ
ಎಲ್ಲಿ ಹೋಗ್ತಿ ಮುದಕಾ ಎಲಿ ಇಲ್ದ ಬನಕಾ (ಲಠ್ಠೆ ಭಾಗ ೫–೪೪)

ಜೇನ

ಆ ನಾಡಿಂದ ಈ ನಾಡಿಗಿ ಬಂದೇವಣ್ಣಾ
ತೇಗಿನ ಮರದಾಗ ಇಳದೇವಣ್ಣಾ
ಛಿನಾಲ್ರ ಬಂದು ಧಡಕಿ ಹೊಡದಾರಣ್ಣಾ
ರಾಣಿ ಬಿಟ್ಟು ಓಡ್ಯಾಳಣ್ಣಾ
ಮಕ್ಕಳ ಮರಿ ಸತ್ತಾವಣ್ಣಾ (ಲಠ್ಠೆ ಭಾಗ ೩–೬)
ಜೇನ ಗೂಡ

ಬರ್ರನ ಬಂತ
ಬಂಗಾರ ಮನಿ ಕಟ್ಟಿತ
ದುಷ್ಮನ್ನ ಬಂದಾ
ಕಸಗೊಂಡ ಹ್ವಾದಾ (ಲಠ್ಠೆ ಭಾಗ ೩–೫೨)
ಜೇನ ಹುಟ್ಟ

ಯಾತರ ಮನಿ ದ್ವಾಸಿಮನಿ
ತುಪ್ಪಾ ಕೊಡೊ ತವರ್ಮನಿ (ಲಠ್ಠೆ ಭಾಗ ೩–೫೯)
ಜೇನ ಹುಟ್ಟು

ಒಂದೇ ದೊಸೆ ಸಾವ್ರ್ರಜನಾ ತಿಂತಾರೆ (ಶಾಂ ನಾ ೩೫)
ಜೇನಹೆರೆ

ಅಕ್ಕ ಅಕ್ಕ ಓಡು ನೋಡೆ
ಓಡಿನಾಗಳ ರೊಟ್ಟಿ ನೋಡೆ
ರೊಟ್ಟಿ ಕಂಡ್ರೆ ನನ್ನ ಹೊಟ್ಟೆ ಉರೀತದೆ ಕಣೆ (ಸು ೫)

ಅಟ್ಟದ ಮೇಲೊಂದು ಪುಟ್ಟ ಸೋರೆಕಾಯಿ
ಮುಟ್ಟಾಕೆ ಹೋದರೆ ಹೆಟ್ಟಾಕೆ ಬರುತ್ತೆ (ಲ ಗೌ ೩೪)

ಅಟ್ಟಂ ಬಟಂ ಆರ್ಯಾಣನಾದಾಗ ಸೆಟ್ಟಿ ಅಂಗಡಿ ಇಟ್ಟಾನ (ಇ ೫೮)

ಅತ್ತಲಿಂದ ಬಂದೆ
ಮುತ್ತಿನ ಗುಡಾರ ಹುಯ್ದೆ
ಪಾಪಿ ಕೈಗೆ ಸಿಕ್ಕಿದೆ
ಪಲಾಯನವಾದೆ (ಸು ೩೧)

ಆರಿ ನಾಡವರು ಬಂದಾರ
ಕಾರೀ ಕಂಟ್ಯಾಗ ಇಳಿದಾರ
ಮುತ್ತಿನ ಡೇರೆ ಹೊಡಿದಾರ (ಇ ೧೭೬)

ಆರೇ ನಾಡಿನವರು ಬಂದಾರ
ಕಾರಿ ಕಂಟ್ಯಾಗ ಇಳಿದಾರ
ಮುತ್ತಿನ ಡೇರಿ ಹೊಡದಾರ (ವಾಲಿ ೫–೨೨)

ಈ ಮೋಡಕ್ಕೆ ಮಳೆ ಬಂದಾದೆ
ಖರ್ಜೂರದಂಥ ಮಳೆಗೆ ವಜ್ರ ಬಿಗಿದಾದೆ
ಈ ಮಳೆಗೆ ನೆಂದಾದೆ (ರಾ ಗೌ ೮೮)

ಎಲ್ಲಿಂದಲೋ ಬಂದಿದ್ದವು ಮುತ್ತಿನ ಡೇರೆ ಹೊಡೆದಿದ್ದವು
ಪಾಪಿ ದೃಷ್ಟಿಗೆ ಬದ್ದಿದ್ದವು ದಿಕ್ಕಾಪಾಲಾಗಿ ಓಡಿದ್ದವು (ಶಾಂ ನಾ ೫೩)

ಅಂಗೈ ಅಗಲ
ಮುಂಗೈ ದಪ್ಪ
ದಡಿ ಎದ್ದೈತೆ
ಲೋಳಿ ಸುರಿತೈತೆ (ನಾ ಗೌ ೨೦)

ಅಂಗೈ ಆಗ್ಲ
ಮುಂಗೈ ಗಾತ್ರ
ನೆಕ್ಕದೊಂದು ಚೀಪದೊಂದು (ಮಂ ೨.೨–೨)

ಒಂಟೊಂಟ ಹಣದ ಗಂಟು ನಾಗನಹಳ್ಳಿ ನರಸೀಪುರ
ಎದ್ದೋಯ್ತು ನನ್ನ ಗೆಜ್ಜೆಸರ (ಲ ಗೌ ೨೯೮)

ಕರಿ ಹೊಡೆದು ದಡ್ಡೀ ಹಿಂಡುವದು (ವಾಲಿ ೫–೨೪)

ಕೊಟಾರ್ ಕೊಂಬೆ ಮೇಲೆ
ಮಿಠಾಯಿ ಪೊಟ್ಣ (ನಾ ಗೌ ೧೦೫)

ಕೊಠಾರ ಕೊಂಬೆ
ಮಿಠಾಯಿ ಪೊಟ್ಟಣ (ಸು ೨೪೧)

ಕೊಠಾರಿ ಗೊಂಬೆ ಮಿಠಾಯಿ ಪಟ್ಟಣ (ಇ ೪೩೦)

ಗೊಲಿಬಿಟ್ ಹೊಡೂದು ರೊಟ್ಟಿ ತಕಾ ಮನೆಗ್ಬರೂದು (ಶಾಂ ನಾ ೫೨)

ತೋಟದ ಕೊಂಬೆ ಮೇಲೆ
ಒಂದು ಮಿಠಾಯಿ ಪೊಟ್ಟಣ್ಣ (ಜೀಶಂಪ ೧೭೫)

ನಿನ್ನಾಟ ಪಾಟ ನೋಡಿ
ನಿನ್ನ ಜುಟ್ಟ ಬೆಂಕಿ ಹಾಕ್ತು (ಮಂ ೨.೨–೧೨)

ಬೇಲಿ ಮ್ಯಾಲೆ ಬೆಲ್ಲ (ಸು ೩೮೮)

ಮನೆ ಮೇಲೆ ಮನೆಕಟ್ಟಿ
ಮಂಟೇದಗಳ ಬೀಸಿ (ಜೀಶಂಪ ೨೨೯)

ಮನೆಯ ಮೇಲೆ ಮನೆ ಕಟ್ಟಿ ಮರಿಸ್ವಾಮಿ ಗೂಡು ಕಟ್ಟಿ
ಕೊಂಬೆ ಮ್ಯಾಗೆ ಕೂತವನೆ ಕೊರಮಶೆಟ್ಟಿ (ಲ ಗೌ ೮೧೪)

ಮಾಡಿ ಮೇಲೆ ಮಾಡಿ ಕಟ್ಟಿ
ಮಂಟೆರಾಯನ ಗುಡಿಕಟ್ಟಿ
ಅದರ ಮೇಲೆ ಕೂತವನೆ
ಕುಂಬಾರ ಶೆಟ್ಟಿ (ರಾ ಗೌ ೩೮೯)

ವಜ್ರದ ಮನೆ
ಕರ್ಜ್ಯದ ಬೀಗ
ಯಾವ ಕಡೆ ನೋಡಿದ್ರೂ
ಬಾಗಿಲೇ ಇಲ್ಲ (ರಾ ಗೌ ೪೨೬)

ವಟ್ಟಟ್ಟಿ ಗಿಡಕ ಚೀಟಿ ಕಟ್ಟಿ
ಆಳಗಳ್ಳ ಹರಕೊಂಡ ಹೋಗ್ಯಾನ (ಇ ೯೧೩)

ಹಿಂಡ ದನಕ ಒಂದ ಹೊತ್ಲ (ಇ ೧೦೭೯)

ಹಿಂಡೆಮ್ಮೆಗೆ ಒಂದೇ ತೆಪ್ಪೆ (ಸು ೫೨೨)
ಜೇನು

ಗುಡುಗುಡು ಸಿದ್ಧಪ್ಪ
ಮರದ ಮ್ಯಾಲ ಮನಿಕಟ್ಯಾನ (ಇ ೫೦೫)
ಜೇನು ಗೂಡು

ಮನೆ ಮೇಲೆ ಮನೆ ಕಟ್ಟಿ
ಗುಡಿ ಮೇಲೆ ಗುಡಿ ಕಟ್ಟಿ
ಕೊನೆ ಮೇಲೆ ಕೂತವನೆ ಕೊನಾರ ಶೆಟ್ಟಿ (ಇ ೮೧೮)

ಮನೇ ಮೇಲೆ ಮನೆ ಕಟ್ಟಿ
ಗುಡೀ ಮೇಲೆ ಗುಡಿ ಕಟ್ಟಿ
ಕೊನೇ ಮೇಲೆ ಕೂತವನೆ ಕೊನಾರ್ ಸೆಟ್ಟಿ (ಚಂ ಸೆ ೧೯೯)

ಹತ್ತಲಾರದ ಮಡಕೆ ಹಾಕಿಹೋಗುವೆ
ಒಡೆಯಲಾರದ ಗೂಡಿಗೆ ನುಸುಳಿ ಹೋಗುವೆ (ಲ ಗೌ ೯೮೦)
ಜೇನು ನೊಣ

ಬೆಲ್ಲಕ್ಕೆಲ್ಲ ಹೆಚ್ಚಿನ ಬೆಲ್ಲ
ಬೇಲಿಯೊಳಗಿನ ಬೆಲ್ಲ (ರಾ ಗೌ ೩೬೯)
ಜೇನ್ತುಪ್ಪ

ವಾಸನೆಯಿಲ್ಲದ ತುಪ್ಪ (ವಾಲಿ ೫– ೩೭)

ಸಿಬ್ಬಲದಂತಹ ಹಣ್ಣು ಬಲು ರುಚಿ (ಲ ಗೌ ೯೪೨)
ಜೇನು ತುಪ್ಪ

ಹಂತ ಹಂತದ ಮನೆ
ಜಂತ್ರದ ಬಾಗಿಲು
ಭೂತನ ಕಾವಲು
ರಾಜನ ಸ್ಥಳ ರಾಣಿ ಮನೆ
ಒಳಗೆ ಹೋಗಲಿಕ್ಕಾಗುವದಿಲ್ಲ (ವಾಲಿ ೩–೧೩೫)
ಜೇನು ಪೆಟ್ಟಿಗೆ

ಭಲೆಲೆ ಬೀರ ಬಂದಾ
ಜಾಡಿಸಿ ಕಂಬಳಿ ಹೊದ್ದುಕೊಂಡ
ಕುರಿ ಹೊಡದು ದಡ್ಡಿ ಹಿಂಡಿಕೊಂಡ (ಇ ೭೯೫)
ಜೇನು ಬಿಡಿಸುವುದು

ಆ ನಾಡದ ಹಕ್ಕಿ ಈ ನಾಡದ ಹಕ್ಕಿ
ಬರಬರ ಬಂತು ಬಂಗಾರ ಗುಡಿ ಕಟ್ಟಿತು
ದುಷ್ಯಾಳ ಬಂತು ಹಾಳಾಗಿ ಹೋಯ್ತು (ಇ ೧೭೧)
ಜೇನು ಮತ್ತು ಹುಟ್ಟು

ಕಂಬಾ ನೋಡು ಕಂಬದಾಳ ಕುಂಭಾ ನೋಡು
ಕುಂಭದಾಳ ರುಚಿ ನೋಡು (ಲ ಗೌ ೪೩೫)
ಜೇನು ಹುಟ್ಟ

ಒಂದು ಹಿಂಡು ಎಮ್ಮೀಗೆ
ಒಂದ ಹೊತ್ಲ (ಇ ೨೭೪)

ಹಿಂಡ್ ಎಮ್ಗೆ ಒಂದೇ ಹೊತ್ಲು (ಲ ಗೌ ೧೦೫೫)
ಜೇನು ಹುಟ್ಟು

ಮಲೆನಾಡ ಎಮ್ಮಿ ಮೈಯೆಲ್ಲಾ ಹುಣ್ಣು
ಹಿಡಿದರೆ ಕಚ್ಚುವದು (ವಾಲಿ ೬–೧)
ಜೇನುಹುಟ್ಟು, ಹುಳುಗಳು

ಮುಳ್ಳುಂಟು ಗಿಡವಲ್ಲ (ಸು ೪೧೭)
ಜೇನು ಹುಳ

ಅರವತ್ತಾರು ಗಿಣಿ
ಬಗ್ಗಿ ಬಗ್ಗಿ ನೀರು ಕುಡೀತಾವೆ (ಲ ಗೌ ೮೦)
ಜೇನು ಹುಳು

ಅತ್ತಲಿಂದಾ ಬಂದೇನಮ್ಮ ಮುತ್ತಿನ ಡೇರೆ ಹೊಡದೇವಮ್ಮಾ
ಪಾಪಿ ಕೈಯಾಗ ಸಿಕ್ಕೇವಮ್ಮಾ ಪರದೇಶ್ಯಾಗಿ ನಡೆದೇವಮ್ಮಾ (ಇ ೯೧)
ಜೇನು ಹುಳುಗಳ ಪಾಡು

ಅಂಕ ಬಂಕ ಶಂಕರನ ಪಾಳು
ಮೂರು ಮುಖ ಹತ್ತು ಕಾಲು (ಲ ಗೌ ೯೭)
ಜೊತೆ ಎತ್ತು ಹೂಡಿದ ಶಂಕರ

ಅಣ್ಣ ತಮ್ಮಂದಿರಿಬ್ರು
ಹಾಕಿರೋದು ಮೂರ್ರೊಟ್ಟ
ಅಂಚು ಮುರಿದ್ಹಾಂಗೆ
ಇಬ್ರೂ ಸಮನಾಗೆ ತಿನ್ಬೇಕು (ರಾ ಗೌ ೧೮)
ಜೊತೆಗೆ ಇನ್ನೊಬ್ಬ ಬರಬೇಕು

ಹೊಡೆಸಿಗೊಂಡು ಸಾಯುದೂ ಒಂದು
ಭಾವ್ಯಾಗ ಬೀಳೂದು ಒಂದು
ಸುಟಗೊಂಡು ಸಾಯೂದು ಒಂದು (ವಾಲಿ ೭–೭)
ಜೋಕುಮಾರ, ಗಣಪತಿ, ಕಾಮ

ಉದ್ದನ್ನ ರಾಯಗ ಒಂದ ಹಲ್ಲು (ಇ ೨೧೬)
ಜೋಟಿ ಅಥವಾ ಕೊಕ್ಕೆ

ಆರು ಕಾಲು ಹೋತ ಭಾರೀ ಖ್ಯಾತ
ನೀರು ಕಂಡತಾವ ನಿಂತ (ಲ ಗೌ ೧೫೫)
ಜೋಡು

ಅಜ್ಜನಿಗೊಂದು ಕೋಟು
ಕೋಟಿನೊಳಗೆ ಮೀಸೆ
ಮೀಸೆ ಬೀಳಿಸಿದರೆ ಹಲ್ಲು
ಹಲ್ಲು ಬೀಸಿದರೆ ಹಿಟ್ಟು
ಹಿಟ್ಟು ತಟ್ಟಿದರೆ ರೊಟ್ಟಿ (ಇ ೪೪)

ಕಡ್ಡಿಯಂತ ಬಡ್ಡಿಮಗ
ಮೆಣಸ ತಗಂಡ್
ಮೇಕೆ ಹೋದ (ಜೀಶಂಪ ೧೨೩)

ವೊಂಟ್ಗಾರ್ವಕ್ಕಿ
ನೂರೊಂದು ಮೊಟ್ಟೆ ಇಕ್ತು (ಮಂ ೧.೪–೭೧)
ಜೋಳ

ಪೊಣ್ಣನೆ ನೆಗೆದು
ಪುಕಳಿ ಕಿಸಕತ್ತು (ರಾ ಗೌ ೩೩೯)
ಜೋಳದ ಅವ್ಲು

ಪಣಕ್ಕನೆ ನೆಗೀತು
ಬಾಯಿ ಕಿಸಗೊಂಡು ಬಿದ್ಕತ್ತು (ಲ ಗೌ ೭೨೦)
ಜೋಳದ ಟಿಲು

ತಲೆ ಚಚ್ಚಿ ಒಲೆ ಮೇಲೆ ಹಾಕಿ, ಕಾಲ್ ಕತ್ತರಿಸಿದ್ದೇನೆ (ಲ ಗೌ ೫೮೫೫)
ಜೋಳದ ಕಡ್ಡಿ

ಬುಡ ಅಡವ್ಯಾಗಾ
ನಡ ಊರಾಗ
ತಲೆ ಪಾತಾಳದಾಗ (ಲ ಗೌ ೭೮೨)
ಜೋಳದ ಕೂಳೆ, ದಂಟು, ಕಾಳು (ಕಾಳನ್ನು ಹಗೇವಿನಲ್ಲಿಡುವುದರಿಂದ)

ಬುಡ ಅಡಿವ್ಯಾಗ
ನಡಾ ಊರಾಗ
ತೆಲಿ ಮನ್ಯಾಗ (ಇ ೭೫೯)
ಜೋಳದ ಕೋಲಿ, ದಂಟು, ಕಾಳು

ಒಂಟಿಗಾಲು ಮನುಷ್ಯ ನಡುನೀರಿನಲ್ಲಿ ಜಪ ಮಾಡ್ತಾನೆ (ಲ ಗೌ ೨೯೪)

ಹರಿಕಡ್ಡಿ ಗಾತ್ರದ ಹೆಣ್ಣಿಗೆ ಮೈಯೆಲ್ಲ ಬೊಕ್ಕೆ (ಲ ಗೌ ೧೦೦೧)
ಜೋಳದ ತೆನೆ

ಒಂದ ಕಾಲಿನ ಹಕ್ಕಿ
ಅದಕ ಒಂಬತ್ತು ರೆಕ್ಕೆ
ಲೆಕ್ಕಾ ಇಲ್ದ ತತ್ತಿ ಇಡತದ (ಲಠೈ ಭಾಗ ೫–೯೫)
ಜೋಳದ ದಂಟ

ಒಂದ ಕಾಲಿಲೆ ಹುಟ್ಟಿ
ಒಂದ ಕಾಲಿಲೆ ಬೆಳೆಯುವದು
ಶಂಭು ಶಂಕರಲಿಂಗ ನಿಂತ ಪೂಜೆಗೊಳ್ಳುವುದು (ಇ ೨೯೦)

ನಾಲತ್ವಾಡದ ನಂದಿ ಕೋಲ
ತಾಳಿಕೋಟ ಗಾಳಿಪಟ
ಮುದ್ದೇಬಾಳ ಮುತ್ತಿನ ಚೆಂಡ (ವಾಲಿ ೨–೯೨)

ನಾಲ್ತಪಾಡ ನಂದೀಕೋಲ
ತಾಳಿಕೋಟಿ ಗಾಳಿಪಟ
ಮುದ್ದೇಬಿಹಾಳ ಮುತ್ತಿನ ಚೆಂಡು (ಇ ೬೪೭)
ಜೋಳದ ದಂಟು

ಒಂಟಿ ಕಾಲು
ಒಂಬತ್ತು ರೆಕ್ಕೆ
ತೆಲಿಗೆ ಸಾವಿರ ಕಣ್ಣು (ಇ ೨೬೫)

ಒಂದ ಕಾಲಿನ ಹಕ್ಕಿ ಒಂಬತ್ತು ರೆಕ್ಕೆ
ಲೆಕ್ಕವಿಲ್ಲದಷ್ಟು ತತ್ತೀ ಹಾಕತೈತಿ (ಇ ೨೭೭)

ಮಾಲಿಂಗಪೂರ ಮಾಲಗಂಬ
ತಾಳೀಕೋಟ ಗಾಳಿಪಟ
ಮುದ್ದೇಬಿಹಾಳ ಮುತ್ತಿನ ಚೆಂಡ (ವಾಲಿ ೨–೩೨)
ಜೋಳದ ದಂಟು, ತೆನೆ

ದದ್ಮಡಕೆಯಲ್ಲಿ ದೆಯ್ಯ ಕುಣೀತದೆ (ಲ ಗೌ ೬೨೬)
ಜೋಳದ ಪುಡಿ

ದದ್ ಮಡ್ಕೇಲಿ ದೊಂಬ್ರು ಕುಣಿತಿದ್ರು (ಮಂ ೧.೪–೪೬)

ತಗದಾ
ಒಗದಾ (ಮಂ ೧.೫–೬೪)
ಜೋಳದ ಪುರಿ

ದದ್ದು ಮಡಕೇಲಿ ದೊಂಬಿ ಕುಣಿತ (ಸು ೩೧೫)
ಜೋಳದ ಬುರುಗು (ಅವಲು)

ಅಪ್ಪ ಕಿಸದಾನ ಅವ್ವ ಹಾಕತಾಳ (ವಾಲಿ ೮–೧೩)
ಜೋಳಿಗೆ ಹಿಟ್ಟು

ನರನಲ್ಲಿ ಹುಟ್ಟಿದರೂ ತಂದಿಲ್ಲ ತಾಯಿಲ್ಲ (ಇ ೬೩೭)
ಜಂತು (ಹುಳ)

ಪಂಡರಪೂರ ಅಲಸಂದಿ
ಹಿಂದೂ ಚೂಪ ಮುಂದು ಚೂಪ (ವಾಲಿ ೬– ೨೬)
ಜಂತು ಹುಳ

ಅಂದವಾದ ಪ್ರಾಣಿ ಗಿಣಿ ಹಕ್ಕಿಯಲ್ಲ
ಕೊಂಬುಗಳು ಅದಕುಂಟು ಹಸುವೂ ಅಲ್ಲ
ಓಡುವುದು ಜೋರಾಗಿ ಕುದುರೆಯೂ ಅಲ್ಲ
ಚುಕ್ಕೆಗಳು ಮೈಮೇಲೆ ನೀವು ಹೇಳಿರಲ್ಲ (ಚಂ ಸೆ ೩೨)

ಮೈಯಲ್ಲಿ ಮಚ್ಚೆಗಳುಂಟು ಸರ್ಪವಲ್ಲ
ಕೋಡುಗಳುಂಟು ಬಸವನಲ್ಲ
ನೆಗೆನೆಗೆದು ಹಾರುವುದು ಮೊಲವಲ್ಲ (ಲ ಗೌ ೮೭೩)

ಸಾವಿರ ಕಣ್ಣುಂಟು ಮನುಷ್ಯ ತಾನಲ್ಲ
ಚದುರಿದ ಕೋಡುಂಟು ಹಸು ತಾನಲ್ಲ
ವೇಗವಾಗಿ ಓಡುವುದು ಕುದುರೆಯೂ ಅಲ್ಲ
ಕಾಡಿನಲ್ಲಿರುವುದು ಸನ್ಯಾಸಿಯೂ ಅಲ್ಲ (ಲ ಗೌ ೯೩೫)
ಜಿಂಕೆ

ಆನಿಮ್ಯಾಲ ಅಂಬಾರಿ
ಬಳಕುತ ಬರೊ ವಯ್ಯಾರಿ (ಲಠೈ ಭಾಗ ೫–೪೯)
ಝುಮಕಿ

ಹಾಕಾಕ ಬರೋದಿಲ್ಲ
ತಗಿಯಾಕ ಬರತೈತಿ (ಇ ೧೦೫೯)
ಟೂತ್‌ಪೇಸ್ಟ್

ಬೆಳ್ಳಿ ತಂತಿ ತಗಿಯಾಗ ಬಂದ್ರೂ
ತುಂಬಾಕ ಬರೂದಿಲ್ಲ (ಇ ೭೭೦)
ಟೂಥಪೇಸ್ಟ್

ಬಾಯಿ ಇಲ್ಲದ ಬಳ್ಳಿ
ಬಾರಿಬಾರಿಗೂ ಮಾತಾಡತತಿ (ಲಠ್ಠೆ ಭಾಗ ೨–೫೨)

ಬಾಯಿ ಇಲ್ಲದ ಬಳ್ಳಿ
ಬಾರಿಬಾರಿಗೂ ಮಾತಾಡ್ತದೆ (ಇ ೭೩೫)
ಟೆಲಿಫೋನ

ಬಾಯಿಯಿಲ್ಲದ ಬಳ್ಳಿ
ಬಾರಿಬಾರಿಗೂ ಕೂಗಿ ಮಾತಾಡುತ್ತದೆ (ಚಂ ಸೆ ೧೮೧೧)

ಬಾಯಿಯಿಲ್ಲದ ಬಳ್ಳಿ
ಬಾರಿಬಾರಿಗೆ ಮಾತಾಡ್ತಾದ (ವಾಲಿ ೩–೧೬)

ಮಾತಿಗೊಮ್ಮಿ ದುಡ್ಡು ಕೇಳತೈತಿ (ವಾಲಿ ೩–೧೧೩)
ಟೆಲಿಫೋನು

ಹಿಟ್ಟಿನ ಮುದ್ದೆಯ್ಹಂಗೆ ಕಾಯಿ
ಬಿತ್ತ ನೋಡಿದ್ರೆ ಮೆಣಸಿನ ಗಾತ್ರ (ರಾ ಗೌ ೪೯೩)
ಟೊಮೆಟೊ

ಕೆಂಪು ರಾಜ್ಯದಲ್ಲಿ ಕೆಂಪು ನೀರು
ಆ ನೀರಿನಲ್ಲಿ ಬಿಳಿ ಮಿಶ್ರಿತ
ಕೆಂಪು ಜನರು ತೇಲುವರು (ಇ ೪೫೩)
ಟೊಮೆಟೋ

ಕಟಗಿ ಹೌದ ಹೌದನಾಗ ಬೆಣ್ಣಿ
ಬೆಣ್ಣಿದಾಗ ನೀರ (ಲಠ್ಠೆ ಭಾಗ ೪–೫೫)

ಕಪ್ಪಿ ಇಲ್ಲದ ಬಾವಿ
ಏಡಿ ಮುಳಗದ ಬಾವಿ
ಆಕಾಶದ ಬಾವಿ ಅರಬಾವಿ (ಲಠೈ ಭಾಗ ೪–೬೦)

ತೆಲಿಮ್ಯಾಲ ಬುಟ್ಟಿ ಕಸ
ಹೊಟ್ಟ್ಯಾಗ ಪಾವ ರಸ (ಲಠೈ ಭಾಗ ೪–೧೧೮)

ದೆವ್ವಿನಂತಾ ರಂಡಿ
ದೇವರ ಮ್ಯಾಲ ಉಚ್ಚಿ ಹೊಯ್ತತಿ (ಲಠೈ ಭಾಗ ೪–೧೨೩)

ದೆವ್ವಿನಂತಾ ಸೂಳಿ
ದೇವರ ಮ್ಯಾಲ ಉಚ್ಚಿ ಹೊಯ್ತಾಳ (ಲಠೈ ಭಾಗ ೪–೧೨೨)

ನಾರಿ ನೀ ನೀರಿಗಿ ಹೋಗಬ್ಯಾಡ
ನೀರಾಗ ಕಾಲಿಡಬ್ಯಾಡ
ನೀರಿಲ್ಲದ ಮನಿಗೆ ಬರಬ್ಯಾಡ (ಲಠೈ ಭಾಗ ೪–೧೨೫)

ಮಲೆನಾಡ ಹೆಣ್ಣ ಆಕಿ ಬಲಿಕೆಂಪಾ
ಬಾಯಾಗ ಬೆಣ್ಣಿ ಹಿಡಕೊಂಡು
ದೇವ್ರ ಕಂಡಲ್ಲಿ ಉಚ್ಚಿ ಹೊಯ್ತತಾಳ (ಲಠೈ ಭಾಗ ೪–೧೫೧)

ಮೊಟ್ಟಿ ಹೊಡ್ಯಾಂಗಿಲ್ಲ
ಕೊಡಾ ಮುಳಗಸಾಂಗಿಲ್ಲ
ಬರಿಗೊಡಾ ತಗೊಂಡ ಬರಾಂಗಿಲ್ಲ (ಲಠೈ ಭಾಗ ೪–೧೫೭)

ಹತ್ ನನ ಹಾಟ್ಯಾ
ಕಿತ್ತ ನನ ಸೆಂಟಾ
ವಡಿ ನನ ಕುಳ್ಳಿ
ಕುಡಿ ನನ ಹಾಟ (ಲಠೈ ಭಾಗ ೪–೧೭೮)
ಟೆಂಗ

ಕಲ್ಲ ಗುಮಟ
ಮರ ಜಿಗಟ (ಲಠೈ ಭಾಗ ೪–೬೮)
ಟೆಂಗ, ಅಂಟ

ಬುಡ್ಡನಕಿನ ಹಾಟಸವಿ
ಉದ್ದನಕಿನ ಸೆಂಟಾಸವಿ (ಲಠೈ ಭಾಗ ೪–೧೪೩)
ಟೆಂಗ, ಕಬ್ಬ

ಕುಂಬಾರ ಮಾಡದ ಗಡಿಗಿ
ಅಗಸ ಒಗೆಯದ ಮಡು
ಸೂರ್ಯ ನೋಡದ ನೀರು (ವಾಲಿ ೫–೨೭)

ಚಿಪ್ಪುಂಟು ಆಮೆಯಲ್ಲ
ಜುಟ್ಟುಂಟು ಹಾರುವನಲ್ಲ
ಮೂರು ಕಣ್ಣುಗಳುಂಟು ಶಿವನಲ್ಲ (ವಾಲಿ ೫–೨೮)

ಮಡಕಿಯಲ್ಲಿ ಕುಡಿಕಿ
ಕುಡಿಕಿಯಲ್ಲಿ ಶಂಖ
ಶಂಖದಲ್ಲಿ ಸಾಗರ (ವಾಲಿ ೫–೩೪)

ಮೂರು ದಾರಿಗೆ ಮೂರು ಕಣ್ಣು
ನೀರು ಸೋರುವ ಒಂದೇ ಕಣ್ಣು
ನಾರು ಸುತ್ತಿದ ಕುರುಡ ಕಣ್ಣು
ಊರ ದೇವರಿಗಿ ಹೇಳಿದ ಕಣ್ಣು (ವಾಲಿ ೫–೪೧)

ಹರಿ ನನ್ನ ಸೆಂಟಾ ಪರಾಪರಾ
ಕುಡಿ ನನ್ನ ಉಚ್ಚಿ ಗಟಾಗಟಾ
ತಿನ್ನ ನನ್ನ ಮಲಾ ಕಚಾಕಚಾ (ವಾಲಿ ೮–೪೫)

ಹೊಟ್ಟಿ ಬೆಳ್ಳಗೆ ಜುಟ್ಟು ನೆಟ್ಟಗೆ (ವಾಲಿ ೫–೪೦)

ಹೊರಗೆ ಕಂಚಿನ ಕ್ವಾಟಿ
ಒಳಗೆ ಬೆಳ್ಳಿ ಕ್ವಾಟಿ
ನೀರುಂಟು ಅದರಲ್ಲಿ
ಮೀನಿಲ್ಲ ಮೊಸಳಿಲ್ಲ (ಇ ೧೧೧೦)

ಹೊಗ್ತ ಕೆಂದ ಎತ್ತು ಬರ್ತ ಬಿಳೀ ಎತ್ತು (ಇ ೧೧೧೬)

ಟೆಂಗಿನಕಾಯಿ

ಆರು ತಿಂಗಳಿಗೆ ಒಡೆದ ಕೊಟ್ರ ಆರತಿ ಕೊಡ್ತೇನಿ
ಮೂರು ತಿಂಗಳಿಗೆ ಒಡೆದು ಕೊಟ್ರ ಮೂಗತಿ ಕೊಡ್ತೇನಿ
ತಿಂಗಳಿಗೆ ಒಡೆದು ಕೊಟ್ರ ತಂಗೀ ಕೊಡ್ತೇನಿ
ಇಂದೇ ಒಡೆದು ಕೊಟ್ರ ಬೆನ್ನು ಹತ್ತಿ ಬರ್ತೀನಿ (ಇ ೧೮೦)

ಒಳಗ ಸುಣ್ಣ ಮ್ಯಾಗ ಬಣ್ಣ (ಲಠ್ಠೆ ಭಾಗ ೪–೪೮)

ಒಳಗೊಳಗ ಹಸ
ಮ್ಯಾಗಮ್ಯಾಗ ಕಸ (ಲಠ್ಠೆ ಭಾಗ ೪–೪೭)

ಚಿಪ್ಪುಂಟು ಆಮೆಯಲ್ಲ
ಜುಟ್ಟುಂಟು ಪೂಜಾರಿಯಲ್ಲ
ಮೂರು ಕಣ್ಣುಂಟು ಹರನಲ್ಲ (ಲಠ್ಠೆ ಭಾಗ ೪–೯೬)

ಜಡಿ ಅಯ್ತಿ ಜಂಗಮ ಅಲ್ಲ
ಹೆಡಿ ಅಯ್ತಿ ಆದಿಶೇಷ ಅಲ್ಲ
ಮೂರ ಕಣ್ಣ ಅವ ಮುಕ್ಕಣ್ಣ ಅಲ್ಲ (ಲಠ್ಠೆ ಭಾಗ ೪–೧೦೧)

ಜೂಗನಾಯಿ ಜಗಲಿ ಮ್ಯಾಗ ಕೂತದ (ಲಠ್ಠೆ ಭಾಗ ೪–೧೦೩)

ಸೆಡಕು ಕಲ್ಲ ಪಡಕು
ನೀರವ ಮೀನಿಲ್ಲ (ಲಠ್ಠೆ ಭಾಗ ೪–೧೬೩)

ಹೋಗ್ತ ಕೆಂದೆತ್ತ
ಬರ್ತಾ ಬಿಳಿ ಎತ್ತ (ಲಠ್ಠೆ ಭಾಗ ೪–೨೧೨)

ವಿಜಾಪೂರದ ಹಡಗ ಬೆಳ್ಳೀಕಡಗ
ಒಡದು ಕೊಟ್ಟಾನ ಪೂಜಾರ ಹುಡುಗ (ಇ ೯೧೮)
ಟೆಂಗು

ಮ್ಯಾಲೆ ಕುಂತಾಕಿ
ದಂತದ ಸೀರಿ ಉಟ್ಟಾಕಿ
ನನ್ನ ಕಂಡು ಹಲ್ಲು ಕಿಸ್ತಾಕಿ (ಇ ೮೪೯)
ಡಾಳಿಂಬರ ಹಣ್ಣು

ಆರೇ ನಾಡಿನ ಕ್ವಾಣಿಗಿ
ಅರವತ್ತು ಮುಗದಾಣಿ
ಡುಬ್ಬದ ಮ್ಯಾಲ ಹೊಡದರ ಡುರುಕ್ ಅಂತೈತಿ (ವಾಲಿ ೩–೧೩೭)
ಡೊಳ್ಳು

ಪುಟ್ಟ ಹೋಗ್ತಾನೆ ಬರ್ತಾನೆ
ಪುಟ್ಟನ ಹೆಜ್ಜೆ ಮಾತ್ರ ಕಾಣೂದಿಲ್ಲ (ಇ ೭೦೬)

ಹೋದಪುಟ್ಟು ಬಂದ ಪುಟ್ಟು
ಪುಟ್ಟನ ಹೆಜ್ಜಿ ಕಾಣೋದಿಲ್ಲ (ಇ ೧೧೨೧)
ಡೋಣಿ

ಸತ್ತ ಎತ್ತು ಗುಟುರು ಹೊಡೀತು (ಲ ಗೌ ೯೧೧)

ಸತ್ತೆತ್ತು ಗುಟ್ರಾ ಹಾಕ್ತು (ಶಾಂ ನಾ ೩೪೦)

ಸತ್ಮರಾ ಕೂಗ್ತು (ಶಾಂ ನಾ ೩೪೧)
ಡೋಲು

ಕಳ್ಳ ಆಕಳ ಕಾಲಾಗ ಒಂದ ಮಳ್ಳಕರ (ಲತ್ಯೆ ಭಾಗ ೫–೧೨೨)
ಕಿಂಗೋಣಿ (ಗುದ್ದಿ)

ಒಂದು ಬಂಡ್ಯಾಗ ಮೂರು ಗಿ (ಇ ೨೯೮)
ಡಂಬರಗಿ, ಜತಿಗಿ, ಉದ್ದಿಗಿ

ಆಕ್ತಿದ್ರು ಮೆಡಿತ್ತಿತ್ತು (ಮಂ ೧.೫–೧೭)

ಆರು ಕಾಲು
ಡುಬ್ಬದ ಮ್ಯಾಲೊಂದು ಬಾಲ
ಬಾಲ ಹಿಡಿದೆತ್ತಿದರೆ ಅಂತರಾಳ (ವಾಲಿ ೩– ೭೩)

ಇಬ್ಬರು ಊಟಕ್ಕೆ ಕೂತಿದ್ದಾರೆ
ಅವರಿಗೆ ಒಬ್ಬನಿಗೆ ಸ್ವಲ್ಪ ಹೆಚ್ಚು ಬಡಿಸಿದರೆ
ಮತ್ತೊಬ್ಬನು ಏಳುತ್ತಾನೆ (ಚಂ ಸೆ ೪೧)

ಒಂದ ಹಿಡದರ
ಎರಡ ಅಗಳ್ಯಾಡತಾವು (ಲತ್ಯೆ ಭಾಗ ೫–೯೯)

ಒಂದು ಹಿಡಿದರ
ಎರಡು ಜೋತಾಡತಾವ (ವಾಲಿ ೩–೪೨)

ತೂಗಬಹುದು ಉಯ್ಯಾಲೆ ಅಲ್ಲ
ಸಾಮಾನು ಹಾಕಬಹುದು ಮೂಟೆ ಅಲ್ಲ (ಲ ಗೌ ೬೧೩)
ತಕ್ಕಡಿ

ಒಂದ ಹಿಡಿದರ ಎರಡೂ ಜೋತಾಡತಾವ (ಇ ೨೭೮)
ತಕ್ಕಡಿ ಪರಡಿ

ಕೆಂಪ ಅಂಗಿ
ಗಿಡ್ಡ ಹುಡುಗ
ಸದ್ದಿಲ್ಲ ಬರಾನ
ಮುದ್ದಕೊಟ್ಟು ಎಚ್ಚರಿಸತಾನ (ಇ ೪೪೮)

ಕೆಂಪಾನ ಹುಡುಗ
ಸದ್ದಿಲ್ಲದೆ ಬರ್ತಾನ
ಮುದ್ದುಕೊಟ್ಟು ಎಚ್ಚರಸತಾನ (ವಾಲಿ ೬–೪೯)

ಚಾಪಿ ಹಾಸ್ಯಾರ ಗೋಪಾಳದವರ
ಬಂದಾರ ಯಾಪಾರದವರ
ಬಂದ ಎರಡ ತಾಸಾತ (ಲಠ್ಠೆ ಭಾಗ ೩–೩೯)

ಚ್ಯಾಪಿ ಹಾಸ್ಯಾರ ಗೋಪರು ಮಲಗ್ಯಾರ
ವ್ಯಾಪಾರದವರು ಬಂದು ಎಡತಾಕತಾರ (ವಾಲಿ ೬–೬)

ಮೊಳದುದ್ದ ಬೆಟ್ಟುಗಾತ್ರ
ಎಡೆದು ನೋಡಿದ್ರೆ ಬಿಳಿಹೂ
ಕೆಂಪು ಹೂ (ರಾ ಗೌ ೪೧೭)
ತಗಣಿ

ಚಾಪಿ ಹಾಸ್ಯಾರು
ಗೋಪ್ಯಾರ ಕುತ್ತಾರು
ವ್ಯಾಪಾರದವರು ಬಂದ ಎಡತಾಕತಾರು (ಇ ೫೧೯)
ತಗಣಿಗಳು

ಗ್ವಾಡಿ ಗುಮ್ಮಣ್ಣ
ಹಾರುವ ತಿಮ್ಮಣ್ಣ
ಹತ್ತುವ ಅಮ್ಮಣ್ಣ (ವಾಲಿ ೬–೫೦)

ಗ್ವಾಡಿ ಗುಮ್ಮಣ್ಣ
ಹಾರೊ ತಿಮ್ಮಣ್ಣ
ಅಂಟೋ ವೆಂಕಣ್ಣ (ಲಠ್ಠೆ ಭಾಗ ೩–೩೨)

ಗ್ವಾಡಿ ಗುಮ್ಮಣ್ಣ
ಹಾರೋ ತಿಮ್ಮಣ್ಣ
ಹತ್ತೋ ಅಮ್ಮಣ್ಣ (ಇ ೪೭೦)
ತಗಣಿ, ಚಿಕ್ಕಾಡು, ಉಣ್ಣಿ

ಊರೊಳಗೆ ಇರುತ್ತೇನೆ ತೆರಿಗೆ ಕೊಡುವುದಿಲ್ಲ
ಮನೆಯೊಳಗೆ ಇರುತ್ತೇನೆ ಮನುಷ್ಯನಲ್ಲ
ನೆತ್ತರು ಕುಡಿಯುತ್ತೇನೆ ಕಾಡುಪಶುವಲ್ಲ (ಚಂ ಸೆ ೪೮)
ತಗಣೆ

ಕಂಚಿನ ಕೊಳ
ಮಿಂಚಿನ ರಾಶಿ
ನೋಡುವವರಿಬ್ಬರು
ಕುಣಿಯುವವರು ಐದು ಜನ (ಲ ಗೌ ೪೨೮)
ತಟ್ಟೆ–ಅನ್ನ–ಕಣ್ಣು–ಕೈಬೆರಳು

ಕಂಚಿನಕಣ
ಕುಸುಮೆ ರಾಶಿ
ಐವರು ಆಡ್ತಾರೆ
ಇಬ್ಬರು ನೋಡ್ತಾರೆ
ಒಬ್ಬರು ಕಾದಿದ್ದಾರೆ (ಜೀಶಂಪ ೧೦೫)
ತಟ್ಟೆ, ಅನ್ನ, ಬೆರಳು, ಕಣ್ಣು, ಬಾಯಿ

ಕಂಚಿನ ಕಣ
ಕುಸುಮೆ ರಾಶಿ
ಐದಾಳು ಆಡ್ತಾರೆ
ಇಬ್ಬರು ನೋಡ್ತಾರೆ
ಮುವ್ವತ್ತೆರಡಾಳು ಕೆಲಸ ಮಾಡ್ತಾರೆ (ಸು ೧೯೭)
ತಣಿಗೆ, ಅನ್ನ, ಬೆರಳು, ಕಣ್ಣು, ಹಲ್ಲು

ಗುಡ್ಡದ ಮ್ಯಾಗ ಒಂದು ಗುಡಿ ಐತಿ
ಅದರ ಸುತ್ತಲೂ ಬಾಗಿಲ ಇಲ್ಲ (ಇ ೪೯೪)

ಗಚ್ಚಿನ ಗುಡಿ ಎಕಡೇನೂ ಬಾಗಲಿಲ್ಲ (ಲಠೈ ಭಾಗ ೪–೮೬)

ಗಚ್ಚಿನ ಮನೆಗೆ ಬಾಗಿಲೇ ಇಲ್ಲ (ಇ ೪೫೯)

ಗಚ್ಚಿನ ಗುಡಿಗೆ ಎತ್ತೆತ್ಲೂ ಬಾಗಿಲ್ಲ (ಲ ಗೌ ೪೯೭)

ತುಂಬ ಇಲ್ಲದ ನಿಂಬಿಕಾಯಿ (ಲಠೈ ಭಾಗ ೪–೧೧೪)

ಬಿಳಿ ಕೋಟೆ
ಒಳಗ ಹೋಗೋಕೆ ದಾರಿ ಇಲ್ಲ (ಇ ೭೫೨)

ಬೆಳ್ಳಿ ಗಿಂಡಿ ಬಾಯಿ ಇಲ್ಲ (ಲಠೈ ಭಾಗ ೪–೧೪೭)

ಬೆಳ್ಳಿ ಗಿಂಡಿಗಿ ಬಾಯಿ ಇಲ್ಲ (ವಾಲಿ ೫–೪೯)

ಸುತ್ತ ಸುಣ್ಣದ ಗ್ವಾಡಿ
ಎತ್ತ ನೋಡಿದರೂ ಬಾಗಲಾ ಇಲ್ಲ (ಲಠೈ ಭಾಗ ೩–೧೬೨)

ಸುತ್ತ ಸುಣ್ಣದ ಗ್ವಾಡಿ
ಎತ್ತಿ ನೋಡಿದ್ರೂ ಬಾಗಿಲಿಲ್ಲ (ಇ ೯೬೩)

ತತ್ತಿ

ಗಬ್ಬ ಚೇಳ ಗುಡ್ಡಾ ಏರೇತಿ (ಲಠೈ ಭಾಗ ೫–೧೪೫)

ಗಬ್ಬದ ಚೇಳು ಗುಡ್ಡಾ ಏರತೈತಿ (ವಾಲಿ ೩–೪೩)

ಗಬ್ಬದ ಜೋಳು ಗುಡ್ಡಾ ಏರತೈತಿ (ಇ ೪೬೫)

ಗಬ್ಬದ ಹುಡುಗಿ ಗುಡಾ ಏರ್ಯಾಳ (ಇ ೪೬೬)

ಹೊಟ್ಟಿಡುಮ್ಮ ಹೊಲಕ ಹೊಂಟಾನ (ಇ ೧೧೦೧)

ಹೊಟ್ಟಿ ಢುಮಕ್ಕ ಹೊಲಕ್ಕ ಹೊಗ್ತಾನ (ಲಠೈ ಭಾಗ ೫–೩೧೧)

ತತ್ರಾಣಿ

ಒಬ್ಬಳದು ಹತ್ತಿ ಬಾಯಿ
ಒಬ್ಬಳದು ಹರವ ಬಾಯಿ
ಒಬ್ಬಳದು ಗುಂಬ ಬಾಯಿ (ವಾಲಿ ೩– ೮೫)
ಕಲಗಂಚಿ, ತತ್ರಾಣಿ, ಕೊಡ

ಅತ್ತಿತ್ತ ಬಂದು ಕತ್ತಿಗೆ ಕೈ ಹಾಕ್ದ (ಮಂ.ಕ.) (ಮಂ ೧.೫–೧೧)

ಉತ್ತು ಬುಟ್ಟು ಬಂದು ಕತ್ಗ ಕೈ ಹಾಕ್ತು (ಮಂ ೧.೫–೨೫)

ತಪ್ಪಲಿ

ಅತ್ತಿಂದ ಇತ್ತಿಂದ ಬಂದ್
ಕತ್ಗೆ ಕೈ ಹಾಕ್ತು (ಮೈ.ಕ.) (ಮಂ ೧.೫–೧೦)

ತಪ್ಪಲಿ, ಚೆಂಬು

ಅಯ್ಯೊ ಅನ್ನೊ ಕೋಣಂಗೆ
ಒಂಬತ್ಮೂಗ್ದಾರ (ಜೀಶಂಪ ೮)

ತಬಲ

ಸತ್ತ ಆಡು ಎದ್ದು ಕೂಗ್ತು (ಲ ಗೌ ೯೧೩)
ತಮಟೆ

ಹೆಗಲಿಗೆ ಹಾಕ್ಕೊಂಡು ತಗಲಿಸು ಮಾಮ (ಸು ೫೨೮)
ತಮ್ಮಟೆ

ಗುಟುರು ಗೂಳಿಗೆ ಎಂಬತ್ತೊಂದು ಮೂಗುದಾರ (ಲ ಗೌ ೫೧೭)
ತಮ್ಮಟ್ಟೆಕಾಯಿ

ಹಾರುತ್ತೆ ಕೂರುತ್ತೆ ಪಕ್ಕಿಲ್ಲ ಪ್ರಾಣಿಲ್ಲ (ಲ ಗೌ ೧೦೪೨)
ತರಗು

ಫಳ್ಳ ಗಿಡದಾಗ ಕಳ್ಳ ಕುಂತಾನ (ಲಠೆ ಭಾಗ ೫–೨೦೧)

ಪೊಳ್ಳ ಗಿಡದಾಗ ಕಳ್ಳ ಕುಂತಾನ (ಲಠೆ ಭಾಗ ೫–೨೦೨)
ತಲವಾರ

ಬೆಟ್ಟದ ಮೇಲೆ ಕೀರೆ ಚೆಲ್ತಾರೆ
ನಚ್ಚಿರ ನುಗ್ಗದಂತೆ ಬೇಲಿ ಹಾಕ್ತಾರೆ (ರಾ ಗೌ ೩೬೭)
ತಲೆ

ಸಾಸಿವೆಗಿಂತಲೂ ಸಣ್ಣ
ತಾಳುವೆ ಮೂರು ಬಣ್ಣ (ಚಂ ಸೆ ೨೨೬)

ಸೊಸೆಯೆ ಸೊಸೆಯೆ
ಸೊಗಾಲದ ಮುತ್ತೆ
ಇಂಬೆ ವನವೆ ಈಶ್ವರಿ ಬೇರೆ
ಅಟ್ಟ ಅಡುಗೆ ಎಲ್ಲಿ ಮಡಗಿದ್ದಿ
ಅಟ್ಟಕ್ಕೆ ಹಾಕಲಿಲ್ಲ
ಬೆಟ್ಟಕ್ಕೆ ತುಂಬಲಿಲ್ಲ
ನಮ್ಮಪ್ಪನವರ ಮನೆಗೆ ಹೊರಿಸಲಿಲ್ಲ
ಹೆತ್ತಮ್ಮ ನಿನ್ನ ಅರಮನಿಗೆ (ರಾ ಗೌ ೪೬೦)
ತಲೆ ಕೂದಲು

ಆತನೆ ಈತನೆ ಸೀತಂಗಿ ರಾಯನೆ
ರಾಮನ ಕೊರಳಲ್ಲಿರುವ ದೊಡ್ಡಗುಂಡು ಮಾಮಲೆ ಸರ
ಅದರ ಹೆಸರು ಹೇಳಿದವನಿಗೆ ಹಳ್ಳಿ ಹರಕೆ ಗುಳ್ಳಿ ಗುರುಕೆ
ಸಾಲಿಗ್ರಾಮದ ಸಾವುಕಾರಿಕೆ (ಲ ಗೌ ೧೪೮)

ನೆಟ್ಟರೆ ಹುಟ್ಟುವುದಿಲ್ಲ ನೆಂದರೆ ಕರಗುವುದಿಲ್ಲ (ಲ ಗೌ ೭೦೮)
ತಲೆಗೂದಲು

ಸಾವಿರ ಮಂದಿ ಸಂಹಾರ ಮಾಡಿ ಬಾ
ಇಪ್ಪತ್ತು ಮಂದಿ ಚಂಡ ಮುರದು ಬಾ
ಬರುವಾಗ ಬೆಳ್ಳಕ್ಕಿ ಬೆನ್ನ ಹಚಗೊಂಡು ಬಾ (ಇ ೯೪೫)
ತಲೆಗೂದಲು, ಉಗುರು, ಬಿಳಿಬಟ್ಟೆ

ತಲಿ ಮ್ಯಾಲ ಕುಂಡಿ ಬಾಯಾಗ ಕೈ (ವಾಲಿ ೩–೮)
ತಲೆಯ ಮೇಲಿನ ತುಂಬಿದ ಕೊಡ

ಬಿತ್ತು ಮುಂದ ಏನು ಹಾಕ್ಕೊಂಡು ಬಿತ್ತೀ (ವಾಲಿ ೭–೧೯)
ತಲೆಸಾಲು

ಜೊತೇಲಿ ಹುಟ್ಟಿ ಜಾತಿ ಕೆಟ್ಟೆ
ಕಡೆಗೆ ಹುಟ್ಟಿ ಮತಿ ಕೆಟ್ಟೆ
ಕಾಡಿಗೆ ಹೋಗಿ ಕೈಗೆ ಸಿಕ್ಕಿ ಶಕ್ತಿ ಕೊಟ್ಟೆ (ಲ ಗೌ ೫೭೨)
ತಲೆ–ಹಲ್ಲು–ಹೇನು

ಕಂಬ ಕಂಬದ ಮೇಲೆ
ಗುಂಭ ಗುಂಭದ ಮೇಲೆ
ಹುಲ್ಲು ಹುಲ್ಲಿನಲಿ ಹುಳು (ರಾ ಗೌ ೧೯೧)
ತಲೆ, ಹೇನು

ಅಡ್ಡಿ ಆಯಿನಾರಿ ಮಂದ್ಲಗೆ ಮಡಿಸ್ನಾರಿ (ಮೈ.ಕ.) (ಮಂ ೨.೧–೧)
ತವರಕ್ಕಿ (ನಕ್ಷತ್ರ), ಬಾಣ (ಆಕಾಶ)

ಬಂಡ್ಯಾಗ ಬಂಡಿ ಯಾ ಬಂಡಿ (ಲಠ್ಠೆ ಭಾಗ ೫–೨೧೦)
ತಾಬಂಡಿ

ಕೆಂಪೆತ್ತು ಗುಂಡಿ ಹಾರಿತು (ಲ ಗೌ ೪೮೫)
ತಾವ್ರದ ಕೊಡಪಾನ

ಒಂದು ಮರ ಕೊಟ್ಟು ತರಿಸಿದೆ
ಎರಡು ವರ ಕೊಟ್ಟು ಮಾಡಿಸಿದೆ
ಮೂರು ವರ ಕೊಟ್ಟು ತುಂಬಿಸಿದೆ
ನಾಕು ವರ ಕೊಟ್ಟು ಕೈಗೆ ಕಟ್ಟಿಸಿಕೊಂಡೆ
ಇದನ್ನು ಕೇಳದಿದ್ದವರಿಗೆ
ಹದಿನೈದು ದಿನದಲ್ಲಿ ಅಗ್ನಿ ಪ್ರವೇಶ (ಲ ಗೌ ೩೦೬)
ತಾಯಿತ

ಅತ್ತೆ ಸೊಸೆ ಇಬ್ಬರು
ಅವ್ವ ಮಗಳು ಇಬ್ಬರು
ಅತ್ತಿಗೆ ನಾದಿನಿ ಇಬ್ಬರು
ಹಾಗಾದರೆ ಒಟ್ಟು ಜನರೆಷ್ಟು (ವಾಲಿ ೬–೪)
ತಾಯಿ–ಮಗಳು ಸೊಸೆ–ಮೂವರೆ

ರಕ್ಷಿ ರಾಗಾ ಹಾಕತೈತಿ
ಪಕ್ಷಿ ದು:ಖ ಮಾಡತೈತಿ (ಇ ೯೦೬)
ತಾಯಿ ಮತ್ತು ಮಗು

ಹಗಲಿನಲಿ ಅದೃಶ್ಯ
ರಾತ್ರಿಯಲಿ ಪ್ರತ್ಯಕ್ಷ
ನಾನು ಎರಡಕ್ಷರದವಳು
ಪಂಚ ಪತಿವ್ರತೆಯರಲ್ಲಿ ಒಬ್ಬಳು (ಲ ಗೌ ೯೬೬)
ತಾರಾ

ಒಕ್ಕಳ ಕಡ್ಲಾ ್ಯಗ ಒಂದೇ ಹಳ್ಳ
ತಾರೆಗಳಲ್ಲಿ ಚಂದ್ರ (ವಾಲಿ ೧–೫೪೪)

ಆರು ರೂಪಾಯಿನ ತ್ವಾಟ
ನೂರು ರೂಪಾಯಿನ ಬೀಗ
ಹಾಕಕ್ಕೆ ಆಗ್ತದೆ
ತೆಗೀಕಾಗೋಲ್ಲ (ರಾ ಗೌ ೮೦)

ತೋಟ
ತೋಟದ ಸುತ್ತ ಬೇಲಿ
ಸಾವಿರ ರೂಪಾಯಿನ ಬೀಗ
ಯಾರು ಬಂದ್ರೂ ಅದನ್ನ ತೆಗೆಯೋಕಾಗೊಲ್ಲ (ಲ ಗೌ ೬೨೩)

ಒಂದ್ಹಣ ಕೊಟ್ಟು ನೋಡಿಸ್ತಿ
ಎರಡ್ಹಣ ಕೊಟ್ಟು ತರಿಸ್ತಿ
ಮೂರ್ಹಣ ಕೊಟ್ಟು ತರಿಸ್ತಿ
ಕತ್ತಿನ ಮೇಲಿನ ಗಂಡ
ತೊಡೆ ಮೇಗಲ ಮಿಂಡ (ರಾ ಗೌ ೧೨೯)
ತಾಲಿ

ನಮ್ಮವ್ವನದು ಬಿದ್ದದೆ
ನಮ್ಮಪ್ಪನದು ಎದ್ದದೆ (ರಾ ಗೌ ೨೯೫)
ತಾಲಿ, ಅತ್ಕಡಕು

ಅಪ್ಪಂದು ಹಿಡಕೊಂಡು
ಅವ್ವಂದ ಕುಡೀತದೆ (ರಾ ಗೌ ೩೦)
ತಾಲಿ ಹಿಡಕೊಂಡು ಮಕ್ಕಳು ಹಾಲು ಕುಡಿಯುವುದು

ಮೂರು ಜನ ಹುಡುಗಿಯರು ನೀರು ತರಲು ಹೋದರು
ಮಾವನ ಮಗ ಬಂದನೆಂದು ನಾಚಿ ಓಡಿ ಹೋದರು
ಒಬ್ಬಳು ನೀರಿಗೆ ಧುಮುಕಿದಳು
ಇನ್ನೊಬ್ಬಳು ಬೇಲಿಗೆ ಹಾರಿದಳು
ಮತ್ತೊಬ್ಬಳು ದಡದಲ್ಲಿ ಕುಳಿತಳು (ಲ ಗೌ ೮೬೩)
ತಾವರೆ, ಮಲ್ಲಿಗೆ, ತಾಳೆ

ಊರು ಅನ್ನೊಂದ್ಮಾರು
ಊರೊಳಗೊಂದು ಗಡಿ
ಗಡಿ ತಲೆಮ್ಯಾಲೊಂದು ಚಿನ್ನದ ಗರಿ
ನೀವೊಡದ್ರೆ ಮೈಸೂರು ಹುಲಿ
ವೊಡೀನಿಲ್ಲ ಅಂದ್ರೆ ಪಾಯ್ಕನ್ನ ತರಿ (ಮಂ ೨.೧–೧೦)
ತಾವರೆ ಹೂ

ಒಳ್ಳೇ ಹುಡುಗ ಬೆಳ್ಳಿ ದಾರ ಹಾಕುತ್ತಾನೆ ತೆಗೆಯಲಾರ (ಲ ಗೌ ೨೯೧)

ಸಾವಿರ ರೂಪಾಯಿಗೆ ಹೋರಿ ತಂದರೆ
ನೂಲಿನ ಮ್ಯಾಲೆ ವಾಸ (ಸು ೪೬೫)
ತಾಳಿ

ಬೆನ್ನಿನ ಮೇಲೆ ಹಲ್ಲು ಇಟಗೊಂಡು
ಮನ್ಯಾಗ ಬಂದು ಅಂಗಾತ ಬಿದ್ದಾನ (ಇ ೭೬೫)
ತಾಳೆಗರಿ ಚಾಪಿ

ಒಬ್ಬನಿಗೆ ಬೆನ್ನಿನ ಮೇಲೆ ಹಲ್ಲು (ವಾಲಿ ೩–೯೧)
ತಾಳೆಗರೆ ಚಾಪೆ

ಗಲಗಲಾಂ
ಬಲಗಿಲಿಗಿಲಂ
ಬಿಳೀ ಎಲೆ
ಎಲೆಯೆಲ್ಲಾ ತಲೆ
ತಲೆಯೆಲ್ಲಾ ಮಾತು (ರಾ ಗೌ ೨೨೭)
ತಾಳೆ ಮರ

ಜೋಳಿಗೆ
ಜೋಳಿಗೆಯಲ್ಲಿ ಮೂರು ಹೋಳಿಗೆ
ಜೋಳಿಗೆ ಒಡೆದರೆ ಮೂವತ್ತು ಹೋಳಿಗೆ (ಲ ಗೌ ೫೭೪)
ತಾಳೆ ಮೋತೆ

ಕರೇಲಿ ಹುಟ್ಟಿತು
ಬರ ಬರಕಾಯ್ತು
ಶೆಟ್ಟಿ ಕಾಣ್ತು ಪಟ್ಟಣಕ್ಹೋಯ್ತು
ನನ್ನ ಕಂಡ್ತು
ನನ್ನ ಹಿಂದೆಗುಂಟನೆ ಬಂತು (ರಾ ಗೌ ೨೨೨)

ಹಳ್ಳದಲ್ಲಿ ಕರೀತದೆ ಬೆಳ್ಳ ಬೆಳ್ಳಗೆ ಕಾಣುತ್ತದೆ
ನಾವು ಹೋದರೆ ನಮ್ಮ ಜೊತೆ ಬರುತ್ತದೆ (ಲ ಗೌ ೧೦೨೪)
ತಾಳೆ ಹೂ

ಅತ್ತೆ ಮನೆಯಿಂದ
ಹೆಂಡ್ತಿ ಕರಕೊಂಡು ಬರುವಾಗ
ಒಂದು ಹಳ್ಳದ ಗಂಟ ಬಂದಿ
ಮೂಗಿನ ಮೇಲೆ ಹೊಡೆದವರ
ಹೆಸರ ಹೇಳಿದರೆ ಬತ್ತೀನಿ
ಇಲ್ಲದೇ ಹೋದರೆ ಇಲ್ಲ (ರಾ ಗೌ ೨೨)

ರಾಜನ ಮಗಳು ಹೆಸರು ಡಿಲ್ಲಿ
ಅವಳ ಹೊಟ್ಟೆಯೊಳಗೆ ಆರು ತಿಂಗಳ ಮಗು
ಅರಿಶಿನ ಬಿಲ್ಲೆ ಹಚ್ಚುತಾಳೆ
ಯಾರೊಡನೆಯೂ ಮಾತಿಲ್ಲ
ಹೇಳದವರಿಗೆ ಅರವತ್ತು ಕಜ್ಜಾಯ
ಅರವತ್ತು ರೂಪಾಯಿ (ಲ ಗೌ ೮೮೭)
ತಾಳೆಹೂವು

ಅರೆಕಲ್ಲು ಮ್ಯಾಲೆ
ಮರಿ ಕುಯ್ದರೆ
ರಕ್ತ ಉಂಟು
ಮಾಂಸ ಇಲ್ಲ (ಸು ೪೪)

ಎದೆ ಇಲ್ಲದಿದ್ದೋಳ ಗಂಡ (ಮಂ ೨.೨–೭)

ಒಂದು ಚಿಪ್ಪು ಹುರುಳಿಕಾಳ
ನೀನು ತಿನ್ನಾಕಾಗೋದಿಲ್ಲ
ನಾನು ತಿನ್ನೋಕಾಗೋದಿಲ್ಲ (ಜೀಶಂಪ ೯೬)

ಒಂದು ಚಿಪ್ಪು ಹುಳ್ಳಿಕಾಳು
ನಮ್ಮಪ್ಪನೂ ತಿನ್ನಾರ
ನಿಮ್ಮಪ್ಪನೂ ತಿನ್ನಾರ (ಸು ೧೪೯)

ಒಂದು ಪಾವು ಉಳ್ಳಿ ಬೇಯ್ಲಿ
ನಮ್ಮಪ್ಪನೂ ತಿನ್ನಲ್ಲ
ನಿಮ್ಮಪ್ಪನೂ ತಿನ್ನಲ್ಲ (ಮಂ ೨.೨–೮)

ಗೋಡೆ ಗುದ್ದಪ್ಪ (ರಾ ಗೌ ೨೩೭)

ನೆಲಮಾಳಿಗೇಲಿ ಕೂತವ್ನೆ ಗುರುಸಿದ್ಧಯ್ಯ (ಲ ಗೌ ೭೧೧)

ಬೆಟ್ಟದ ಮ್ಯಾಲ್ ಉಳ್ಳಿ ಇಟ್ಟಿ
ನಾನು ತಿಂಬಕ್ಕಾಗಲ್ಲ
ನೀನು ತಿಂಬಕ್ಕಾಗಲ್ಲ (ಮಂ ೨.೨–೧೩)
ತಿಗಣೆ

ಗೋಡಿ ಚಿತ್ತಾರದಯ್ಯ
ಹಚ್ಚಡದ ಹನುಮಯ್ಯ
ಅತ್ತಿಂದ ಬಂದ ತಂಬೂರಿ ದಾಸಯ್ಯ (ಲ ಗೌ ೫೩೩)
ತಿಗಣೆ, ಕೂಳೆ, ಸೊಳ್ಳೆ

ಮೋಸಗಾರ ಒಬ್ಬ
ಸುಳ್ಳೇಗಾರ ಒಬ್ಬ
ನಿಜಗಾರ ಒಬ್ಬ (ರಾ ಗೌ ೪೧೮)
ತಿಗಣೆ, ನೊಣ, ಸೊಳ್ಳೆ

ಹಸರ ತಿನತತಿ
ರಕ್ತಾ ಕಾರತತಿ (ಲಠೆ ಭಾಗ ೪–೧೮೬)
ತಿನ್ನೋ ಎಲಿ

ಅಡ್ಡಗೋಡಿ ಮ್ಯಾಲ ಕೆಂಪು ದೀಪ
ಹಚ್ಚದರ ಹತ್ತೈತಿ ಮುಟ್ಟಿದರ ಆರತೈತಿ (ಇ ೭೩)
ತಿಲಕ

ಅಪ್ಪ ಅಂದರೆ ಹೊಡೆಯುತ್ತೆ
ಅವ್ವ ಅಂದರೆ ಹೊಡೆಯೊಲ್ಲ (ಲ ಗೌ ೬೧)

ಅಮ್ಮ ಅಪ್ಪ ಎಂದರೆ ತಗಲುತ್ತದೆ
ಅಕ್ಕ ಅಣ್ಣ ಎಂದರೆ ತಗಲುವುದಿಲ್ಲ (ಚಂ ಸೆ ೧೬)

ಎವ್ವ ಅಂದ್ರ ಮುಟ್ಟದುಲ್ಲ
ಎಪ್ಪ ಅಂದ್ರ ಮುಟ್ಟತತಿ (ಲಠೆ ಭಾಗ ೧–೧೫)

ಚಿಕ್ಕ ಹನಸೋಗೇಲಿ ಒಂದು ಟಗರು
ದೊಡ್ಡ ಹನಸೋಗೇಲಿ ಒಂದು ಟಗರು
'ಟಾ' ಅಂದರೆ ಗುದ್ದಲ್ಲ
'ಅಯ್ಯಪ್ಪ' ಅಂದರೆ ಗುತ್ತವೆ (ರಾ ಗೌ ೨೪೩)

ಟಗಿ ಅಂದ್ರೆ ಬರಲ್ಲ
ಬಾ ಅಂದ್ರೆ ಬರುತ್ತೆ (ಮಂ ೧.೧–೧೦)

ಟೈ ಅಂದರೆ ಬೀಳೂಲ್ಲ
ಟೈಯಪ್ಪ ಅಂದರೆ ಬೀಳ್ತದೆ (ಲ ಗೌ ೫೭೭)

ಬೈ ಅಂದರೆ ಬರಲ್ಲ
ಬೈಯಮ್ಮ ಅಂದರೆ ಬರ್ತದೆ (ಸು ೩೮೯)

ಹತ್ತ ಅಂದ್ರ ಹತ್ತುದುಲ್ಲ
ಎಪ್ಪತ್ತು ಅಂದ್ರ ಹತ್ತತತಿ (ಲಠೈ ಭಾಗ ೪–೫೪)

ತುಟಿ

ಅಣ್ಣಂಗೆ ಎಟುಕಲ್ಲ ತಮ್ಮಂಗೆ ಎಟುಕ್ತದೆ (ಸು ೨೭)

ಅಪ್ಪ ಅಂದ್ರ ಕೂಡತಾವು
ಅವ್ವ ಅಂದ್ರ ಕೂಡೂದಿಲ್ಲ (ಇ ೧೦೨)

ಅವ್ವ ಅಂದಾಗ ಕೂಡುವದಿಲ್ಲ
ಅಪ್ಪ ಅಂದಾಗ ಕೂಡುವವು (ವಾಲಿ ೪–೯)

ಅವರಿಬ್ಬರು ಅವಳಿ ಮಕ್ಕಳು
ನಕ್ಕರೆ ಜೊತೇಲಿ ನಗ್ತಾರೆ
ಅತ್ತರೆ ಜೊತೇಲಿ ಅಳ್ತಾರೆ (ಸು ೪೮)

ಆಚೆ ಬೆಟ್ಟದಲ್ಲಿವೆ ಟಗರು
ಈಚೆ ಬೆಟದಲ್ಲಿವೆ ಟಗರು
ಅಪ್ಪಾ ಅಂದರೆ ಗುದ್ದಾಟ
ಅವ್ವಾ ಅಂದರೆ ಸುಮ್ಮನಾಗ್ತವೆ (ಲ ಗೌ ೧೪೧)

ಎರಡು ಹೊರೆ ಕಟ್ಟಿಗೆ ಇದೆ.
ಕೆಳಕ್ಕೆ ಬಿದ್ದರೆ ಒಂದೇ ಹೊರೆ (ಲ ಗೌ ೨೩೦)

ಒಂದು ಕೆರೆ
ಆಚೆ ಕಡೆ ಒಂದು ಟಗರು
ಈಚೆ ಕಡೆ ಒಂದು ಟಗರು
ಟರ್ ಎಂದರೆ ಬರುವುದಿಲ್ಲ
ಟರ್‌ಬ್ಯಾ ಎಂದರೆ ಹತ್ತಿರ ಬರುತ್ತವೆ (ಸು ೧೪೬)

ಮೇಲೆ ಬೆಟ್ಟ ಕೆಳಗೆ ಬೆಟ್ಟ
ಟಗ್ಗಿ ಅಂದರೆ ಬೀಳವದಿಲ್ಲ
ಟಗ್ಗಪ್ಪ ಅಂದರೆ ಬೀಳುತ್ತೆ (ಇ ೮೮೧)

ಹತ್ತ ಅಂದ್ರ ಹತ್ತಂಗಿಲ್ಲ
ಇಪ್ಪತ್ತಂದ್ರ ಹತ್ತೈತಿ (ಇ ೧೦೦೪)

ಹತ್ತು ಎಂದರೆ ಹತ್ತುವುದಿಲ್ಲ
ಇಪ್ಪತ್ತು ಎಂದರೆ ಹತ್ತುತ್ತೆ (ಲ ಗೌ ೯೮೩)

ತುಟಿಗಳು

ಗೋಡಿ ಮ್ಯಾಗ ಗೋಡಿ
ಗೋಡಿ ಮ್ಯಾಗ ಗಿಳಿ
ಗಿಳಿ ಮ್ಯಾಗ ಗುಡ್ಡ
ಗುಡ್ಡದ ಮ್ಯಾಗ ಹಾದಿ
ಹಾದಿ ಆಚಿಕ ಇಚಿಕ ಹೊಲ
ಹೊಲದಾಗ ದನಾ ಮೇಯ್ತಾದ (ಲಠ್ಠೆ ಭಾಗ ೧–೩೬)

ಮಣಿಮ್ಯಾಲ ಮಣಿ
ಮಣಿಮ್ಯಾಲ ಗಿಣಿ
ಗಿಣಿಮ್ಯಾಲ ಗುಡ್ಡ
ಗುಡ್ಡದ ಮ್ಯಾಲ ಹುಲ್ಲ
ಹುಲ್ಲಾಗ ಹಾಂವಾ
ಹಾಂವಿನ ಬಲ್ಲ ಎಮ್ಮಿ (ಲಠ್ಠೆ ಭಾಗ ೧–೪೬)

ತುಟಿ, ಮೂಗ, ಹಣಿ, ಬೇತಲ, ಕೂದಲ, ಹೇನ

ಪಳಿಮ್ಯಾಲ ಪಳಿ
ಪಳಿಮ್ಯಾಲ ಗಿಳಿ
ಗಿಳಿಮ್ಯಾಲ ದೀಪ
ದೀಪದ ಮ್ಯಾಲ ಗುಡ್ಡ
ಗುಡ್ಡದ ಮ್ಯಾಲ ಕಡ್ಡ
ಕಡ್ಡದಾಗದ ದಾರಿ
ದಾರಿಮ್ಯಾಲ ಎಮ್ಮಿ (ವಾಲಿ ೪–೧೯)

ತುಟಿಗಳು, ಮೂಗು, ಕಣ್ಣು, ತಲೆ, ಕೂದಲು, ಬೈತಲ, ಹೇನು

ಪಳ್ಯಾಗ ಪಳಿ
ಪಳಿಮ್ಯಾಗ ಗಿಳಿ
ಗಿಳಿಮ್ಯಾಗ ಬಟ್ಟಲ
ಬಟ್ಟಲದಾಗ ದುಡ್ಡ
ದುಡ್ಡಿನ ಮ್ಯಾಲ ಗುಡ್ಡ
ಗುಡ್ಡದಾಗ ಖಡ್ಡ
ಖಡ್ಡದಾಗ ದಾರಿ
ಚಾರಿ ಮ್ಯಾಗ ಎಮ್ಮಿ (ಲಠ್ಠೆ ಭಾಗ ೧–೪೨)

ತುಟಿ, ಮೂಗು, ಕಣ್ಣು, ಕಣ್ಣುಗುಡ್ಡಿ, ತೆಲಿಕೂದಲು, ಬೇತಲ, ಹೇನ

ಎರಡು ಮಾಣಿಮ್ಯಾಲೆ ಒಂದು ಕಂಬ
ಕಂಬದ ಮ್ಯಾಲೆ ಎರಡು ಪಕ್ಷಿ
ಎರಡು ಪಕ್ಷಿಮ್ಯಾಲ ಗುಡ್ಡ
ಗುಡ್ಡದ ಮ್ಯಾಲ ಹುಲ್ಲು
ಹುಲ್ಲಿನ ನಡುವೆ ದಾರಿ (ಇ ೨೪೪)

ತುಟಿ, ಮೂಗು, ಕಣ್ಣು, ತಲೆ, ಕೂದಲು, ಬೈತಲೆ

ಮಣೆ ಮೇಲೆ ಮಣೆ
ಮಣೆ ಮೇಲೆ ಕಂಬ
ಕಂಬದ ಮೇಲೆ ಎರಡು ಗಿಣಿ
ಗಿಣಿ ಮೇಲೆ ಮೈದಾನ (ಲ ಗೌ ೮೧೨)

ತುಟಿ, ಮೂಗು, ಕಣ್ಣು, ಹಣೆ

ಪಳಿ ಮ್ಯಾಲ ಪಳಿ
ಪಳಿಮ್ಯಾಗ ಗಿಳಿ
ಗಿಳಿಮ್ಯಾಗ ಗುಡ್ಡ
ಗುಡ್ಡದ ಮ್ಯಾಗ ಕಡ್ಡ (ಇ ೭೦೦)
ತುಟಿ, ಮೂಗು, ತಲೆ, ಕೂದಲು

ಕಚ್ಚೆ ಕಳದ್ಹಾಕಿ
ಗಿಣ್ಣಿ ಜಬ್ಬಾಕಿ
ಮಿಣ್ಣಿ ಮೂರು ತಿಂಗ್ಳ
ಅಟ್ಲ ಮ್ಯಾಲೆ ವರ್ಸ (ಮಂ ೧.೪–೨೯)

ತಾಯಿ ತಂದೆಯವರನ್ನು ಕೊಂದು
ತನ್ನ ಒಡಹುಟ್ಟಿದವರನ್ನು ಕೊಂದು
ತಾನು ಪುಟಕ್ಕ ಹಾಕಿದ ಚಿನ್ನದಂತೆ ಆಗುತ್ತದೆ (ಇ ೫೭೮)

ಮಜ್ಜಿಗೆಯ ಮೊಮ್ಮಗಳು ಅಜ್ಜಿಯ ಅಧೀನದಲ್ಲಿರುವವಳು
ಸಜ್ಜಿಗೆಯ ಊಟಕ್ಕೆ ಬೇಕಾಗುವವಳು (ಲ ಗೌ ೮೦೯)
ತುಪ್ಪ

ಮೋಟಾಗಿದ್ರು ಘಾಟಗವನೆ (ಜೀಶಂಪ ೨೪೨)
ತುರುಕು ಮೆಣಸಿನಕಾಯಿ

ಗುಡ್ಡದ ಮ್ಯಾಗ ಚಂಡ (ಲಠೈ ಭಾಗ ೧–೩೪)

ಗುಡ್ಡದ ಹಿಂಡ ಲಡ್ಡ ಬಿದ್ದದ (ಲಠೈ ಭಾಗ ೧–೩೩)

ಗುಡ್ಡದ ಹಿಂದ ಗುಂಡ್ಕಲ್ಲ ಬಿದ್ಯೆತಿ (ಲಠೈ ಭಾಗ ೧–೩೫)
ತುರುಬ

ಗುಡಿ ಹಿಂದ ಗುಂಡಕಲ್ಲ ಬಿದ್ದ್ಯೆತಿ (ವಾಲಿ ೪–೩)

ಗುಡ್ಡದ ಹಿಂದೆ ಗುಂಡುಕಲ್ಲು ಬಿದ್ದಿದೆ (ಲ ಗೌ ೫೧೮)

ಗುಡ್ಡದ ಹಿಂದೆ ಗುಂಡಕಲ್ಲು ಬಿದ್ದ್ಯೆತಿ (ಇ ೪೯೯)
ತುರುಬು

ಸಾಸಿವ ಕಾಳಿಗಿಂತ ಸಣ್ಣಾ
ಶಿವನೇರಿಗೆ ಹೋಗವ ಬಣ್ಣಾ ಅರ್ತಾ
ಬಿಡಿಸ್ದವ್ರೀಗೆ ಅರ್ದಾರಾಜ್ಯಾ (ಶಾಂ ನಾ ೨೯)

ತುಳ್ಸಿಬೀಜಾ

ಅಂತರಲೇ ತೂಗಾಡುವ ಪುಟ್ಟಕ್ಕ
ಬಡದರ ಗದ್ದಲ ಮಾಡ್ತಾಳ (ವಾಲಿ ೩–೨೩)

ತೂಗುಗಂಟೆ

ಕಲ್ಲುಕೋಣ ಮರದ ಮೂಗರಣ (ಜೀಶಂಪ ೧೨೨)

ಕಟ ಕಟ ಮರವೆ
ಕಾಂಚಿನ ಮರವೆ
ನೀರಲ್ಲಿರುವ ಇಂಬಿಯ ಮರವೆ
ರಾಯರು ಬತ್ತಾರೆ
ಬಗ್ ಬ್ಯಾಡ–ನೀ
ಜಗ್ ಬ್ಯಾಡ (ಸು ೧೬೬)

ಹತ್ತಿಯ ಮರವೇ
ನೀರೊಳಗಿರುವ ನಿಂಬೇಮರವೇ
ರಾಯರು ಬರ್ತಾರೆ ಜಗ್ಗಬೇಡ (ರಾ ಗೌ ೪೭೦)

ತೂಬು

ಇಟ್ಟು ಬೆರೆಸ್ದಾಗ ನೀರಾಕತೀಮಿ
ನೀರೇ ಬೆರೆಸ್ದಾಗ ಯಾನಾಕಾಳಾದು (ಮಂ ೧.೫–೧೯)

ತೆಪ್ಪ

ಬಿತ್ತು ಮುಂದ ಏನ ಹಾಕ್ಕೊಂಡು ಬಿತ್ತಿ? (ಇ ೭೯೭)

ತೆಲಿಸಾಲು

ಅರಕಟ್ಟ ಮರಕಟ್ಟ
ಮರಕ ಮೂವತ್ತ ಕಟ್ಟ
ಪಂಚಾಂಗ ಕಟ್ಟ ಪಗಡಿಕಟ್ಟ
ಹೇಳಿದವರ ಹೆಡಮುರಿಗಿಕಟ್ಟ (ಲಠ್ಠೆ ಭಾಗ ೫–೨೭)

ಅರಕಟ್ಟ ಮರಕಟ್ಟ ಹೇಳಿದವನ
ಹೆಂಡತಿ ಹೆಡಮುರಿಕಿ ಕಟ್ಟ (ಲಠ್ಠೆ ಭಾಗ ೫–೨೫)

ತೇರ

ಅರಕಟ್ಟು ಮರಕಟ್ಟು
ಮರಕೆ ಮೂವತ್ತಾರು ಕಟ್ಟು
ಒಡಬಿದವರಿಗೆ ಮುನ್ನೂರು ಹೋಳಿಗೆ
ಮೂರು ಸೇರು ತುಪ್ಪ (ಲ ಗೌ ೭೫)

ಅರಕಟ್ಟು ಮರಕಟ್ಟು
ಮರಕೆ ಮೂವತ್ತು ಕಟ್ಟು
ನಂದಿ ನಾರಾಯಣನ ಕಟ್
ಪಾಷಾಣಕಟ್ಟು ಪಗಡಿಕಟ್ಟು
ಇದ ಹೇಳಿದವರ ಕೈಗೆ ಚಿನ್ನದ ಕಟ್ಟು
ಹೇಳದವರ ಕೈಗೆ ಪೊರಕೆ ಪೆಟ್ಟು (ಇ ೧೨೩)

ಆ ಕಟ್ಟ ಈ ಕಟ್ಟ ಮರಕಟ್ಟ
ಮರಕ ಮೂವತ್ತು ಕಟ್ಟ
ಶಿವಕಟ್ಟ ಶಿವಮಾಲಿ ಕಟ್ಟ
ಹೇಳಿದವರ ಕೈಯಾಗ ಬಂಗಾರ ಕಟ್ಟ (ಇ ೧೫೨)

ಆ ಕಟ್ಟು ಈ ಕಟ್ಟು
ಪಂಚಾಗದ ಕಟ್ಟು ಪಗಡಿಯ ಕಟ್ಟು
ಒಡದ ಹೇಳಿದರ ಬಾಯಿಗೆ ಉತ್ತತ್ತಿ ಕಟ್ಟು (ಇ ೧೫೩)

ಆ ಕಟ್ಟು ಈ ಕಟ್ಟು
ಮರಕ್ಕ ಮೂವತ್ತು ಕಟ್ಟು
ಒಡೆದ ಭೂಪನಿಗೆ ಕಿರೀಟ ಕಟ್ಟು (ವಾಲಿ ೩–೧೨೦)

ಆ ಕಟ್ಟು ಈ ಕಟ್ಟು
ಮರಕ್ಕೆ ಮೂವತ್ತಾರು ಕಟ್ಟು
ಹೇಳಿದವರ ಬಾಯಿಗೆ ಮುತ್ತು ಕಟ್ಟು
ಹೇಳದವರ ಬಾಯಿಗೆ ಮೆಟ್ಟು ಕಟ್ಟು (ಇ ೧೫೪)

ಆ ಕಟ್ಟು ಈ ಕಟ್ಟು
ಮರಕ್ಕೆ ಮೂವತ್ತು ಕಟ್ಟು
ಒಡೆಸಿದಂಥ ಭೂಪನಿಗೆ ಬುಕ್ಕಿಟ್ಟು (ರಾ ಗೌ ೬೫)

ಒಂದು ಬಿದಿರ ಒಡೆದು
ಒಂಬತ್ತು ಮನೆಕಟ್ಟಿ
ಸಾಲುಗೇರಿಕಟ್ಟಿ
ಸೂಳೇರಮನೆಕಟ್ಟಿ
ಮೇಲಾಡುತಾರೆ ಸೂಳೇರು (ಜೀಶಂಪ ೯೪)

ಒಂದು ಮನೆಗೆ ಮೂರ್ಜನ
ನೆಂಟರು ಹೋಗ್ತಾರೆ
ಒಬ್ಬ ಒಳಗೆ ಹೋಗ್ತಾನೆ
ಇಬ್ಬರು ಈಚೆ ಉಳೀತಾರೆ (ಜೀಶಂಪ ೯೩)

ಹರಕಟ್ಟು ಮರಕಟ್ಟು
ಮರಕೆ ಮೂವತ್ತಾರು ಕಟ್ಟು
ಬಡದವರ ಕೈಯಾಗ ಬಂಗಾರ ಕಟ್ಟು (ಇ ೧೦೧೮)
ತೇರು

ಅರ್ಕಟ್ ಮರ್ಕಟ್ ಮರ್ಕೆ ಮೋವತ್ಕಟ್
ನಂದಿ ನಾರಾಯಣ್ಣ ಕಟ್

ಅರ್ತಾ ಬಿಡಸ್ದವ್ರಿಗೆ ಅರ್ಧಾ ರಾಜ್ಯಾ ಕುಡ್ರಿ (ಶಾಂ ನಾ ೨೮೬)

ಅರ್ಕಟ್ಟು ಮರ್ಕಟ್ಟು ಮರಕೆ ಮುವತ್ಕಟ್ಟು
ಹೇಳಿದವನ ಹೆಡ ಮುರ್ಗೆ ಕಟ್ಟು (ಶಾಂ ನಾ ೨೮೩)
ಅರ್ತಾ ಬಿಡಸ್ದವ್ರಿಗೆ ಅರ್ಧಾ ರಾಜ್ಯಾ ಕುಡ್ರಿ

ಆನಂದ ಪೆಟ್ಗೆ ಚೀನಿಪೆಟ್ಗೆ ಅಯ್ಯೊ ನ್ನರ್ಸಂದು (ಶಾಂ ನಾ ೨೮೦)

ಗಬ್ಬದ್ದನಾ ಗುಡ್ಡಾ ಹತ್ತಿಲ್ಲೆ (ಶಾಂ ನಾ ೨೮೧)

ದೇವಸ್ಥಾನದ ಬಾಗ್ಲಲ್ಲಿ ಆಸ್ತಾನ ಗೆಡಾ ಹುಟ್ಟಿ
ಹೆಗ್ಲು ಯಂಬತ್ಕೋಟ ಯಲೆ ಮುನ್ನೂರ್ಕೋಟಿ (ಶಾಂ ನಾ ೨೮೫)

ಮರಕ್ಕೆ ಮರಕಟ್ಟು ಮರಕ್ಕೆ ಮುನ್ನೂರ್ಕಟ್ಟು (ಸಾವಿರಾರ್ಕಟ್ಟು)
ಪಾಂಚಾಲ್ಕಟ್ಟು ಪೊಗಡೆ ಕಟ್ಟು
ಬಿಡ್ಸಿ ಹೇಳ್ದ್ರೆ ವಂದುಂಡೆ ಬೆಲ್ಲಾ (ಶಾಂ ನಾ ೨೮೨)

ರಾಜಾ ರಾಜಾ ಅಂಗಳದಲ್ಲಿ ಬೇರಿಲ್ಲದ ಮರಹುಟ್ಟಿ
ಊರೂರಿಗೆಲ್ಲಾ ಸುದ್ದಿ (ಶಾಂ ನಾ ೨೮೪)
ತೇರ್ಕಟ್ಟೆ

ಮೂರುಗಾಲಿ ತೇರು
ಕಂಚಿನ ಕಳಸ
ಕುಸುಮೆ ರಾಶಿ (ಸು ೪೨೩)
ತೇವದಿಗೆ, ಗಂಗಳ, ಅನ್ನ

ತೊಲೆ
ತೊಲೆ ಮೇಲೆ ಕಂಚಿನ ತೇರು
ತೇರಿನ ಮೇಲೆ ಮೊಲ್ಲೆ ಹುವ್ವ
ಮೊಲ್ಲೆ ಹುವ್ವಿನ ಮೇಲೆ ಕುರಿ ಗಂಜಳ
ಅದರೊಳಗೆ ಐದು ಜನ ಸೂಳೇರು
ಪಗಡೆ ಆಡ್ತಾರೆ (ಸು ೩೧೦)
ತೇವದಿಗೆ, ತಣಿಗೆ, ಅನ್ನ, ಸಾರು, ಐದು ಬೆರಳು

ಮೊಲಕ್ಕೆ ಮೂರುಕಾಲು (ಸು ೪೩೩)
ತೇವದಿಗೆ ಮಣೆ

ಕರಿ ಎತ್ತ ಕೆಂಪೆತ್ತ ನೀರಿಗಿ ಹೋಗ್ತಾವ
ಕರಿ ಎತ್ತ ಸಾಯ್ತದ ಕೆಂಪೆತ್ತ ತಿರಗತಾದ (ವಾಲಿ ೫–೨೬)

ಬಣ್ಣಗಿತ್ತಿ
ಬಯಲಾಗ ಇರ್ತಿ
ಬರೋದ ಬರ್ತಿ
ತಡಾಮಾಡಿ ಬರ್ತಿ (ಲಠ್ಠೆ ಭಾಗ ೪–೧೩೪)
ತೊಗರಿ

ಬೆಟ್ ಗಾತ್ರ ಇದೆ
ಬೆಟ್ಟುದ್ದ ಇದೆ
ಹಿಂದಗಡೆ ತೊಟ್ಟು
ಮುಂದಗಡೆ ಮೂಕು
ಒಳಗಡೆ ನೋಡಿದ್ರೆ
ದುಂಡಗೆ ಕಾಳು (ರಾ ಗೌ ೩೬೨)

ಹಸಿರು ಗಿಡದ ಮ್ಯಾಲೆ
ಪಿಸರ್ ಹಕ್ಕಿ ಮೊಟ್ಟೆ ಇಕ್ಕಿದೆ (ಸು ೪೯೮)
ತೊಗರಿಕಾಯಿ

ಹಗ್ಗಿನ್ಹೊಲದಾಗೆ ಜಗ್ಗಿಣಕ (ಸು ೪೮೭)
ತೊಗರಿಕಾಯಿ ತಳ್ಳು

ಸಾಲು ಸಾಲು ಮರಗಳಿರ ನೀಲಿ ವರ್ಣದ ಗಿಳಿಗಳಿರ
ಪುಕ್ಕ ಕಿತ್ತರೆ ಮುಂಡ ನಕ್ಕರೆ ನನ್ನಕುಟ್ಟೆ ಬಂದೀರಾ (ಲ ಗೌ ೯೩೪)
ತೊಗರಿಗಿಡ

ಹುಡುಗಿ ಆಗಿ ಹೂವು ಮುಡಿದು
ಅಜ್ಜಿ ಆಗಿ ಗೆಜ್ಜಿ ಕಟ್ಟೈತಿ (ವಾಲಿ ೨–೬೪)
ತೊಗರಿಯ ಗಿಡ

ಅತತ ಹೋಗ್ತದ ಇತತ ಬರ್ತದ
ಸೋತು ಬಂದು ನಿಂತಲ್ಲೆ ನಿಂದರತದ (ಲಠೈ ಭಾಗ ೫–೧೪)

ತಗ್ಗಿನಾಗ ಬಸರಾಗತೈತಿ
ತೆವರಿನಾಗ ಹಡಿತೈತಿ (ವಾಲಿ ೩–೭)
ತೊಗಲಿನ ಕಪಲಿ

ನಾಲ್ಕು ಮುಖಗಳಿದ್ದರೂ ಬ್ರಹ್ಮನಲ್ಲ
ಎತ್ತಿನ ಮೇಲೆ ಹತ್ತಿದ್ದರೂ ಶಿವನಲ್ಲ
ನೀರು ಸುರಿಯುತ್ತಿದ್ದರೂ ಮೇಘವಲ್ಲ
ಹಾಗಾದರೆ ನಾನು ಯಾರು (ವಾಲಿ ೩–೭೭)
ತೊಗಲಿನ ಮಟ್ಟ

ಅತಾತ ಹೋಗಿ
ಇತತ ಬರ್ತದ (ಲಠ್ಠೆ ಭಾಗ ೫–೧೬)
ತೊಟ್ಟಿಲ

ಕಾಲು ನಾಲ್ಕುಂಟು ಹಸುವಲ್ಲ
ಹೊತ್ತು ನಿನ್ನನ್ನು ತಿರುಗಿದೆನು ಮನುಜನಲ್ಲ
ತೊತ್ತಾಗಿ ಬಾಳಿದೆನು ನಿನ್ನಲ್ಲೆ ನಾನು (ಚಂ ಸೆ ೧೦೧)

ಕಾಲುಂಟು ನಡೆಯದು
ಮೂಲೇಲಿ ಕಟ್ಟಿಹುದು
ಬಾಲಾರನ್ನೊಮ್ಮೆ ಹೊರುವುದು
ಇದು ಯಾವುದು (ರಾ ಗೌ ೧೯೯)

ನಾಲ್ಕು ಕಾಲಿನ ಎತ್ತು ಅಂತರಲೇ ಅಡ್ಡಾಡುತೈತಿ (ಇ ೬೫೫)
ತೊಟ್ಟಿಲು

ಆಸ್ರು ಮೈಳೆ ಮ್ಯಾಲೆ ಒಂದು ಬಿದ್ರೆ ಇಕ್ಕಿ
ಮೊಟ್ಟೆಯಿಕ್ಕಿ ಅದರ ಮೊಟ್ಟೆ ವಡಿಸಿಲ್ಲ
ಅದರ ವೊಟ್ಟೆ ವಡದೋಯ್ತು (ಮಂ ೧,೪–೧೭)
ತೊಟ್ಟಿಹಣ್ಣು

ಕಾಲಾಗ ಕಾಲ ಯಾವ ಕಾಲ (ಲಠ್ಠೆ ಭಾಗ ೫–೧೨೯)
ತೊಡ್ಕಾಲ

ಅಂಗ್ಡೀಲಿ ಮಾರೋದಿಲ್ಲ
ತಕ್ಕಡೀಲಿ ತೂಗೋದಿಲ್ಲ
ಅದು ಬಂದೆಲ್ದೆ ಮನೆಗಬ್ಬಾ ಆಗೋದಿಲ್ಲ (ಮಂ ೧.೫–೨)

ಜಾಮ್ ಜಾಮ್ ಜಗ್ಗಿಸ್ ನೋಡು
ಕಕ್ಕಾ ಬುಂಡೆ ಸಿಕ್ಕಿಸ್ ನೋಡು
ಆಯ್ತಾ ಆಗ್ನಿಲ್ಲ ಅಂತ ಕೈ ಹಾಕನೋಡು (ಮಂ ೧.೫–೬೨)
ತೊಪ್ಪೆ, ಸಗಣಿ

ಜಾಣಜಾಣರು ಜಾಡ್ಸಿ ಮೊಟ್ಟೆ ಕಟ್ಟಿ
ಮೊಟ್ಟೆ ಮುಂದೆ ಆಳು ಹಿಂದೆ (ಲ ಗೌ ೫೬೭)
ತೊಪ್ಪೆಹುಳು

ಅಣ್ಣ ಮಲಕೊಂಡಾನು
ತಮ್ಮ ಎದ್ದು ನಿಂತಾನು (ಇ ೮೩)
ತೊಲಿಕಂಬ

ಅಡ್ಡ ಗೋಡೆಯ ಮೇಲೆ ದೊಡ್ಡಪ್ಪ ಮಲಗ್ಯವನೆ (ಲ ಗೌ ೪೧)
ತೊಲೆ

ತಲಿಯಿಲ್ಲದ ಕ್ವಾಣಾ ಬತ್ತಾ ಮೆಯ್ತತಿ (ಲಠೈ ಭಾಗ ೫–೧೬೭)
ತೊಳ್ಳಿಕಲ್ಲ

ಕಡಿದರೆ ಉದ್ದವಾಗುವುದು ಯಾವುದು (ಚಂ ಸೆ ೭೬)
ತೋಡು

ಚಿಲಕ ಮಲಕ ಹೊಲಕ್ಯಾನ ಹೊಲಕ
ಹೊಕ್ಕ ನೋಡಿದರೆ ಹೂವಿನ ತೋಟ (ಇ ೫೩೮೮)
ತೋಡೆ

ಮನೆ ಬಾಗಿಲಲ್ಲಿ ಸಾಲು ಗಿಣಿಗಳು (ಲ ಗೌ ೮೧೬)

ಬಾಗಿಲು ಮುಂದೆ ಹಸಿರು ಗಿಣಿ (ಸು ೩೬೩)
ತೋರಣ

ಡೊಂಕು ಮರಕೆ ಸಂಕೋಲೆ (ಸು ೨೮೮)
ತೋಳಬಂದಿ

ಮೂರು ಕಾಲುಂಟು ನಡೆಯೋದಿಲ್ಲ
ಮದುವೆಯಲ್ಲಿ ತುಂಬು ಉಪಯೋಗ (ರಾ ಗೌ ೪೦೪)
ತೌಟಿಗೆ

ಆಡೆಂದರೆ ಆಡದು ಅದು
ಆಡಮರನ ಏರುವುದು
ಕೂಡದೆ ಕೊಂಕಿ ನುಡಿವುದು
ಕಡಿದರೆ ಅದು ಬಾಡದು
ತಿಳಿದವರು ಅದ ಹೇಳಿ (ರಾ ಗೌ ೭೫)
ತಂತಿ

ಮೂಲ್ಯಾಗ ಕುಂತ ಮಂಜುಳ್ಯಾರು
ಮುಟ್ಟಿದ ಕೂಡ್ಲೆ ಚಿಟ್ಟನೆ ಚೀರ್ತಾರೆ (ಇ ೮೭೭)

ತಂತು ವಾದ್ಯಗಳು

ಅಕ್ಕಗ ಬಾಯಾಕ ಹಾಕಿದ್ರ ತಂಗೀ ಬಾಯಾಗ ಹಾಯತೈತಿ (ಇ ೧೦)

ಅಕ್ಕದಾಗ ಅಕ್ಕ ಯಾವ ಅಕ್ಕ ಹಿರ್ಯಾಕಿ (ಲಠೈ ಭಾಗ ೪–೨)

ತಂಬಾಕ

ಮಲಿ ಹಿಡಿಯುದಕಿನ
ಮೊದಲ ಏನ ಹಿಡೀತಿ (ಇ ೮೨೮)

ತಂಬಿಗಿ

ಅತ್ತಲಿಂದ ಓಡಿಬಂದು ಕತ್ತಿಗೆ ಕೈಹಾಕಿದರು (ಜೀಶಂಪ ೫೨)

ಕರದರ ಬರಲಾರೆ
ಕೈ ಹಿಡಿದರ ಬರತೀನಿ (ಇ ೩೪೧)

ತಂಬಿಗೆ

ಸಂತೆ ದಾರೀಲಿ ಕೆಂಪವ್ವ ಕೂತವಳೆ (ಲ ಗೌ ೯೨೪)

ತಂಬುಲ

ಅಟ್ಟದ್ಮೆಲಣ್ಣ ಪುಟ್ಟಮ್ಮ ಮುಟ್ಟೆದ್ರೆ ಕುಂಯ್ಗುಡ್ತು (ಶಾಂ ನಾ ೨೪೨)

ಕತ್ತಲ ಮನ್ಯಾಗ ಕಾಳವ್ವ ಕುಂತಾಳ
ಮುಟ್ಟಿದರ ಕುರುಕುರು ಅಂತಾಳ (ಇ ೩೨೮)

ಕತ್ತಲೆಯ ಮನೆಯಲ್ಲಿ ಕಾಳವ್ವ ಕುಂತವಳೆ
ಮುಟ್ಟಿದರೆ ಕುಯ್ಯೋ ಮುರ್ರೋ ಅಂತವಳೆ (ಚಂ ಸೆ ೭೯)

ಗುಂಜಿ ಗುಡ್ಡದ ಮ್ಯಾಗ
ನವಲ ತತ್ತಿ ಹಾಕೇತಿ
ಉಗರ ತಾಕಿದ್ರ ಹಾಡತತಿ (ಲಠೈ ಭಾಗ ೫–೧೫೩)

ಮೂಲೇಲಿ ಮುದುಕಿ ಕೂತವಳೆ
ಮುಟ್ಟಿದರೆ ಕೊಯ್ ಅಂತಾಳೆ (ಲ ಗೌ ೮೬೮)
ತಂಬೂರಿ

ಆಡಿದರೆ ಹಾಡುವುದು
ಓಡಿ ಮನೆ ಸೇರುವುದು
ಕೂಡದೇ ಕೊಂಡಿ ನಡೆಯುವುದು
ಹರಿದರೆ ಅದು ಖೋಡಿಯೂ ಹೌದು (ಇ ೧೬೭)
ತಂಬೂರಿ ತಂತಿ

ಒಂದು ದೊಡ್ಡ ಆಲದ್ಮರ
ಅದರ ಮ್ಯಾಲೊಂದು ಕಂಚಿನಾಲದ್ಮರ
ಅದರ ಮ್ಯಾಲೊಂದು ಮಲ್ಲಿಗೆ ವೂ
ಮಲ್ಲಿಗೆ ವೂಮ್ಯಾಲೆ ಸುಂಪುರ ಮಳತಾಂಟಗೆ (ಮಂ ೧.೫–೩೩)
ತಾಂಟಗೆ (ತೆವಟಿಗೆ)

ಅಂತರದ ಹಸರ
ಆಕಾಶದ ಹಣ್ಣ
ಭೂಮಿ ಗಿಣ್ಣ
ಮೂರು ಕೂಡಿ ಬಂದ ಹಣ್ಣ (ಲಠ್ಠೆ ಭಾಗ ೪–೩೨)

ಮೂರು ತರದ ಹಕ್ಕಿ ಈಚೆಗೆ ಬಂದಾಗ ಒಂದೇ ರೀತಿ (ಲ ಗೌ ೮೬೧)

ಸಂತಿ ದಾರ್ಯಾಗ ಕೆಂಪಿ ಕುಂತಾಳ (ಲಠ್ಠೆ ಭಾಗ ೪–೧೬೧)

ಹಿಗ್ಗರಾಯನ ಮುಂದೆ ಬಗ್ಗರಾಯ
ಹಸಿರು ಮೇಯ್ತಾ ಕೆಂಪು ಹಾರ್ತಾ (ಲ ಗೌ ೧೦೪೭)
ತಾಂಬೂಲ

ತಂಗಿ ನೀ ನೀರಿಗೆ ಹೊಗ್‌ಬೆಡಾ
ನೀರಲ್ಲೆ ಕಾಲೆಡಬೆಡಾ
ನೀರಿಲ್ದೆ ಮನಿಗೆ ಬರ್ಬೆಡಾ (ಶಾಂ ನಾ ೨೪)
ತಿಂಗ

ಹನ್ನೆಡ್ಡ ಖೋಲಿ ಮೂವ್ವತ್ತ ತೊಟ್ಟಿಲು
ಮಲಗಾವ್ರು ಮಾತ್ರ ಇಬ್ಬರು ಮಕ್ಕಳ (ಲಠ್ಠೆ ಭಾಗ ೨–೬೪)
ತಿಂಗಳ, ದಿವಸ, ಹಗಲು, ರಾತ್ರಿ

ಒಂದು ಬೊಗಸೆ ಮಜ್ಜಿಗೆ
ನಾಡಿಗೆಲ್ಲಾ ಮದುವೆ (ಮಂ ೨.೧–೧೧)
ತಿಂಗಳ ಬೆಳಕು

ಅರಮನೆಯ ಮಂದೆ ಮೂವತ್ತು ಮಂದಿ ಸರದಾರರು
ಅವರು ತುಂಬಾ ಸಂಚರಿಸುತ್ತಿರುತ್ತಾರೆ
ಅವರಲ್ಲಿ ೨೯ ಮಂದಿ ಮಾತ್ರ ಎಣಿಕೆಗೆ ಸಿಗುವರು
ಕೊನೆಯವನು ಎಣಿಕೆಗೆ ಸಿಗುವುದಿಲ್ಲ (ವಾಲಿ ೧–೬೧)
ತಿಂಗಳ ಮೂವತ್ತು ದಿವಸಗಳು, ೨೯ ದಿನ ಚಂದ್ರನನ್ನು ಕಾಣಬಹುದು. ಆದರೆ, ಅಮವಾಸ್ಯೆಯಂದು ಚಂದ್ರನನ್ನು ಕಾಣಲಾಗದು

ಹನ್ನೆರಡು ಖೋಲಿ
ಮೂವತ್ತು ತೊಟ್ಟಿಲಾ
ಮಲಗಾವ್ರ ಮಾತ್ರ
ಇಬ್ಬರ ಮಕ್ಕಳು (ಇ ೧೦೧೨)
ತಿಂಗಳು, ದಿವಸ, ಸೂರ್ಯ, ಚಂದ್ರ

ಅಕ್ಕನ ಗಂಡಲ್ಲ
ಅವ್ವನ ತಮ್ಮಲ್ಲ
ಮಾವ ಅನ್ನುಸ್ಕೊಳದ ಬಿಡೋದಿಲ್ಲ (ನಾ ಗೌ ೭)
ತಿಂಗಳು ಮಾವ

ಇಲ್ಲಲ್ಲೂ ನೀರಿಲ್ಲಾ ಕಲ್ಲೊಟ್ಟಿಲೇ ನೀರೀದ (ಶಾಂ ನಾ ೧೮೬)
ತಿಂಗ್ಳಕಾಯಿ

ಇಲ್ಲದ ಹಲಕಟ
ಹಲಕಟದಿಂದ ಗೊಳಕಟ
ಗೊಳಕಟದಿಂದ ಒಳ್ಯಾಕ
ಒಳ್ಯಾಕದಿಂದ ಗೊಳ್ಯಾಕ
ಗೊಳ್ಯಾಕದಿಂದ ಹೊರ್ಯಾಕ (ಲಠ್ಠೆ ಭಾಗ ೫೫–೬೦)
ತಿಂದು ಹೇಲುವುದು

ಗಬ್ಬದ ಚೇಳು ಗುಡ್ಡ ಹತ್ತಲಾರದು (ಲ ಗೌ ೫೦೦)

ತುಂಬಿದ ಗಾಡಿ

ಬೇಸಗೆ ಬಿಸಿಲಲ್ಲಿ ಬಾಡೋದಲ್ಲ
ಹೇಸಿಗೆ ಕಂಡ್ರೆ ಅಂಜೋದಲ್ಲ
ಗುಂಪ್ನಲ್ಲಿ ಆ ಗಿಡದಂತೆ ಗಿಡವಿಲ್ಲ (ರಾ ಗೌ ೩೭೩)

ತುಂಬೆಗಿಡ

ಅಕ್ಕ ಅಕ್ಕ ಏರಿ ನೋಡು
ಏರಿ ಹಿಂದಲ ಗಾರೆ ನೋಡು
ಅಗಸ ಇಲ್ದೆ ಮಡಿ ಆಗೋದ್ ನೋಡು (ನಾ ಗೌ ೧)

ಅಕ್ಕ ಅಕ್ಕ ಮರ ನೋಡೆ
ಮರದಾಗಳ ಕಾಯಿ ನೋಡೆ
ಅಗಸರಿಲ್ಲದೆ ಮಡ್ಯಾಗೋದು ನೋಡೆ (ಸು ೧)

ಅಗಸ ಮಾಡದ ಮಡಿ
ಸೂರ್ಯ ಕಾಣದ ಗಂಗೆ
ಕುಂಬಾರ ಮಾಡದ ಮಡಿಕೆ (ಲ ಗೌ ೧೫)

ಅಗಸ ಮಾಡಿದ ಮಡಿಯಲ್ಲ
ಕುಂಬಾರ ಮಾಡಿದ ಮಡಿಕೆಯಲ್ಲ
ಸೂರ್ಯನ ಕಣ್ಣಿಗೆ ಹೊಳಪಿಲ್ಲ (ರಾ ಗೌ ೭)

ಅತ್ತಕಡೆ ಇತ್ತಕಡೆ ಎರಡಾಲದಮರ
ಆಲದಮರದ್ಮೇಲೆ ಒಂದಂಬ್ಲಿಗಡ್ಗೆ
ಅಂಬಲಿಗಡಗೆ ಮೇಲೆ ಪಿಟಾರಿಚೆಂಬು
ಪಿಟಾರಿಚೆಂಬಿನ ಮೇಲೆ ಗರ್ಕೆಹುಲ್ಲು
ಗರ್ಕೆಹುಲ್ಲ ಕುರಿಮೇಯ್ತವೆ (ಜೀಶಂಪ ೬೭)

ಅಬ್ಬಬ್ಬ ಮರದುದ್ದ ನೋಡು
ಹಾರುವ ಬಡ್ಡಿ ಹತ್ತೋದು ನೋಡು
ನೀರಿಲ್ಲದೆ ಕೆರೆ ತುಂಬೋದು ನೋಡು
ಸುಣ್ಣವಿಲ್ಲದೆ ಗೋಡೆ ಹೊಳೆಯೋದು ನೋಡು (ಸು ೩೫)

ಅಬ್ಬಬ್ಬಾ ಈ ಮರದ ಉದ್ದಾ ನೋಡು
ಹತ್ತಲಾರದ ಬಡ್ಡೀ ಮಗ ಹತ್ತಿದ್ದು ನೋಡು
ನೀರಿಲ್ಲದ ಕೆರೆ ತುಂಬಿದ್ದು ನೋಡು
ಸುಣ್ಣ ಇಲ್ಲದ ಗೋಡೆ ಬೆಳ್ಳಗಾದದ್ದು ನೋಡು (ಇ ೧೧೩)

ಅಬ್ಬೂರಮ್ಮನ ಜಾತ್ರೆಗೆ ಹೋಗಿ
ಜುಬ್ಬರನಾಯ್ಕೀನ ಕರ್ಕೊಂಡು ಬಂದೆ
ಉಚ್ಚೆ ಹುಯ್ಕೊಳ್ಳೋಗಂಟ
ಚಚ್ಚಿ ಕೆಡವಿದ್ರು (ಸು ೩೬)

ಅಲ್ಲಾಡ್ಸಿ ಅಲ್ಲೆ ಇದ್ದ (ನಾ ಗೌ ೩೮)

ಆಕಾಶದಲ್ಲಿರೋ ಗಿಡುಗ
ಅದರಲ್ಲಿರೋ ಬೆಳ್ಳಿ ಕಡಗ
ಅದನ್ನು ಮಾರೋನು ಹುಬ್ಬಳ್ಳಿ ಹುಡುಗ (ಇ ೧೬೨)

ಊರೆಲ್ಲಾ ಅಡ್ಡಾಡಿ ಬಂದು
ದೇವರ ಮುಂದೆ ಉಚ್ಚಿ ಹೊಯ್ತೈತಿ (ಇ ೨೨೭)

ಎಲೋ ಶ್ರೀನಿವಾಸ
ನಿನ್ನ ತಲೆಯಲ್ಲಿರುವುದು ಬುಟ್ಟಿ ಕಸ
ನಿನ್ನ ಹೊಟ್ಟೆಯೊಳಗಿರುವುದು ಅಮೃತ ರಸ (ಲ ಗೌ ೨೪೭)

ಏನೆಲೆ ಹುಡುಗಿ ನಿನ್ನ ತಲೆ ಮೇಲೆ ಒಂದು ಮಂಕರಿ ಕಸ
ಹೊಟ್ಟಾಗ ಪಾಮರಸ (ಇ ೨೫೭)

ಅಂಗಡಿಯಲ್ಲಿ ಕೂತ್ಕೊಂಡು
ಜುಂಗಲ ಮುಸುಕು ಹಾಕ್ಕೊಂಡು
ನನ್ನ ನೋಡ್ತಾಳೆ
ಅವಳ್ನೆ ತರಬೇಕು (ರಾ ಗೌ ೫೬)

ಅಂತರದಾಗ್ ಆಡೋ ಗಿಡುಗ
ಅದರ ಹೊಟ್ಯಾಗ್ ಸೇರ್ ಬೆಳ್ಳಿ ಕಡಗ
ಅದನ್ನ್ ಹೊಡ್ದಾನಪ್ಪ ಬಳ್ಳಾರೀ ಹುಡುಗ (ಲ ಗೌ ೧೨೧)

ಅಂತರದಾಗ ಆಡೋ ಆಡೋ ಗಿಡಗ
ಅದರ ಹೊಟ್ಟಾ್ಯಗ ಸೇರಬೆಳ್ಳಿ ಕಡಗ
ಅದನ್ನ ಹೊಡೆದೋನು ಹುಬ್ಬಳ್ಳಿ ಹುಡುಗ (ಇ ೯೦)

ಅಂತ್ರದಲ್ಲಿ ಆಡ ಗಿಡಗ
ಗಿಡ್ಗನವೊಟ್ಟೆಲ್ಲಿ ವುಟ್ಟಿರವ್ನು ಬೆಳ್ಳಿಕಡ್ಗ (ಮಂ ೧.೪–೩)

ಅಂಬರದಲ್ಲಿ ಅಂಬು ಜೋತಾಡ್ತದೆ (ಲ ಗೌ ೧೩೪)

ಅಂಬಾರಂಬಾರ ಹಡಗ
ಅದರಾಗೆ ಬೆಳ್ಳಿ ಕಡಗ

ಹೇಳದಿದ್ದೋನು ಬಳ್ಳಾರಿ ಹುಡುಗ (ಸು ೭೪)
ಒಬ್ಬ ಋಷಿಗೆ ಮೂರು ಕಣ್ಣುಂಟು
ಜುಟ್ಟುಂಟು ಕೈಯಿಲ್ಲ ಕಾಲಿಲ್ಲ (ಸು ೧೩೧)

ಒಂದು ಬಾವಿ ತೆಗೆದೆ
ಮೊದಲು ಮಣ್ಣು ಸಿಕ್ತು
ಆಮೇಲೆ ಕಲ್ಲು ಸಿಕ್ತು
ಆಮೇಲೆ ಬಿಳಿ ಜೇಡಿ ಸಿಕ್ತು
ಆಮೇಲೆ ನೀರು ಸಿಕ್ತು (ಲ ಗೌ ೩೪೯)

ಒಂದು ಬಾವಿ ತೆಗೆದೆ
ಶುರುವಿಗೆ ಮಣ್ಣು ಸಿಕ್ಕಿತು
ಆಮೇಲೆ ಪಾದೆ ಸಿಕ್ಕಿತು
ಆಮೇಲೆ ಜೇಡಿ ಸಿಕ್ಕಿತು
ಆಮೇಲೆ ನೀರು ಸಿಕ್ಕಿತು (ಚಂ ಸೆ ೬೭)

ಒಂದು ಮಡಕೆ
ಮಡಕೆಯೊಳಗೊಂದು ಕುಡಿಕೆ
ಕುಡಿಕೆಯೊಳಗೊಂದು ಶಂಖು
ಶಂಖಿನೊಳಗೊಂದು ಸಮುದ್ರ (ರಾ ಗೌ ೧೩೫)

ಕಗ್ಗಲ್ಲು ಸೋಪಾನ
ಬಿಳಿಗಲ್ಲು ಸೋಪಾನ
ಒಳಗೆ ಪನ್ನೀರು ಬಾವಿ (ಚಂ ಸೆ ೭೧)

ಕಪ್ಪೆ ಕಲಕದ ಭಾವಿ
ಏಡಿ ಮುಟ್ಟದ ಭಾವಿ
ಆಕಾಶದ ಭಾವಿ
ಅರೆ ತುಂಬಿದ ಭಾವಿ (ವಾಲಿ ೫–೨೦)

ಕಪ್ಪುಂಟು ಕಸ್ತೂರಿ ಅಲ್ಲ
ಜಲವುಂಟು ಕೊಳವಲ್ಲ
ರೆಕ್ಕೆ ಉಂಟು ಪಕ್ಷಿಯಲ್ಲ (ಸು ೧೭೮)

ಕಬ್ಬಿಣ ಕೊಡ ಕಲ್ಲ ಪಡ
ನೀರದಾವು ಮೀನಿಲ್ಲ (ಇ ೩೩೮)

ಕಬ್ಬಿಣದ ಕಡಾಯ ಬೆಳ್ಳಿ ನೆರಾಯ
ನೀರೈತಿ ಮೀನಲ್ಲ (ಇ ೩೩೭)

ಕಲ್ಲ ಕಡಾಸ ಬೆಳ್ಳಿ ಡಬಾಸ
ನೀರಾದಾವ ಮೀನ ಇಲ್ಲ (ಇ ೩೬೯)

ಕಲ್ಲಣ್ಣನ ಕೆರಿ
ಅದರಾಗ ನಾಲ್ವತ್ತು ಗರಿ
ಒಡದ ಕೊಟ್ರ ಅರ್ಥ ಸರಿ
ಕೊಡದಿದ್ರ ಸೆಂಟಾ ಹರಿ (ವಾಲಿ ೮–೩೨)

ಕಲ್ಲಬಾವಿ ಕಡಿಗಲ್ಲ ಮುಚ್ಚಳ
ನೀರುಂಟು ಮೀನಿಲ್ಲ (ಇ ೩೭೦)

ಕಲ್ಲ ಹಾಕಿದರ ಹಿಂಡತೈತಿ (ಇ ೯೬೯)

ಕಲ್ಲಿಗೆ ಒಡಿತೈತಿ
ಹುಲ್ಲಿಗೆ ಒಡಿಯೂದಿಲ್ಲ (ಇ ೩೭೪)

ಕಲ್ಲು ಕಟ್ಟದ ಬಾವಿ
ಕಪ್ಪೆಮುಟ್ಟದ ನೀರು (ಜೀಶಂಪ ೧೧೮)

ಕಲ್ಲು ಕಂದಕ ಬಿಳಿ ಸಂದುಕ
ನೀರುಂಟು ಮೀನಿಲ್ಲ (ಚಂ ಸೆ ೯೨)

ಕಲ್ಲು ಕಂದಕ ಬಿಳೀ ಸಂದೂಕ
ನೀರುಂಟು ಮೀನಿಲ್ಲ (ಲ ಗೌ ೪೨೩)

ಕುಕ್ಕೆ ಕುಕ್ಕೆವೊಳಗೆ ಸಂಕು
ಸಂಕೊಳಗೆ ಸಮುದ್ರ (ಮಂ ೧.೪–೩೬)

ಕುಂಬಾರ ಮಾಡದ ಮಡಕೆ
ಅಗಸ ಒಗೆಯದ ಮಡಿ
ಸೂರ್ಯನು ನೋಡದ ಗಂಗೆ (ರಾ ಗೌ ೨೦೯)

ಗುಡಗಲಿಲ್ಲ ಮಿಂಚಲಿಲ್ಲ
ಗುಬ್ಬಿಕೆರೆ ತುಂಬ್ತು (ಜೀಶಂಪ ೧೪೦)

ಗೆರೆ ಬೆಳ್ಳಗೆ ನೀರು ತೆಳ್ಳಗೆ (ಲ ಗೌ ೫೩೦)

ಚಿಪ್ಪುಂಟು ಆಮೆಯಲ್ಲ

ಜುಟ್ಟುಂಟು ಪೂಜಾರಿಯಲ್ಲ
ಮೂರು ಕಣ್ಣುಂಟು ಮುಕ್ಕಣ್ಣನಲ್ಲ (ಇ ೫೩೫)

ಚಿಪ್ಪುಂಟು ಆಮೆಯಲ್ಲ
ಜುಟ್ಟುಂಟು ಋಷಿಯಲ್ಲ
ಮೂರು ಕಣ್ಣುಗಳುಂಟು
ಮುಕ್ಕಣ್ಣನಲ್ಲ (ರಾ ಗೌ ೨೫೪)

ಜಡೆಯುಂಟು ಜಂಗಮನಲ್ಲ
ಹೆಡೆಯುಂಟು ಶೇಷನಲ್ಲ
ಮೂರು ಕಣ್ಣುಂಟು ಮುಕ್ಕಣ್ಣನಲ್ಲ (ಇ ೫೪೭)

ಜುಟ್ಟಾ ಹಿಡಿ
ನೆಲಕ್ಕ ಬಡಿ
ಸಿಹಿನೀರ ಕುಡಿ (ವಾಲಿ ೨–೩೯)

ಜುಟ್ಟುಂಟು ಭಟ್ಟನಲ್ಲ
ನೀರುಂಟು ಕೆರೆಯಲ್ಲ
ಬೆಳ್ಳಗುಂಟು ಹಾಲಲ್ಲ
ಎಂಥದೋ ಏನೋ ಶಿವನೇ ಬಲ್ಲ (ಇ ೫೫೫)

ತಾತಾಗಿಂಡಿ ತಾಂಬರ ಗಿಂಡಿ
ಬಿಚ್ಚಿ ನೋಡಿದರ ಬೆಳ್ಳೀ ಗಿಂಡಿ (ವಾಲಿ ೩–೧೨೫)

ದೆವ್ವನಂಥ ಮುಂಡೆ
ದೇವರ ಮುಂದೆ ಉಚ್ಚೀ ಹೊಯ್ತಾಳ (ಇ ೬೨೦)

ನಮ್ಮ ಜೂಲನಾಯಿ
ನರಮನ್ಸನ್ನ ಕಂಡ್ರೆ ಸುಮ್ನಿರ್ತದೆ
ದೇವನ್ನ ಕಂಡ್ರೆ ಉಚ್ಚೆ ಹುಯ್ಕೊಳ್ತುದೆ (ಸು ೩೩೦)

ನಾರಿ ಸೀರೆಯನುಟ್ಟು ನಲಿದಾಡುತಿಹಳು
ನೀರ ಕೊಡಗಳ ಹೊತ್ತು ತಾ ಮೆರೆಯುತಿಹಳು
ನೋಡಿದವರಿಗೆ ಮೂರು ಕಣ್ಣು ತೋರುತಿಹಳು
ಬೇಡಿದವರಿಗೆ ಅಮೃತ ಸವಿದೋರುತಿಹಳು (ಇ ೬೪೬)

ನಾರು ಸೀರೆ ಗರ್ತಿ
ನೀರು ಕೊಡ ಹೊರ್ತಿ
ನೋಡಿದೋರತ್ತ
ಮೂರು ಕಣ್ಣು ತೋರ್ತಿ (ಸು ೩೩೨)

ನೀರಿಗೆ ಹೋಗಬೇಡ ನೀರು ಮುಟ್ಟಬೇಡ
ನೀರು ತಾರದೆ ಬರಬೇಡ (ಚಂ ಸೆ ೧೫೯)

ನೀರಿಗೆ ಹೋಗೊಲ್ಲ ನೀರು ಮುಟ್ಟೊಲ್ಲ
ಆದರೂ ನೀರು ತರ್ತೀನಿ ನಾನಾರು (ಲ ಗೌ ೬೯೨)

ನೀರಿದ್ರುವ ಬಾವಲ್ಲ
ಜುಟ್ಟಿದ್ರುವ ಪೂಜ್ಯಾರಲ್ಲ (ಮಂ ೧.೪–೫೩)

ನೀರುಂಟು ಮೀನಿಲ್ಲ
ಆಕಾಶವುಂಟು ನಕ್ಷತ್ರವಿಲ್ಲ
ಕಾಡಿದೆ ಮಿಕವಿಲ್ಲ (ಲ ಗೌ ೬೯೮)

ನೆತ್ತಿ ಮೇಗಲ ಕಣ್ಣು (ರಾ ಗೌ ೩೨೩)

ನೆಲಕ ನೆಲಾ ಮ್ಯಾಲ ಮುಗಲ ನಡುವ ನೀರು (ಇ ೬೮೫)

ಭಟ್ಟನ ತಲೇ ಮೇಲೆ ಅಮಟೆ ಗಾತ್ರ ಜುಟ್ಟು (ಲ ಗೌ ೭೯೯)

ಮಡಕೆ ಒಳಗೆ ಕುಡಿಕೆ
ಹೊರಗೆ ಶಂಖ ಒಳಗೆ ಸಮುದ್ರ (ಸು ೩೯೫)

ಮಣ್ಣು ಅಗೆದರೆ ಕಲ್ಲು ಸಿಕ್ಕುತ್ತೆ
ಕಲ್ಲು ಒಡೆದರೆ ಬೆಳ್ಳಿ ಸಿಕ್ಕುತ್ತೆ
ಬೆಳ್ಳಿ ಬೆದಕಿದರೆ ನೀರು ಸಿಕುತ್ತೆ (ಲ ಗೌ ೮೧೧)

ಮಣ್ಣು ಅಗೆದೆ ಕಲ್ಲು ಸಿಕ್ಕಿತು
ಕಲ್ಲು ಅಗೆದೆ ಬೆಳ್ಳಿ ಸಿಕ್ಕಿತು
ಬೆಳ್ಳಿಯೊಡೆದೆ ನೀರು ಸಿಕ್ಕಿತು (ಚಂ ಸೆ ೧೯೬)

ಮಣ್ಣು ಅಗೆದೆ ಕಲ್ಲು ಸಿಕ್ಕಿತು
ಕಲ್ಲು ಅಗೆದೆ ಬೆಳ್ಳಿ ಸಿಕ್ಕಿತು
ಬೆಳ್ಳಿಯೊಡನೆ ನೀರು ಸಿಕ್ಕಿತು (ಇ ೮೦೯)

ಮರದ ಮೇಲೆ ತಣ್ಣೀರ ತತ್ರಾಣಿ (ಇ ೮೨೩)

ಮರದಲ್ಲಿ ವಾಸಿಸಿದರೂ ಪಕ್ಷಿಯಲ್ಲ
ನಾರುವಸ್ತ್ರವನುಟ್ಟರೂ ಯೋಗಿಯಲ್ಲ
ಮೂರು ಕಣ್ಣುಗಳಿದ್ದರೂ ಈಶನಲ್ಲ
ನೀರನೋದಗಿಸುವೆನಾದರೂ ಮೇಘನಲ್ಲ
ಹಾಗಾದರೆ ನಾನ್ಯಾರು (ಇ ೮೨೫)

ಮರದಲ್ಲಿ ವಾಸಿಸುತ್ತಿದ್ದರೂ ಪಕ್ಷಿಯಲ್ಲ
ನಾರುವಸ್ತ್ರವನ್ನುಟ್ಟರೂ ಯೋಗಿಯಲ್ಲ
ಮೂರು ಕಣ್ಣುಗಳಿದ್ದರೂ ಈಶನಲ್ಲ
ನೀರನೊದಗಿಸುವೆನಾದರೂ ಮೇಘವಲ್ಲ (ಚಂ ಸೆ ೨೦೩)

ಮುಕ್ಕಣ್ಣ ಜಟಾಧಾರಿ
ಗಂಗಾಧರ ಆದರೆ ಶಿವನಲ್ಲ (ಇ ೮೫೦)

ಮೂರು ಕಣ್ಣಿನ ಆಕಾರ
ಮೇಲೆ ಜುಟ್ಟಿನ ಸಿಂಗಾರ
ಒಳಗೆ ನೀರಿನ ಆಧಾರ
ಎಲ್ಲ ದೇವರ ಜತೆಗಾರ
ಅದ ಬಡಿದರೂ ಬಲು ಧೀರ (ರಾ ಗೌ ೪೦೫)

ಮೂರು ಕಣ್ಣುಗಳುಂಟು ಮುಕ್ಕಣ್ಣನಲ್ಲ
ಮೇಲೆ ಜುಟ್ಟುಂಟು ಬ್ರಾಹ್ಮಣನಲ್ಲ
ಒಳಗೆ ಬಿಳಿಯುಂಟು ಸುಣ್ಣ ತಾನಲ್ಲ
ತುಂಬ ನೀರುಂಟು ಕೆರೆ ತಾನಲ್ಲ
ಇದನ್ನು ಹೇಳಿದವರು ದಡ್ಡರಲ್ಲ (ಇ ೮೭೬)

ಮೂರು ಕಣ್ಣುಳ್ಳ ಒಂದು ವಸ್ತು
ಊರೆಲ್ಲಾ ಸುತ್ತಿ
ದೇವರ ಮುಂದೆ ಬಂದು
ತಲೆ ಕೆಚ್ಚೊಕ್ಕಂಡ್ತದೆ (ರಾ ಗೌ ೪೦೩)

ಮೂರು ಕಣ್ಣುಂಟು ಶಿವನಲ್ಲ (ಜೀಶಂಪ ೧೫೭೭)

ಮೂರು ಕಣ್ಣುಂಟು ಶಿವನಲ್ಲ
ಜುಟ್ಟುಂಟು ಬ್ರಾಹ್ಮಣನಲ್ಲ
ನೀರುಂಟು ಬಾವಿಯಲ್ಲ (ಲ ಗೌ ೮೬೦)

ಮೂರು ದಾರಿಗೆ ಮೂರು ಕಣ್ಣು
ನೀರು ಸುರಿಯುವ ಒಂದೇ ಕಣ್ಣು
ನಾರು ಸುತ್ತಿದ ಕುರುಡು ಕಣ್ಣು
ಊರ ದೇವರಿಗೆ ಹೇಳಿದ ಹಣ್ಣು (ಚಂ ಸೆ ೨೦೭)

ಮೂರು ದೇವರಿಗೆ ಆರು ಕಣ್ಣು
ಮೂರು ಮುಕ್ಕಣ್ಣೇಶ್ವರ ಕಣ್ಣು
ಯಾವ ದೇವರಿಗೂ ಸಲ್ಲುವ ಹಣ್ಣು (ರಾ ಗೌ ೪೦೨)

ರುಬ್ಬುದೋಣಿ ಹಬ್ಬಕೆ ಬಂದು
ದೇವರ ಕೋಣೆಗೆ ತೆವೀತಾ ಹೋಗಿ ಉಚ್ಚೆ ಹೂದ್ಲು (ಲ ಗೌ ೮೯೧)

ಸಾರಿಗಾಕೊ ಪದಾರ್ಥದಲ್ಲಿ
ಚಿವುಕಿದ್ರೆ ನಾಲ್ಕು ಬ್ಯಾಳೆ
ಆಗೋ ಪದಾರ್ಥ ಸಾಸಿವೆ (ಮಂ ೧.೪–೭೮)

ಸುತ್ಲ ಸುತಗಟ್ಟಿ ನಡಕ ಬೆಳ್ಳೀಕಟ್ಟಿ (ಇ ೯೬೧)

ಸುಬ್ರಗಟ್ಟ ನಿಮ್ಮ ಹಬ್ಬಕ್ಕೆ ಬಂದು
ನಿನ್ನ ದೇವರ ತಲೆ ಮೇಲೆ ಉಚ್ಚೆ ಹುಯ್ತು (ಲ ಗೌ ೯೫೬)

ಸಂತ್ಯಾಗಿಂದ ಒಂದ ಎಮ್ಮಿ ತಂದೇನಿ
ಹುಲ್ಲು ಹಾಕಿದರೆ ಹಿಂಡೂದಿಲ್ಲ
ಹನುಮಪ್ಪನ ಮುಂದ ಹಲ್ಲು ಕಿಸಿತೈತಿ (ಇ ೧೦೧೧)

ಹಬ್ಬಕ್ಕೆ ಬಂದ ಸುಬ್ಬಲಗಾಟ
ಕೆಚ್ಚಿದರೆ ಉಚ್ಚೆ ಹುಯ್ಕೊಳ್ತದೆ (ರಾ ಗೌ ೪೭೫)

ಹಬ್ಬಕ್ಕೊಬ್ಬ ನ್ಯೆಂಟ ಬಂದಾ
ವಡದೇಟಿಗೆ ವುಚ್ಚೆ ವುಯ್ಕಂಡ (ಮಂ ೧.೪–೪೫)

ಹರಿ ನನ್ನ ಸೆಂಟಾ ಪರಾಪರಾ
ಕುಡಿ ನನ ಉಚ್ಚೆ ಗಟಾಗಟಾ
ತಿನ್ನ ನನ್ನ ಹೇಲು ಕಚಾಕಚಾ (ಇ ೧೦೧೯)

ಹಸಿರು ಕೊಡದ ತುಂಬ ಸಿಹಿನೀರು (ಇ ೧೦೪೭)

ಹೊಟ್ಟಿ ಒಡಿ ನೀರು ಕುಡಿ (ಇ ೧೧೦೨)

ಹೊಟ್ಟೆ ಪಿಟ್ಟಗೆ ಜುಟ್ಟು ನೆಟ್ಟಗೆ (ಚಂ ಸೆ ೨೫೮)

ಹೊಟ್ಟೆ ಪುಟ್ಟಗೆ ಜುಟ್ಟು ನೆಟ್ಟಗೆ (ರಾ ಗೌ ೫೦೫)

ಹೋಗಾಗ ಒಂದಿತದ ಬರಾಗ ಎರಡಾಗತದ (ಇ ೧೧೧೮)

ಹೋಗಾಗ ತಾಮ್ರ ಬರಾಗ ಬೆಳ್ಳಿ (ವಾಲಿ ೫–೧೮)

ಹೋಗುಮುಂದ ಒಂಟಿ ಬರೂಮುಂದ ಜಂಟಿ (ಇ ೧೧೧೯)

ಹಂದಿ ಜುಂಗು ನಂದಿ ಮಟ್ಟೆ ಒಡೆದರೆ ಬಿಳಿಕಲ್ಲು (ಲ ಗೌ ೧೦೩೩)
ತೆಂಗಿನಕಾಯಿ

ಊರೆಲ್ಲಾ ಸುತ್ಯಾ ಬಂದು
ದೇವರ ಮ್ಯಾಲೆ ಉಚ್ಚೆ ವುಯ್ತದೆ (ಮಂ ೧.೪–೧೯)
ತೆಂಗಿನಕಾಯಿ, ಎಳ್ನೀರು

ಅರೆಗೆರೆ ತುಂಬುಗೆರೆ ಬರಿಗೆರೆ (ಜೀಶಂಪ ೧)
ತೆಂಗಿನಕಾಯಿ, ಎಳನೀರು, ಕೊಬರಿ

ಗುಡ್ಡಾಗ ಗುಡುಗುಡುಸತ್ಯೈತಿ
ಕೆರ್ಯಾಗ ಕ್ಯಾಕರಸತ್ಯೈತಿ
ಬಣವ್ಯಾಗ ಬಡಬಡಸತ್ಯೈತಿ (ಇ ೫೦೩)
ತೆಂಗಿನಕಾಯಿ, ಕಪ್ಪೆ, ಕುಡಗೋಲು

ಕಿರಿಗೆರೆ
ಬರಿಗೆರೆ
ತುಂಬಿದ ಕೆರೆ (ಇ ೪೦೨)
ತೆಂಗಿನಕಾಯಿ, ಕೊಬ್ಬರಿ ಗಿಟಿಗ, ಎಳನೀರು

ಅರಕೆರೆ
ಬರಕೆರೆ
ತುಂಬಿದ ಕೆರೆ (ಮಂ ೧.೪–೧೩)
ತೆಂಗಿನಕಾಯಿ, ಕೊಬ್ಬರಿ, ಎಳ್ನೀರು

ನೀರಿಗೆ ಹೋಗಬ್ಯಾಡ
ನೀರಾಗ ಕಾಲಿಡಬ್ಯಾಡ
ನೀರಿಲ್ಲಿದ ಮನೆಗೆ ಬರಬ್ಯಾಡ (ಇ ೬೪೫)
ತೆಂಗಿನಕಾಯಿ ತರುವುದು

ಅಳಿಗಾಡಿಸಿ ಕುಕ್ಕ
ಮೂಸಿ ನೋಡಿ ಕುಕ್ಕ
ಕಾಲೆತ್ತಿ ಕುಕ್ಕ (ಇ ೧೪೯)
ತೆಂಗಿನಕಾಯಿ, ಬೆಳವಲಕಾಯಿ, ಅಡಿಕೆ

ಸಾವಿರ ಗಿಳಿಗಳಿಗೆ ಒಂದೇ ಕೊಕ್ಕು (ಚಂ ಸೆ ೨೨೨)
ತೆಂಗಿನ ಗರಿ

ಸರ್ರ್. . . ದುಬ್. . . ಮ್ಯಾವ್ (ಲ ಗೌ ೯೧೭)
ತೆಂಗಿನಗರಿ (ಬೀಳುವಾಗ ಸರ್ರ್, ಬಿದ್ದಾಗ ದುಬ್, ಅದಕ್ಕೆ ಸಿಕ್ಕಿದ ಕುರಿ ಮ್ಯಾವ್ ಅನ್ನುತ್ತೆ)

ಉದ್ದಾನಕಿ ಉದರಗಣ್ಣಾಕಿ
ಮಕ್ಕಳನ ಹಡದು ಮಂದೀಗೆ ಕೊಡುತಾಳ (ಇ ೨೧೮)
ತೆಂಗಿನ ಗಿಡ

ಅಕ್ಕತಂಗೀರಿಬ್ಬರು
ಹಡದ ಮಕ್ಕಳನ್ನೆಲ್ಲ ಕಂಡವರಿಗೆ ಕೊಟ್ಟು
ಬರಿತೊಟ್ಟಲು ತೂಗ್ತಾರೆ (ಜೀಶಂಪ ೩೨)

ಉದ್ದನೆಯ ಹೆಂಗಸು
ಹೊತ್ತವಳೆ ನೂರು ಹರಬಿಯ (ರಾ ಗೌ ೧೦೨)

ಉದ್ದಾನೆ ಕಾಲಿನವಳು ಮದ್ದಾನೆ ಮೈಯವಳು
ಹೊತ್ತವಳೆ ನೂರೊಂದು ಹರಬಿಯ (ಲ ಗೌ ೨೦೦)

ಎತ್ತರವಾಗಿ ಬೆಳೆದು
ತಲೆಗೂದಲಾ ಬಿಟ್ಟು
ನೂರಾರು ಮಕ್ಕಳ ಹೊತ್ತೈತಿ (ಇ ೨೩೫)

ಒಂಟ್ ಕಾಲ ಕೊಕ್ಕರೆಗೆ
ಸಾವಿರಾರು ರೆಕ್ಕೆ (ರಾ ಗೌ ೧೨೫)

ತಾಯಿ ಪಾತಾಳಕ್ಕೆ
ತಂದೆ ಆಕಾಶಕ್ಕೆ
ಮಗ ದೇವಸ್ಥಾನಕ್ಕೆ (ಸು ೩೦೧)

ತಾಯಿ ಪಾತಾಳಕ್ಕೆ ಹೋದಳು
ತಂದೆ ಆಕಾಶಕ್ಕೆ ಹೋದ
ಮಕ್ಕಳೆಲ್ಲ ದಿಕ್ಕಾಪಾಲಾದರು (ಇ ೫೯೦)

ದಪ್ಪಾನಿ ತಿಕದೋಳು
ಉದ್ದಾನಿ ಮೊಕದೋಳು (ರಾ ಗೌ ೨೮೩)

ನೆಟ್ಟಗೆ ಹೋಗಿ ನೂರು ಮೊಟ್ಟೆ ಇಡುತ್ತೆ (ಲ ಗೌ ೭೦೯)
ತೆಂಗಿನಮರ

ಅಕ್ಕ ತಂಗಿಯರು ಒಂದು ಕುಲದವರು
ಅವರ ಮಕ್ಕಳ ಹೆರರಿಗೆ ಕೊಟ್ಟು
ಬರೀ ತೊಟ್ಟಿಲು ತೂಗುತ್ತಾರೆ (ಲ ಗೌ ೮)
ತೆಂಗಿನಮರ, ಅಡಿಕೆ ಮರ

ಅವ್ವ ತಲೆಗೆದರಿ
ಮಗಳು ಕತ್ತುರಿಗಿ (ರಾ ಗೌ ೪೪)
ತೆಂಗಿನಮರ, ತೆಂಗಿನಕಾಯಿ

ಸತ್‌ಕಿಪ್ಪೆ ಅಟ್ಟಾ ಹತ್ಕಾ ಕುತ್ಗತ್ತು (ಶಾಂ ನಾ ೧೯೨)
ತೆಂಗಿನ್ ಸಿಪ್ಪೆ

ಅಪ್ಪಪ್ಪ ಮರದಾಳ ನೋಡು
ಅಪ್ಪಪ್ಪ ಮರದುದ್ದ ನೋಡು
ಆರು ಹೊಡಿಯೋ ಬಡ್ಡೀಮಗ ಹತ್ತೋದು ನೋಡು
ನೀರಿಲ್ಲದೆ ಕೆರೆ ತುಂಬೋದು ನೋಡು
ಅಗಸನಿಲ್ಲದೆ ಮಡಿಯಾಗೋದು ನೋಡು (ಲ ಗೌ ೬೪)
ತೆಂಗಿನಮರ ಮತ್ತು ಕಾಯಿ

ಅಡ್ಡಾ ಗುಡ್ಡಾ ಸಂಕಾಚಕ್ರಾ ತೀರ್ತಾ (ಶಾಂ ನಾ ೧೬೮)

ಅಡ್ತಂ ಬುಡ್ತಂ ಸಂಕಂ ತೀರ್ತಂ (ಶಾಂ ನಾ ೧೬೭)

ಅಪ್ಪಾ ಉದ್ದಾ ಅಬ್ಬೆ ಉದ್ದಾ ನಾಮಾತ್ರ ಗಿಡ್ಡಾ (ಶಾಂ ನಾ ೧೭೩)

ಕುರುಬರ ಹೈದಂಗೆ
ಮೈಯೆಲ್ಲ ಜುಂಗು (ರಾ ಗೌ ೨೧೨)

ಅಬ್ಬಬ್ಬ ಆಳುದ್ದ ನೋಡು
ಕಿಕ್ಕೇರಿ ಸಂತೇ ನೋಡು (ಜೀಶಂಪ ೪೬)

ಅಮ್ಮ ಅಮ್ಮ ಏರಿ ನೋಡು
ಏರಿಮೇಗಳ ನಾರಿನೋಡು
ನೀರಿಲ್ಲದ ಕೆರೆ ತುಂಬಿದೆನೋಡು
ಅಗಸಿಲ್ದೆ ಬಟ್ಟೆ ಮಡಿಯಾಗೊನೋಡು (ಜೀಶಂಪ ೨೦)

ಆಕಾಶವುಂಟು ನಕ್ಷತ್ರವಿಲ್ಲ
ನೀರುಂಟು ಮೀನಿಲ್ಲ
ಗವಿಯುಂಟು ಹುಲಿಯಿಲ್ಲ (ಶಾಂ ನಾ ೧೮೮)

ಆಕಾಶ್ದಲ್ಲಿ ಬಾವಿದ್ದು (ಶಾಂ ನಾ ೧೮೨)

ಉಪ್ರಾ ತಪ್ರಾ (ಅಪ್ರಾ ತಪ್ರಾ) ಬೋಳಿಮಗಾ
ದೆವ್ರ್ ತಲೆ ಮೆಲುಚ್ಚಿ ಹೊಯ್ತಾ (ಶಾಂ ನಾ ೧೭೫)

ಊರ್ಗಿಂತ ದೊಡ್ಡೋಳು
ನೀರ್ಹೊತ್ಗಂಡ್ನಿಂತವಳೆ (ಜೀಶಂಪ ೭೨)

ಎಲೆಲೆ ಶ್ರೀನಿವಾಸಾ
ನಿನ್ನ ಹೊಟ್ಟೆಲಿ ಅಮ್ರತಾ
ತಲೆಯ ಮೇಲೆ ಬುಟ್ಟೀಕಸಾ (ಶಾಂ ನಾ ೧೯೦)

ಒಂದು ಬಿದಿರೊಡೆದು
ಒಂಬೈನೂರು ಮನೆಕಟ್ಟಿ
ಕುಂತಿರೋನು ಕುಂಬಾರಶೆಟ್ಟಿ (ಜೀಶಂಪ ೧೦೦)

ಅಂಬಾರ್ದಮೇಲೆ ನೀರ್ನ ಮಂಟ್ಪಾ (ಶಾಂ ನಾ ೧೭೨)
ಒಳಗ ಹಸನ ಮೇಲೆ ಕಸ
ಒಳಗ ಸುಣ್ಣ ಮ್ಯಾಲ ಬಣ್ಣ (ಇ ೩೦೪)

ಕಪ್ಪೆ ಇರದಬಾವಿ
ಏಡಿ ಮುಳುಗದ ಬಾವಿ
ಅಗಸದ ಬಾವಿ ಅರಬಾವಿ (ಶಾಂ ನಾ ೧೮೯)

ಕರಗಲ್ ಕಟ್ನಾ ಕಡ್ಗಲ್ ಕಟ್ನಾ
ಬೆಣಗಲ್ ಕಟ್ನಾ ಪನ್ನೀರ್ಬಾವಿ (ಶಾಂ ನಾ ೧೬೯)

ಕೆರೆ
ಕೆರೆಗೆ ಬೆಳ್ಳಿಕಟ್ಟೆ
ಸುತ್ತು ಶಿಲೆಕಟ್ಟೆ (ಶಾಂ ನಾ ೧೮೧)

ಕೆಳ ಹುತ್ತು ನಡುಬತ್ತು
ಮೇಲೆ ನಂದಾನ್ವನಾ (ಶಾಂ ನಾ ೧೭೯)

ಗುಡಿಯೊಳಗೆ ನೀರು
ಗುಡಿಗೆ ಬೀಗಮುದ್ರೆ (ಶಾಂ ನಾ ೧೭೦)

ಜಡೆಉಂಟು ಜಂಗಮನಲ್ಲಾ
ಹೆಡೆಯುಂಟು ನಾಗ್ರನಲ್ಲಾ (ಶಾಂ ನಾ ೧೭೧)

ತಮ್ಮಂಗೆ ಮೂರ್ಕಣ್ಣು
ಅಮ್ಮಂಗೆ ವಂದೇಕಣ್ಣು (ಶಾಂ ನಾ ೧೮೫)

ತುರುತುರುಕಟ್ಟೆ ಸಪ್ಪಕಟ್ಟೆ
ಕಡಗಲ್ಕಟ್ಟೆ ಬೆಳಗಲ್ಕಟ್ಟೆ ಪನ್ನೀರ್ಕೆರೆ (ಶಾಂ ನಾ ೧೭೮)

ನಾರುಮಡಿಯ ನಾನು ತೇರು ಬಂದರೆ ನುಗ್ಗಿ
ಹಾಲುಹೃದಯವ ತೋರಿ ಹರಿಯ ಪಾದದ ಸೇರ್ವೆ (ಶಾಂ ನಾ ೧೯೧)

ನಿನ್ನ ತಲೆಯ ಮೇಲೆ
ತಾಮರದ ಕೊಡ
ನಿನ್ನ ನಡ ನಡಕೊಂಡು
ನಾ ಅಡ (ರಾ ಗೌ ೩೧೧)

ನೀರಿದ್ದು ಕೆಪ್ಪೆಲ್ಲೆ ಟೊಪ್ಪಿದ್ದು ಪೋಲಿಸ್ನಲ್ಲೆ (ಶಾಂ ನಾ ೧೮೩)

ಬಟ್‌ಬತ್ತಾ ತಲೆಜಪ್ಪತ್ತಾ ದೆವ್ರ ಮುಂದೆ ಉಚ್ಚೀಹೊಯ್ತಾ (ಶಾಂ ನಾ ೧೮೪)

ಮಗಾ ದೊಳ್ಳೊಟ್ಟೆ
ಅಬ್ಬೆ ಕೊರ್ಕಿ
ಅಪ್ಪಾ ಸಯ್ತಾನಾ (ಶಾಂ ನಾ ೧೭೭)

ಮಯ್ತುಂಬ ಮಂಡಯಿದ್ರೂ ಕರಡ್ಯಲ್ಲಾ
ಜುಟ್ಟಿದ್ರೂ ಬಟ್ನಲ್ಲಾ ನೀರಿದ್ರೂ ನದ್ಯಲ್ಲಾ (ಶಾಂ ನಾ ೧೭೬)

ವಂದ್ ಕಾಲ್ನ ಕೊಕ್ಕರೆ ನೂರೆಂಟು ಮೂಟ್ಟೆ (ಶಾಂ ನಾ ೧೭೪)

ವಂದ್ನರಿಗೆ ವಂದ್ಬಾಲಾ ವಂಬತ್ನರಿಗೂ ವಂದೇಬಾಲಾ (ಶಾಂ ನಾ ೧೪೦)

ಸೂರ್ಯನು ಕಾಣದ ಗಂಗೆ
ಕುಂಬಾರನು ಮಾಡದ ಮಡಕೆ (ಶಾಂ ನಾ ೧೪೭)

ಹೆತ್ತ ಮಕ್ಕಳ ಹೆರವರಿಗೆ ಕೊಟ್ಟು
ತಾನು ಬರಿ ತೊಟ್ಟಲು ತೂಗ್ತಾಳೆ (ಜೀಶಂಪ ೨೯೩)

ತೆಂಗು

ಹಸಿರು ಹಾವು
ಹರಹರದು ತತ್ತೀ ಇಡತೈತಿ (ಇ ೧೦೪೩)

ಹಸರ ಹಾಂವ
ಹರಹರದ
ತತ್ತಿ ಇಡತತಿ (ಲತ್ಥೆ ಭಾಗ ೪–೧೯೬)

ತೊಂಡಿ ಬಳ್ಳಿ

ಮನೆ ಹಿಂದ್ಗಡೆ ಚಪ್ಪರ
ಎಲೆಗೊಂದು ಕಾಯಿ
ಕೂದ್ ನೋಡಿದ್ರೆ ಬೆಟ್ಟುದ್ದ (ರಾ ಗೌ ೩೮೪)

ತೊಂಡೆಕಾಯಿ

ಹಸಿರು ಹಾವು ಹರಿದು ಹರಿದು ಮೊಟ್ಟಿ ಇಡ್ತದೆ (ಲ ಗೌ ೧೦೨೦)

ತೊಂಡೆಬಳ್ಳಿ

ನಾಕ್ ಹಸಿ ಗುಟ್ಟಾ ಯರ್ಡು ವಣಾ ಗುಟ್ಟಾ ಯರ್ಡು ಪಟ್ಟಟೆ (ಶಾಂ ನಾ ೫೧೧)

ನಾಕು ಹಸೀ ಕಟಗಿ ಎರಡು ಒಣಾ ಕಟಗಿ
ಎರಡು ಲಟಪಿಟ ಒಂದು ಬೀಸಣಿಕೆ (ವಾಲಿ ೬–೧೫)

ದನ

ಎರಡು ಒಣಮರ
ನಾಲ್ಕು ಹಸೀ ಮರ
ಎರಡು ಲೊಟಾಪಟಿ
ಎರಡು ಮಿಣಮಿಣಿ
ಒಂದು ಬೀಸಣಿಗೆ (ಲ ಗೌ ೨೨೯)
ದನ, ಅದರ ಕೊಂಬು, ಕಾಲು, ಕಿವಿ, ಕಣ್ಣು ಮತ್ತು ಬಾಲ

ಹೋಗುವಾಗ ಹಪ್ಪು ಮುದ್ಕಾ
ಬರುವಾಗ ಪ್ರಾಯದ್ಹುಡ್ಗಾ (ಶಾಂ ನಾ ೪೪)
ದನಕರು

ಹಗಲ ಮಲಗತೈತಿ
ರಾತ್ರಿ ಏಳತೈತಿ (ವಾಲಿ ೩–೪೬)
ದನಗಳ ಕಣ್ಣಿ

ಹಗಲಿನಲ್ಲಿ ನಿದ್ರಿ ರಾತ್ರಿ ಜಾಗರಣಿ
ಹಗಲೆಲ್ಲ ಮಕ್ಕೋತೈತಿ
ರಾತ್ರಿ ಎದ್ದು ನಿಲ್ಲತೈತಿ (ಇ ೯೮೩)
ದನಗಳನ್ನು ಕಟ್ಟುವ ಹಗ್ಗ

ಹೊತ್ಕೊಂಡು ಹೋಗೋಕೆ ನಾಕಾಳು
ದಾರಿ ತೋರಿಸೋಕೆ ಎರಡಾಳು
ಗಾಳಿ ಬೀಸೋಕೆ ಎರಡಾಳು (ಸು ೫೩೧)
ದನಗಳ ಕಾಲು, ಕಣ್ಣು, ಕಿವಿ

ಸಂಜೀತನ ಅಡವಿಗಿ ಹೋಗತೈತಿ
ಸಂಜೀಕ ಬಂದು ಮೂಲಿ ಹಿಡೀತೈತಿ (ವಾಲಿ ೩–೪೫)
ದನಗಳ ಕೊರಳಲ್ಲಿ ಕಟ್ಟುವ ಗುದ್ದಿ

ಕತ್ತಲೆ ಮನೇಲಿ ಕಳ್ಳ ಕತ್ತಿ ಬೀಸ್ತಾನೆ (ಸು ೧೭೩)
ದನಗಳ ಬಾಲ

ಒಂದು ಹುತ್ತಕ್ಕೆ ಎರಡೇ ಕೋವೆ ಸುತ್ತ ನೂರೊಂದು ಜಲ
ಎಲ್ಲಾದ್ರಲ್ಲೂ ನೀರು ಉಕ್ಕುತ್ತೆ ಹರಿಯೋದಿಲ್ಲ (ಲ ಗೌ ೩೧೮)
ದನಗಳ ಮೂಗು

ಕಲ್ಲೂರಲ್ಲಿ ಕಲ್ಲಾಗಿ ಮುಳ್ಳೂರಲ್ಲಿ ಮುಳ್ಳಾಗಿ
ನಾಲ್ಕು ಜನ ನಾರಿಯರು ನೆನೆಯದ ಬರ್ತಾರೆ (ಲ ಗೌ ೪೨೪)
ದನದ ಕೆಚ್ಚಲು

ಹಾದೀಲಿ ಹೋಗೊ ಪಾರಾ
ಚಾಡಿ ಹೇಳ್ತಾ ಹೋಗ್ತತಿ (ಲಠೆ ಭಾಗ ೫–೩೦೨)

ಹಾದಿಗುಂಟ ಪಾರ
ಹಾಡ್ಕೋತ ಹೋಗ್ತದ (ಲಠೆ ಭಾಗ ೫–೩೦೩)
ದನದ ಕೊಳ್ಳ ಗಂಟೆ

ಹಗಲೆಲ್ಲ ಮಲಗವನೆ
ಇರುಳೆಲ್ಲ ನಿಂತವನೆ (ಜೀಶಂಪ ೨೬೬)
ದನದ ಗೊಂತು

ಅಯ್ಜನಾ ಸನ್ಯಾಸಿಯಕ್ಕೊ ಹೋಯ್ಕತ್ನೆಯಿದ್ದಿದ್ದೊ
ಮಳೆ ಬತ್ತು ವಬ್ ಅದ್‌ತಾ ನಾಕ್ಜ್ ನಾ ಅದ್ತಿಲ್ಲೆ (ಶಾಂ ನಾ ೫೪)
ದನಾ–ದನದೊಲೆ

ಕತ್ಲೆ ಮನೇಲಿ ಕಾಳಪ್ಪ ಕತ್ತಿ ಬೀಸ್ತಾನೆ (ಜೀಶಂಪ ೧೦೯)
ದನದ ಬಾಲ

ಕುಡುಗೋಲು ಕುಡುಗೋಲು ಕುಯ್ಯುತ್ತಾ ಬರುತ್ತೆ
ರಾಮನ ಪೆಟ್ಟಿಗೆ ತುಂಬುತ್ತಾ ಬರುತ್ತೆ
ಬಣ್ಣದ ಕೋಲು ಬೀಸ್ತಾ ಇರುತ್ತೆ (ಲ ಗೌ ೪೫೨)
ದನ ಹುಲ್ಲು ಮೇಯುವುದು

ಬ್ಯಾಗ ಮುಕ್ಕೋತದ
ಬೆಳಗಾಗಾಗನ ಖಡಿ ಕುಂಡ್ರತದ (ಲಠೆ ಭಾಗ ೫–೨೩೧)
ದನಾ ಕಟ್ಟೊ ಸರಪಳಿ

ಒಬ್ಬರಿಗೆ ಒಂದು ಕಣ್ಣು (ಲ ಗೌ ೨೭೦)
ದಬ್ಬಳ

ಹರ್ ಕಟ್ಟು ದೇವಸ್ಥಾನಕ್ಕೆ ಹದಿನಾರು ಬಾಗಿಲು (ಲ ಗೌ ೯೬೬)
ದರಗಿನ ಜಲ್ಲೆ

ಕೆರೆಲುಟ್ಟು ಬರ್‌ಬರ್‌ನೆ ಬಂತು
ಸೆಟ್ಟಿ ಕಾಣ್ತು ಪಟ್ನಕೋಯ್ತು
ನನ್ನ ಕಾಣ್ತು ನನ್ನೊಂದ್ಗೆ ಬಂತು (ಮಂ ೨.೧–೧೫)

ನಾ ಮೂರಕಸಾರ ಗಿಡಾ ವಾಸದ್ದು
ಮದಲ್ನೇದ್ದು ಕಡಿದು ಎಡ್ಡಕಸಾರ
ಕೂಡ್ಸಿದ್ರು ಪಶು ಅಂತ ಅರತಾ
ಎಡ್ಡನೇದ್ದು ಮೂರನೇದ್ದು ಕೂಡ್ಸಿದ್ರ
ತ್ವಾಟಂತ ಅರತಾಗ್ತದ ಅಂದ್ರ
ನಾ ಯಾರು (ಲಠ್ಠೆ ಭಾಗ ೫–೧೯೦)

ಸುತ್ತ ಮುತ್ತ ಬೇಲಿ ಕಟ್ಟಿ ಸೊಳ್ಳೆಯಂಥ ಬೀಜ ಬಿತ್ತಿ
ಮಾರೋರುಂಟು ಮುಡಿಯೋರುಂಟು ತಿನ್ನೋರಿಲ್ಲ (ಲ ಗೌ ೯೫೩)
ದವನ

ಉದ್ದ ಮರ ನೆಳ್ಳಿಲ್ಲ (ಲಠ್ಠೆ ಭಾಗ ೫–೭೦)
ದಾರ

ಅತ್ತಿ ಮನಿಗಿ ಅಳ್ಯಾ ಏನ ಹಿಡಕೊಂಡ ಹೋಗ್ತಾನು (ಲಠ್ಠೆ ಭಾಗ ೫–೧೭)

ಅತ್ತೀ ಮನಿಗೆ ಅಳಿಯಾ ಹೊಂಟ
ಏನು ಹಿಡಕೊಂಡ ಹೊಂಟ (ಇ ೯೫)

ಅಪ್‌ತಂದ್ ಹಗ್ಗಾ ಸುತ್‌ದಷ್ಟೂ ತೀರ್ತಿಲ್ಲೆ (ಶಾಂ ನಾ ೩೪೪)

ಅಪ್ಪನದೈತಿ ಭಾರೀ ರುಮಾಲು
ಇಪ್ಪತ್ತು ಜನಾನು ಮಡಚಲಾದ್ರು
ಯಾರೂ ತಲೆಗೆ ಸುತ್ತಲಾರ್ರು (ಇ ೧೦೪)

ಒಂದ ರುಮಾಲ
ನಮ್ಮಪ್ಪನೂ ಸುತ್ತಲಾರ
ನಿಮ್ಮಪ್ಪನೂ ಸುತ್ತಲಾರ (ಲಠ್ಠೆ ಭಾಗ ೫–೧೦೦)

ಉದ್ದನೆ ಮರಕ್ಕೆ ನೆರಳಿಲ್ಲ (ರಾ ಗೌ ೧೦೦)

ಉದ್ದನ್ನ ಮರಕ್ಕ ನೆರಳಿಲ್ಲ (ವಾಲಿ ೧–೨೩)

ಊರೂರೆಲ್ಲಾ ಇರ್ತಾ ಬಿದ್ದಲ್ಲೇ ಬೀಳ್ತಾ ಪೆದ್ದೇತಾಳಾ (ಶಾಂ ನಾ ೩೪೫)

ನನಜ್ಜಾ ವಂದ್ಮೊಗೆಬಳ್ಳಿ ನೆಟ್ಟಿದ್ದಾ
ಅದು ಹಬಬ್ತಾ ಹೋಗ್ತು (ಶಾಂ ನಾ ೩೪೬)

ನನ್ನಜ್ಜಿ ಸೀರೆ ನೆರಿ ಹೋಯ್ಯಲೇ ಬತ್ತಿಲ್ಲೆ (ಶಾಂ ನಾ ೩೪೩)

ದಾರಿ

ಅತ್ತೆ ಮನೆಗೆ ಅಳಿಯ ಹೋಗುವಾಗ
ಏನು ಹಿಡಕೊಂಡು ಹೋಯ್ತಾನೆ? (ಲ ಗೌ ೪೮)

ಅಪ್ಪನ ರುಮಾಲು
ಹತ್ತುಜನ ಸುತ್ತಲಾರ್ರು (ಜೀಶಂಪ ೫೧)

ಅಪ್ಪನ ಮಾಲು ರುಮಾಲು
ಎಪ್ಪತ್ತು ಜನ ಬಂದ್ರೂ ಎತ್ತಲಾರದು
ಯಾರೇ ಬರಲಿ ಏನೇ ಆಗಲಿ
ಅಪ್ಪನ ತಲೆಗೆ ಸುತ್ತಲಾರರು (ಲ ಗೌ ೫೮)

ಇಲ್ಲಿ ಬಿಟ್ಟ ಬಾಣ
ಬಿಲ್ಲೂರಿಗೆ ಹೋಗುತ್ತೆ (ನಾ ಗೌ ೫೨)

ಊರಿಂದ ಊರಿಗೆ ಹೋಗ್ತಿದ್ದರೂ
ಇದ್ದಲ್ಲಿ ಬಿದ್ದಿರ್ತಾನೆ ಉದ್ದ ಬೇತಾಳ (ಸು ೧೦೮)

ಊರಿಂದ ಊರಿಗೆ ಹೋದರೂ
ಬಿದ್ದಲ್ಲಿಂದ ಎದ್ದು ಬರಲಾರೆ (ಇ ೨೨೪)

ಒಂದ ರುಮಾಲು
ನಮ್ಮಪ್ಪನೂ ಸುತ್ತಲಾರ
ನಿಮ್ಮಪ್ಪನೂ ಸುತ್ತಲಾರ (ಇ ೨೮೯)

ನೆಟ್ಟನ್ನ ಗಿಡಕ್ಕ ನೆರಳಿಲ್ಲ (ಇ ೬೮೧)

ನೆಟ್ಟಮರಕ್ಕೆ ನೆರಳಿಲ್ಲ (ಜೀಶಂಪ ೧೯೨)

ನೆಟ್ಟಂದೋಳಿಗೆ ನೆರಳೇ ಇಲ್ಲ (ಸು ೩೪೭)

ಪೆಂಟೆ ಬಿದ್ದಿದೆ ಮೂಡೆ ಸುತ್ತೋಕೆ ಆಗಲ್ಲ (ಸು ೩೫೬)

ಭಟ್ಟ ಸುಟ್ಟರೂ ಭಟ್ಟನ
ಜನಿವಾರ ಸುಡುವದಿಲ್ಲ (ಇ ೭೯೧)

ಹದಿನಾರು ಮೊಳದ ಜೋತ್ರಾನ
ನಮ್ಮಪ್ಪನೂ ಸುತ್ತಲಾರ
ನಿಮ್ಮಪ್ಪನೂ ಸುತ್ತಲಾರ (ನಾ ಗೌ ೨೨೭)
ದಾರಿ

ಉಂದ್ಮುಂಡಾಸು ಅಪ್ಪ ಕೋಡೊ ಸುತ್ತಾಕಾಗಾದಲ್ಲಾ
ಮಗ್ನ ಕೋಡೂ ಸುತ್ತಾಕಾಗೂದಲ್ಲಾ (ಶಾಂ ನಾ ೩೪೮)
ದಾರಿ (ಹಾದೆ)

ಇಡಿ ಉರ್ಸು ಟ್ರುವಾ ಬಟ್ನ ಜನ್ನವ್ರೆ ಸುಡ್ತಿಲ್ಲೆ (ಶಾಂ ನಾ ೩೪೭)
ದಾರಿ–ಬೆಟ್ಟದ್ದು

ಒಂದು ರುಮಾಲು
ನಮ್ಮಪ್ಪನೂ ಸುತ್ತಲಾರ
ನಿಮ್ಮಪ್ಪನೂ ಸುತ್ತಲಾರ (ಜೀಶಂಪ ೯೨)
ದಾರಿ, ಮನುಷ್ಯ, ಚಪ್ಪಲಿ

ನೆಟ್ಟ ಮರಕ್ಕ ನೆರಳಿಲ್ಲ (ಲತ್ಯೆ ಭಾಗ ೫–೧೯೬)
ದಾರಿ, ಹಾದಿ

ಹಗಲ ಬೀಳ್ತದ ರಾತ್ರಿ ಏಳ್ತದ (ಲತ್ಯೆ ಭಾಗ ೫–೨೯೨)
ದಾವಣಿ

ದುಗ್ಗ–ದುಗ್ಗನ ಹೆಂಡತಿ
ದಾಸ–ದಾಸನ ತಂಗಿ
ಇರೋದು ಮೂರು ರೊಟ್ಟಿ
ಮುರಿಯದೆ ಹಂಚಿ (ಲ ಗೌ ೬೩೨)
ದಾಸನ ತಂಗಿಯೇ ದುಗ್ಗನ ಹೆಂಡತಿ

ತಾಮ್ರದ ಚೆಂಬಿನ ತುಂಬ ನವರತ್ನ (ಚಂ ಸೆ ೧೩೫)

ಬೆಳ್ದಂಗೂ ಬಾಯ್ಬಿಡ್ತು (ಶಾಂ ನಾ ೧೯೩)

ಹಸುರು ಮೊಟ್ಟೆಯಲ್ಲಿ ಕೆಂಪು ಮರಿಗಳು (ಚಂ ಸೆ ೨೪೨)
ದಾಳಿಂಬ

ತತ್ತಾಗಿಂಡಿ
ತಾರಾಗಿಂಡಿ
ಕೆತ್ತಿಸಿ ನೋಡಿದರೆ
ಮುತ್ತಿನ ಗಿಂಡಿ (ಇ ೫೬೭)
ದಾಳಿಂಬ ಹಣ್ಣು

ಇಟೇಟ ಗಡಗಿ ಗಡಗಿ ತುಂಬಾ ವಜ್ರ (ಇ ೧೮೩)
ದಾಳಿಂಬದ ಹಣ್ಣು

ಬಿಂದಿಗಿ ತುಂಬ ರತ್ನ ತುಂಬ್ಯಾವ
ಒಡವಿಗೆ ಮಾತ್ರ ಬರೂದಿಲ್ಲ (ಇ ೭೮೬)
ದಾಳಿಂಬರ

ಮೇಲೆ ಕನಕನ ಕೋಟೆ
ಒಳಗೆ ರತ್ನದ ಹರಳು (ಇ ೮೮೦)
ದಾಳಿಂಬರ ಹಣ್ಣು

ತತಾರ ಗಿಂಡಿ
ತಾರಿ ಗಿಂಡಿ
ಮುಚ್ಚಳಾ ತಗದರ
ಮುನ್ನೂರ ಗಿಂಡಿ (ಲಠ್ಠೆ ಭಾಗ ೪–೧೦೭)
ದಾಳಿಂಬಿ ಹಣ್ಣ

ತಾತಾ ಗಿಂಡಿ
ತಾಮ್ರದ ಗಿಂಡಿ
ಕೆತ್ತಿಸಿ ನೋಡಿದ್ರ
ಮುತ್ತಿನ ಗಿಂಡಿ (ಲಠ್ಠೆ ಭಾಗ ೪–೧೧೦)
ದಾಳಿಂಬ್ರಿ ಕಾಯಿ

ಅಕಬಕ ಇಕಬರ
ತುರುಬಿನ ಚಿನ್ನಕ್ಕ
ಬಾಯಿನೀರು ಬಕಬಕ (ಜೀಶಂಪ ೨೧)

ಅಕಬಕ ಇಕಬಕ
ತುರುಬಿನ ಚೆನ್ನಕ್ಕ
ಬಾಯಿನೀರು ಬಕಬಕ (ಜೀಶಂಪ ೨೬)

ಅಂಬಾರದಾಗಾಡೋಳೆ
ಜಂತದ ಸೀರೋಳೆ
ಜನ ಕಂಡು ಹಲ್‌ಕಿರಿಯೋಳೆ (ಸು ೭೨)

ಒಂದೇಕಾಯಿ ಹೊಡೆದರೆ
ಒಂಭೈನೂರು ತೊಂಭೈನೂರು (ಜೀಶಂಪ ೯೦)

ತಡಕೊಳ್ಳಾರದವಳು
ಒಡಕೊಂಡ್ಲು (ಜೀಶಂಪ ೧೬೬)

ತತಾರೆ ಗಿಂಡಿ
ತಾರೆಗಿಂಡಿ
ಮುಚ್ಚಳ ತೆಗೆದರೆ
ಮುನ್ನೂರುಗಿಂಡಿ (ಜೀಶಂಪ ೧೬೫)

ನುಚ್ಚು ನುಚ್ಚು ಅಂಗಡಿ
ನೂರೊಂದು ಅಂಗಡಿ
ಪಚ್ಚೆ ಪಚ್ಚೆ ಅಂಗಡಿ
ಪಾಳೆಯದ ಅಂಗಡಿ
ಎತ್ತ ನೋಡಿದ್ರೂ ಒಂದೇ ಅಂಗಡಿ (ಜೀಶಂಪ ೧೯೧)

ಹಸುರ್ ಮನೆ ತುಂಬ
ಮುತ್ತಿನ ಮಕ್ಕಳು
ಅವೆಲ್ಲ ಯಾವಾಗಲೂ ಒಟ್ಟಾಗಿರ್ತವೆ (ಜೀಶಂಪ ೨೬೮)

ಅಕ್ಕರಕ್ಕ ಬಕ್ಕರಕ್ಕ
ತುರುಬಿನ ಚಿನ್ನಕ್ಕ
ನಿನ್ನ ನೆನುಕೊಂಡರೆ
ಬಾಯ್ನೀರು ಬಕ ಬಕ (ನಾ ಗೌ ೮)

ಆಹಾ ಆಹಾ ಗಿಂಡಿ! ಅಮೃತ ತುಂಬಿದ ಗಿಂಡಿ!
ಕೆತ್ತಿ ನೋಡಿದರೆ ಮುತ್ತು ಮುತ್ತಿನ ಗಿಂಡಿ! (ಲ ಗೌ ೧೬೨)

ಒಳಕೋಟೆ ಹೊರಕೋಟೆ ಕೋಟೆ ತಾನಲ್ಲ
ಒಳಪಟ್ಲ ಹೊರಪಟ್ಲ ಪಟ್ಲ ತಾನಲ್ಲ
ಮಧ್ಯ ಹರಳುಂಟು ಮಾಣಿಕ್ಯ ತಾನಲ್ಲ
ಹೇಳಬಲ್ಲ ಜಾಣರಿಗೆ ಒಂದುಂಡೆ ಬೆಲ್ಲ (ಇ ೩೧೦)

ಅಂಚೇರ್ ಗಿಂಡಿ ಪಂಚೇರ್ ಗಿಂಡಿ
ಕೆತ್ತಿಸಿ ನೋಡಿದರ ಮುತ್ತಿನ ಗಿಂಡಿ (ಲ ಗೌ ೧೧೩)

ಅಂತರದಲ್ಲಿರುವಾಕಿ
ಬಣ್ಣದ ಸೀರಿ ಉಟ್ಟಾ್ಯಕಿ
ಮಂದಿನ ಕಂಡು ಹಲ್ಲು ಕಿಸಿವಾಕಿ (ವಾಲಿ ೨–೮೬)

ಒಂದಡಕೆ ಒಡೆದರೆ ಇನ್ನೂರು ಮುನ್ನೂರು ನಾನೂರು ನರಸೀಪುರ
ಅರ್ಜುನಹಳ್ಳಿ ಬಿರ್ಜನಹಳ್ಳಿ
ಒಡೆದರೆ ಒಡೀಬಹುದು
ಒಡೀದಿದ್ರೆ ರಾಜಪ್ಪನ ಹಟ್ಟಿ ಕರ ಕಾಯಬಹುದು (ಲ ಗೌ ೩೨೮)

ಒಂದು ಒಡೆದರೆ ಒಂಬೈನೂರು ತೊಂಬೈನೂರು
ನಾನೂರು ಕೋಟಿ ನರಸೀಪುರ
ಹೇಳಿದಂಥ ಜಾಣನಿಗೆ
ಮಲಗಲು ಮಂಚ ಕೈಗೆ ಹತ್ತು ಹಣ (ಲ ಗೌ ೩೧೬)

ಚಿಕ್ಕ ಪ್ರಾಯದ ಬಾಲೆ
ತರವಲ್ಲ ನೀರೆ
ನಕ್ಕರೆ ಒಂದ್ಹಲ್ಲು
ಉದುರುವಳು ನೀರೆ (ರಾ ಗೌ ೬)

ಬಿಂದಿಗೆ ತುಂಬಾ ರತ್ನ ತುಂಬಿದೆ
ಒಡವೆಗೆ ಮಾತ್ರ ಒಂದೂ ಬರದು (ಲ ಗೌ ೭೭೭)

ಭರಣಿ ಭರಣಿ ಎಂಥ ಭರಣಿ
ಮುತ್ತು ರತ್ನ ತುಂಬಿದ ಭರಣಿ (ಲ ಗೌ ೮೦೧)
ದಾಳಿಂಬೆ ಹಣ್ಣು

ಹಗ್ಲಿಡೀ ಮಲಕತ್ತು ರಾತ್ರಿಡೀ ಯುದ್ಗತ್ತು (ಶಾಂ ನಾ ೩೪೯)
ದಾಂಬು

ಕಣ್ಣಿಗೆ ಸಮೀಪ ಕಾಲಿಗೆ ದೂರ (ವಾಲಿ ೧– ೭)
ದಿಗಂತ ಇಲ್ಲವೆ ಬೆಟ್ಟ

ಅಕ್ಕಕ್ಕ ಭಾವಿ ನೋಡ
ಭಾವಿಯೊಳಗಿನ ನೀರ ನೋಡ
ನೀರೊಳಗಿನ ಬಳ್ಳಿ ನೋಡ
ಬಳ್ಳಿಗೊಂದ ಹೂ ನೋಡ (ಲಠ್ಠೆ ಭಾಗ ೨–೧)

ಅಕ್ಕಾ ಅಕ್ಕಾ ಬಾವೀ ನೋಡು
ಬಾವಿಯೊಳ್ಗೆ ನೀರ್ನೋಡು
ನೀರಿನೊಳ್ಗೆ ಹಗ್ಗಾನೋಡು
ಹಗ್ಗಕ್ಕಾದಾ ಹೂಗ್ ನೋಡ
(ಹಗ್ಗಕ್ವಂದ್ ಹೊಡೆ ನೋಡು) (ಶಾಂ ನಾ ೩೫೫)

ಅಡ್ಡಗೋಡೆಯ ಮೇಲೆ
ಸೊಡ್ಡು ಹಾಕಿಕೊಂಡು ಕೂತಿದೆ (ಲ ಗೌ ೩೮)

ಆಡ್ ಗೋಡೆ ಮೇಲೆ ದುಡ್ ಕೊಣಿತು (ಶಾಂ ನಾ ೩೫೦)

ಆರುತಿರುವಾಗ ಕಪ್ಪುಂಟು ಕೃಷ್ಣನಲ್ಲ
ಹತ್ತುತಿರುವಾಗ ಕೆಂಪುಂಟು ರಾವಣನಲ್ಲ
ಹಾಗಾದರೆ ನಾನು ಯಾರು (ಇ ೧೭೯)

ಈಟೀಟ ಗುಂಡ
ಗುಂಡಾಗ ನೀರ
ನೀರಾಗ ಬೇರ
ಬೇರಾಗ ಬೆಂಕಿ (ಲಠ್ಠೆ ಭಾಗ ೨–೧೩)

ಎತ್ತು ಬಿದ್ದಿದೆ ಮೂಗರಣೆ ಮೆಯ್ತದೆ (ಲ ಗೌ ೨೨೦)

ಏರಿ ಮೇಲೆ ಒಂದು ಜೀರಿಗೆ ಮರ ಹುಟ್ಟಿ
ನೀರ್ನೂ ಕುಡಿತದೆ ಬೇರ್ನೂ ತಿನ್ನುತ್ತೆ (ಜೀಶಂಪ ೮೧)

ಏರಿ ಮ್ಯಾಲ ಜೀರಿಗಿ ಮರ
ಮರಕ ಕೆಂಪು ಬಾಯಿ
ನೀರೂ ಕುಡಿದು ಬೇರನ್ನೂ ತಿಂತೈತಿ (ಇ ೨೫೮)

ಏಳೇಳು ಗೆಳತಿಯರು ಸಾಲಾಗಿ ಮಲಗಿದ್ದು
ಒಟ್ಟಿಗೆ ಉಸಿರಾಟ ಮಾಡುತ್ತಲಿರುವಾಗ
ಮುಟ್ಟಿದರೆ ಹೇಳುವೆವು ನಮ್ಮಮ್ಮ ನಾಮ
ಒಂದೊಂದು ಹೆಸರಿರುವ ನಾವಾರೊ ಕಾಮಾ (ಇ ೨೬೧)

ಅಂಗಯ್ನಂತಾ ಗೆದ್ದೆ ಮುಂಗಯ್ನಂತಾ ಹಾಳೆ
ಹಾಳೆಮೇಲೆ ಹಕ್ಕಿ ಕುಳ್ತ್ಂಡು ನಾಲ್ಗೆ ಸೆಳೆತು (ಶಾಂ ನಾ ೩೫೪)

ಅಂಗೈ ಅಗಲ ಹೊಲ
ಮುಂಗೈ ಅಗಲ ಬದ
ಹಿಂಗಿದಂಗೆ ಹಿಂಗಿದಂತೆ ನೀರು ಬಿಡ್ತಾ ಇರಬೇಕು (ಲ ಗೌ ೧೦೭)

ಅಂಗೈದಗಲ ಗದ್ದಿ
ಗದ್ದಿಯೊಳಗ ನೀರ
ನೀರೊಳಗ ಬೇರ
ಬೇರ ತುದಿಗಿ ಬೆಂಕಿ (ಲಠೈ ಭಾಗ ೨–೫)

ಅಂಗೈನಗ್ಲ ಗದ್ದೆ
ಗದ್ದೆಗೆ ನೀರು
ನೀರಿಗೆ ಬೆಂಕಿ (ಮಂ ೧.೫–೧)

ಅಂಗೈಯಗಲ ಗದ್ದೆ
ಸೆರಿಂಜೆ ನೀರು
ತುದೀಲಿ ಉರಿ (ರಾ ಗೌ ೫೯)

ಅಂಗೈಯಗಲದ ಗದ್ದೆ
ಗದ್ದೆಗೆ ನೀರು ಬೇರಿಗೆ ಬೆಂಕಿ (ಚಂ ಸೆ ೩೧)

ಅಂಗ್ಯೆಯಾಗ ನೀರು
ನೀರಿನ್ಯಾಗ ಬೇರು
ಬೇರಿನಾಗ ಬೆಂಕಿ
ಬೆಂಕ್ಯಾಗ ನಿಂತಿ ಇಲದಿದ್ರ ಕುಂತಿ (ಇ ೩೯)

ಒಂದ ಕಾಲಿನ ಹಕ್ಕಿ
ನೀರಾಗ ನಿಂತದ
ಬಾಯಾಗ ಬೆಂಕಿ ಹಿಡದದ (ಲಠ್ಠೆ ಭಾಗ ೨–೧೮)

ಒಂದ ಗಿಡಕ ಒಂದೇ ಕುಡಿ (ಇ ೨೮೨)

ಒಂದು ಕೆರೇಲೊಂದು ಹೆಬ್ಬಾವು
ಬಾಲ ನೀರು ಹೀರುತ್ತೆ
ತಲೆ ಸುಟ್ಟು ಹೋಗುತ್ತೆ (ಲ ಗೌ ೩೫೦)

ಒಂದು ಬತ್ತಿ
ಮನೆಯೆಲ್ಲಾ ಬೆಳಕು (ರಾ ಗೌ ೧೪೭)

ಒಂದೇ ಒಂದಾದರೂ ಮನೆಯೆಲ್ಲ ತುಂಬಿಸುತ್ತೆ (ಚಂ ಸೆ ೬೯)

ಕೆಮ್ಮಣ್ಣು ಗುಂಡೀಲಿ ತಮ್ಮಣ್ಣ ಕೂತುಗೊಂಡು
ಬೇರ ತಿಂತಾನ ನೀರ ಕುಡೀತಾನ (ಲ ಗೌ ೪೬೬)

ಕೆರೆ ಬಡ್ಡೆ ಒಂದು ಮಾವಿನ ಮರ
ನೀರ ಕುಡೀತದೆ ಬೇರ ತಿನ್ನುತ್ತದೆ (ಲ ಗೌ ೪೭೩)

ಕೆರೆ ಮೇಲೆ ಒಂದು ಗಣೆ
ಗಣೆ ಮೇಲೆ ಒಂದು ಗಿಣಿ
ಕೆರೆ ನೀರು ಬತ್ತಿತು ಗಿಣಿ ಹಾರಿತು
ಕೆರೆ ನೀರು ಬತ್ತಲಿಲ್ಲ ಗಿಣಿ ಹಾರಲಿಲ್ಲ (ಲ ಗೌ ೪೭೧)

ಕೊಕ್ಕನಕ್ಕಿ ಕೂರ್ತು ಕೆರೆ ನೀರ್ ಆರ್ತು (ಶಾಂ ನಾ ೩೫೧)

ಕೊಕ್ರೆ ಕೂರುತ್ತೆ
ಕೆರೆ ನೀರಾಗುತ್ತೆ (ನಾ ಗೌ ೧೦೧)

ಕಾಂತಾಮಣಿ ಎಂಬ ಪಕ್ಷಿ
ಚಿಂತಾಮಣಿ ಎಂಬ ಕೆರೆ
ಕೆರೆಯಲ್ಲಿ ನೀರಿಲ್ಲೆ ಹೋದ್ರೆ
ಪಕ್ಷಿಗೆ ಮರಣ (ರಾ ಗೌ ೧೯೪)

ಗೂಡಲ್ಲಿ ಕೂತುಗೊಂಡು ಕೆಂಪಗೆ ಕೋಪ ಕಾರ್ತದೆ (ಲ ಗೌ ೫೨೮)

ಚಿಟಗುಬ್ಬಿ ಮಠ ಕಾಯ್ತದ (ಲಠೈ ಭಾಗ ೨–೩೮)

ಚಿನ್ನದ ಹಕ್ಕಿ ಬಾಲದಲ್ಲಿ ನೀರು ಕುಡೀತದೆ (ಲ ಗೌ ೫೫೧)

ಚಿನ್ನದ ಹಕ್ಕಿ ಬಾಲಿಲ್ಲೆ ನೀರು ಕುಡಿಯುತ್ತದೆ (ಇ ೫೩೨)

ಚಿನ್ಹಂತಾ ಹಕ್ಕಿ ಬಾಲ್ದಲ್ಲಿ ನೀರ್ ಕೊಡಿತು (ಶಾಂ ನಾ ೩೫೩)
ಚಿಲಿಪಿಲಿ ಎನ್ನುವ ಹಕ್ಕಿ ಇದೆ
ಚಿಂತಾಮಣಿ ಎಂಬ ಕೆರೆ
ಕೆರೆನೀರು ಬತ್ತಿದೊಡೆ
ಹಕ್ಕಿಯ ಕಣ್ಣು ಕಪ್ಪು ತೆರೆ (ಇ ೫೩೭)

ತಳದಲ್ಲಿ ನೀರು ಮೇಲೆ ಪೈರು (ಲ ಗೌ ೫೯೦)

ತಳೆದಾಗ ನೀರಾ
ಮ್ಯಾಗ ಪೈರಾ (ಲಠೈ ಭಾಗ ೨–೪೧)

ನಿಮ್ಮಪ್ಪಾವ್ರು ಕೊಸ್ತ್ರು
ನಿಮ್ಮವ್ವಾವ್ರು ಎಸ್ತ್ರು (ಮಂ ೧.೫–೬೯)

ನೀರಲ್ಲಿ ಬೇರು ಗಿರಿಯಲ್ಲಿ ಹೂವು (ಲ ಗೌ ೬೮೮)

ನೀರಾರದ ಕೆರೇಲಿ ನೀರಾರಿದರೆ
ರಾಮನೆಂಬ ಪಕ್ಷಿಗೆ ಮರಣ (ಲ ಗೌ ೬೯೧)

ನೀರ್ನಲ್ಲಿ ಒಂದು ನೀರಂಜಿ ಮರ ಅದೆ
ನೀರ್ ಕುಡಿತದೆ ಬೇರ್ ತಿನ್ತದೆ (ನಾ ಗೌ ೧೬೨)

ಬಾವಿಲಿ ನೀರು ನೀರಲಿ ಬೇರು ಬೇರಿಗೆ ಬೆಂಕಿ (ಶಾಂ ನಾ ೩೫೨)

ಬಂಗಾರ ಗುಬ್ಬಿ
ಬಾಲ್ಲೆ ನೀರ ಕುಡಿತದ (ಲಠ್ಠೆ ಭಾಗ ೨–೫೪)

ಬಂಗಾರದ ಗಿಣಿ
ಬಾಲದಲ್ಲೇ ನೀರು ಕುಡಿತೈತಿ (ಇ ೭೭೭)

ಮಕ್ಕಿ ಗದ್ದೆ ನೀರು ತಪ್ಪು ಹಕ್ಕಿ ಜೀವ ಹಾರ್ತು (ಲ ಗೌ ೮೦೮)

ಮಾಡಿ ಮೇಲಿನ ಮೆಣಸಿನ ಗಿಡ ನೀರಿಲ್ಲದೆ ಬತ್ತಿ ಹೋಯಿತು (ಲ ಗೌ ೮೩೪)
ವರತಿ
ವರತಿ ಮ್ಯಾಗ ಬೇರ
ಬೇರಿನ ಮ್ಯಾಗ ಬೆಳಕು (ಇ ೯೧೬)

ಸಮುದ್ರದಲ್ಲಿ ಕುಂಬಳ ನೀರಿಲ್ಲದೆ ಸತ್ತುಹೋಯ್ತು (ಲ ಗೌ ೯೧೫)

ಹದಿನಾರಂಕಣಕ್ಕೆ ಒಬ್ಬನೇ ಕೊಮಾರ (ಲ ಗೌ ೯೯೦)

ಹಾಲ ಸಮುದ್ರದ ಏರಿ ಮೇಲೆ
ಹೊಕ್ಕಿನ ಗಿಣಿ ಕೂತುಕೊಂಡು
ಎಷ್ಟು ನೀರು ಬಂದರೂ ಸಾಲದು (ಲ ಗೌ ೧೦೪೪೪)

ಹಿಡದರ ಹಿಡಿ ತುಂಬಾ
ಬಿಟ್ಟರ ಮನಿ ತುಂಬಾ (ವಾಲಿ ೩–೧೯)

ಹಿಡಿದರೆ ಹಿಡಿ ತುಂಬ
ಬಿಟ್ಟರೆ ಮನೆ ತುಂಬ (ಜೀಶಂಪ ೨೮೪)

ರಾಯರ ಬಾವಿ ಆರಿದಾಗ
ಹಳದಿಯ ಹಕ್ಕಿ ಹಾರುತ್ತೆ (ಚಂ ಸೆ ೨೧೫)
ದೀಪ

ಕೆರೆತುಂಬಿದೆ
ಹಾವು ಮಲಗಿದೆ
ಗಿಣಿಕೂತಿದೆ
ಕೆರೆಬತ್ತೋಯ್ತು
ಹಾವು ಸತ್ತೋಯ್ತು (ಜೀಶಂಪ ೧೩೩)
ದೀಪ ಉರಿದು ಆರುವುದು

ನೀರೊಳಗ ಒಂದ ಮರಾ
ನೀರೂ ಕುಡಿತತಿ
ಬೇರೂ ತಿಂತತಿ (ಲಠ್ಠೆ ಭಾಗ ೨–೪೬)
ದೀಪದ

ಈಟ ಪಾರ ಕರಿಟೋಪಿ ಹಾಕೇತಿ (ಲಠ್ಠೆ ಭಾಗ ೨–೧೪)

ಬಿಳಿ ಹುಡುಗ
ಕರಿ ಟೋಪಿ ಹಾಕಿದಾನ (ಲಠ್ಠೆ ಭಾಗ ೫–೨೨೩)

ಬಿಳಿಯ ಜವಾನರಿಗೆ ಕರಿಯ ಮುಂಡಾಸುಗಳು (ವಾಲಿ ೩–೨೦)

ಹುಟ್ಟುತಲೆ ಹಸಿರುಂಟು ಪಚ್ಚೆ ತಾನಲ್ಲ
ಬೆಳೆಯುತಲೆ ಕೆಂಪುಂಟು ರತ್ನ ತಾನಲ್ಲ
ಕಟ್ಟಕಡೆಯಲಿ ಕಪ್ಪು ಕಸ್ತೂರಿಯಲ್ಲ
ಸೃಷ್ಟಿಸಿದ ಗೋಪಾಲ ತಾನೊಬ್ಬ ಬಲ್ಲ (ಇ ೧೦೮೫೫)
ದೀಪದ ಕಡ್ಡಿ

ಇಷ್ಟೊಪ್ಪ ಚಿನ್ನ
ಮನೆಯಲ್ಲ ರನ್ನ (ರಾ ಗೌ ೮೬)
ದೀಪದ ಕಡ್ಡಿ (ಬೆಂಕಿಕಡ್ಡಿ)

ನೀರ್ನಲ್ಲಿ ಒಂದು ಮರಹುಟ್ಟಿ
ನೀರ್ನೂ ಕುಡೀತದೆ
ಬೇರ್ನೂ ತಿಂತಾದೆ (ಜೀಶಂಪ ೧೯೦)
ದೀಪದ ಕುಡಿ

ಕೊಕ್ಕಿನಲ್ಲಿ ಮುತ್ತು ಕಚ್ಚಿಕೊಂಡು
ಬಾಲದಲಿ ನೀರು ಕುಡೀತದೆ (ಸು ೨೩೮)

ಬಂಗಾರದ ಹಕ್ಕಿ
ಕೊಕ್ಕಿನಲ್ಲಿ ಮುತ್ತು ಕಚ್ಚೊಂಡು
ಬಾಲದಲ್ಲಿ ನೀರು ಕುಡೀತದೆ (ಸು ೩೬೨)
ದೀಪದ ಕುಡಿ, ಬತ್ತಿ

ಏರಿ ಮ್ಯಾಲ ಜೀರಗಿ ಮರ ಹುಟ್ಟಿ
ನೀರ ಕುಡಿದು ಬೇರು ತಿನ್ನುತ್ತದೆ (ವಾಲಿ ೩–೭೫)
ದೀಪದ ಚಿಮಣಿ

ಕತ್ತಲೆಯ ಮನೆಯಲ್ಲಿ ಚಿನ್ನ ಅದರ ಸುತ್ತ ರನ್ನ (ಲ ಗೌ ೩೭೭)
ದೀಪ–ಬತ್ತಿ

ಚಿನ್ನದ ಗಿಣಿ ಬಾಲ್ದಲ್ಲಿ ನೀರು ಕುಡಿಯುತ್ತೆ (ಜೀ ಶಂಪ ೧೫೪೪)
ದೀಪದ ಬತ್ತಿ

ಬಿಟ್ಟರೆ ಮನೆ ತುಂಬಾ (ಚಂ ಸೆ ೨೫೨)
ಹಿಡಿದರೆ ಹಿಡಿ ತುಂಬಾ

ಹಿಡಿದ್ರ ಹಿಡಿತುಂಬ ಬಿಟ್ರ ಮನಿ ತುಂಬ (ಇ ೧೦೭೭)
ದೀಪದ ಬೆಳಕು

ಹಿಡಿದರೆ ಹಿಡಿ ತುಂಬ
ಬಿಟ್ಟರೆ ಮನೆ ತುಂಬ (ಸು ೫೧೮)
ದೀಪದ ಬೆಳಕು

ಕರಿಯ ಹುಡುಗನನ್ನು ಮುಟ್ಟಿದರೆ
ಬಿಳೀ ಹುಡುಗಿ ಮನೆ ಬೆಳಗುತ್ತಾಳೆ (ಲ ಗೌ ೪೧೨)
ದೀಪದ ಸ್ವಿಚ್

ಚಿಂತಾಮಣಿ ಎನ್ನುವ ಕೆರೆ
ದಾನ ಮಣಿ ಎನ್ನುವ ಪಕ್ಷಿ
ಕೆರೆಯಲ್ಲಿಯ ನೀರು ತೀರಿದರೆ
ಪಕ್ಷಿಯ ಮರಣ (ವಾಲಿ ೩–೫೧)
ದೀಪದ ಹಣತೆ

ಸಾರಿ ಬಂದಾದೆ ಸಣ್ಣ ಸಾವಂತಿಗೆ ಹೂವ್ಗೆ
ಊರಿಗೆ ಬಂದಾದೆ ದೊಡ್ಡ ಹಬ್ಬ
ಕೋಳಿ ಕೂಗೋ ಹೊತ್ತಿಗೆ ಬಂದಾದೆ
ಪುಟ್ಟ ಕುಂಬಳಕಾಯ್ಗೆ
ಸಾರಿಸು ಸಗಣಿ ಹಾಕು
ಸಣ್ಣ ಸಾವಂತಿಗೆ ಮುಡಿಸು ಅಂತದೆ (ರಾ ಗೌ ೪೪೫)
ದೀಪಾವಳಿ

ಒಂದು ಕಡಜ ಕೂದ್ರೆ
ಕೈತುಂಬ ಬಾಡು (ರಾ ಗೌ ೧೪೧)
ದುಡ್ಡು

ಎಡ್ಯಾಗ ಎಡಿ ಯಾವ ಎಡಿ (ಲಠ್ಠೆ ಭಾಗ ೫–೪೦)
ದೇವರ ಎಡಿ

ಮನ್ಯಾಗ ಮನಿ ಯಾವ ಮನಿ (ಲಠ್ಠೆ ಭಾಗ ೫–೨೩೬)
ದೇವರ ಮನಿ

ಅಡಿ ಕಂಬ ನಡು ಮಡಕೆ ಕಡೆ ಕುಡಿಕೆ ಮೇಲೆ ಹುಲ್ಲು (ಚಂ ಸೆ ೯)

ಬಡಗಿ ಮಾಡದ ಮನೆ
ಅಂಬರದ ನನ್ನರಮನೆ (ಇ ೭೧೪)

ಬಂದಿಹೆನು ನಾನೊಮ್ಮೆ
ಬಂದು ಹೋಗುವೆನೊಮ್ಮೆ
ಬಂದೊಮ್ಮೆ ಹೋಗಿ ಬರಲಾರೆ (ಇ ೭೮೫)
ದೇಹ

ನಿನ್ನ ಊರ ಮುಂದೆ ಹೊನ್ನಳ್ಳಿ ಮರ
ಅದರೊಳಗೊಂದು ಗಿಣಿ
ಆರು ತಿಂಗಳಿಗೆ ಹೇಳಿದೋನಿಗೆ ಹಸಕರ
ಮೂರು ತಿಂಗಳಿಗೆ ಹೇಳಿದೋನಿಗೆ ಮುದ್ರೆ ಉಂಗುರ
ತಕ್ಷಣ ಹೇಳಿದೋನಿಗೆ
ಮಗಳ ಕೊಟ್ಟು ಮದುವೆ ಮಾಡ್ತೀನಿ (ಸು ೩೩೯)
ದೇಹ ಮತ್ತು ಆತ್ಮ

ಸಂದೂ ಆಡ್ಬುಟ್ಟಂದು
ಮೂಲೇಲಿ ನಿಂತ್ಕೊಳ್ತದೆ (ರಾ ಗೌ ೪೬೨)

ಹೋಗ್ತಾನೆ ಪುಟ್ಟ
ಬರ್ತಾನೆ ಪುಟ್ಟ
ಅವನು ಹೋದ್ತಾವು
ಹೆಜ್ಜೆ ಕಾಣೋದಿಲ್ಲ (ಜೀಶಂಪ ೨೯೮)
ದೋಣಿ

ಅಂಗೈ ಅರ ಗದ್ದೆ ಮುಂಗೈ ಅರ ಬದ
ಹನ್ನೆರಡು ಆರು ಹೂಡೋದು ಒಬ್ಬನೆ (ಲ ಗೌ ೧೧೧)

ಕೈಯಿಲ್ಲ ಕಾಲಿಲ್ಲ
ಈಜು ಮೊದಲೇ ಗೊತ್ತಿಲ್ಲ
ಹುಟ್ಟಿದಂದಿನಿಂದ ನೀರಮೇಲೆ ತೇಲುತಿರುವೆ (ಚಂ ಸೆ ೧೧೧)

ಗಬ್ಬದ ಎಮ್ಮೆ ಉಬ್ಬು ಹತ್ತುತ್ತೆ (ಲ ಗೌ ೫೦೧)

ನೀರಾಗೆ ನಡೆಯುವುದು
ಮೃಗವು ತಾನಲ್ಲ
ಹಾರಲರಿಯದು
ಹಾದಿ ನಡೆಯುವುದಲ್ಲ (ರಾ ಗೌ ೩೨೦)

ನೀರಿನಲ್ಲಿ ತಿರುಗುವೆನು ಮೀನಲ್ಲ
ಮನುಷ್ಯನ ಸೇವಕನು ಜೀವಿಯಲ್ಲ
ಎಲ್ಲಿ ಹೋದರೂ ಹೆಜ್ಜೆ ಕಾಣುವುದಿಲ್ಲ (ಚಂ ಸೆ ೧೬೨)

ಮಜ್ಜಲೆಮ್ಮಿ ಹೆಜ್ಜಿಲ್ಲದೆ ನಡೀತೈತಿ (ವಾಲಿ ೩–೩೭)

ಸತ್ತ ಮರ ನೀರಲ್ಲಿ ಓಡುತ್ತೆ (ಲ ಗೌ ೯೧೨)

ಹದಿನಾರು ಹಗ್ಗ ಮೂವತ್ತೆರಡು ಬಿಗಿತ
ಹೇಳದೆ ಕೇಳದೆ ನಮ್ಮ ಬಸವಣ್ಣ ಗುಟ್ರ ಹೊಡೀತಾನೆ (ಲ ಗೌ ೯೯೧)

ಹುಲ್ಲು ಮುಳ್ಳುಗಳು ಇಲ್ಲದ ಪ್ರದೇಶದಲ್ಲಿ ದನವು
ಮೇಯುತ್ತಾ ಹೋಗುತ್ತದೆ (ಚಂ ಸೆ ೨೫೫೫)
ದೋಣಿ

ಅಪ್ಪ ಸಿಗಸ್ತಾನ
ಅವ್ವ ಹಾಯ್ಯೋತಾಳ (ವಾಲಿ ೮–೩೯)
ಧೋತರ ಕಚ್ಚೆ, ಸೀರಿ ನಿರಿಗೆ

ಕರಿ ಮೈದಾನಕಿಳಿವಾಗ ಬೆಳ್ಳಗ
ಬರ್ವಾಗ ಕೆಂಪಗ (ಲಠೈ ಭಾಗ ೪–೬೪)

ತೂತಾನ ತೂತೇರ ಇಬ್ಬರ (ಲಠೈ ಭಾಗ ೪–೧೧೭)
ದೋಸಿ

ತಾತ್ಯಾನ ತೂತ್ಯಾರ ಇಬ್ಬರ
ಚಂದಾನ ಚೆಲುವ್ಯಾರ ಇಬ್ಬರ
ಗದಿಗ್ಯಾನ ಗುದುಗ್ಯಾರ ಇಬ್ಬರ (ಲಠ್ಠೆ ಭಾಗ ೪–೧೦೯)
ದೋಸಿ, ಹೋಳಿಗಿ, ಕರ್ಚಿಕಾಯಿ

ಎದ್ದರೆ ಏಳಿ
ಏಳದಿದ್ದರೆ ನಿಮ್ಮ ತಿಕಕ್ಕೆ ಚೂರಿ (ರಾ ಗೌ ೧೦೭)

ಕರಿ ಮೈದಾನದಲ್ಲಿ ಹೋಗಾಗ ಬಿಳೀದು
ಬರುವಾಗ ಕೆಂಪು (ವಾಲಿ ೫–೪೩)

ಕರಿ ಮೈದಾನದಲ್ಲಿ ಹೋಗುವಾಗ ಬೆಳ್ಳಗಿರುವದು
ಬರುವಾಗ ಕೆಂಪಗಾಗುವದು (ವಾಲಿ ೫–೧೫)

ಕರಿಯ ಮಂಚದ ಮೇಲೆ ಬಿಳೀ ಹಾಸಿಗೆ
ಹಾಸುವುದುಂಟು ಎತ್ತುವುದುಂಟು (ಲ ಗೌ ೪೦೦)

ಕರಿ ಹೊಲಕ ಹೋಗುವಾಗ ಬೆಳ್ಳಗ
ಬರುವಾಗ ಕೆಂಪಗ (ಇ ೩೫೨)

ಚಿಲಿಪಿಲಿ ಹಕ್ಕಿಗೆ ನೂರಾರು ಕಣ್ಣುಗಳು (ಲ ಗೌ ೫೫೪)

ಚುಂಯಿ ಚುಂಯಿ ಹಕ್ಕಿಗೆ ನೂರಾರು ಕಣ್ಣು (ಚಂ ಸೆ ೧೨೯)

ತಾಯಿ ಕಪ್ಪು ತಂದೆ ಕಪ್ಪು ಮಗ ಬಿಳಿಪು (ಚಂ ಸೆ ೧೩೬)

ಮುದುಕಿಯ ಮೈಯೆಲ್ಲಾ ತೂತು (ರಾ ಗೌ ೩೯೫)

ಮುಖದ ತುಂಬ ತೂತು ಇಟಗೊಂಡು
ಕರೆ ಹೊಲ್ದಾಗ ಕ್ಯಾಕಿ ಹಾಕತಾಳ (ಇ ೮೫೧)

ಹಕ್ಕಿಗೆ ಹಲವಾರು ಕಣ್ಣು (ಸು ೪೮೩)

ಹತ್ತುವ ಕುದುರೆ
ಇಳಿಯುವ ಕುದುರೆ
ಮೈತುಂಬ ತೂತಿನ ಕುದುರೆ (ಚಂ ಸೆ ೨೩೮)

ಹರಕ್ಕಲ್ಲಿನ ಮೇಲ್ ಬರ್ಗ್ನ ಬಿತ್ತಿ
ವಸ್ತಿ ಹಿಡ್ಕೊಂಡು ಸತ್ತೋಯ್ತು (ಲ ಗೌ ೯೯೭)

ಹುಳಕವ್ವಾ ತೋಕರವ್ವಾ ಅವರಿಬ್ರು
ಮೈತುಂಬಾ ತೂತಾಗಿ ಬಿದ್ರು (ಇ ೧೦೯೬)
ದೋಸೆ

ಕರಿಗುಡ್ಡೆ ಮೇಲೆ ಬಿಳಿ ಹಕ್ಕಿ (ಬೆಳಿ ಪಟ್ಪಿ) (ಶಾಂ ನಾ ೪೪೧)

ಕಾದ್ಕಲ್ಲರ ಮೇಲೆ ಬೆಳ್ಳಕ್ಕಿ ಪಿಟ್ಟೀ ಹಾಕ್ತು (ಶಾಂ ನಾ ೪೪೦)

ನಮ್ಮ ಅಪ್ಪಾ ಒಂದು ಟುವಾಲ್ ತಂದಿದ್ದಾ
ಅದಕ್ಕೆ ಎಲ್ಲೊ ನೋಡಿದ್ರೂ ಕಣ್ಣು ಕಣ್ಣು (ಶಾಂ ನಾ ೪೨)

ಬಿಸಿಬಿಸಿ ಅಕಾಸ್ಡ್ ಮೆನೆ ಸಾವರಾರ್ ಜಾರ್‌ಕ್ಲಾ (ಶಾಂ ನಾ ೪೪೨)

ವಂದ್ಬಟ್ಟಂಗೆ ಸಾವರಾರ್ಕಣ್ಣು (ಶಾಂ ನಾ ೪೩೯)

ಸೀತಾ ದೇವಿ ಬೆಳಿಪತಾ ಉಚ್ಕಿಂಡು
ಕರಿಕಲ್ಬಂಡೆ ಮೆಲ್ಕುತ್ತಾ ದುಕ್ಕಾ ಮಾಡ್ತು (ಶಾಂ ನಾ ೪೩೮)
ದೋಸೆ

ಏಳು ದೋಸೆ ಆರು ದೋಸೆ ಹತ್ತು ದೋಸೆ ಒಟ್ಟು ಎಷ್ಟು ದೋಸೆ (ಚಂ ಸೆ ೫೯)
ಒಂದೇ ದೋಸೆ

ಎದ್ದರೆ ಏಳು ಏಳದಿದ್ರೆ ಬೆನ್ನಿಗೊಂದು ಬೆತ್ತದ ಚಡಿ (ಲ ಗೌ ೨೨೧)
ದೋಸೆ ಎತ್ತುವುದು

ತಾತ್ಯಾನ್ತೊತ್ಯಾರವರಿಬ್ಬರು
ಛಂದನ್ನ ಚಲಿಬ್ಯಾರವರಿಬ್ಬರು
ಗದಾನ ಗುದಿಗ್ಯಾರವರಿಬ್ಬರು (ಇ ೫೭೪)
ದೋಸೆ, ಕರಿಗಡುಬು, ವಡೆ

ಚಾಪೆ ಹಾಕದೆ
ದೀಪ ತುಂಬದೆ
ವೋಗೋರು ವೊಯ್ತಾರೆ
ಬರೋರು ಬತ್ತರೆ (ಮಂ ೧.೫–೫೮)
ದೋಸೆಕಲ್ಲು

ಒಂದು ಅಜ್ಜಿ ಎಣ್ಣೆ ಹಚ್ಚಿಕೊಂಡು ಬೆಂಕಿ ಕಾಯುತ್ತೆ (ಲ ಗೌ ೩೪೩)
ದೋಸೆ ಕಾವಲಿ

ಒಂದು ತೂತು ಒಂದು ಗರಿಗರಿ ಒಂದು ತರಿತರಿ (ಲ ಗೌ ೩೦೧)
ದೋಸೆ, ರೊಟ್ಟಿ, ಇಡ್ಲಿ

ತಾತನ ತೂತೇರು
ಚಂದನ ಚೆಲುವೇರು
ಅಬಲೆಯ ದುಬಲೇರು (ಇ ೫೭೨)
ದೋಸೆ, ಹೋಳಿಗಿ, ಕಡುಬು

ಈಚಿನಾಪುರದ ಈಚಿನ ಕಟ್ಟಿಗೆ
ಬನ್ನಾಪುರದ ಬಾಳೇ ಎಲೆ
ಬಂಗಾರದ ಮುತ್ತಿನ ಚೆಂಡು (ಇ ೧೯೩)
ದಂಟು, ಗರಿ, ತೆನೆ

ಬೆಳಿಗ್ಗೆ ಬೀಳ್ತದೆ ಸಂಜೆಗೆ ಏಳ್ತದೆ (ಶಾಂ ನಾ ೨೮)
ದಾಂಬು

ಅಂದದ ಬುಗುರಿ ಚಂದದ ಬುಗುರಿ
ರಾಯರು ಬರ್ತಾರೆ ಎದ್ದು ಬಾ ಬುಗುರಿ (ಲ ಗೌ ೧೩೩)

ಹಾರೋವಾಗ ಹಿಡಿಯೋರಿಲ್ಲ
ಊರಿದರೆ ಉರಿ ಬರ್ತದೆ
ಬೇಕಂದ್ರೆ ಅರ್ಧ ದೇಶಾನೆ ಬಳಸ್ತದೆ
ಅದರ ಮನೆ ಒಂದ್ತಾವು ನೆಲೆ ಇಲ್ಲ
ಅದು ಎಲ್ಲಿತ್ತು ಅಲ್ಲೇ ಇರ್ತದೆ
ಬೇಕೂ ಅಂದ್ರೆ (ರಾ ಗೌ ೪೯೦)
ದುಂಬಿ

ಒಬ್ಬ ಅಜ್ಜಿಗೆ ಇಬ್ಬರು ಗುದ್ದುತಾರೆ (ಲ ಗೌ ೨೬೮)
ದೊಂಟೆ

ಓಲಗ ಕಾಣದ ಚಪ್ಪರ
ಕರಿಮುತ್ತಿನ ಗೋಪುರ (ಸು ೧೬೪)
ದ್ರಾಕ್ಷಿ ಚಪ್ಪರ ಮತ್ತು ಹಣ್ಣು

ಇದು ಏರಿದರೆ ಎಲ್ಲರಿಗೂ ಚಿಂತೆ
ಆದರೆ ವೈದ್ಯರ ಹತ್ರ ಹೋಗೊಲ್ಲ (ಲ ಗೌ ೧೬೭)
ಧಾರಣೆ

ಮೇಲೂ ಬಾಯಿ ಕೆಳಗೂ ಬಾಯಿ
ದೇವರ ಮನೆಗೆ ಚಲೋ ಬಾಯಿ (ಸು ೪೩೦)
ಧೂಪಾರತಿ

ನಿಮ್ಮಪ್ಪ ಹಾಕ್ತಾನ
ನಿಮ್ಮವ್ವ ಹೊಯ್ಕೋತಾಳ (ಇ ೬೬೫)

ನೋಡಲು ಒಂದು
ಹಿಡಿದರೆ ಸಿಗದು
ಬೇಡ ಬೇಡವೆಂದರೂ
ಕಿವಿಗಿಳಿಯುವುದು (ರಾ ಗೌ ೩೨೭)
ಧ್ವನಿ

ಊರು ಅದಾವು ಜನ ಇಲ್ಲ
ನದಿ ಅದಾವು ನೀರು ಇಲ್ಲ
ರಸ್ತೆ ಅದಾವು ಗಾಡಿ ಇಲ್ಲ (ಇ ೨೨೫)

ಊರುಂಟು ಮನೆಯಿಲ್ಲ
ನದಿಯುಂಟು ನೀರಿಲ್ಲ (ಇ ೨೨೬)

ಜಗತ್ತನೆಲ್ಲಾ ಕೂತಲ್ಲಿ ಕಾಣಬಹುದು (ಇ ೫೪೬)
ನಕಾಶ

ಊರ ಅದಾವು ಜನರಿಲ್ಲ
ನದಿ ಹರದ್ದಾವು ನೀರಿಲ್ಲ
ರಸ್ತಾ ಅದಾವು ಗಾಡಿ ಇಲ್ಲ (ಲಠ್ಠೆ ಭಾಗ ೫–೭೭)
ನಕಾಶೆ

ಕೆರೆಯೆಲ್ಲ ಕುರಿಹೆಜ್ಜೆ (ಜೀಶಂಪ ೧೩೨)

ಕೆರೆಯೆಲ್ಲಾ ಕುರಿ ಅಜ್ಜೆ (ಮಂ ೨.೧–೧೪)

ಚೊಕ್ಕ ಬೆಳ್ಳಿಯ ರೊಕ್ಕ ಚೆಲ್ಲಿಹುದು
ಅದವಾಯ್ದು ಕೊಂಬುವರಿಲ್ಲ (ಚಂ ಸೆ ೧೩೦)

ದೊಡ್ಡಮನಿಗೆ ಕುರಿ ಕೂಡ್ಯವರೆ
ಹೊತ್ತಿನಂತೆ ಎದ್ದು ನೋಡಿದರೆ ಒಂದೂ ಇಲ್ಲ (ಲ ಗೌ ೬೩೫)

ಮಾಳಿಗೆ ಮೇಲೆ ಮೊಲ್ಲೆ ಹೂವು ಚೆಲ್ಲಾಡ್ತವೆ (ಲ ಗೌ ೮೪೦)

ಸಾಯಂಕಾಲ ಒಂದು ಸರಗೋಲು ಕಡುಬು ಮಾಡಿದ್ದೆ
ಬೆಳಿಗ್ಗೆ ನೋಡಿದ್ರೆ ಒಂದೂ ಇಲ್ಲ (ಲ ಗೌ ೯೩೧)

ಹೊಟ್ಟಿಲ್ಲದ ಅಕ್ಕಿ (ಲ ಗೌ ೧೦೭೨)
ನಕ್ಷತ್ರ

ಚಾಲಿ ಹೂವು ಜಾರದ ಹೂವು
ವರಹ ಕೊಟ್ಟರೂ ಬಾರದ ಹೂವು
ನಕ್ಷತ್ರಗಳು

ಅಡಿಕೆ ಆರಿಸುವರಿಲ್ಲ
ತಟ್ಟೆ ಮಗುಚುವರಿಲ್ಲ (ಲ ಗೌ ೪೫೫)

ಅಡಿಕೆ ಎಣಿಸಕಾಗಲ್ಲ
ಚಾಪೆ ಸುತ್ತಕಾಗಲ್ಲ (ಜೀಶಂಪ ೧೮೮)

ಅಪ್ಪನ ದುಡ್ಡು ಎಣಿಸೂದಲ್ಲ
ಅವ್ವನ ಸಿರಿ ಮಡಿಸೂದಲ್ಲ (ಇ ೧೦೩೩)

ಸೀತೆ ಕೊಳ್ದಲ್ಲಿ
ಸಿರಿಮುತ್ತ ಎಣಿಸಲಾರೆ
ಎಣಿಸಿದವರಿಗೆ ಐದುಸೇರು ತುಪ್ಪ ಐವತ್ತೊಟ್ಟಿ (ಜೀಶಂಪ ೨೫೮೮)

ಅಡ್ಡಿ ಆಯಿನಾರಿ ಎಲೆ ಮಡ್ಸನಾರಿ (ಮೈ.ಕ.) (ಮಂ ೨.೧–೨)
ನಕ್ಷತ್ರ, ಆಕಾಶ

ಅಪ್ಪನ ದುಡ್ಡು ಎಣಿಸಲಾರೆ
ಅವ್ವನ ಸೀರೆ ಮಡಿಸಲಾರೆ
ನಕ್ಷತ್ರಗಳು, ಆಕಾಶ

ನೀಲಿ ಕೆರ್ಯಾಗ ಬಿಳೇ ಮೀನ (ಇ ೬೭೬)

ಕಂಡುಗ ಕಡಿ ಅಕ್ಕಿ, ಅದರಲ್ಲಿ ಒಂದೇ ಇಡಿ ಅಕ್ಕಿ (ಲ ಗೌ ೪೨೯)
ನಕ್ಷತ–ಚಂದ್ರ

ಅಪ್ಪನ ದುಡ್ಡು ಎಣಿಸಕ್ಕಾಗಲ್ಲ
ಅಮ್ಮನ ಸೀರೆ ಮಡಿಸಕ್ಕಾಗಲ್ಲ (ಸು ೩೪)
ನಕ್ಷತ್ರ ಮತ್ತು ಆಕಾಶ

ಲೆಕ್ಕ ಮಾಡಲಾರದ ಗೆಜ್ಜೆ
ಪುಡಿ ಮಾಡಲಾರದ ಹಗ್ಗ (ರಾ ಗೌ ೪೨೫)
ನಕ್ಷತ್ರ, ಹಾವು

ಕಾಯಿ ಕಕ್ಕರಕ್ಕ
ಹೂವು ಚದುರಂಗ
ಅದರ ಹೆಸ್ರು ಅಯ್ಯಯ್ಯಪ್ಪ (ಮಂ ೧.೪–೩೪)
ನಗಲಗಂಟೆ ಸೊಪ್ಪು

ಕಾಯಿ ಕಕರ ಬಕರ
ಹುವ್ವ ಚದುರಂಗ
ಅದರ ಹೆಸರು ಅಯ್ಯಯ್ಯಪ್ಪ (ಸು ೨೦೫)

ದಾರೀಲಿ ಹುಟ್ಟೋದು
ದಾರೀಲಿ ಬೆಳೆಯೋದು
ದಾರೀಲಿ ಹೋಗೋರ್ನ ನಿಲುಕೋದು (ಸು ೩೨೧)
ನಗ್ಗಲು ಮುಳ್ಳು

ಆರಿ ನಾಡದ ಕ್ವಾಣಾ
ಅರವತ್ತ ಮುಗದಾಣಾ
ಮೋತಿ ಮ್ಯಾಲ ಬಡದರ
ಅಂಯಿಕ್ ಅಂತತಿ (ಲಠ್ಠೆ ಭಾಗ ೫–೫೪)

ಕೊಬ್ಬಿದ ಕ್ವಾಣ ಐವತ್ತ ಮುಗದಾಣ
ದೊಣ್ಣಿಲಿ ಹೊಡೆದ್ರ ಡರ್ ಡರ್ ಅಂತತಿ (ಲಠ್ಠೆ ಭಾಗ ೫–೧೪೦)

ಮನೆಗೆ ತಂದರೆ ನೇತು ಹಾಕುವರು
ಗುಂಪು ಕೂಡಿದರೆ ಹೊಡೆಯುವರು (ಚಂ ಸೆ ೧೯೮)
ನಗಾರಿ

ಸುತ್ತರದ ಬೇಲಿ ನಡರಕ ಕೀಲಿ (ಇ ೯೫೮)
ನಡದಪಟ್ಟಿ

ಚಿಕ್ಕ ಮನಿಗಿ ಚಿನ್ನದ ಬೀಗ (ಲಠೈ ಭಾಗ ೫–೧೫೭)
ನತ್ತ

ಗೆರೇಲಿ ಗುರುವ ಮೊಟ್ಟೆ ಇಕ್ಕೀತೇ (ಲ ಗೌ ೫೩೧)
ನತ್ತು

ತುಟೀ ಕಚ್ಚೇತಿ
ನಡಾ ಹಿಡದೈತಿ
ಕಾಲ್ ಕಟ್ಟೇತಿ (ಇ ೫೯೦)
ನತ್ತು, ಒಡ್ಯಾಣ, ಸರಪಳಿ

ಅಂಕಡೊಂಕಾದ ಮರ ಶಂಖತೀರ್ಥದ ಮರ
ಬ್ರಹ್ಮಬಟ್ಟ ಬಂದರೂ ಕಡಿಯಲಾರದ ಮರ (ಇ ೨೧)

ಕಾಲಲ್ಲಿ ತಣತಣ
ಸೊಂಟದಲ್ಲಿ ಜಣಜಣ
ಗಂಟ್ನಲ್ಲಿ ಪಿಣಿಪಿಣಿ (ರಾ ಗೌ ೧೯೭)

ಕಾಲಿಲ್ಲ ಕಣ್ಣಿಲ್ಲ ನಡಿತೈತಿ
ಹಲ್ಲಿಲ್ಲ ಬಾಯಿಲ್ಲ ಮಾತಾಡತೈತಿ

ಕಾಲಿಲ್ಲದೆ ನಡೆಯುವುದು
ತಲೆ ಇಲ್ಲದೆ ನುಡಿಯುವುದು
ಮೇಲು ಕೆಳಗಾಗಿ ಓಡುವುದು (ಇ ೩೮೭)

ಕೆಳಗೆ ಹೋಗೋಕೆ ಬತ್ತದೆ ಮೇಲಕ್ಕೆ ಬರಲಿಕ್ಕೆ ಗೊತ್ತಿಲ್ಲ (ಲ ಗೌ ೪೭೪)

ಬಂದರೆ ಬರೋದಿಲ್ಲ ಬರದೆ ಇದ್ರೆ ಬರೋದಿಲ್ಲ (ಲ ಗೌ ೭೪೫)

ಹಾಸಿಗಿ ಹಾಸೇತಿ ಮಲಗವ್ರ ಇಲ್ಲ (ಲಠೈ ಭಾಗ ೨–೬೫)
ನದಿ

ಕಾಲಿಲ್ಲದಲೆ ಹರಿಗು
ತೋಳಿಲ್ಲದಲೆ ಹೊರುಗು
ನಾಲಿಗಿಲ್ಲದಲೆ ಉಲಿವುದಿದ ಕವಿಕುಲದ
ಮೇಲುಗಲೆ ಪೇಳಿ ಸರ್ವಜ್ಞ (ಚಂ ಸೆ ೯೯)

ಕಾಲಿಲ್ಲದೆ ನಡೆಯುತ್ತದೆ
ಬಾಯಿಲ್ಲದೆ ಮಾತಾಡುತ್ತದೆ
ಹಲವಕ್ಕೆ ಮನೆಯಾಗಿರುತ್ತದೆ (ಸು ೨೦೭)
ನದಿ

ವಂದು ಕುಂತ್ಗಂಡ್ನೋಡ್ತು ವಂದು ನಿಂತಗ್ಗಂಡ್ನೋಡ್ತು
ವಂದೋಡ್ತು (ಶಾಂ ನಾ ೨೭೬)
ನದಿ ಕಲ್ಲು–ಗುಡ್ಡೆ ನೀರು

ಹುಲ್ಲಿಲ್ಲದ್ ಹೊಳೀಲೆ ಹಲ್ಲಿಲ್ಲದ ಆಕಳು ಮೇಯ್ತದೆ (ಶಾಂ ನಾ ೨೬)
ನದಿ, ದೋಣಿ

ವಂದಾಡ್ತು ವಂದೋಡ್ತು ವಂದ್ನೋಡ್ತು (ಶಾಂ ನಾ ೨೭೫)
ನದಿ–ಮೀನು–ನೀರು–ಕಲ್ಲು

ಆದಿನ ಅಂತ್ಯನ ಮಧ್ಯೆಯ ಇಹುದು
ನಿನಗುಂಟು ನಗಗುಂಟು ಎಲ್ಲರಿಗೆ ಬೇಕಿಹುದು (ಚಂ ಸೆ ೩೭)
ನಯನ

ನಿದ್ದೆ ಇಲ್ಲದ ಹೆಂಗಸು
ತೊಗಟೆ ಇಲ್ಲದ ಮರ
ತೌಡಿಲ್ಲದ ಅಕ್ಕಿ (ಸು ೩೩೭)
ನದಿ, ಕಲ್ಲು, ಚುಕ್ಕಿ

ಶಿವನು ಶಿವನೇರಿ ಪೋಗುತಿರೆ
ಶಿವ ಸತ್ತು ಶಿವ ಬಳಲಿದುದನು
ಶಿವ ಕಂಡು ಶಿವಗೆ ಶಿವ ಬಂದು
ಪ್ರಾಣವ ಕೊಟ್ಟ (ಸು ೪೫೦)
ನರಿ

ಸೆಣಬ್ನಂಗೆ ಬಂದವೆ (ರಾ ಗೌ ೪೫೮)
ನರೆ

ನೀರದೆ ದಾರದ ಈರ ಕಾಯಲ್ಲ
ವುಳಿವುಂಟು ಯಿಂಬೆ ಹಣ್ಣಲ್ಲ (ಮಂ ೧.೪–೫೨)
ನಲ್ಲಿಕಾಯಿ

ಬೆಟ್ಟದಲ್ಲಿ ಹುಟ್ಟಿ ಹಾವಿನಂತ್ಹರಿದಾಡಿ
ಮನೆಮನೆಯಲ್ಲಿ ನಿಂತು ಕರೆದಾಗ ಬರುವದು (ಇ ೭೬೨)
ನಲ್ಲಿ ನೀರು

ಅತನೂರ ಹೆಣ್ಣಿಗಿ
ನೆತ್ಯಾಗ ಬಸಿರಾ
ಬ್ಯಾತನೂರ ಹೆಣ್ಣಿಗಿ
ಮ್ಯಾತೇಲಿ ಬಸಿರಾ
ಮುಂಡಿಗಿ ಬಸಿರಾ
ಮೊಳಕೈಯಾಗ (ಲಠ್ಠೆ ಭಾಗ ೪–೨೧)
ನವಣಿ, ಜೋಳ, ರಾಗಿ

ತಗ್ಗಿನಾನ ಪಾರ ತಲೀ ಹಾಕತೈತಿ (ವಾಲಿ ೨–೧೦೨)
ನವಣಿ ತೆನೆ

ಅತ್ತೂರು ಹೆಣ್ಣಿಗೆ ನೆತ್ತೀಲಿ ಬಸಿರು
ಕಿತ್ತೂರು ಹೆಣ್ಣಿಗೆ ಮ್ಯಾತೇಲೆ ಬಸಿರು
ಮುಂಡೆ ಬಸಿರು ಮೊಳಕೈಯಲಿ (ಲ ಗೌ ೪೭)
ನವಣಿ ತೆನೆ, ಜೋಳದ ತೆನೆ, ರಾಗಿ ತೆನೆ

ನೋಡಿದ್ರೆ ಅಂಚಿನಕಡ್ಡಿ ಗಾತ್ರ
ಗೇಣುದ್ದ ಅದೆ ಮಾತ್ರ
ರಾಗಿಕಾಳಿನ್ಹಂಗೆ ಕಾಳು (ರಾ ಗೌ ೩೨೯)
ನವಣಿ

ಅದರೆಲೆ ಅದರೆಲೆ ಹಂಗೆ
ಬಿದಿರೆಲೆ ಬಿದಿರೆಲೆ ಹಂಗೆ
ಬಗ್ಗಿದರೆ ಮದುವೆ ಅಮ್ಮಿ ಹಂಗೆ (ರಾ ಗೌ ೨೫)
ನವಣಿ ತೆನೆ

ಶಮನೇವಾಡಿ ಹೆಣ್ಣು
ಅದರ ನಿರಗ್ಯಾಗ ಅರ್ವತ್ತ ಕಣ್ಣು
ಅದನ್ನ ಕಂಡವರಿಗೆ ಹಿಡಿಹೊನ್ನ (ಲಠ್ಠೆ ಭಾಗ ೩–೬೧)

ನವಿಲ
ಎಲೆ ಎಲೆ ಗುಡ್ಡದಾನ ತಂಗಿ
ಅಚ್ಚ ಪಟ್ಟೋಳಿ ಸೀರಿ
ಸೀರಿಗಿ ಮೂವತ್ತು ಕಣ್ಣು
ಒಡೆದವರಿಗಿ ಹೊನ್ನ
ಒಡೆಯಲಾರದವರಿಗಿ ಮಣ್ಣ (ವಾಲಿ ೬–೪೩)

ಒಬ್ಬಣ್ಣನಿಗೆ ಸಾವಿರ ಕಣ್ಣು (ಲ ಗೌ ೨೭೨)

ಕಿರೀಟವಿದೆ ರಾಜನಲ್ಲ ಸಾವಿರ ಕಣ್ಣಿವೆ ಇಂದ್ರನಲ್ಲ (ಲ ಗೌ ೪೪೯)

ಕಂಠದಲಿ ಕಪ್ಪುಂಟು ಕರಿಕಂಠನಲ್ಲ
ಜುಟ್ಟವಿದೆಯಾದರೂ ವಿಪ್ರ ತಾನಲ್ಲ
ಮೈತುಂಬ ಕಣ್ಣುಂಟು ದೇವೇಂದ್ರನಲ್ಲ (ವಾಲಿ ೬–೮)

ಕಂಠದಲ್ಲಿ ಕಪ್ಪುಂಟು ಕರಿಕಂಠನಲ್ಲ
ಗಿಂಟದಲ್ಲಿ ಶಿಖೆಯುಂಟು ವಿಪ್ರ ತಾನಲ್ಲ
ಉಂಟು ಮೈಯಲ್ಲಿ ಕಣ್ಣು ದೇವೇಂದ್ರನಲ್ಲ (ರಾ ಗೌ ೧೯೦)

ಕಂಠದಲ್ಲಿ ಕಪ್ಪುಂಟು ಕರಿಕಂಠನಲ್ಲ
ಮಿಂಟೆಯಲಿ ಶಿಖೆಯುಂಟು ವಿಪ್ರ ತಾನಲ್ಲ
ಉಂಟು ಮೈಯಲಿ ಕಂಣು ದೇವೇಂದ್ರನಲ್ಲ
ಸೃಷ್ಟಿಯಲಿ ಹರಿಹರಾ ಬ್ರಹ್ಮ ತಾನಲ್ಲ (ಚಂ ಸೆ ೯೫)

ಕಂಠದಲ್ಲಿ ಕಪ್ಪುಂಟು ಶ್ರೀಕಂಠನಲ್ಲ
ನೆತ್ತಿಯಲಿ ಶಿಖೆಯುಂಟು ವಿಪ್ರ ತಾನಲ್ಲ
ಮೈಯೊಳಗೆ ಕಣ್ಣುಂಟು ದೇವೇಂದ್ರನಲ್ಲ
ಇದನು ಹೇಳಬಲ್ಲ ಜಾಣನಿಗೆ ಅರಿದಲ್ಲ (ಸು ೧೯೮)

ತಲೆಯಲ್ಲಿ ಕಿರೀಟ ಉಂಟು ದೇವರಲ್ಲ
ಕೊರಳಲಿ ಕಪ್ಪುಂಟು ನಂಜುಂಡನಲ್ಲ
ಮೈಯಲ್ಲಿ ಕಣ್ಣುಂಟು ಇಂದ್ರನಲ್ಲ (ಜೀಶಂಪ ೧೬೨)

ತಲೆಯಲ್ಲಿ ಕಿರೀಟವುಂಟು ರಾಜನಲ್ಲ
ಕೊರಳಲ್ಲಿ ಕಪ್ಪುಂಟು ನಂಜುಂಡನಲ್ಲ
ಮೈಯೆಲ್ಲಾ ಕಣ್ಣುಂಟು ಇಂದ್ರನಲ್ಲ (ವಾಲಿ ೬–೩)

ಬೆಟ್ಟದ ಮೇಗಣ ಹೆಣ್ಣು
ಅವಳು ಹುಟ್ಟಿರೋದು ಕಾಗಿನ ಬಣ್ಣ
ಅವಳ ನೆರಿಯಲ್ಲಿ ಅರುವತ್ತು ಕಣ್ಣು
ಅದನ್ನು ಎಣಿಸಿದವರಿಗೆ ಸಾವಿರ ಹೊನ್ನು (ರಾ ಗೌ ೩೬೫)

ಬೆಳಗ್ಗೆ ಏಳ್ತದೆ
ದೇವರ ಪೂಜೆ ಮಾಡ್ತದೆ (ರಾ ಗೌ ೩೭೨)

ಮೈತುಂಬಾ ಕಣ್ಣಿದ್ರೂ
ನೋಡುವ ಕಣ್ಣು ಎರಡೇ (ವಾಲಿ ೬–೫೨)

ಮೈಯೆಲ್ಲಾ ಕಣ್ಣಿದ್ರು
ಕಾಣೋದು ಮಾತ್ರ ಎರಡೇ ಕಣ್ಣು (ಇ ೮೮೨)

ಶಮನೇವಾಡದ ಹೆಣ್ಣು
ಅದರ ನಿರಿದ್ಯಾಗ ಸಾವಿರ ಕಣ್ಣು
ಅದನ್ನ ಕಂಡವರಿಗಿ ಹಿಡಿ ಹೊನ್ನ (ವಾಲಿ ೬– ೩೬)

ಸಾವಿರ ಕಣ್ಣಿವೆ ರಾಕ್ಷಸನಲ್ಲ
ತಲೆಯಲ್ಲಿ ಕಿರೀಟವಿದೆ ರಾಜನಲ್ಲ
ಕುಣಿಯುತ್ತದೆ ನರ್ತಕಿಯಲ್ಲ
ಹಾಗಾದರೆ ಯಾರು (ಇ ೯೪೦)

ಸಾವಿರ ಕಣ್ಣುಗಳುಂಟು ರಾಕ್ಷಸನಲ್ಲ
ತಲೆಯಲ್ಲಿ ಕಿರೀಟ ಉಂಟು ಅಧಿಪತಿಯಲ್ಲ
ನರ್ತನ ಮಾಡುವುದು ನರ್ತಕಿಯಲ್ಲ (ಚಂ ಸೆ ೨೨೪)

ಸಾವಿರ ಕಣ್ಣುಂಟು ರಾಕ್ಷಸಿಯಲ್ಲ
ಕಿರೀಟವುಂಟು ರಾಜನಲ್ಲ
ನಲಿಯುವಳು ಕುಣಿದಾಡಿ ನರ್ತಕಿಯಲ್ಲ (ಲ ಗೌ ೯೩೬)

ಹತ್ತುತ್ತಾ ಹಾರುತೈತಿ
ಹಾರುತ್ತ ಜಿಗಿಯತೈತಿ
ಬಿಸಿಲಿಗೆ ಒಣಗೂದಿಲ್ಲ
ಮಳೀಗೆ ತೊಯ್ಯೂದಿಲ್ಲ (ಇ ೧೦೦೬)

ಹತ್ತು ಸಾವಿರ ಕಣ್ಣು
ಎತ್ತಲಾರದ ಬಾಲ
ಅದು ಹುತ್ತದ ಹುಳವ ಹಿಡಿವುದು (ಜೀಶಂಪ ೨೮೩)

ಹತ್ತು ಸಾಸಿರ ಕಣ್ಣು
ಎತ್ತಲಾರದು ಬಾಲ
ಹುತ್ತಿನ ಹುಳವ ಹಿಡಿಯುವುದು ಕವಿಜನರ
ಮೊತ್ತವಿದ ಹೇಳಿ ಸರ್ವಜ್ಞ (ಚಂ ಸೆ ೨೩೬)
ನವಿಲು

ಸಾವಿರ ಕಣ್ಣುಂಟು ಮಾಸೇಸನಲ್ಲಾ
ನೆತ್ತಿಯಲಿ ಜುಟ್ಟುಂಟು ಅನಾನಸ್ಸಲ್ಲಾ
ಗಗನದಲಿ ಹಾರುವ ವಿಮಾನವಲ್ಲಾ (ಶಾಂ ನಾ ೫೫೫)
ನವ್ಲು

ಅಂಗೈನೋಟ್ ಕಣ ಮುಂಗೈನೋಟ್ ರಾಸಿ
ಬಂದ್ ಬಂದೋರ್ಗೆಲ್ಲ ಶರಣಾರ್ತಿ (ಲ ಗೌ ೧೦೯)

ಬರೀ ಭಸ್ಮ ಬ್ರಹ್ಮರಂಧ್ರಕ್ಕೆ (ಚಂ ಸೆ ೧೭೮)
ನಶ್ಯ

ಮುಟ್ಟಿದರೆ ಮೈಯೆಲ್ಲಾ ಉರುಪು (ಇ ೮೫೨)
ನಸಗುಂದಿ

ಗದ್ದೆ ಕಂಡ್ತೆ ಬಿದ್ದೋಡ್ತದೆ (ರಾ ಗೌ ೨೨೮)
ನಳ್ಳಿ

ಒಬ್ಬ ಎಮ್ಮೆ ಕಳಕೊಂಡಾನ
ಒಬ್ಬ ಟೆಂಗಿನಕಾಯಿ ಕೊಳ್ಳಾಕ ಬಂದಾನ
ಒಂದ ಮಾತಿನಾಗ ಏನ ಹೇಳ್ತೀರಿ ? (ಇ ೩೦೨)
ನಾಕಾಣೆ

ಒಂದು ಕೊಂಟು ತರಿಸಿ
ಹತ್ತು ಕೊಂಟು ಮಾಡಿಸಿ
ಕೈಯಲ್ಲಿ ಕಾಣವೇನೋ ರಾಜ
ಕಾಲಲ್ಲಿ ಕಾಣವೇನೋ ರಾಜ (ರಾ ಗೌ ೧೪೮)

ಭಿರಭಿರನೆ ಬರುವವಳೆ ಬಿಲ್ಲ ಸರದವಳೆ
ನಿಂತು ನೋಡೇ ನಯವಾದ ಹುಡುಗಿ (ವಾಲಿ ೬–೩೫)
ನಾಗರ ಹಾವು

ಕುಂಬಾರ ಹುಡುಗ ಮಾಡದ ಕಾಯಿ
ಕುಂಬಾರ ಹುಡುಗಿ ಮುಟ್ಟದ ಕಾಯಿ (ರಾ ಗೌ ೨೧೦)
ನಾಗರು

ಗೊಂದ್ಯಾಗ ಗೊಂದಿ ಯಾ ಗೊಂದಿ (ಇ ೫೧೪)
ನಾಗೊಂದಿ

ರಾಮ ಸತ್ತಾನ
ಭೀಮಾ ಹೊತ್ತಾನ (ಇ ೯೦೯)
ನಾಗೊಂದಿ ಕಂಬ

ಮುಟ್ಟಿದರೆ ಮುನಿಯಾಗುವೆ ನಾನ್ಯಾರು? (ಇ ೮೫೬)

ಮುಟ್ಟಿದಾಗ ಮುನಿಯುತ್ತಾಳೆ (ಶಾಂ ನಾ ೧೯೫)
ನಾಚಿಕೆ ಮುಳ್ಳು

ಹೊಡ ಹೊಡ್ದಾಕಿರೂ ಕಯ್ಮುಗೀತು (ಶಾಂ ನಾ ೧೯೪)
ನಾಚ್ಕೆಮುಳ್ಳು

ಅಕಸಾರ ಇದ್ರೂ ಪುಸ್ತಕಲ್ಲ
ಚಕ್ರ ಇದ್ರೂ ರಾಜಾ ಅಲ್ಲ (ಲಠ್ಠೆ ಭಾಗ ೫–೧)

ಅಕ್ಷರಗಳಿದ್ದರೂ ಪುಸ್ತಕವಲ್ಲ
ಸಿಂಹವಿದ್ದರೂ ಅರಣ್ಯವಲ್ಲ
ದುಂಡಗಿದ್ದರೂ ಚಕ್ರವಲ್ಲ
ನಾನಾರು (ಲ ಗೌ ೧೩)

ಅಕ್ಷಾರ ಇದ್ರೂ ಪುಸ್ತಕ ಅಲ್ಲ
ಚಕ್ರ ಇದ್ರೂ ರಾಜಾ ಅಲ್ಲ
ಅದು ಇಲ್ದ ನಡಿಯೂದಿಲ್ಲ (ಇ ೧೫೦)

ಸಿಂಹವಿದ್ದರೂ ಅರಣ್ಯವಲ್ಲ
ಗುಂಡಗಿದ್ದರೂ ಚಕ್ರವಲ್ಲ
ಇದಿಲ್ಲದಿದ್ದರೆ ನಡೆಯುವುದಿಲ್ಲ (ಲ ಗೌ ೯೪೩)

ನಾಣ್ಯ

ತೂಕವಿಲ್ಲದ ಒಡವೆ ಯಾವುದು ಬಲ್ಲೆಯಾ (ಲ ಗೌ ೬೧೨)

ಹಿಟ್ಟಾಗೋದಕ್ ಮುಂಚೆ
ಹೆಟ್ಕೊಂಡು ಕೂತ್ಕೊಂಡ (ಸು ೫೧೬)

ನಾಮ

ಅಣ್ಕಸುಣ್ಕ ಬಾಲ್ದಲ್ಲಿ ಬಸವ
ನೀಲಗೊಂಬಿನ ಹೋರಿ
ಮಾತಾಡಿಸಿದ್ರೆ ಮಾತಾಡ್ದೆ ಹೋಯ್ತೀಯಲ್ಲೊ ಗಣಾಚಾರಿ (ಜೀಶಂಪ ೩೯)
ಉಡುದಾರ ಇಲ್ಲ ಕಚ್ಚೇದರ್ಬೆ ಇಲ್ಲ
ದ್ಯಾಮಂಗ್ಲದ ತನಕ ದಡ್ಬಿಡಿ (ಲ ಗೌ ೧೮೭)

ಉಣ್ತಾ ತಿಂತಾ ಬಾಗ್ಲಲ್ ಬೀಳ್ತಾ (ಶಾಂ ನಾ ೧೭)

ತಿಗ ತೊಳೆದವನೊಬ್ಬ ಭಕ್ತ (ವಾಲಿ ೮–೨೫)

ಬಾಳಲಿಲ್ಲ ಬದುಕಲಿಲ್ಲ ತಿರುಗೋನ್ಯಾರು (ಸು ೨೬೮)

ಮನೆ ಬಂಟ ಮಣ್ಣಿಗೆ ಇಲ್ಲ (ಇ ೮೧೭)

ವ್ಯಾಪಾರ ಇಲ್ಲದಾಗ
ಶೆಟ್ಟಿ ಏರ ಇಳಿ ತಿರಗ್ತಾನೆ (ರಾ ಗೌ ೪೨೯)

ರಂಡಮುಂಡೆ ಮನೇಲಿ ಊಟ
ರಾಜಬೀದಿ ನೋಟ (ಸು ೪೪೨)

ಹೋಗಲೆ ಪುಟ್ಟ
ಬಾರೆಲೆ ಪುಟ್ಟ
ಪುಟ್ಟನ ಕಾಲಲಿ ಮೆಟ್ಟಿಲ್ಲ (ಜೀಶಂಪ ೨೯೯)

ಹೋಗೋ ಪುಟ್ಟ
ಬಾರೋ ಪುಟ್ಟ
ನಮ್ಮ ಪುಟ್ಟನ ಕಾಲಿಗೆ ಮೆಟ್ಟೇ ಇಲ್ಲ (ನಾ ಗೌ ೨೪೪)

ಹೋದ ಪುಟ್ಟ ಬಂದ ಪುಟ್ಟ
ಪುಟ್ಟಣ್ಣನ ಕಾಲಿಗಿ ಮೆಟ್ಟೇ ಇಲ್ಲ (ವಾಲಿ ೬–೩೮)

ಹಂಡಾನೆ ಮೈಯವಳು ದುಂಡಾನೆ ಮುಖದವಳು
ಜಂಬೂರು ಸಂತೆಗೆ ಹೋಗಿ ಜಮಕಾಯಿಸಿ ಬರ್ತಾಳೆ (ಲ ಗೌ ೧೦೩೨)
ನಾಯಿ

ಓಣಿಯ ವಜೀರ ಕೋಣಿಯ ಕೋತವಾಲ
ಬಚ್ಚಲ ಬಹಾದ್ದೂರ ಇವರು ಯಾರು (ವಾಲಿ ೬– ೪೦)
ನಾಯಿ, ಕತ್ತೆ, ಕಪ್ಪೆ

ಅಜ್ಜಿ ಹೋಗ್ತಾ ಹೋಗ್ತಾ ಜಲ್ಲು ಕುಣಿಸ್ತಾ ಹೋಗ್ತದೆ (ಲ ಗೌ ೨೬)
ನಾಯಿ ಬಾಲ

ಓಣಿ ವಜೀರ ಕೋಣಿ ಕೊತವಾಲ
ಬಚ್ಚಲ ಬಹಾದ್ದೂರ ತಿಪ್ಪಿಯ ರುದ್ರ
ಮ್ಯಾಲಿನ ಮಲ್ಲ ಸೀಮಿ ಸರದಾರ (ವಾಲಿ ೬–೨೭)
ನಾಯಿ–ಬೆಕ್ಕು, ಕಪ್ಪೆ–ಕೋಳಿ, ಇಲಿ–ಹಾವು

ಓಣ್ಯಾಗಿರ ವಜೀರ
ಮಾಳಿಗಿ ಮ್ಯಾಲಿರ ಮಾಮಲೇದಾರ
ಕ್ವಾಣ್ಯಾಗಿರ ಕೊತವಾಲ (ಲ ಗೌ ೩೫೭)

ಓಣ್ಯಾಗಿರೊ ವಜೀರ
ಮಾಳಿಗಿ ಮ್ಯಾಲಿರೊ ಮಾಮಲ್ದಾರಾ
ಕ್ವಾಣ್ಯಾಗಿರೊ ಕೊತವಾಲ (ಲಠ್ಠೆ ಭಾಗ ೩–೧೮)
ನಾಯಿ–ಮಂಗ–ಬೆಕ್ಕು

ಓಣೀ ವಜೀರ
ಕೋಣೀ ಕೊತವಾಲ
ಬಚ್ಚಲ ಬಹದ್ದೂರ (ಇ ೩೦೭)
ನಾಯಿ, ಕತ್ತೆ, ಕಪ್ಪೆ

ಅಕಟಕಟ ಆಲದಮರ
ತೊಗಟೆ ಸುಲಿದರೆ ಸುಲಿಯದ ಮರ
ನೀರಿಗೆ ಬಿದ್ದರೆ ಕರಗದ ಮರ (ಜೀಶಂಪ ೨೭)

ಅಗಟು ಆಲದ ಮರ ಜೊಗಟು ಗೋಣಿ ಮರ
ಸಿಪ್ಪೆ ಸುಲಿಯದ ಮರ ಗಾಳಿಗೆ ಒಲಿಯದ ಮರ (ಲ ಗೌ ೧೮)

ಅಂಟಂಟು ಆರದ ಮರ
ತೊಂಟೆ ಸುಲಭದ ಮರ
ನೀರಿಗೆ ಕೊಳೆಯುವದಲ್ಲ
ಗಾಳಿಗೆ ಆರುವುದಲ್ಲ (ಲ ಗೌ ೧೧೫)

ಅಂಡೆ ಹೊಟ್ಟೇಲಿ ತೊಂಡೇ ಕಾಯಿ ಕೂತುಗೊಂಡು
ಇದ್ದದ್ದೂ ಹೇಳುತ್ತೆ ಇಲ್ಲದ್ದೂ ಹೇಳುತ್ತೆ (ಲ ಗೌ ೧೧೬)

ಒಂದು ಮುಂಡೇ ಗಂಡನ ಕುದುರೆ
ಕಂಡಿದ್ದೂ ಹೇಳುತ್ತೆ ಕಾಣದ್ದೂ ಹೇಳುತ್ತೆ
ಮನಸಿಗೆ ಬಂದ್ಹಾಗ ಓಡುತ್ತೆ (ಲ ಗೌ ೩೪೫)

ಕೆಮ್ಮಣ್ಣು ಗುಂಡೀಲಿ ತಮ್ಮಣ್ಣ ಕೂತುಗೊಂಡು
ಇದ್ದದ್ದೂ ಹೇಳ್ತಾನೆ ಇಲ್ಲದ್ದೂ ಹೇಳ್ತಾನೆ (ಲ ಗೌ ೪೬೫)

ಕೆಂಡಗಣ್ಣಿನ ಪ್ರಭುಲಿಂಗದೇವರಂತೆ
ಮೈ ತೊಳೆದು ಮಡಿಯುಟ್ಟು
ಮರಳಲ್ಲಿ ಕುಳಿತವರಂತೆ
ತೊಗಲಪುರದವರು ಬಂದು ಕರೆದೊಯ್ದರಂತೆ
ಈ ನರರ ಬಾಧೆಯ ತಾಳಲಾರದೆ
ಕಲ್ಲು ಬಂಡೆಯೊಳಗೆ ಹೋದರಂತೆ (ಲ ಗೌ ೪೭೫)

ಚಪ್ಪರದೊಳಗೆ ಮುಂಡು ಕುದ್ರೆ ಕುಣೀತದೆ (ಲ ಗೌ ೫೫೭)

ಚಿಕ್ಕ ಮನೇಲಿ ಸುಪ್ಪತ್ತಿಗೆ ಹಾಸಿದೆ (ಸು ೨೬೮)

ನೆಲೆಯಿಲ್ಲದ ಹೊಂಡದಲ್ಲಿ ಎಲುಬಿಲ್ಲದ ಪ್ರಾಣಿ (ಚಂ ಸೆ ೧೭೦)

ಬಾವಿ ವಳಗೆ ಬಿದ್ಕಂಡು ಲಬಲಬಾಂತ ಬಡ್ಕೋತ್ಕೈತೆ (ಲ ಗೌ ೭೫೯)

ಬಿಳಿ ಬೆಣಚುಗಲ್ಲ ನಡುವೆ ಕೆನ್ನಾಗರ ಹಾವು (ಲ ಗೌ ೭೬೭)

ಮಲ್ಲಿಗೆ ಮೊಗ್ಗಿನ ಬೇಲಿ ವಳಗೆ ಮಾದೇವ ಮಲಗ್ಯವನೆ (ಲ ಗೌ ೮೨೫)
ಮಳೆ ಬಂದ್ರೂ ಬತ್ತುವುದಿಲ್ಲ
ಮಳೆ ಬರದಿದ್ರೂ ಬತ್ತುವುದಿಲ್ಲ (ಸು ೪೦೧)

ಸಣ್ಣ ಮನೆಯಲ್ಲಿ ಸುಪ್ಪತ್ತಿಗೆ ಹಾಸಿದೆ (ಲ ಗೌ ೯೦೩)

ಹಲಗೆಯ ಸಂದಿನಲ್ಲಿ ಗಿಲಿಗಿಲಿ ಹಾವು (ಲ ಗೌ ೧೦೦೪)

ಹಳ್ಳದಲ್ಲಿ ಹೊಡುಕ್ಯಾಡ್ತದೆ (ಲ ಗೌ ೧೦೨೬)

ಹಳ್ಳದಾಗೊಬ್ಬ ಕುಳ್ಳ ಕೂತ್ಕೊಂಡು
ಬಂದೋರಿಗೆಲ್ಲ ಜವಾಬು ಕೊಡ್ತಾನೆ (ಸು ೫೦೩)

ನಾಲಗೆ

ಕೆಂಪರಾಣಿ ಸುತ್ತಲೂ ಬಿಳೀ ಸೈನಿಕರು (ಇ ೪೪೭)

ನಾಲಗೆ ಹಲ್ಲು

ಅಯ್ಯಯ್ಯ ಆಲದ ಮರಾ
ತೊಗಟಿ ಸುಲದರ ಸುಲಿಯದ ಮರ
ನೀರಾಗ ಬಿದ್ರ ಕರಗದ ಮರಾ (ಲಠೈ ಭಾಗ ೧–೨)

ಜಾಲಿ ಕೊಡ್ಡ
ಹಸ್ಯಾಗ ಇದ್ರೂ
ನೆನೆಲ್ದ ಇದ್ದ ಕೊಡ್ಡ (ಲಠೈ ಭಾಗ ೧–೩೯)

ಭಾರಂಬಾಯಿ ಬೆಳ್ಳಿ ಛಡಿ
ಒಳಗ ಕುಂತದ ಕರಿನಾಗರ ಹೆಡಿ (ಲಠೈ ಭಾಗ ೧–೪೫)

ನಾಲಿಗಿ

ಅಗಟ ಆಲದ ಮರ
ತೊಗಟೆ ಇಲ್ಲದ ಗೋಣಿಮರ
ನೂರೊರ್ಷ ನೀರಲ್ಲಿದ್ರೂ
ಕರಗದ ಮರ (ನಾ ಗೌ ೧೪)

ಅಟ್ಟಟ್ಟ ಆರ್ಯಾಣದಾಗ
ಅಕ್ಕವ್ವ ಸೀರಿ ಒಣ ಹಾಕ್ಯಾಳ
ಆರು ತಿಂಗಳಾದರೂ ಒಣಗುವದಿಲ್ಲ (ವಾಲಿ ೪–೧೦)

ಅಪ್ಪ ಅಂದ್ರ ಮುಟ್ಟೋದಿಲ್ಲ
ಅಣ್ಣ ಅಂದ್ರ ಮುಟ್ಟತೈತಿ (ಇ ೧೦೧)

ಅಯ್ಯಯ್ಯೋ ಇದು ಆಲದಮರ
ನೀರಿಗ್ಹಾಗಿದರ ಕೊಳೆಯದ ಮರ (ವಾಲಿ ೪–೩೦)

ಈಟಾ ಗುಡಿ ಗುಡಿ ತುಂಬಾ ಥಡಿ (ವಾಲಿ ೪–೧)

ಏರಿಮ್ಯಾಲೆ ಒಂದು ಕುಳ್ಳ ಕೂತ್ಕೊಂಡು
ಬಂದವರಿಗೆಲ್ಲ ಜವಾಬು ಕೊಡ್ತಾನೆ (ರಾ ಗೌ ೧೧೭)

ಒಗದು ಕೌದಿ ಒಣ ಹಾಕೀನಿ ಒಟ್ಟ ಆರವಲ್ದು (ಇ ೨೬೩)

ಅಂಗೈಯಷ್ಟು ಗುಡಿಯಾಗ
ರಂಗಚಾರು ಪುರಾಣಾ ಹೇಳ್ತಾರ (ಇ ೪೧)

ಒಂದು ಗುಂಡೀಲಿ
ಒಂದೇ ಕೊರಮ (ರಾ ಗೌ ೧೩೬)

ಕತ್ತಲ ಮನ್ಯಾಗ ಕೆಂಪ್ಯಾ ಒದ್ದಾಡತಾನ (ಇ ೩೨೭)

ಕಿತ್ತೂರ ಕಿಲ್ಲೆಮ್ಯಾಲೆ ಉತ್ರಾಣಿಕಡ್ಡಿ ಬೆಳದೇತಿ
ಕಿತ್ತರೂ ಬರೂದಿಲ್ಲ ಅತ್ತರೂ ಬರೂದಿಲ್ಲ (ಇ ೩೯೬)

ಗದ್ಯಾಗ ಮೊಲ ಒದ್ದಾ್ಯಡತೈತಿ (ಇ ೪೬೪)

ಗುಡ್ಡದ ಮ್ಯಾಲೆ ಗುಡಾರ ಹರಿವ್ಯಾರ, ಆರವಲ್ಲದು (ಇ ೫೦೧)

ತೊಗಲು ದಂತದ ಬಾಗಿಲುಳ್ಳ ಗವಿ
ಅದರೊಳಗಿರುವ ಕೆಂಪು ಗಿಡ್ಡ ರಾಕ್ಷಸನು
ಈಚೆಗೆ ಬಾರನು ಬಂದವರನ್ನೆಲ್ಲಾ
ಒಳಗಿನಿಂದಲೇ ನುಂಗುವನು
ಹಾಗಾದರೆ ಅವನಾರು (ಇ ೫೯೭)

ತಂಬಲ ಮನಿಯಾಗ
ಮುಂಗಲಿ ಓಡಾಡತೈತಿ (ಇ ೬೦೦)

ತಂಬಲ ಮನ್ಯಾಗ ಮುಂಗಲಿ ಓಡ್ಯಾಡತೈತಿ (ವಾಲಿ ೪–೨೩)

ತಾಂಬರ ಕುಡಕ್ಯಾಗೊಂದ ಮುಂಗಲಿ ಓಡ್ಯಾಡತೈತಿ (ಇ ೬೦೧)

ದಪ್ಪಗಿದೆ ಕೆಂಪಗಿದೆ ಹಣ್ಣು ತಾನಲ್ಲ
ಕುಪ್ಪಳಿಸಿ ಹಾರುವುದು ಕಪ್ಪೆಯಲ್ಲ (ಇ ೬೦೮)

ದೊಡ್ಡ ಗುಡ್ಡದ ನಡಕ
ಧೋತರ ಹಾಕ್ಕಾರ ಅದು ಆರೂದಿಲ್ಲ (ಇ ೬೨೨)

ಮೈಸೂರು ದಿರಸು
ತಿಗಣೆ ಹಾರಸು
ಐದು ಜನ ಕರಸು
ಹಜಾರದ ಬಾಕ್ಲ ತೆಗೆಸು (ರಾ ಗೌ ೪೧೨)

ಹಲ್ಲಿಗೆ ಮೂರು ಸೊಲ್ಲು (ರಾ ಗೌ ೪೭೯)
ನಾಲಿಗೆ

ಬಿಲದಲ್ಲಿರುವ ಹಾವಿಗೆ
ಮೂವತ್ತೆರಡು ಜನ ಅಂಗರಕ್ಷಕರು (ಇ ೭೪೩)
ನಾಲಿಗೆ–ಹಲ್ಲು

ಅಂಗಡೀ ಗುರುಸಿದ್ಧವ್ವಾ ನನ್ನಾ ೃಕ ಕರಿಸಿದ್ದೆವ್ವಾ
ಮೂಗು ಮಾರೀ ಒರಿಸಿದ್ದೆವ್ವಾ (ಇ ೨೭)
ನಾಸಿಪುಡಿ

ನೀರಲ್ಲಿ ನಡೆಯುವುದು ಮೃಗವು ತಾನಲ್ಲ
ಹಾದಿ ನಡೆಯುವುದಿಲ್ಲ ಹಾರುವುದೂ ಇಲ್ಲ (ವಾಲಿ ೧–೩೬)

ಹಾಲು ಉಕ್ಕಿದರ ನೀರು ಹಾಕ್ತಾರ
ನೀರು ಉಕ್ಕಿದರ ಏನು ಹಾಕ್ತಾರ
ನಾವೆ (ವಾಲಿ ೧–೩೪)

ಅತ್ತಿ ನೋಡಿ ಬಂದು
ಹುತ್ತಕ್ಕೆ ಕಾಲಿಕ್ಕಿದ (ಜೀಶಂಪ ೫೩)

ಅತ್ತಿಂದ ಬಂದ
ಹುತ್ತಕ್ಕೆ ಕಾಲಿಕ್ಕಿದ (ಸು ೨೮)
ನಿಕ್ಕರು

ಯಜಮಾನ ಬರದ್ದು ಸಂತೆ ಆಗಲ್ಲ (ಸು ೪೩೬)
ನಿಗದಿಯಾದ ವಾರ (ದಿನ)

ಕಣ್ ಮುಚ್ಕಂಡು
ಕಾಲ್ ನೀಡ್ಕಂಡು
ಬಾಗ್ಲಿಕ್ಕಂಡು
ಅವ ಮಾಡ ಕೆಲ್ಸ ಮಾಡ್ತಿದ್ದ (ಮಂ ೧.೩–೩)

ತುಂಬಿದ ಹಂಗಾಯ್ತು
ತೂಗದ ಹಂಗಾಯ್ತು (ರಾ ಗೌ ೨೭೨)
ನಿದ್ದೆ

ಅಗ್ನಿಯ ಮಿತ್ರ
ಮಿತ್ರನ ಗುರು
ಗುರುವಿನ ವೈರಿ
ವೈರಿಯ ತಮ್ಮ
ತಮ್ಮನ ಹೆಂಡತಿ ಯಾರು (ಲಠೈ ಭಾಗ ೫–೩೭)

ಲೋಕಾನೆಲ್ಲ ದಿನಕ್ಕೊಂದು ಬಾರಿ ಕೊಂದು
ಮತ್ತೆ ಜೀವ ಕೊಡುತ್ತೆ (ಲ ಗೌ ೮೯೬)

ಹರನ ಹಾರನ ಆಹಾರನ
ಸ್ವಾಮಿಯ ವೈರಿಯ
ಅನುಜನ ಸತಿಯು ಎನಗೊಲಿದಳೋ
ನಿನಗೊಲಿದಳೋ (ಇ ೧೦೧೬)
ನಿದ್ರೆ

ಅಕ್ಕಕ್ಕ ಗಿಡಾ ನೋಡ
ಗಿಡದ ತುಂಬ ಕಾಯಿ ನೋಡ
ಕಾಯಿ ತಿಂದಾವ್ರ ಬಾಯಿ ನೋಡ (ಲಠ್ಠೆ ಭಾಗ ೪–೧)

ಕರಿ ಸೀರಿ ಗರತಿ
ಗಿಡ್ಡ ಮ್ಯಾಗ ಇರತಿ
ಕಲ್ಲ ಬೀಸಿದ್ರ ಬರತಿ (ಲಠ್ಠೆ ಭಾಗ ೪–೬೩)

ಕರಿ ಸೀರಿ ಗರತಿ
ಯಾವೂರಾಗ ಇರತಿ
ಪ್ಯಾಟ್ಯಾಗ ಇರತಿ
ರೊಕ್ಕಾ ಕೊಟ್ಟರ ಬರತಿ (ಲಠ್ಠೆ ಭಾಗ ೪–೬೭)

ಗಿಡದ ತುಂಬ ಮಸಿಕೆಂಡ (ಲಠ್ಠೆ ಭಾಗ ೪–೮೯)
ನೀರಲ ಹಣ್ಣ

ಅಲ್ಲಾಸಿ ಬೆಲ್ಲಾಸಿ ಕರೇ ಹುಡುಗಿ ಮೈ ಬಲು ಸಿಹಿ (ಇ ೧೩೫)

ಗಿಡದ ತುಂಬಾ ಮಸೀ ಕೆಂಡ (ಇ ೪೭೭)
ನೀರಲ ಹಣ್ಣು

ತೆಗ್ಗಿನಾಗ ಬಸರಾಗ್ತದ
ಒಡ್ಡಿಗಿ ಬಂದ ಹಡಿತದ (ಲಠ್ಠೆ ಭಾಗ ೫–೧೭೩)
ನೀರ ಸೇದೋ ಬಾರ್ಡೆ (ಬಾದಲಿ)

ಹೋಗುತ್ತಾ ಬಾಣಂತಿ ಬರುತ್ತಾ ಬಸಿರಿ (ಲ ಗೌ ೧೦೮೩)
ನೀರಿನ ಕೊಡ

ನೀರಲ್ಲೆ ಹುಟ್ಟುತ್ತದೆ
ನೀರಲ್ಲೆ ಬೆಳೆಯುತ್ತದೆ
ನೀರಲ್ಲೆ ಕ್ಷಣಕ್ಕೆ ಸಾಯುತ್ತದೆ (ರಾ ಗೌ ೩೧೮)
ನೀರಿನ ಗುಳ್ಳೆ

ಅಗಿದರೆ ಹಲ್ಲಿಗೆ ಸಿಗೊಲ್ಲ
ಹಿಡಿದರೆ ಕೈಗೆ ಸಿಗೊಲ್ಲ
ಬಿಟ್ಟರೆ ಬಿದ್ದೋಡ್ತದೆ (ಲ ಗೌ ೧೭)

ಕಡದರ ಕಚ್ಚ ಆಗೂದಿಲ್ಲ
ಹಿಡಿದರ ಮುಟ್ಟಗಿ ಆಗೂದಿಲ್ಲ (ವಾಲಿ ೧–೧೪)

ಕಡಿದರೆ ಕಚ್ಚಲ್ಲ ಹಿಡಿದರೆ ಹಿಡಿಯೋಲ್ಲ (ಲ ಗೌ ೩೬೬)

ಕಡಿದರೆ ಕಚ್ಚಾಗುವದಿಲ್ಲ
ಒಡೆದರೆ ಮುಕ್ಕಾಗುವದಿಲ್ಲ (ಇ ೩೧೫)

ಕಡಿದರೆ ತುಂಡಾಗುವುದಿಲ್ಲ (ಲ ಗೌ ೩೬೫)

ಕೈಗೂ ಇಲ್ಲ ಬಾಯ್ಗೂ ಇಲ್ಲ
ಮೋಡದಾಗ ಮನೀ ಮಾಡೈತಿ (ಇ ೪೧೭)

ಕೈಗೆ ಸಿಕ್ಕೊಲ್ಲ ಹಲ್ಲಿಗೆ ದಕ್ಕೊಲ್ಲ (ಲ ಗೌ ೪೮೬)

ಬೀದಿಂದ ಬರ್ತಾರೆ
ಕಡಾಯ ನೋಡ್ತಾರೆ (ರಾ ಗೌ ೩೬೦)

ಮನೆ ಸುತ್ಲೂ ಗಯ್ಲ್ ಗಯ್ಲ್ ಅಂತೀದು (ಶಾಂ ನಾ ೧೪)

ರೂಪವಿಲ್ಲ ಬಣ್ಣವಿಲ್ಲ ರುಚಿ ಇಲ್ಲ
ಇದನ್ನು ಬಿಟ್ಟರೆ ಗತಿ ಇಲ್ಲ (ಚಂ ಸೆ ೨೧೬)

ಹಿಡಿದರ ಹಿಡಿಕಿ ಆಗುದಿಲ್ಲ
ಕಡಿದರೆ ಕಚ್ಚು ಆಗುದಿಲ್ಲ (ಇ ೧೦೭೫)

ಹಿಡಿದರ ಹಿಡಿತ ಆಗುದಿಲ್ಲ
ಕಡದರ ಕಚ್ಚ ಆಗುದಿಲ್ಲ (ವಾಲಿ ೧–೪೪)

ಹಿಡಿದರೆ ಹಿಡಿಯಾಗುವುದಿಲ್ಲ
ಕಡಿದರೆ ಕಚ್ಚಾಗುವುದಿಲ್ಲ (ಲ ಗೌ ೧೦೪೯)

ಹಿಡಿದರೆ ಹಿಡಿಯಾಗೊಲ್ಲ
ಹೊಡುದ್ರೆ ಚೂರಾಗೋದಿಲ್ಲ (ನಾ ಗೌ ೨೩೬)

ಓಡುವದು ಒಂದು
ಆಡುವದು ಇನ್ನೊಂದು
ನಿಲ್ಲುವದು ಮತ್ತೊಂದು (ವಾಲಿ ೧–೨೦)

ಒಂದು ಓಡುತ್ತೆ
ಒಂದು ಆಡುತ್ತೆ
ಒಂದು ನಿಲ್ಲುತ್ತೆ (ರಾ ಗೌ ೧೫೦)
ನೀರು, ಮೀನು, ಬಂಡೆ

ದಡಬಡ
ನನ್ನ ಎಡಗೈ ನಿನ್ನ ಹೆಗಲಿಗೆ
ನನ್ನ ಬಲಗೈ ನಿನ್ನ ಬಾಯೊಳಗೆ (ಚಂ ಸೆ ೧೪೨)

ನೀರು ತುಂಬುವ ಕೊಡ
ಅಡ್ಡ ಕೊಯ್ದರೆ ಚಕ್ರ
ನೀಟ ಕೊಯ್ದರೆ ಶಂಖ
ಬಿಡಿಸಿದರೆ ಹತ್ತಿಪ್ಪತ್ತು
ಮೂಸಿದರೆ ವಾಸನೆ (ಚಂ ಸೆ ೮)

ಅಂಗಡಿಯಿಂದ ತರುವುದು
ಮುಂದಿಟ್ಟುಕೊಂಡು ಅಳುವುದು (ಚಂ ಸೆ ೨೭)

ಸಂತೀಗಿ ಬರ್ತೀರ್ಯಾಕ
ನನ್ನ ತರ್ತೀರ್ಯಾಕ
ಮುಂದ ಕುಂತಗೊಂಡು ಅಳ್ತೀರ್ಯಾಕ (ಇ ೯೭೨)
ನೀರುಳ್ಳಿ

ಕರಿ ಮಾರ್ಯಾಕಿ ಕರಿ ಸೀರ್ಯಾಕಿ
ರೊಕ್ಕಾ ಕೊಟ್ಟರ ಸಿಗಾಕಿ (ಲಠ್ಠೆ ಭಾಗ ೪–೬೧)
ನೀಲಕಾಯಿ

ತಿಂತ ತಿಂತ ಕರಿ ತೊಣ್ಯಾಗ ತಿಂತ
ತಿಂತ ತಿಂತ ಬೀಜ ಇದ್ದಾಂವಗ ತಿಂತ
ತಿಂತ ತಿಂತ ಬೀಜ ಇಲ್ಲವಗ ತಿಂತ (ಲಠ್ಠೆ ಭಾಗ ೪–೧೧೩)
ನೀಲಕಾಯಿ, ಚಾಪಳಕಾಯಿ, ಬಾಳಿಕಾಯಿ

ಅಟ್ರ ಅಡಿಗಿ ಬಿಟ್ರ ಬಡಿಗಿ (ಲಠ್ಠೆ ಭಾಗ ೪–೧೭)

ಕಾಸಿನಗಲ ಎಲೆ
ಮೊಳ ಉದ್ದದ ಕಾಯಿ (ಇ ೩೯೩)
ನುಗ್ಗಿಕಾಯಿ

ಬುಡ್ಡ ಬಸಪ್ಪ ಬಡ್ಡಿತನ ಹೊಡಿತನ (ಲಠ್ಠೆ ಭಾಗ ೫–೨೨೪)
ನುಗ್ಗಿಮುಳ್ಳ
ಮರವೂ ಕೋಲಾಡ್ತು (ಶಾಂ ನಾ ೧೯೬)

ವಂದ್ಮರಕ್ಕೆ ಕೋಲೇ ಕೋಲು (ಶಾಂ ನಾ ೧೯೭)
ನುಗ್ಗೆ

ಅಕ್ಕನ್ದು ಕಾಸನಗಲ
ಮಾವುನ್ದು ಮಾರುದ್ದು (ನಾ ಗೌ ೯)
ನುಗ್ಗೆ ಎಲೆ, ನುಗ್ಗೆಕಾಯಿ

ಕಾಸಿನಗಲ ಎಲೆ
ಮೊಳದುದ್ದ ಕಾಯಿ (ಜೀಶಂಪ ೧೨೬)

ಬಟುವಾದ ಎಲೆ
ನಿಟುವಾದ ಕಾಯಿ (ಸು ೩೫೯)
ನುಗ್ಗೆಕಾಯಿ

ಕೊಟಗ್ಯಾನ ಪಾರಾ
ಲಟಗಿ ಹೊಡಿತತಿ (ಲಠ್ಠೆ ಭಾಗ ೪–೮೪)
ನುಚ್ಚ

ಹುಟ್ಟುಹ್ಲೆ ಲಟಗಿ ಹೊಡಿತೈತಿ (ಇ ೧೦೮೮)
ನುಚ್ಚು

ಆರು ಕಾಲಿನ ಆನಿ ಅನ್ನಾ ತಿಂತೈತಿ ನೀರ ಕುಡುವಲ್ಲದು (ಇ ೧೭೭)

ಆರ್ಕಾಲಿನ ಆನಿ ಅನ್ನಾ ತಿಂತತಿ
ನೀರ ಕುಡಾಂಗಿಲ್ಲಾ (ಲಠ್ಠೆ ಭಾಗ ೩–೯)

ಕಾಳ ತಿಂತೈತಿ ನೀರು ಕುಡಿಯೊದಿಲ್ಲ (ವಾಲಿ ೬–೬೧)

ಕೊಣ್ಣ ಮನೆ ಕುಯ್ಕ್ ಬಟ್ಟಾ (ಶಾಂ ನಾ ೫೬)

ಗಿಡ್ಡ ಮಗಾ ಗುಡ್ಡಾ ಏರ್ತತಿ (ಲಠ್ಠೆ ಭಾಗ ೩–೩೩)
ಆರು ಕಾಲಿನ ಆನಿ

ಖಂಡಗ ಅನ್ನಾ ತಿಂತದ ನೀರ ಕುಡ್ಯಾಲ (ಲಠ್ಠೆ ಭಾಗ ೩–೩೧)

ಖಂಡಗ ಜ್ವಾಳಾ ಕಾತಕನಯ್ಯಾ
ಮಾತೂ ಗೀತೂ ಬೋವಾನಯ್ಯ
ಮನ್ಯಾಗಂತೂ ಪೇತಲಿನಯ್ಯಾ (ಇ ೪೫೮)

ಹಾಸಿದರೆ ಹಾಲ್ ತುಂಬಾ
ಹಿಡಿದರೆ ಹಿಡಿ ತುಂಬಾ (ಇ ೧೦೭೨)
ನುಸಿ

ಇನ್ನೂರಲ್ಲಿ ನನ್ನೂರು ಹೋದ್ರೆಷ್ಟು (ಸು ೮೯)
ನೂರು

ನೂರೆತ್ತು ಒಂದೇ ಪಿಂಡಿ (ರಾ ಗೌ ೩೨೧)
ನೂರು ರೂಪಾಯಿ ನೋಟು

ಏಳು ಮಡಕೆ
ಏಳು ಮಡಕೆಗೆ ಏಳೇಳು ಕುಡಿಕೆ
ಏಳೇಳು ಕುಡಿಕೆಗೆ ಏಳೇಳು ಪಾಲು ಅಡಿಕೆ (ರಾ ಗೌ ೧೨೧)
ನೂರೆರಡು

ನುಲಿಮಲಿ ತಕ್ಕೊಂಡು ಗಲಿಬಿಲಿಗೆ ಹೋದ (ಲ ಗೌ ೭೦೩)
ನೂಲು

ಚಿಣ ಮಿಣ್ಕ ಕುಣಿ ಕುಣಿತಾ ಬಸುರಾದ (ಮಂ ೧.೬–೨)
ನೂಲುಹಗ್ಗ

ಸಾಲ್ ಮರದಾಗ್ ಕೋಲ್ ಹುಯ್ತಾರೆ (ಲ ಗೌ ೯೩೨)
ನೂಲು ಹೊಯ್ಯುವುದು

ಗುಂಡ ಮಾರಿ ಗುರಿಸಿದ್ದ
ಹಿಂದಕ್ಕೊಮ್ಮೆ ಕರಸಿದ್ದ
ಆಂಡಮಟಾ ಸಿಗಸಿದ್ದ (ವಾಲಿ ೨–೩೩)

ನಿನ್ನ ಹಟ್ ನಿನ್ನ ಬಗ್ಗುಸ್ತತಿ (ಲ ಗೌ ೬೭೭)
ನೆಗ್ಗಲ ಮುಳ್ಳು

ಕಾಯಿಕರಿ ಮುಖ
ಹೂವುಚದರ ಮುಖ
ಇದರ ಹೆಸರು ಅಯ್ಯಯ್ಯಪ್ಪ (ಜೀಶಂಪ ೧೨೫೫)
ನೆಗ್ಗಿನ ಮುಳ್ಳು

ಒಂಟೊಂಟು ಒಡೇರ ಗಂಟು
ನಂಟೀಪುರ ನಾಗಮಂಗಲ ನುಗ್ಗ ಮುರಿಯ (ಲ ಗೌ ೨೯೯)
ನೆಗ್ಗಿಲ ಮುಳ್ಳು

ಕಾಯಿ ಕಕಮುಖ
ಹೂವು ಚದುರಂಗ
ಅದರ ಹೆಸರು ಅಯ್ಯಪ್ಪ (ಇ ೩೮೫)
ನೆಗ್ಗಿಲು ಮುಳ್ಳು

ಹೋದರೂ ಇರ್ತದ
ಮೇದರೂ ಚಿಗರತದ (ವಾಲಿ ೬–೫೬)

ಹೋದರೂ ಇರ್ತದೆ
ಮೇದರೂ ಚಿಗರ್ತದೆ (ಸು ೫೩೫)
ನೆನೆಪು

ಅಡಕಿ ಹಾಗರಾ ಹೂವಿನ ಸಾಗರಾ
ಅದರ ಬಲ್ಲಿ ಬರಿ ಉಡಗ್ರ (ಲಠೈ ಭಾಗ ೫–೧೧)
ನೆಯಟ್ಯಾನ ಕಂಟಿ

ಕುಣಿಯಾಗ ಕುಂತರೂ ಕುಣಿಯೂದು ಬಿಡವೊಲ್ಲ (ಇ ೪೧೧)
ನೆಯ್ಕಾರ

ಬಾ ಅಂದ್ರ ಬರಾಂಗಿಲ್ಲ ಬಂದ್ರೂ ಬರಾಂಗಿಲ್ಲ
ಬರುತ್ತಿದ್ದರ ಬರತಾನ (ಲಠೈ ಭಾಗ ೫–೨೧೨)

ವಡಕತಿ ವಡಿ ನನಸರಿ ನಡಿ (ಲಠೈ ಭಾಗ ೫–೨೬೯)

ಹೋಗಂದ್ರ ಹೋಗಲ್ಲ ನಮಗ ಬಿಟ್ಟ ಇರಲ
ಹೇಳಿದ ಮಾತ ಕೇಳಲ ನಾವ ಮಾಡಿದ್ದ
ಮಾಡಲಾರದ ಇರಲ (ಲಠ್ಠೆ ಭಾಗ ೫–೩೧೬)
ನೆರಳ

ಕೆಲಸವನ್ನು ಮಾಡಲಾರ
ಕತ್ತಲಲ್ಲಿ ಅಡಗುವನು (ಚಂ ಸೆ ೧೫೧)

ನನಗೊಬ್ಬ ನೆಂಟ
ಅವ ದೊಡ್ಡ ಬಂಟ
ಕೆಲಸವನ್ನು ಮಾಡಲಾರ
ಕತ್ತಲಲ್ಲಿ ಅಡಗುವನು (ಚಂ ಸೆ ೧೫೧)

ನಾ ಬಿದ್ರ ಬೀಳತಾನ ಎದ್ರ ಏಳತಾನ
ಕತ್ತಲದಾಗ ನನ್ನೊಳಗ ಸೇರತಾನ (ವಾಲಿ ೮–೪೭)

ನಾ ಬಿದ್ರ ಬೀಳತಾನ ಎದ್ರ ಏಳಾತಾನ
ಕತ್ತಲ್ದಾಗ ನನ್ನೊಳಗ ಹೊಗತನ (ಇ ೬೪೦)

ನಾನು ಬಂದರೆ ಬತ್ತದೆ ನಿಂತರೆ ನಿಲ್ತದೆ
ಕತ್ತಲಲ್ಲಿ ಕರಗಿ ಹೋಗ್ತದೆ (ಲ ಗೌ ೬೬೧)

ನೋಡಿದರೆ ಕಪ್ಪು
ನಾವೆಲ್ಲಿ ಹೋದ್ರೂ ನಮ್ಮ ಹಿಂದೇ ಬತ್ತದೆ (ಲ ಗೌ ೭೧೫)

ನಿಂತರೆ ನಿಲ್ತದೆ
ಕುಂತರ ಕೂರ್ತದೆ
ಓಡಿದರೆ ಓಡ್ತದೆ (ಸು ೩೪೨)

ಬಂದ ನೆಂಟ ಹೋದ ನೆಂಟ
ಬಂದ ದಾರಿ ಗೊತ್ತಿಲ್ಲ (ವಾಲಿ ೧–೩೯)

ಬೆಂಕಿಗೆ ಹಾಕಿದರೆ ಸುಡಲ್ಲ
ನೀರಿಗೆ ಹಾಕಿದರೆ ನೆನೆಯಲ್ಲ (ಸು ೩೯೦)

ಹಿಡಿದ ದೆಯ್ಯ ಬಿಡಲ್ಲ (ಸು ೫೧೭)

ಹೋದ ನೆಂಟ
ಬಂದ ನೆಂಟ
ಬಂದ ದಾರಿ ಗೊತ್ತಿಲ್ಲ (ಜೀಶಂಪ ೩೦೦)

ಹೋದಲ್ಲೇ ಬರತಾನ ಕರಿಯಪ್ಪಾ (ಇ ೧೧೨೦)

ಹೊಂಚಿರುವ ದೆವ್ವ
ಹೋದ ಕಡೆಗೆಲ್ಲಾ ಬರುತ್ತೆ (ಇ ೧೧೨೨) (ರಾ ಗೌ ೫೦೩)
ನೆರಳು

ಹುಟ್ಟುತಲೆ ಹಸುರುಂಟು ಪಚ್ಚೆ ತಾನಲ್ಲ
ಮಧ್ಯದಲಿ ಕೆಂಪುಂಟು ನವರತ್ನವಲ್ಲ
ಕಟ್ಟಕಡೆ ಕಪ್ಪುಂಟು ಕಸ್ತೂರಿಯಲ್ಲ
ಇದ ಹೇಳಬಲ್ಲ ಜಾಣರು ಕಂಡಿಹರಲ್ಲಾ (ಇ ೧೦೮೪೪)
ನೆರಳೇ ಹಣ್ಣು

ಆತತಿ ಬಾತತಿ ನೇತತಿ (ಲಠೈ ಭಾಗ ೫–೪೩)
ನೆಲ ಅಗಳಿ, ಕಣಜ, ನೆಲುವು

ಗಿಡಮರಕ್ಕೆ ಗೆಜ್ಜೆಕಟ್ಟಿದೆ (ಜೀಶಂಪ ೧೩೬)

ಮನೆಮೇಲೆ ಮನೆಕಟ್ಟಿ
ಮಂಟೇದಗಳ ಬೀಸಿ (ಜೀಶಂಪ ೨೧೨)
ನೆಲಗಡಲೆ

ತಾಯ್ ತರಕಿ
ಮಗಳು ಹರಿಕಿ
ಮೊಮ್ಮಗಳು ಕಮಡ್ಗೆಕಾಳು (ಲ ಗೌ ೬೦೦)
ನೆಲಗಡಲೆ ಗಿಡ, ಕಾಯಿ, ಕಾಳು

ಬಡಬಡ ಅಂತ ಹೋಗಿ ಬುಡದಲ್ಲಿ ಮೊಟ್ಟೆ ಇಡ್ತು (ಲ ಗೌ ೭೩೬)
ನೆಲಗಡಲೆ, ಬೆಂಕಿ

ಸಂಜೆಲ್ಲ ಹೊರತೈತಿ
ರಾತ್ರಿ ಬತ್ತಲೆ ನಿಲ್ಲತೈತಿ (ಇ ೯೨೪)
ನೆಲಗಣಿ ಅಥವಾ ನೆಲವು

ಅಕ್ಕ ನೆಯ್ದ ಹಸೆ ತಂಗಿ ಹತ್ರು ನೆಗೂಕಾಗೂದಿಲ್ಲಾ
ತಂಗ್ ಗೆಯ್ದ್ ದುಡ್ದು ಅಕ್ಕ ಹತ್ರ ಲೆಕ್ಕಾ ಮಾಡೂಕಾಗೂದಿಲ್ಲಾ (ಶಾಂ ನಾ ೧೧)
ನೆಲ ಚಾರ್‌ಕ್ಲಾ

ನಮ್ಮನ್ಯಾಗ್ ಒಂದು ಹುಡಿಗ್ಯೈತಿ
ಹಿಂದ್ ಹಿಂದ್‌ಕೆ ತೆವೀತೈತಿ (ಲ ಗೌ ೬೫೨)
ನೆಲ ಬಳಿಯುವುದು

ಆರು ಗೆರೆಯುಂಟು ಈರೆಕಾಯಲ್ಲ
ಒಳಗೆ ಹುಳಿಯುಂಟು ಹುಣಸೆಕಾಯಲ್ಲ
ಮೇಲೆ ಹಳದಿ ಬಣ್ಣ ಉಂಟು ನಿಂಬೆ ಹಣ್ಣಲ್ಲ
ಹಾಗಾದರೆ ನಾನಾರು (ಸು ೮೫)

ಆರು ದಾರಿಯುಂಟು ಹೀರಿಕಾಯಿಯಲ್ಲ
ಒಳಗೆ ಹುಳಿಯುಂಟು ಹುಣಸಿಹಣ್ಣಲ್ಲ
ಹಳದಿ ಬಣ್ಣ ಮೇಲೆ ನಿಂಬೆ ಹಣ್ಣಲ್ಲ
ಇದು ಹೇಳಬಲ್ಲ ಜ್ಞಾನಿಗರಿದಲ್ಲ (ಲಠ್ಠೆ ಭಾಗ ೪–೩೮)

ಆರು ಧಾರೆಗಳುಂಟು ಹೀರೆಕಾಯಲ್ಲ
ಒಳ್ಗೆ ಹುಳಿಯುಂಟು ಹುಣಸೆ ಹಣ್ಣಲ್ಲ
ಮೇಲೆ ಹಳದಿಯುಂಟು ನಿಂಬೆ ಹಣ್ಣಲ್ಲ
ಹೇಳಬಲ್ಲ ಜಾಣರಿಗೆ ಅರಿದಲ್ಲದಿಲ್ಲ (ಚಂ ಸೆ ೩೯)

ಆರು ಮೂಲೆ ಕಾಯಿ ಹೀರೆ ಕಾಯಲ್ಲ
ಮೇಲೆ ಹಳದಿ ಉಂಟು ನಿಂಬೆಹಣ್ಣಲ್ಲ
ಒಳಗೆ ಹುಳಿಯುಂಟು ಹುಣಿಸೆಹಣ್ಣಲ್ಲ (ಜೀಶಂಪ ೬೪)

ಎಸರಿಗೆ ಹಾಕಿದರೆ ನಾಲ್ಕು ಬೇಳೆ (ಲ ಗೌ ೨೪೯)
ನೆಲ್ಲಿಕಾಯಿ

ಆರು ದಾರಿಗಳುಂಟು ಹೀರೇಕಾಯಿಯಲ್ಲ
ಒಳಗೆ ಹುಳಿ ಉಂಟು ಹುಣಸೆ ಹಣ್ಣಲ್ಲ
ಮೇಲೆ ಹಸುರುಂಟು ಲಿಂಬೆಹಣ್ಣಲ್ಲ (ಇ ೧೭೮)
ನೆಲ್ಲೀಕಾಯಿ

ಆರ ಕಾಲಿನ ಮನಸ್ಯಾ
ತಲಿ ತೆಳ್ಯಾಕ ಮಾಡಿ
ಕಾಲ ಮ್ಯಾಲ್ಕ ಮಾಡಿ
ಜೋತಾಡತಾನ (ಲಠ್ಮೆ ಭಾಗ ೫–೫೩)

ಆಲೇರ ಬಾಲೇರ
ಅವರೊಂದ ಕುಲದವರ
ಹಾಲ ಮಸರ ಹೊತಗೊಂಡ ತೂಗ್ಯಾಡಾವರ (ಲಠ್ಮೆ ಭಾಗ ೫–೫೫)
ನೆಲುವ

ಅರವಗ ಆರಕಣ್ಣ
ಮರವಗ ಮೂರಕಣ್ಣ
ಕೆಂದತ್ತಿಗಿ ಒಂದ ಕಣ್ಣ (ಲಠ್ಮೆ ಭಾಗ ೫–೨೮)
ನೆಲುವ, ಟೆಂಗ, ಗುಲಗಂಜಿ

ಆಲೇರು ಬಾಲೇರು ಅವರೊಂದು ಕುಲದವರು
ಹಾಲು ಮೊಸರು ಹೊತ್ತು ತೂಗ್ತಾರೆ ಅವರು (ಲ ಗೌ ೧೬೧)

ತೆಳಗ ತೆಲಿ ಮ್ಯಾಲ ಕಾಲು
ಜೋತಾಡು ಅಪ್ಪನ ಮಾತಾಡಸೀರೇನು (ಇ ೫೯೫)
ನೆಲುವು

ಅರವಿಗೆ ಆರು ಕಣ್ಣು
ಮುರವಿಗೆ ಮೂರು ಕಣ್ಣು
ಕೆಂದೆತ್ತಿಗೆ ಒಂದೇ ಕಣ್ಣು (ಇ ೧೨೨)
ನೆಲುವು, ತೆಂಗು, ಗುಲಗಂಜಿ

ತಾ ಗಿಂಡಿ ತತ್ತರ ಗಿಂಡಿ
ಮುಚ್ಲಾ ತೆಗ್ದ್ರೆ ಮುನ್ನೂರು ಗಿಂಡಿ (ಶಾಂ ನಾ ೫)
ನೆಲ್ಲಿ

ಕುಡ್ಕೀಲೆ ಕುಡ್ಬಾಳೆಲೆ (ಶಾಂ ನಾ ೧೦೬)

ಕುಳ್ಳಾ ಕುಳೀಲ್ ಕುಳ್ತೆ
ಬಂದವ್ರೀಗೆಲ್ಲಾ ಉತ್ರಾಕುಡ್ತಾ ೪ (ಶಾಂ ನಾ ೧೦೮)

ಕೆಂಪ್ ಸೀರೆ ಬೆಳಿ ಪಾಗಾರಾ (ಶಾಂ ನಾ ೧೦೯)

ಗುಡ್ಡೀಮೆನ್ಹರ್ಗ್‌ದುಸ್ತಾ ಉಣ್ಗೂದೇ ಇಲ್ಲಾ (ಶಾಂ ನಾ ೧೦೭)
ನೆಲ್ಗೆ

ಏರಿ ಹಿಂದೆ ಬಾಲ ಬೀಸ್ತದೆ (ಸು ೧೨೫)
ನೆಲ್ಲು ಪೈರು

ಕುಣ್ಯಾಗ ಕೂಡಿತಾನ ಹೆಣಾ ಅಲ್ಲ
ಅರಿವಿ ಹರಿತಾನ ಹುಚ್ಚ ಅಲ್ಲ (ವಾಲಿ ೭–೨೦)
ನೇಕಾರ, ಸಿಂಪಿಗ

ಬಿಳೀ ಕುದುರಿ ಬಿಕ್ಕೊಂಡು ನಿಂತೈತಿ (ವಾಲಿ ೩– ೫)
ನೇಕಾರರ ಹಸರುಣಿಗಿ

ಆಡು ಬಂದು ಗೋಡೆ ಸೇರಿತು (ಸು ೮೦)

ಅಂಕ ಡೊಂಕ ಅಡರ ಮೆಡರ (ಸು ೫೪೪)

ಸಂದೆಗಂಟ ದೇಶ ತಿರುಗಿ
ಸಂದೇನಾಗ್ ಒಂದು ಮೂಲೆ ಸೇರ್ತು (ಲ ಗೌ ೯೩೦)
ನೇಗಿಲು

ಅಂಕಡೊಂಕ ಸಂಕಪಾಲ
ಮೂರು ತಲೆಗೆ ಹತ್ತು ಕಾಲು (ಇ ೧೬)
ನೇಗಿಲು–ಎತ್ತು–ಮನುಷ್ಯ

ಕರಿ ಸೀರಿ ಗರತಿ
ಪ್ಯಾಟ್ಯಾಗ ಇರತಿ
ರೊಕ್ಕಾ ಕೊಟ್ಟರ ಬರತಿ (ಇ ೩೫೯)
ನೇರಲ ಹಣ್ಣು

ಅರೇದಲ್ಲಸ್ರು
ದುರೇಯದಲ್ ಕೆಂಪು
ಮುಪ್ಪಾಯಿತ್ಲೆ ಕಪ್ಪು (ಮಂ ೧.೪–೧೪)
ನೇರಲೆ ಹಣ್ಣು

ಅಕ್ಕ ಅಕ್ಕ ಗಿಡನೋಡೆ
ಗಿಡದ ತುಂಬ ಕಾಯಿನೋಡೆ
ಕಾಯಿ ತಿಂದೋರ ಬಾಯಿನೋಡೆ (ಜೀಶಂಪ ೪೭)
ನೇರಳೆ

ಕರಗಿ ಖಂಡ ಕಡಿದ
ಹುಳಿಕಿ ತುಪ್ಪ ಕುಡಿದ
ಉದ್ದಿನವಳ್ಹಾಟ ಕುಡಿದ (ರಾ ಗೌ ೧೭೧)
ನೇರಳೆ, ಜೇನು, ಕಬ್ಬು

ಹರೆಯದಲ್ಲಿ ಹಸುರು
ಬೆಳೆವಾಗ ಕೆಂಪು
ಮುಪ್ಪು ಬರುತ್ತಲೆ ಕಪ್ಪು (ಚಂ ಸೆ ೨೩೯)
ನೇರಳೆ ಹಣ್ಣು

ಕರೀ ಸೀರೆ ಗರತಿ
ನಿನ್ ಕಂಡ್ರೆ ಬಲ್ ಪಿರೀತಿ
ತುಮಕೂರು ಪೇಟೇಲಿ ಇರ್ತಿ
ಕಾಸು ಕೊಟ್ರೆ ಬರ್ತಿ (ಸು ೧೮೬)

ಹಸಿರು ಮರದಿಂದ ಇದ್ದಲು ಸುರಿಯುತ್ತೆ (ಚಂ ಸೆ ೨೪೪)

ಹಸುಳೆ ಹಸುರು
ಹರೆಯ ಕೆಂಪು
ಮುಪ್ಪು ಕಪ್ಪು (ಸು ೫೦೨)

ಹುಟ್ಟುತಲೆ ಹಸಿರು
ಬೆಳೆ ಬೆಳೆಯುತ ಕೆಂಪು
ಕಟ್ಟಕಡಸೇರಿ ಕಪ್ಪು ಕಸ್ತೂರಿಯಾಗಿ
ತಿನ್ನುವರಿಗೆ ಅತಿ ಪ್ರೀತಿಯಾಗಿ
ಮನದಲ್ಲಿ ಹೇಳಬಲ್ಲ ಜಾಣನಿಗೆ ಅರಿದಲ್ಲ (ಸು ೫೨೩)

ಹುಟ್ಟುತ್ತಲೆ ಹಸುರುಂಟು ಪಚ್ಚೆ ತಾನಲ್ಲ
ಬೆಳೆಯುತ್ತಲೆ ಕೆಂಪುಂಟು ನವರತ್ನವಲ್ಲ
ಕಡೆಕಡೆಗೆ ಕಪ್ಪುಂಟು ಕಸ್ತೂರಿ ಅಲ್ಲ
ಇದ ಹೇಳಬಲ್ಲ ಜಾಣರಿಗೆ ಅರಿಯದೆ ಇಲ್ಲ (ರಾ ಗೌ ೪೯೯)
ನೇರಳೆ ಹಣ್ಣು

ಅಕ್ಕಕ್ಕ ಗಿಡ ನೋಡು
ಗಿಡದ ತುಂಬಾ ಕಾಯಿ ನೋಡು
ಕಾಯಿ ತಿಂದವರ ಬಾಯಿ ನೋಡು (ವಾಲಿ ೨–೩೭)

ಅಕ್ಕಕ್ಕ ಭಾವಿ ನೋಡು
ಭಾವಿ ಮ್ಯಾಲಿನ ಗಿಡ ನೋಡು

ಅಯ್ಯೋ ಬಾವಾ ಮೈಯೆಲ್ಲಾ ಬೂದಿ
ಕೈಯಾಗ ಚಕ್ರ ತಲಿಮ್ಯಾಲ ಶಿಖರ (ವಾ ೨–೪)

ಕರಿಯಳ ಖಂಡಾ ತಿಂದ
ಹುಳುಕಿ ತುಪ್ಪಾ ಕುಡಿದ
ಉದ್ದನ್ನವಳ ಹಾಟ ಕುಡಿದ (ವಾಲಿ ೨–೪೬)

ಗಿಡದ ಮ್ಯಾಲಿನ ಕಾಯಿ ನೋಡು
ಕಾಯಿ ತಿಂದವರ ಬಾಯಿ ನೋಡು (ವಾಲಿ ೨–೭)

ನೇರಿಲ ಹಣ್ಣು, ಜೇನುತುಪ್ಪ, ಕಬ್ಬಿನಹಾಲು

ಮರದ ತುಂಬಾ ಮಸಿ ಕೆಂಡ (ಲ ಗೌ ೮೨೧)

ನೇರಿಳೆ

ಎಡ ಏರಿಯ ಕೆಳಗೆ ಇಜ್ಜಲು ಸುರಿದಿದೆ (ಲ ಗೌ ೨೧೨)

ಏರೊ ಬುಡದಲ್ಲಿ ಇದ್ದಲು ಬಿದ್ದವೆ (ಲ ಗೌ ೨೫೭)

ಕರಿ ಸೀರೆ ಗರತಿ
ಮರದ ಮೇಲೆ ಇರುತಿ
ದೊಣ್ಣೆ ಕೊಟ್ಟರೆ ಬರುತಿ (ಲ ಗೌ ೪೦೪)

ಕಿಜ್ಜಲು ಮರದಲ್ಲಿ
ಇಜ್ಜಲು ನೇತ್ಹಾಕಿದೆ (ರಾ ಗೌ ೨೦೩)

ಕೆರೆ ವಳಗೆ ಇದ್ದಲು ಸುರಿದದೆ (ಲ ಗೌ ೪೭೦)

ಹರಾಯದಲ್ಲಿ ಹಸಿರು ಪರಾಯದಲ್ಲಿ ಕೆಂಪು
ಮುಪ್ಪಾದಮೇಲೆ ಕಪ್ಪು (ಲ ಗೌ ೯೯೯)

ಹುಟ್ಟುವಾಗ ಕಪ್ಪು
ಬೆಳಿವಾಗ ಕೆಂಪು
ಕಟ್ಟಕಡೇಲಿ ಕಪ್ಪು (ಜೀಶಂಪ ೨೮೯)
ನೇರಿಳೆ ಹಣ್ಣು

ಅರರೆ ಪುರರೆ ದೇವರಕ್ಕಿಂತ ಹಿರರೆ (ಇ ೧೨೯)

ಅಲ್ಲೋಡ್ ಪುಟ್ಟಿ ಯಿಲ್ಲೋಡ್ಪುಟ್ಟಿ ಪುಟ್ಟಿ ಹೆಜ್ಯೇ ಕಾಣ್ತಿಲ್ಲೆ (ಶಾಂ ನಾ ೫೭)

ಆಟಾ ಅದ ಈಟಾ ಅದ
ಮೊದಲ ಊಟಾ ಮಾಡ್ತದ (ಲಠ್ಠೆ ಭಾಗ ೩–೨)

ಆಟ್ಯೈತಿ ಈಟ್ಯೈತಿ
ಹೀರೇರ ಕೂಡ ಊಟಾ ಮಾಡತ್ಯೈತಿ (ಇ ೧೬೫)

ಆರು ಕಾಲ ಅಂಕಣ್ಣ
ಮೂರು ಕಾಲು ದೊಂಕಣ್ಣ (ಲ ಗೌ ೧೫೬)

ಆರು ಕಾಲಿನೋನೆ
ಗೂನು ಕತ್ತಿನೋನೆ
ಕೂತ್ಕೊಂಡು ಮೀಸೆ ತಿರುವೋನೆ (ಸು ೮೪)

ಈಟಿ ಐತಿ ಜೂಟ ಐತಿ
ಅಯ್ಯನಕಿಂತ ಮುಂಚೆ ಊಟಾ ಮಾಡತ್ಯೈತಿ (ಇ ೧೯೯)

ಉಣ್ಣೋರ ಕೂಡೆಲ್ಲ ಉಂಡ್ರೂ ಅದರ ಹೊಟ್ಟಿ ತುಂಬೂದಿಲ್ಲ (ಇ ೨೧೩)

ಅಂತರದಲ್ಲಿ ಹಾರೋ ಜಂಪರಾಯ (ಲ ಗೌ ೧೨೦)

ಕೆಂಪು ತಲೆಯುಂಟು ಕಪಿಯಲ್ಲ
ಎರಡು ಗರಿಗಳಿವೆ ಕಾಗೆಯಲ್ಲ
ಆರು ಕಾಲುಗಳಿವೆ ಸೊಳ್ಳೆಯಲ್ಲ
ಹಾಡು ಹಾಡಿದರೂ ಸಂಗೀತಗಾರನಲ್ಲ (ಚಂ ಸೆ ೧೧೩)

ಚಿಕ್ಕೋನಾದ್ರೂ ಚಿಣಿಮಿಣಿಗಾರ
ಶೆಟ್ಟಿಯೋರ ಸಂಗಡ ಉಣ್ಣೋಕ್ಕೂತ್ಕೊಂಡ (ಸು ೨೭೩)

ತುಂಟ್ ರಯ್ತಂಗೆ ರಾಜ್ನ ಸಂಗ್ಡಾ ಊಟಾ (ಶಾಂ ನಾ ೫೮)

ತುಂಟ ಹೈದರನಿಗೆ ರಾಜನ ಸಂಗಡವೇ ಊಟ (ಚಂ ಸೆ ೧೩೯) (ಇ ೬೦೨)

ತುಂಟು ಹುಡುಗನಿಗೆ ರಾಜನ ಸಂಗಡ ಊಟ (ಲ ಗೌ ೬೦೮)

ದೊಡ್ಡಾರ ಕೂಡ ಡೌಲೀಲೆ ಊಟಾ ಮಾಡತಾನ (ಇ ೬೨೫)

ನಾಲ್ಕು ಕಾಲುಂಟು ದನವಲ್ಲ
ಕೆಂಪು ರುಮಾಲುಂಟು ಪೋಲೀಸರಲ್ಲ
ಸೊಂಡಿಲುಂಟು ಆನೆಯಲ್ಲ (ಲ ಗೌ ೬೭೧)

ಹಾರೂರಾಕಿ ಬೇಲೂರಾಕಿ
ದೇವರಕ್ಕಿಂತ ಹೆಚ್ಚಿನಾಕಿ (ವಾಲಿ ೬–೨೫)

ಹೋಗುತ್ತಲೂ ಜೀಯಾ ಬರುತ್ತಲೂ ಜೀಯಾ
ಜೀಯಪ್ಪನ ಹೆಜ್ಜೆ ಕಂಡವರಿಲ್ಲ (ಲ ಗೌ ೧೦೮೨)

ಹೋದ ಪುಟ್ಟ ಬಂದ ಪುಟ್ಟ
ಪುಟ್ಟನ ಹೆಜ್ಜೆ ಕಂಡೋರೇ ಇಲ್ಲ (ಸು ೫೩೪)

ನೊಣ

ಅಟ್ಟಾರ ನಿಜ್ಜಾರ ಮೋಸ್ಗಾರ (ಮಂ ೨.೨–೪)

ನೊಣ, ಸೊಳ್ಳೆ, ತಿಗಣೆ

ಗಿಡವಿಲ್ಲದ ಕಾಡಿಗೆ ಹೋಗಿ ಎಲುಬಿಲ್ಲದ ಮೃಗ ಹೊಡೆದೆ (ಲ ಗೌ ೫೧೧)

ನೊಣ; ಹೇನು

ಗಿಡ್ಡ ಹುಣಿಸೆ ಮರಕ್ಕೆ ಗಿಡವೆಲ್ಲ ಬೇರು (ಲ ಗೌ ೫೧೫)

ನೊದೆ ಗುತ್ತಿ

ಅಕ್‌ಚಿತ್ ಚಿನ್‌ಚಿತ್ರಾ ಹಾಕೂಲ್ಬತ್ತು ತೆಗೂಲ್ಬತ್ತಿಲ್ಲೆ (ಶಾಂ ನಾ ೪೧೭)

ನೊಸ್ಲು

ಚಿಟ್ಟಿಕ್ಕಿ ಕೂದರೆ ಬಟ್ಟಲು ತುಂಬಾ ಬಾಡು (ಲ ಗೌ ೫೫೦)

ನೋಟು–ಚಿಲ್ಲರೆ

ಆಚಿಂದ ಮೂರ್ಹಕ್ಕಿ ಬಂದೊ
ಒಂದು ಗೂಡಿಗ್ಹೋಯ್ತು
ಒಂದು ಮೂಲೆಗ್ಹೋಯ್ತು
ಒಂದು ಸೂರಿಗ್ಹೋಯ್ತು (ರಾ ಗೌ ೭೧)

ನಂಜನಗೂಡು, ಮಲ್ಲನ ಮೂಲೆ, ಮೈಸೂರು

ಅರ್ದಳ್ಳಿಲೊಂದು ಗಡಿ
ಗಡಿಯೊಳಗೊಂದು ಗುಡಿ
ಗುಡಿಯೊಳಗೊಂದು ಗೋಪುರ
ಗೋಪುರದೊಳಗೊಂದು ಯಲಿ
ಯಲಿಗೆ ನೂರು ಮರಿ
ನೂರು ಮರಿಗೆ ಚಿನ್ನದ ಗರಿ
ವಂಟು ವಡೋಯೋನು ಸಿಪಾಯಿಗಿರಿ (ಮಂ ೧.೫–೧೫)

ಗೋಪುರ ಗೋಪುರದೊಳಗೊಂದು ಯಲಿ
ಯಲಿಗೆ ನೂರು ಮರಿ
ನೂರು ಮರಿಗೆ ಚಿನ್ನದ ಗರಿ
ವಂಟು ವಡೋಯೋನು ಸಿಪಾಯಿಗಿರಿ (ಮಂ ೧.೫–೫೫)

ಮರದೊಳಗೆ ಮರವುಟ್ಟಿ
ಮರೆಯಲ್ಲೆ ಯಲೆಯಾಗಿ
ಯೆಲೆಯೆಲ್ಲಾ ತೂತಾಗಿ
ತೂತೆಲ್ಲಾ ಮಾತಾಡುತ್ತಾರೆ (ಮಂ ೧.೫–೭೭)
ನಂದಿಕಂಬ

ಮುತ್ತಿನ ಕೋಳಿ
ಮುಳ್ಳಿನ ಮ್ಯಾಗ
ಮೊಟ್ಟ ಇಡತದ (ಲಠ್ಠೆ ಭಾಗ ೪–೧೫೫)
ನಿಂಬಿಹಣ್ಣ

ಗುಬ್ಬಚ್ಚಿ ಮೊಟ್ಟೆ ಕಾಯುತ್ತೆ (ಜೀಶಂಪ ೧೪೩)

ಚಿನ್ನದ ಹಕ್ಕಿ ಮುಳ್ಳಿನ ಮೇಲೆ ಮೊಟ್ಟೆ ಇಡುತ್ತದೆ (ಇ ೫೩೧)

ಮುತ್ತಿನಂಥ ಕೋಳಿ ಮುಳ್ಳಾಗೆ ಮೊಟ್ಟೆ ಇಕ್ಕಿದೆ (ಸು ೪೧೨)

ಮುತ್ತಿನಂಥ ಕೋಳಿ
ಮುಳ್ಳಿನ ಮೇಲೆ ಮೊಟ್ಟೆ ಇಡ್ತು (ಜೀಶಂಪ ೨೩೩)

ಮುತ್ತಿನ ಕ್ವೊಳ
ಮುಳ್ಳಿನ ಮ್ಯಾಲೆ ಮೊಟ್ಟೆ ಇಡ್ತು (ಮಂ ೧.೪–೬೭)

ಸುತ್ತಲೂ ಹಸಿರು ಕೋಟೆ
ಒಳಗೆ ಬಿಳಿ ಕೋಟೆ
ಅದರೊಳಗೆ ಹತ್ತಾರು ಮಂದಿ ಆಳು (ಲ ಗೌ ೯೪೮)

ಹಸರ್ಹಕ್ಕಿ ಮೇಲೆ ತಿಸರ್ಹಕ್ಕಿ
ಮೊಟ್ಟೆ ಇಟ್ಟಿದೆ (ಜೀಶಂಪ ೨೬೭)
ನಿಂಬೆಹಣ್ಣು

ಮುತ್ತಿನ ಕೋಳಿ ಮುಳ್ಳಗ ತತ್ತಿ ಇಟ್ಟೈತಿ (ಇ ೮೬೨)
ನಿಂಬೇಹಣ್ಣು

ನಾಕ ಚೌಕದ ಗದ್ದಿ
ನಾರಾಯಣ ಕಟ್ಟಿಸಿದ ಗದ್ದಿ
ಬಿತ್ತೇದ್ಕ ಹದ್ನಾರ ಕಾಳ
ಸಾಗ ಮಾಡೋದ್ಕ ಒಂದ ಜತಿ ಎತ್ತು (ಲಠೈ ಭಾಗ ೫–೧೮೮)
ಪಗಡಿ ಆಟ

ವಿಜಾಪೂರ ಬಾಚಾರ
ಹದಿನಾರ ಎತ್ತಿನ ಸಂಚಾರ
ನಾಲ್ಕು ಕೂಟಿಗೂ ದರ್ಬಾರ
ಬಿತ್ತೋದು ಅರಬೀಜಾ
ಬೆಳೆಯೋದು ಒಂದೇ ಫಲ (ಇ ೯೧೭)
ಪಗಡಿ ಪಟ್ಟಿ, ಪಗಡಿಕಾಯಿ

ನಾಲ್ಕು ಚೌಕದ ಗದ್ದೆ
ಬಿತ್ತುವುದು ಹದಿನಾರು ಬೀಜ
ಉಳುವುದು ಎರಡೆತ್ತು (ಚಂ ಸೆ ೧೫೮)
ಪಗಡೆ

ನಾಲ್ಕು ಚೌಕದ ಗದ್ದೆ
ಬಿತ್ತುವುದಕ್ಕೆ ಹದಿನಾರು ಕಾಳು
ಉಳುವುದಕ್ಕೆ ಎರಡು ಜತೆ ಎತ್ತು (ಇ ೬೫೩)
ಪಗಡೆ ಆಟ

ನಾಲ್ಕು ಚೌಕದ ಗದ್ದೆ ನಾರಾಯಣನ ಗದ್ದೆ
ಹದಿನಾರು ಕುಂಟೆ ಉಳುವುದು ಎರಡೆತ್ತು
ಬಿತ್ತೋದು ಹದಿನಾರು ಬೀಜ (ಲ ಗೌ ೬೬೫)
ಪಗಡೆ ಮಣೆ, ಹಾಸು, ದಾಳ

ನಾಲ್ಕು ಚೌಕದ ಗದ್ದೆ
ನೆಡೋದು ಹದಿನಾರು ಬೀಜ
ಉಳೋವು ಎರಡೆತ್ತು (ಸು ೩೩೩)
ಪಗಡೆ ಹಾಸು

ಅಂಗೈಯಗಲ ಗದ್ದೆ
ಮುಂಗೈಯಗಲ ಬದು
ಉಳುವುದು ಎರಡು ಎತ್ತು
ಹಾಕುವುದು ಹದಿನಾರು ಬೀಜ (ರಾ ಗೌ ೫೮)
ಪಗಡೆ ಹಾಸು, ಕಾಯಿ, ದಾಳ

ಕರಿ ಕಲ್ಲಿನ ಮ್ಯಾಲ ಬಿಳಿ ರಂಗೋಲಿ
ಚೆಲ್ಲಿ ಪರಮಾತ್ಮ ಪೈತ ಆಡತಾನ (ಲಠೈ ಭಾಗ ೫–೧೧೮)
ಪಟಕ

ಆರಲಿಲ್ಲ ಹುಟ್ಟಿತು ಗಿರಲೆಯಲ್ಲಿ ಬೆಳೆಯಿತು
ತಾತಿ ಕಾಣ್ತು ತಣಮಣಗುಟ್ತು
ಸೆಟ್ಟ ಕಾಣ್ತು ಪಟ್ಟಣಕ್ಕೆ ಹೋಯ್ತು
ನನ್ನ ಕಾಣ್ತು ನನ ಹಿಂದೆ ಬಂತು (ಲ ಗೌ ೭೪)
ಪಟ್ಟ ಬಾಸಿಗ

ಅಯ್ಯಯ್ಯೊ ಜೋಗಿ ಮೈಯೆಲ್ಲಾ ಬೂದಿ
ಕೈಯಾಗ ಕಲ್ಲು ತಲಿಮ್ಯಾಲೆ ಛತ್ರಿ (ಇ ೧೧೯)
ಪಟ್ಟಕಾಯಿ ಅಥವಾ ಟಿಡಲಗಿಡ

ಉದ್ದಾಗಿದ್ರೂ ಹಾವಲ್ಲಾ ಸವಿಯಾಗಿದ್ರೂ ಕಬ್ಬಲ್ಲ (ಶಾಂ ನಾ ೧೯೮)
ಪಟ್ಟಲ ಕಾಯಿ

ಅಡ್ಡಮರ ಗುಡ್ಡಮರ ಹಸಿರಕಾಯಿ ಜನಿವಾರ (ಜೀಶಂಪ ೨೨)

ಉದ್ದಾಗಿರುವೆ ಹಾವಲ್ಲ ಸವಿಯಾಗಿರುವೆ ಕಬ್ಬಲ್ಲ
ಹಾಗಾದರೆ ನಾನಾರು (ವಾಲಿ ೨–೯೯)

ಬೀದಿಲಿ ಹೋಗುವ ಬೋಳ
ನಿನಗಾರು ಬಡಿದರು ಪಚ್ಚೆನಾಮ (ವಾಲಿ ೨–೨೨)

ಮನೆಮೇಲೆ ಮಂಡಲದ ಹೂವು (ಜೀಶಂಪ ೨೨೫)

ಮಾಳಿಗೆ ಮೇಲೆ ಮಂಡಲದ ಹಾವು ಮಲಗಿದೆ (ಜೀಶಂಪ ೨೩೧)

ಪಡವಲಕಾಯಿ

ಎಷ್ಟೇ ಜನ ಕೂತ್ರೂ ಜಗ್ಗದ ಕುದುರೆ (ಲ ಗೌ ೨೪೮)

ಪಡಸಾಲೆ

ಅಯ್ಯಯ್ಯ ಬಾವಾ
ಮೈಯೆಲ್ಲಾ ಬೂದಿ
ತಲಿಮ್ಯಾಲ ಛಪ್ಪರಾ
ಕೈಯ್ಯಾಗ ಖಪ್ಪರಾ (ಲಠೈ ಭಾಗ ೪–೨೩)

ಒಬ್ಬಳು ನಾರಿಗೆ ಒಂಬತ್ತು ಬಕ್ತಲೆ (ಲ ಗೌ ೨೭೩)

ಒಬ್ಬೊಬ್ಬರ ಮನೆಗೂ ಊಟಕ್ಕೆ ಹೋಗ್ತಾಳೆ (ಲ ಗೌ ೨೮೧)

ಗುಡ್ಲು ಗುಮ್ಮ ಗುಡ್ಲು ಗುಮ್ಮ
ನಿನಗ್ಯಾಕೋ ಕಡ್ಡೀನಾಮ (ರಾ ಗೌ ೨೩೩)

ಮನೆ ಮುಂದೆ ಚಪ್ಪರ
ಮೇಲೂ ಮಲ್ಲಿಗೆ ಹೂವು
ಕೆಳ್ಗೂ ಮಲ್ಲಿಗೆ ಹೂವು
ಒಳಗೆಲ್ಲ ತಿರುಳು ಬಿತ್ತ
ಮೇಲೆ ವರಿ ಬೇಕು
ಕುಡ್ಲಲ್ಲಿ ಕುಯ್ ಬೇಕು (ರಾ ಗೌ ೩೮೩)

ಹಸಿರು ಚಪ್ಪರದಲ್ಲಿ ಹಾವು ನೇತಾಡುತ್ತೆ (ಲ ಗೌ ೧೦೧೭)

ಹಸಿರು ಹೊಲದಲ್ಲಿ ಕರೀ ಹಾವು ಮಲಗಿದೆ (ಲ ಗೌ ೧೦೧೧)

ಹಿತ್ತಲಲ್ಲಿರುವ ಗಡರಗುಮ್ಮ
ನಿನಗೆ ಯಾರು ಹಾಕಿದರು ಮೂರು ಬಿಳಿ ನಾಮ (ಸು ೫೨೧)
ಪಡುವಲಕಾಯಿ

ಕಡಗಂಚಿ ಕುಂಬಾರ
ಗಾಣಗಾಪುರ ಗಾಣಗಿತ್ತಿ
ಫರತಾಬಾದ ಪಿಂಜಾರ
ಮೂಗಾರು ಸೇರಿ ಒಂದಾ ಕಡೆ
ಬಾಳೆ ಮಾಡ್ತಾರ (ಲಠ್ಠೆ ಭಾಗ ೨–೨೬)

ಕಲ್ಲ ಖಣಿ ನೀರ ಮಡು
ಬಿಳಿದಂಟ ಕೆಂಪ ತೆನಿ (ಲಠ್ಠೆ ಭಾಗ ೨–೨೯)
ಪಣತಿ, ಎಣ್ಣಿ, ಬತ್ತಿ, ದೀಪ

ಕಾಲಿಲ್ಲದಿದ್ದರೂ ಹೋಗುತೈತಿ
ಬಾಯಿಲ್ಲದಿದ್ದರೂ ಮಾತನಾಡುತೈತಿ (ಇ ೩೮೬)

ಡುಬ್ಬ ಡುಬ್ಬ ಗುದ್ದಿಸಿಕೊಂಡು
ದೂರದಿಂದ ಬಂದೀರಿ
ಎಂಥಾ ಸುದ್ದೀ ತಂದೀರಿ (ವಾಲಿ ೭–೨೫)
ಪತ್ರ

ಈವತ್ ಹುಟ್ದ್ ಪೊರಾ
ನಾಳೆಗ್ ದೊಡ್ಡಾಗಿ
ನಾಡ್ತೀಗ್ ಊರಿಗ್ ಸೇರ್ತಾ (ಶಾಂ ನಾ ೩೫೬)
ಪತ್ರಾ

ಕೂತುಕೊಂಡು ಹೆಚ್ಚೋದು ಬಗ್ಗಿಕೊಂಡು ಇಕ್ಕೋದು (ಚಂ ಸೆ ೧೦೬)
ಪತ್ರಾವಳಿ

ಹಸರು ಕುಬಸಕ್ಕ ಹದಿನೆಂಟು ಹೊಲಗಿ (ಇ ೧೦೨೬)
ಪತ್ರಾವಳಿ ಎಲಿ

ಅಂಕುಡೊಂಕು ಮರ ಬಾಣ ಬಿರಸ ಮರ
ಶಿವರಾತ್ರಿ ಮರುದಿನ ಬಡವಾಗೂ ಮರ
ದೇವರು ಬಂದರೂ ಕಡಿದೊಗೆಯದ ಮರ (ವಾಲಿ ೨–೧೧೦)
ಪತ್ರಿ ಮರ

ಅಂಕು ಡೊಂಕಿನ ಮರಾ ಬಾಣಬಿರುಸಿನಮರಾ (ಆಮರಾ ಈಮರಾ)
ಶಿವರಾತ್ರಿ ಮರ್ದಿನಾ ಬಡಾಮರಾ (ಶಾಂ ನಾ ೧೯೯)
ಪತ್ರೆಮರಾ

ಹಸರ ಕುಬಸ್ಕ ಹನ್ನೆಡ್ಡ ಟಿಬ್ಬಿ (ಲಠ್ಠೆ ಭಾಗ ೫–೨೯೮)
ಪತ್ರೊಳಿ

ಹಸಿರ ಕುಬಸಕ್ಕ ಹನ್ನೆರಡು ಟಿಬ್ಬಿ (ವಾಲಿ ೩– ೮೯)
ಪತ್ರೋಳಿ

ಅಂತಪ್ಪನ ಮಗಳ
ನಿಂತ ಉಚ್ಚಿ ಹೊಯ್ತಾಳ (ಲಠ್ಠೆ ಭಾಗ ೫–೩೯)
ಪನ್ನಾಳಿಗಿ

ವಾರದಾಗ ವಾರ ಯಾವ ವಾರ (ವಾಲಿ ೫–೧೧)
ಪನಿವಾರ

ಹಳದಿ ಕೋಟೆ ದಾಟಿದರೆ ಕೆಂಪು ಕೋಟೆ
ಕೆಂಪುಕೋಟೆ ದಾಟಿದರೆ ಕರಿ ಸಿಪಾಯಿಗಳು (ಚಂ ಸೆ ೨೪೭)
ಪಪ್ಪಾಯಿ

ಹಸಿರ ದವಾಖಾನಿ ಕೆಂಪು ಡಾಕ್ಟರ ಕರಿ ಗುಳಿಗಿ (ವಾಲಿ ೫– ೭)
ಪಪಾಯಿ ಹಣ್ಣು

ಹರನ ಹಾರನ ಆಹಾರನ ಸುತನ ಮಿತ್ರನ ಭ್ರಾತೃವಿನ ಹೆಂಡತಿ ಬಂದಿದ್ದಾಳೆ
ಪರಮೇಶ್ವರ, ಹಾವು, ಕುಂಭಕರ್ಣ, ನಿದ್ದೆ (ಇ ೧೦೧೫)

ಎತ್ತ ಹೂಡ್ಲಿಲ್ಲಾ ಹತ್ತಿ ಬಿತ್ತಿಲ್ಲಾ
ನಾರಿ ಅರೀಲಿಲ್ಲಾ ಜಾಣಿ ನೂಲಲಿಲ್ಲಾ
ಜಾಡಂತೂ ನೇಯಲಿಲ್ಲಾ
ಅಬರಂಗದ ಅಂಗಿ ಹಾಕೊಂಡು
ಬಾಳಿ ಬನದಾಗಿಂದ ಕ್ಯಾದಿಗಿ ಬನದಾಗ ಹೋದ (ವಾಲಿ ೬– ೨)
ಪರೆಬಂದ ಹಾವು

ದುಡ್ಡೆಲ್ಲ ನುಂಗಿ ಡುಬ್ಬನ್ಹಾಂಗ ಕೂತೈತಿ (ಇ ೬೧೬)
ಪರ್ಸ

ಬೀಜಿಲ್ಲದ ಗಿಡ
ಗಿಡದ ಮೇಲೆ ಕಾಯಿ
ಕಾಯಿ ಮೇಲೆ ಮರ (ಲ ಗೌ ೭೭೮)
ಪರಂಗಿ

ಕುಡಿಕೆಯಲ್ಲಿ ಮೆಣಸು (ರಾ ಗೌ ೨೦೫)
ಪರಂಗಿ ಕಾಯಿ

ಅಂಬಾರ್ದಾಗೆ ಮೆಣಸು ತುಂಬಯ್ತೆ (ಜೀಶಂಪ ೩)
ಪರಂಗಿ ಬೀಜ

ನೋಡಿದ್ರೆ ಬೊಂಬು
ಅದ ನೋಡಿದ್ರೆ ಸುತ್ತ ಕೊಂಬು (ರಾ ಗೌ ೩೨೮)
ಪರಂಗಿ ಮರ

ಚಿಕ್ಕದಾಗಿದ್ರು ಬಲು ಚುರುಕು (ಸು ೨೬೫)
ಪರಂಗಿ ಮೆಣಸಿನಕಾಯಿ

ಹಸುರುಗಿಡ್ದಲ್ಲಿ ಕೆಂಪಣ್ಣ
ಕೆಂಪಣ್ಣನ ಹಿಡ್ಕೊಂಡು ಕಪ್ಪು ಮಕ್ಕಳು (ಜೀಶಂಪ ೨೭೧)

ಕೆಂಪ್ನ ಡಾಕ್ಟರ್ ಕರಿ ಗುಳಿಗೆ ಆಸ್ರು ಆಸ್ಪತ್ರೆ (ಮಂ ೧.೪–೩೯)
ಪರಂಗಿ ಹಣ್ಣು

ಅಂಬಾರದಾಗೆ ಗುಂಬ ಮೆಣಸು ತುಂಬ್ಯದೆ (ಸು ೭೬)

ಒಂದು ಹಸಿರು ಕೋಟೆ
ಒಂದು ಬಿಳೀ ಕೋಟೆ
ಒಂದು ಕೆಂಪಿನ ಕೋಟೆ
ಒಳಗಡೆ ಕರೀ ಜನ (ಸು ೧೪೫)

ಹಸುರು ಕೋಟೆ
ಒಳಗೆ ಕೆಂಪು ಕೋಟೆ
ಒಳಗೆ ಕರಿ ಸಿಪಾಯಿಗಳು (ಸು ೪೯೯)
ಪರಂಗಿ ಹಣ್ಣು ಮತ್ತು ಬೀಜ

ಅಂಕುಡೊಂಕಿನ ಮರ
ಸಂಕೋಲೆ ಕೂಡಿದ ಮರ
ಹತ್ತಿದವರಿಗೆ ಸುಖ ಹೊತ್ತವರಿಗೆ ಕಷ್ಟ (ಚಂ ಸೆ ೨೦)
ಪಲ್ಲಕ್ಕಿ

ಎಂಟು ಕಾಲುಗಳುಂಟು ಹುಳುವಲ್ಲ
ಎಂಟು ಕೈಗಳುಂಟು ರಾಕ್ಷಸನಲ್ಲ
ಮೂರು ತಲೆಗಳುಂಟು ಬ್ರಹ್ಮನಲ್ಲ (ರಾ ಗೌ ೧೦೫)
ಪಶುಪತಿ

ಕೊಂಗಿನಗಲ ಎಲೆ
ಕೊಡತಿ ಗಾತ್ರ ಕಾಯಿ
ಲಿಂಗವತಿ ರಾಜ ಬೆಳೆದ (ಸು ೨೪೨)
ಪಳ್ಳದ ಕಾಯಿ (ಪಡುವಲಕಾಯಿ)

ಬೀಜಿಲ್ಲದ ಗಿಡಾ
ಗಿಡದ ಮ್ಯಾಗ ಕಾಯಿ
ಕಾಯಿ ಮ್ಯಾಗ ಮರ (ಲಠ್ಠೆ ಭಾಗ ೪–೧೪೧)
ಫರಂಗಿ (ದತ್ತೂರ)

ಆರ ಕಾಲ ನಾಕ ರೆಕ್ಕಿ ಒಂದ ಸೊಂಡಿ
ಗಿಡದಿಂದ ಗಿಡಕ ಹಾರತದ (ಲಠ್ಠೆ ಭಾಗ ೩–೮)
ಪಾತರಗಿತ್ತಿ

ಕಂಚು ಕಣ ಕಣ
ಹೂವು ಬಳ ಬಳ
ಬಳ್ಳಿ ತೊಡರ ಬಡರ (ಇ ೪೩೧)
ಪಾತ್ರೆ–ಅನ್ನ–ಶ್ಯಾವಿಗೆ

ನಡೆದರೆ ತುಂಬಿರುವೆ
ಬಿಟ್ಟರೆ ಬರಿದಾಗಿರುವೆ
ಬಣ್ಣ ಬಳೆದಾಗ ಹೊಳೆಯುವೆ
ನೀರಿನಲ್ಲಿ ನೆನೆಸಿದರೆ
ಮುದುರಿಕೊಳುವೆ
ನಾನಾರು ಗೊತ್ತೆ (ಇ ೬೨೯)

ನಮ್ಮಪ್ಪನಿಗೊಂದು ಜೊತೆ ಎತ್ತು
ಎಡದ್ದು ಬಲಕ ಬರುವುದಿಲ್ಲ
ಬಲದ್ದು ಎಡಕೆ ಬರುವುದಿಲ್ಲ (ಲ ಗೌ ೬೪೭)

ನೀರಿದ್ದ ತಾವು ನಿಲ್ಲಲಾ ಕೋಣ
ಮುಳ್ಳಿದ್ದ ತಾವು ನುಗ್ಗಲಾ ಕೋಣ (ಲ ಗೌ ೬೯೩)
ಪಾದರಕ್ಷೆ

ನೋಡಿದರೆ ನಗುವುದು ಮುಟ್ಟಿದರೆ ಜಾರುವುದು (ಲ ಗೌ ೭೧೬)

ಬಿಳಿ ಹುಡುಗಿ ಹಿಡಿಯೋಕೆ ಹೋದ್ರೆ ಜಾರ್ಕೊಳ್ತಾಳೆ (ಸು ೩೭೩)
ಪಾದರಸ

ಆಡುವ ಕುದುರೆ ಓಡುವ ಕುದುರೆ
ನೀರು ಕಂಡರೆ ನಿಲ್ಲುವ ಕುದುರೆ (ವಾಲಿ ೩–೨೬)

ಪ್ಯಾಟಲಿಂದ ತಂದ ಎರಡು ಹೋರಿಗಳು
ಬಲದ್ದು ಎಡಕ್ಕ ಬರೂದಿಲ್ಲ
ಎಡದು ಬಲಕ್ಕ ಬರೂದಿಲ್ಲ (ವಾಲಿ ೩–೧೫೫)
ಪಾದರಕ್ಷೆಗಳು

ಹೂವುಂಟು ಕಾಯುಂಟು ಎಲೆಯಿಲ್ಲ (ಸು ೫೨೭)
ಪಾಪಾಸುಕಳ್ಳಿ

ಬೆಟ್ಟದ ಮೇಲಿರೋ ದೇವೇಂದ್ರಾಯನಿಗೆ ಎಪ್ಪತ್ತೇಳು ಕಿರೀಟ (ಲ ಗೌ ೭೮೪)
ಪಾಪಾಸುಗಳ್ಳಿ

ಬೆಳ್ಳೀ ಮುಖಾ ಕೆಂಪು ಜಡೆ ಚಿನ್ನದ ಮೂಗು (ವಾಲಿ ೨–೯೭)
ಪಾರಿಜಾತದ ಹೂವು

ಬೆಳ್ಳಿ ಮುಕಾ ಕೆಂಪಿ ಜಡೆ ಚಿನ್ನದ್ಮೂಗು (ಶಾಂ ನಾ ೨೭೦)

ಬೆಳೀ ಮುನ್ಯಾ ಕೆಂಪೀ ಟೊಪ್ಪಿ (ಶಾಂ ನಾ ೨೭೧)
ಪಾರಿಜಾತಾ

ಅಂತರದಲ್ಲಿ ಅವು ನಾಲ್ಕು
ಸ್ವಂತ ಇಟ್ಟವು ನಾಲ್ಕು
ಕಿವಿ ಆರು ಕೊಂಬೆರಡು ಬಾಲ ಒಂದು (ಲ ಗೌ ೧೨೨)
ಪಾರ್ವತಿ ಪರಮೇಶ್ವರ ನಂದಿಯ ಮೇಲೆ

ಕಲ್ಲಿಗೆ ಮಗಳಾರು
ಮಗಳಿಗೆ ಗಂಡ್ಯಾರು (ಜೀಶಂಪ ೧೧೩)
ಪಾರ್ವತಿ, ಶಿವ

ಮುಂದುಗಡೆ ಕತ್ತಲೆ ಹಿಂದುಗಡೆ ಬೆಳಕು (ಲ ಗೌ ೮೫೨)
ಪಿಣಿಪಿನ ಹುಳ

ಹಲ್ಲುಂಟು ಉಣಲಾರೆ
ರೆಕ್ಕೆಯುಂಟು ಹಾರಲಾರೆ
ಬಿರಡಿ ಉಂಟು ಅಂಗಿ ತೊಟ್ಟುಕೊಳ್ಳಲಾರೆ
ಹವೆಯನ್ನು ತಿಂದು ಹಾಡುತ್ತೇನೆ
ನಾನ್ಯಾರು (ಇ ೧೦೨೪)
ಪಿಯಾನೋಪೆಟ್ಟಿಗೆ

ಬಿಸಲಾಗ ಮೂರು ಟಿಸಿಲು (ವಾಲಿ ೫–೪೬)

ಹಾದಿಗೆ ಹೋಗಪ್ಪ
ಹಾಂವ ಹೊಡೆಪ್ಪ
ತುಂಬ ಉಚ್ಚಪ್ಪ
ಬಾಯಾಗ ಇಡಪ್ಪ (ಲಠ್ಠೆ ಭಾಗ ೪–೨೦೨)
ಪುಟ್ಟಿಕಾಯಿ

ಬಿಸಿಲಿಗೆ ಮೂರು ಟಿಸಳು (ಇ ೭೪೫)
ಪುಟ್ಟೇಹಣ್ಣು

ಅತ್ತೇ ಕಾಯಿ ಪ್ಯಾತೆಕಾಯಿ
ನೇತಾಡದೇ ಬೆಳೆಯೋದೆಂಥ ಕಾಯಿ (ಲ ಗೌ ೫೧)

ತಾಟಡಕೆ ಕಾಯಿ ತಗರಸೊನ್ನೆ ಕಾಯಿ
ನೇತಾಡದೆ ಬೆಳಯೋದು ಯಾವ ಕಾಯಿ (ಲ ಗೌ ೫೯೫)
ಪುಟ್ಟೆಳ್ಳ ಕಾಯಿ

ಒಂದು ಗಿಡದಲ್ಲಿ
ಮುಡಿಯೋಕೆ ಹೂವು ಎಡೆಯೋಕೆ ಕಾಯಿ
ಕಟ್ಟೋಕೆ ಎಲೆ ಚುಚ್ಚೋಕೆ ಕಡ್ಡಿ (ಲ ಗೌ ೩೨೦)
ಪುಟ್ಟೆಳ್ಳು ಗಿಡ

ಅಕ್ಕಕ್ಕ ಮರ ನೋಡ
ಮರದಾಗಿನ ಎಲಿ ನೋಡ
ಎಲಿಯಲ್ಲ ತೂತೇ ಬರಿಬರಿ ಮಾತೆ (ಇ ೫)

ಅಪ್ಪ ಅಪ್ಪ ಮರನೋಡು
ಮರದ ತುಂಬ ಎಲೆನೋಡು
ಎಲೆತುಂಬ ತೂತು ನೋಡು
ತೂತನೊಳಗಿನ ಮಾತನೋಡು (ಜೀಶಂಪ ೧೬)

ಅಂಗಡಂಗಡಿ ಅರವತ್ತಂಗಡಿ
ದಿಟ್ಟಿಸಿ ನೋಡಿದರೆ ಒಂದೇ ಅಂಗಡಿ
ನೋಡ್ತಾರ ತಿನ್ನೋದಿಲ್ಲ (ಇ ೨೬)

ಅಂಗಡಂಗಡಿ ಅರವತ್ತಂಗಡಿ
ದೃಷ್ಟಿಸಿ ನೋಡಿದರೆ ಒಂದೇ ಅಂಗಡಿ (ಜೀಶಂಪ ೪೪)

ಅಂಗಡಿ ಅಂಗಡಿ ಒಂದೇ ಅಂಗಡಿ
ದೃಷ್ಟಿಸಿ ನೋಡಿದರೆ ಅರುವತ್ತಂಗಡಿ (ಚಂ ಸೆ ೨೫)

ಕತೆ ಪರ್ಸಂಗವೆಲ್ಲ ನಿನ್ನ ಕಂಕುಳಲ್ಲದೆ (ಲ ಗೌ ೩೮೦)

ಕರಿದು ಕಸ್ತೂರಿ ಬಿಳೀದು ಕಿಸ್ಬಾಯಿ
ಆಡೊ ಮಕ್ಕಳ ತೊಡೆ ಮೇಗೆ ಬಲ್ಲವರ ಬಾಯಲ್ಲಿ (ಲ ಗೌ ೩೯೭)

ತಕ್ಕ ಮನೆ ತಾರ ಮನೆ
ತಕ್ಕವರಿಗೆಲ್ಲಾ ಇಕ್ಕುವ ಮನೆ (ವಾಲಿ ೩–೭೧)

ತೆರೆದರೆ ಸಾವಿರ ಕಣ್ಣು (ಇ ೮೦೨)

ನನಗೆ ಕಿಟಕಿ ಇಲ್ಲ ಬಾಗಿಲ ಇಲ್ಲ
ಆದರೂ ಮುಚ್ಚತಾರ ತಗೀತಾರ
ಹೊತ್ತು ಹೊತ್ತು ತಿರಗತಾರ (ಇ ೬೩೦)

ನುಚ್ ನುಚ್ ಅಂಗಡಿ ನೂರಾರು ಅಂಗಡಿ
ಮುಚ್ಚಿ ನೋಡಿದರೆ ಒಂದೇ ಅಂಗಡಿ (ಲ ಗೌ ೭೦೧)

ನುಚ್ಚಿನಂಗಡಿ ನೂರೊಂದಂಗಡಿ
ಪಟ್ಟೆ ಹಾಕಿದ ಪಂಡಿತರಂಗಡಿ
ಮುಚ್ಚಿ ನೋಡಿದರೆ ಒಂದೇ ಅಂಗಡಿ (ಚಂ ಸೆ ೧೬೫)

ನೂರಾರು ಗೋಡೆಗಳ ಮನೆ
ಗೋಡೆಯಗಲದ ಬಾಗಿಲು ಹಿಂದೊಂದು ಮುಂದೊಂದು (ಲ ಗೌ ೭೦೭)

ನೂರಾರು ಗೋಡೆಗಳ ಮನೆ
ಮನೆಗಿರುವುದು ಗೋಡೆಯಷ್ಟೇ ದೊಡ್ಡ ಬಾಗಿಲು
ಮುಂದೊಂದು ಹಿಂದೊಂದು (ಚಂ ಸೆ ೧೬೬)

ನಿಮ್ಮ ಕತೆಯೆಲ್ಲ ನಮ್ಮ ಕಂಕುಳೊಳಗೆ (ಸು ೩೪೦)

ಬಿಳಿ ಹೊಲದಲ್ಲಿ ಕರಿ ಪೈರು (ಲ ಗೌ ೭೬೮)

ಬಿಳಿ ಹೊಲದಲ್ಲಿ ಕರೆಗಡಲೆ ಬಿತ್ತೈತಿ (ಇ ೭೫೦)

ಮಡಿಸಿದರೆ ಒಂದೇ ಕಣ್ಣು
ರಾಜ್ಯದ ಏರಿಮೇಲೆ
ಬೀಜವಿಲ್ಲದ ಮರಹುಟ್ಟಿ
ರಾಜ್ಯ ರಾಜ್ಯಕೆಲ್ಲ ಹೆಸರಾಯ್ತು (ಜೀಶಂಪ ೨೪೫)
ಪುಸ್ತಕ

ಬಿಳಿ ಹೊಲ
ಕರಿ ಬಿತ್ತನೆ
ಕೈಯಲ್ಲಿ ಚೆಲ್ಲೋದು
ಬಾಯಲ್ಲಿ ಆಯೋದು (ರಾ ಗೌ ೩೫೩)
ಪುಸ್ತಕ–ಅಕ್ಷರ

ಕಾಯಿ ಕಾಯಿ ನೀಲ ಅದರಲ್ಲಿ ನಿಂಗೀಕಾಯಿ
ಸಂಜೇಲಿ ಬಂದವರು ಯಾರೋ ತಾಯಿ
ಚಿಕ್ಕಣ್ಣನ ಮನೆಯ ವಾಲೆಕಾರರು
ಮುಟ್ಟಿ ನೋಡಿ ಸೂರಿಗೆ ಸಿಕ್ಕಿಸಿದರು (ಲ ಗೌ ೪೪೧)
ಪುಸ್ತಕ, ಪತ್ರ

ಬಿಳಿ ಗದ್ದೆ ಕರೀ ಭತ್ತ
ಕೈಯಾಗ ಹಾಕಬೇಕು
ಬಾಯಾಗ ತಗಯಬೇಕು (ಇ ೭೫೭)
ಪುಸ್ತಕ ಬರೆಯುವದು, ಓದುವದು

ಬಿಳೀಗದ್ದೆ ಕರೀಬತ್ತ
ಕಯ್ಯಾಗ ಹಾಕಬೇಕು
ಬಾಯ್ಯಾಗ ತೆಗೆಯಬೇಕು (ಲಠ್ಠೆ ಭಾಗ ೫–೨೨೨)
ಪುಸ್ತಕ ಬರ್ಯೋದ, ಓದೋದ

ಅಪ್ಪ ಅಪ್ಪ ಮರನೋಡು
ಮರದಾಗಳ ಎಲೆನೋಡು
ಮಾತೋಗಿ ತೂತಾದೊ
ಮಳ್ಳಾಗ್ಬದಾಗಳಸೂಳೆ
ಮರದ ಮೇಲೆ ಮಿಂಡ್‌ಗಾರ (ಜೀಶಂಪ ೩೬)
ಪುಸ್ತಕ, ಹಾಳೆ, ಅಕ್ಷರ, ಮಳೆ, ಮೀನು, ಹುಣಸೇಕಾಯಿ

ಅಜ್ಜಿ ಮೈತುಂಬಾ ಕಜ್ಜಿ (ಲ ಗೌ ೨೭)
ಪೂರಿ–ಹಲಸಿನಕಾಯಿ–ಹಾಗಲಕಾಯಿ

ಆಟೆ ಮಗ
ಈಟೆ ಮಗ
ಛೋಟೆ ಮಗ
ಸರ್ಕಾರ್ಕ ಹೋಗಿ
ಸೈ ಮಾಡಿ ಬರ್ತಾನ (ಲಠ್ಠೆ ಭಾಗ ೫–೪೨)

ಬಾವಿ ನುಣ್ಣಗ ನೀರ ಕರ್ರಗ
ಹಗ್ಗ ಇಲ್ದೆ ನೀರ ಸೇದತದ (ಲಠ್ಠೆ ಭಾಗ ೫–೨೧೪)
ಪೆನ್ನ

ಓಡಾಡಿದರೆ ವಾಂತಿಯಾಗುತ್ತದೆ
ಮತ್ತೊಬ್ಬರಿಗೂ ಬೇಕಾಗುತ್ತದೆ (ರಾ ಗೌ ೩೯೮)

ಓಡಾಡಿದರೆ ವಾಂತಿಯಾಗುತ್ತದೆ
ಹಲವರಿಗೆ ಬೇಕಾದ ಆ ವಸ್ತು ಯಾವದು (ವಾಲಿ ೩–೫೬)

ಐವರು ಗಂಡಂದಿರುಂಟು ದ್ರೌಪದಿಯಲ್ಲ
ಎರಡು ನಾಲಗೆಯುಂಟು ಸರ್ಪವಲ್ಲ
ಒಂದು ಕಣ್ಣುಂಟು ಸೂಜಿ ಡಬ್ಬಣವಲ್ಲ
ಎಲ್ಲರಿಗೂ ಪ್ರೀತಿಯವ ನಾನಾರು (ವಾಲಿ ೩–೬೧)

ಐವರು ಗಂಡಂದಿರುಂಟು ದ್ರೌಪದಿಯಲ್ಲ
ಎರಡು ನಾಲಿಗೆಯುಂಟು ಹಾವು ಉಡು ಅಲ್ಲ
ಒಂದು ಕಣ್ಣುಂಟು ಸೂಜಿ ದಬ್ಬಳವಲ್ಲ (ರಾ ಗೌ ೧೨೩)

ಚುರುಕು ಚುರುಕು ಚಾರಣ್ಣ
ಚೂಪುಮೂತಿ ಬಾರಣ್ಣ
ಪೆಟ್ರೋಲ್ ಕುಡ್ಕೋಂಬಾರಣ್ಣ ಏನಿದು (ಇ ೫೪೦)

ನಾಲಿಗೆ ಇದೆ ಮಾತಾಡಲಾರೆ
ಬರೆಯ ಬಲ್ಲೆ ಓದಲಾರೆ
ಹಾಗಾದರೆ ನಾನು ಯಾರು (ರಾ ಗೌ ೩೦೧)

ನಾಲಿಗೆ ಇದ್ದರೂ ನೀರು ಕುಡಿದರೂ ನರನಲ್ಲ
ಟೋಪಿ ತೊಟ್ಟರೂ ಕೂದಲಿಲ್ಲ (ಇ ೬೪೮)

ಬಣ್ಣ ಬಣ್ಣವಿದ್ದರೂ ಗಿಳಿ ನವಿಲು ನಾನಲ್ಲ
ನಾಲಿಗೆಗಳೆರಡಿದ್ದರೂ ಉರಗ ಜಾತಿಯವನಲ್ಲ
ವಿಷವು ಹೊಟ್ಟೆಯೊಳಗಿದ್ದರೂ ಕರಿಕಂಠ ನಾನಲ್ಲ
ವಿಶ್ವವ್ಯಾಪಿಯಾದರೂ ಭಗವಂತ ನಾನಲ್ಲ
ಎಲ್ಲರ ಮನೋಗತವನೆಲ್ಲಾ ತಿಳಿಸಬಲ್ಲೆ ನಾನ್ಯಾರು (ಇ ೭೨೪)

ಬಣ್ಣ ಬಣ್ಣವಿದ್ದರೂ ಗಿಳಿಯು ನಾನಲ್ಲ
ನಾಲಿಗೆಗಳೆರಡಿದ್ದರೂ ಉರಗ ಜಾತಿಯವನಲ್ಲ
ವಿಷವು ಹೊಟ್ಟೆಯೊಳಗಿದ್ದರೂ ಕರಿಕಂಠನಲ್ಲ
ಎಲ್ಲರ ಮನೋಗತವನ್ನೆಲ್ಲಾ ತಿಳಿಸುವೆನಲ್ಲ (ಚಂ ಸೆ ೧೭೭)

ಮುಳ್ಳುಂಟು ಗಿಡವಲ್ಲ
ನಾಲಿಗೆಯುಂಟು ಪ್ರಾಣಿಯಲ್ಲ
ಟೋಪಿಯುಂಟು ಕಾಂಗ್ರೆಸ್ ಅಲ್ಲ (ಇ ೮೬೩)

ಮುಳ್ಳುಂಟು ಗಿಡವಲ್ಲ
ನಾಲಗೆ ಹೊಟ್ಟೆಯುಂಟು ಮನುಷ್ಯ ಪ್ರಾಣಿಯಲ್ಲ
ಓಡಾಡಿದರೆ ವಾಂತಿಯಾಗುತ್ತದೆ
ಹಲವರಿಗೆ ಬೇಕಾದ ಆ ವಸ್ತು ಯಾವದು (ವಾಲಿ ೩–೫೬)

ಮುಳ್ಳುಂಟು ಮುಳ್ಳಲ್ಲಾ
ಟೊಪ್ಪಿಗೆಯುಂಟು ರಾಜನಲ್ಲಾ
ಬಳಸದವರು ಯಾರಿಲ್ಲಾ (ಶಾಂ ನಾ ೩೫೭)

ಮುಳ್ಳುಂಟು ಮುಳ್ಳಿನ ಗಿಡವಲ್ಲ
ನಾಲಿಗೆಯುಂಟು ಹೊಟ್ಟೆಯುಂಟು
ಮನುಷ್ಯ ಪ್ರಾಣಿಯಲ್ಲ

ಮುಳ್ಳುಂಟು ಗಿಡವಲ್ಲ
ನಾಲಗೆ ಹೊಟ್ಟೆಯುಂಟು ಮನುಷ್ಯ ಪ್ರಾಣಿಯಲ್ಲ

ಪೆನ್ನು

ಸುತ್ತ ಸಂತೆ ಕಟ್ಟಿದೆ, ಮಧ್ಯ ಹಳ್ಳ ಬಿದ್ದಿದೆ (ಲ ಗೌ ೯೪೯)

ಪೇಟ

ಅಡಿಗೆಯಾದ ಮ್ಯಾಲೆ ಜುಟ್ಟು ಕುಣಿಸಿತು (ಸು ೨೫)

ಆ ಮನೆ ಈ ಮನೆಯೆಲ್ಲಾ ಆಡಿ ಬಂದು

ಸಂಜೇಲಿ ಬಂದು ಮೂಲೇಲಿ ನಿಂತುಕೊಳ್ತದೆ (ಲ ಗೌ ೧೫೧)

ಅಂಗಳದಲ್ಲಿ ಸಿಂಗಟ್ಟೆ ಆಡುತ್ತಾನೆ (ಲ ಗೌ ೧೦೪)

ಊರೆಲ್ಲ ಸುತ್ಕೊಂಡು ಮೂಲೆ ಸೇರ್ತಾನೆ ಮದುಮಗ (ಲ ಗೌ ೨೧೦)

ಕೆನ್ನೆ ಹೆಣ್ಣು ಕೈದಾರ (ಲ ಗೌ ೩೮೩)

ನೂರು ಹುಡುಗರಿಗೆ ಒಂದೇ ಉಡಿದಾರ (ಲ ಗೌ ೭೦೫)

ಬೆಳಗಾನ ಮಲಗಿರುತ್ತದೆ
ಬೆಳಗಾಯ್ತೆ ಎದ್ದು ನಿಂತ್ಕೊಳ್ತದೆ (ರಾ ಗೌ ೩೭೧)

ಮನೆಯೆಲ್ಲ ಸುತ್ತುತ್ತೆ
ಮೂಲೇಲಿ ನಿಲ್ಲುತ್ತೆ (ಜೀಶಂಪ ೨೨೮)

ಮನೇಲೆಲ್ಲ ಓಡಾಡಿಕೊಂಡು ಬಂದು
ಮೂಲೇಲಿ ಮುದುರಿಕೊಳ್ತದೆ (ಸು ೩೯೮)

ಸಾವಿರ ಜನಕ್ಕೆ ಒಂದೇ ಉಡಿದಾರ (ಜೀಶಂಪ ೨೫೪೪)

ಸಂದೀಲ್ ಗೊಂದೀಲ್ ಇರ್ತದೆ
ಸಮಯಕ್ಕೆ ಸರಿಯಾಗಿ ಬರ್ತದೆ (ಜೀಶಂಪ ೨೪೮೮)

ಹಗಲೆಲ್ಲ ಹಾರಾಟ ರಾತ್ರೆಲ್ಲಾ ಗೂರಾಟ (ಲ ಗೌ ೯೭೦)
ಪೊರಕೆ

ರಾಜಾದಾಗ ರಾಜಾ ಯಾ ರಾಜಾ (ಲಠ್ಠೆ ಭಾಗ ೫–೨೬೩)
ಪೋತರಾಜ

ಅಂಕಡೊಂಕಿನ ಮರ
ಬಾಣ ಬಿರುಸಿನ ಮರ
ಶಿವರಾತ್ರಿ ಮರುದಿನ ಬಡಮರ
ದೇವರು ಬಂದರೂ ಕಡಿಯಲಾರದ ಮರ (ಇ ೧೭)
ಪ್ರತೀ ಮರ

ಅಡ್ಗರೆ ನಿಡ್ಗ್ ತೆರೆಮನೆ ಚಪ್ರಾ (ಶಾಂ ನಾ ೨೦೧)

ಬುಡಾ ಗೆಂಡೆ ನಡು ದಿಂಡು
ಮೇಲೆ ಸೀತಾಳಿ ಚಪ್ರಾ (ಶಾಂ ನಾ ೨೦೦)
ಪಂಜ್ರ ಗೆಡ್ಡೆ

ಅಕ್ಕಾ ಅಕ್ಕಾ ಹೂವು ನೋಡ
ಹೂವಿನ್ಯಾಗಿನ ಹೀಚು ನೋಡ
ಹೀಚಿನ್ಯಾಗಿನ ಕಾಯಿ ನೋಡ
ಕಾಯಿನ್ಯಾಗಿನ ಕಡಿತ ನೋಡ (ಇ ೧೩)
ಪುಂಡಿಕಾಯಿ

ವನವನಾರಿ ವನ ಸಿಂಗಾರಿ
ವನಾ ಏನು ನೋಡ್ತಿ ತಿಂದು ನೋಡು
ತಿಂದೇನು ನೋಡ್ತಿ ತಿಮಿರ ನೋಡು (ವಾಲಿ ೨–೭೨)
ಪುಂಡಿ ಪಲ್ಲೆ

ನಿನ್ನ ತಿಮರ ನೋಡ
ನಿನ್ನ ತಿಂಡಿ ನೋಡ
ನಿನ್ನ ಹಿಡದ ನೋಡ
ನಿನ್ನ ತಿಂದ ನೋಡ (ಲಠ್ಠೆ ಭಾಗ ೪–೧೨೭)

ಪುಂಡಿ ನಾರಪ್ಪ ಈಳಿಗೇರಿಗಿ ಹೋದ
ಮೂಗ ಕೊಯ್ಲಿಕೊಂಡ ಕಲ್ಲಡಿಗ್ಗೆ ಠಾಣೆಹಾಕಿ
ಎಣ್ಣೆಪ್ಪ ಮತ್ತ ರೊಟ್ಟಿಪ್ಪ ಕೂಡಿಕೊಂಡು
ಹಲ್ಲವನ ಹಾದಿ ಕೇಳಿ ಗಂಟಲ್ದಾಗ ಗಳಂ ಆತು (ಲಠ್ಠೆ ಭಾಗ ೪–೧೩೧)
ಪುಂಡಿ ಬಿಲ್ಲೆ

ಉದ್ದನ್ನ ಬೇಬರ್ಸಿಗೆ ಮೈತುಂಬಾ ರುದ್ರಾಕ್ಷಿ (ಇ ೨೧೭)
ಪುಂಡೀಗಿಡ

ನೆಟ್ರೆ ಹುಟ್ಟೂದಲ್ಲಾ ಮೊಡದ್ರೆ ಬಾಡೂದಲ್ಲಾ (ಶಾಂ ನಾ ೪೨೫)
ಪ್ಲೆಸ್ಟಿಕ್ ಹೂಂವ

ರೆಕ್ಕೆಗಳುಂಟು ಪಕ್ಷಿಯಲ್ಲ
ಗರಗರನೆ ತಿರುಗುವುದು ವಿಷ್ಣು ಚಕ್ರವಲ್ಲ
ಗಾಳಿಯುಂಟು ವಾಯುವಲ್ಲ (ಇ ೯೧೦)
ಫ್ಯಾನ

ಕಪಟ ಸನ್ಯಾಸಿ ಒಂಟಿಗಾಲಲ್ಲಿ ನಿಂತು ತಪಸು ಮಾಡ್ತಾನೆ (ಲ ಗೌ ೩೮೪)
ಬಕ

ಕಾಡನ್ನೆಲ್ಲಾ ಸುತ್ಗ ಬಂದು
ಮೂಲೇಲಿ ನಿಂತ್ಕಂತು (ಮಂ ೧.೫–೫೦)
ಬಕ್ರೆ

ಮನಿ ಮಂದಿಗೆಲ್ಲಾ ಒಂದಾ ಕುಂಡಿ (ಲಠ್ಠೆ ಭಾಗ ೫–೨೩೯)
ಬಚ್ಚಲ

ಮನಿಮಂದಿಗೆಲ್ಲ ಒಂದೇ ಕುಂಡಿ (ಇ ೮೧೧)
ಬಚ್ಚಲಾ

ಮನೆ ಮಂದಿಗೆಲ್ಲಾ ಒಂದೇ ಕುಂಡಿ (ವಾಲಿ ೮–೪೨)
ಬಚ್ಚಲು

ನಾರ ತಾ
ಬೇರ ತಾ
ನಾರೀ ತೋಳ ತಾ
ಹಂಗನ ಗರಿ ತಾ
ಮಂಗನ ಕಿವಿ ತಾ (ಲಠ್ಠೆ ಭಾಗ ೪–೧೨೬)
ಬಜಿ, ಬಾಳದ ಬೇರ, ಕುಬಸ, ನವಲಗರಿ, ಖೊಬ್ರಿ

ಬೆಟ್ಟುದ್ದ ಕಾಯಿ
ನೋಡಿದ್ರೆ ದುಂಡಗದೆ
ಎಡೆದು ನೋಡಿದ್ರೆ
ಗುಂಡೂರ್ಗೆ ಕಾಳು
ಹಸಿ ಕಾಳ್ನೂ ತಿನ್ನಬೋದು
ಸಾರ್ಗೂ ಹಾಕಬೋದು (ರಾ ಗೌ ೩೬೮)
ಬಟಾಣಿ

ಹಂಗಾರು ಕಟ್ಟಿ ಮಲ್ಲಿಗೆ ಮಿಟ್ಟಿ
ಇದರೊಳಗೈವರ ನೃತ್ಯವು ನಿತ್ಯ (ಚಂ ಸೆ ೨೪೬)
ಬಟ್ಟಲು, ಅನ್ನ, ಕೈಬೆರಳುಗಳು

ಕಲ್ಲ ಫಡಿಯ ಮ್ಯಾಲ ಕುಣಿದು
ಹುಲ್ಲಿನ ಮೇಲೆ ಮಲಗ್ತದೆ (ವಾಲಿ ೩–೧೩೧)

ಕಲ್ಮೆಲೆ ಕೊಣಿತು ಹುಲ್ಮೆಲೆ ಮೆರೆತು (ಶಾಂ ನಾ ೩೫೯)

ಚಪ್ಪಡಿಯ ಮೇಲೆ ಕುಣಿಯುತ್ತೆ
ಹುಲ್ಲಿನ ಮೇಲೆ ಮಲಗುತ್ತೆ (ರಾ ಗೌ ೨೪೦)

ಬಂಡೆಯ ಮೇಲೆ ಕುಣಿಯುತ್ತೆ
ತಂತಿಯ ಮೇಲೆ ಮಲಗುತ್ತೆ (ಇ ೭೮೪)
ಬಟ್ಟೆ

ಕೆರೆಯಲ್ಲಿರೊ ಕೆಸರು ಮಡಕೇಲಿ ಮೊಸರು
ನಿನ್ನಿಡಕೊಂಡು ಕುಸುರು (ಲ ಗೌ ೪೭೨)
ಬಟ್ಟೆ ಒಗೆಯುವುದು

ಹಂಗರ್ಕಾ ಮುಂಗಾರ್ಕಾ ಮಿಂದೊರ್ತು ಉಣ್ಣೂದಿಲ್ಲಾ (ಶಾಂ ನಾ ೩೫೮)
ಬಟ್ಲು

ಸುಂಗಾರಕ್ಕೆ ಬೀಜಲ್ಲ
ಆದಾರಕ್ಕ ಬೀಜಲ್ಲ
ಸಂಬಾರಕ್ಕ ಬೀಜಲ್ಲ (ಮಂ ೨.೧–೨೭)
ಬಟ್ಟೆ, ಮಳೆ, ಉಪ್ಪು

ಹೋಗ್ತಾವ ಬರ್ತಾವ ಎರಡು
ಹೋದಮ್ಯಾಲ ಬರೂದಿಲ್ಲ ಎರಡು
ಬಂದಮ್ಯಾಲ ಹೋಗೂದಿಲ್ಲ ಎರಡು (ವಾಲಿ ೬–೫೮)
ಬಡತನ, ಸಿರಿತನ, ಮಾನ–ಪ್ರಾಣ, ಕೀರ್ತಿ–ಅಪಕೀರ್ತಿ

ಅಡವ್ಯಾಗೆಲ್ಲಾ ಓಡಾಡ್ತದ
ದುಡ್ಡಿನಟ ಜಾಗದಾಗ ಕೂಡ್ರತತಿ (ಲಠೈ ಭಾಗ ೫–೧೩)

ಕೋಣಿ ಕೊತವಾಲ ಓಣಿ ವಜೀರ (ಲಠೈ ಭಾಗ ೫–೧೪೧)
ಬಡಿಗಿ

ಹಗಲೆಲ್ಲ ಅಡ್ಡಾಡತೈತಿ
ಸಂಜೆ ಮುಂದ ಬಂದು
ಮೂಲ್ಯಾಗಾ ಕುಂದರತೈತಿ (ಇ ೯೮೪)
ಬಡಿಗೆ

ಕೆರೆ ಹಿಂದೆ ಕೆಂದೆತ್ತು ಬಾಲ ಬೀಸ್ತದೆ (ಲ ಗೌ ೪೬೭)

ಪುಣ್ಯಾತಗಿತ್ತಿ ತಿಕದ ಮೇಲೆ ಒಂದೇ ಕೂದಲು (ಲ ಗೌ ೭೩೨)
ಬತ್ತ

ಉಟ್ಟಿದ್ದ ಕಳೆದುಹಾಕಿಬಿಟ್ಟು
ಇಕ್ಕಿದ್ದ ತಗದುಹಾಕ್‌ಬಿಟ್ಟು
ಅಡಿಗೆ ಮನೇಲಿ ಹರಡಿಕೊಂಡು ಬಿದ್ದಿತ್ತು (ಲ ಗೌ ೧೪೬)
ಬತ್ತದ ಅರಳು

ಏರೊ ಕೆಳಗೆ ಎಳಗರು ಬಾಲ ಬೀಸ್ತದೆ (ಲ ಗೌ ೨೫೮)
ಬತ್ತದ ಗೊನೆ

ಅದು ಅದರ್ಹಂಗೆ
ಅದರೆಲೆ ಬಿದಿರ್ಹಂಗೆ
ತಲೆತಗ್ಗಿಸಿದೆ ಮದುವೆ ಹೆಣ್ಣಂಗೆ (ಸು ೩೩)

ಆರು ತಿಂಗಳ ಬಸುರಿ ಮೂರು ತಿಂಗಳ ಬಾಣಂತಿ (ಲ ಗೌ ೧೫೪)
ಬತ್ತದ ತೆನೆ

ಚಿನ್ನ ವರಕೆ ಮೇಲೆ
ಪಿಣ್ಣೇರಿ ಕೂತು
ಕಣ್ಣಾಣು ಕಾಣೆ (ರಾ ಗೌ ೨೫೩)
ಬತ್ತ ಮೆಣಸು

ಹಾಲು ಸಮುದ್ರದ ಹಕ್ಕಿ
ನೀಲ ಸಮುದ್ರದ ಏರಿ ಮ್ಯಾಲೆ
ಕೊಕ್ಕಿನಲ್ಲಿ ಚಿನ್ನ ಕಚ್ಕೊಂಡು
ಬಾಲದಲ್ಲಿ ನೀರು ಕುಡೀತದೆ (ಸು ೫೧೨)
ಬತ್ತಿ, ದೀಪದ ಕುಡಿ, ಎಣ್ಣೆ

ಕರ್ರಗ ಮಿಣಿ ಮಿಣಿ
ಕೊರದರ ಖೊಬ್ಬರಿ
ಒಳಗೆಲ್ಲ ಮೆಣಸಿನ ಬೀಜ (ವಾಲಿ ೨– ೪೭)

ಹಚ್ಚನ ಗಿಡದಾಗ ಹಣಮಂತ ಕುಂತಾನ
ಕಡಿಲಿಕ್ಕ ಹೋದರ ಕಚ್ಚಲಿಕ್ಕ ಬರ್ತಾನ (ಲಠ್ಠೆ ಭಾಗ ೪–೧೭೧)

ಹವಣಿ ಬಿಂದಗ್ಯಾಗ ನವಣಿ ತುಂಬ್ಯಾರ (ಲಠ್ಠೆ ಭಾಗ ೪–೧೪೧)

ಹಸರ ಪಾಲಕಿ ಮುತ್ತಿನ ದಂಡಿ
ಅದರಾಗ ಕುಂತಾಳ ಚದುರ ರಂಡಿ (ವಾಲಿ ೨–೧೦೪)

ಹುಟ್ಟುತ್ಲೆ ಮಗಾ ಟೊಪಿಗಿ
ಹಾಕ್ಕೊಂಡ ಬರತತಿ (ಲಠ್ಠೆ ಭಾಗ ೪–೨೦೪)
ಬದನಿಕಾಯಿ

ಮುಳ್ಳ ಮುತ್ಯಾ
ಕ್ವಾಟಿ ಕೊಂಗ್ಯಾ
ಜಡಗಿ ಜಟ್ಯಾ (ಲಠ್ಠೆ ಭಾಗ ೪–೧೫೬)
ಬದನಿಕಾಯಿ, ಮೆಣಸಿನಕಾಯಿ, ಟೆಂಗ

ಒಂದು ಕೊಂಬಿನ ಗೂಳಿ
ತಲೆಯೆಲ್ಲಾ ಮುಳ್ಳು (ಚಂ ಸೆ ೬೫)

ವಂದಜ್ಜಿ ಎಣ್ಣೆ ಹಚ್ಗಂಡು ಬಿಸ್ಲಲ್ಲಿ ಕುತ್ಗತ್ತದೆ (ಶಾಂ ನಾ ೨೦೨)

ಹುಟ್ಟುತ್ತಲೆ ಹುಡುಗ ಟೊಪ್ಪಿಗೆ ಹಾಕಿರುತ್ತೆ (ಚಂ ಸೆ ೨೫೪)
ಬದನೆ

ಕರ್ರನೆ ಮಿಣಿಮಿಣಿ
ಬೆಳ್ಳಗೆ ತಣತಣ
ಒಳಗೆ ನೋಡಿದ್ರೆ ಮೆಣಸಿನ ಬಿತ್ತ (ರಾ ಗೌ ೧೭೨)

ಗುಡ್ಡದಾಗ ಹತ್ತು ಕುರಿ ಕೊಂದರ
ಅದರಾಗ ಹನಿ ರಕ್ತ ಇಲ್ಲ (ಇ ೪೯೩)

ಬಾವಿ ಮನೆಯೋನೆ
ಬನ್ನೇರು ಘಟ್ಟದೋನೆ
ಬಾರಯ್ಯ ನಮ್ಮನೆ ಅಳಿಯೂಟಕ್ಕೆ (ಸು ೩೬೭)

ಹವಣಿ ಬಿಂದಗ್ಯಾಗ ನವಣಿ ತುಂಬ್ಯಾರ (ಇ ೧೦೨೫)

ಹಸರು ಗಿಡದಾಗ ಹನುಮಂತ ಕುತ್ತಾನ (ಇ ೧೦೩೦)

ಹುಟ್ಟುತಲೆ ಹುಡುಗ ಟೊಪ್ಪಿಗೆ ಹಾಕಿರತಾನ (ಇ ೧೦೮೭)

ಹುಟ್ಟುತಲೇ ಹುಡುಗ ಟೋಪಿ ಹಾಕ್ತಿರ್ತಾನೆ (ಲ ಗೌ ೧೦೬೦)
ಬದನೆಕಾಯಿ

ಕರಿ ಅಂಗಿ
ಹಸರ ಟೊಪಿಗಿ
ನನ್ನ ನೋಡತಾನ ಸವತೀಮಗಾ (ಇ ೩೬೦)

ಕೂಸು ಹುಟ್ಟುವ ಮುಂಚೆ ಕುಲಾವಿ ಹಾಕಿದ್ದಾನೆ (ಲ ಗೌ ೪೬೩)
ಬದನೇಕಾಯಿ

ಹಡಗದಂತಹ ಎಮ್ಮೆ
ಹೆಡಿಗೆಯಂತಹ ಕೆಚ್ಚಲು
ಹಾಲು ಅಳೆದು ಮಾರೂದು
ಸೆಗಣಿ ತೂಗಿ ಮಾರೂದು
ಹಣ್ಣಾದ ಮುದುಕಿಗೆ
ಮೈತುಂಬ ಕಣ್ಣು (ಇ ೧೦೦೧)
ಬದನೇಕಾಯಿ, ಹುಟ್ಟ, ಜೇನುತುಪ್ಪ, ಮೇಣ

ಹಚ್ಚನ ಗಿಡದಾಗ ಹನುಮಂತ ಕೂತಾನ (ಲಠ್ಠೆ ಭಾಗ ೪–೧೭೪)
ಬದ್ನಿಕಾಯಿ

ಚಿಕ್ಕ ಚಿಕ್ಕ ಕೊಡಾ
ಚಿತ್ತಾರದ ಕೊಡಾ
ನವಣೇ ತುಂಬೇತಿ ಹವಣೀ ಕೊಡಾ (ಇ ೫೨೬)
ಬದ್ನೀಕಾಯಿ

ಚಿಕ್ಕ ಚಿಕ್ಕ ಮಣಕ ಚಿನಾಲಿ ಮಣಕ
ಅಟ್ಟಟ್ಟಿಗೆ ಓಡೋ ಮಣಕ (ಲ ಗೌ ೫೪೪೪)
ಬರಲು

ಹಿಟ್ಟಾಯುತ್ಲೆ ಬಂತು
ಜುಟ್ಟಿನ ಕ್ಯಾತ (ಜೀಶಂಪ ೨೮೬)
ಬರಲು (ಪೊರಕೆ)

ಅಂಗಳದಲ್ಲಿ ಆಡೋದು ಅಂಗಲ್ಲ ಮಂಗಲ್ಲ
ತಿಂಗಳಿಗೊಡೆಯೋನು ಕಡುಜಾಣ (ಲ ಗೌ ೧೦೨)

ಹೊತ್ತಿನಂತೆ ಎದ್ದು ಹುಚ್ಚಿ ಕರದ್ರು (ಲ ಗೌ ೧೦೭೬)
ಬರಲುಕಡ್ಡಿ

ಕೈಲಿ ಬಿತ್ತೋದು ಬಾಯ್‌ಲಿ ಆರಿಸೋದು (ಲ ಗೌ ೪೮೯)
ಬರಹ–ಓದು

ಬಿಳಿ ಹೊಲದಾಗ ಕೈಲೆ ಬಿತ್ತತಾರ
ಬಾಯಿಲೆ ಆರಸತಾರ (ವಾಲಿ ೩–೧೨೪)
ಬರೆಯುವ ಕ್ರಿಯೆ

ಕೊಟ್ಟು ಕೆಟ್ಟ ಕೊಡದೆ ಕೆಟ್ಟ
ಮುಟ್ಟಿ ಕೆಟ್ಟ ಮುಟ್ಟದೆ ಕೆಟ್ಟ (ಸು ೨೪೦)
ಬಲಿ ಚಕ್ರವರ್ತಿ, ದುರ್ಯೋಧನ, ಭಸ್ಮಾಸುರ, ರಾವಣ

ಕೊಟ್ಟು ಕೆಟ್ಟಾ ಕೊಡದೇ ಕೆಟ್ಟಾ
ಮುಟ್ಟಿ ಕೆಟ್ಟಾ ಮುಟ್ಟದೇ ಕೆಟ್ಟಾ
ಇವರು ಯಾರು (ವಾಲಿ ೬–೫೭)
ಬಲಿ, ದುರ್ಯೋದನ. ಭಸ್ಮಾಸುರ, ರಾವಣ

ಏಳು ನೂರು ಎಂಟು ನೂರು
ಗಂಟು ನೂರು ಮಂಟಪನೂರು
ಮನೆ ನೂರು ನಾನ್ಯಾರು (ಇ ೨೬೦)

ಗಿಡ್ಡ ಹುಡುಗ ಗಿದ್ನರೇ ಹೊರುತ್ತಾನೆ (ಲ ಗೌ ೫೧೪)

ಗಂಟುನೂರು ಗಜನೂರು
ಮಂಟಪನೂರು ಮನೆನೂರು
ಬಂಟ ನೀನಾದರೆ ತಿಳಿದ್ಹೇಳು (ಜೀಶಂಪ ೧೩೫ ಬಿ)

ಪಾತಾಳಕ್ಕೋಗುತ್ತೆ
ಪಾಪಿ ತರುತ್ತೆ
ತಾನ್ ತಿನ್ನಾಕಿಲ್ಲ
ಅಗಸನಿಗೆ ಕೊಡ್ತದೆ (ಜೀಶಂಪ ೧೯೪)

ಯಂಕಪಜ್ಜ ತೋಟಾ ನೂರಾರ್ಗುಟ್ಟಾ ಹೊಕ್ಕದ್ರೆ
ಹೆರಂಗ್ಬರೂಲ್ತಾಗ್ತಿಲ್ಲೆ (ಶಾಂ ನಾ ೩೬೨)

ವಂಬತ್ತು ಮೊಲ
ಬಡ್ಡಿ ಕರೆದ್ರೆ ಬರಲ್ಲ
ಯಳದ್ರೆ ಬತ್ತಾಳೆ (ಮಂ ೧.೫–೮೨)

ಹಲ್ಲು ನಾಲಿಗೆಯಿಲ್ಲ
ಸೊಲ್ಲು ಸೋಜಿಗ ಮಲ್ಲ
ಕೊಲ್ಲದೆ ಮೃಗವ ಹಿಡಿವುದು
ಲೋಕದೊಳಗೆಲ್ಲ ಠಾವಿನೊಳು (ರಾ ಗೌ ೪೮೦)

ಹಿಡಿದರೆ ಕೈತುಂಬ
ಪಾತಾಳದ
ತಾನು ತಿನ್ನುವುದಿಲ್ಲ ಒಡೆಯನಿಗೆ ಕೊಡುತ್ತದೆ (ಚಂ ಸೆ ೨೫೨)

ಹಿಡಿದರೆ ಹಿಡಿಕಿ ಬಿಟ್ಟರೆ ಬಯಲ ತುಂಬ
ಪಾತಾಳಕ್ಕೆ ಹೋಗಿ ಪ್ರಾಣಿ ತಂದು
ತಾನೂ ತಿಂದು ಒಡಿಯಾಗ ಕೊಡತೈತಿ (ಇ ೧೦೭೮)

ಹಿಡಿದರೆ ಹಿಡಿಕೆ ಆಗ್ತದೆ
ಬಿಟ್ಟರೆ ಝಲ್ ಅಂತದೆ
ಪಾತಾಳಕೆ ಹೋಗ್ತದೆ
ಪಕ್ಷಿ ತರ್ತದೆ
ತಾನು ತಿಂತದೆ
ತನ್ನ ಒಡಕಾರನಿಗೂ ಕೊಡ್ತದೆ (ಸು ೫೨೦)

ಹಿಡಿದರೆ ಹಿಡಿಯಾಯ್ತು
ಬಿಟ್ಟರೆ ಜಲ್ಲಂತು
ಪಾತಾಳಕ್ಕ್ಹೋಯ್ತು
ಪಾಪಿ ತಂತು
ತಾ ತಿನ್ನಲಾರದೆ
ಪರರಿಗೆ ಕೊಡ್ತು (ಜೀಶಂಪ ೨೮೫)

ಹಿಡದ್ರೆ ಮುಶ್ಟಿ ಬಿಟ್ರೆ ರಾಜಂಗ್ಳಾ (ಶಾಂ ನಾ ೩೬೧)

ಹೋಗ್ವಾಗೆ ಸುಮ್ನೆ ಹೋತೀದ, ಬರ್ವಾಗೆ ತೀಡ್ತೇ ಬತ್ತೀದ (ಶಾಂ ನಾ ೩೬೦)
ಬಲೆ

ಒಂದು ಮೊಳ ಗಳ ತಂದು ನೂರೆಂಟು ಮನೆ ಕಟ್ಟಿ
ಒಂದು ಮೊಳ ಇನ್ನೂ ಹಂಗೇ ಇದೆ (ಲ ಗೌ ೩೧೭)
ಬಲೆ ಎಳೆಯುವ ಪಾಜಿ

ಆರು ಮಾರು ಗೂಟ
ಶಾನುಭೋಗರ ತೋಟ
ಹೋಗುವದಷ್ಟೇ ಗೊತ್ತು
ಬರುವದು ಗೊತ್ತೇ ಇಲ್ಲ (ವಾಲಿ ೬–೧೦)
ಬಲೆಗೆ ಬೀಳುವ ಮೀನು

ಎದುರು ಎದುರು ಅಂಗಡಿ
ಬಿದಿರಿನ ಚಾವಡಿ
ಹೊಕ್ಕವರುಂಟು ಹೊರಟವರಿಲ್ಲ (ಚಂ ಸೆ ೫೧)

ಸಾವಿರ ಕಣ್ಣಿನ ಸರದಾರನಿಗೆ
ಸುತ್ತಮುತ್ತ ಸೂಳೇರು ಜೋತು ಬೀಳ್ತಾರೆ (ಸು ೪೬೬)
ಬಲೆ ಮತ್ತು ಮೀನು

ನಾಲ್ಗೆ ಇಲ್ದನಾ ಯೋಗಿ
ತೊಡೆ ಇಲ್ದ ಮಿಕಹೊತ್ಗೊಂಬತ್ತು (ಜೀಶಂಪ ೧೮೪)
ಬಲೆ, ಮೀನು

ಬೆಳ್ಳಿ ತಂಬ್ಗೆಲಿ (ಬುರ್ಡೆಲಿ) ಚಿನ್ನದ್ಬೂರು (ಶಾಂ ನಾ ೩೬೩)

ಬೆಳ್ಳಿ ಬುಡ್ಡಾ್ಯಗ ಬಂಗಾರ ಚೂರು (ವಾಲಿ ೩–೧೦೪)
ಬಲ್ಲು

ಕೊಡದಾಗ ಕುಂಬಳಕಾಯಿ ಬೆಳದತಿ
ಪಾರ ಮಾಡೊ ಪರಮೇಶ್ವರಾ (ಲಠೈ ಭಾಗ ೧–೩೧)

ಸಾವಿರ ರೂಪಾಯಿ ಶಂಖ
ನೂರ ರೂಪಾಯಿ ಗೋಣಿ
ಗೋಣಿ ಬಿಚ್ಚೋತನಕಾ
ಧಾರಣಿ ಗೊತ್ತಾಗೋದಿಲ್ಲ (ಲಠೈ ಭಾಗ ೫–೨೭೫)

ಸಾವಿರ ರೂಪಾಯಿದ ಸಂದುಕ
ನೂರ ರೂಪಾಯಿ ಕೀಲಿ
ಹಾಕೊ ಜಾಣಾ ಅಂದರ
ಹೊತಗೊಂಡ ತಿರುಗೋ ಕ್ವಾಣಾ (ಲಠೈ ಭಾಗ ೧–೫೧)
ಬಸರ

ಎತ್ತಿನ ಮ್ಯಾಲ ಒಜ್ಜಿ
ಹೇರದ ಮಾಲಕಗ ಗೊತ್ತಿಲ್ಲ
ಹೇರಸಿಕೊಂಡ ಎತ್ತಿಗೆ
ಮೊದಲೆ ಗೊತ್ತಿಲ್ಲ
ನನಗರೆ ಯೇನ ಗೊತ್ತ (ಲಠೈ ಭಾಗ ೧–೧೧)
ಬಸರ ಹೆಣ್ಣುಮಗಳ

ಡೊಂಕ ಗಿಡಕ್ಕ ಡೊಳ್ಳ ಕಟ್ಟೇತಿ (ಲಠೈ ಭಾಗ ೫–೧೬೫)
ಬಸರ ಹೆಂಗಸ

ಹುಟ್ಟದ ಕೂಸು
ಹೆತ್ತವ್ವನ ಹೊತಗೊಂಡು ಸಾಗ್ಯಾದ (ವಾಲಿ ೬–೧೪)
ಬಸವನ ಹುಳ

ಏಳು ಬೆಟ್ಟದ ಎಡಗಡೆ ದಿಣ್ಣೆ ಮೇಲಿರುವ
ತನ್ನ ಬಾಲವನು ತಾನೇ ಮುರಿದು ತಿನ್ನುವ ಮೃಗಜಾತಿ
ಹೆಸರು ಹೇಳಿದವರಿಗೆ ಬಾಣಾವರ ಬೆಟ್ಟಾವರ
ಮೂರು ಸಾವಿರದ ತೆಂಗಿನ ತೋಟ
ಕೋಡಂಬಳ್ಳಿ ಕೊಡಗಿ ಹೊಲ (ಲ ಗೌ ೨೬೧)

ಬಸವನ ಹುಳು

ಬೆಟ್ಟ ವುಂಟ್ಗತ್ತು ಬಳ್ಳ ತಟ್ಕಂತ್ತು (ಮಂ ೧.೪–೬೨)

ಬಸಿಯುವುದು

ಗಿಡ್ಡ ಗಿಡಕ ಡೊಳ್ಳು ಕಟ್ಟಾ ್ಯರು (ಇ ೪೮೧)

ಬಸಿರ ಹೆಂಗಸು

ತುಂಬಿದ ಕೊಡದಾಗ ಲಿಂಬೀಹಣ್ಣು ಬಿದ್ದೈತಿ (ಇ ೬೦೫)

ಬಸಿರ್ದೆಣ್ಣು

ಡೊಂಕ ಗಿಡಕ ಡೊಳ್ಳು ಕಟ್ಟೈತಿ (ಇ ೫೬೨)

ಸಾವಿರಾರ ರೂಪಾಯಿ ಸರಕ
ನೂರು ರೂಪಾಯಿ ಗೋಣಿ
ಹೊತ್ತ ಎತ್ತಿಗೂ ಗೊತ್ತಿಲ್ಲ
ಹೇರಿದ ಶೆಟ್ಟಿಗೂ ಗೊತ್ತಿಲ್ಲ (ವಾಲಿ ೪–೩೧)

ಸಾವಿರ ರೂಪಾಯಿ ಸರಕು
ನೂರು ರೂಪಾಯಿ ಗೋಣಿ
ಹೊತ್ತ ಎತ್ತಿಗೂ ಗೊತ್ತಿಲ್ಲ
ಹೇರಿದ ಶೆಟ್ಟಿಗೂ ಗೊತ್ತಿಲ್ಲ (ಇ ೯೪೧)

ಬಸುರಿ

ಸಾವಿರ ರೂಪಾಯಿ ಸದಲು
ನೂರು ರೂಪಾಯಿ ಕತ್ತಿ
ಹೊತಗೊಂಡ ತಿರುಗೂ ಕತ್ತಿಗೂ ಗೊತ್ತಿಲ್ಲ
ಹೊರಸಿದ ದನ್ಯಾಗೂ ಗೊತ್ತಿಲ್ಲ (ಇ ೯೪೪)

ಬಸುರಿ ಹೆಂಗಸು

ಒಂದು ಎಂದರೆ ನಿಲ್ಲುವೆ
ಎರಡೂ ಎಂದರೆ ಹೊರಡುವೆ (ಶಾಂ ನಾ ೩೬೫)

ಬರೋದ ಕಂಡು ಕೈ ಒಡ್ತಾರೆ (ರಾ ಗೌ ೩೪೫)

ಬಿರಬಿರನೆ ಹೋಗೋ ಬಿಲ್ಲಗರ ಹುಡುಗ
ನಿಂತು ಮಾತೊಡೋ ಕುಂಚಿಗರ ಹುಡುಗ (ಲ ಗೌ ೭೬೨)

ಯತ್ತು ಇಲ್ಲದ ಗಾಡಿ ವತ್ತತ್ತಿ ನಡೆತು (ಶಾಂ ನಾ ೩೬೪)
ಬಸ್ಸು

ಕೈ ಹಿಡಿದವ ಗಂಡನಲ್ಲ
ಮೊಲೆ ಹಿಡಿದವ ಮಿಂಡನಲ್ಲ (ವಾಲಿ ೮–೨೪)
ಬಳಗಾರ ಕೂಸು

ಈಟ ಕುಳ್ಳಾ್ಯಗ ಹುಳ್ಳಾನುಚ್ಚ
ಬಳವಲಕಾಯಿ (ವಾಲಿ ೫–೬)

ಈಟ ಕುಳ್ಳಾ್ಯಗ ಹುಳ್ಳಾ ನುಚ್ಚ (ವಾಲಿ ೨–೪೨)
ಬಳವಲ ಹಣ್ಣು

ಸುತ್ತೆಲ್ಲಾ ನೀನ ನಿನ್ನೊಳಗ ನಾನ (ಲಠೆ ಭಾಗ ೫–೨೮೩)
ಬಳಿ

ಚಂದಾಚಾರ ಯಾವಾಗ ಮುಂದ್ಯಾಗ ಕುತ್ತಾಗ
ಅಳೂದು ಕರಿಯೂದು ಯಾವಾಗ ಅರ್ಧ ಹೊಗಸಿದಾದ
ನಗುದು ಕರಿಯೂದು ಯಾವಗ ಪೂರ ಹೊಗಸಿದಾಗ (ಇ ೫೧೬)
ಬಳಿ ಇಡಿಸಿಕೊಳ್ಳುವುದು

ಕೈ ಹಿಡಿದಾಂವಾ ಆದ್ರ ಗಂಡ ಅಲ್ಲ
ಕುಣ್ಯಾಗ ಕುಂಡ್ರತಾನು ಆದ್ರ ಹೆಣಾ ಅಲ್ಲ
ಅರಿವಿ ಹರಿತಾನು ಆದ್ರ ಹುಚ್ಚ ಅಲ್ಲ (ಲಠೆ ಭಾಗ ೫–೧೩೯)
ಬಳಿಗಾರ, ಜಾಡ, ಸಿಂಪಿಗ್ಯಾ

ಚಿಕ್ಕಂಗ್ಡಿ ಚಿಗರೆಲೆ ಬಿಟ್ಟು
ದೊಡ್ಡಂಗ್ಡಿ ಕಳ್ಳಡಿಕೆ ಬಿಟ್ಟು
ಮೈಸೂರ್ನಂತ ಬೀದಿ ಬಿಟ್ಟು
ಗೆಜ್ಜಪ್ಪಂತ ಮಗನ್ನ ಬಿಟ್ಟು
ಗುಬ್ಬಿ ಮಾರವ್ನ ಕರ್ಕಂಡು ವೋದ (ಮಂ ೧.೨–೧೦)

ಬಾಲೆಯರ ಕೈಯಲ್ಲಿ ಬಳಕುತ್ತ ಕುಳಿತಿರುವೆ
ನಾರಿಯರ ಕೈಯಲ್ಲಿ ಹತ್‌ಹತ್ತಿ ಇಳಿಯುವೆ
ಮುದುಕಿಯರ ಕೈಯಲ್ಲಿ ಮಸಕಾಗಿ ನಿಂತಿರುವೆ (ಇ ೭೩೮)

ಬೀದಿಯಲಿ ಮಾರೋನ
ಹೆಗಲೇರಿ ಬರುವಳು
ಬಾ ಎಂದು ಕರೆದರೆ
ಓ ಎನ್ನುತ್ತಿರುವಳು
ಕರೆದ ಭಾಮಿನಿಯರ
ಕೈ ಸೇರುವಳು (ಇ ೭೫೮)

ಮಾತುಕತೆ ಯಾವಾಗ
ಎದ್ರುಗುದ್ರಾಗ ಕೂತಾಗ
ಅಳೋದು ಕರಿಯೋದು ಯಾವಾಗ
ಅರ್ಧ ವಳಕ್ಕೋದಾಗ
ನಗೋದು ನುಡ್ಯೋದು ಯಾವಾಗ
ತುಂಬ ವೊಳಕ್ ವೋದಾಗ (ಮಂ ೧.೨–೧೩)

ಮುಂಗೈಲಿ ಪಳ ಪಳ (ರಾ ಗೌ ೩೯೧)

ಸುತ್ತೆಲ್ಲಾ ನೀನು ನಿನ್ನೊಳಗ ನಾನು (ವಾಲಿ ೮–೨೬)

ಹೆಗ್ಲ್ ಮೆಲೆ ಹೂರ್‌ತ್ರು
ಹೊತ್ತವ್ರು ಕೂಗ್ತು
ಕೇಳ್ದವ್ರು ಕರೆತ್ರು (ಶಾಂ ನಾ ೪೧೯)
ಬಳೆ

ಬಾ ಬಾ ಅಂತಾಳ
ಮನ್ನಿಸಿ ಕರಿತಾಳ
ರೊಕ್ಕಾ ಕೊಡತಾಳ
ಕಸಿವಿಸಿ ಬಡತಾಳ (ಲಠ್ಠೆ ಭಾಗ ೫–೨೧೬)
ಬಳೆ ಇಡಿಸಿಕೊಳ್ಳುವವಳು

ಚಂದ್ ಪಂದ್ ಯಾವಾಗ ಕಯ್ ಹಿಡಿವಾಗ
ಮಸು ಮುಸು ಯಾವಾಗಾ ಅರ್ಧಾಹ್ರೆತ್ಯಾಗಾ
ಮಾತುಕತೆ ಯಾವಾಗ ದಾರೀಲೋಪಾಗಾ (ಶಾಂ ನಾ ೪೧೮)

ಮಾತು ಕತಿ ಯಾವಾಗ
ಚಾಪೀ ಗೀಪೀ ಹಾಸಿದಾಗ
ಕಂಯ್ಯಾ ಕುಂಯ್ಯಾ ಯಾವಾಗ
ಕೈ ಹಿಡಿದಾಗ
ಸಂಕಟ ಗಿಂಕಟ ಯಾವಾಗ
ಅರ್ಧಮರ್ಧ ಹೊಕ್ಕಾಗ
ಚಂದಾ ಚಾಯಾ ಯಾವಾಗ
ಪುಟ್ಟಾ ಪೂರಾ ಹೊಕ್ಕಾಗ
ಯಾವಾಗ (ಇ ೮೪೬)
ಬಳೆ ಇಡಿಸಿಕೊಳ್ಳುವಾಗ

ಬಾಬಾ ಅಂಬೋಳು
ಬಣ್ಣಿಸಿ ಕರೆವಳು
ಇಕ್ಕಿಸಿಕೊಂಬಳು
ಕಕ್ಕಸ ಪಡುವಳು (ಇ ೭೩೧)

ಮಾತನಾಡುವುದು ಯಾವಾಗ
ಎದುರಿಗೆ ಕುಳಿತಾಗ
ಅಳೋದು ಕರೆಯೋದು ಯಾವಾಗ
ಅರ್ಧಂಬರ್ಧ ಒಳಗೆ ಹೋದಾಗ
ನಗೋದು ನೆಗೆಯೋದು ಯಾವಾಗ
ಪೂರ್ತಿ ಒಳಗ ಹೋದಾಗ
ನಾನ್ಯಾರು ಹಾಗಾದರ? (ಇ ೮೪೨)
ಬಳೆ ಇಡಿಸಿಕೊಳ್ಳುವುದು

ಬೀದಿಯಲಿ ಬರುವವನ ಹೆಗಲೇರಿ ಬರುವೆ
ಬಾ ಎಂದು ಕರೆದರೆ ಓ ಎನ್ನುತಿರುವೆ
ಕರೆದ ಕಾಮಿನಿಯರ ಕೈ ಸೇರುತಿರುವೆ (ವಾಲಿ ೩–೧೩೯)

ಮಾತು ಕತೆ ಯಾವಾಗ ಕೈ ಕೈ ಹಿಡಿದಾಗ
ಅಳುವದು ಕರೆವುದು ಯಾವಾಗ ಅರ್ಧ ಒಳ ಸೇರಿದಾಗ
ನಗುವದು ಕೆಲೆವುದು ಯಾವಾಗ ಪೂರಾ ಒಳ ಸೇರಿದಾಗ (ವಾಲಿ ೭–೧)
ಬಳೆ ಇಡಿಸುವ ಕ್ರಿಯೆ

ಬಾ ಬಾ ಎನ್ನುತ ಬಣ್ಣಿಸಿ ಕರೆಯುತ
ರೊಕ್ಕನ ಕೊಡುತ ಕಕ್ಕಸ ಬಡುತ (ವಾಲಿ ೭–೨)
ಬಳೆ ಇಡಿಸುವವನು

ಅಯ್ಯೋ ಅಮ್ಮ ಎಂದು ಕೊರಗಿದವಳು ಸೂಳೆಯಲ್ಲ
ಆಯ್ತು ಆಯ್ತು ಎಂದವನು ಮಿಂಡನಲ್ಲ (ಸು ೫೧೦)
ಬಳೆ ತೊಟ್ಟುಕೊಳ್ಳುವವಳು ಮತ್ತು ಬಳೆಗಾರ

ಮಾತು ಕತೆ ಯಾವಾಗ
ಎದುರು ಬದುರು ಕೂತಾಗ
ಅಳೆಯೋದ್ಕರೆಯೋದ್ಯಾವಾಗ
ಅರ್ಧ ಹೊಟ್ಟೆ ತುಂಬಿದಾಗ
ನಗೋದ್ಕರೆಯೋದ್ಯಾವಾಗ
ಪೂರ್ತಿ ಹೊಟ್ಟೆ ತುಂಬಿದಾಗ (ಜೀಶಂಪ ೨೩೦)
ಬಳೆ ತೊಡಿಸುವುದು

ವ್ಯಾಪಾರ ಸಾಪಾರ ಯಾವಾಗ
ಎದುರು ಬದರಿಗೆ ಕೂತಾಗ
ಅಳೋದು ಕರೆಯೋದು ಯಾವಾಗ
ಅರ್ಧ ಒಳಕ್ಕೆ ಹೋದಾಗ
ನಗೋದು ನಲಿಯೋದು ಯಾವಾಗ
ಪೂರ್ತಿ ಒಳಕ್ಕೆ ಹೋದಾಗ (ರಾ ಗೌ ೪೨೮)
ಬಳೆ ತೊಡುವುದು

ಬಾ ಬಾ ಎಂದು ಕರೆವರು
ಬಂದ ಮೇಲೆ ನೋಡಿ ನಗುವರು
ದುಗ್ಗಾಣಿ ಕೊಟ್ಟು ಅಳುವರು (ರಾ ಗೌ ೩೪೬)
ಬಳೆ ತೊಡುವುದು, ಒಡೆದಾಗ ಅಳುವುದು

ಜಾಡಿ ಹಾಸ್ಯಾರ, ಕುಳಿತು ಮಾತು ನಡಿಸ್ಯಾರ
ಅರ್ಧ ಒಳಗೋಗುಮುಂದ ಅಳತಾರ
ಒಳಗೋಗ್ಹಿಂದ ನಗತಾರ (ಇ ೫೪೯)
ಬಳೆ–ಬಳೆಗಾರ

ಬಾಯಿ ಅಗಲವಾಗಿ
ಮೂ ಬೆರಳು ನುಂಗುವುದು
ಬೀಯ ಮಾರುವವನ
ಹೆಗಲೇರಿ ಬರುವುದು
ಬಾ ಬಾ ಎಂದು ಕೂಗಿದರೆ
ಬಾಗಿಲಿಗೆ ಬರುವುದು
ರಾಯರಾಣಿಯರ ಹಸ್ತಕ್ಕೆ
ಇಕ್ಕೆ ಒಪ್ಪುವುದು (ರಾ ಗೌ ೩೪೭)
ಬಳೆ, ಬಳೆಗಾರ ಶೆಟ್ಟಿ

ಗಟ್ಟ್ ಮೆಲೋಗಿ ವಂದ್ಗಳಾ ತಂದೆ
ಮನೆ ಕಟ್ಟಿ ಮಾರ್ ಕಟ್ಟಿ ಮತ್ತೂ ವಂದ್ಮಾರ್ಟೆಚ್ಚಳದ್ದು (ಶಾಂ ನಾ ೩೬೬)

ಮರ ಕಂಡರೆ ಏರುತ್ತೆ
ಇಲ್ಲದಿದ್ದರೆ ಮಲಗುತ್ತೆ
ನೀರಿಲ್ಲದಿದ್ದರೆ ಸಾಯುತ್ತೆ (ಚಂ ಸೆ ೨೦೦)
ಬಳ್ಳಿ

ಬೀದಿಯಲಿ ಮಾರೋನ ಹೆಗಲೇರಿ ಬರುವಳು
ಬಾಯೆಂದು ಕರೆದರೆ ಓ ಎನ್ನುತಿಹಳು
ಕರೆದ ಭಾಮಿನಿಯರ ಕೈಯ್ಯನೇರುವಳು (ಚಂ ಸೆ ೧೮೬)
ಬಳೆ

ಒಂದ ಗೂಟಕ್ಕ
ಒಂಬತ್ತು ಎತ್ತು ಕಟ್ಟ್ಯಾವ (ಇ ೨೭೬)

ಹರಕ ಸೀರಿ ಉಟಗೊಂಡು
ಹತ್ತ ಮಕ್ಕಳನ ಕರಗೊಂಡು
ಹತ್ತೂ ಮಂದಿ ಕೂಡ ಊಟಾ ಮಾಡುತ್ತಾಳ (ಇ ೧೦೨೧)

ಗಿಡ್ಡಿ
ಗುದ್ದಿದರ
ಮನಿಯೆಲ್ಲಾ ಮಕ್ಕಳ (ಲಠೈ ಭಾಗ ೪–೯೧)

ಗಿಡ್ಡಿನ್ನ ಗುದ್ದಿದರ ಮನೆ ತುಂಬಾ ಮಕ್ಕಳು (ವಾಲಿ ೫–೯)

ಹತ್ತು ಮಕ್ಕಳ ತಾಯಿ
ಹರಕ ಸೀರಿ ಮಾಯಿ
ಎಲ್ಲಾ ಮಕ್ಕಳು ಕೂಡಿ ಸಿರಿವಂತರ ಮನಿ ಸೇರಿದಳು (ವಾಲಿ ೨–೫೪)

ಹರ್ಕ ಸೀರಿ ಉಟಗೊಂಡ
ಹತ್ತ ಮಕ್ಕಳ್ನ ಎತಿಕೊಂಡ
ದೊರಿ ಜತಿ ಊಟಾ ಮಾಡ್ತಾಳ (ಲಠ್ಠೆ ಭಾಗ ೪–೧೯೮)

ಬಳ್ಳೊಳ್ಳಿ

ಅಜ್ಜೀ (ಗಿಡ್ಡಿ) ಗುದ್ದಿದ್ರೆ ಮನೆತುಂಬಾ ಮಕ್ಕೊ (ಶಾಂ ನಾ ೨೨೩)

ಬೆಳುಳ್ಳಿ

ಒಬ್ಬೊಬ್ಬರ ಮನೆಗೂ ಊಟಕ್ಕೆ ಹೋಗ್ತಾಳೆ (ಲ ಗೌ ೨೪೨)

ಒಂದೊಂದುಂಡೆ ಒಡೆದರೆ ಮನೆ ತುಂಬಾ ಮಕ್ಕಳು (ಲ ಗೌ ೩೫೨)

ಕುಳ್ಳಿ ಕುಕ್ಕಿದರೆ ಮನೆಯೆಲ್ಲ ಮಕ್ಕಳು (ಲ ಗೌ ೪೫೭)

ಗಿಡ್ಡಿ ಗುದ್ದಿದರ ಮನಿ ತುಂಬಾ ಮಕ್ಕಳು (ಇ ೪೪೪)

ಗಿಡ್ಡಿ ಗುದ್ದಿದರೆ ಮನೆತುಂಬ ಮಕ್ಕಳು (ಜೀಶಂಪ ೧೩೭)

ಗುಂಡನೆಯ ಮನೆ ತುಂಬ ಹಿಂಡು ಹಿಂಡು ಮಕ್ಕಳು (ಲ ಗೌ ೫೨೩)

ಚಿಕ್ಕ ಮಕ್ಕಳಿಗೆ ಮೈತುಂಬಾ ಬಿಳಿ ಬಟ್ಟೆ (ಇ ೫೨೫)

ಚಿಕ್ಕ ಮಗಳಿಗೆ ಮೈತುಂಬಾ ಬಿಳಿ ಬಟ್ಟೆ (ಚಂ ಸೆ ೧೨೫)

ಬುಡ್ಡು ಹುಡುಗಿ ಗುದ್ದಿದರೆ ಮನೆ ತುಂಬ ಮಕ್ಕಳು (ಸು ೩೮೦)

ಮಕ್ಕಳನ್ನು ಕಟ್ಕೊಂಡು ಅಪ್ಪನ ಮನೆಗೆ ಹಬ್ಬಕ್ಕೆ ಹೋದಳು (ಸು ೩೯೪)

ಮಕ್ಳು ತತ್ಕಂಡು ಅರಕೀಲ್ ಸೀರೆ ಉಟ್ಕಂಡು ಊಟದೊತ್ತಿಗೆ ಬಂದ (ಮಂ ೧.೪–೬೬)

ಹತ್ತು ಮಕ್ಕಳ ತಾಯಿ
ಹರುಕು ಸೀರೆ ಉಟ್ಕೊಂಡು
ಹತ್ತು ಮಕ್ಕಳ ಎತ್ತಿಕೊಂಡು
ದೊರೆಗಳ ಮನೆಗೆ ಊಟಕ್ಕೆ ಹೋದ್ಲು (ರಾ ಗೌ ೪೭೨)

ಹರಕು ಸೀರೆ ಉಟ್ಟುಕೊಂಡು
ಹತ್ತು ಮಕ್ಕಳ ಎತ್ತಿಕೊಂಡು
ದೊರೆ ಜೊತೇಲಿ ಊಟಾ ಮಾಡ್ತಾಳೆ (ಲ ಗೌ ೯೯೫)
ಬೆಳ್ಳುಳ್ಳಿ

ಅಪ್ಪಣ್ಣ ಅಪಗೊಂಡ
ಭೀಮಣ್ಣ ಬಿಕ್ಕೊಂಡ
ದಡ್ಡ ಮುಂಡೆ ಅಡ್ಡಬಿದ್ಲ (ಲಠೈ ಭಾಗ ೫–೨೧)
ಬಾಗಲು

ಅವ್ವಗೆ ಆರು ಮೊಲೆ
ಮಗಳಿಗೆ ಮೂರು ಮೊಲೆ (ಲ ಗೌ ೯೩)

ಒಂದು ಮನೇಲಿ ಒಬ್ಬಳು ಸೂಳೆ
ಬಂದ ಬಂದವರೆಲ್ಲ ಎದೆ ಹಿಡಿತಾರೆ (ಲ ಗೌ ೩೩೭)
ಬಾಗಿಲ ಮೊಳೆ

ಅಪ್ಪಾ ಅಣ್ಣಾ ಎಂದರೆ ಬರುವುದಿಲ್ಲ
ಕೈ ಹಿಡಿದರೆ ಬರುತ್ತದೆ (ಚಂ ಸೆ ೧೫)

ಕತ್ಲೆ ಮನೇಲಿ ಹಂದಿ ಗುಟ್ರಾಕುತ್ತೆ (ಮಂ ೧.೫–೪೨)

ಬಾ ಅಂದರೆ ಬರೊಲ್ಲ ಕೈ ಹಿಡಿದೆಳೆದರೆ ಬರುತ್ತೆ (ಲ ಗೌ ೭೪೭)

ಬಾ ಅಂದ್ರ ಬರೂದಿಲ್ಲ
ಕೈ ಹಿಡಿದೆಳದ್ರ ಬರತೈತಿ (ಇ ೭೨೮)

ವಂದಿಗೆ ವುಟ್ಟೋದು
ವಡುಟ್ನೇ ತಿನ್ನೇದು (ಮಂ ೧.೫–೮೧)

ಸಂಜಿ ಆಯಿತು ಹೆಣ್ಣು ಬಂಜಿಯಾಯಿತು
ಕತ್ತಲಾಯಿತು ಹೆಣ್ಣು ಬತ್ತಲಾಯಿತು
ಬೆಳಗಾಯಿತು ಹೆಣ್ಣು ಒಳಗಾಯಿತು (ಇ ೯೭೩)

ಹಗಲಿನಾಗ ಅರ್ಧ ಎಲೆ ರಾತ್ರಿನಾಗೆ ತುಂಬಾ ಎಲೆ (ಲ ಗೌ ೯೭೨)
ಬಾಗಿಲು

ಬಂದರೆ ಬಾ ಬರದಿದ್ದರೆ ಬೇಡ
ಒಣಮರ ಬಡಿದಾಡುತ್ತೆ
ಕಬ್ಬಿಣದ ಕಾಗೆ ಕಡಿದಾಡುತ್ತೆ
ಬೆಂದಮನೆ ಎಡಕ್ಕೆ ಬಿಟ್ಟುಕೊಂಡು
ಬೇಯದಿರುವ ಮನೆ ಬಲಕ್ಕೆ ಬಿಟ್ಟುಕೊಂಡು ಬಾ (ರಾ ಗೌ ೩೭೫)
ಬಾಗಿಲು, ಚಿಲಕ, ಹಂಚಿನ ಮನೆ ಹುಲ್ಲಿನ ಮನೆ

ಅಣ್ಣ ಸತ್ತಾನ ತಮ್ಮ ಹೊತ್ತಾನ (ಇ ೮೧)
ಬಾಗಿಲು ಚೌಕಟ್ಟು

ಒಣಮರಕ್ಕೆ ಒಣಮರ ಕೂಡೈತೆ
ಕಬ್ಬಿಣಕ್ಕೆ ಕಬ್ಬಿಣ ಕೂಡೈತೆ
ತುಂಬಿದ ಕೆರೆ ಬತ್ತೈತೆ (ಲ ಗೌ ೨೬೪)
ಬಾಗಿಲು ಹಾಕಿ, ಅಗಳಿ ಹಾಕಿ ದೀಪ ಆರಿಸುವುದು

ಯಂಕಪ್ಪ ಹೆಣ್ತಿ ಕಣ್ಸನ್ನೆ ಮಾಡ್ದ್ರೆ ಬತ್ತಿಲ್ಲೆ
ಕಯ್ಸನ್ನೆ ಮಾಡಿದ್ರೆ ಬತ್ತು (ಶಾಂ ನಾ ೩೬೭)
ಬಾಗ್ಲು

ಎರಡು ಬಂಡೆ
ಬಂಡೆಯ ಮೇಲೆ ಕಪ್ಪು ಕಾಡು
ಕಾಡಿನ ಮೇಲೆ ನಡೆಯುತ್ತದೆ
ಕಾಲಿಲ್ಲ ಕೈಯಿಲ್ಲ ಮೈತುಂಬ ಹಲ್ಲು (ಇ ೨೪೦)

ಅಂಗೈ ಅಗಲ ಗದ್ದಿಗೆ
ಅದಕ್ಕೆ ನೂರೊಂದು ಬಾಗ್ಲು (ನಾ ಗೌ ೧೮)

ಒಂದೇ ಮನೆ ಒಂಬೈನೂರು ಬಾಗಿಲು (ವಾಲಿ ೩–೬೫)

ಒಂಭೈನೂರು ಹಲಗೆ
ತೊಂಭೈನೂರು ಬಾಗಿಲು (ನಾ ಗೌ ೮೧)

ನೂರು ತಾಳದ ಎಡಕುಂಟಿ
ಅಡವಿಯೆಲ್ಲಾ ಗಳೇ ಹೊಡಿತೈತಿ (ಇ ೬೮೦)
ಬಾಚಣಿಕೆ

ಅಂಗೈ ಅಗಲ ಪಟ್ಟಣಕೆ
ಒಂಬೈದೂರು ಬಾಕಲು (ಸು ೬೬)

ವೊಂಟೊಂಟು ವಡಿಯೋನ್ಗಂಟು
ನಿಮ್ಮಪ್ಪನ ತಿಕ್‌ಮಕ ಸರ್ಗಂಟು (ಮಂ ೧.೫–೮೩)
ಬಾಚಣಿಗೆ

ಸಂತೆಗೆ ಹೋಗುವವಳಿಗೆ ಇನ್ನೊಬ್ಬಳು ಹೇಳಿದ್ದು
ಹನ್ನೆರಡೆತ್ತಿನ ಹಣಿಪಟ್ಟ ತರಬೇಕು
ಬಂಗಾರದೊಂದು ಸಿಂಗಾರ ತರಬೇಕು (ವಾಲಿ ೩–೮೬)
ಬಾಚಣಿಗೆ, ಕುಂಕುಮ

ಬಿಟ್ಟರದು ಹಾರುವದು ಗಿಡಗ ತಾನಲ್ಲ
ದಿಟ್ಟರಿಗೆ ಕೊಲ್ಲುವದು ದಯವು ಅದಕಿಲ್ಲ (ವಾಲಿ ೩– ೧೩೩)
ಬಾಣ

ಕರೀ ಕೆರ್ಯಾಗ ಕೆಂಪೆತ್ತಿನ ಹೊಟ್ಟಿ ಉಬ್ಬೈತಿ (ವಾಲಿ ೫–೧೯)
ಬಾಣೆಲೆಯಲ್ಲಿಯ ಬೋಂಡಾ

ಕೆಂಪ ಎತ್ತ ಕೆರ್ಯಾಗ ಈಸತೈತಿ (ವಾಲಿ ೫–೧೭)
ಬಾಣೆಲೆಯಲ್ಲಿಯ ಭಜಿ

ಎರಡು ಕಾಲುಗಳುಂಟು ಮನುಷ್ಯನಲ್ಲ
ರೆಕ್ಕೆಗಳು ನನಗುಂಟು ಹಾರುವ ಪಕ್ಷಿಯಲ್ಲ
ಕೊಕ್ಕುಗಳು ನನಗುಂಟು ಕೊಕ್ಕರೆಯಲ್ಲ
ಕೊಳದಲ್ಲಿ ನಾನಿರುವೆ ಕಪ್ಪೆಯಲ್ಲ (ಲ ಗೌ ೨೨೫)
ಬಾತು

ಕಣ್ಣಿಗೆ ಹತ್ತಿರ ಕಾಲಿಗೆ ದೂರ (ಸು ೧೭೦)
ಬಾನಂಚು ಅಥವಾ ಬೆಟ್ಟ

ಸಣ್ಣಾವೆ ಬಿಳ್ಗಲ್ಲೂರ (ಶಾಂ ನಾ ೧೧೧)
ಬಾಯ– ಹಲ್ಲ

ಈಟ ಕುಡಿಕ್ಯಾಗ ಶೆಕ್ಕಿ ತುಂಬ್ಯಾವ (ಲಠ್ಠೆ ಭಾಗ ೧–೯)

ಊಟಾ ಮಾಡುವಾಗ ಏನು ತಗದ ಊಟಾ ಮಾಡತಿ (ಇ ೨೨೨)

ಎಲೆಯಲ್ಲಿ ಬಡಿಸಿದ ಸಾಮಾನುಗಳ ಹೆಸರ ಹೇಳಿ
ಆಮೇಲೆ ಏನು ತಗಿದರೆ ರುಚಿ ಹತ್ತುವದು (ವಾಲಿ ೪–೩೩)

ಸೊಟ್ಟಪಟ್ಟ ಬಾವಿ
ಒಂದು ಗುಡ್ಡ
ಒಂದೇ ಒಂದು ಎಲೆ
ಮೂವತ್ತೆರಡು ಬಿಳೀ ಜನರು (ಚಂ ಸೆ ೨೩೧)

ಹಳ್ಳದಲ್ಲಿ ಬಾಯ್ ಕಿಸಗೊಂಡು ಬಿದ್ದದೆ (ಲ ಗೌ ೧೦೨೫)
ಬಾಯಿ

ಅವ್ವ ಇಕ್ಕಿದ್ದು ಅಡೀಲೆ ಪಾಯ (ಸು ೫೫)
ಬಾಯಿ, ಅಡಿಕೆ, ಇಳ್ಳೇದೆಲೆ, ಸುಣ್ಣ, ಕೆಂಪು ಉಗಳು

ಮಾತಾಡದವ ನೋಡಬೇಕಂದರ
ನೋಡಲಕ ಬರಲ್ಲ
ನೋಡದವ ಮಾತಾಡಬೇಕೆಂದರ
ಮಾತಾಡಲಕ ಬರಲ್ಲ (ಲಠ್ಠೆ ಭಾಗ ೧–೪೮)
ಬಾಯಿ, ಕಣ್ಣ

ಅಂಗ್ಯೆ ಕಣಾ ಮುಂಗ್ಯೆ ಮೇಟಿ
ಐದು ಮಂದಿ ಚಾಚತಾರ
ಮೂವತ್ತೆರಡು ಮಂದಿ ತುಳಿತಾರ
ಉಳಿದದ್ದು ಹೊರಗ ತುಳಿದದ್ದು ಒಳಗ (ಇ ೪೨)
ಬಾಯಿ, ಕೈ, ಬೆರಳು, ಹಲ್ಲು

ಈಟ ಗುಡಿ
ಗುಡಿ ತುಂಬ ಥಡಿ (ಲಠ್ಠೆ ಭಾಗ ೧–೧೦)
ಬಾಯಿ–ನಾಲಿಗಿ

ಅಂಗೈಯಾಟ ಖಳ ಮುಂಗೈಯಾಟ ಮೇಟಿ
ಒಬ್ಬ ಚಾಚತಾನ
ಬತ್ತೀಸ ಮಂದಿ ತುಳಿತಾರ (ಲಠ್ಠೆ ಭಾಗ ೧–೬)
ಬಾಯಿ–ನಾಲಿಗಿ–ಹಲ್ಲ

ಸುತ್ತು ಬೆಳ್ಗಲ್ಲೊಟೆ ನೆಡ್ಕೊಂದನಾ ಮೇಯ್ತು (ಶಾಂ ನಾ ೧೧೦)
ಬಾಯಿ–ನೆಲ್ಗೆ

ಈಟಿ ಗುಡಿ ಗುಡಿ ತುಂಬ ತಡಿ (ಲ ಗೌ ೧೪೨)

ಗುಡಿ ಬಾಗಿಲಲ್ಲಿ ಮೊನು ಹಾರಾಡ್ತದೆ (ಲ ಗೌ ೫೨೦)
ಬಾಯಿ–ನಾಲಗೆ

ಒಂದ ಹಳ್ಳ
ಹಳ್ಳದ ಮ್ಯಾಲೊಂದ ಕಂಬ
ಕಂಬಕ ಆಚಿಕ ಇಚಿಕ ಎಡ್ಡ ಗಿಣಿ
ಅದರ ಮ್ಯಾಲೊಂದ ಬಯಲ (ಲಠ್ಠೆ ಭಾಗ ೧–೨೨)
ಬಾಯಿ, ಮೂಗು, ಕಣ್ಣು, ಹಣಿ

ಬಾವಿ
ಬಾವಿ ಮೇಲೆ ಕಂಬಾ
ಕಂಬದ್ಮೆಲೆ ಪಕ್ಷಿ
ಪಕ್ಷಿ ಮೆಲೆ ಗುಡ್ಡಾ
ಗುಡ್ಡದ್ಮೆಲೆ ಕರಿಕಾಡು (ಶಾಂ ನಾ ೧೧೫೫)
ಬಾಯಿ, ಮೂಗು, ಕಣ್ಣು, ತಲೆ

ಒಂದು ಹಳ್ಳ
ಅದರ ಮೇಲೊಂದು ಕಂಬ
ಕಂಬದ ಪಕ್ಕ ಎರಡು ಗಿಣಿ
ಅದರ ಮೇಲೆ ಬಿಳಿ ಮೈದಾನ (ಲ ಗೌ ೩೧೪)
ಬಾಯಿ, ಮೂಗು, ಕಣ್ಣು, ಹಣೆ

ಚಿಕ್ಕ ಮನೇಲಿ ಎರಡು ಚಿಕ್ಕ ಜಗುಲಿ (ಸು ೨೬೬)
ಬಾಯಿ, ಹಲ್ಲಿನ ಸಾಲು

ಈಟಿ ಗುಡಿ ಗುಡಿ ತುಂಬ ಚಕ್ಕಿ (ಲ ಗೌ ೧೪೩)

ಚಿಕಾಪ್ಪನತೋಟಾ ಯಿಪ್ಪತ್ನಾಕ್ ಗುಟ್ಟಾ (ಶಾಂ ನಾ ೧೧೨)

ಚಿಕ್ಕ ಚಿಕ್ಕ ಪೆಟ್ಟಿಗೆ ಚಿನ್ನಾರಿ ಪೆಟ್ಟಿಗೆ
ನವಣೆ ತುಂಬುವುದು ಹದಿನಾರು ಪೆಟ್ಟಿಗೆ (ಲ ಗೌ ೫೪೪)

ಪುಟ್ಟ ಬಾವಿಗೆ ಬೆಳ್ಗಲ್ಲಕಟ್ಟೆ (ಶಾಂ ನಾ ೧೧೩)
ಸಣ್ ಕೊಣೆಲಿ ಚಕ್ಕೆ ತುಂಬಿದ್ದು (ಶಾಂ ನಾ ೧೧೪)
ಬಾಯಿ–ಹಲ್ಲು

ಈಟೆ ಮಗನೆ ಚೋಟ ಮಗನೆ
ಗಳೇಕ ಹೋಗೋ ಬೋಳಿ ಮಗನೆ (ವಾಲಿ ೩–೨೨)

ಗಿಡ್ಡಪಾರ ಸಡ್ಡ ಹೊಡಿತತಿ (ಲಠೈ ಭಾಗ ೫–೧೪೭)
ಬಾರಕೋಲ

ಈಟ ಮಗನ ಚೋಟ ಮಗನ
ಗಳೇ ಹೊಡೀಲೇ ಲೌಡಿ ಮಗನ (ಇ ೨೦೧)

ಗಿಡ್ಡ ಪೋರ ಸಡ್ಡು ಹೊಡೀತಾನ (ಇ ೪೮೨)

ಗೇಣುದ್ದ ಹುಡುಗನಿಗೆ ಮಾರುದ್ದ ಬಾಲ (ಇ ೫೧೧)
ಬಾರಕೋಲು

ಕೆಂಪ ಎತ್ತಿನ ಹಿಡೀಲಾಗ ಹೋದರ
ಬಡಕ ಎತ್ತ ಇರಿಲಾಕ ಬರತೈತಿ (ವಾಲಿ ೨–೨೭)
ಬಾರಿ ಕಂಟಿ, ಹಣ್ಣು

ಮಳಕಾಲೂಚ ಪಾರ ಮನಿತುಂಬ ಓಡ್ಯಾಡ್ತದ (ಲಠೈ ಭಾಗ ೫–೨೪೪)
ಬಾರಿಗಿ (ಕಸಬರಿಗಿ)

ಅರಿಬಿ ತಿಂತಾರೆ
ಬುತ್ತಿ ಉಂಡಿ ಉರುಳಿಬಿಡ್ತಾರೆ (ಲ ಗೌ ೮೨)

ಅರ್ಬಿ ತಿಂತೀವಿ ಬುತ್ತಿ ಒಗಾಸ್ತವಿ (ಲ ಗೌ ೮೩)
ಬಾರೀ ಹಣ್ಣು

ಒಂಟೆತ್ತಿಗೆ ಸೊಟ್ಟ ಬಾಲ (ಲ ಗೌ ೨೯೭)
ಬಾರುಕೋಲು

ಕತ್ತಲ ಮನ್ಯಾಗ
ಕತ್ತಿ ಬೀಸಾಡ್ತದ (ಲಠೈ ಭಾಗ ೧–೨೩)
ಬಾಲ

ಒಂದ ಬೀಸಣಿಕೆ
ಒಂದ ಪಿಳಿ ಪಿಳಿ
ಒಂದ ಫಟ ಫಟ
ಒಂದ ಲಾಟಣಿಕೆ (ಲಠೈ ಭಾಗ ೧–೧೯)
ಬಾಲ, ಕಣ್ಣು, ಕಿವಿ, ಕೋಡ

ತಾತಾ ಗಿಂಡಿ ತಾಂಬರ ಗಿಂಡಿ
ಒಡದು ನೋಡಿದರ ಮುತ್ತಿನ ಗಿಂಡಿ (ವಾಲಿ ೫–೪೮)
ಬಾಲೆಯ ಹಣ್ಣು

ನಾಕಕ್ಕೆ ನಾಲ್ಕು ಕಾಲು ಏತಕ್ಕೆ ಎರಡು ಕಾಲು
ಮೂತಕ್ಕೆ ಮೂರು ಕಾಲು (ಲ ಗೌ ೬೫೮)
ಬಾಲ್ಯ, ಯೌವನ, ಮುಪ್ಪು

ಅಪ್ಪಂದು ಜೋತಾಡತೈತಿ
ಅವ್ವಂದು ಮಾತಾಡತೈತಿ (ವಾಲಿ ೮–೬)
ಬಾವಲಿ, ಪಿಳ್ಳೆ

ಅಗ್ಗನಳ್ಳಿ ನುಗ್ಗೇಮರ
ನಾಗನಳ್ಳಿ ನರಸೀಪುರ
ಬಂದವರೆಲ್ಲ ಬಗ್ಗಿ ನೋಡ್ತಾರೆ (ಸು ೧೪)
ಬಾವಿ

ಅಕ್ಕ ತೌರಿಗೆ ಹೋಗುವಾಗ
ಸರ್ರನೆ ಹೋಗ್ತಾಳೆ
ಗಂಡನ ಮನೆಗೆ ಬರುವಾಗ
ಹೆಜ್ಜೆ ಹೆಜ್ಜೆಗೂ ಕಣ್ಣೀರು ಸುರಿಸುತ್ತಾ
ನಿಧಾನವಾಗಿ ಬರುತ್ತಾಳೆ (ರಾ ಗೌ ೩)
ಬಾವಿಯಿಂದ ನೀರು ಸೇದುವುದು

ಅವ್ವ ಅವರದು ಅಗಲ
ಅಪ್ಪ ಅವರದು ಉದ್ದ (ವಾಲಿ ೮–೪)

ಗಡಗಡ ಅಂದ್ರೆ ಗಾಡಿಯಲ್ಲ, ಸರಸರ ಅಂದ್ರೆ ಸರ್ಪವಲ್ಲ
ಕುತ್ಗೆ ಹಿಡಿದ್ರೆ ಮನುಷ್ಯ ಅಲ್ಲ (ಲ ಗೌ ೪೯೮)
ಬಾವಿಯಿಂದ ನೀರು ಸೇದುವುದು, ತಿರುಗಣೆ, ಹಗ್ಗ, ಬಿಂದಿಗೆ

ನಿನ್ನ ನೋಡಿದರೆ ನಂಗೆ ಹೆದರಿಕೆಯಾಗುತ್ತೆ
ನಿಂದರೊಳಗೆ ನಂದ ಬಿಡೋಹಂಗಾಗುತ್ತೆ (ಲ ಗೌ ೬೭೮)

ಅಮ್ಮನವರದು ಅಗಲ
ಅಯ್ಯನವರದು ಉದ್ದ (ರಾ ಗೌ ೩೭)
ಬಾವಿ, ಹಗ್ಗ

ಅರಲ್ಲಲ್ಲಿ ಹುಟ್ಟುತ್ತೆ ಗಿರಿಯಾಗಿ ಬೆಳೆಯುತ್ತೆ
ಪಕ್ಕ ಬಿಡುತ್ತೆ ಪಾರಿವಾಳ (ಲ ಗೌ ೮೧) ಬಾಸಿಗ

ಅರಕಟ್ಟ ಮರಕಟ್ಟ
ಪಂಚಲಾವದ ಮನಿಕಟ್ಟ
ಪಗಡಿಕಟ್ಟ ನೆತ್ತಿಮ್ಯಾಲ
ಮೂರ ಉತ್ರಾಣಿ ಕಡ್ಡಿಕಟ್ಟ (ಲತೈ ಭಾಗ ೫–೨೬)

ಅಂಬಾರ್ದಲ್ಲಾಡೊಗಿಡ್ಗ
ಅದರ ಕಾಲಿಗೆ ಪಚ್ಚೆಕಡ್ಗ
ಅದನ್ಮಾಡ್ದೋನು ಬಡಗಿಹುಡ್ಗ
ಬಂಟ ನೀನಿದ ತಿಳಿದ್ದೇಳೊ (ಜೀಶಂಪ ೧೭)

ಒಂದು ಬಿದುರೊಡೆದು
ಒಂಬತ್ತು ಮನೆ ಕಟ್ಟಿ
ಚಾವಡೀ ಕಟ್ಟಿ
ನಾಗಮಂಗಲ ಕಟ್ಟಿ
ನರಸೀಪುರದೋರ್ಗೆ ಇಳ್ಕೇವು (ನಾ ಗೌ ೭೮)

ಪಕ್ಕನೆ ನಗ್ತು ಪಲ್ಲಂಡೆ ಆಯ್ತು
ರಾಯನ ಹಿಂದೆ ಹೋಯ್ತು
ರಾಣಿ ಕರಕೊಂಡು ಬಂತು (ಸು ೩೫೨)

ಭುಜಗಿರಿ ಏರಿಮೇಲೆ ಗಜನಿಂಬೆ ಮರಹುಟ್ಟಿ
ಎಸಳೆಂಬತ್ತು ಕುಶಲ ಮುವತ್ತು
ಅದ ಹೇಳ್ಕೋರಿಗೆ ಮಧುಗಿರಿ ಮಾನ್ಯವದ ಗಿರಿಉಂಬಳಿಗೆ (ಜೀಶಂಪ ೨೨೦)
ಬಾಸಿಂಗ

ಹೆಸರು ಘಟ್ಟದ ಏರಿ
ಎಸಲು ಎಂಬತ್ತು
ಕುಸಲು ಮುವತ್ತು
ಬೀದಿ ಬಿತ್ತಾರ
ನಡುವೆ ಚಿತ್ತಾರ (ಸು ೫೨೯)
ಬಾಸಿಂಗ ಅಥವಾ ಬಾಚಣಿಗೆ

ಅಗ್ಲಲ್ಲಿ ಹುಟ್ಟಿ
ಕೊರ್ಲಲ್ಲಿ ಬೆಳ್ದಿ
ಪುಲ್ಲಿಹತ್ತಿ
ಪುಕ್ಕಾಕೊಯ್ದಿ
ಬಟ್‌ಬಂದಿ ತೇರ್ಕಟ್ಟಿ (ಶಾಂ ನಾ ೪೨೬)
ಬಾಸಿಂಗಾ

ಒಂದ ಟೊಂಗಿ ಟೊಂಗಿಗಿ ನೂರ ಗಿಣಿ
ಗಿಣಿಗಿ ನೂರ ರೆಕ್ಕಿ ರೆಕ್ಕಿಗಿ ನೂರಹಕ್ಕಿ
ಹಕ್ಕಿ ಬಾಯಾಗ ಮೂರ ಪಾವ ಅಕ್ಕಿ (ಲಠ್ಠೆ ಭಾಗ ೪–೫೩)

ಒಂದ ಹೆಂಗಸಾ
ಒಂದ ಮಗಾ ಆಗಾನಾ ಸಾಯತತಿ (ಲಠ್ಠೆ ಭಾಗ ೪–೫೪) ಬಾಳಿ

ಸರ್ರಂತ ಬಂತ
ಕುಬಸಾ ಕಳೀತ
ಬಾವ್ಯಾಗ ಇಳೀತ (ಲಠ್ಠೆ ಭಾಗ ೪–೧೬೦)
ಬಾಳಿಕಾಯಿ

ಅಪ್ಪ ಆಕಾಶಕ ಹೋದ
ಅವ್ವ ಪಾತಾಳಕ ಹೋದಳು
ಮಗ ವ್ಯಾಪಾರಕ ಹೋದ
ಮಗಳ ಮದುವಿಗಿ ಹೋದಳು (ಲಠ್ಠೆ ಭಾಗ ೪–೨೨)
ಬಾಳಿ ಮರ, ಅಡಕಿ ಮರ

ಅಂಗಿ ಕಳಿತಾನು
ಬಾಂವ್ಯಾಗ ಜಿಗಿತಾನು (ಲಠ್ಠೆ ಭಾಗ ೪–೩೩)

ಅಂಗೀ ತಿಗ್ದೆ ಬಾವೀಲ್ಗುದ್ಕ್ತೀದ (ಶಾಂ ನಾ ೨೨೨)

ಬರಿಬಿರಿ ಹೋಗ್ತಾನ
ಬಿರಿಗಲ್ಲ ಒಗಿತಾನ
ತ್ವಾಟಿ ಸುಲಿತಾನ
ಬ್ಯಾಟಿ ನುಂಗತಾನ (ಲಠ್ಠೆ ಭಾಗ ೪–೧೪೦)

ಬೆಳ್ಳಿದಿಂಬಾ
ಚಿನ್ನದ ಗವಸಾ (ಲಠ್ಠೆ ಭಾಗ ೪–೧೪೮)

ಬಂಗಾರಕ್ಕ ತಂಗ್ಯೇರ ಹಿಂದಿಂದೆ
ಕೆಂಪ್ಮುಂಡಾಸ್ದಣ್ಣಾ ಮುಂದ್ಮುಂದೆ (ಶಾಂ ನಾ ೨೨೦)

ಹುಟ್ಟಾಗೆ ಬಿಳಿ ಅಂಗೆ ಹರಾಯ್ದಿಲ್ಲೆ ಹಸ್ರುಂಗೆ
ಮುಪ್ಪ ಕಾಲ್ಕೆ ಅರ್ಸ್ನ ಅಂಗೆ (ಶಾಂ ನಾ ೨೨೧)

ಹಂಗ ಜಾಣಾ ಹಿಂಗ ಜಾಣಾ
ಅಂಗಿ ಕಳದ ನುಂಗ ಜಾಣಾ (ಲಠ್ಠೆ ಭಾಗ ೪–೨೧೪)

ಹಾಂಗ ಅಣ್ಣಾ ಹೀಂಗ ಅಣ್ಣಾ
ಅಂಗಿ ಕಳದ ನುಂಗೊ ಅಣ್ಣಾ (ಲಠ್ಠೆ ಭಾಗ ೪–೨೦೬)
ಬಾಳಿಹಣ್ಣ

ಅಂಗೀ ಕಳಿ ಭಾವ್ಯಾಗ ಇಳಿ (ವಾಲಿ ೫–೮)

ಕಚ್ಚೆ ಕಳೆದರೆ ಮೆತ್ತಗ ಇಳೀತೈತಿ (ವಾಲಿ ೮–೨೦)

ಕುಶಾಲದಿಂದ ಕುಬಸಾ ಕಳಿ
ಹೌಸದಿಂದ ಹಾಸಗಿ ಮಾಡು
ಒಳ್ಳೇ ಮಾತೀಲೆ ಒಳ್ಯಾಕ ಇಳಿ (ವಾಲಿ ೮–೩೧)
ಬಾಳಿಹಣ್ಣು

ಅತ್ತೊಂದ್ಮಾರು ಇತ್ತೊಂದ್ಮಾರು ಬಳಕ್ತದೆ
ಅದರಲ್ಲಿ ನೂರೊಂದು ಕಾಯಿ
ವರ್ಷಕ್ಕೊಂದೆ ಫಲ (ರಾ ಗೌ ೨೩)
ಅತ್ತೊಂದ್ಮಾರು ಇತ್ತೊಂದ್ಮಾರು ಬಳಕ್ತದೆ
ಅದರಲ್ಲಿ ನೂರಾರು ಕಾಯಿ
ವರ್ಷದಾಗೊಂದು ಫಲ
ಫಲ ಬಂದ ಮ್ಯಾಲ ನೆಲ (ವಾ ೨–೧೭)

ಎಲೆಗೆರಸಿ ಕಾಯಿ ಕಹಿ ಹಣ್ಣು ಸಿಹಿ (ಚಂ ಸೆ ೫೭)

ಒಬ್ಬ ಹೆಂಗಸು ಒಂದೇಬಾರಿಗೆ ನೂರು ಮಕ್ಕಳು
ಹೆತ್ತು ಸಾಯ್ತಾಳೆ (ಜೀಶಂಪ ೮೭)

ಒಂದ ಹೆಂಗಸೀಗೆ ಒಂದ ಕೂಸು (ಇ ೨೮೧)

ಒಂದು ಹೆಂಗಸು ಒಂದೇ ಮಗುವನ್ನು ಹಡೆದು ಸಾಯ್ತಾಳೆ (ಲ ಗೌ ೩೩೩)

ಗಂಡ್ನಿಲ್ದೆ ಮಕ್ಕ ಹಡೆತು (ಶಾಂ ನಾ ೨೦೩)

ಬಿಳಿಯಣಗಿತ್ತಿ ಬಾಯಲ್ಬಸ್ರು
ಕರಿಯಣಗಿತ್ತಿ ಕುಂಡೆಲ್ಬಸ್ರು (ಶಾಂ ನಾ ೨೦೫)

ಮರ ಕಂಬ ಹರೆ ಹಲಗೆ ಕಾಯಿ ಒಗರು ಹಣ್ಣು ಸಿಹಿ (ಲ ಗೌ ೮೨೪)

ಮರಾದಿಂಡು ಯಲೆ ಹಲ್ಗೆ ಕಾಯ್ಹೊಗ್ರು ಹಣ್ಸೀ (ಶಾಂ ನಾ ೨೦೪)

ಮೈ ನುಣುಪು ಎಲೆ ಅಗಲ ಕಾಯಿ ಒಗಚು ಹಣ್ಣು ಸಿಹಿ (ಲ ಗೌ ೮೭೨)

ರಾಜಗಿರಿ ಏರಿಮ್ಯಾಲೆ
ಬೀಜವಿಲ್ಲದ ಮರ ಹುಟ್ಟಿ
ಲೋಕಕ್ಕೆಲ್ಲ ಹೆಸರಾಯ್ತು (ಸು ೪೪೦)

ಬಾಳೆ

ಅವ್ವ ನೆರೆಯೋಕೆ ಮುಂಚೆ ಮಗ್ನೆರ್ದ (ಲ ಗೌ ೯೪)

ಅಂಬಾರದಾಗಾಡೋ ಗಿಣಿ
ಉಂಬೋಕೆ ಹೋಗೋಣ ಬಾರೋ ಗಿಣಿ (ಸು ೭೧)

ಅಂಬಾರಂಬಾರಿ ಅರಗಿಣಿ ಉಂಬಾಕ್ಹೋಗೂನು ಬಾರಗಿಣಿ (ಇ ೧೧೧)

ತಾಯಿ ಬರುವುದಕ್ಕೆ ಮುಂಚೆ
ಮಗಳು ಮದುವೆಗೆ ಹೋದ್ಲು (ರಾ ಗೌ ೨೬೯)
ತೋಟದಲ್ಲಿ ಹುಟ್ಟುವುದು
ನೀಟಾಗಿ ಬೆಳೆಯುವುದು
ಊಟಕ್ಕೆ ಮೊದಲಾಗಿ ಬರುವುದು (ರಾ ಗೌ ೨೭೯)

ಬಾವಿದಡದಲಿರೋನೊ
ಬಗರಿರೊ ಮೀಸೆಯೋನೆ
ಸಾಯಂಕಾಲಕ್ಕೆ ನಮ್ಮನೆ ಊಟಕ್ಕೆ ಬಾ (ಜೀಶಂಪ ೨೦೨)

ಬಾಳೆ ಎಲೆ

ತಾಯಿ ಊಟಕ್ಕೆ ಬರೋ ಮೊದಲು
ಮಗಳು ಅಡಿಗೆಗೆ ಬಂದಳು (ಸು ೩೦೦)
ಬಾಳೆ ಎಲೆ, ಬಾಳೆಕಾಯಿ

ಅವ್ವ ನೆರೆಯೋಕೆ ಮುಂಚೆ
ಮಗ ಪ್ರಸ್ತಕ್ಕೆ ಹೋದ (ಸು ೫೧)
ಬಾಳೆಕಂದು ಮತ್ತು ಎಲೆ

ಒಂದು ಕಣ್ಣೀಲಿ ನೂರಾರು ಜನ ಕಟ್ಟಾಕ್ತಾರೆ (ಲ ಗೌ ೩೩೧)

ಮಾರುದ್ದ ಕೈಗೆ ನೂರೊಂದು ಬೆರಳು (ಲ ಗೌ ೮೩೭)

ಹಸುಕೂಸಿಗೆ ಹಸುರಂಗಿ (ಚಂ ಸೆ ೨೪೫)
ಬಾಳೆಕಾಯಿ

ಗೇಣುದ್ದ ಕಾಯಿ
ಮಾರುದ್ದ ಎಲೆ (ರಾ ಗೌ ೨೩೬)
ಬಾಳೆಕಾಯಿ, ಬಾಳೆ ಎಲೆ

ಹಸುಗೂಸಿಗೆ ಹಸರಂಗಿ
ಮುದಕೀಗೆ ಅರಿಸಿಣ ಅಂಗಿ (ವಾಲಿ ೩–೮೨)
ಬಾಳೆಕಾಯಿ, ಹಣ್ಣು

ಅಂಗೀಕಳೆ ಬಾವಿಗ್ಬೀಳು (ಶಾಂ ನಾ ೨೧೧)

ಅಂಬಾರ್ದ ಆರೋಗಿಣಿ ಉಂಬೂಲ್ದೊ್ಯೀ ಪೊ ಬಾ (ಶಾಂ ನಾ ೨೧೯)

ಕುಪ್ಪಾ ಬಟ್ಟಾ ಮುಂದೆ ಸಾವರಾರ್‌ಜನಾ ಹಿಂದೆ (ಶಾಂ ನಾ ೨೧೩)

ಚಿನ್ನದ ದೆವಸ್ತಾನಾ ಬೆಳ್ಳಿ ದೆವ್ರು
ಸಾಸ್ಮೆ ಕಾಳಿಗೂ ಸಣ್ಣಟ್ಟಾ (ಶಾಂ ನಾ ೨೧೦)

ಬೆಳ್ಳಿ ಡಾಬು ಚಿನ್ದ್ ಕವ್ಚಾ (ಶಾಂ ನಾ ೨೦೮)

ಬಂಗಾರ್ದ ಮಂಟ್ಪದಲ್ಲಿ ಬೆಳ್ಳಿ ದೆವ್ರು (ಶಾಂ ನಾ ೨೦೯)

ಮುಂದೆ ರಾಜಾ ಹಿಂದೆ ಪ್ರೆಜಾ (ಶಾಂ ನಾ ೨೧೭)

ಮುಂದ್ವಂದ್ ಕೆಂಪೀ ಅಮ್ಮಾ ಹಿಂದೆ ನೂರಾರ್ಜನಾ (ಶಾಂ ನಾ ೨೧೮)

ವಡ್ಯಾ ಮುಂದೆ ವಕ್ಲು ಹಿಂದೆ (ಶಾಂ ನಾ ೨೦೬)

ವಂದ್ಮರಕ್ಕೆ ಮಣೆಯೇ ಮಣೆ (ಶಾಂ ನಾ ೨೧೪)

ವಂದ್ಸ ಬೆಲಿ ಸಾವ್ರಾರ್ ಜನಾ ವಬ್ನೇ ಪೋಲೀಸಾ (ಶಾಂ ನಾ ೨೧೫)

ಸಣ್ಣ ಸಣ್ಣ ದೆವ್ರು ಸುತ್ತು ಬೆಳ್ಳಿ ಕಟ್ಟೆ ಬಂಗಾರ್ದ ಮನೆ (ಶಾಂ ನಾ ೨೧೨)

ಸಾವರಾರ್ ಎತ್ತಿಗೆ ವಂದೇ ಬಾಲಾ (ಶಾಂ ನಾ ೨೧೬)

ಹಸುಗೂಸಿಗೆ ಹಸ್ರಂಗಿ ಮುದ್ದಿಗೆ ಆರ್ಯ್ನಂಗಿ (ಶಾಂ ನಾ ೨೦೭)
ಬಾಳೆ ಗೊನೆ–ಹಣ್ಣು

ಕುರಿ ಹಿಂಡು ಹಿಂದ
ಕುರಿ ಕಾಯವ ಮುಂದ (ಇ ೪೦೮)
ಬಾಳೆಗೊನಿ

ಒಂದು ಹಕ್ಕೀಗೆ ಸಾವಿರ ಕೊಕ್ಕು (ಲ ಗೌ ೩೩೦)

ಚಂದದ ನೂರು ಗಿಣಿಗೆ
ಅಂದದ ಒಂದೇ ಕೊಕ್ಕು (ಚಂ ಸೆ ೧೨೨)

ದೇವಸ್ಥಾನ ಮೇಲೆ
ಮುಗುಳಿ ಕೆಳಗೆ (ಚಂ ಸೆ ೧೪೫)

ನರಿ ತಲೆ ಮೇಲೆ ಚಿನ್ನದ ಗರಿ
ಇದನ್ನು ಒಡೆದವನು ಮೈಸೂರ್ ಮರಿ (ಸು ೩೩೧)

ಮುಂದೆ ರಾಜ ಹಿಂದೆ ಪ್ರಜೆಗಳು (ಚಂ ಸೆ ೨೦೫)

ಮೊಳದಗಲ ಎಲೆ
ಮಾರುದ್ದ ಗೊನೆ (ಸು ೪೩೪)
ರಾಜನು ಕ್ಷೀಣವಾದರೆ ಪ್ರಜೆಗಳು ಬಲಿಷ್ಠರಾಗುತ್ತಾರೆ (ಚಂ ಸೆ ೨೧೪)

ಸಾಹುಕಾರ ಮುಂದೆ
ಸಾವಿರ ಜನ ಹಿಂದೆ (ರಾ ಗೌ ೪೪೯)
ಬಾಳೆಗೊನೆ

ಎಲುಬಿಲ್ಲದ ದನ ಕರು ಹಾಕಿತು (ಲ ಗೌ ೨೪೧)
ಬಾಳೆ–ಬಾಳೆಗೊನೆ

ತೋಟದಲ್ಲಿ ಹುಟ್ಟುವದು
ನೀಟಾಗಿ ಬೆಳೆಯುವದು
ಊಟಕ್ಕೆ ಮೊದಲು ಬರುವದು (ವಾಲಿ ೨–೫೧)
ಬಾಳೆಯ ಎಲೆ

ಅವ್ವ ಹಡೀತಾಳ
ಮಗಳು ಮದುವೀಗಿ ಬರತಾಳ (ವಾಲಿ ೨–೭೮)
ಬಾಳೆಯ ಗಿಡ

ಮ್ಯಾಲ ಬಂಗಾರ ಗಿಲೀಟ
ಒಳಗ ರತ್ನದ ಹರುಳು (ವಾಲಿ ೫– ೫೩)
ಬಾಳೆಯ ಹಣ್ಣು

ಅಂಗಡಿಯಿಂದ ಬಂದ
ಕೋಟು ಬಟ್ಟೆ ಬಿಚ್ಚಿದ
ಬಾವಿಯಲ್ಲಿ ದುಮುಕಿದ (ಚಂ ಸೆ ೨೬)

ಅಂಗಣ್ಣ ನಿಂಗಣ್ಣ
ಅಂಗಿ ಬಿಚ್ಕಂಡು ನುಂಗಣ್ಣ (ಮಂ.ಕ) (ಮಂ ೧.೪–೧)

ಅಂಗಣ್ಣ ಮಂಗಣ್ಣ
ಅಂಗಿ ಕಳ್ಕಂಡ್ ನುಂಗಣ್ಣ (ಮೈ.ಕ.) (ಮಂ ೧.೪–೨)

ಅಂಗಣ್ಣ ಮಂಗಣ್ಣ
ಅಂಗಿ ಬಿಚ್ಕೊಂಡ್ ನುಂಗಣ್ಣ (ಜೀಶಂಪ ೨೩)

ಅಂಗಿ ಚಡ್ಡಿ ಬಿಚ್ಚಿ ಬಾವಿಗೆ ಬೀಳ್ತಾನೆ (ಲ ಗೌ ೧೦೫)

ಏರಿ ಮ್ಯಾಲೆ ಇಬ್ಬರು ಸೂಳೇರು
ತೊಟ್ಟಿಲು ಬಿಸಾಡಿದ್ರು
ಮಗ ತಗೊಂಡ್ರು (ಸು ೧೨೩)

ಕಚ್ಚೆ ಕಳೆದರೆ ಮೆತ್ತಗೆ ಸಿಕ್ತದೆ (ರಾ ಗೌ ೧೬೩)

ಚಿನ್ನದ ಗುಡಿಯೊಳಗೆ ಬೆಳ್ಳಿ ದೇವರು (ಸು ೨೭೬)

ಚಿನ್ನ ಬಿಸಾಡ್ತಾರೆ
ಬೆಳ್ಳಿ ತಿಂತಾರೆ (ಸು ೨೭೭)

ತೊಟ್ಟಿಲು ಬಿಸ್ಹಾಕ್ವಿಟ್ಟು
ಮೊಗ ತಿಂದ್ಕೊಳ್ತಾರೆ (ರಾ ಗೌ ೨೭೫)

ಬೆಳ್ಳಿ ಕತ್ತಿಗೆ ಚಿನ್ನದ ಕವಚ (ಲ ಗೌ ೭೯೪)

ಬೆಳ್ಳಿಯ ಮೂರ್ತಿಗೆ ಚಿನ್ನದ ಕವಚ (ಚಂ ಸೆ ೧೯೨)

ಬಂಗಾರ ಚೆಲ್ಲತಾರ
ಬೆಳ್ಳಿ ತಿನ್ನತಾರ (ವಾಲಿ ೫೫–೩೫)

ರಾಯರು ಬಂದರು
ಕೋಟು ಪ್ಯಾಂಟು ಬಿಚ್ಚಿದರು
ಬಾವಿಯೊಳಕ್ಕೆ ಬಿದ್ದರು (ರಾ ಗೌ ೪೨೨)

ಸಣ್ಣ ಕಳ್ಳಗೆ ಮೈ ತುಂಬಾ ಮಾಂಸ (ಲ ಗೌ ೯೦೫)

ಸರ ಸರ ಎಂದರೆ ಸರ್ಪವಲ್ಲ
ಗುಡು ಗುಡು ಎಂದರೆ ಗುಡುಗಲ್ಲ
ಕಂಕುಳಿಗೆ ಬಂದದ್ದು ಮಗುವಲ್ಲ ಏನದು? (ಇ ೯೩೧)

ಸರ್ರನ ಬರ್ತಾನ
ಉಡುದಾರ ಬಿಚ್ತಾನ
ಅಂಗಿ ಕಳಿತಾನ
ಬಾಯಾಗ ಬೀಳತಾನ (ಇ ೯೩೨)
ಬಾಳೆಹಣ್ಣು

ಸ್ಯಾಲೆವೊಳಗಲ ದೈಗರೆ
ರವಕೆ ವೊಳಗಲ ಮೆಂತೆ
ಚಡ್ಡಿವೊಳಗಲ ನಿಗರ (ಮಂ ೧.೪–೮೧)

ಹಜಾರದ ತುಂಬಾ ಬಜಾರ ಪೆಟ್ಟಿಗೆ (ಲ ಗೌ ೯೭೭)
ಬಾಳೆಹಣ್ಣು. ಗೆಣಸು

ತೋಟದಾಗ ಹುಟ್ಟುವುದು
ನೀಟಾಗಿ ಬೆಳೆಯುವರು
ತೋಟದ ರುದ್ರಾಕ್ಷನ್ನ
ಕೈಮಾಡಿ ಕರೆಯುವದು (ಇ ೫೯೮)
ಬಾಳೇಗೊನೆ

ಅಂಗಣ್ಣ ಮಂಗಣ್ಣ
ಅಂಗೀ ಕಳದು ನುಂಗಣ್ಣ
ಬಾಳ ಸಿಹಿ ಸಂಗಣ್ಣ (ಇ ೨೮)

ಕುಬಸಾ ಕಳಿ
ಖೋಲ್ಯಾಗ ನಡಿ (ಲಠ್ಠೆ ಭಾಗ ೪–೭೬)

ಚಿನ್ನ ಬಿಸಾಡಿ ಬೆಳ್ಳಿ ನುಂಗತಾರ (ಇ ೫೩೪೪)

ಪೇಟೆಯಿಂದ ಬಂತು
ಅಂಗಿ ಚಣ್ಣ ಕಳೀತು
ಬಾವ್ಯಾಗ ಇಳೀತು (ಇ ೭೧೦)

ಬಡ ಬಡ ಬಂದಾ
ಅಂಗೀ ಕಳದಾ
ಬಾಯ್ಯಾಗ ಇಳಿದಾ (ಇ ೭೧೫)

ಬೆಳ್ಳಿ ಸಿವಂಗೆ ಆಸ್ರಂಗಿ (ಮಂ ೧.೪–೬೩)

ಬಂಗಾರ ಬಿಡಿಸಿ ಬೆಳ್ಳಿ ತಿಂತಾರ (ಇ ೭೭೯)
ಬಾಳೇಹಣ್ಣು

ಕಶಾಲ ಮೂಳಾ ಕುಬಸಾ ಹರದಿ
ಅಲ್ಲದ ಮೂಳಾ ಗಲ್ಲಾ ಕಡದಿ
ಸಿಟ್ಟಿನ ಮೂಳಾ ಬಟ್ಟಿ ಮುರದಿ (ಇ ೩೭೭)
ಬಾಳೇಹಣ್ಣು–ಪೇರಲಹಣ್ಣು–ಗಜ್ಜರಿ

ಮಲ್ಲಾಡದಿಂದ ಎರಡು ಎಮ್ಮಿ ತಂದೀನಿ
ಒಂದು ಕೀವ ಹಿಂಡತೈತಿ
ಒಂದು ರಕ್ತ ಹಿಂಡತೈತಿ (ಇ ೮೩೩)
ಬಾಳೇಹಣ್ಣು, ಮಾವಿನಹಣ್ಣು

ಈಟ ಕುಡಕ್ಯಾಗ
ಈಟ ಬೆಲ್ಲ (ಲಠ್ಠೆ ಭಾಗ ೪–೪೩)
ಬಿಕ್ಕಹಣ್ಣ

ಸಾಸಿವೆಕಾಳು ಗಾತ್ರ ಹಸ
ಮಾವಿನಕಾಯಿ ಗಾತ್ರ ಕೆಚ್ಚಲು
ಅದು ಈರು ಮನೆಗೆ ಬಂದ್ರೆ
ಮನೆ ಮಕ್ಕಳಿಗೆಲ್ಲ ಹೆಚ್ಚಳ (ಸು ೪೬೯)
ಬಿತ್ತನೆಯ ರಾಗಿ, ತೆನೆ

ಬೆಟ್ಟದ ಮ್ಯಾಲಿರೊ ಹುಡ್ಗಂಗೆ
ಯ್ಯಾಳು ಸುತ್ತಿನ ಕುವ್ವಾಲಿ (ಮಂ ೧.೪–೬೧)
ಬಿತ್ತರ ಕಳ್ಳಿ

ಮೂರು ಮಂದಿ ಸುತ್ತೂದೂ ಒಂದೇ ರುಂಬಾಲ (ವಾಲಿ ೩–೧೨೮)
ಬಿತ್ತುವ ಮಂಡಿ

ಆತಾತನೆ ಜಗದಾತನೆ
ಸುರ್ಯಾನ ಕೋಟೆಗೆ ಹಾರ್ಯಾಣ
ಮಣ್ಣಾಗ ಮಲಗ್ಯಾನ (ಲಠ್ಠೆ ಭಾಗ ೫–೪೪)
ಬಿತ್ತುವವ, ಮಂಡಿ, ತಾಳ, ಭೂಮಿ

ಹುಟ್ಟುವಾಗ ಒಂದ ಹೆಸರ
ಸತ್ತಾಗ ಸಾವಿರ ಹೆಸರ (ಲಠ್ಠೆ ಭಾಗ ೫–೩೦೫)
ಬಿದರ

ಹುಟ್ಟುವಾಗ ಒಂದು ಸತ್ತಾಗ ಸಾವಿರ (ಇ ೧೦೮೬)
ಬಿದರು

ಒಬ್ಬಳು ಹುಡುಗಿ ಹುಟ್ಟುವಾಗ ಸೀರೆ ಉಡ್ತಾಳೆ
ಬೆಳೆ ಬೆಳೆಯುತ್ತಾ ಬಿಚ್ಚಿ ಹಾಕ್ತಾಳೆ (ಲ ಗೌ ೨೭೬)
ಬಿದಿರ ಕಳಲೆ

ಅಂತರಿಕ್ಷದಲ್ಲಿ ಹಾರಡ್ತಾಳೆ
ಹುಟ್ಟಿದ ಜಾಗ ಬೆಟ್ಟದ ವಾರೆ
ಒಡೆಸಿದವನಿಗೆ ಒಂದು ಹಿಡಿ ಹೊನ್ನು (ಲ ಗೌ ೧೧೮)
ಬಿದಿರಗಳು

ಒನಕೆ ಮುಟ್ಟದ ಅಕ್ಕಿ
ಕಪ್ಪೆ ಮುಟ್ಟದ ನೀರು (ಲ ಗೌ ೨೬೬)
ಬಿದಿರ, ತೆಂಗಿನಕಾಯಿ ನೀರು

ಅಟ್ಟರೆ ಅಡಿಗೆ ಬಿಟ್ಟರೆ ಬಡಿಗೆ (ಲ ಗೌ ೩೨)

ಬಿದಿರಿನ ಕಳಲೆ

ಆಕಾಶಕ್ಕೆ ಹೋಗಿ ಚವರೀ ಬೀಸುತ್ತದೆ (ಇ ೧೫೬)

ಒಂದು ಗಳು ಒಡೆದು
ಒಂಬೈನೂರು ಭಾಗ ಮಾಡಿ
ಹರದನಹಳ್ಳಿ ಕಟ್ಟಿ
ಹರದನಹಳ್ಳಿ ತೇರು ಕಟ್ಟಿ
ತೇರಿನ ತುದಿ ಕಟ್ಟಿ ಸೇರಿಸಿದೆ (ರಾ ಗೌ ೧೪೬)

ಕಚ್ಚೆ ಉರುಚ್ಕೊತ್ತು
ಕೋಲು ನಿಗುರ್ಕತ್ತು (ರಾ ಗೌ ೧೬೪)

ಕಲ್ಲಲ್ಲಿ ಹುಟ್ಟಿ ಕಿಣಿಕಿಣಿಗುಟ್ಟಿ
ಅಂಬರಕ ಹೋಗಿ ಚೌರೀ ಬೀಸತೈತಿ (ಇ ೩೬೮)

ಕಲ್ಲಲ್ಲಿ ಹುಟ್ಟಿತು ಕಣಕಣ ಅಂದಿತು
ಮೇಲೆ ಬಂದು ಚೊಲ್ಲೆಬ್ಬಿಸಿತು (ಲ ಗೌ ೪೧೯)

ಕುಂಕುಮ ಕಂಕುಮರಳು
ರಾಜಗಟ್ಲೆ ಬೂಬಿಸಾನಿ
ಹೊತ್ತು ಹೋಯ್ತು ಹೋಗಿ ಬನ್ನಿ
ಶ್ರೀರಂಗಪಟ್ಟಣ ನೋಡಿ ಬನ್ನಿ
ಹಚ್ಚಕ್ಕ ಹಸುರಕ್ಕ
ಪೌಳಿ ನಿಂಗಕ್ಕ
ಸತ್ತರೆ ಸಾವಿನ ಹೆಸರು
ಇದ್ದರೆ ಒಂದೇ ಹೆಸರು (ಸು ೨೧೫)
ನೂರು ಹೆಸರು ನೋಡಿದರೆ ಹಸುರು (ಲ ಗೌ ೭೦೪)

ಯಲಿ ಇಲ್ಲದ ಮರ ಜರಗುಡುತು (ಮಂ ೧.೫–೭೮)

ಹಸಿರು ಎಂಬತ್ತು ಕುಸುರಿ ಮೂವತ್ತು
ಹೆಸರು ಹೇಳಿದವರಿಗೆ ಮೊಸರನ್ನ (ಲ ಗೌ ೧೦೧೬)

ಹುಟ್ಟುವಾಗ ಒಂದು ಹೆಸರು ಸತ್ತಾಗ ಸಾವಿರ ಹೆಸರು (ಲ ಗೌ ೧೦೬೧)

ಹಂಪಕ್ಕ ಹಸರಕ್ಕ
ಮುತ್ತಿನ ಕೋಲು ಲಿಂಗಕ್ಕ
ಸತ್ತರೆ ಸಾವಿರ ಹೆಸರು
ಇದ್ದರೆ ಒಂದೇ ಹೆಸರು (ಜೀಶಂಪ ೨೬೫)
ಬಿದಿರು

ಕಚ್ಚೆ ಅಡ್ರ ದಡಿ ನಿಗ್ರ (ನಾ ಗೌ ೮೪)

ಬೆಟ್ಟದ್ ಮ್ಯಾಲಿರೊ
ಜೂಜುಗಾರಂಗೆ ಯಪ್ಪತ್ತೈದು ಕುಪಾಲಿ (ಮಂ ೨.೧–೨೨)
ಬಿದಿರು ಕಳಲೆ

ಬೆಟ್ಟದ ಮೇಲಿರೋ ಹೊಟ್ಟೆಪ್ಪನಿಗೆ
ಏಳು ಸುತ್ತಿನ ಕುಲಾವಿ (ಸು ೩೮೨)
ಬಿದಿರು ಕಳ್ಳೆ(ಕಳಲೆ)

ಚಿಕ್ಕ ಚಿಗರಕ್ಕ
ನವ್ವುಗರಿ ವೊನ್ನಕ್ಕ
ಸತ್ರರೆ ಸವ್ರೆಸರು
ಇದ್ರೆ ಒಂದೇ ಉಸ್ರು (ಮಂ ೨.೧–೧೭)
ಬಿದಿರು ಮಳೆ

ಸಾಲಾ ಸಾಲಾ ಗಿಣಿಗಳಿರಾ
ಸಾಲಾವರದ ಗಿಣಿಗಳಿರಾ
ತಪ್ಪಿಲ್ಲದ ತಲೆ ಹುಯ್ಸಿಕೊಂಡು
ನೂರು ಹೊಲಕೆ ಬೇಲಿ (ಸು ೪೬೨)
ಬಿದಿರು ಮುಳ್ಳು

ಒಂದು ಕುದುರೆ ನಿಂತೈತೆ
ಒಂದು ಕುದುರೆ ಮಲಗೈತಿ
ಪಾಂಡವರ ಕುದುರೆ ಪಗಡೆ ಆಡುತ್ತೆ (ನಾ ಗೌ ೭೪)
ಬಿದುರುಂಡೆ, ಮೊಸರು, ಮಂತು

ಧರೆಯಲ್ಲಿ ಹುಟ್ಟುವುದು ಅಂಬಾರಕೇರುವುದು
ಹರಿಯುತ್ತ ಹರಿಯುತ್ತ ಕಿಡಿಗಳನು ಉಗುಳುವುದು (ಲ ಗೌ ೬೩೯)
ಬಿರುಸು

ಬಿಟ್ಟರದು ಹಾರುವುದು
ಗಿಡಗ ತಾನಲ್ಲ
ದಿಟ್ಟರಿಗೆ ಹೆಟ್ಟುವುದು
ಪರಾಣ ತನಗಿಲ್ಲ (ರಾ ಗೌ ೩೪೯)
ಬಿಲ್ಲು

ಸರಕಾರ ಕಟ್ಟಿಮ್ಯಾಲ
ಹೆಬ್ಬಾಂವ ಬಿದ್ದೈತಿ
ಹಿಡದ ಕೊಟ್ಟಾವರ್ಗೆ ಹಿಡಿಹೊನ್ನ (ಲಠ್ಠೆ ಭಾಗ ೨–೬೦)
ಬಿಸಲ

ನೆಳ್ಳಾಗ ಇರೋದಲ್ಲ
ಬಿಸಲಾಗ ನಿಲ್ಲೋದಲ್ಲ
ಹತ್ರ ಹೋದ್ರ ಏನೂ ಅಲ್ಲಾ (ಲಠ್ಠೆ ಭಾಗ ೨–೪೮)
ಬಿಸಿಲಗುದರಿ

ಸೆರಗಿಲ್ಲದ ಸೆಲ್ಲೆ
ಬೀಜಿಲ್ಲದ ಪಲ್ಲೆ
ನೆಚ್ಚಿಲ್ಲದ ಹೆಂಗಸ
ನಿಧಾನಿಲ್ಲದ ಗಂಡಸ (ಲಠ್ಠೆ ಭಾಗ ೨–೬೩)
ಬಿಸಿಲ, ಶ್ಯಾವಿಪಲ್ಲೆ, ನದಿ, ಸೂರ್ಯ

ಇಬ್ಬನಿಗೊಬ್ಬಣ್ಣ (ಸು ೯೦)

ಇಬ್ಬನ್ನಿಗೆ ಒಬ್ಬಣ್ಣ (ಇ ೧೪೯)

ಇಬ್ನಿಗೆ ಒಬ್ಬಣ್ಣ (ಮಂ ೨.೧–೯)
ಬಿಸಿಲು

ಸಾಸಿವೆಗಿಂತ ಸಣ್ಣ
ದಿವಸಕ್ಕೆ ಮೂರು ಬಣ್ಣ
ಹೇಳಿದವರು ನಮ್ಮಣ್ಣ (ವಾಲಿ ೧–೩೦)
ಬಿಸಿಲು ಕೋಲು

ಸಾಸಿವೆಯಷ್ಟು ಸಣ್ಣ
ಅದಕ್ಕೆ ಏಳು ಬಣ್ಣ
ಏನದು (ಇ ೯೪೭)
ಬಿಸಿಲು ಕೋಲು

ನೆಳ್ಳಾಗ ಇರೋದಲ್ಲ
ಬಿಸಿಲು ಬಿಡೋದಲ್ಲ
ಹತ್ತಿರಹೋದ್ರ ಕಾಣೋದಿಲ್ಲ (ಇ ೬೯೨)

ಸರಕಾರದ ಕಟ್ಟೀಮ್ಯಾಲೆ ಸರಗುಡು ಹಾವು
ಹಿಡಿದು ತಂದಾವಗ ಹಿಡಿಹೊನ್ನು (ಇ ೯೨೮)
ಬಿಸಿಲುಗುದುರೆ

ಸೆಡ್ಡಾ್ಯಗ ಹಾಕಿ ಬಿತ್ತಂಗಿಲ್ಲಾ
ಗಡ್ಡಿ ಒಡದ ನಾಟಂಗಿಲ್ಲಾ
ಅದ ಇಲ್ದೆ ಬಾಳ್ವೆ ಸಾಗಂಗಿಲ್ಲ (ಇ ೯೬೮)
ಬಿಸಿಲು, ಶ್ಯಾವಿಪಲ್ಲೆ, ನದಿ, ಸೂರ್ಯ

ಕಲ್ಲಾಗ ಕಲ್ಲ ಯಾವ ಕಲ್ಲ (ಲಠೈ ಭಾಗ ೫–೧೨೧)
ಬಿಳಕಲ್

ಬಂಗಾರದ ಗಿಣಿ ಬಾಗಿಲು ಕಾಯುತ್ತೆ (ಇ ೭೭೮)

ಎದೆಯ ಮೇಲೆ ಕಣ್ಣುಂಟು
ಕೈಯನ್ನೆ ನುಂಗುವುದುಂಟು
ತಲೆಯ ಮೇಲೆ ಬಾಕವುಂಟು
ಹೊಟ್ಟೆಯಲ್ಲಿ ಹಲ್ಲುಂಟು
ಕಾಯುತ್ತಿರುವೆ ನಾನು ಗಂಟು (ರಾ ಗೌ ೧೦೮)
ಬೀಗ

ಚಿಟಗುಬ್ಬಿ ಮಠ ಕಾಯತೈತಿ (ವಾಲಿ ೩–೩೯)
ಬೀಗ (ಕೀಲಿ)

ಅವ್ವ ಹೋಗಿ ಅಡಬೀಳುತ್ತಾಳೆ
ಅಪ್ಪ ಹೋಗಿ ಬಿಡಿಸಿಕೊಂಡು ಬರುತ್ತಾನೆ (ಲ ಗೌ ೯೧)
ಬೀಗ–ಎಸಳು

ಅಕ್ತಂಗೇರು ತಗಲಾಕೊಂಡ್ರು
ಪಕೀರ್ ಸಾಬ್ರಂದು ಬಿಡುಸ್ದ (ನಾ ಗೌ ೪)
ಬೀಗದ ಕಾಯಿ, ಬೀಗದೆಸಳು

ಕೈಗಳಿವೆ ಹಲವು ರಕ್ಕಸನಲ್ಲ
ಉಂಗುರವಿದೆ ಬೆರಳಿಲ್ಲ
ಹೆಂಗಳೆಯರ ನಡುವಲ್ಲಿ ಜೋಕಾಲಿಯಾಡಿ ಗುಲ್ಲೆಬ್ಬಿಸುವ ನಾನಾರು
ಬೀಗದ ಕೈ ಗೊಂಚಲು (ಚಂ ಸೆ ೧೦೯)

ಬಂಡ ಬೋರಯ್ಯನೂವೆ
ಬಡ ಬೋರಯ್ಯನೂವೆ
ಜಗಳ ಆಡುವಾಗ
ಬಜಾರದ ರಂಗಿಹೋಗಿ ಬಿಡಿಸಿಕೊಂಡು ಬಂದಳು (ಜೀಶಂಪ ೨೦೦)
ಬೀಗದೆಸಳು

ಎದೆಯ ಮೇಲೆ ಕಣ್ಣುಂಟ್ಟು
ಕಯ್ಯನ್ನೇ ನುಂಗುವದುಂಟು
ಕಾಯುತಿರುವೆ ನಾನು ಗಂಟು (ಶಾಂ ನಾ ೩೬೯)

ಕಯ್ಹಾಕಿರೆ ಬಾಯ್ಬಿಡ್ತು (ಶಾಂ ನಾ ೩೬೮)
ಬೀಗಾ

ತೂತು ಮಡಿಕೆಗೆ
ದೊಣ್ಣೆ ಸಿಗ್ಹಾಕ್ಕೊಂಡು
ಊರಗೌಡನ ಮನೆಗೆ
ನ್ಯಾಯಕ್ಕೆ ಹೋಗ್ತಾನೆ (ರಾ ಗೌ ೨೭೩)
ಬೀಡಿ ಸೇದುವುದು

ನಮ್ಮಣ್ಣ ಮುಳ್ಳಬೇಲಿ ಕಟ್ಟಿ
ಹೆರರಿಗೆ ಹೆಂಡ್ತಿ ಕೊಡಾಕೆ ಹೇಳ್ದ
ಅವರವ್ವ ನುಲಬಲಗನ ತಕ್ಕೊಂಡು
ಸಂತೆಗೆ ಹೋಗಿದ್ಲು
ಅವಳ ಮಗಳ್ನ ಯಾರೋ ಕೇಳೋವ್ರೊತ್ಗೆ
ಬರದೆ ಇದ್ರೆ ಬತ್ತಾಳೆ
ಬಂದ್ರೆ ಬರಾಕಿಲ್ಲ ಅಂದ್ಲು (ರಾ ಗೌ ೨೯೬)
ಬೀದಿಲಿ ಮುಳ್ಳು ಹರಡಿದಾಗ ಬಯ್ಯುವುದು, ಪಡುವಲಕಾಯಿ, ಹೊಳೆ

ಒಂಟಿ ಕೋಡಿನ ಎಮ್ಮಿ
ಓಣಿಲ್ಲಾ ಒದರತತಿ (ಲಠೈ ಭಾಗ ೫–೯೧)
ಬೀಸುಕಲ್ಲ

ಗುಡ್ಡದಾಗ ಹುಟ್ಟಿ
ಗುಂಡವ ಮೇದು
ನೆತ್ತಿಲಿ ತಿಂದು
ಏಕದಲ್ಲಿ ಉಗುಳತೈತಿ (ಇ ೪೯೫)

ನಡು ಊರಾಗ ಹಗೆ
ಊರ ಅಗಸ್ಯಾಗ ಮೇಟಿ
ಊರ ಸುತ್ತಾರದ ರಾಶಿ (ಇ ೬೨೮)

ನಮ್ಮ ಅವ್ವ ನಿಮ್ಮವ್ವಗ ಗುರ್ರ್ ಅಂತಾಳ (ಇ ೬೩೪)

ನಾರಾಯಣನ ನಡುವಿನ ಸುತ್ತ ಬೆಳ್ಳಿ ಉಡದಾರ (ಇ ೬೪೧)
ಬೀಸುಕಲ್ಲು

ಬಾಯಿಲಿ ತಿಂತತಿ
ಹೊಟ್ಟಿಲಿ ಕಾರಕೋತತಿ (ಲಠೈ ಭಾಗ ೫–೨೧೮)
ಬೀಸುವ ಕಲ್ಲ

ಅಡವಿಯಲ್ಲಿ ಹುಟ್ಟುವದು
ಹೊಡೆತವನ್ನು ತಿನ್ನುವದು
ತಾತಿಂದ ಎಂಜಲವನ್ನು ಮೂಜಗಕ್ಕೆ ಉಣಿಸುವದು (ಇ ೬೮)

ಅಡವಿಯೊಳಗೆ ಹುಟ್ಟುವುದು
ಅಂಗವೆರಡಾಗುವುದು
ಕಡುಸ್ವರದಿಂದ ಗಾನ ಮಾಡುವುದು
ಕಂಜಾಕ್ಷಿಯರ ಕರದಲ್ಲಿ ನಲಿದಾಡುವುದು
ಎಂಜಲನುಣಿಸುವುದು ಮೂರು ಜಗಕೆ (ಚಂ ಸೆ ೬)

ಉಣ್ಣೋದುಂಟು ಪ್ರಾಣಿಯಲ್ಲ (ಲ ಗೌ ೧೮೯)

ಎರಡು ಚಕ್ರವುಂಟು ಬಂಡಿಯಲ್ಲ
ಎರಡು ಕಣ್ಣುಂಟು ಮನುಷ್ಯನಲ್ಲ
ಎರಡು ಕೊಂಬುಂಟು ಎತ್ತಲ್ಲ
ಇದನರಿತು ಹೇಳಿದವರಿಗೆ ಒಂದುಂಡೆ ಬೆಲ್ಲ (ಲ ಗೌ ೨೨೪)

ಒಂಟಿ ಕೋಡಿನ ಎಮ್ಮಿ
ಓಣೆಲ್ಲ ಒದರ್ತಾದ (ವಾಲಿ ೩–೪೧)

ಕಲ್ಲ ಬಸವಗ ಮರದ ಮುರದ ಮುಗದಾಣ (ಇ ೩೭೨)

ಕುದುರೆ ಓಡ್ತದೆ ಕುಂಕುಮ ಚೆಲ್ಲದೆ (ವಾಲಿ ೩–೬೮)

ಗರಗರನೆ ತಿರುಗುವುದು ಚಕ್ರ ತಾನಲ್ಲ
ಗರಿಗಳೆರಡುಂಟು ಪಕ್ಷಿ ತಾನಲ್ಲ
ಶಿರದೊಳು ಕೊಂಬುಂಟು ಮೃಗಜಾತಿಯಲ್ಲ
ಸಕಲರ ಮನೆಯೊಳಗೆ ತಾನಿಲ್ಲದಿಲ್ಲ (ಸು ೨೪೬)

ಗರಗರನೆ ತಿರುಗುವುದು ಚಕ್ರ ತಾನಲ್ಲ
ಗರಿಗಳೆರಡುಂಟು ಹಾರುವ ಪಕ್ಷಿಯಲ್ಲ
ಶಿರದೋಳ್ ಕೊಂಬುಂಟು ಮೃಗಜಾತಿಯಲ್ಲ
ಎಲ್ಲರಾ ಮನೆಯೊಳಗೆ ತಾನಿಲ್ಲದಿಲ್ಲ (ಚಂ ಸೆ ೧೧೬)

ನನ್ನ ಹೊಟ್ಟಿ ಮ್ಯಾಲ ನಿನ್ನ ಹೊಟ್ಟಿ
ನನ್ನ ತೂತಿಗಿ ನಿನ್ನ ಬೆಣೆ (ವಾಲಿ ೮–೨೧)

ನೆತ್ತಿಯಲಿ ಉಂಬುವದು
ಸುತ್ತಲೂ ಸುರಿಸುವದು
ಎತ್ತಿದರೆ ಎರಡು ಹೋಳಹುದು (ಇ ೬೮೩)

ನೆತ್ತಿಯಲಿ ಮುಕ್ಕುವುದು
ಸುತ್ತಲೂ ಬಿಕ್ಕುವುದು
ಎತ್ತಿದರೆ ಹೋಳೆರಡು
ಉತ್ತರಿಸು ನೀ ಬಾಲ (ಚಂ ಸೆ ೧೬೭)

ಬಾಯಲ್ಲಿ ತಿನ್ನುವುದು ಬೆನ್ನಲ್ಲಿ ಕಾರುವುದು (ಲ ಗೌ ೭೫೦)

ಬಾಯಾಗ ತಿಂದು
ಬಗಲಾಗ ಕಾರುತ್ತೈತಿ (ಇ ೭೩೩)

ಬಾಯೀಲೆ ತಿನ್ನತೈತಿ ಮಗ್ಗಲರೆ ಚಲ್ಲತೈತಿ (ವಾಲಿ ೩–೬)

ಬಾರಲೋ ಸತ್ತವನೆ
ಓಡಿ ಹೋಗುವವನೂ ನಿನ್ನಂಥವನೆ
ನೀನೂ ಅವನಂಥವನಿದ್ದರೆ
ನಾನೂ ಸತ್ತವನೆ (ಇ ೭೩೭)

ಬಾಲ ಹಿಡಿದರೆ ಗುರುಗುಟ್ಟುತ್ತೆ (ಚಂ ಸೆ ೧೮೨)

ಬಾಲಾ ಹಿಡಿದರ ಗುರ್ ಗುರ್ ಅಂತೈತಿ (ವಾಲಿ ೩–೧೪೦)
ಬಂಡಿ ಓಡತಾದ

ಬೆನ್ನ ಮೇಲೆ ಮಲಗಿರುತ್ತೆ
ಬಹುಧಾನ್ಯ ತಿನ್ನುತ್ತೆ
ಚೀರುತ್ತೋ ಬಲು ಚೀರುತ್ತೆ (ಚಂ ಸೆ ೧೮೮)

ಬಂಡಿ ಹೋಗತೈತಿ ಭಂಡಾರ ಚೆಲ್ಲತೈತಿ (ಇ ೭೮೨)

ಭಂಡಾರ ಚೆಲ್ಲತಾದ (ವಾಲಿ ೩–೨೯)

ಮುಂದ ಮುಂದ ಬಂಡಿ ಹೋಗ್ತೈತಿ
ಹಿಂದ ಹಿಂದ ಭಂಡಾರ ಬೀಳತೈತಿ (ಇ ೪೯೨)

ರಥ ಒಡುತ್ತೆ ಕುಂಕುಮ ಚೆಲ್ಲುತ್ತೆ (ಲ ಗೌ ೪೪೪)

ರಥ ಹೋಗ್ತಾ ಇದೆ ಹೂವು ಬೀಳ್ತಾ ಇದೆ (ಚಂ ಸೆ ೨೧೨)

ರಂಗಾಚಾರ್ಯರ ಹೆಂಡತಿ ರಂಗಮ್ಮೋರು
ರಾಗ ಹಾಡ್ತಾ ರಂಗೋಲಿ ಹಾಕ್ತಾರೆ (ಲ ಗೌ ೪೪೬)

ಬೀಸುವ ಕಲ್ಲು

ಒಂದ ಕೋಡಿನ ಎತ್ತು
ಊರಿನ ಜ್ವಾಳನೆಲ್ಲಾ ಮುಕ್ಕತೈತಿ (ಇ ೨೭೨)

ಬೀಸೂಕಲ್ಲು

ತೇರ ಹೋಗ್ತತಿ ಕೂಕಂ ಸುರಿತತಿ (ಲಠ್ಠೆ ಭಾಗ ೫–೧೭೬)

ನೆತ್ತಿಲಿ ಉಂಡ ಸುತ್ತ ಸುರಿತದ (ಲಠ್ಠೆ ಭಾಗ ೫–೧೯೭)

ನೆತ್ತಿಲಿ ತಿಣತತಿ
ಸುತ್ತಲೆಲ್ಲಾ ಕಾರಿಕೋತತಿ
ಎತ್ತಿ ಒಗದರ ಎಡ್ಡ ಹೋಳಾಗತತಿ (ಲಠೈ ಭಾಗ ೫–೧೯೮)

ಬಾಯಿಲಿ ತಿಂತದ ಮಗ್ಗಲ ಹೇಲ್ತದ (ಲಠೈ ಭಾಗ ೫–೨೧೩)

ಬಂಡಿ ಹೊಕ್ಕತಿ ಬಂಡಾರ ಬೀಳತತಿ (ಲಠೈ ಭಾಗ ೫–೨೦೮)

ರತಾ ಓಡತಿರತಿ
ಕುಂಕುಮ ಛಲ್ಲತಿರತಿ (ಲಠೈ ಭಾಗ ೫–೨೬೩)
ಬೀಸೊಕಲ್ಲ

ಕತ್ಲೆ ಮನೇಲಿ
ಹಂದಿ ಗುಟ್ರಾಕುತ್ತೆ (ಮಂ ೧.೫–೪೧)

ಕುದ್ರೆ ಓಡ್ತಿತ್ತು
ಕುಂಕುಮ ಚೆಲ್ತಿತ್ತು (ಮಂ ೧.೫–೫೧)
ರಾಗಿ ಬೀಸೋಕಲ್ಲು

ಎರಡ ಚಕ್ರ ಬಂಡಿ ಅಲ್ಲ
ಎರಡ ಕಣ್ಣು ಮನಸ್ಯಾ ಅಲ್ಲ
ಎರಡ ಕೋಡ ಎತ್ತಲ್ಲ
ಇದ ಹೇಳಿದಾಂವಗ ಒಂದ ಪೆಂಟಿ ಬೆಲ್ಲ (ಲಠೈ ಭಾಗ ೫–೮೩)
ದೊಡ್ಡ ಬೀಸೊಕಲ್ಲ

ಕರಿ ಗುಡ್ಡದ ಕೆಳಗೆ ಬಿಳಿ ದಾರ ಬಿದ್ದದೆ (ಲ ಗೌ ೪೦೭)
ಬೀಸುವ ಕಲ್ಲು–ಹಸಿಟ್ಟು

ಬಂಡಿ ಹೋಗ್ತಾ ಇದೆ ಬಂಗಾರ ಚೆಲ್ತಾ ಇದೆ (ಲ ಗೌ ೭೪೪)
ಬೀಸುವ ಕಲ್ಲು–ಹಿಟ್ಟು

ಕಾಲ ಕಿಸದು ಕೋಲ ಹಿಡದರ
ಬೆಳ್ಳಂದು ಬೀಳತೈತಿ (ವಾಲಿ ೮–೭)
ಬೀಸುವ ಕ್ರಿಯೆ

ತೂತಿಗೆ ತೂತೇ ಪ್ರೀತಿ
ಮತ್ತೊಂದು ತೂತಿಗೆ ಮಾತಾಡೋದೇ ಪ್ರೀತಿ (ಲ ಗೌ ೬೧೪)

ಹುತ್ತದ ಹೂವು ಕಂಡ
ಮುತ್ತಿನ ಭರಣಿ ಕಂಡ
ಅಲ್ಲೊಂದು ರಂದ್ರ ಕಂಡ
ಅಲ್ಲೆ ಕೂತ್ಗಂಡ (ಜೀಶಂಪ ೨೯೦)
ಬುಗುಡಿ

ಕಂದು ಕೂಡಿ ಕರ ಕೂಡಿ
ಕಾಯೋದು ಮೂರು ಎಮ್ಮೆ ಕೂಡಿ
ಹಾಗಲ ಕಾಯಿ ತ್ಯಾಗ ಹಾಕಿ
ಪಡವಲು ಕಾಯಿ ಬೀಗ ಹಾಕಿ
ಇದನ್ನು ಒಡೆದವರಿಗೆ ನಾಗಪ್ಪನ ಮೇಲೆ ಧಾರೆ (ಲ ಗೌ ೪೩೧)
ಬುಗುಡಿಕಾಯಿ

ಒಂಟಿಗಾಲಿನ ಒಂಟಿ ನಾನು (ಲ ಗೌ ೨೯೩)
ಬುಗುರಿ

ಕುಕ್ಕಿದ ಕೂರೆ ಒಕ್ಕಳಕ್ಕಿ ಬೋನ ಉಂಡು
ನಂಜನಗೂಡು ಗೋಪುರ ಹಾರಿತು (ಸು ೨೧೦)
ಬುತ್ತಿ ಎಲೆ

ಅಗಲಸ್ಕಂಡಿದಿದ್ದೆ
ತಗಲ್ಸಿಯೆಟ್ಟಿ ಕೆಂಪಾಯ್ತು
ಬೆಳ್ಳಗೆ ಬೀಳ್ತು (ಮಂ ೧.೫–೬)

ನಮ್ಮಪ್ಪ ಒಂದು ಎತ್ತು ತಂದಿದ್ದಾನೆ
ಅದು ಎಂಥ ಬೇಲೀನಾದ್ರೂ ಹಾರುತ್ತೆ (ಲ ಗೌ ೬೫೪೪)

ಬಿಳಿ ಎತ್ತು ಬೇಲಿ ಹಾರಿತು (ಲ ಗೌ ೭೭೪೪)
ಬೂದಿ

ಮೂಡ್ಲಿಂದ ಮೂರೆತ್ತು ಬಂದೊ
ಕೆಂದೆತ್ತು ಕೆರೆಗ್ಹೋಯ್ತು
ಬಿಳಿ ಎತ್ತು ಬೀದಿಗ್ಹೋಯ್ತು
ನನ್ನೆತ್ತೋಯ್ತುವನದೇಳ (ಜೀಶಂಪ ೨೩೮೮)
ಬೂದಿ, ಬೆಂಕಿ, ಹೊಗೆ

ಹೆಟ್ ಹೆಟ್ಟ ಗುಡ್ಡ (ರಾ ಗೌ ೫೦೧)
ಬೂದಿರಾಶಿ

ಅಜ್ಜಿಯ ಮೈಯೆಲ್ಲಾ ಬೂದಿ (ಲ ಗೌ ೨೪)
ಬೂದುಕುಂಬಳ

ಎಲೆಯಲಾ ಜೋಗಿ
ಮೈಯೆಲ್ಲಾ ಬೂದಿ
ಕೈಲಾಗದ ಚಕ್ರ
ತಲೆ ಮೇಲೆ ಗಂಟು (ಇ ೨೫೨)
ಬೂದುಗುಂಬಳ ಕಾಯಿ

ಗಾದೆ ಗಾದೆ ಮಿಯ್ಗೆಲ್ಲಾ ಬೂದೆ (ಶಾಂ ನಾ ೩೭)
ಬೂದ್ಗುಂಬ್ಳಾ

ಮೆತ್ತಾನ ಮ್ಯಾಂವಗಳ್ಳ
ಬೆಣ್ಣಿ ನುಂಗ್ತಾನ (ಲಠೈ ಭಾಗ ೩–೫೮)
ಬೆಕ್ಕ

ಒಕ್ಕಲತನ ಸಾಮಾನದಾಗ ತೂತಿರಬಾರದ
ತೂತಿನಾಗ ಸೇರಬಾರದ (ಲಠೈ ಭಾಗ ೫–೮೭)
ಬೆಕ್ಕಟಗಿ

ಒಲೆ ಮುಂದಿರುವ ಹುಲಿರಾಯ
ಬಿಲದ ಬಾಲವನ್ನು ಹೊಲೆ ಮಾಡುವವನು
ಅವನು ಯಾರು (ಲ ಗೌ ೨೮೪)

ದನಕರು ಕಟ್ಟಲಿಲ್ಲ
ಬರೇದು ಉಣ್ಣಲಿಲ್ಲ
ಹಾಸಿಗೆ ಹಾಸಲಿಲ್ಲ
ನೆಲದ ಮೇಲೆ ಮಲಗಲಿಲ್ಲ (ರಾ ಗೌ ೨೮೨)

ನಮ್ಮಮ್ಮನ ಗಂಡ
ನಿಮ್ಮಮ್ಮನ ಮಿಂಡ
ನಮ್ಮಲ್ಲುಂಡ
ನಿಮ್ಮಲ್ಲೊರಗಿದ (ರಾ ಗೌ ೨೯೩)

ಮೆತ್ತನ ಮಾವ ಬೆಣ್ಣೆ ಭಾವ (ಇ ೮೭೯)

ಹಸು ತರದೆ ಹಾಲು ಕುಡೀತಾನೆ ರಾಮ ಪರದೇಸಿ
ಗದ್ದೇಲಿ ಬೆಳಿಯದೆ ಅನ್ನ ಉಣ್ತಾನೆ ರಾಮ ಪರದೇಸಿ
ಮನೆ ಕಟ್ಟದೆ ಮಾಳಿಗೇಲಿ ತಿರುಗ್ತಾನೆ ರಾಮ ಪರದೇಸಿ (ಲ ಗೌ ೧೦೨೧)

ಹಂಡಾನೆ ಮೈಯವಳು ದುಂಡಾನೆ ಮುಖದವಳು
ಬರಿಗೈಲಿ ಹೊರಟಾಳೆ ಹಾಲಿಗೆ (ಲ ಗೌ ೧೦೩೧)
ಬೆಕ್ಕು

ನಾ ಸರದಾರ ನೀ ಸಾವಾಕಾರಾ
ನಾ ಕ್ವಾಟ್ಯಾಗ ನೀ ಪ್ಯಾಟ್ಯಾಗ
ನಾ ಜಪ್ಪುಸ್ತಿನೀ ನೀ ತಪ್ಪುಸ್ತೀದಿ (ಇ ೬೪೪)

ನಾ ಸರದಾರ ನೀ ಸಾವಕಾರ
ನಾ ಕ್ವಾಟ್ಯಾಗ ನೀ ಪ್ಯಾಟ್ಯಾಗ
ನಾ ಜಪ್ಪಸ್ತೇನಿ ನೀ ತಪ್ಪಸ್ತೀದಿ (ಲಠೈ ಭಾಗ ೩–೪೮)
ಬೆಕ್ಕು–ಇಲಿ

'ನೀನೇನ್ ನೋಡಿ ನನ್ನ?'
'ನಾನೇನ್ಮಾಡ್ದೆ ನಿನ್ನ?'
'ನಿನ್ನ ನೋಡಿ ನಿಮ್ಮೋರು ತಂದವ್ರೆ ನನ್ನ!' (ಲ ಗೌ ೬೮೬)
ಬೆಕ್ಕು–ಇಲಿ ಸಂವಾದ

ಕೋಣೆ ಕೊತವಾಲ
ಗಿಡಿನ್ ಗ್ರಾಸ್ತ
ಓಣಿ ವಜ್ರ (ಲ ಗೌ ೪೯೬)
ಬೆಕ್ಕು–ಮಂಗ–ನಾಯಿ

ನೀ ಇಲ್ಲಂತ ನಾ ಬಂದ
ನೀ ಇದ್ದಿ ನಾ ಹೋತ
ನಾ ಅಲ್ಲ ನೀ ತಿನ್ನ (ಲಠೈ ಭಾಗ ೫೫–೧೯೩)
ಬೆಚ್ಚ

ಕಣ್ಗಿ ಹತ್ರ ಕಾಲ್ಗಿ ದೂರ (ಲಠೈ ಭಾಗ ೨–೨೫)

ಕಣ್ಣಿಗೆ ಹತ್ತಿರ ಕಾಲಿಗೆ ದೂರ (ಇ ೩೧೭)

ದೂರದಿಂದ ಗುಂಡಗಿದೆ
ಹತ್ತಿರದಿ ಒರಟಾಗಿದೆ
ನಿಂತು ನೋಡಿದರೆ ಸೊಗಸಿದೆ (ಚಂ ಸೆ ೧೪೪)
ಬೆಟ್ಟ

ತಲೆಯಿಲ್ಲದ ಹುಲಿ
ಬೇರಿಲ್ಲದ ಬೇವಿನ ಮರದಡಿಯಲ್ಲಿ ಮೇಯ್ತದೆ (ಲ ಗೌ ೫೮೭)
ಬೆಟ್ಟದ ಬೇಗೆ

ಝಲಕ್ ಝಲಕ ಝಲ್ಲಿಸಿ ನೋಡ್ತಾರ
ಮೆತ್ತಾನ ಪೋರಿಗಿ ವತ್ತಿ ನೋಡ್ತಾರ (ಲಠೈ ಭಾಗ ೪–೧೦೪)

ತಾತಾ ಗಿಂಡಿ
ತವರದ ಗಿಂಡಿ
ನೀರಾಗಿಟ್ಟರೂ ಮುಳುಗದ ಗಿಂಡಿ (ಲಠೈ ಭಾಗ ೪–೧೦೮)

ತೂಕದ ಗುಂಡ
ತುಪಾಕಿ ಗುಂಡ
ನೀರಾಗ ಹಾಕಿದ್ರ
ಮುಳಗದ ಗುಂಡ (ಲಠೈ ಭಾಗ ೪–೧೧೬)

ತಿಂತ ತಿಂತ ಕರಿ ತೊಣ್ಯಾಗ ತಿಂತ
ತಿಂತ ತಿಂತ ಬೀಜ ಇದ್ದಾಂವಗ ತಿಂತ
ತಿಂತ ತಿಂತ ಬೀಜ ಇಲ್ಲವಗ ತಿಂತ (ಲಠೈ ಭಾಗ ೪–೧೧೩)

ಬೆಳ್ಳೀ ಚೆಂಡು ಬೆಂಕಿಗೆ ಕರಗತೈತಿ (ಇ ೭೭೧)
ಬೆಣ್ಣೆ

ಗುಂಬ ನೀರಾಗ ಗುಂಡಗಲ್ಲ ತೇಲತೈತಿ (ವಾಲಿ ೫–೨೩)
ಬೆಣ್ಣೆ ಮುದ್ದಿ

ಅಂತಪ್ಪನ ತೋಟದಾಗ
ಇಂತಿಂಥಾ ಟೆಂಗಿನಕಾಯಿ
ತೊಟ್ಟಿಲ್ಲಾ ತುಂಬಿಲ್ಲಾ (ವಾಲಿ ೫–೪)

ಬೆಳ್ಳಿ ಗುಂಡು ಒಳ್ಳೆ ಚೆಂಡು
ನೀರನಲ್ಲಿ ತೇಲುವದು
ಬೆಂಕಿಯಲ್ಲಿ ಕರಗುವದು (ವಾಲಿ ೫–೩೯)
ಬೆಣ್ಣೆಯ ಮುದ್ದಿ

ಅಜಾರದಲ್ಲಿ ಅಣ್ಣ
ಬಜಾರ್ದಲ್ಲಿ ಬಣ್ಣ
ಸಿಪ್ಪಿಲ್ದಣ್ಣ ತಂದು ಕೊಡಣ್ಣ (ಮಂ ೧.೪–೫)

ಅತ್ತೆ ಮನೆಗೆ ಅಳಿಯ ಬಂದ
ಬಿತ್ತಿಲ್ದ ಕಾಯ ಮುಕ್ತಿದ್ದ (ಲ ಗೌ ೫೦)

ಎಡೆದರೆ ಸಿಪ್ಪೆಯಿಲ್ಲ ಕಚ್ಚಿದರೆ ಬಿತ್ತವಿಲ್ಲ (ಲ ಗೌ ೨೧೪)

ಎಲುಬಿಲ್ಲದ ಎಮ್ಮೆ ಗುಂಡಿ ಮೇಯುತ್ತೆ (ಲ ಗೌ ೨೩೯)

ಎಲುಬಿಲ್ಲದವ ನೀರಲ್ಲಿ ತೇಲುತ್ತಾನೆ (ಲ ಗೌ ೨೪೦)

ಒಳ್ಳೆ ಹೆಣ್ಣಿಗೆ ಒಳಗಡೆ ಕರೆದು ಸಾದಿಕ್ಕಿದರು (ಲ ಗೌ ೨೯೨)

ಅಂಕಪ್ಪನ ತೋಟದಾಗೆ
ಚಿಂತಾಮಣಿ ಹಣ್ಣು ಬಿಟ್ಟು
ಅಗಿದರೆ ಬೀಜವಿಲ್ಲ
ಉಗಿದರೆ ಸಿಪ್ಪಿಲ್ಲ (ಸು ೫೭)

ಒಂಟೊಂಟೊಡೇನ ಗಂಟು
ನಂಟಕುಪ್ಪೆ ನಾಗಮಂಗಲ
ಒಡಚಿದಂಥ ಭೂಪನಿಗೆ
ಎಂಟು ರೊಂಟಿ ಸೊಲಿಗೆದುಪ್ಪ (ಸು ೧೩೮)

ಕರಿ ತಟ್ಟಣ್ಣ ಕಂಚಿನ ಬೀಗಣ್ಣ
ಸಿಪ್ಪೆ ಇಲ್ಲದ ಹಣ್ಣ ತಂದು ಕೊಡಣ್ಣ
ಕರಿ ಕಳ್ಳ ನೋಡಿದ್ರೆ ದೊಣ್ಣೆ ಹಂಗೆ ನಿಂತವ್ನೆ (ರಾ ಗೌ ೧೭೭)

ಗೆರೇಲಿ ಗುರುವ ಮೊಟ್ಟೆ ಇಕ್ಕೀತೇ (ಲ ಗೌ ೫೩೧)

ಚರಣಿ ಮೇಲೆ ಭರಣಿ ಮಡಗಿ
ನಾಗರಮ್ಮನ ತೆಕ್ಕೆ ಹೂಡಿ
ಅದ ಒಡೀಸ್ದವನಿಗೆ
ಒಂದ್ಸೇರು ತುಪ್ಪ ಒಂದು ರೊಟ್ಟಿ (ರಾ ಗೌ ೨೪೧)

ಜುಟ್ಟಿಲ್ಲದ ಕಾಯಿ ನಿಟ್ಟೂರಿಗೋಯ್ತು (ನಾ ಗೌ ೧೨೬)

ತುಂಬಿದ ಬಾವಿಯಲ್ಲಿ ನಿಂಬೆ ಹಣ್ಣು ತೇಲುತ್ತಿದೆ (ಲ ಗೌ ೬೧೧)

ತೊಟ್ಟಿಲ್ಲದ ಸೋರೇಕಾಯಿ ಪಟ್ಟಣಕ್ಕೆ ಹೋಗುತ್ತದೆ (ಲ ಗೌ ೬೨೦)

ನೀರಾಗ್ ನಿಂಬಿ ಹಣ್ಣು ತೇಲಾಡ್ತತಿ (ಲ ಗೌ ೬೯೦)

ಬಿಳಿ ಸಮುದ್ರ ಮೇಲೆ
ಬೆಳ್ಳಿ ಬೆಟ್ಟ ತೇಲುತ್ತೆ (ರಾ ಗೌ ೩೫೨)

ಬೆಳ್ಳಿ ಗುಂಡು ಬೆಳಾರ್ ಗುಂಡು
ನೀರಲ್ಲಿ ಹಾಕಿದರೆ ತೇಲೋ ಗುಂಡು (ಲ ಗೌ ೭೯೦)

ತೂಕದ ಗುಂಡು
ತುಬಾಕಿ ಗುಂಡು
ನೀರಿಗೆ ಬಿದ್ರೆ ತೇಲೋ ಗುಂಡು (ಸು ೩೦೫)

ತೂಕದ ಗುಂಡು
ತುಪಾಕಿ ಗುಂಡು
ನೀರಿಗೆ ಹಾಕಿದರೆ ಮುಳುಗದ ಗುಂಡು (ಜೀಶಂಪ ೧೭೪)

ತುಂಬಿದ ಕೆರೆಗೆ ನಿಂಬೇಹಣ್ಣು (ಜೀಶಂಪ ೧೭೦)

ತುಂಬಿದ ಕೆರೇಲಿ ದೊಂಬ್ತಿ ಕುಂತವಳೆ (ಜೀಶಂಪ ೧೭೨)

ದೊರೆ ಮುಳುಗಿದರೂ ಮುಂಡಾಸು ತೇಲುತ್ತದೆ (ಚಂ ಸೆ ೧೪೬)

ಯಲ್ಬಿಲ್ಲಗದ್ದೊರಾ ಬೆಳೀ ಕೆರಿಲಿ ಯೀಸಾಡ್ತಾ (ಶಾಂ ನಾ ೪೪೭)

ಸೀಗೆ ಮುಳ್ಳಿಗೆ ಸಿಕ್ಕಾಸಿ ನೋಡಿ
ಹಿಂದಕ್ಕೂ ಮುಂದಕ್ಕೂ ಜಗ್ಗಾಸಿ ನೋಡಿ
ಕೈಹಾಕಿ ನೋಡಿ ಬಂದಷ್ಟನ್ನೂ ತೆಕ್ಕೊಳ್ಳಿ (ರಾ ಗೌ ೪೫೧)

ಹಜಾರದ ಅಣ್ಣ ಬಜಾರದ ಬಣ್ಣ
ತಂದು ಕೊಡಣ್ಣ ಸಿಪ್ಪೆ ಇಲ್ಲದ ಹಣ್ಣ (ಸು ೪೮೮)
ಬೆಣ್ಣೆ

ತತಾಗಿಂಡಿ ತಾರಗಿಂಡಿ
ನೀರಾಗಿಟ್ಟರ ಮುಳುಗದ ಗಿಂಡಿ (ಇ ೫೬೮)
ಬೆಣ್ಣೆ ಉಂಡಿ

ಎಲುಬಿಲ್ಲದವ ಹೊಳೆಯಾಗ ಈಸಾಡತಾನ (ಇ ೨೫೦)
ಬೆಣ್ಣೆ ಮುದ್ದೆ

ಅಂತಪ್ಪನ ತೋಟದಾಗ
ಇಂತಿಂಥಾ ಕುಂಬಳಕಾಯಿ
ತುಂಬಿಲ್ಲ ತೊಗಟಿಲ್ಲ (ಇ ೮೪)

ಅಂತಪ್ಪನ ತೋಟದಾಗೆ
ಇಂಥಿಂಥ ನಿಂಬೆಹಣ್ಣು
ತುಂಬಿಲ್ಲ ತೊಟ್ಟಿಲ್ಲ (ಲ ಗೌ ೧೨೯)

ಅಂತರದಲ್ಲಿ ಆದುಂಡೆ
ಚೆಂಬೆತ್ಕಂಡು ತೂಗುಂಡೆ
ಊಟಕ್ಕೆ ಕೂತೊತ್ಗೆ ಬಾ ಉಂಡೆ (ಲ ಗೌ ೧೨೩)
ಬೆಣ್ಣೆಯ ಉಂಡೆ

ಅಚ್ಚಕ್ಕಾ ಹಸ್ರಕ್ಕಾ ಬುಗ್ಡಿ ತಿಮ್ಮಕ್ಕಾ
ಸತ್ರ ಸಾವರಾರ್ ಹೆಸ್ರು
ಇದ್ರೆ ಒಂದೇ ಹೆಸ್ರು (ಶಾಂ ನಾ ೨೨೬)
ಕಲ್ಲಲ್ಲಿ ಹುಟ್ಟಿ ಕಣಕಣಗುಟ್ಟಿ
ಅಂಬಾರಕ್ಕೋಗಿ ಚಾಮರ ಬೀಸಿ (ಶಾಂ ನಾ ೨೨೫)

ಗುಡ್ಡಾಯಿಳೀತ್ಲೆ ಕಚ್ಚೆ ಬಿಡ್ತಾ (ಶಾಂ ನಾ ೨೨೮)

ನಮ್ಮೂರಲ್ಲೊಂದ್ ಹುಡ್ಗಿ
ಹುಟ್ ಬರುವಾಗ ಸೀರೆ ಉಟ್ಕಾ ಬರ್ತದೆ
ದೊಡ್ಡಾದ್ಗಾತ್ತಾ ಸೀರೆ ಬಿಚ್ತದೆ (ಶಾಂ ನಾ ೧೯)

ಹುಟ್ಟಾಕಾರೆ ಮೆಯ್ತುಂಬಾ ಅಂಗಿ
ದೊಡ್ಡಾಗ್ತಾ ಅಂಗಿ ಬಿಸ್ತಾಕ್ತಾ (ಶಾಂ ನಾ ೨೨೭)
ಬಿದಿರು

ಗೋಡೇಲಿ ಕರಿರೊಟ್ಟಿ ಸುಟ್ಟಿದ್ದಾರೆ (ರಾ ಗೌ ೨೩೯)
ಬೆರಣಿ

ತಣಿಗೆಯಲ್ಲಿ ಐದುಜನ ಓಡಾಡ್ತಾರೆ (ರಾ ಗೌ ೨೬೧)
ಬೆರಳು

ಇಕ್ಕುವಾಗ ಐದು ಸಿಕ್ಕಿದರೆ ಹದಿನೈದು ಸಿಕ್ಕದಿದ್ದರೆ ಐದೆ (ಸು ೮೮)
ಬೆರಳು, ಏಡಿ

ಕಂಚಿನ ಪುರದ ಮೇಲೆ ಮಲ್ಲಿಗೆ ಪುರ
ಮಲ್ಲಿಗೆ ಪುರದ ಮೇಲೆ ಅಯ್ದು ಜನ ಆಟಗಾರರು
ಎರಡು ಜನ ನೋಟಗಾರರು (ಶಾಂ ನಾ ೩೮)
ಬೆರಳು ಕಣ್ಣು

ಒಂದು ಹಣ್ಣು ಎತ್ತುವವರು ಐವರು
ತಿನ್ನುವವರು ಬತ್ತೀಸ ಮಂದಿ
ರುಚಿ ಮಾತ್ರ ಒಬ್ಬನಿಗೆ ಗೊತ್ತು (ವಾಲಿ ೪–೨೮)
ಬೆರಳುಗಳು, ಹಲ್ಲುಗಳು, ನಾಲಿಗೆ

ಮೂಗುನಾಯ್ಕನ ಕೋಟೆಗೆ
ಐದು ಜನ ಕಳ್ಳರು ಬಿದ್ದರು
ಇಬ್ಬರು ಹೊತ್ಕೊಂಡು ಬಂದ್ರು
ಮೂವರು ಹಂಗೇ ಬಂದ್ರು (ಸು ೪೧೮)
ಬೆರಳು ಮತ್ತು ಗೊಣ್ಣೆ

ಒಂದು ಹಣ್ಣು
ಎತ್ತೋರು ಐದು ಜನ
ತಿನ್ನೋರು ಮೂವತ್ತೆರಡು ಜನ
ರುಚಿನೋಡೋನು ಒಬ್ಬ (ರಾ ಗೌ ೧೪೨)
ಬೆರಳು, ಹಲ್ಲು, ನಾಲಿಗೆ

ನಾಕು ಮೂಲೆ ಚಕ್ರ
ನಾರಾಯಣ ಕಟ್ಟಿಸಿದ ಕ್ವೊಳ
ಕುಡಿಯೋಕು ಮೂರ್ ನೀರಿಲ್ಲ (ಮೈ.ಕ.) (ಮಂ ೧.೪–೪೯)

ನಾರಾಯಣ ಕಟ್ಟಿಸಿದ ಕ್ವಳ
ಕುಡಿತೀನಂದ್ರ ನೀರಿಲ್ಲ
ಕುತ್ಕತ್ತಿನಿ ಅಂದ್ರ ನೆಳ್ಳಿಲ್ಲ (ಮಂ.ಕ.) (ಮಂ ೧.೪–೫೦)

ನಾಲ್ಕು ಬಾವಿ ನಾರಾಯಣ ಕಟ್ಟಿಸಿದ ಬಾವಿ
ಇಣಕಿ ನೋಡಿದರೆ ತುಣುಕು ನೀರಿಲ್ಲ (ಲ ಗೌ ೬೬೭)

ನಾಲ್ಕು ಮೂಲೆ ಕೊಣ
ನಾಮ ತೆಯ್ಯೋಕೆ ನೀರಿಲ್ಲ (ರಾ ಗೌ ೩೦೬)

ಬೆಲ್ಲ

ಅಂಕುಡೊಂಕಿನ ಬಾವಿ
ಶಂಖಚಕ್ರದ ಬಾವಿ
ಬಗ್ಗಿ ನೋಡಿದ್ರೆ ತೊಟ್ಟುನೀರೇ ಇಲ್ಲ (ಜೀಶಂಪ ೩೧)

ಅಂಕುಡೊಂಕಿನ ಮರ
ಶಂಖಚಕ್ರದ ಮನೆ
ಬಾವಿಯಲ್ಲಿ ಬಗ್ಗಿ ನೋಡಿದ್ರ ತೊಟ್ಟು ನೀರಿಲ್ಲ (ಜೀಶಂಪ ೪೦)

ನಾಕಟ್ಟೆ ಬಾವಿ ನೆಕ್ಕಿದ್ರೆ ನೀರು ನೆಕ್ಕಿದ್ರಿಲ್ಲ (ಜೀಶಂಪ ೧೮೩)

ನಾರಾಯಣ ಕಟ್ಟಿಸಿದ ಬಾವಿ
ನಾಲ್ಕು ಮೂಲೆ ಬಾವಿ
ಸುತ್ತ ಮುತ್ತ ನೋಡಿದರೂ ತೊಟ್ಟು ನೀರಿಲ್ಲ (ಇ ೬೪೨)

ನಾಲ್ಕು ಚದುರದ ಬಾವಿ
ಹಕ್ಕಿ ಪಕ್ಷಿ ಕುಡಿಯೋಕೆ ಒಂದ್ ತೊಟ್ ನೀರಿಲ್ಲ (ಜೀಶಂಪ ೧೮೧)

ನಾಲ್ಕು ಚೌಕದ ಬಾವಿ
ನಾರಾಯಣ ಕಟ್ಟಿದ ಬಾವಿ
ಕುಡಿಯಾಕ ನೀರಿಲ್ಲ
ಇಳಿಯಾಕ ಮೆಟ್ಟಲಿಲ್ಲ (ಇ ೬೫೧)

ನಾಲ್ಕು ಚೌಕದ ಬಾವಿ
ನಾರಾಯಣಪ್ಪನ ಬಾವಿ
ಹಕ್ಕಿ ಕುಡಿಯುವುದಕ್ಕೆ ಒಂದು ತೊಟ್ಟೂ ನೀರಿಲ್ಲ (ಇ ೬೫೦)

ನಾಲ್ಕು ಮೂಲಿ ಚೆದರ ನಾರಾಯಣನ ಬಾವಿ
ಕುಡಿಯೋಣವೆಂದರೆ ತೊಟ್ಟು ನೀರಿಲ್ಲ (ವಾಲಿ ೫–೩೨)

ನಾಲ್ಕು ಮೂಲೆ ಕೊಣ ನಾಯಿ ನೆಕ್ಕಲು ನೀರಿಲ್ಲ (ಲ ಗೌ ೬೬೪)

ನಾಲ್ಕು ಮೂಲೆ ನಂದನ ಬಾವಿ
ಕುಡಿಯೋಕೆ ನೀರಿಲ್ಲ ತಂದನ ಬಾವಿ (ಸು ೩೩೪)
ಬೆಲ್ಲದಚ್ಚು

ಅಚ್ಚುಕಟ್ಟಿನ ಬಾವಿ
ನಾರಾಯಣ ಕಟ್ಟಿಸಿದ ಬಾವಿ
ನೆಕ್ಕಿದರೆ ನೀರುಂಟು ಇಣುಕಿದೆ ನೀರಿಲ್ಲಾ (ಶಾಂ ನಾ ೪೪೪)

ನಾಕ್ ಗೊಡೆ ನೆಡ್ಗೆ ವಂದ್ತೊಟ್ಟೂ ನೀರಿಲ್ಲೆ (ಶಾಂ ನಾ ೪೪೫)

ನಾರಾಯಣ ಕಟ್ಟಿಸಿದ ಬಾವಿ ಚವ್ಕಳಿ ಬಾವಿ
ಪ್ರಾಣಿ ಪಕ್ಷಿಗಳಿಗೆ ನೀರಿಲ್ಲಾ (ಶಾಂ ನಾ ೪೪೬)
ಬೆಲ್ಲದವಚ್ಚು

ಕಡ್ಡಿ ಗಾತ್ರದ ಮಗಳು ಮಗು ಹಡೆದಿದ್ದಳು (ಲ ಗೌ ೩೬೭)
ಬೆಲ್ಲಗೆಣಸು

ಮೂಲೆ ಪುಟ್ಟ
ಜುಬ್ಬರದ ಪುಟ್ಟ
ಸಂತೆಗೆ ಹೋದರು (ಸು ೪೨೬)
ಬೆಲ್ಲ, ತೆಂಗಿನಕಾಯಿ
ಮೂಲೆ ಕುಕ್ಕೆ ಒಂದು
ಮುಳ್ಳು ಕುಕ್ಕೆ ಒಂದು
ಸುಬ್ಬರ ಕುಕ್ಕೆ ಒಂದು (ರಾ ಗೌ ೪೦೯)
ಬೆಲ್ಲ, ತೆಂಗಿನಕಾಯಿ, ಹಲಸಿನ ಹಣ್ಣು

ಬಿಸಿಲಿನಿಂದ ಹುಟ್ಟುವ
ಮುತ್ತನ್ನು ಕೊಳ್ಳುವವರೇ ಇಲ್ಲ (ಇ ೭೪೬)
ಬೆವರು ಹನಿ

ಹಿಡದರ ಹಿಡಿತುಂಬ
ಬಿಟ್ಟರ ಮನಿತುಂಬ (ಲಠ್ಠೆ ಭಾಗ ೨–೭೦)
ಬೆಳಕ

ದುಂಡಗಿರುವೆ ಚೆಂಡಲ್ಲಾ
ಉರಿಯುತ್ತಿರುವೆ ಬೆಂಕಿಯಲ್ಲಾ
ಬೆಳಕು ಕೊಡುವೆ ದೀಪವಲ್ಲಾ
ಬೆಳದಿಂಗಳು

ಸಾವಿರ ಕಾಲ ಹಿಡಿ ಮೇಲೆ
ಸತ್ತ ಹಾವು ಬಿದ್ದದೆ
ಹಿಡಿಮುತ್ತು ಕೊಡ್ತೀನಿ ಹಿಡ್ಕೊಂಬಾ (ಜೀಶಂಪ ೨೫೧)
ಬೆಳದಿಂಗಳು

ಅವ್ವ ಕರ್ಚಿ ಮಗಳು ಬಿಳ್ಚಿ
ಮಗಳ ಮಗಳು ರತರಂಬೆ (ಇ ೧೪೪)
ಬೆಳ್ಳಟ್ಟಿ ಹೂ

ರಾಜ ರಾಣಿಯರುಂಟು ರಾಜ್ಯವಲ್ಲ
ಹೂಬಳ್ಳಿಗಳುಂಟು ತೋಟವಲ್ಲ
ಅಂಕಿ ಅಕ್ಷರಗಳುಂಟು ಪುಸ್ತಕವಲ್ಲ (ರಾ ಗೌ ೪೨೦)
ಬೆಳ್ಳಿ ರೂಪಾಯಿ

ರಾಜ ರಾಣಿಯರುಂಟು ರಾಜ್ಯವಲ್ಲ
ಹೂಬಳ್ಳಿಗಳುಂಟು ತೋಟವಲ್ಲ
ಅಂಕಿ ಅಕ್ಷರಗಳುಂಟು ಪುಸ್ತಕವಲ್ಲ
ನಡೆಯುತ್ತಿದ್ದರೂ ಅದಕ್ಕೆ ಕಾಲಿಲ್ಲ
ಆ ವಸ್ತು ಯಾವುದು (ವಾಲಿ ೩– ೫೭)
ಬೆಳ್ಳಿಯ ರೂಪಾಯಿ

ಈಟಾ ಕುಳ್ಯಾಗ ಹುಳ್ಳಾ ನುಚ್ಚಾ (ಲಠ್ಠೆ ಭಾಗ ೪–೪೨)
ಬೆಳುವಲ ಹಣ್ಣ

ಅಚ್ ಕರ್ಯಾ ಮಗ್ಳು ಬೆಳ್ಯಾ ಮಮಗ್ಳು ಸುಂದ್ರಿ (ಶಾಂ ನಾ ೨೨೪)
ಬೆಳ್ಳಟ್ಟಿ ಸಪ್ಪು

ಕರಿ ಹೊಲದಾಗ ಬಿಳಿ ರಸ್ತಾ ಬಿದ್ದತಿ (ಲಠ್ಠೆ ಭಾಗ ೧–೨೬)
ಬೇತಲ

ಎರಿ ಹೊಲದಾಗ ಬಿಳಿ ದಾರ ಬಿದ್ದತಿ (ಲಠೈ ಭಾಗ ೧–೧೪)
ಬೇತಲಿ

ಕರಿ ಹೊಲದಾಗ ಬಿಳಿ ನೊಗ (ಲಠೈ ಭಾಗ ೧–೩೦)

ಕರಿ ಹೊಲದಾಗ ಸೂಜಿ ಬಿದ್ದತಿ (ಲಠೈ ಭಾಗ ೧–೨೯)

ಕರಿ ಹೊಲ್ದಾಗ ಖಲಾಚೂರಿ ಬಿದ್ದದ (ಲಠೈ ಭಾಗ ೧–೨೮)
ಬೇತಲಿ (ಖಡ್ಗ)

ಅವ್ವ ಅಪ್ಪನ ಬಿಟ್ಟು ತಿನ್ನುವದೇನು (ವಾಲಿ ೭– ೧೪)
ಬೇನೆ ಒನಿಕೆ

ತಾಯಿ ಪಾತಾಳಕ್ಕೆ
ತಂದೆ ಶಿಖರಕ್ಕೆ
ಮಗ ವ್ಯಾಪಾರಕ್ಕೆ
ಮಗಳು ಮದುವೆಗೆ ಹೋಗಿದ್ದಾಳೆ (ಜೀಶಂಪ ೧೬೯)
ಬೇರು, ಮರ, ಬೆಳೆಯುವವನು, ಅಡಿಕೆ

ಅವ್ವ ತಂಟ್ರಿ ಮಗ ಬೋಳಿ (ರಾ ಗೌ ೪೨)
ಬೇಲದ ಮರ, ಬೇಲದ ಹಣ್ಣು

ತುಪ್ಪ ತುಪ್ಪ ಎತ್ತ ಮೂಸ (ಜೀಶಂಪ ೧೬೩)

ತುಪ್ಪ ತುಪ್ಪ ಎತ್ತಿದರೆ ಮೋಸ (ಲ ಗೌ ೬೦೬)

ತೊವ್ವೆ ತಿಂದು ತಪ್ಲಿ ಬಿಸಾಕಿದ್ರು (ಜೀಶಂಪ ೧೬೪)

ಪುಟ್ಟ ಕುಡಿಕೆ ಹಿಟ್ಟು ಬಲು ರುಚಿ (ಲ ಗೌ ೭೨೭)
ಬೇಲದ ಹಣ್ಣು

ಎಂಟು ನೂರು ಗಂಟು ನೂರು ಮಂಟಪ ನೂರು ಮನೆ ನೂರು (ಲ ಗೌ ೨೫೩)
ಬೇಲಿ

ನೆಲದಲ್ಲಿ ಹುಟ್ಟಿ ನೆಲದಲ್ಲಿ ಬೆಳದು
ನೆಲವು ತಾಗಲು ನನ್ನ ಪರಿಮಳವೆ ನಾಶ (ಇ ೬೮೮)
ಬೇವಿನ ಸೊಪ್ಪು

ಮಣ್ಣಲ್ಲೇ ಹುಟ್ಟು
ಮಣ್ಣಲ್ಲೇ ಬೆಳೆತು
ಮಣ್ಣಾಗಿದ್ರೆ ಕೆಡ್ತು (ಶಾಂ ನಾ ೨೨೯)
ಬೇವ್ನ ಸಪ್ಪು

ಕರಿ ಹೊಲ್ದಾಗ ಕಾಲ್ದಾದಿ ಬಿದ್ದೈತಿ (ವಾಲಿ ೪–೨)
ಬೈತಲ

ಗುಡ್ಡದ್ದಾರ್ಯಾಗ ಅಡ್ಡ ಬಿದ್ದೈತಿ (ಇ ೫೦೨)
ಬೈತಲಿ

ಆ ಕಡೆ ಈ ಕಡೆ ಕರಿಗುಡ್ಡ
ನಡಕ್ಕೊಂದು ಬಿಳಿಹಾದಿ (ಇ ೧೫೧೧)

ಎರೇ ಹೊಲ್ದಾಗ್ ಬಿಳೇ ದಾರ್ ಬಿದ್ದತಿ (ಲ ಗೌ ೨೩೬)

ಕರೀ ಹೊಲದಾಗ ಕಡಚಗಿ ಬಿದ್ದೈತಿ (ಇ ೩೬೨)
ಬೈತಲೆ

ಒಂದು ಕಾಡು
ನಡುವೆ ಜಾಡು (ಸು ೧೬೨)
ಬೈತಲೆ, ಬಾಚುಪಟ್ಟೆ

ಎಡಕ ಬಲಕ ಗುಡ್ಡ
ನಡಕ ದಾರಿ ಹೊಂಟೈತಿ ಸವಾರಿ (ಇ ೨೩೩)
ಬೈತಲೆ–ಹೇನು
ನೆಟ್ಟನ್ನ ಗಿಡಕ್ಕ ನೆರಳಿಲ್ಲ (ಇ ೬೮೨)
ಬೈತಾಲಿ

ಕೈತುಂಬ ಬಳೆ ತೊಟ್ಟು ಕೊಂಡು ಕಾಡಲ್ಲಿ ಕಣ್ಣೀರು ಹಾಕುತ್ತದೆ (ಲ ಗೌ ೪೮೭)
ಬೈನೆ

ಓಣ್ಯಾಗ ಓಣಿ ಯಾವ ಓಣಿ (ಲಠೈ ಭಾಗ ೫–೧೦೩)
ಬೋಗೋಣಿ

ಅದರಾಗ ಅದ್ನಾ ಹಾಕಿ
ಮದರಂಗಿಪುಡಿ ಹಾಕಿ
ಅದನ್ನ ನೋಡಿ ಜೀವ ಹೆದರತೈತಿ (ಇ ೯೯)

ಆರು ಹಣ ಕೊಟ್ಟು ಒಂದು ಹೋರಿ ತಂದೆ
ಮೂರು ಹಣ ಕೊಟ್ಟು ಒಂದು ಮೂಗ್ರಾಣಿ ತಂದೆ
ಊರ ಮುಂದಕೆ ಹೋಗಿ ಗುಟ್ರಕೆ ಹಾಕ್ತು (ಸು ೮೬)

ಕರೀಕೊಣನ ಬಾಯಿಗೆ
ಉರಿಯೋಕೊಳ್ಳಿ ಸಿಗಿಸಿದರೆ
ಬಂಕಾಪುರದದೊರೆಗು ಬಾಯ್ತೆರಿಯುತ್ತೆ (ಜೀಶಂಪ ೧೧೫)

ಕೊಕ್ಕರೆ ತಿಕ್ಕೆ ಸಕ್ಕರೆ ತುಂಬಿದ್ದಕ್ಕೆ
ಕುಣಿಗಲ್ ತಕ ಕೂಗ್ಕೊಂಡು ಹೋಯ್ತು (ಸು ೨೩೭)

ಬೆಂಕಿ ಮಾವಗ ಬೆಳ್ಳಿ ಗುಂಡು (ಇ ೭೮೮)
ಬಂದೂಕ

ಅದರಾಗ ಇದು ಹಾಕಿ
ಮದರಂಗಿ ಪುಡಿ ಹಾಕಿ
ಇದರಿಗಿ ಬರವ್ನ ಎದಿ ಏನು (ವಾಲಿ ೩–೮೦)

ಕೊಕ್ಕರೆ ತಿಗಕ್ಕೆ ಸಕ್ಕರೆ ತುಂಬಿದರೆ
ಕೋಲಾರತನಕ ಕೊಂಯ್ ಅಂದೀತು (ವಾಲಿ ೩–೮೮)

ಗುಡ್ಡದಿಂದ ಗುಡ್ಡಕ್ಕೆ ಕೈ ಇಡತಾನ (ಇ ೪೯೮)

ಸಪ್ಪಳ ಆಗುತ್ತಿತ್ತು ಹಕ್ಕಿ ಹಾರುತ್ತಿತ್ತು
ನನ್ನ ನೋಡುತ್ತಿತ್ತು ನಿನ್ನ ಮಾಡುತ್ತಿತ್ತು (ವಾಲಿ ೩–೫೮)

ಹಕ್ಕಿ ಹಾರ್ತಿತ್ತು
ಪುಕ್ಕ ಮೆಡೀತಿತ್ತು
ನನ್ನ ನೋಡ್ತಿತ್ತು
ನಿನ್ನ ಮಾಡ್ತಿತ್ತು (ರಾ ಗೌ ೪೬೩)
ಬಂದೂಕು

ಹೋದವರು ಬಂದವರೆಲ್ಲ ಕುತ್ತಿಗೆಗೆ ಹಾಕಿ
ಹಗ್ಗ ಕಟ್ಟಿ ಪಾತಾಳಕ್ಕೆ ಇಳಿಸಿ ತರ್ತಾರೆ (ಲ ಗೌ ೧೦೮೮)
ಬಂದಿಗೆ

ಮೂಡುಗಡೆಯಿಂದ ಮೂರು ಹಕ್ಕಿ ಬಂದುವು
ಒಂದು ಬಾವಿಗೆ
ಒಂದು ಗುಡಿಗೆ
ಒಂದು ಕಾಡಿಗೆ ಹೋದುವು (ಸು ೪೨೧)
ಬಿಂದಿಗೆ, ತೆಂಗಿನಕಾಯಿ, ಕೊಡಲಿ

ಕೆಂಪು ಹೆಣ್ಣಿಗೆ
ಕೆಳಗೀಟಗಲ (ರಾ ಗೌ ೨೨೧)
ಬಿಂದಿಗೆ ಸಿಂಬಿ

ಹಳದಿ ಬಣ್ಣದ ಚುಂಡಣ್ಣಾ (ಶಾಂ ನಾ ೪೪೩)
ಬಿದ್ದರೆ ಸಾವಿರ ಕಾಳಣ್ಣಾ
ಬುಂದಿ ಉಂಡೆ

ಅಜ್ಜ ಏನು ಕೊಟ್ಟರೂ ತಿಂತಾನ
ನೀರು ಕೊಟ್ಟರ ಸಾಯ್ತಾನ (ಇ ೪೬)

ಇರಿದರೆಯು ಏರಿಲ್ಲ
ಹರಿದರೆಯು ಸೀಳಿಲ್ಲ (ರಾ ಗೌ ೮೪)

ಅಂಕು ಡೊಂಕಿನ ಮರ
ಬಾಣ ಬಿರುಸಿನ ಮರ
ಬ್ರಹ್ಮದೇವರು ಬಂದರೂ ಕಡಿಯಲಾಗದ ಮರ (ಶಾಂ ನಾ ೩೭೬)

ಒಂದು ಗೋದಿ ತಂದು ಒಂಬತ್ತು ಹೋಳಿಗಿ ಮಾಡಿ
ಬೀಗರುಂಡು ಬಿಜ್ಜರುಂಡು
ಅಟ್ಟದ ಮೇಲೆ ಇಟ್ಟರೆ ಅಟ್ಟ ಕಡಕೊಂಡು ಬಿತ್ತು (ವಾಲಿ ೩–೨)

ಒಂದ್ಹಾವು ಅಕ್ಕಿ ಹಾಕಿದರೆ
ಊರೆಲ್ಲ ಉಂಡು
ಇನ್ನು ಮಿಗುತ್ತೆ (ಜೀಶಂಪ ೯೧)

ಕಾಲಿಲ್ಲದಲೆ ಹತ್ತಿ
ನಾಲಿಗೆಯಿಲ್ಲದೆ ನೆಕ್ಕಿ
ನೀರು ಕುಡಿದು ಸತ್ತುಹೋದ (ಚಂ ಸೆ ೧೦೦)

ಕೆಂದೆತ್ತು ಬೇಲೀ ಹಾರ್ತು (ಶಾಂ ನಾ ೩೭೦)

ಕೆಂಪೆತ್ತು ಧರೇ ಹತ್ತುತದೆ (ಲ ಗೌ ೪೮೪)

ಗುಡುಗುಡನೆ ಬಂತು
ಗೂಡು ತುಂಬ ಮೊಟ್ಟೆ ಇಡ್ತು (ಜೀಶಂಪ ೧೪೨)

ಗುಡು ಗುಡನೆ ಬಂದು
ಗೂಡಿನ ತುಂಬ ಮೊಟ್ಟೆ ಇಕ್ಕಿತು (ಸು ೨೫೦)

ಗುಡು ಗುಡನೆ ಬಂದು
ಗೂಡು ತುಂಬ ಮೊಟ್ಟೆಯಿಕ್ಕ್ತತು (ಮಂ ೧.೫–೫೪)

ಗೂಡಿನ ಹಕ್ಕಿ
ಗುಂಡೀಲಿ ಮೊಟ್ಟೆ ಇಡ್ತು (ಜೀಶಂಪ ೧೪೬)

ತಕ್ಕಡ್ಯಾಗಿಟ್ಟು ತೂಗುವದಲ್ಲ
ದುಡ್ಡಿಗೆ ಕೊಡೂದಲ್ಲ
ಅದಿಲ್ದ ನಡಿಯೋದಿಲ್ಲ (ಇ ೫೬೩)

ತಾಳು ಮರ ತಬ್ಬೋಕಾಗೋಲ್ಲ (ಲ ಗೌ ೬೦೧)

ತುಸ ಬಾಡು ಊರ್ಗೆಲ್ಲ ಚಾರು (ಜೀಶಂಪ ೧೭೧)

ದೂರಿಂದಾ ನೋಡಿದ್ರೆ ಚೆನ್ನಾ
ಹತ್ರಾ ಬಂದ್ರೆ ರನ್ನಾ
ಮುಟ್ಟಿದ್ರೆ ಬನ್ನಾ (ಶಾಂ ನಾ ೩೭೨)

ನನ್ನಜ್ಜಿ ಕೊಟ್ಟದ್ನೆಲ್ಲಾ ತಿಂತು ನೀರ್ಹಾಕಿರೆ ಸಾಯ್ತು (ಶಾಂ ನಾ ೩೭೪)

ನನ್ನಣ್ಣ ಕೆಂಪ್ಗೆ ಮಿಂದ್ರೆ ಕರ್‌ಗೆ (ಶಾಂ ನಾ ೩೭೭)

ನನ್ನ ಬಣ್ಣ ಕೆಂಪು ನಾನು ಸೋಕಿದ್ದೆಲ್ಲ ಕಪ್ಪು (ಲ ಗೌ ೬೪೨)

ನಮ್ಮನ್ಯಾಗ್ ಒಂದು ನೊಣ ಮುಟ್ಟದ್ ದೇವ್ರೈತಿ (ಲ ಗೌ ೬೫೧)

ನಮ್ಮನ್ಯಾಗ ನೊಣ ಮುಟ್ಟದ ದೇವರ ಐತಿ (ಇ ೬೩೫)

ಬ್ರಹ್ಮ ದೆವ್ರ್ ಬಂದ್ರೂ ಕಡೂಲಾಗ್ದೆಮರಾ (ಶಾಂ ನಾ ೩೭೩)

ಮುಟ್ಟೂಲಾಗದ್ಬಳ್ಳಿ (ಶಾಂ ನಾ ೩೭೫)

ಮೂಡಲಿಂದ ಬಂತು
ಗೂಡು ತುಂಬ ಮೊಟ್ಟಿಯಿಕ್ಕಿತು (ಲ ಗೌ ೮೫೫)

ಯೇರುತ್ತಲೆ ಕೆಂಪು ಆರುತ್ತಲೆ ಕಪ್ಪು (ಶಾಂ ನಾ ೩೭೧)

ಸಾಸಿವೆಕಾಳು ಗಾತ್ರ ಸೆಗಣಿ
ಊರೆಲ್ಲಾ ಸಾರಿಸಿ ಇನ್ನೂ ಮಿಗುತ್ತೆ (ಚಂ ಸೆ ೨೨೫)

ಹತ್ತು ತಲೆ ಕೆಂಪು ಆರು ತಲೆ ಕಪ್ಪು (ವಾಲಿ ೧–೩೧)

ಹತ್ತೇಳು ತಲೆ ಕೆಂಪು
ಮತ್ತಾರು ತಲೆ ಕಪ್ಪು
ಹತ್ತನೊಡಲುರಿಸುವುದು
ಇದರ ಅರ್ಥವೇನು (ಇ ೧೦೦೮)

ಹಿಡಿಯಾಕ ಹೋದ್ರ ಕಡಿಯಾಕ ಬರತೈತಿ (ಇ ೧೦೭೬)

ಹುಟ್ಟುವಾಗ ಕೆಂಪು ಸತ್ತಾಗ ಕಪ್ಪು (ಇ ೧೦೯೨)

ಹೊಟ್ಟಿಗ್ಹಾಕಿದ್ಹಾಂಗ ಬೆಳಿತತಿ
ನೀರ ಕುಡಿಸಿದ್ಹಾಂಗ ಸಾಯತತಿ (ಲಠ್ಠೆ ಭಾಗ ೨–೭೨)
ಬೆಂಕಿ

ಹತ್ತು ತಲೆ ಕೆಂಪುಂಟು ರಾವಣನಲ್ಲ
ಆರು ತಲೆ ಕೆಂಪುಂಟು ಷಣ್ಮುಖನಲ್ಲ
ಏಳು ತಲೆ ಬಿಳುಪುಂಟು ನಾಗೇಂದ್ರನಲ್ಲ
ಇದು ಹೇಳಬಲ್ಲ ಜಾಣನಿಗೆ ಅರಿದಲ್ಲ (ಇ ೧೦೦೫)
ಬೆಂಕಿ ಅಥವಾ ದೀಪ

ಈಟೆ ಹುಡಗ ಕರಿ ಟೋಪಿ ಹಾಕೊಂಡು
ಕರಾಮತ್ತು ಮಾಡ್ತಾನೆ (ಲ ಗೌ ೧೮೪)

ಒಬ್ಬ ಮನುಷ್ಯನಿಗೆ ಕೈಯಿಲ್ಲ ಕಾಲಿಲ್ಲ
ಒಂದೇ ಒಂದು ಕಿರೀಟ (ಲ ಗೌ ೨೭೫)

ಒಳ್ಳೆ ತಮ್ಮನಿಗೆ ಕರಿ ಟೋಪಿ (ಲ ಗೌ ೨೮೯)

ಒಂದು ನಿಮಿಷದಲ್ಲಿ ಬೂದಿ (ರಾ ಗೌ ೨೫೬)

ಕರಿ ತಲೆಯವನು ಬಿಳಿ ಕಾಲಿನವನು (ರಾ ಗೌ ೧೭೩)

ಕರೀ ಟೋಪಿ ಬಿಳೀ ಸಾಬಿ (ಲ ಗೌ ೪೧೭)

ಚಿಕ್ಕದೇವಿ ಬೆಟ್ಟಕ್ಕ
ಅತ್ತವ್ರು ಅತ್ತುತ್ತಾವ್ರೆ
ಇಳಿಯೋರು ಇಳೀತಾವ್ರೆ (ಮಂ ೧.೫–೫೯)

ಚೋಟುದ್ದ ರಾಜ
ಮೋಟುದ್ದ ಟೋಪಿ ಹಾಕ್ಕೊಂಡು
ಜಟ್‌ಪಟ್ ಅಂತ ಓಡಾಡಿದರೆ
ಬಿಳಿ ಸಿಪಾಯಿಗೆ ಕರಿಟೋಪಿ (ರಾ ಗೌ ೩೫೫)

ಚೋಟುದ್ದ ಹುಡುಗ ತಲೆ ತುಂಬ ಪೇಟ (ಲ ಗೌ ೫೫೭)

ಚೋಟುದ್ದ ಹುಡುಗನಿಗೆ ಚೀಟಿ ಕುಲಾವಿ (ಜೀಶಂಪ ೧೫೮)

ತಲೆಯುಂಟು ಕೂದಲಿಲ್ಲ
ಮರವುಂಟು ಎಲೆಯಿಲ್ಲ
ಮನೆಯುಂಟು ಕಿಟಿಕಿಯಿಲ್ಲ
ಕೆಣಕಿದರೆ ಮಾತ್ರ ಬೆಂಕಿಯಂತ ಮನುಷ್ಯ (ಇ ೫೬೯)

ಬಿಳಿ ಹುಡುಗರಿಗೆ ಕರಿ ಟೊಪಗಿ (ಇ ೭೫೩)

ಬಿಳಿಯಣ್ಣನ ಮೇಲೆ ಕರಿಯಣ್ಣ (ಲ ಗೌ ೭೭೫)

ಬಿಳೀ ಕಾಲಿನವಾ ಕಪ್ಪು ತಲೆಯವ
ಈತ ಮುನಿದರೆ ಮನೆಯೆಲ್ಲ ಹಾಳು (ವಾಲಿ ೩–೬೨)

ಬಿಳೇ ಸಿಪಾಯಿ ಕರೇ ಟೋಪಿ (ಸು ೩೭೬)

ಬೆಳೀ ಮಾಣಿಗೆ ಕರೀಟೊಪ್ಪಿ (ಶಾಂ ನಾ ೩೭೯)

ಮೋಟು ಮನುಷ್ಯ ಕೆಂಡ ಕಾರ್ತಾನೆ (ಲ ಗೌ ೮೭೯)

ಹುಟ್ಟುತ್ಲೆ ಕೆಂಪು
ಆರುತ್ಲೆ ಕಪ್ಪು (ಜೀಶಂಪ ೨೮೭)
ಬೆಂಕಿಕಡ್ಡಿ

ಕರಿ ತಲೆಯ ಬಿಳಿ ಜನರು
ಮರದ ಮನೆಯೊಳಗಿಹರು
ಹೊರಗೆಳೆದು ಹೊಡೆದರೆ
ಉರಿದು ಬೀಳುವರು (ಇ ೩೫೫)
ಬೆಂಕಿಕಡ್ಡಿಗಳು

ಕೆಂಪಣ್ಣ ಮೇಯ್ತಾ ಹೋಗ್ತಾನೆ
ಕರಿಯಣ್ಣ ಮಲಗ್ತಾ ಹೋಗ್ತಾನೆ (ಲ ಗೌ ೪೮೨)
ಬೆಂಕಿ–ಕರಕು

ಬೆಟ್ಟದ ಮೇಲೆ ದೋಸೆ ಹುಯ್ತಾರೆ (ರಾ ಗೌ ೩೬೪)

ಸಾಸಿವೆ ಗಾತ್ರ ಚಿನ್ನ ಊರಿನಲ್ಲಿ ಬಿನ್ನ (ಲ ಗೌ ೯೩೯)

ಹಿಡಿಯಾಕೆ ಹೋದರೆ ಕಡಿಯಾಕೆ ಬರುತ್ತೆ
ಕುಂತ ಜಾಗದಿಂದ ಕದಲೋದಿಲ್ಲ (ಲ ಗೌ ೧೦೫೧)

ಹಿಡ್ಯಾಕ ಹೋದ್ರ ಕಡ್ಯಾಕ ಬರ್ತತಿ (ಲಠ್ಠೆ ಭಾಗ ೨–೭೨)
ಬೆಂಕಿಕೆಂಡ

ವಂದ್ಕೊಣೆಲಿ ನೂರಾರ್ ಸಿಪಾಯ್ರು
ಹೆರಂಗ್ಬಂದು ಉರಿಕಾರ್ ಸಾಯ್ತ್ರು (ಶಾಂ ನಾ ೩೭೮)
ಬೆಂಕಿಪೆಟ್ಟಿಗೆ

ಹರಕ್ ಸೀರೆ ಪರಕ್ ಅಂತು
ಅಮ್ಮನೋರ ಗುಡಿ ಮಿಣಕ್ ಅಂತು (ಸು ೪೯೪)
ಬೆಂಕಿಪೆಟ್ಟಿ ಮತ್ತು ಕಡ್ಡಿಗೀರುವುದು

ಪಟ್ಟಣಗಳಿಗೆಲ್ಲ ಚಿಕ್ಕ ಪಟ್ಟಣ (ಲ ಗೌ ೭೧೮)

ಪುಟ್ಟ ಪುಟ್ಟ ಪೆಟ್ಗೆ ಪುಟಾಣಿ ಪೆಟ್ಗೆ
ನವಣೆ ತುಂಬ ಬಜಾರ್ ಪೆಟ್ಗೆ (ಜೀಶಂಪ ೧೯೭)

ಹಜಾರದಲ್ಲೊಂದು ಬಜಾರದ ಪೆಟ್ಟಿಗೆ (ಲ ಗೌ ೯೭೬)
ಬೆಂಕಿಪೊಟ್ಟಣ

ಒಂದು ತೊಟ್ಲಲ್ಲಿ ನೂರು ಮಕ್ಕಳು ಮಲಗ್ಯವೆ (ಲ ಗೌ ೩೧೨)
ಬೆಂಕಿಪೊಟ್ಟಣದಲ್ಲಿ ಬೆಂಕಿಕಡ್ಡಿ

ಕೆರೆಯಾಗ ಕೆಂದೆತ್ತು ತಿಪ್ಪಾಗ ಬಿಳಿಎತ್ತು
ಹೋದದ್ದು ದೇಸಗತಿ (ಇ ೪೧೪)

ಪಂಚವರ್ಣದ ಕುದುರೆ ಪರದೇಶಕ್ಕೆ ಹೋಯಿತು
ಬಿಳಿಯ ಕುದುರೆ ಬೀದಿಗೆ ಹೋಯಿತು
ಕಪ್ಪು ಕುದುರೆ ಕೇರಿಗ್ಹೋಯ್ತು (ಇ ೭೦೧)
ಬೆಂಕಿ, ಬೂದಿ, ಹೊಗೆ

ಮುಳ್ಳು ಮುತ್ತುಗದ ಹೂವು ಮುಡಿದವಳೆ ಜಾಣೆ
ಕೆಂಬಟ್ಟೆ ನೀರು ಕುಡಿದವಳೆ ಜಾಣೆ
ಹಸಿ ಬೆತ್ತದ ಕೋಲ ಹಿಡಿದವಳೆ ಜಾಣೆ (ರಾ ಗೌ ೩೯೭)
ಬೆಂಕಿ, ರಕ್ತ, ಹಾವು

ದಾಸವಾಳದ ಹೂವು ಮುಡಿದವನ ಭಂಡ
ಕೇಸಟ್ಟೆ ಕೋಲು ಕೀಸಿದವನ ಭಂಡ (ಲ ಗೌ ೬೨೯)
ಬೆಂಕಿ–ಹಾವು

ಕೆಂದುಗುದ್ರೆ ಕೇರಿಗೋಯ್ತು
ಪಂಚಮುಖದ ಕದ್ರಿ ಪರದೇಸಕ್ಕ ವೊಂಟೋಯ್ತು
ಬೂದಿಗುದ್ರೆ ಬೀದಿಗೋಯ್ತು (ಮಂ ೧.೫–೫೨)
ಬೆಂಕಿ, ಹೊಗೆ, ಬೂದಿ

ಕೆಂದ ಕುದುರಿ ಮ್ಯಾಗ
ಒಬ್ಬ ಏರತಾನು ಒಬ್ಬ ಇಳಿತಾನು (ಲಠೈ ಭಾಗ ೫–೧೩೬)
ಬೆಂಕಿ, ಹಂಚ, ರೊಟ್ಟಿ

ಅಂತಪ್ಪನ ಮಗಳ ಎಂತಾ ಚೆಲಿವಿ
ತೊಗಲ ತೊಟ್ಲಾಗ ತೂಗಾಡುವಾಕಿ (ಲಠೈ ಭಾಗ ೫–೪೦)
ಬೆಂಡ್ವಾಲಿ

ಸುಂಬಳ ಸುರುಕಾ ಸಂತ್ಯಾಗ ದೊರತ (ವಾಲಿ ೧– ೧೦೦)
ಬೆಂಡಿಕಾಯಿ

ನಾಲ್ಕು ಮೂಲೆ ದಬ್ಬೆ ಹಂಗೆ ಗರಿ
ತೊಟ್ಟು ಒಂದೆಯೆ ಮೂಕು ದಬ್ಬಳದ್ಹಂಗೆ
ಒಳಗೆ ನೋಡಿದ್ರೆ ಗುಳಿಗೆ ಹಂಗೆ (ರಾ ಗೌ ೩೦೪)

ಸಿಂಬಳಬುರುಕ ಸಂತೆಗೆ ಹೋದ (ಚಂ ಸೆ ೨೨೭)

ಸುಂಬ್ಳ ಸುರ್ಕಾ ಸಂತೆ ಹೋಗ್ತಾ (ಶಾಂ ನಾ ೨೩೦)
ಬೆಂಡೆಕಾಯಿ

ಅಂತಪ್ಪನ ಮಗಳು ಎಂಥೆಂಥಾ ಚೆಲುವಿ (ಇ ೮೮)
ಬೆಂಡೋಲಿ

ಭೋಜರಾಜನ ಮಗಳು ಕುಣಕೊಂತ ಬಸರಾಗ್ತಾಳ (ವಾಲಿ ೫–೨)
ಬೋಂಡ

ತಲೀ ಕೆಳಗ
ಮುಕಳಿ ಮ್ಯಾಲ (ವಾಲಿ ೭–೧೮)
ಬ್ಯಾಕಟಗಿ

ಒಕ್ಕಲತನದ ಸಾಮಾನದೊಳಗ
ಒಂಟಿ ಪಾಸಿಂದು ಏನು ಇರತೈತಿ (ಇ ೨೬೪)

ತಲಿ ತಳ್ಯಾಕ
ಮುಕಳಿ ಮ್ಯಾಕ (ಇ ೫೭೦)
ಬ್ಯಾಕೋಲು

ನಿಮ್ಮವ್ವ ನಿಮ್ಮಪ್ಪನ್ನ ಬಿಟ್ಟು ಏನ ತಿಂತಾಳ (ಇ ೬೬೬)
ಬ್ಯಾನಿ

ಅವ್ವ ತಂಟ್ರಿ
ಮಗ್ಗ ಬೋಳಿ (ಮಂ ೧.೪–೧೫)
ಬ್ಯಾಲದ ಹಣ್ಣು

ಏರಿ ಕೆಳ್ಗೆ ಬಾಲ ಬೀಸ್ತು (ಮಂ ೧.೪–೨೧)

ಚಿನ್ನದಂತ ಹಕ್ಕಿಗೆ
ರನ್ನದಂತ ಕೊಕ್ಕು
ಕೊಕ್ಕಲಿ ಕುಡುದ್ರ ನೀರಾಯ್ತದೆ
ಅಂತ ಪುಕ್ಕಲಿ ಕುಡಿಯುತ್ತೆ (ಮಂ ೧.೪–೪೫)

ಬನ್ನೂರು ಒನಗೊನಕ್ಕ
ಕೊಕ್ಕನಲ್ಲಿ ನೀರ್ ಕುಡಿದ್ರೆ ಮಾಸ್ಕತ್ತಂತ
ಪುಕ್ಕಲಿ ಕುಡಿಯುತ್ತೆ (ಮಂ ೧.೪–೫೯)

ಬಂಗಾರ್ದಕ್ಕಿ ಚಿನ್ನದ ಕೊಕ್ಕು
ಕೊಕ್ಕು ಬದಿಯಾಯ್ತು ಅಂತ
ತಿಕ್ಕಾಣೆ ನೀರ್ ಕುಡೀತು (ಮಂ ೧.೪–೫೫)

ಸಣ್ಣ ಏರಿ ಮ್ಯಾಲೆ
ಎಳಗರ ಬಾಲ ಬೀಸುತ್ತೆ (ಮಂ ೧.೪–೭೪)

ಭತ್ತ

ಅವ್ವ ನೆರತು ಹಿತ್ತಲಿಗೆ ಹೋಗ್ತಾಳ
ಮಗಳು ನೆರತು ಮನಿ ಸೇರ್ತಾಳ (ವಾಲಿ ೧–೫೭)

ಭತ್ತ, ಜೋಳ

ಅವ್ವ ನೆರೆದು ಹಿತ್ತಲಿಗೆ ಹೋಗ್ತಾಳೆ
ಮಗಳು ನೆರೆದು ಮನೆಗೆ ಬರ್ತಾಳೆ (ರಾ ಗೌ ೪೮)

ಭತ್ತ, ರಾಗಿ

ಒಂದಾ ಹೊತ್ತ ಯಾವಾಗ ಹೋದತು ಅಂತಾದ
ಒಂದೂ ಹೊತ್ತ ಹ್ವಾದ್ರೇನ ಬಂದ್ರೇನ ಅಷ್ಟೆ ಅಂತಾದ (ಲಠ್ಠೆ ಭಾಗ ೫–೯೭)

ಭಾರಗಿ, ಕಂಬ

ಊರುಂಟು ಜನರಿಲ್ಲ
ನದಿಯುಂಟು ನೀರಿಲ್ಲ
ರಸ್ತೆಯುಂಟು ವಾಹನವಿಲ್ಲ (ಲ ಗೌ ೨೦೯)

ಕಲ್ಲಿಲ್ಲದ ಬೆಟ್ಟ
ಮರಳಿಲ್ಲದ ಮರಭೂಮಿ
ನೀರಿಲ್ಲದ ಸಮುದ್ರ
ಜನರಿಲ್ಲದ ಊರು (ವಾಲಿ ೧–೨೧)

ಕಲ್ಲಿಲ್ಲದ ಬೆಟ್ಟ
ಮರುಳಿಲ್ಲದ ಮರುಭೂಮಿ (ರಾ ಗೌ ೧೮೮)

ಗುಡ್ಡ ಬೆಟ್ಟಗಳುಂಟು ಮರಗಳಿಲ್ಲ
ಸಮುದ್ರ ಉಂಟು ಹೊಳೆಯುಂಟು ನೀರಿಲ್ಲ
ಹೆಸರುಂಟು ಊರಿಲ್ಲ (ಲ ಗೌ ೫೧೯)

ಜನಗಳಿಲ್ಲದ ಪಟ್ಟಣಗಳು
ಸಂಚಾರವಿಲ್ಲದ ಮಾರ್ಗಗಳು
ನೀರಿಲ್ಲದ ಸಮುದ್ರಗಳು
ನನ್ನಲ್ಲಿವೆ ನಿಮಗೂ ತೋರಿಸುವೆ (ಇ ೫೪೮)

ಜನರಿಲ್ಲದ ನಾಡು
ಮರವಿಲ್ಲದ ಕಾಡು
ನೀರಿಲ್ಲದ ತೋಡು
ಮೀನಿರದ ಕಡಲು (ರಾ ಗೌ ೨೫೯)
ಭೂಪಟ

ನೀರಿಲ್ಲದ ಸಮುದ್ರ
ಜನರಿಲ್ಲದ ಪಟ್ಟಣ
ಸಂಚಾರವಿಲ್ಲದ ಮಾರ್ಗ (ಚಂ ಸೆ ೧೬೧)
ಭೂಪಟ

ಉದ್ದಾನೆ ಹೆಂಗಸಿಗೆ ನೆರಳೇ ಇಲ್ಲ (ಲ ಗೌ ೧೯೯)

ಗುಂಡಾಗಿದೆ ಚೆಂಡಲ್ಲ
ತಿರುಗುತ್ತಿದೆ ಚಕ್ರವಲ್ಲ
ಬೇಗನೇ ಕಾಯುವದು
ಬೇಗನೇ ಆರುವುದು
ಇದು ಏನು (ಲ ಗೌ ೫೨೪)
ನೀ ಕೇಳ್ದೆಲ್ಲವನ್ನು ಕೊಟ್ಟೀನಿ
ನಿಮ್ಮ ಕೆಳಗಿರೋದ್ನ ಕೊಡಿ ಮತ್ತೆ (ರಾ ಗೌ ೩೧೬)

ಬಡಗಿ ಮಾಡಿದ ಬಂಡಿಯಲ್ಲ
ಮನುಷ್ಯ ಮಾಡಿದ ಯಂತ್ರವಲ್ಲ
ಒಂದು ನಿಮಿಷವೂ ಪುರುಷೊತ್ತಿಲ್ಲ (ರಾ ಗೌ ೩೪೩)

ಯತ್ನಾರದ ಅಲ್ಗೆ
ತಿನ್ನಾರದ ಬಸವ (ಮಂ ೨.೧–೨೬)
ಭೂಮಿ

ಅವ್ವಾ ಗುಂಡೀಲಿ
ಮಗ ಆಕಾಶದಲ್ಲಿ (ಮಂ ೨.೧–೬)

ಜಗದ ಜನರಿಗೆಲ್ಲಾ ಒಂದೇ ಹಾಸಿಗಿ ಒಂದೇ ಹೊದಿಕಿ (ವಾಲಿ ಪ್ರಾ ೧೧)

ಸಂತೆ ಜನಕೆಲ್ಲ
ಒಂದೇ ಹಾಸಿಗೆ
ಒಂದೇ ಹೊದಿಕೆ (ಸು ೪೫೮)
ಭೂಮಿ, ಆಕಾಶ

ಎತ್ತಲಾರದ ಹರಿವಾಣ
ತಿದ್ದಲಾರದ ಹೋರಿ
ಎಣಿಸಲಾರದ ಗೆಜ್ಜೆ (ರಾ ಗೌ ೧೦೬)
ಭೂಮಿ, ಆಕಾಶ, ಚುಕ್ಕೆ

ಎತ್ತನಾರದ ಚೆಂಡು
ತಿದ್ದನಾರದ ಬಸವ
ಹೊಸೀನಾರದ ಮೂಗರಣೆ (ಲ ಗೌ ೨೧೯)
ಭೂಮಿ–ಆಕಾಶ–ಹಾವು

ಎತ್ತಲಾರದ ಹಲಗೆ
ಎಣಿಸಲಾರದ ಗೆಜ್ಜೆ (ಲ ಗೌ ೨೧೮)

ಎತ್ತಲಾರ್ದ ಹಲಗಿ
ಎಣಿಸಲಾರ್ದ ಗೆಜ್ಜಿ (ಲಠ್ಠೆ ಭಾಗ ೨–೧೫)
ಭೂಮಿ–ನಕ್ಷತ್ರ

ಹಾಸಿದ ಚಾಪೆ ಮಡಿಸುವವರಿಲ್ಲ
ಚೆಲ್ಲಿದ ಹಣವನ್ನು ಎಣಿಸುವವರಿಲ್ಲ (ಚಂ ಸೆ ೨೫೧)
ಭೂಮಿ–ನಕ್ಷತ್ರ

ಎತ್ತಲಾರದ ಚಪ್ಪಡಿ
ಉಡಿಯಲಾರದ ಹಗ್ಗ
ಹಿಡಿಯಲಾರದ ಹೋರಿ (ಲ ಗೌ ೨೧೭)
ಭೂಮಿ–ಹಾವು–ಚಂದ್ರ

ಫಲದಾಗ ಫಲ ಯಾವ ಫಲ (ಲಠೈ ಭಾಗ ೫–೨೦೪)
ಮಕ್ಕಳ ಫಲ

ಅರಿ ಬಿದ್ದ ಮ್ಯಾಲೆ ಕುಯ್ಯಲು
ಬತ್ತಿ ಬಿದ್ದ ಮ್ಯಾಲೆ ಬೆಳಕು (ಮಂ ೧.೩–೧)

ಊಟಕ್ಕೆ ಮುಂದು ಓಡಕ್ಕೆ ಹಿಂದು (ಲ ಗೌ ೨೦೫)

ಕಾಣದನ್ನು ಕಂಡ್ಕತ್ತು ಕಣ್ಗೆ ಮೂಗ್ಗೆ ಒತ್ಕತ್ತು (ಲ ಗೌ ೪೩೭)

ಮರದಲ್ಲಿ ಮರ ಹುಟ್ಟಿ
ತಿನ್ನಬಾರದ ಹಣ್ಣು ಬಲು ರುಚಿ (ಸು ೩೯೯)

ಮರದೊಳಗೆ ಮರ ಹುಟ್ಟಿ
ಭೂ ಚಕ್ರ ಕಾಯಾಗಿ
ತಿನ್ನಬಾರದ ಹಣ್ಣು ಬಲುರುಚಿ (ಇ ೮೨೬)

ಮರದೊಳಗೆ ಮರ ಹುಟ್ಟಿ
ಭೂಚಕ್ರದ ಕೊಡೆಯಾಗಿ
ತಿನ್ನಬಾರದ ಹಣ್ಣು ಬಹುರುಚಿ (ಜೀಶಂಪ ೨೨೭)

ಮರದೊಳ್ಗ ಮರಹುಟ್ಟಿ
ಭೂ ಚಕ್ರ ಕಾಯಾಗಿ
ನುಂಗಬಾರದ್ ಕಾಯಾಗಿ
ತಿನ್ನಬಾರ್ದಣ್ಣು ಬಲು ರುಚಿ (ಮಂ. ಕ) (ಮಂ ೧.೩–೫)

ಮೆಟ್ಲು ಇಲ್ದೆ ಇರಾ ಬೆಟ್ಟಾ
ಮೂಳೆ ಇಲ್ದೆ ಇದ್ದಂದಿ
ಎಂಟಾಳು ಅಮಿಕಂಡ್ರು
ಇಬ್ರು ತಿವುದ್ರು (ಮಂ ೧.೩–೬)
ಮಗು

ಪಕ್ಕೆ ಬಿತ್ತು ಆಪ್ಪೆ ಹಣ್ಣು ಹೆಕ್ಕೊರಿದ್ದೊ ತಿಂಬೋರಿಲ್ಲೆ (ಶಾಂ ನಾ ೬೧)
ಮಗು (ಶಗ್ಣಿ) (ಕಾಸ್ಕಕಾಯಿ)

ಹಕ್ಕಿ ದುಕ್ಕಾ ಮಾಡ್ತು
ಪಕ್ಷಿ ರಾಗಾ ಮಾಡ್ತು (ಶಾಂ ನಾ ೫೯)
ಮಗು–ತಾಯಿ

ಅಂತರಲೆ ಆರ್‌ಕಾಲು ನಿಂತಿರುವದು ಯರಡ್‌ಕಾಲು (ಶಾಂ ನಾ ೬೦)
ಮಗು–ತೊಟ್ಟಿಲು–ತಾಯಿ

ಕಾಯಿ ಕಾತಾಡ
ಹುವ್ವ ನೇತಾಡ
ನೀನು ತಳ್ಳಾಡ
ನಾನು ಅಳ್ಳಾಡ (ಸು ೨೦೬)
ಮಗ್ಗ

ಆನಿಮ್ಯಾಲ ಅಂಬಾರಿ
ಕುದುರಿಮ್ಯಾಲ ನವಬತ್ತಾ
ಒಗಟಾ ಒಡದವರಿಗಿ ಸಂಪತ್ತಾ (ಲಠ್ಠೆ ಭಾಗ ೫–೪೬)

ಕಾಲ ಕಿಸಿ ಒಳಗ ಹಾಕ ಮುಂದಕ ನಡಿ (ಲಠ್ಠೆ ಭಾಗ ೫–೧೨೭)
ಮಚ್ಚಿ

ಕರಿಕಲ್ಲ ಮ್ಯಾಲ ಬಿಳಿರಂಗ ಹೋದ
ಪದ್ಮಾವತಿ ಬಂದ ಪಾತರಾಡತಾಳ (ಲಠ್ಠೆ ಭಾಗ ೫–೧೧೩)
ಮಜ್ಜಗಿ ಕಡ್ಯೋದ

ಅಗಲಿಗೆ ಅನ್ನ ಇಕ್ಕಾದೆ
ನೆಲಿನ ಮೇಲಿನ ಬೆಳ್ನೀರ ನೋಡ್ತಾರೆ (ರಾ ಗೌ ೮)
ಮಜ್ಜಿಗೆ

ಬೋರ್ ಬೋರ್ ಅಂತಿದು ಶಮದ್ರೇನು ಅಲ್ಲಾ
ಸೊಂಟ್ಲೊಂದು ಹಗ್ಗ ಕಲ್ಲು ನಲ್ಲಾ
ತಲೆಮೆಲೊಂದು ಮುಯ್ಲು ದೆವ್ರೇನಲ್ಲಾ (ಶಾಂ ನಾ ೨೧)

ಹಿಂದೆ ಮುಂದೆ ಗುಲೂಸ್ನೋಡ್
ಕರಿಮಗು ನಿಲ್ಲನೋಡ್
ಬಂತೊ ಬಿಂದಿದಿಲ್ಯೊ ಕಯಾಕ್ಹೊ ನೋಡ್ (ಶಾಂ ನಾ ೪೫೨)
ಮಜ್ಜಿಗೆ ಕಡೆಯುವದು

ಕರಿಕಲ್ಲಿನ ಮೇಲೆ
ಪದ್ಮಾವತಿ ಎಂಬ ಸೂಳೆ
ಪಗಡೆ ಆಡುತ್ತಾಳೆ (ಇ ೩೫೬)
ಮಜ್ಜಿಗೆ ಕಡೆಯುವ ಕಡಗೋಲು

ಅಯ್ಯ ಕುಣಿದಾನೋ
ಅಯ್ಯನ ಕೋಲು ಕುಣೀದಾವೋ
ಅಮ್ಮ ಕುಣಿದಾಳೋ
ಅಮ್ಮನ ಜಾಲು ಕುಣಿದಾವೋ (ಲ ಗೌ ೬೯)
ಮಜ್ಜಿಗೆ ಕಡೆಯೋ ಮಂತು

ಬಿಳಿ ಸಮುದ್ರದಾಗ ಬಿಳೆ ಬಣ್ಣದ
ಎಲುಬಿಲ್ಲದ ಮನುಷ್ಯ ತೇಲ್ತಾನ (ಇ ೭೫೬)
ಮಜ್ಜಿಗೆ ಪಾತ್ರೆಯೊಳಗಿನ ಬೆಣ್ಣಿ

ಬಿಳಿಗೆರೆಯಲ್ಲಿ ಬಿಳಿ ಹೂವು (ಲ ಗೌ ೭೭೩)

ಭಟ್ಟ ಅಡಿ ಜುಟ್ಟು ಮೇಲೆ (ಲ ಗೌ ೮೦೦)
ಮಜ್ಜಿಗೆ–ಬೆಣ್ಣೆ

ಬೆಳಿ ಕೆಲಿರಿ ಬೆಳ್ಳಕ್ಕಿ ಮೇಯ್ತು (ಶಾಂ ನಾ ೪೪೮)

ಬೆಳೀ (ಬೆಳ್ಳಿ) ಕೆರಿಲಿ ಬೆಳೀ (ಬೆಳ್ಳಿ) ಯಮ್ಮೇಯ್ತು (ಶಾಂ ನಾ ೪೫೧)

ಬೆಳೀ ಸಮುದ್ರದಲ್ಲಿ ಬೆಳೀ ಕಲ್ಲು (ಶಾಂ ನಾ ೪೫೦)

ಮಹಾ (ನೆಡೊ) ಸಾಗ್ರಲ್ಲಿ ನಿಂಬಿ ಹಣ್ ತೇಲ್ತು (ಶಾಂ ನಾ ೪೪೯)
ಮಜ್ಗೆ–ಬೆಣ್ಣೆ

ಒಂದು ಸಿಕ್ತು
ಒಂದು ನೆಕ್ತು
ಒಂದು ತೇಲಕತ್ತು (ಮಂ ೧.೪–೨೫)
ಮಜ್ಜಿಗೆ, ಬೆಣ್ಣೆ, ತುಪ್ಪ

ಬಿಳಿ ಸಮುದ್ರದ ಮ್ಯಾಲ
ಬೆಳ್ಳಿ ಬೆಟ್ಟ ತೇಲತೈತಿ (ವಾಲಿ ೫–೨೯)
ಮಜ್ಜಿಗೆಯಲ್ಲಿಯ ಬೆಣ್ಣಿ ಮುದ್ದಿ

ಒಳಗ ಬಸರಾಗಿ ಬರತೈತಿ
ಮ್ಯಾಲಬಂದ ಹಡೀತೈತಿ (ಇ ೩೦೫)
ಮಟ್ಟಿ (ನೀರೆತ್ತುವುದು)

ಹೊಟ್ಟೆ ತುಂಬ ತಿಂತೈತಿ
ಹೊರಗ ಬಂದ ಕಕ್ಕೋತೈತಿ (ಇ ೧೧೦೬)
ಮಟ್ಟಿ ಅಥವಾ ಕಪ್ಪಲಿ

ಅಡಗನ ಹಳ್ಳಿ ಹೆಣ್ಣು
ತರಬೇಕೆನ್ನುವ ಗ್ಯಾನದೆ
ಐನೂರು ರೂಪಾಯಿ ಸಾಲದೆ (ರಾ ಗೌ ೧೪)

ಕತ್ತಲೆ ಮನೆಯಲ್ಲಿ ಕರಿಯಪ್ಪ ಕೂತವನೆ (ಲ ಗೌ ೩೭೩)

ಕಾಯಲ್ಲಿ ಮೆತ್ತಗೆ
ಹಣ್ಣಲ್ಲಿ ಗಟ್ಟಿ (ಚಂ ಸೆ ೯೭)

ಕೈಯಿಂದ ಕಲಸಣ್ಣ
ಕಾಲಿಂದ ಮಿಲಿಸಣ್ಣ
ಕೈಗೆ ಕೆಲಸಣ್ಣ
ಬೆಂಕಿಗೆ ಸುಡಿಸಣ್ಣ
ಬಡವರ ಆಧಾರಣ್ಣ
ಬಿದ್ದರೆ ಸತ್ತಣ್ಣ (ಚಂ ಸೆ ೧೧೨)

ನಾನು ದುಂಡಾಗಿರುವೆ
ಕೈ ಕಾಲುಗಳಿಲ್ಲ
ಬಾಯಿ ಮಾತ್ರ ಇದೆ
ಸುಟ್ಟರೆ ಸಾಯಲಾರೆ
ಬಡಿದರೆ ಬದುಕಲಾರೆ
ಆದರೆ ನಾನು ಯಾರು (ರಾ ಗೌ ೨೯೮)

ಸುಟ್ಟ ಮಕದೊಳು ಸಂತೆಗೆ ಹೋದ್ಲು (ಸು ೪೭೨)

ಸಂತೆಗೆ ಹೋಗಣ್ಣ
ಚಿಂತೆ ಮಾಡ್ತಾ
ಬೆನ್ನು ತಟ್ತಾ
ಬೆಲೆ ಮಾಡ್ತಾ (ಸು ೪೬೦)
ಮಡಕೆ

ಗುಡಿ ಕರ್ರಗೆ ದೇವರು ಬೆಳ್ಳಗೆ (ಜೀಶಂಪ ೧೪೪)

ಗೂಡು ಕಪ್ಪು ಗುರುವು ಬಿಳುಪು (ಲ ಗೌ ೫೨೯)
ಮಡಕೆ–ಅನ್ನ

ಕರಿಯ ಗುಡಿ ಬಿಳಿಯ ದೇವರು
ಬೊಕ್ಕ ಪೂಜಾರಿಯವರು ಹೊಕ್ಕು ಪೂಜೆ ಮಾಡುತಾರೆ (ಲ ಗೌ ೪೦೧)
ಮಡಕೆ–ಅನ್ನ–ಸೌಟು

ಕಬ್ಬಗೆ ಕವಿದುಕೊಂಡಿದೆ
ಕೆಂಪಗೆ ಕಿಸಿದುಕೊಂಡಿದೆ
ನೆಗೆದುಬಂದು ಹೆಟ್ಟುತ್ತದೆ (ಲ ಗೌ ೩೮೭)
ಮಡಕೆ–ಬೆಂಕಿ–ಸೌಟು

ಸೂಜಿ ಗಾತ್ರದ ಮರ
ದಪ್ಪದೊಂದು ತೆಂಗಿನಕಾಯಿ
ಕೈಯಿಲ್ಲದವನು ಕಿತ್ತ
ನಾಲಗೆಯಿಲ್ಲದವನು ಅಗಿದ
ಅಂಗಳವಿಲ್ಲದವನು ನುಂಗಿದ
ಹೊಟ್ಟೆ ಇಲ್ಲದವನು ಪಳಾರ ಮಾಡಿದ (ಸು ೪೭೮)
ಮಡಕೆ ಮಾಡುವ ಚವಲುಗೆ

ಕರಿ ಕಲ್ಲಿನ ಮೇಲೆ ಬಿಳೀ ರಂಗೋಲೆ ಹಾಕಿ
ಪಟ್ಟಣದ ಸೂಳೆ ಪಗಡೆ ಆಡ್ತಾಳೆ (ಸು ೧೪೧)
ಮಡಕೆ, ಮೊಸರು, ಮಂತು

ಕರಿ ಹೊಲದಲ್ಲಿ ಬಿಳೀ ಧಾನ್ಯದ ಬಿತ್ತನೆ
ಬಿತ್ತೋದು ಕೈಯಲ್ಲಿ
ಹರಗೋದು ಬಾಯಲ್ಲಿ (ಸು ೧೮೩)
ಮಡಕೆಯಲ್ಲಿ ಬರುವ ಉಕ್ಕು

ತಾಳಿಲ್ದೆ ಮ್ಯಾಳಿಲ್ದೆ ಕುಣಿಯೋನ್ಯಾರ
ರುಚಿ ಇಲ್ದೆ ಪಚಿ ಇಲ್ದೆ ಚೀಪೊನ್ಯಾರ
ಸಳಿ ಇಲ್ದೆ ಜರ ಇಲ್ದೆ ನಳ್ಳೇನ್ಯಾರ (ಮಂ ೧.೬–೩)
ಮಡಿವಾಳ

ಮಣಿ ಮ್ಯಾಲ ಮಣಿ
ಮಣಿ ಮ್ಯಾಲ ಕಂಬ
ಕಂಬದ ಎಡಬಲಕ ಎರಡ ದೀಪ
ದೀಪದ ಮ್ಯಾಲ ಬರಿ ಬಯಲು
ಮ್ಯಾಲ ಕರಿಹೊಲ ಹೊಲದಾಗೊಂದು ಹಾದಿ
ಹೊಲದ ತುಂಬಾ ಎಮ್ಮೆ ಮೈತಾವು (ಇ ೮೦೭)
ತುಟಿ, ಮೂಗು, ಕಣ್ಣು, ಹಣೆ, ತಲೆ, ಬೈತಲೆ, ಹೇನು

ತಕ್ಕಡೀಲಿ ತೂಗೋದಿಲ್ಲ
ಅಂಗ್ಡೀಲಿ ಮಾರೋದಿಲ್ಲ (ಮಂ ೨.೧–೧೮)
ಮಣ್ಣು

ಮುಕಳಿಲೆ ತಿಂದ
ಬಾಯಿಲೆ ಉಗಳ್ತೈತಿ (ಲಠೈ ಭಾಗ ೨–೫೮)
ಮದ್ದ

ಜಾಲ ಎಂಬ ಎತ್ತಿಗೆ ಮುನ್ನೂರು ಹಣೆ ಹಗ್ಗ (ಲ ಗೌ ೫೭೦)
ಮದ್ದಲೆ

ಅಟ್ಟ ಆರ್ಯಾಣದಾಗ
ಜುಟ್ಟಾ ಬಿಟಗೊಂಡ ಕೂತತಿ (ಲಠೈ ಭಾಗ ೫–೭)
ಮದಿ

ಕೂಗೋ ಹುಂಜನ್ನ ಕೊಳ್ಳೀಲಿ ಹೊಡೆದರೆ
ಆಲೂರು ತನಕ ಆಲಿ ಹೋಗುತ್ತದೆ (ಲ ಗೌ ೪೫೯)
ಮದ್ದಿನ ಬಾಣ

ಅಚ್ಯಕಟ್ಟು ಪಚ್ಯಗಟ್ಟು
ನೆತ್ತಿ ಮೇಲೆ ಮೂರು ಉತ್ರಾಣಿ ಕಟ್ಟು (ಲ ಗೌ ೨೦)
ಮದುವೆ ಬಾಸಿಗ

ಏರಿಮ್ಯಾಲೆ ಏಸಲಿಗೆ ಹುಟ್ಟಿ
ಏಸಲ್ಗೆ ವಂಬತ್ತು, ಕೂಸಲ್ಗೆ ಮೂವತ್ತು
ವೊಂಟು ವೊಡಿದರೆ ವೊಡೀಬೋದು
ವೊಡೀದೆ ವೋದ್ರೆ ನನ್ನಟ್ಟಿ ಕರ ಕಾಯಬೋದು (ಮಂ ೧.೨–೫)
ಮದುವೆ ಹೆಣ್ಣಿನ ದಂಡೆ

ಆಚೆ ದಿಡಗೀಲಿ ಒಂದು ತೆಕ್ಕೆ ಸೊಪ್ಪು
ಈಚೆ ದಿಡಗೀಲಿ ಒಂದು ತೆಕ್ಕೆ ಸೊಪ್ಪು (ಲ ಗೌ ೧೪೩)
ಮಧ್ಯೆ ಬೈತಲೆ, ಆಚೀಚೆ ಕೂದಲು

ಆರು ಬಿಡುವ ಮುಂಚೆ ಬಿಡೋದು ಯಾವುದು (ಲ ಗೌ ೧೫೮)

ಕಣ್ಣಿಲ್ಲ ಕಾಲಿಲ್ಲ ವಾಯುಕಿಂತ ವತ್ರ ಅದ (ಇ ೩೨೨)

ಗಾಳಿಗಿಂತ ಜೋರು ಓಡತೈತಿ
ಎಲ್ಲಾರಲ್ಲೂ ಇರತೈತಿ (ಇ ೪೬೮)

ಹಲ್ಲಿಲ್ಲದ ಹುಲ್ಲೇಕರ
ಬೇರಿಲ್ಲದ ಹುಲ್ಲ ಮೇಯುತ್ತೆ (ಜೀಶಂಪ ೨೭೪)
ಮನಸ್ಸು

ಎರಡು ಕಂಬ
ಕಂಬದ ಮೇಲೊಂದು ಗುಂಭ
ಗುಂಭದ ಮೇಲೊಂದು ಗೂಟ
ಗೂಟದ ಮೇಲೊಂದು ಬಂಡೆ
ಬಂಡೆಯ ಮೇಲೊಂದು ತ್ವಾಟ
ತ್ವಾಟದಲ್ಲಿ ಕುರಿ ಮೇಯ್ತದೆ (ರಾ ಗೌ ೧೦೯)

ಎರಡು ಓಡ
ಎರಡು ಮಾಡ
ಎರಡು ನೋಡ
ಎರಡು ಕೋಳ
ಒಂದು ಪಿಟಪಿಟ (ರಾ ಗೌ ೧೧೦)

ಏರು ಹೊತ್ತು ನಾಗಾಲಿ
ಇಳಿ ಹೊತ್ತು ಮುಗ್ಗಾಲಿ
ನೆತ್ತಿ ಹೊತ್ತು ಇಗ್ಗಾಲಿ (ಸು ೧೨೬)

ಒಂದ ಗಡಿಗಿ ಒಂಬತ್ತು ತೂತು (ಇ ೨೭೫)

ಮೊದಲು ನಾಲ್ಕು ಕಾಲಲ್ಲಿ ನಡೆಯುತ್ತೆ
ಆ ಮೇಲೆ ಎರಡು ಕಾಲಲ್ಲಿ ನಡೆಯುತ್ತೆ
ನಂತರ ಮೂರು ಕಾಲಲ್ಲಿ ನಡೆಯುತ್ತೆ
ಆಮೇಲೆ ಮಂದೀಮ್ಯಾಲೆ ಹೋಗುತ್ತೆ (ಇ ೮೮೬)

ನಡೆದು ಮುಂಜಾನೆ ನಾಲ್ಕು ಕಾಲ್ಗಳಿಂದ
ನಡೆಯುತ್ತ ಮಧ್ಯಾಹ್ನ ಕಾಲೆರಡರಿಂದ
ಚಲಿಸಿ ಸಂಜೆಯಲಿ ತಾ ಮೂರ್ಕಾಲ್ಗಳಿಂದ
ಬಳೆದಳಿವ ನಿಂತಿಳೆಯೊಳಾರವನು ಕಂದ (ಚಂ ಸೆ ೧೪೮೮)

ಬೆಳಗ್ಗೆ ನಾಕ್ಕಾಲು
ಮಧ್ಯಾಹ್ನ ಎರಡ್ಕಾಲು
ಸಂಜೆ ಮೂರ್ಕಾಲು (ಶಾಂ ನಾ ೪೬)

ಮುಂಜಾನೆ ನಾಲ್ಕು ಕಾಲು
ಮಧ್ಯಾಹ್ನ ಎರಡು ಕಾಲು
ಇಳಿ ಹೊತ್ತ ಮೂರು ಕಾಲು
ಊರಿನಡೆಯುವದು ಏನು (ವಾಲಿ ೪– ೪)
ಮನುಷ್ಯ

ಮುಂಜಾನೆ ನಾಕು ಕಾಲು
ಮಧ್ಯಾಹ್ನ ಎರಡು ಕಾಲು
ಸಂಜಿಕ ಮೂರು ಕಾಲು (ಇ ೮೬೮)
ಮನುಷ್ಯ (ಕೂಸು, ತರುಣ, ಮುದುಕ)

ಸಾವಿರ ರೂಪಾಯಿ ಸರಕು
ನೂರು ವರ್ಷದ ಫಸಲು
ಅರಿಬಿದ್ದ ಮ್ಯಾಲೆ ಕುಯ್ಯಲು (ಸು ೪೬೭)
ಮನುಷ್ಯ (ಹೆರಿಗೆಯಾದ ಮೇಲೆ ಹೊಕ್ಕುಳ ಬಳ್ಳಿಯನ್ನು ಕತ್ತರಿಸುತ್ತಾರೆ)

ಗಂಟುನೂರು ಗಜನೂರು
ಮಂಟಪನೂರು ಮನೆನೂರು
ಬಂಟನೀನಾದರೆ ತಿಳಿದ್ಹೇಳು (ಜೀಶಂಪ ೧೩೫ ಬಿ)

ಸಾಗರದಂಥ ಸಂಸಾರ
ಎಷ್ಟೊಂದೆಳೆದ್ರೂ ಎಟಕೋದಿಲ್ಲ (ರಾ ಗೌ ೪೪೩)
ಮನೆ

ಆನಿ ಸುಟ್ಟಿತು ಅದರ ತೊಡಿ ಉಳೀತು (ವಾಲಿ ೩–೧೨೧)
ಮನೆ, ಗೋಡೆ

ಆನೆ ಬೆಂದರೂ
ಆನೆ ತೊಡೆ ಬೇಯೊಲ್ಲ (ರಾ ಗೌ ೭೬)
ಮನೆ, ಗೋಡೆ

ಬಿದರೂರ ಹೆಣ್ಣಿಗಿ ಬೆನ್ನ ಕಡೆ ಮಲಿ (ಲಠೈ ಭಾಗ ೫–೨೨೦)
ಮರ

ತಲೆಯಿಲ್ಲದ ಅಜ್ಜ
ಊರಿಂದ ಊರಿಗೆ
ಪ್ರಯಾಣ ಮಾಡ್ತಾನೆ (ರಾ ಗೌ ೨೬೪)
ಮರದ ದಿಮ್ಮಿ

ಬೇಕಾದವನು ಕೊಂಡುಕೊಳ್ಳುವುದಿಲ್ಲ
ಕೊಂಡುಕೊಂಡವನು ಉಪಯೋಗಿಸುವುದಿಲ್ಲ (ಚಂ ಸೆ ೧೯೫)
ಮರಣದ ಪೆಟ್ಟಿಗೆ

ಬಂದರೆ ಬಾ ಮಂಚಾ ಏರು
ಮಲಿ ಹಿಡಿ ಸುಖಾಪಡಿ (ವಾಲಿ ೮–೧೭)
ಮರವೇರಿ ಹಣ್ಣು ತಿನ್ನುವದು

ಹಾಸಿಗಿ ಹಸ್ಯಾವ ಕಾಲ ಎತ್ತಾ ್ಯವ (ಇ ೧೦೭೦)
ಮರೆಳ್ಳ

ಇಬ್ಬನಿ ಮೇಲೆ ಕರು ಮಲಗಿದೆ (ಲ ಗೌ ೧೭೦)

ಇಬ್ಬನ್ನಿ ಮ್ಯಾಲ ಕರಾ ಮಲಗೇತಿ (ಲಠೈ ಭಾಗ ೫–೫೯)

ನುಲಕೊಂಡ್ ನುಲಕೊಂಡು ಬೀಳ್ತಾನೆ ನುಲಿಗೆ ಬೋರಣ್ಣ
ಅವ್ನ ನಮ್ಮಪ್ಪ್ನಾ ಮುಟ್ಟಲಾರ ನಿಮ್ಮಪ್ಪ್ನಾ ಮುಟ್ಟಲಾರ (ಲ ಗೌ ೭೦೨)
ಮಲ

ಮುಂದ ಹಳ್ಳ ಹಿಂದ ಗುಡ್ಡ (ಲಠೈ ಭಾಗ ೫–೨೫೧)
ಮಲ ಮೂತ್ರ

ಚಕ್ಕಲಿ ಇಟ್ಟು ಬಂದಿಯೋ
ಪಿಟ್ಲಾ ಹಾಕಿ ಬಂದಿಯೋ (ವಾಲಿ ೮–೫೬)
ಮಲ ವಿಸರ್ಜನೆ

ಹಸರು ತೋಟ್ದಲ್ಲಿ
ಮೊಸರು ಚೆಲ್ಲಿದೆ (ಜೀಶಂಪ ೨೭೫)
ಮಲ್ಲಿಗೆ

ಅತ್ತಲಿಂದಾ ಬಂದೇನಮ್ಮ
ಮುತ್ತಿನ ಡೇರೆ ಹೊಡದೇವಮ್ಮಾ
ಪಾಪಿ ಕೈಯಾಗ ಸಿಕ್ಕೇವಮ್ಮಾ
ಪರದೇಶ್ಯಾಗಿ ನಡೆದೇವಮ್ಮಾ (ಇ ೯೨)
ಮಲ್ಲಿಗೆ ಬಳ್ಳಿ ಹೂ

ಆಸ್ರು ಬೇಲಿಗೆ ಮೊಸ್ರು ಚೆಲ್ತು (ಮ.ಕ.) (ಮಂ ೨.೧–೭)

ಆಸ್ರು ಮೆಳೇಲಿ ಮೊಸ್ರು ಚೆಲ್ಲದ್ಹ (ಮೈ.ಕ.) (ಮಂ ೨.೧–೮)

ಗಿಡ ಗಿಡಕ ಮಸರು ಚೆಲ್ಲೈತಿ (ಇ ೪೭೪)

ಹಸುರು ಗಿಡದ ಮೇಲೆ ಮೊಸರು ಚೆಲ್ಲಿದೆ (ಚಂ ಸೆ ೨೪೧)

ಹಸರು ಹಚ್ಚಡದಾಗ ಮೊಸರು ಚೆಲ್ಲೈತಿ (ಇ ೧೦೩೩)

ಮಲ್ಲಿಗೆ ಹೂ
ಅದು ಬಲು ಹಸ
ಅದರ ತೂತು ಬಲು ತುಸ (ಲ ಗೌ ೫೫)

ಗಿಡದ ಸುತ್ತಲೂ ಮೊಸರು ಚೆಲ್ಲಿದೆ (ಲ ಗೌ ೫೧೩)

ನೀನು ಬಾಳ ಹಸ ನಿನ್ನ ತೂತು ಬಾಳ ತುಸ (ಇ ೬೬೭)

ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ (ಲ ಗೌ ೧೦೦೮)

ಹಸಿರು ಹೆಣ್ಣಿಗೆ ಬಿಳೀ ಗೆಜ್ಜೆ (ಲ ಗೌ ೧೦೧೨)
ಮಲ್ಲಿಗೆ ಹೂವು

ಹಸರ ಗಿಡದ ಮ್ಯಾಲ ಮಸರ ಚೆಲ್ಲಾ ್ಯದ (ವಾಲಿ ೧–೧೦೫)
ಮಲ್ಲಿಗೆ ಹೂವು ಇಲ್ಲವೆ ಬಿರಿದರಳಿದ ಹತ್ತಿ

ಮನಿಗುಂದ್ಗುಲ್ಲಗ್ತೆ (ಶಾಂ ನಾ ೩೮೦)
ಮಸರೆ

ನಾರಾಯಣ ಕಟ್ಟಿದ ಕೊಳ
ನಾಲ್ಕು ಮೂಲೆ ಚೌಕ
ನುಗ್ಗಬಹುದು
ಬರಾಕಾಗುವುದಿಲ್ಲ (ರಾ ಗೌ ೩೦೦)
ಮಸಾಣ (ಗುದ್ದ)

ಕಟ್ಟಾ ್ಯಣೋ ಕಟಗೋಲ್ಲೋ
ಪಟಿಮುತ್ತ ಇಟಗೋಲ್ಯೋ
ಹೊನ್ನ ಚೆನ್ನ ನಮ್ಮಣ್ಣನ ಮನಿಂದ ತರಲ್ಯೋ
ಅಲ್ಲೇ ಎಲ್ಲಾರ ಅಡಕಲ ಗಡಿಗ್ಯಾಗ ಇದ್ದೀತ ನೋಡ (ಇ ೩೧೨)
ಮಸಿ ಅರಬಿ

ಸೊಸೆ ಮುದ್ದೆ ಸುಗುಮಣಿಯೆ
ಲಿಂಗ್ ಮುದ್ರಿ ಕಲ್ಲೆಲ್ಲಿಟಿದಿ?
ಕಾಯಲ್ಲ ಕಡಿಯಾಕೆ ಹೂವಲ್ಲ ಮುಡಿಯೋಕೆ
ಅಲ್ಲೇ ಎಲ್ಯಾರ ಇದ್ದೀತು ನೋಡು (ಲ ಗೌ ೯೬೪)
ಮಸಿ ಅರಿವೆ

ವಟಗೀ ಪಾವಡ ಎಲ್ಲೆಟ್ಟೀಯೆ
ಎಂದು ಅತ್ತೆ ಕೇಳಿದ್ರೆ
ಅದು ಕಾಯಿಯೆ ಕಡಿಯಲೇ
ಹೂವೇ ಮುಡಿಯಲೇ
ಕಟ್ಟಾಣೆ ಸರವೇ ಕೊರಳಲ್ಲಿ ಕಟ್ಟಿಕೊಳ್ಳಲೇ
ಎಂದು ಸೊಸೆ ಹೇಳಿದಳಂತೆ
ಏನದು (ಇ ೯೧೪)
ಮಸಿ ಬಟ್ಟೆ

ಅಂತಪ್ಪನ ಮಗಳು
ಅಂತರಲೆ ಉಚ್ಚಿ ಹೊಯ್ತಾಳ (ಇ ೮೬)

ಗುಡಗುಡಾ ಆಂತು
ಗುಟ್ಟೀಲಿ ಮೊಟ್ಟೆ ಇಕ್ಕು
ಕಾನಕಾನಹಳ್ಳಿ ತಾವ ಕಾವೆ ಇಕ್ಕು
ಶ್ರೀರಂಗಪಟ್ಟಣದ ಹತ್ರ ಮರಿ ಮಾಡ್ತು (ಸು ೨೫೩)

ಗುಡಗುಡಾ ಆಂತು
ಗುಟ್ಟೀಲಿ ಮೊಟ್ಟೆ ಇಕ್ಕು
ಮದ್ದೂರ ತಾವ ಮರಿ ಮಾಡ್ತು
ಆನೆಕಲ್ಲು ತಾವ ಕಾಲು ಬಿತ್ತು (ಸು ೨೫೨)

ಚಿಕ್ಕ ಚಿಕ್ಕ ಚಿಣ್ ಮಿಣಕಿ ಬಂದೋಯ್ತು
ಬಂದೋಗ ಬಾಯ್ಬೀಗ ನಾಡ್‌ಮ್ಯಾಲೆ (ಮಂ ೨.೧–೧೬)

ತಲಕಾಡಿನಲ್ಲಿ ಕ್ಯಾಕರಿಸಿ
ಬೆಳಕವಾಡಿಯಲ್ಲಿ ಮೊಟ್ಟೆ ಇಟ್ಟು
ಶ್ರೀರಂಗಪಟ್ಟಣದಲ್ಲಿ ಮರಿ ಮಾಡಿತು (ಸು ೨೯೩)

ನೆಲದಗಲ ಕೂರಿಗಿ
ಮುಗಿಲಗಲ ಬಟ್ಟಲ
ಬಿತ್ತೋದ ಕಾಣುದುಲ್ಲ
ಭೂಮಿತುಂಬ ಬೀಜ (ಲಠ್ಠೆ ಭಾಗ ೨–೪೭)

ನೆಲದ ಮ್ಯಾಲ ಕೂರಿಗಿ
ಮುಗಿಲ್ಯಾಗ ಶೆಡ್ಡಿ ಬಟ್ಲಾ
ಬಿತ್ತುದು ಕಾಣುದಿಲ್ಲ
ಭೂಮಿ ತುಂಬ ಬೀಜ ಮಾತ್ರ ಕಾಣತಾವು (ಇ ೬೮೬)

ಬಾ ಅಂದ್ರೆ ಬತ್ತಿಲ್ಲೆ ಹೋಗು ಅಂದ್ರೆ ಹೋಗ್ತಿಲ್ಲೆ (ಶಾಂ ನಾ ೧೭)

ಹಳ್ಳದ ಹಂದಿ ಬೆಟ್ಟಕ್ಕೇರಿ
ದಾಡೆ ಮಸೆದು ಬಾಲ ಬೀಸಿ
ಡುರುಗುಟ್ಟಿದರೆ ಎಲ್ಲೆಲ್ಲೂ ಮುತ್ತು ಸುರಿದೀತು (ಚಂ ಸೆ ೨೪೮)

ಮಳೆ

ತಂದಿ ಮದುವ್ಯಾಗ ಮಗ ದೀಪ ಹಚ್ಚಾ್ಯನ
ಮಳೆ, ಮಿಂಚು (ವಾಲಿ ೧–೨೫)

ನೆಲದಗಲ ಕೂರಿಗೆ
ಮುಗಿಲಗಲ ಬಟ್ಟಲು
ಬಿತ್ತೋದು ಕಾಣಲ್ಲ
ಭೂಮಿ ತುಂಬ ಬೀಜ ಮಾತ್ರ ಇಟ್ಟಾಡ್ತವೆ (ಸು ೩೫೦)
ಮಳೆಹನಿ

ಮುಗಲ ಮ್ಯಾಲ ಸೆಡ್ಡಿ
ನೆಲದ ಮ್ಯಾಲ ಕೂರಿಗಿ
ಬಿತ್ತೂದು ಕಾಣೂದಿಲ್ಲ
ಬೀಜ ಮಾತ್ರ ಭೂಮಿ ಮ್ಯಾಲ ಕಾಣತಾವ
ಮಳೆ ಹೊಯ್ಯುವದು (ವಾಲಿ ೧–೫೭)

ಪಾತರದವ ಮನಿಗಿ
ದೋತರದವರು ಹೋದರ
ಯಾತರ ಮ್ಯಾಲ ಕೂಡತಾರ (ವಾಲಿ ೮–೩೦)
ಮಾತಿನ ಮ್ಯಾಲ

ಪಾತರದಾಕೀನ ಯಾತರ ಮ್ಯಾಲೆ ಕುಂಡ್ರಿಸಿಗೊಂತಿ (ಇ ೭೦೨)
ಮಾತಿನ ಮ್ಯಾಲೆ

ಬಡಗಿ ಮಾಡದ ಮನೆ
ಬಾಚಿ ಕೆತ್ತದ ಮನೆ
ಅಂಬರದ ನನ್ನ ಅರಮನೆ (ವಾಲಿ ೪–೬)
ಮಾನವ ದೇಹ

ಊರಿಂದೂರಿಗೆ ಹೋಗುತ್ತಿದ್ದರೂ ನಿಂತಲ್ಲೇ ಇರುವೆನು (ಚಂ ಸೆ ೪೬)
ಮಾರ್ಗ

ಅಂತರದಲ್ಲಿ ಆಡೋ ಹುಡುಗ
ಚೊಂಬು ತಕ್ಕೊಂಡು ತೂಗೋ ಹುಡುಗ
ಹಿಟ್ಟಾಯ್ತಲೇ ಬಾರೊ ಪುಟ್ಟ ಹುಡುಗ (ಲ ಗೌ ೧೧೭)

ಅಂಬಾರದಲ್ಲಾಡೊ ಗಿಣಿ
ಹಿಟ್ಟಿಗೆ ಬಾರೊ ಪುಟ್ಟನಂಜ (ಜೀಶಂಪ ೨೯)

ಅಂಬಾರ್ದಲ್ಲಾಡೊ ಹುಡ್ಗ
ಚೆಂಬ್‌ತಗಂಡ್ ತೂಗೋಹುಡ್ಗ
ಉಣ್ಣೊಣಹೊತ್ತಿಗೆ ಬಾರೊಹುಡ್ಗ (ಜೀಶಂಪ ೧೪)

ಗುಡ್ಡದ ಮ್ಯಾಲಿನ ಗುರುಸಿದ್ದವ್ವ
ವರಸಿಗೊಮ್ಮೆ ಕರಸಿದ್ದವ್ವ (ಲತ್ಥೆ ಭಾಗ ೪–೯೪)

ಶಿವರಾತ್ರಿ ಹೊತ್ತಿಗೆ ಶಿವಲಿಂಗ (ರಾ ಗೌ ೪೩೨)

ಹಲ್ಲಗ ನನ ಹಾಟ ಹುಲ್ಲಾಗ ಗಿನಗಿಟ್ಟಿ
ಮೆಲ್ಲಾ ಯಾಳಿ ನೆನಪ ಬರತದ (ಲತ್ಥೆ ಭಾಗ ೪–೧೮೨)

ಹಸರ ಮೈ ಪಿಸರ ಬಾಯಿ
ಬಾಜಾರ್ದಾಗ ಕುಂತ ಬಾ ಬಾ ಅಂತಾನ (ಲತ್ಥೆ ಭಾಗ ೪–೧೯೪)

ಹಸರಂಗಿ ಅಮಲ್ದಾರ ಗಿಣಿಮೂತಿ ಸುಬೇದಾರ
ಉಗಾದಿ ಹೊತ್ಗೆ ತಗಾದೆ ಬಂತು (ಸು ೪೯೭)

ಹಸರಂಗಿ ತೊಟ್ಟೈತಿ
ವರ್ಷಕ್ಕೊಮ್ಮೆ ಬರತೈತಿ
ಮುದ್ದು ಕೊಟ್ಟ ಹೋಗತೈತಿ (ಇ ೧೦೩೧೧)

ಹಸಿರು ಗಿಡದಾಗ ಗಿಳಿ ಜೋತಾಡತಾವು (ಇ ೧೦೪೯೯)

ಹಸುರಂಗಿ ಅಮಲ್ದಾರ
ಗಿಣಿಮಾತಿನ ದಫ್ಲೇದಾರ
ಯುಗಾದಿ ಮಾಡಿಕೊಂಡು
ತಗಾದಿಗೆ ಬರ್ತಾನೆ ಶೇಕದಾರ (ಇ ೧೦೩೨)

ಹೊಟ್ಟೇಲಿ ಗಡ್ಡ (ರಾ ಗೌ ೫೦೬)

ಮಾವಿನಕಾಯಿ

ಅಕ್ಕ ಅಕ್ಕಂತ ಬರ್ದಾರೆ
ಹುಲ್ಲೊಳ್ಗೆ ಬಿದ್ದು ಒದ್ದಾಡುವಾಗ ಬೇಕಾಗಿದ್ದೆ
ಗಡ್ಡ ಹಿಡ್ಕೊಂಡು ಮುದ್ದಾಡುವಾಗ ಬೇಕಾಗಿದ್ದೆ
ಈಗ್ಯಾಕೆ ನನ್ನ ಮಾತಾಡುಸ್ತಾರೆ (ಲ ಗೌ ೩)
ಮಾವಿನಮರ

ಬಾಗಿಲ ಮೇಲೆ ಗಿಳಿಗಳ ಸಾಲು (ಲ ಗೌ ೭೪೮)
ಮಾವಿನ ತೋರಣ

ತ್ವಾಟದಾಗ ತ್ವಾಟ ಯಾವ ತ್ವಾಟ (ಲಠೈ ಭಾಗ ೫–೧೬೮)
ಮಾವಿನ ತ್ವಾಟ

ಕೆಂಪಮಾರಿ ಹಂಪಣ್ಣ
ನೀ ಎಂದ ಬರತಿ
ಹಂಪಿ ಜಾತ್ರಿಗಿ ಬಂದ್ರ ಬಂದಿ
ಕಾರಹುಣ್ಣಿವಿಗಿ ಖಾಂ ಖಾಂ ಬರತಿ (ಲಠೈ ಭಾಗ ೪–೮೦)

ಹುಲ್ಲಾಗ ಹುಲಿ ಮಲಗೇತಿ (ಲಠೈ ಭಾಗ ೪–೨೦೭)
ಮಾವಿನ ಹಣ್ಣ

ಅಯ್ಯಯ್ಯ ಅಪ್ಪಯ್ಯ ಸುಂದರಕಿ ಕೆಂಪಯ್ಯ (ಲ ಗೌ ೭೧)

ಆಕಾಶಕ್ಕೆ ಅಪ್ಪಣ್ಣ ನೆಲಕ್ಕೆ ದುಪ್ಪಣ್ಣ
ಹಿಂಡಿ ಹಿಚಕಣ್ಣ ಮುಂಡಿ ಮಚಕಣ್ಣ (ಇ ೧೫೮)

ಆಗ ಮಾವ ಅಂದ್ನಿಲ್ಲ
ಈಗ ಮಾವ ಅಂದ್ನಿಲ್ಲ
ನನ್ನ ಶಾಟ ಬಂದು
ಅವರ ಹಲ್ಲಿಗೆ ಸಿಕ್ಕೊಂಡಾಗ
ಮಾವ ಅಂದ್ರು (ರಾ ಗೌ ೭೦)

ಕೈಲಿ ಛತ್ರಿ ತಲೆಗೆ ಕುಪ್ಪಾಲಿ
ಆಸ್ರು ಕವಚ ಪಟ್ಟೆ ವಸ್ತ್ರ ಹಾಕಂಡು
ಮೆದೆ ಅಡಿಲಿ ಮುದ್ದಾಡಾಗ
ಬೇಕಾಗಿದ್ದೆ ಈಗ್ಯಾಕೆ ಬೇಕಾಗಿದ್ದೇನು (ಮಂ ೧.೪–೪೨)

ಕೆಂಪಾನ ಕೆಂಪಿ
ಹಂಪಿ ಜಾತ್ರಿಯಿಂದ ಯಾವಾಗ ಬರಲೆ
ಆಗಿ ಹುಣ್ಣಿವೀಗೆ ತಯಾರಿಯಿಂದ ಬರ್ತೇನ (ಇ ೪೫೪)

ಬಾಜಾರದಾಗ ಕುಂತು ಬಾವಾ ಅಂತಾನ (ವಾಲಿ ೨–೪೩)

ಸರಗಂಟ ಸರಕ್ಕಂಡು
ಆಚೆಗಿಟ್ಟ ಬುಟ್ಟ (ಮಂ ೧.೪–೭೬)

ಸುತ್ತಲೂ ಬಾಗಿಲಿಲ್ಲ ಒಳಗಡೆ ಬೀಜ ಇದೆ (ಲ ಗೌ ೯೫೦)

ಹರೆಯಲ್ಲಿ ಹಸುರಾಗಿ
ನೆರೆಯಲ್ಲಿ ಕಿಸುವಾಗಿ
ಸುರರರಿಯದಮೃತವು ನರರಿಂಗೆ ದೊರೆತಿಹುದು
ಅಂತವರು ಈ ಒಗಟ ಬಿಚ್ಚಿ ಹೇಳಿ (ಇ ೧೦೨೦)

ಹಸರಂಗಿ ತೊಟ್ಟಾನ
ಹಳದಿ ಚಣ್ಣಾ ಉಟ್ಟಾನ
ವರಷಕ್ಕೊಮ್ಮೆ ಬರತಾನ
ಎಲ್ಲರ ಮನಿ ಹೊಕ್ಕಾನ
ಗಡ್ಡಾ ಸೀಪಾಕ ಹಚ್ಚಾ್ಯನ (ಇ ೧೦೩೯)

ಹಸಿರ ಅಂಗಿಯವ
ಪಿಸರ ಕಣ್ಣಿನವ
ಹಸುರು ಅಮಲ್ದಾರ ಗಿಣಿಮೂತಿ ಸುಭೇದಾರ
ಯುಗಾದಿ ಬಂದರೆ ತಗಾದೆ ಮಾಡ್ತಾನೆ (ಚಂ ಸೆ ೨೪೩)

ಹುಡುಗೀಲಿ ಹಸುರು
ಪ್ರಾಯದಲ್ಲಿ ಹಳದಿ
ಮುದಿಕಿಯಾದಮೇಲೆ ಕೆಂಪು (ಇ ೧೦೯೩)
ಮಾವಿನ ಹಣ್ಣು

ಒಳ ಸೀ
ಹೊರ ಸೀ
ಎಲ್ಲಾ ಸೀ (ಲ ಗೌ ೨೮೭)
ಮಾವಿನಹಣ್ಣು, ಖರ್ಜೂರ, ಕಲ್ಲುಸಕ್ಕರೆ

ಹಸಿರು ಶಾಲಿನೋನು
ಚೂಪು ಮೂಗ್ನೋನು
ಬಟ್ಟಾಣಿ ಮೊಕದೋನು (ರಾ ಗೌ ೪೮೨)
ಮಾವಿನ ಹೀಚು

ಅಂಬಾರದ್ಮೇಲೆ ಆಡೋಪೊರಾ
ತುಂಬಾಲೆ ಕಟ್ಕಂಡ್ ತೂಗೋಪೊರಾ
ಉಂಬೂಲ್ಬಾರೋ ಮಿಡಿಪೊರಾ (ಶಾಂ ನಾ ೨೩೧)

ಹಸಂಗಿ ಬಾವಾ ಯಾವಗ್ಬತ್ತೆ
ಶಿವರಾತ್ರಿ ಮುಗಿಸಿ ನಿಮ್ಮೂರಿಗ್ಬೆತ್ತೆ (ಶಾಂ ನಾ ೨೩೨)
ಮಾವಿನ್ಮಿಡಿ

ಸಿಟ್ ಸಿಟ್ ಸೀರೆ ಉಟ್ಕಂಡಿ ಸಿಗ್ರ್ ದೆಲಿ ಕೊಯ್ತುದೆ (ಶಾಂ ನಾ ೬)
ಮಿಗಾ

ಹೊಡಿಯಾಕಿಲ್ಲ ಬಡಿಯಾಕಿಲ್ಲ ಕೂಯಾಕಿಲ್ಲ ಕೊರಿಯಾಕಿಲ್ಲ (ಲ ಗೌ ೧೦೭೪)
ಮಾಸು

ಹರಿಯೊ ನೀರ್ ಅಯ್ ಬ್ಯಾಡ
ನಿಂತ ನೀರ್ ಮೊಗಿ ಬ್ಯಾಡ
ನೀರಿಲ್ದ್ ಮನ್ಸ ಬರಬ್ಯಾಡ ಅಂದ ಒಬ್ಬ
ಇನ್ನೊಬ್ಬ ಹುಡುಗ್ನು
ಜೀಮುದ್ಕಿಕ ವಡಿಬ್ಯಾಡ
ಸತ್ತಮಿಕ ತರಬ್ಯಾಡ
ಬಾಡಿಲ್ದ್ ಮನೀಣ್ ಬರಬ್ಯಾಡ ಅಂದ
ಅಂದ್ರ ಆಂಗಂದ್ರಯ್ಯಾನಾ (ಮಂ ೧.೪–೮೬)
ಮಾಸ್ಲು, ಕಸ, ನೀರು, ಎಳ್ನೀರು

ಮಾವತೂರು ಕೆರೆ ಹಿಂದೆ
ಕಾಲು ಮಡೆ ಹಾಕ್ಕೊಂಡು
ಮೇಯೋ ಪಕ್ಷಿ ಹೆಸರ್ನ ಹೇಳೀದೋರಿಗೆ
ಆರು ಸುತ್ತಿನ ಅಡಿಕೆ ತೋಟ
ಮೂರು ಸುತ್ತಿನ ಬಾಳೆ ತೋಟ
ಮಧುಗಿರಿ ಮಾನ್ಯ
ಚಿನ್ನಗಿರಿ ಚೀನ್ಯ
ಮಲಗೋಕೆ ಮಂಚ
ಮಗ್ಗುಲಿಗೆ ಸೂಳೆ
ಕುಡಿಯೋಕೆ ಗಿಂಡಿ
ಕರೆಯೋಕೆ ಹಸ (ಸು ೪೦೮)
ಮಿಡತೆ

ಪೊಣರ್ ವೆಂಕಟಯ್ಯ ಉಬ್ಬೆ ಕ ೃಷ್ಣಯ್ಯ
ಕೆಂಪಿನ ಬನಾತ್ಲ ಗುರುಲಿಂಗ ದೇವರು (ಲ ಗೌ ೭೩೩)
ಮಿಡತೆ–ಕೂರೆ–ತಿಗಣೆ

ಅತ್ತಿಂದ ಬಂದು ತೆಕ್ಕೆ ಮಡಿಸಿಕೊಂಡು ಕೂತ್ಕೊಂತು (ಸು ೨೯)
ಮಿಣಿ

ಬಿಸಿಲ್ಗೆ ಬಿರಕತ್ತು (ಮಂ ೧.೪–೬೦)

ಭತ್ತಕ್ಕ ಬಿರಿಯ (ಮಂ ೧.೪–೬೪)
ಮಿಣಿಕೆಹಣ್ಣು

ಹೊಳಿ ಬಾಳಿ ಕಾಯ (ಶಾಂ ನಾ ೬೪)
ಮೀನ

ಒಂದ ಆಡ್ತದ
ಒಂದ ಕುಂಡ್ರತದ
ಒಂದ ಓಡ್ತದ (ಲಠ್ಠೆ ಭಾಗ ೨–೧೯)
ಮೀನ, ಉಸಕ, ನೀರ(ಹರ್ಯೋಹಳ್ಳ)

ಒಂದು ಆಡತೈತಿ
ಒಂದು ಓಡತೈತಿ
ಒಂದು ನಿಂತು ನೋಡತೈತಿ (ಇ ೨೯೨)
ಮೀನ, ನೀರು, ಕಲ್ಲು

ಸುತ್ತಿಸುತ್ತಿ ಬರಬ್ಯಾಡ ನನಗಾಗಿ
ಮ್ಯಾಲೊಬ್ಬ ಕುಂತಾನ ನಿನಗಾಗಿ (ಲಠ್ಠೆ ಭಾಗ ೩–೭೦)
ಮೀನ, ಮೀನಗಾರ

ಅಡ್ಡ ಬೆಟ್ಟದಿಂದ ಒಂದು
ಅಚ್ಚೆ ತಂದು ಮುನ್ನೂರು ಸಿವುರ್ ಮಾಡಿ
ಇಂದ್ಲಟ್ಟಿ ಕಟ್ಟಿ ಮುಂದ್ಲ ತೊಟ್ಟಿ ತಿರುಗ್ಸಿ
ಬಂದ್ ಬಂದ್ ಸೂಳೇರೆಲ್ಲಾ
ಅಲ್ಲಿ ನ್ಯಾಣ ಹಾಕತಾವ್ರೆ (ಮಂ ೧.೪–೮)
ಮೀನಿನ ಕೊಡಬೆ

ಅಂತರಗಂಗೆ ಚಿಂತರ ಮೂಕಿ
ಬೆಸ್ತ ಬತ್ತಾನೆ ಹಿಂದುರುಗು (ಲ ಗೌ ೧೨೫)

ಒಂದು ಕೀರೆ ಬೀಜಕ್ಕೆ ಎಂಟನೂರು ಹೆಜ್ಜೆ
ಹಾಗಲಕಾಯಿ ಬೀಗ ಹಾಕಿ
ಬೂದಗುಂಬಳಕಾಯಿ ದಿಬ್ಣಹಾಕಿ
ಅದ ಒಡಚಿದವನಿಗೆ
ಆರುಮಣ ಕಜ್ಜಾಯ
ಮೂರುಮಣ ಜೇನುತುಪ್ಪ (ಜೀಶಂಪ ೧೦೨)

ಒಂದೋಳು ಉಳ್ಳಿಕಾಳು
ನಮ್ಮಪ್ಪನೂ ತಿನ್ನಕ್ಕಾಗಲ್ಲ
ನಿಮ್ಮವ್ವನೂ ತಿನ್ನಕ್ಕಾಗಲ್ಲ (ಮಂ ೨.೨-೯)

ಚಿಕ್ಕಹುಡುಗಿ ಚಿಣಮಿಣಿ
ರೆಕ್ಕೆ ಉಂಟು ರಾಮಬಾಣ (ಜೀಶಂಪ ೧೪೯)

ತಾತಾಗರಿ ತಾಮ್ರದ ಗರಿ
ನೀರಾಗ ಬಿಟ್ಟರ ತೇಲದ ಗರಿ
ಹೊರಗ ಬಂದರ ಬದುಕದ ಗರಿ (ಇ ೫೭೩)

ಮಣಿಯ ಮಾಡಿದವನೊಬ್ಬ
ಹೆಣೆದು ಕಟ್ಟಿದವನೊಬ್ಬ
ಸತ್ತವನನ್ನು ಸಂತೆಯಲ್ಲಿ ಮಾರುವವನೊಬ್ಬ (ಇ ೮೦೬)

ಸತ್ತ ಮುದುಕೀನ
ಸಂತೆಗೆ ಹೊತ್ಕೊಂಡ್ಹೋದ್ರು (ರಾ ಗೌ ೪೩೭)

ಸತ್ತರೂ ಮಿಣಿಮಿಣಿ ಇದ್ರೂ ಮಿಣಿಮಿಣಿ (ಲ ಗೌ ೯೦೭)

ಸತ್ತೆಣ ಸಂತೆಗ್ಹೋಯ್ತದೆ (ಜೀಶಂಪ ೨೪೯)
ಮೀನು

ಸತ್‌ಮೊಲ ತರಬ್ಯಾಡ
ಜೀವದ ಮೊಲ ಹೊಡೀಬ್ಯಾಡ
ಬಾಡಿಲ್ಲದೆ ಮನೆಗೆ ಬರಬ್ಯಾಡ
ನಿಂತಿದ್ದ ನೀರ ಸೇದಬ್ಯಾಡ
ಹರಿಯೋ ನೀರ ಮೊಗೀಬ್ಯಾಡ
ನೀರಿಲ್ಲದೆ ಮನೆಗೆ ಬರಬ್ಯಾಡ (ಸು ೪೫೬)
ಮೀನು, ಎಳನೀರು

ವೆಂಕಪ್ಪಯ್ಯನ ತೋಟ ಎಮ್ಮನೂರ ಗೂಟ
ಹೋಗೋಕೆ ದಾರಿಯಿದೆ ಬರೋಕಿಲ್ಲ (ಲ ಗೌ ೮೯೯)
ಮೀನು ಕುಣಿ

ಮಣಿ ಮಾಡಿದವನೊಬ್ಬ
ಹೆಣೆದು ಕೊಟ್ಟವನೊಬ್ಬ
ಸತ್ತವ್ನ ಸಂತ್ಯಾಗ ಮಾರುವವನೊಬ್ಬ (ವಾಲಿ ೬–೫೧)
ಮೀನುಗಾರ

ಆಡುವದು ಒಂದು ಓಡುವದು ಇನ್ನೊಂದು
ನಿಂತು ನೋಡುವದು ಮತ್ತೊಂದು (ಲ ಗೌ ೧೪೫೫)
ಮೀನು–ನೀರು–ಕೂಳಿ

ಅಪ್ಪಯ್ಯನ ತೋಟಕ್ಕೆ ಇಪ್ಪತ್ತೊಂದು ಬೀಗ
ಹೋಗೋಕೆ ಸದರ ಬರೋಕೆ ಬಂಡಾಟ (ಲ ಗೌ ೬೨)
ಮೀನು ಹಿಡಿಯುವ ಕೂಳಿ

ಹಿಡಿದ್ರ ಹಿಡಿಕಿ ತುಂಬಾ
ಬಿಟ್ಟರ ಬಯಲು ತುಂಬಾ
ಸದ್ದು ಮಾಡದೇ ಸೆರೆ ಹಿಡಿದು
ಒಡೆಯಗ ಕೊಡತೈತಿ
ಮೀನು ಹಿಡಿಯುವ ಕ್ರಿಯೆ (ವಾಲಿ ೧–೫೧)

ಮಳ್ಳಗಳ ಸೂಳೆ
ಮರದ ಮ್ಯಾಗಳ ಮಿಂಡ
ಚಿಕ್ಕನಾಯ್ಕನಹಳ್ಳಿ ಗೆಣೆಕಾರ (ಸು ೪೦೩)
ಮೀನು, ಹುಣಸೇಹಣ್ಣು, ತೆಂಗಿನಕಾಯಿ

ಗಂಟು ಗಂಟು ಒಡಕಿನ ಗಂಟು
ಗೆಜ್ಜೆ ನಳ್ಳಿ ನುಗ್ಗೆ ಮರ
ಹೆಸರು ಹೇಳಿದವನಿಗೆ ಮೊಸರು ಅನ್ನ (ಲ ಗೌ ೫೦೬)

ಹಿಡಿದರೆ ಮುದ್ದೆಯಾಗುವುದು
ಬಿಟ್ಟರೆ ನೂರಡಿಯಾಗುವುದು
ಪಾತಾಳಕ್ಕೆ ಹೋಗುವುದು
ಪಕ್ಷಿಯನು ತರುವುದು
ತಾನೂ ತಿನ್ನದೆ ಪರರಿಗೆ ಕೊಡುವುದು (ಲ ಗೌ ೧೦೫೦)
ಮೀನಿನ ಬಲೆ

ರಾಜಗಿರಿ ಬೆಟ್ಟದ ಮ್ಯಾಲೆ
ಸೂಜಗಿರಿ ಹುಲ್ಲು ಹುಟ್ಟಿ
ರೆಕ್ಕೆ ಇಲ್ಲದ ಪಕ್ಷಿ ಬಂದು
ನೆಕ್ಕೊಂಡು ಹೋಯ್ತು (ಸು ೪೩೯)
ಮೀಸೆ, ಕತ್ತಿ

ಹಾಸಗಲ್ಲ ಹಂಪಗಲ್ಲ
ದೇಶಕೆಲ್ಲಾ ಒಂದಾ ಕಲ್ಲ (ಲಠೈ ಭಾಗ ೨–೬೬)
ಮುಗಲ

ನೀಲಿ ಕೆರ್ಯಾಗ
ಬಿಳಿ ಕಮಲ (ಲಠೈ ಭಾಗ ೨–೪೫)
ಮುಗಿಲ

ಅಮ್ಮನ ಚಾಪಿ ಸುತ್ತಾಕ ಬರೋದಿಲ್ಲ
ಅಜ್ಜನ ರೊಕ್ಕಾ ಎಣಸಾಕ ಬರೋದಿಲ್ಲ (ಲಠೈ ಭಾಗ ೨–೨)

ಅವ್ವನ ಸೀರಿ ಮಡಚಾಕಾಗುದಿಲ್ಲ
ಅಪ್ಪನ ರೊಕ್ಕಾ ಎಣಸಾಕಾಗುದಿಲ್ಲ (ಲಠೈ ಭಾಗ ೨–೩)
ಮುಗಿಲ ಚಿಕ್ಕಿ

ಸುಣ್ಣದ ಗುಡಿ ಸುತ್ತಲಾರ
ಹುನಚಿ ಕಪ್ಪಾ ಎಣಿಸಲಾರ
ಕಲಕ ನೀರ ಕುಡಿಲಾರ
ಬೆತ್ತಿನ ಛಡಿ ಹಿಡಿಲಾರ
ನೆಗ್ಗಿನ ಮುಳ್ಳ ತುಳಿಲಾರ
ಹಂಡೆತ್ತಿಗಿ ಮುಟ್ಟ ಹಚ್ಚಲಾರ (ಲಠೈ ಭಾಗ ೨–೬೧)
ಮುಗಿಲ, ಚಿಕ್ಕಿ, ರಕ್ತ, ಹಾವ, ಚೇಳ, ಹುಲಿ.

ಸುಣ್ಣದ ಗುಡಿ ಸುತ್ತಲಾರದ್ದು
ಬಣ್ಣದ ಬಡಗಿ ಹಿಡಿಲಾರದ್ದು
ಹವಳಾ ಮುತ್ತು ಎಣಿಸಲಾರದ್ದು
ನೆಗ್ಗಲ ಮುಳ್ಳು ತುಳಿಲಾರದ್ದು (ಲಠೈ ಭಾಗ ೩–೬೨)
ಮುಗಿಲ, ಮಿಂಚ, ಚುಕ್ಕಿ, ಚೇಳ

ಯಾವುದ ದೇಶದ ಮ್ಯಾಲಾದ್ರೂ
ಒಂದ ಹಾಸು ಗಲ್ಲು ಅಂತರಲೆ ನಿಂತೈತಿ (ಇ ೯೦೩)
ಮುಗಿಲು

ಹಾಳಗೋಡಿ ಸಾರಿಸಲಿಕ್ಕೆ ಆಗೂದಿಲ್ಲ
ಹುಂಚಿಪಕ್ಕ ಎಣಿಸಾಕ ಆಗೂದಿಲ್ಲ (ಇ ೧೧೨೫)
ಮುಗಿಲು ಚಿಕ್ಕೆ

ಸುಣ್ಣದ ಗುಡಿ ಸುತ್ತಲಾರೆ
ಹುಣಚೀ ಕೊಪ್ಪ ಎಣಿಸಲಾರೆ
ಬೆತ್ತದ ಬಡಿಗಿ ಹಿಡಿಯಲಾರೆ
ನೆಗ್ಗಿ ಮುಳ್ಳ ತುಳಿಯಲಾರೆ
ಕಲಕ ನೀರು ಕುಡಿಯಲಾರೆ
ಬೆತ್ತಿನ ಛಡಿ ಹಿಡಿಯಲಾರೆ
ಹಂಡತ್ತಿಗೆ ಮುತ್ತ ಹಚ್ಚಲಾರೆ (ಇ ೯೫೨)
ಮುಗಿಲು, ಚಿಕ್ಕೆ, ಹಾವು, ಜೇಳು, ಸಿಡಿಲು, ರಕ್ತ, ಹುಲಿ

ಅಟ್ಟರ ಅನ್ನಲ್ಲ
ಕುಟ್ಟಿದ್ರ ತವಡಲ್ಲ
ಒಡದ್ರ ಬೆಲೆಯಿಲ್ಲ (ಲಠೈ ಭಾಗ ೫–೮)

ಅಟ್ರ ಅನ್ನಲ್ಲ
ಕುಟ್ಟಿದರ ತೌಡಲ್ಲ
ಒಡದ್ರ ಬೆಲಿಯಿಲ್ಲ (ಇ ೫೩)

ನೀರಲ್ಲಿ ನೆನೆಯದ ತೆನೆಯಿರದ ಕಾಳು
ಸೇರಿನಿಂದಳೆಯದ ಬೀಸದೀ ಕಾಳು
ಜಗವು ಹಾರೈಸುವುದು ಹಣಕೊಂದು ಕಾಳು
ಬೆಲೆಯುಳ್ಳ ಈ ಕಾಳು ಯಾವದೆಂಬುದ ಹೇಳು (ವಾಲಿ ೧–೨೮)

ನೀರಿನಲ್ಲಿ ನೆನೆಯದ ತೆನೆಯಿರದ ಕಾಳು
ಸೇರಿನಿಂದಳೆಯದ ಬೀಸಲಾರದ ಕಾಳು
ದೇಶವಾರಿಸುವುದು ಹಣಕೊಂದು ಕಾಳು
ಯಾರಿಗೆ ಗೊತ್ತಿಲ್ಲ ನಾರಿಯರ ಬಾಳು (ಚಂ ಸೆ ೧೬೪)
ಮುತ್ತು

ಸರದಾಗ ಸರ ಯಾವ ಸರ (ಲಠೈ ಭಾಗ ೫–೨೭೨)
ಮುತ್ತಿನ ಸರ

ಬಂದವನು ಬೇಡ
ಬರದೆ ಇದ್ದವನು ಬೇಡ
ಬರುತ್ತಾ ಇರುವವನು ಬೇಕು (ಲ ಗೌ ೭೪೬)
ಮುದುಕ–ಮಗು–ಹುಡುಗ

ಬುಟ್ಟಿನ ಮರಕ್ಕೆ ಮೆಟ್ಲಿಲ್ಲ (ಲ ಗೌ ೭೮೧)
ಮುದ್ದೆ, ತತ್ತಿ

ಆಲೂರಲ್ಲಿ ಅರಸ ಬೇಲೂರ ಬಿರುಸ
ದುರುಗಿ ಬಾಗಿಲ ತೆರೆಸ ಅದಕೆ ಐದಾಳ ಕರೆಸ (ಲ ಗೌ ೧೬೦)
ಮುದ್ದೆ ತೆಗೆದು ಕಟ್ಟುವುದು

ಒಂದು ಚಿಣಚಿಗೆ
ಐದು ಚಿಣಿಚು (ರಾ ಗೌ ೧೫೧)
ಮುರಕಾಟಿ

ನಿನಗೆ ಗಟ್ಟಿ ನಿನ್ನ ಹೆಂಡತಿಗೆ ಪೊಳ್ಳು (ಲ ಗೌ ೬೮೧)
ಮುರಿ–ಕಡಗ

ಬಿಳಿ ಕುದುರೆಗೆ ಹಸುರು ಬಾಲ (ಚಂ ಸೆ ೧೮೪)
ಮುಲ್ಲಂಗಿ

ಅಂಗಡೀಲಿ ಕೂತ್ಕೊಂಡು
ಗೊಂಗಡಿ ಮುಸುಕು ಹಾಕ್ಕೊಂಡು
ನನ್ನೇ ನೋಡ್ತಾಳೆ ಗಂಗಮಾಳಿ (ಸು ೬೨)

ಮುದುಕನ ಕೋಳಿಗೆ
ಮುತ್ತು ಬಿಗಿದಿದೆ (ರಾ ಗೌ ೩೯೪)

ಸಾಲು ಸಾಲಿನ ಹಕ್ಕಿ
ಸಾವಿರಾರು ಹಕ್ಕಿ
ಎಣ್ಣೆ ಕಂಡರೆ ನಗುವ ಹಕ್ಕಿ (ರಾ ಗೌ ೪೪೬)

ಸಾವಿರ ಜನಕ್ಕೆ ಒಂದೇ ಜುಟ್ಟು (ಜೀಶಂಪ ೨೫೭)

ಹುಟ್ಟುತಲಿ ಬಟ್ಟೆಯನು ಉಟ್ಟು ಬರುತಿಹುದು
ಕಟ್ಟಿಗೆಯ ಬೆಂಕಿಯಲ್ಲಿ ಸುಡಿಸಿಕೊಳ್ಳುವುದು
ಸುಟ್ಟು ಕಡಿದರೆ ತಾವು ಸವಿಯು ದೊರೆಯುವುದು (ಲ ಗೌ ೧೦೫೯)
ಮುಸುಕಿನ ಜೋಳ

ಅಂಗಡೀಲಿ ಕುತ್ಕೊಂಡು
ಆಂಗ್ ಮುಸುಕು ಹಾಕ್ಕೊಂಡು
ನನ್ನಾ ್ಯಕ್ ನೋಡ್ತಿಯಾ ಭಾನ ಚೋತ್ (ಇ ೨೫)
ಮುಸ್ಕಿನ ಜೋಳ

ಜೋತ್ರದ ಮೇಲೆ ಜೋತ್ರ
ಒಳಗೆ ಮುಂಗೈ ಗಾತ್ರ (ಸು ೨೮೭)
ಮುಸುಗಿನ ಜೋಳ

ನಮ್ಮನ್ನ ಒತ್ತಿ ನಮ್ಮನ್ನ ಬಗ್ಗಿಸತೈತಿ (ಇ ೬೩೬)

ನಿನ್ನನ್ನು ಚುಚ್ಚುತ್ತೆ ನಿನ್ನನ್ನು ಬಗ್ಗಿಸುತ್ತೆ (ಲ ಗೌ ೬೮೦)

ನೆಲದಲ್ಲಿ ಹುಟ್ಟಿ ಬೆಳೆಯುವೆನು ಮರವಲ್ಲ
ಹೂವು ಕಾಯಿ ಬಿಡುವ ಗಿಡವಲ್ಲ
ನಡೆದು ಹೋಗುವವರಿಗೆ ಸುಖವಿಲ್ಲ (ಚಂ ಸೆ ೧೬೯)

ಬಚ್ಚಿಟ್ಟುಕೊಂಡಿರುತ್ತೆ
ಬಂದವರ ಕಾಲೆತ್ತಿಸುತ್ತೆ
ಬೆನ್ನು ಬಗ್ಗಿಸುತ್ತೆ (ಚಂ ಸೆ ೧೭೬)
ಮುಳ್ಳು

ನಮಗಾ ಮಾಡಿ
ನಮ್ಮನ್ನಾ ಬಗ್ಗಸತೈತಿ (ವಾಲಿ ೮–೯)
ಮುಳ್ಳು ಚುಚ್ಚುವುದು

ಕಿರುಮನೆ ಚಿನ್ನದ ಬೀಗ (ಜೀಶಂಪ ೧೨೯)
ಮೂಗತಿ

ಬಾಲಾ ಮುಂದ ಮಾಡಿಕೊಂಡ
ಹುತ್ತ ಸೇರತತಿ (ಲಠೈ ಭಾಗ ೫–೨೧೫)
ಮೂಗಬಟ್ಟ

ಚಿಕ್ಕ ಮನೆಗೆ ಚಿನ್ನದ ಬೀಗ (ಇ ೫೨೪)

ಮೂಗಬಟ್ಟು

ಚಿಕ್ಕ ಮನೆಗೆ ಚಿನ್ನದ ಬೀಗ (ಮಂ ೧.೨–೮)

ಮೋಟಾಲದ ಮರದ ಮ್ಯಾಲೆ
ದೀವಿಗೆ ಉರೀತದೆ (ಸು ೪೩೫)

ಸಣ್ಣ ಕೋಲಿನ ಮೇಲೆ
ಪಿಣ್ಣಕ್ಕಿ ಕೂತದೆ (ಸು ೪೫೨)

ಮೂಗುಬಟ್ಟು

ಮೋಟ್ ಹುಣಿಸೆಮರದ್ಮೇಲೆ
ದೀಪ ಉರೀತದೆ (ರಾ ಗೌ ೪೧೯)

ಮೂಗ್ಬಟ್ಟು

ಅಡ್ಡಗೋಡೆಯ ಮೇಲೆ ದೀಪ ಉರೀತಿದೆ (ಲ ಗೌ ೩೯)

ಅಡ್ಡಮರದಲ್ಲಿ ಮುಳ್ಳುಹಕ್ಕಿ (ಚಂ ಸೆ ೭)

ಉದ್ದ ಮರಕ ಕೊಡ್ಲಿ ಸಿಗಾಕೇತಿ (ಲಠೈ ಭಾಗ ೫–೬೯)

ಉದ್ದನೆ ಮರಕೆ ಕೊಡ್ಲಿ ಸಿಗಾಕೇತಿ (ಲ ಗೌ ೧೯೬)

ಚಿಕ್ಕ ಗೋಡೆಯ ಮೇಲೆ ಚಿನ್ನದ ದೀಪ (ಲ ಗೌ ೫೪೭)

ಚಿಕ್ಕ ಮನೆಗೆ ಚಿನ್ನದ ಬೀಗ (ಚಂ ಸೆ ೧೨೪)

ಚಿಕ್ಕ ಮನೆಗೆ ಚಿನ್ನದ ಬೀಜ (ಜೀಶಂಪ ೧೫೧)

ತಟ್ಟಂ ತುದೀಲಿ ಪುಟ್ಟಮ್ಮ ಕೂತವಳೆ (ಲ ಗೌ ೫೮೨)

ತುಂಡು ಗೋಡೆಯ ಮೇಲೆ ತುಂಬು ಚಂದ್ರ ಕೂತಿದ್ದಾನೆ (ಲ ಗೌ ೬೦೯)

ಪುಟ್ಟ ಮನೆಗೆ ಚಿನ್ನದ ಬೀಗ (ಇ ೭೦೩)

ಬಾಲಮುಂದಾಗಿ
ಬಿಲಕ್ಹೋಗುತದೆ (ಜೀಶಂಪ ೨೦೧)

ಬಂಗಾರದ ಗಿಣಿ ಬಾಗಿಲು ಕಾಯುತ್ತೆ (ಚಂ ಸೆ ೧೭೯)

ಹಸಿ ಮರಕ್ಕೆ ದಸಿ ಹೊಡೆದಿದೆ (ಲ ಗೌ ೧೧೯)

ಮೂಗುತಿ

ಧರೆ ಮೇಲೆ ಕುರ್ಕ ಕೂತದೆ (ಲ ಗೌ ೬೩೮)

ಪುಟ್ಟ ಗಂಡಗೆ ಪುಟ್ಟ ಹೆಂಡತಿ (ಲ ಗೌ ೭೨೯)

ಮೂಗು–ಮೂಗುತಿ

ಹಿತ್ತಲಲ್ಲಿ ಕುಣ್ಣಾಕಿ ಹಾಕಿ ನಿಮ್ಮ ಕಣ್ಣಿಗೆ ಕಾಣೋಲ್ಲ (ಲ ಗೌ ೧೦೫೪)

ಮೂಗಿನ ಕೂದಲು

ಕೆರೆ ಏರಿ ಕೆಳಗೆರಡು ಇಲಿ ಬೆಲ (ಸು ೨೨೩)

ಮೂಗಿನ ಕಂಬ ಮತ್ತು ಹೊಳ್ಳೆಗಳು

ಒಬ್ಬಳು ಅಜ್ಜಿಯ ಮೈ ತುಂಬ ಒಡನುಗುಲು (ಲ ಗೌ ೨೭೯)

ಮೂಗಿನ ಹೊಳ್ಳೆ

ಎರಡು ಮನೆಗೆ ಒಂದೇ ದೂಲ (ಸು ೧೧೫)

ಮೂಗಿನ ಹೊಳ್ಳೆ ಮತ್ತು ಕಂಬ

ಅಕ್ಕ ತಂಗೀರ ಮನೆಗೆ
ಒಂದೇ ಗೋಡೆ (ಜೀಶಂಪ ೧೧)

ಎರಡು ಕೆರೆಗೆ ಒಂದೇ ಏರಿ (ಇ ೨೪೫)

ಎರಡು ಬಾಗಿಲಿಗೆ ಒಂದೇ ಕಂಬ (ವಾಲಿ ೪–೩೭)

ಎರಡು ಬಾವಿಗೆ ಒಂದೇ ಕಟ್ಟೆ (ಲ ಗೌ ೨೩೪)

ಎರಡು ಮನಿಗೆ ಒಂದು ಕಂಬಾ (ಇ ೨೪೨)

ಎರಡು ಮನೀ ನಡುವೆ ಒಂದೇ ಕಂಬ (ವಾಲಿ ೪–೧೪)

ಎರಡು ಮನೆಗೆ ಒಂದೇ ಗೂಡು (ಜೀಶಂಪ ೭೫)

ಎರಡು ಮನೇ ಮಧ್ಯೆ ಒಂದೇ ಕಂಬ (ಲ ಗೌ ೨೨೮)

ಒಂದ ಮನೀಗೆ ಎರಡು ದಾರಿ (ಇ ೨೮೫)

ಒಂದು ಮನೆಗೆ ಒಂದೇ ತೊಲೆ (ರಾ ಗೌ ೧೪೫)

ಒಂದು ಮನೆಗೇ ಒಂದೇ ಕಂಬ (ವಾಲಿ ೪–೨೬)

ನೀ ಮಕ್ಕೊಂಡ್ರೂ ನಿನ ಮುಂದಿದ್ದು ಮಲಕೊಳ್ಳೂದಿಲ್ಲ (ಇ ೬೭೦)

ಬೆಟ್ಟ ಕೆಳಗೆ ಮಣಿ
ಮಣಿ ಕೆಳಗೆ ಗಿಣಿ (ಇ ೭೬೪)

ಯಾಳ್ದ್ ಮನೆಗೆ ಒಂದೇ ಕಂಬ (ಲ ಗೌ ೪೪೨)

ಯೆಡ್ರ್ ಬಾವಿಗೆ ವಂದೇ ದುಡ್ಗೆ (ಶಾಂ ನಾ ೧)
ಮೂಗು

ಏರಿ ಕೆಳಗಿಬ್ಬರು ಸೂಳೇಉರ್ ಇಣಿಕಿಣಿಕಿ ನೋಡ್ತಾರೆ (ಸು ೧೨೧)
ಮೂಗು ಮತ್ತು ಗೊಣ್ಣೆ

ಗರಡಗಂಬದ ಕೆಳಗೆ
ಗರಿಕೆ ಹುಲ್ಲು (ಸು ೨೪೫)
ಮೂಗು ಮತ್ತು ಮೀಸೆ

ಕಂಬ
ಕಂಬದ ಮೇಲೆ ಎರಡು ಗಿಣಿ
ಗಿಣಿ ಮೇಲೊಂದು ಚಪ್ಪಟೆ ಕಲ್ಲು
ಅತ್ಲಾಕಡೆ ಇತ್ಲಾಕಡೆ ಗುಡ್ಡ
ಮಧ್ಯೆ ದಾರಿ (ರಾ ಗೌ ೧೯೨)
ಮೂಗು, ಕಣ್ಣು, ಹಣೆ, ತಲೆ ಬಾಚಿದಾಗ ಎರಡು ಕಡೆ ಉಳಿಯುವ ಕೂದಲು–ನಡುವೆ ಬಾಚಲ ಬಟ್ಟೆ

ಚಿನ್ನದ್ಮಂಡೆ ಕೂಸು ಬಾಲಾ ಮುಂದ್ಮಾಡ್ಕಂಡ್ ವಳಂಗ್ಹೊಕ್ತು (ಶಾಂ ನಾ ೪೨೧)

ಚಿನ್ನಂತಾ ಹಕ್ಕಿ ಬಾಲಾ ಕಾಣ್ಸ್ಲಿಲ್ಲೆ ಮುಕಾಕಾಣ್ತು (ಶಾಂ ನಾ ೪೨೨)

ವೋಡೋಡ್ ಬತ್ತು ಬಾಲಾ ಮುಂದಾಗ್ ಹೊತ್ತು (ಶಾಂ ನಾ ೪೨೦)
ಮೂಗ್ಗೆ

ಹಂದಿ ಅಂತ ಹುಡುಗನಿಗೆ
ಹದಿನಾರು ಉಡಿದಾರ (ಸು ೫೦೯)
ಮೂಡೆ

ಅಂಭು ಹರಿದು ಹೋಯ್ತು
ಗುಂಭ ಅಲ್ಲೇ ನಿಂತು (ವಾಲಿ ೭– ೬)
ಮೂತ್ರ, ಮಲ

ಅಡ್ಡಾದುಡ್ಡಿಗೆ ಮೂರು ಬದನೆಕಾಯಿ
ದುಡ್ಡು ಅಡ್ಡಕ್ಕೆಷ್ಟು (ಸು ೨೩)

ಮೂರು

ಸಾದು ಬಟುವಾಗಿಹುದು
ಚಕ್ರ ತಾನಲ್ಲ
ಪಾದ ಮೂರುಂಟು
ಭೃಂಗೇಶನಲ್ಲ
ಸ್ವಾದಕ್ಕೆ ಮೊದಲುಂಟು
ಮೆಲುವುದಕ್ಕಲ್ಲ (ರಾ ಗೌ ೪೪೪)

ಮೂರು ಕಾಲಿನ ಮಣೆ (ತೌಟಗೆ)

ಒಳ್ಳೆ ಹೊಲಕೆ ಬೆಳ್ಳಿ ಗೂಟ (ಲ ಗೌ ೨೯೦)

ಅಂಗಿದಾಗ ಅಂಗಿ ಯಾವ ಅಂಗಿ (ಲಠ್ಠೆ ಭಾಗ ೪–೩೪)

ಅಂಗ್ಯಾಗ ಅಂಗಿ ಯಾವ ಅಂಗಿ (ವಾಲಿ ೧–೧೧೧)

ಕರಿ ನೆಲದಲ್ಲಿ ಬಿಳೀ ಗೂಟ (ಲ ಗೌ ೪೧೧)

ಗೂಟ ಕಿತ್ಕೊಂಡು ಸಂತ್ಕೋದ (ಮಂ ೧.೪–೪೪)

ಗೊಂತ್ ಕಿತ್ಗೊಂಡ್ ಸಂತೇಗ್ಹೋಯ್ತು (ಜೀಶಂಪ ೧೪೭)

ಚಿಕ್ಕ ಮನೀಗಿ ಚಿನ್ನದ ಬೀಗ (ವಾಲಿ ೩–೧೨೨)

ಬಾವಾ ಬಂದಾನ
ಬಜಾರದಾಗ ಇಳಿದಾರ
ಬಾವಾನ ಗಡ್ಡ ಬಂದು ಬಾಯಾಗ ಬಿದ್ದಾನ (ವಾಲಿ ೧– ೪೦)

ಬಾವಿ ಸುತ್ತ ಬೆಳ್ಳಿ ಗೂಟ (ಜೀಶಂಪ ೨೦೩)

ಬಾವಿ ಸುತ್ತ ಬೆಳ್ಳಿ ಗೂಟ (ಸು ೩೬೫)

ಬಿಳಿ ಎತ್ತಿಗೆ ಹಸಿರು ಬಾಲ (ರಾ ಗೌ ೩೫೭)

ಬಿಳಿ ಎತ್ತೀಗಿ ಹಸರ ಬಾಲ (ವಾಲಿ ೧–೫೨)

ಬಿಳೀ ಕುದುರೆಗೆ ಹಸುರು ಬಾಲ (ಸು ೩೭೪)

ಭೂಮಿ ಒಳಗೆ ಬೆಳ್ಳಿ ಕಿರೀಟ (ಲ ಗೌ ೮೦೪)

ಬೆಳಕುದ್ರೆ ಹಸ್ರಿ ಬಾಲಾ
ಅಜ್ಜಂಪುರದಲ್ಲಿ ಅಜ್ಜಿ ಕೂತಿದೆ (ಶಾಂ ನಾ ೨೩೪)

ಬೆಳಗಲ್ಮೇಲೆ ಹಸ್ರ ತೊಟಾ (ಶಾಂ ನಾ ೨೩೩)

ಬೆಳ್ಳಿ ಚೂರಿ ನೆಲಕತ್ತ ಊರಿ (ಸು ೩೮೬)

ಭೂಮಿಯೊಳಗ ಬೆಳ್ಳೀ ಕಿರೀಟ (ಲಠ್ಠೆ ಭಾಗ ೪–೧೪೫)

ಮಳ್ಳು ಹೊಲದಲ್ಲಿ ಬೆಳ್ಳಿಗುಡ್ಡ (ರಾ ಗೌ ೩೮೭)

ಹಸಿರು ತೋಟ್ದಲ್ಲಿ ಬೆಳ್ಳಿಗೂಟ (ಜೀಶಂಪ ೨೮೨)

ಹಚ್ಚನ ತ್ವಾಟದಾಗ ಬೆಳ್ಳಿಗೂಟ (ಲಠ್ಠೆ ಭಾಗ ೪–೧೭೩)

ಹಸರ ಪಾಲಕಿ ಬೆಳ್ಳಿ ಗೂಟ (ಲಠ್ಠೆ ಭಾಗ ೪–೧೮೪)

ಹಸರ ತ್ವಾಟಾ ಬೆಳ್ಳಿ ಗೂಟಾ (ವಾಲಿ ೧–೯೫)

ಹಸರು ತೋಟಾ ಬೆಳ್ಳೀ ಗೂಟಾ (ಇ ೧೦೨೯)

ಹಸರು ಪಾಲಕೀ ಕೆಳಗ
ಬೆಳ್ಳಿ ಗೂಟ ಕುಂತೈತಿ (ಇ ೧೦೩೮)
ಮೂಲಂಗಿ

ಅಜ್ಜಂಪುರದಲ್ಲಿ ಅಜ್ಜಿ ಕೂತಿದೆ (ಲ ಗೌ ೨೧)
ಮೂಲೆಯಲ್ಲಿಟ್ಟ ಪೊರಕೆ

ನಾವು ನಮ್ಮಷ್ಟು
ನಮ್ಮರ್ಧ ನಮ್ಮಾಲು
ನೀನು ಸೇರಿ ನೂರು (ರಾ ಗೌ ೩೦೯)
ಮೂವತ್ತಾರು

ಅಡಕ ಬೆಳ್ಳಿ ತೊಡಕ ಬೆಳ್ಳಿ
ಸಕ್ಕರಿ ಹಾಕಿದ್ರ ಸಿಹಿ ಬೆಳ್ಳಿ (ಲಠೈ ಭಾಗ ೪–೧೮)
ಮೆಕ್ಕಿಕಾಯಿ

ಏಳ ಪದರ ಹಸರ ಸೀರ್ಯಾಗ
ಕೂದಲ ಕಾಣಸ್ತಾನ (ವಾಲಿ ೮–೧೫)
ಮೆಕ್ಕಿತೆನಿ

ಅಜ್ಜನ ತುಣ್ಗಿ ಮುತ್ತ ಪೋನಿಸ್ಯಾರ (ಲಠೈ ಭಾಗ ೪–೧೦)

ಚೊಣ್ಣಾಗ ನಿಗರ ಸಿರ್ಸಾಗ ಡೊಗರ (ಲಠೈ ಭಾಗ ೪–೯೯)
ಮೆಕ್ಕೆತೆನಿ

ಅಡಕ ಬೆಳ್ಳಿ ತೊಡಕ ಬೆಳ್ಳಿ
ಸಕ್ಕರೆ ಹಾಕಿದ್ರ ಸಿಹಿ ಬೆಳ್ಳಿ (ಇ ೬೪)
ಮೆಕ್ಕೇಕಾಯಿ

ಕಾಲ ತಗೋಳೋದಕಿಂತಾ ಮೊದಲ
ಯಾನ ತಗೋಬೇಕು (ಲಠೈ ಭಾಗ ೫–೧೨೪)
ಮೆಟ್ಟನಾಲಿಗಿ ಹಲ್ಲಿ

ಕಾಲು ಎತ್ತದಕೂ ಮೊದಲು ಏನ ಎತ್ತಿ (ಇ ೩೮೯)
ಮೆಟ್ಟಿನ ಹಲಗೆ

ಕಾಲು ಎತ್ತುವುದಕ್ಕೂ ಮೊದಲು ಏನು ಎತ್ತೀ (ವಾಲಿ ೮–೪೧)
ಮೆಟ್ಟುವ ಹಲಿಗೆ

ಅಟ್ಟಕ್ಕೆ ಬಾರೆ ಚಿಣಿಮಿಣಿಕಿ
ಬೆಟ್ಟಕ್ಕೆ ಬಾರೆ ಚಿಣಿಮಿಣಿಕಿ
ಕಲ್ಲೂರೋರು ಕರೆಯಾಕ್ ಬರ್ತಾರೆ
ಮೆಲ್ಲಕೆ ಬಾರೆ ಚಿಣಿಮಿಣಿಕಿ (ಜೀಶಂಪ ೬೧)

ಅಟ್ಟಾಕೊ ಕೈಚಿಣ್‌ಮಿಣುಕಿ
ಬೆಟ್ಟಾಕೊ ಕೈಚಿಣ್‌ಮಿಣುಕಿ
ಕಲ್ಲೂರೋರು ಕರೆಯಾಕೆ ಬರ್ತಾರೆ
ಮೆಲ್ಲಗಿಳಿಯೆ ಚಿಣಮಿಣಕಿ (ಜೀಶಂಪ ೩೭)

ಅಮರೆ ಬೆಟ್ಟದಲ್ಲಿ
ಕುಮರೆ ಗಿಡ ಹುಟ್ಟಿ
ಅಪ್ಪ ಅಮ್ಮ ಅನ್ನಿಸಿತು (ಸು ೩೮)

ಅವ್ವ ತಲೆಗೆದರಿ
ಮಗ ನಿಜಗೆಂಪಿ (ಮಂ ೧.೪–೧೬)

ಅವ್ವ ತಲೆಗೆದರಿ
ಮಗಳು ನುಣ್ಬಣಗಿ (ರಾ ಗೌ ೪೫)

ಈಗುಟ್ಟುದ ಹುಡುಗುನ್ಗೆ ಚೀಟಿ ಕುಲಾವಿ (ಜೀಶಂಪ ೬೯)

ಉದ್ದಾದವನೇ ಉರಿಮುಖದವನೇ
ಎದ್ದು ಬಾರೋ ಮುದ್ದುಗುವರ (ವಾಲಿ ೩–೧೧೧)

ಉದ್ದುದ್ದವನೆ ಉರಿಮುಖದವನೆ
ಎದ್ದು ಬಾರೊ ಮುದ್ದು ಕುಮಾರ (ಲ ಗೌ ೨೦೨)

ಉದ್ದುದ್ದವನೆ ಉರಿಮುಖದವನೆ
ಸುದ್ದಿ ಹೇಳೊ ಸೂಳೆಮಗನೆ (ಜೀಶಂಪ ೭೦)

ಉದ್ದುದ್ದವನೇ ಉರಿಮುಖದವನೆ
ಸುದ್ದೀ ಹೇಳೋ ಸೂಳೆಮಗನೇ
ಬಾಯಿ ತೆರೆಸೋ ಬಾಡ್ಯಾನ ಮಗನೆ (ಇ ೨೧೯)

ಉದ್ದಂದೋಳೆ ಉರಿ ಮಕದೋಳೆ
ಸುದ್ದಿ ಹೇಳೆ ಸೂಳೆ ಮಗಳೆ (ಸು ೯೭)

ಒಳಗಿರೆ ಹಾಹಾಕಾರ ಹೊರಗಿರೆ ನಮಸ್ಕಾರ (ಇ ೧೧೦೭)

ಕಚ್ಚಿದರೆ ಕಚ್ಚುವುದು
ಕಿಚ್ಚಲ್ಲ ಹಾವಲ್ಲ ಚೇಳಲ್ಲ (ಜೀಶಂಪ ೧೧೭)

ಕಚ್ಚಿದರೆ ಕಚ್ಚುವದು
ಕಿಚ್ಚಲ್ಲ ಚೇಳು ಹಾವಲ್ಲ (ವಾಲಿ ೨–೯)

ಕಟಾಕಟ ಮೈಯೆಲ್ಲಾ ಮಿಟ
ಏನ ಕಡದೇ ಎಳೆ ಹುಡುಗಿ ತುಟಿ (ವಾಲಿ ೨–೩)

ಕಾಯಿ ಕಾತಾಡ ಹೂ ನ್ಯಾತಾಡ
ನೀ ತಳ್ಳಾಡ ನಾಮ ಉಳ್ಳಾಡ (ಮಂ ೧.೪–೩೫)

ಕಾಯಿ ಕಾತಾಡ ಹೂವು ನೇತಾಡ
ಒಳಗಿರುವ ನಿಂಗಪ್ಪ ಓಡಾಡ (ರಾ ಗೌ ೧೯೫)

ಕುತನಿ ಚೀಲದಾಗ
ರತನ ತುಂಬ್ಯಾರ (ಲಠ್ಠೆ ಭಾಗ ೪–೭೪)

ಕೆಂಪನೆಯ ಚೀಲಕ್ಕೆ ಹಸಿರು ಬಾಯಿದಾರ (ಲ ಗೌ ೪೮೧)

ಕೆಂಪನ್ನ ಹುಡುಗಿ ಸಣ್ಣಾಕಿ
ಎಂಥವರನ್ನೂ ಅಳಿಸಾಕಿ (ವಾಲಿ ೨–೮೯)

ಗಿಡದ ಬಡ್ಡೆ ಗಿಣಿ ಚಾಚಿಕೊಂಡು ಕೂತಿದೆ (ಲ ಗೌ ೫೧೦)

ಗಿಡದ ತುಂಬ ಗಿಣಿ ಕೂತಾವ (ಲಠ್ಠೆ ಭಾಗ ೪–೮೮)

ಗಿಡ್ಡ ಗಿಡಕ ಗಿಣಿ ಜೋತಾಡತಾವ (ಲಠ್ಠೆ ಭಾಗ ೪–೯೨)

ಗಿಡ್ಡ ಗಿಡಕ ಗಿಣಿ ಮುಕರ್ಯಾವ (ವಾಲಿ ೨–೬)

ಗುಂಪೊಂದ್ಗಿಡದಲ್ಲಿ ಕೆಂಪಣ್ಣ ಕುಂತವನೆ (ಜೀಶಂಪ ೧೪೧)

ನಾ ತಳ್ಳಾಡ ನೀ ಉಳ್ಳಾಡ (ರಾ ಗೌ ೨೯೭)

ರತ್ನದ ಚೀಲದಾಗ ಮುತ್ತ ತುಂಬ್ಯಾರ (ಇ ೯೦೪)
ಹಮಾರೆ ತೋಟದಲ್ಲಿ ತುಮಾರೆ ಮರ ಹುಟ್ಟಿ
ಅಪ್ಪ ಅಯ್ ಅಮ್ಮ ಅಯ್ (ರಾ ಗೌ ೪೭೬)

ಹರಾಯಕೆ ಹಚ್ಚಗೆ ಪರಾಯಕೆ ಹಸರು
ಮುಪ್ಪಿನ ಕಾಲಕ್ಕೆ ದೊಗರು (ಲ ಗೌ ೧೦೦೦)

ಹಸರ ಗಿಡಕ್ಕ ಗಿಳಿ ಜೋತಾಡ್ತಾವ (ಲಠ್ಠೆ ಭಾಗ ೪–೧೯೧)

ಹಸರ ಪಾಲಕಿ ಮುತ್ತಿನ ದಂಡಿ
ಒಳಗ ಕುಂತಾಳ ಛದಾಮ ರಂಡಿ (ಲಠ್ಠೆ ಭಾಗ ೪–೧೪೫)

ಹಾದ್ಯಾಗ ಹೋಗಾಕ್ಕಿಂದ ಹಸರನೋಡ
ಹಸರೇನ ನೋಡತಿ ಕುಸರ ನೋಡ
ಕುಸರೇನ ನೋಡತಿ ತಿಂದ ನೋಡ
ತಿಂದೇನ ನೋಡತಿ ತೀಬ್ರ ನೋಡ (ಲಠ್ಠೆ ಭಾಗ ೪–೨೦೪)

ಹಿತ್ತಲಿದ್ದರೆ ಕಾಯಪ್ಪ ಮನೇಲಿದ್ದರೆ ಜೋರಪ್ಪ (ಲ ಗೌ ೧೦೫೩)

ಹುಟ್ಟುವಾಗ ಬಿಳಿ ಬೆಳೆವಾಗ ಹಸಿರು ಮುಪ್ಪಿನಲ್ಲಿ ಕೆಂಪು (ಲ ಗೌ ೧೦೫೮)

ಹೊರಕೋಟೆಯೆಲ್ಲ ಕುಂಕುಮದ ಶೃಂಗಾರ
ಒಳಕೋಟೆಯೆಲ್ಲ ಬೆಳ್ಳಿ ಬಂಗಾರ
ಹೊರಗಿನ ಕೋಟೆಯು ಸಿಂಗಾರ
ಒಳಗಿನ ಮಣಿಗಳು ಬಂಗಾರ
ತಿಂದರೆ ಆದನು ಹಾಹಾಕಾರ
ಹೇಳುವನಿದ್ದರೆ ಬಲು ಧೀರ (ಚಂ ಸೆ ೨೫೭)

ಹೊರ ಕೋಟೆಯೆಲ್ಲ ಕುಂಕುಮದ ಸಿಂಗಾರ
ಒಳ ಕೋಟೆಯೆಲ್ಲ ಬೆಳ್ಳಿ–ಬಂಗಾರ
ಒಳಗೆ ಹಾಹಾಕಾರ ಹೊರಗೆ ನಮಸ್ಕಾರ (ವಾಲಿ ೨–೨೦)

ಹೊರಗಿನ ತೊಳೆ ಸಿಂಗಾರ
ಒಳಗಿನ ಮಣಿ ಬಂಗಾರ (ಜೀಶಂಪ ೨೯೭)

ಹೊರಗೆ ಹಸಿರು ಅಥವಾ
ಕೆಂಪಿನ ಶೃಂಗಾರ ಒಳಗೆ ಬಂಗಾರ
ಬಾಯೊಳಗಿದನಿಟ್ಟರೆ ಹಾಹಾಕಾರ (ಇ ೧೧೦೮)

ಮೆಣಸಿನಕಾಯಿ

ಅಪ್ಪಪ್ಪನಂತಾ ಕಾಯಿ ಚಕ್ರದಂತಾ ಬೀಜಾ ತಿನ್ನಾರೆ ಅಪ್ಪಪ್ಪಾ (ಶಾಂ ನಾ ೨೩೬)

ಅಯ್ಯಯ್ಯಪ್ಪಾ ಹಾಯ್ ಸಣ್ ಸಣ್ ಕಾಯ್ (ಶಾಂ ನಾ ೨೩೫)

ಕಚ್ಚಿದ್ರೆ ಕಚ್ಚು ಹಾವಲ್ಲಾ ಚೋಳಲ್ಲಾ (ಶಾಂ ನಾ ೨೩೮)

ಹಸ್ರಮಕ್ಕೋಗೆ ಉರಿಹೆಚ್ಚು (ಶಾಂ ನಾ ೨೩೭)

ಮೆಣ್ಸಿನಕಾಯಿ

ಗಿಡ್ಡ ಮಗ ಗಿಳಿ ಹೊತ್ತಾನ (ಇ ೪೮೪)
ಮೆಣಸಿನಕಾಯಿ ಗಿಡ

ಕೆಂಪು ಕೋಳಿಗೊಂದೇ ಕಾಲು (ಸು ೨೩೩)
ಮೆಣಸಿನಕಾಯಿ ತೊಟ್ಟು

ಎಳೆತನದಲ್ಲಿ ಹಸಿರು
ಮುದಿತನದಲ್ಲಿ ಕೆಂಪು
ಒಳಗೆ ಚಿನ್ನದ ನಾಣ್ಯಗಳು (ಸು ೧೧೯)
ಮೆಣಸಿನಕಾಯಿ ಮತ್ತು ಬೀಜ

ಲಾಲ ಲಾಲ ಲಾಲ್
ಗೋಲ ಗೋಲ ಗೋಲ್
ಥಕ ಥೈ ಥಕ ಥೈ (ಲಠ್ಠೆ ಭಾಗ ೫–೨೬೬)
ಮೆಣಸಿನಕಾಯಿ, ಬಳಿ, ಹಾರಿ

ನಿಮ್ಮತ್ತೆ ಮನೆಗೆ ಹೋದ್ರೆ
ಚಂದರಗಾವಿ ಹಾಲ ಕಾಯ್ಸಿ
ಶಿವ ಕೊಟ್ಟ ಕಣ್ಬಿಟ್ಟು
ದೇವರು ಕೊಟ್ಟ ತೌಟಿಗೆ ಮಡಗಿ
ಮುರಿದೆ ಮೂರ್ಹಣ್ಣಿಕ್ಕಿದ್ರು (ರಾ ಗೌ ೩೧೫)
ಮೆಣಸಿನಕಾಯಿ, ಹುಳ್ಳಿಸಾರು

ಉತ್ತುತ್ತು (ಉರುಂಟುರುಟು) ಉರುಮೊಕೆದವ್ನೆ
ಬುದ್ದಿ ಹೇಳೋ ಬೋಳಿಮಗ್ನೆ (ಶಾಂ ನಾ ೨೩೯)
ಮೆಣಸಿನ ಕಾಳು

ಹೊಲವೆಲ್ಲ ಹಚ್ಚಗೆ ಒಂದು ಮೂಲೆ ಮಾತ್ರ ಬೆಳ್ಳಗೆ (ಲ ಗೌ ೧೦೭೯)
ಮೆಣಸಿನ ಗಿಡ
ಅವ್ವ ತಲೆಗೆದರಿ ಮಗಳು ಸುಂದರಿ (ಲ ಗೌ ೯೦)

ತಾಯಿ ಸದ್ರಿ ಮಗಳು ಮಿಟಗಾಣಿ (ಲ ಗೌ ೫೯೮)

ಸುತ್ತಮುತ್ತ ಬೇಲಿ ಕಟ್ಟ
ಸುವರ್ಣದಂಥ ಗಿಡ ಹಾಕಿ
ಊರು ನಾಡಿಗೆಲ್ಲ ಹೆಸರಾಯ್ತು (ರಾ ಗೌ ೪೫೪)
ಮೆಣಸಿನ ಗಿಡ–ಕಾಯಿ

ಅವ್ವ ತಲೆಗೆದರಿ
ಮಗಳು ಹಲ್ಲು ಬೋಳಿ (ಸು ೫೩)

ಮಂಡಿಯುದ್ದ ಹುಡುಗಿಗೆ ಮೈಕೈಯೆಲ್ಲ ಉಣ್ಣೆ (ಸು ೪೦೫)

ಮೆಣಸಿನಗಿಡ ಮತ್ತು ಕಾಯಿ

ಉದ್ದುದ್ದವ್ಳೆ ಉರಿ ಮೊಗ್ದವ್ಳೆ
ಸುದ್ದಿ ಹೇಳೇ ಸೂಳೇ ಮಗಳೇ (ಮಂ ೧.೪–೧೮)

ಪೊಳ್ಗೇರಿ ಸಿದ್ದಂಪ್ಪಂಗೆ
ಪೊಳಪೊಳಗೆ ದಾರಿ (ಮಂ ೧.೪–೭೩)

ಮೆಣಸಿನ ಹಣ್ಣು

ಅಂಕಡೊಂಕ ಮೇ
ನಾಕು ಚಕಾ ಮೇ
ಕರಿಯ ಗುಡ್ಡ ಮೇ (ಲ ಗೌ ೯೬)

ಕಕ್ಕಾಸ್ ಕದ್ಗಿ ಮೈಯೆಲ್ಲ ಹುರುಪಿ
ನಾಚಿಗ್ಗೇಡಿ ನಿನ್ನ ತೂಕ ನೋಡು (ಲ ಗೌ ೩೫೯)

ಕಗಟ್ಗಾಳಿ ಮೈಯೆಲ್ಲಾ ಬೋಳಿ
ಜಾತಿ ನ್ವೋಡಿ ತೂಕ ಮಾಡಿ (ಮಂ ೧.೪–೨೮)

ಕಚ್ಚಿದರೆ ಕಚ್ಚುವುದು
ಕಿಚ್ಚುಂಟು ಚೇಳಲ್ಲ (ಚಂ ಸೆ ೭೨)

ಕರಿ ಸೀರೆ ಗರತಿ
ಅಂಗಡೀಲಿ ಇರುತ್ತೀ
ಕಾಸ್ ಕ್ವೊಟ್ಟರೆ ಬರುತ್ತೀ (ಮಂ ೧.೪–೩೩)

ನೋಡೋಕೆ ಮಳ್ಳಿ
ಇಟ್ಟರೆ ಕೊಳ್ಳಿ (ಚಂ ಸೆ ೧೭೨)

ಸುಕ್ಲು ಸುಕ್ಲು ಸುಳ್ಳಮ್ಮ
ನಮ್ಮ ಕಲ್ಲಯ ಕರೀತಾನೆ ಬಾರಮ (ಸು ೪೭೧)

ಮೆಣಸು

ಕರೀಸೀರೆಗರ್ತಿ
ಅಂಗಡೀಲಿರ್ತಿ
ಕಾಸಕೊಟ್ರೆಬರ್ತಿ (ಜೀಶಂಪ ೧೦೭)
ಮೆಣಸು, ಉದ್ದು

ಅಕ್ಕ ತಂಗಿಯರು
ಚಿಟ್ ಹುಳ್ಳಿ ಮರದಲ್ಲಿ
ಚಿಗುರನ್ನು ಕುಯ್ತಾರೆ (ರಾ ಗೌ ೧)

ಅವರವರು ಅಕ್ಕತಂಗೇರು
ಬೆಟ್ಟಕ್ಕೆ ಹೋದರು
ಬೆರಕೆ ಸೊಪ್ಪು ಕುಯ್ಯೋಕೆ (ಸು ೪೭)

ಪುಟ್ಟಿ ಬಿಟ್ಕೊಂಡ್
ಪುನಾಸಿ ಬಿಟ್ಕೊಂಡ್
ಬೆಟ್ಟಕ್ ಬತ್ತದೆ
ಬೆರಕ್ ಸೊಪ್ಪು ಕುಯಾಕ್ಕೆ (ಜೀಶಂಪ ೧೯೬)

ಮಕ್ಕಳ ಕಟ್ಕೊಂಡ್ ಮರಿಕಟ್ಕೊಂಡ್
ಸೊಪ್ಪಿನ ತೋಟಕ್ಕೆ ಪೋಯಂಡಿ (ಜೀಶಂಪ ೨೨೩)
ಮೇಕೆ

ಅಂಗಾಲು ಮ್ಯಾಲ್ ಮಾಡ್ಕೊಂಡು
ನೀರು ಕುಡಿಯುವಾತ
ನಾಳೆ ನಿಮ್ಮೂರಾಗೆ ಹಬ್ಬ ಕಾಣೋದಾತ
ನಿನಗೆ ಯಾರೋ ಹೇಳಿದೋರು
ತಲೆ ಇಲ್ಲದಾತ
ನನಗೊಬ್ಬ ಹೇಳಿದ ಕಳ್ಳಿಲ್ಲದಾತ (ಸು ೬೪)
ಮೇಕೆ, ಏಡಿ, ತಮ್ಮಟೆ

ಒಂದು ಕೆರೆಗೆ ಎರಡು ತೂಬು (ರಾ ಗೌ ೧೪೪)
ಮೇಕೆಯ ಕೆಚ್ಚಲು

ಬಿಳಿಯ ಮೈ ಕೆಂಪು ಮೂಗು
ಉದ್ದ ಹೊಟ್ಟೆ ಸೊರಗಿ ಸಾಯುತ್ತದೆ (ವಾಲಿ ೩– ೫೪)
ಮೇಣಬತ್ತಿ

ಬಿಳಿಯ ಮೈಯ್ಯಿ
ಕೆಂಪು ಮೂಗು
ಉದ್ದವಾಗಿ ಹೊಟ್ಟೆ
ಮೋಟಾಗಿ ಸಾಯುತ್ತೆ (ರಾ ಗೌ ೩೫೬)
ಮೇಣದ ಬತ್ತಿ

ಅರಸಾನ ಹಕ್ಕಿ ಹೊಟ್ಟೆ ಕೊಯ್ದರೆ ಬಟ್ಟಲ ತುಂಬ ಮಾಂಸ (ಇ ೧೨೪೪)

ಅಂದ್ವೊರ್ನ ಹೊಟ್ಟಿಲಿ ನೂರಾರ್ಮಕ್ಕೊ (ಶಾಂ ನಾ ೨೪೦)

ಪಟ್ಪಟೆ ಸೀರೆ ಉಟ್ಕಂಡಿ ಬೇಲಿ ಗಂಡಿಲಿ ಆರ್ಗ್ ನೋಡ್ತು (ಶಾಂ ನಾ ೮)
ಮೊಗೆಕಾಯಿ

ಒಂದೇ ಬಾಟ್ಲ್ಯಾಗ ಎರಡು ತರದ ಎಣ್ಣೆ (ವಾಲಿ ೫೫–೫೦)
ಮೊಟ್ಟೆ

ಜಗ್ ಅಂತೀದ ಜರ್ಗೀಲುಕ್ತೀದ (ಶಾಂ ನಾ ೪೨೩)
ಮೋಗ್ತೆ

ಸುತ್ತು ಮುತ್ತು ಸುಣ್ಣದ ಗೋಡೆ
ಎತ್ತ ನೋಡಿದರೂ ಬಾಗಿಲಿಲ್ಲ (ಚಂ ಸೆ ೨೩೦)
ಮೊಟ್ಟೆ

ಒಂದು ತರದ ಭರಣಿಯಲ್ಲಿ ಎರಡು ತರದ ಬಣ್ಣ (ಲ ಗೌ ೩೦೮)

ತಗ್ಗಿನ್ಯಾಗ ಬಸುರಾಗಿ
ತವರಾಗ ಹಡೀತಾಳ (ಇ ೫೬೪)

ಬಾರ್ಕೂರ್ ಬದನೆಗೆ ತೊಟ್ಟಿಲ್ಲ (ಲ ಗೌ ೭೫೪)
ಮೊಟ್ಟೆ (ಕಪ್ಪಲಿ)

ಹಸು ಒಂದು ಮೂಳೆ ಹಾಕಿತು
ಮೂಳೆ ಒಂದು ಕರು ಹಾಕಿತು (ಲ ಗೌ ೧೦೨೨)
ಮೊಟ್ಟೆ–ಪಿಳ್ಳೆ

ಒಂದು ಕುಪ್ಪೀಲಿ
ಎರಡು ತರಹದ ಎಣ್ಣೆ (ರಾ ಗೌ ೧೩೪೮)

ಒಂದು ತರದ ಭರಣಿಯಲ್ಲಿ ಎರಡು ತರದ ಬಣ್ಣ (ಲ ಗೌ ೩೦೮)

ಜುಟ್ಟಿಲ್ಲದ್ದು ಬುಟ್ಟಿ ಒಳಗೆ (ಸು ೨೮೪)

ನಾಲ್ಕು ಮೂಲೆ ಕೋನ
ಎಲ್ಲಿ ನೋಡಿದ್ರು ಬಾಗಿಲಿಲ್ಲ (ರಾ ಗೌ ೩೦೮)

ಬಾಯಿ ಶೀಷೇಲಿ ಎರಡು ತರದ ಔಷಧಿ (ಲ ಗೌ ೭೫೨)

ಬಾರ್ಕೂರ್ ಬದನೆಗೆ ತೊಟ್ಟಿಲ್ಲ (ಲ ಗೌ ೭೫೪)

ಬೆಳ್ಳಿ ಕರಡಿಗೆ ಬಾಯಿಲ್ಲ (ಲ ಗೌ ೭೯೩)
ಮೂಡುಚೋರಿಯಿಂದ
ಒಂದು ಜೊತೆ ಎತ್ತು ಬಂದೋ
ನೀರ್ ಸಿಕ್ಕಿತಾವ್ ಕಣ್ಣಿ ಹಾಕ್ಕೊಂಡೊ (ಜೀಶಂಪ ೨೧೯)
ಮೊಟ್ಟೆ

ಮುಂದಲೆ ತುರುಬಿಗೆ ಹಿಂದಲೆ ಮೊಲೆ (ರಾ ಗೌ ೩೯೩)

ಬಿದರೂರು ಹೆಣ್ಣಿಗೆ ಬೆನ್ನ ಕಡೆ ಮೊಲೆ (ಲ ಗೌ ೭೬೧)

ಮನೆ ಮಾಡುವ ರಂಡೆಗೆ ಹಿಂದೆ ಮೊನೆ (ಇ ೮೨೦)
ಮೊರ

ದಡರ ದಿಮ್ಮಿಗೆ ಹಿಂದಕ್ಕೆ ಮೊಲೆ (ಸು ೩೧೩)
ಮೊರದ ಗೋಟು

ಅಗ್ರುಕೆವೊಳಗೆ ನಿಂಗಪ್ಪ ಕುಂತವ್ನೆ (ಮಂ ೨.೨–೩)

ಅಡವಿ ಅಪ್ಪಣ್ಣಗ
ಕಣ್ಣು ಕೆಂಪಗ
ಕಿವಿ ನೆಟ್ಟಗ (ವಾಲಿ ೬–೬೦)

ಅಡವೀ ರಾಜಕುಮಾರಗ ಕಣ್ಣು ಕೆಂಪಗ ಕಿವಿ ನೆಟ್ಟಗ (ಇ ೭೨)

ನನ್ನ ತಿಕ ಅಪ್ಪಂತದಾದ್ರೆ
ಗೌಡನ ಮನೆ ಕರಕಿ ಮೆಯ್ದು ಬರ್ತೀನಿ (ಲ ಗೌ ೯೪೪)

ಹಳ್ಳದಲ್ಲಿ ಸಿಳ್ಳೆಕ್ಯಾತ (ಸು ೫೦೬)

ಹಂಗರ ಗುತ್ತೀಲಿ ನಿಂಗಪ್ಪ ಕೂತವನೆ
ಹಂಗಂದ್ರೆ ಹಿಂಗಂದ್ರೆ ಛಂಗನೆ ನೆಗೀತಾನೆ (ಲ ಗೌ ೧೦೨೯)

ಸಾಲಾಗಿರೋನೆ ಜಾಣ
ಸಾಲಗಾರ ಬರ್ತಾನೆ ಓಡಿಹೋಗೋ ಜಾಣ (ಸು ೪೬೩)
ಮೊಲ

ಅಂಗರ ಗುತ್ತೀಲಿ ನಿಂಗಣ್ಣ ಕೂತವ್ನೆ
ಮೊಲದಪ್ಪನಿಗೆ ಮೂರೇ ಕಾಲು
ತೇವಟಿಗೇರಪ್ಪ ತೇಲೇ ಹೋಗ್ತಾನೆ
ಗಂಗಳದೋರಪ್ಪ ಮುಳುಗೇ ಹೋಗ್ತಾನೆ (ಲ ಗೌ ೧೦೩)
ಮೊಲ, ತೇವಟಿಗೆ, ಗಂಗಳ, ಚೆಂಬು

ಅಂಗರಕೆ ತಡೀಲಿ
ನಿಂಗಪ್ಪ ಮಲಗವನೆ
ಮೊಲದವರಪ್ಪನಿಗೆ ಮೂರೇ ಕಾಲು
ತೌಟಿಗೆಯವರಪ್ಪ ತೇಲೋದ
ದೋಣಿಯವರಪ್ಪನಿಗೆ ಸಾವಿರ ಕಣ್ಣು
ಒಂದರಿಯವರಪ್ಪನಿಗೆ ಒಂದೇ ಕಣ್ಣು (ರಾ ಗೌ ೫೩)
ಮೊಲ, ತೌಟಿಗೆ, ದೋಣಿ, ವಂದರಿ, ಸೂಜಿ

ಹಿಡಿದರೆ ಹಿಡಿಯಾಯ್ತು, ಬಿಟ್ಟರೆ ಬೆಟ್ಟಕ್ಕೆ ಹೋಯ್ತು
ತಾನೂ ತಿಂದು ತನ್ನೊಡೆಯನಿಗೂ ಕೊಡ್ತು (ಲ ಗೌ ೧೦೫೨)
ಮೊಲದ ಬಲೆ

ಉತ್ತರಾಸದ ಮೇಲೆ ಎರಡು ಮುತ್ತಿನ ಚೆಂಡ್ಮಡಗಿ
ಮುಟ್ಟಿದವರಿಗೆಲ್ಲ ಅಪರಾಧ (ಲ ಗೌ ೧೯೦)

ಎರಡ ಗುಡ್ಡದ ಮ್ಯಾಲ ಸಂಪ ನಿದ್ದಿ (ಲಠ್ಠೆ ಭಾಗ ೧–೧೩)

ಎರಡು ಬೆಟ್ಟಗಳ ಮೇಲಿನ ನಿದ್ರೆ ಬಹು ಸುಖ (ರಾ ಗೌ ೧೧೧)

ಚಿಕ್ಕವರ ಬಾಯಲ್ಲಿ ದೊಡ್ಡವರ ಕೈಯಲ್ಲಿ (ಲ ಗೌ ೫೪೬)

ಚಿಗುರ್ಹುಡುಗಿಗೆ
ಬುಗುರಿಕಾಯಿ (ರಾ ಗೌ ೨೫೧)

ತೊಟ್ಟುಂಟು ಮುಳ್ಳಿಲ್ಲ ಸುತ್ತಲೂ ಎಲೆಯಿಲ್ಲ
ಮುಟ್ಟಿದರೆ ಮೃದುವುಂಟು ಹಣ್ಣು ತಾನಲ್ಲ
ನೆಟ್ಟಗ ಮೆಲಬಹುದು ಕುಯ್ಯಲಳವಲ್ಲ (ಲ ಗೌ ೬೨೧)

ಹರೆಯದ ಹಕ್ಕಳ ಕೈಲಿ, ಎಳೆ ಮಗೀನ ಬಾಯಲ್ಲಿ
ವಸ್ತ್ರದ ಸೆರಗು ಕಪ್ಪು ಕಸ್ತೂರಿ (ಲ ಗೌ ೧೦೦೩)
ಮೊಲೆ

ಅತ್ತಕ್ಕ ಮುತ್ತಕ್ಕ ಅವೆರಡು
ಅಳ್ಳಕ್ಕ ಬಳ್ಳಕ್ಕ ಅವೆರಡು
ತರ್ಬೆಲು ಮುರ್ಬೆಲು ಅವೆರಡು (ರಾ ಗೌ ೨೦)
ಮೊಲೆಗಳು, ಯೌವನ, ಪ್ರೌಢಾವಸ್ಥೆ ಮತ್ತು ಮುಪ್ಪು

ಜಾಮ್ ಜಾಮ್ ಜಗ್ಗಿ ನೋಡಿ
ಕಗ್ಗಲ್‌ಗುಂಟ ಸಿಕ್ಸಿ ನೋಡಿ
ಆಯಿತ ಹೋಯಿತ ಕೈಹಾಕಿ ನೋಡಿ (ಸು ೨೮೩)
ಮೊಸರ ಕಡೆತ

ಏರಿಯಿಂದ ಹಾರುವಯ್ಯನ
ಹೊಟ್ಟೆ ಬೊಗೆದರು (ರಾ ಗೌ ೧೧೬)
ಮೊಸರನ್ನ

ಹೊತ್ತಿನಂತೆ ಮುಟ್ಟಾಗಿ ಅರ್ಧ ರಾತ್ರೀಲಿ ಬಸಿರಾಗಿ
ಬೆಳಕು ಹರಿಯೋ ಹೊತ್ಗೆ ಹೆತ್ತಳು (ಲ ಗೌ ೧೦೭೭)
ಮೊಸರು

ದಡಾಲಿ ದಡಾಲಿ
ನಿನ್ನ ದಡದ ಮ್ಯಾಲೆ
ನನ್ನ ಎಡಗೈ (ಸು ೩೧೪)
ಮೊಸರು ಕಡೆಯುವ ಮಡಕೆ

ಅಡವಿ ರಾಜಕುಮಾರನ
ಕಣ್ಣ ಕೆಂಪಗ ಕಿವಿ ನೆಟ್ಟಗ
ಮೂಗ ನೆಟ್ಟಗ (ಲಠೈ ಭಾಗ ೩–೩)

ಕಣ್ಣು ಕೆಂಪಗ ಮಾಡಿ
ಮೂಗು ಮೆತ್ತಗ ಮಾಡಿ
ಒಳಗಿದ್ದ ಹೊರಗ ಓಡಿ ಬರತಾನ
ರಾಜಕುಮಾರ (ಲಠ್ಠೆ ಭಾಗ ೩–೨೧)

ಪಾರ್ವತಮ್ಮನ ಪಾನಿಬಟ್ಟು
ಬೂತೂರಯ್ಯನ ಬೂಕನದಡಿ (ಲ ಗೌ ೭೨೫)

ಮಣಿಮಣಿಗಾರ ಮಣಿ ಸುಂಗಾರ
ಯಾರನ್ನ ಮುಟ್ಟಿ ಬಂದ್ಯೊ ಮುದ್ದು ಕುಮಾರ (ಜೀಶಂಪ ೨೦೭)
ಮೊಸರು ಮಡಕೆ–ಮಂತು

ಗಂಡನ ಹೊಟ್ಟೇಲಿ ಹೆಂಡತಿ ಹುಟ್ಟಿ
ಇಬ್ಬರಿಗೂ ಮಧ್ಯೆ ಒಂದು ಗಂಡು ಹುಟ್ಟಿತು (ಸು ೨೪೮)
ಮೊಸರು ಮಂತು, ಬೆಣ್ಣೆ

ಅಂಬುಧಿಯಲ್ಲಿ ಹುಟ್ಟುವ ಕುದುರೆ
ತಂಬೆಲರಲ್ಲಿ ಬೆದರುವ ಕುದುರೆ
ಕುಂಬಿನಿಗಿಳಿದು ಒರಗುವ ಕುದುರೆ (ಶಾಂ ನಾ ೧೯)

ಜನರಿಲ್ಲದ ನಾಡು
ಮರವಿಲ್ಲದ ಕಾಡು
ನೀರಿಲ್ಲದ ತೋಡು
ಮೀನಿರದ ಕಡಲು (ರಾ ಗೌ ೨೫೯)

ದದ್ದುಗುಂಬಳ ದಾದಿಗುಂಬಳ ಊರಿಗೆಲ್ಲ ಒಂದೇ ಕುಂಬಳ (ಲ ಗೌ ೬೨೫)

ಶೂರ ಸಮುದ್ರ ಮೇಲೆ ಓಡುತ್ತಾನೆ (ಚಂ ಸೆ ೨೧೮)
ಮೋಡ

ಮೂಲಂಗಿಯೋರಪ್ಪ ಮುನಿಸಿಕೊಂಡು ಹೋದ (ಸು ೪೨೮)
ಮಂಕರಿ

ಮಂದಿರದಲ್ಲಿದ್ದೇನೆ ಮನೆಯಲ್ಲಿಲ್ಲ
ಗಣಿತದಲ್ಲಿದ್ದೇನೆ ಲೆಕ್ಕದಲ್ಲಿಲ್ಲ
ಮೊಳದಲ್ಲಿದ್ದೇನೆ ಮಾರಿನಲ್ಲಿಲ್ಲ
ಮಂಗಳಾರತೀಲಿ ಇದ್ದೇನೆ ಆರತೀಲಿಲ್ಲ
ಎಲ್ಲ ಶುಭ ಕಾರ್ಯದಲ್ಲೂ ನಾನಿರುವೆ
ನಾನ್ಯಾರು (ಇ ೮೮೭)
ಮಂಗಳ ಮುಹೂರ್ತ

ಪಂಟಕ ಹೇರು ಭಂಟ
ಜೀವಿಲ್ಲದ ಬಸವಣ್ಣನ ಮೇಲೆ ಹೇರಿಕೊಂಡು
ತೂಗುವ ಮಾಸ ಮುಂದಿಟ್ಟುಕೊಂಡು
ನಂದಿ ಹುಟ್ಟುವ ದಿವಸದಲ್ಲಿ
ಬಂದು ಹೋಗಿರಿ ಎಂದು ನಿಮಗೆ ಹೇಳಿದರೆ
ಯಾವ ದಿವಸ ಬರುವಿರಿ (ಲ ಗೌ ೭೨೨)
ಮಂಗಳವಾರ

ತಟ್ಟೆಯಲ್ಲಾಡುವದು ಮುಟ್ಟಿದರೆ ಕಚ್ಚುವದು (ಶಾಂ ನಾ ೩೮೧)

ತಟ್ಟೇಲಿ ಆಡುತ್ತೆ
ತಮಾಷೆ ಮಾಡುತ್ತೆ
ಮುಟ್ಟಿದರೆ ಕಚ್ಚುತ್ತೆ (ಇ ೫೬೫)
ಮಂಗಳಾರತಿ

ಅರಿ ಅರಿ ರಾಮಗಿರಿ
ಗಿರಿಯಲ್ಲಿ ಯ್ಯಾನು ಸುದ್ದಿ
ರೆಕ್ಕೆವುಂಟು ಹಾರಲ್ಲ
ಕೊಕ್ಕುಂಮ ಕೂಗನ್ನಿಲ್ಲ
ನಾಕು ಪಾದವುಂಟು ವೊದಿನಿಲ್ಲ (ಮಂ ೧.೫–೧೩)
ಮಂಚ

ಮನಿ ಮ್ಯಾಗ
ಮಲ್ಲಿಗಿ ಹೂವ (ಲಠ್ಠೆ ಭಾಗ ೨–೫೬)
ಮಂಜ

ಬಡಗಿ ಮುಟ್ಟದ ಮಂಚ ಬಾಚಿ ಕೆತ್ತದ ಮಂಚ
ಬಂದಬಂದವರು ಕೂರುವ ಬೆಡಗಿನ ಮಂಚ (ಲ ಗೌ ೭೩೭)
ಮಂಜಲಿಗೆ

ಕಿರಿ ಎಲೆಯ ಮೇಲೆ ಕಿನ್ನರಿ ಕುಣೀತಾಳೆ (ಚಂ ಸೆ ೧೦೪)
ಮಂಜಿನ ಹಗಿ

ಮನೆ ಮೇಲೆ ಮಲ್ಲಿಗೆ ಹೂವು ಚೆಲ್ಲಿದೆ (ಲ ಗೌ ೮೧೫)
ಮಂಜು

ನಾ ಹುಟ್ಟುವೆ ಚಳಿಯಲ್ಲಿ
ಸಾಯುವೆ ಬಿಸಿಲಲ್ಲಿ
ಕಲ್ಲಾಗಲೂ ಬಲ್ಲೆ
ನೀರಾಗಲೂ ಬಲ್ಲೆ (ಸು ೩೩೬)

ನಾ ಹುಟ್ಟುವೆ ಚಳಿಯಲ್ಲಿ
ಸಾಯುವೆ ಬಿಸಿಲಲ್ಲಿ
ಕಲ್ಲಾಗಿ ಕೂರಲೂ ಬಲ್ಲೆ
ನೀರಾಗಿ ಹರಿಯುಲೂ ಬಲ್ಲೆ
ಹಾಗಾದರೆ ನಾನು ಯಾರು (ಇ ೬೫೯)

ಹೊಳೆ ಒಳಗೆ ಚಪ್ಪಡಿ ಕಲ್ಲು ದಾಟಬಹುದು
ಸ್ನಾನಕ್ಕೆ ಆಗುವುದಿಲ್ಲ (ಲ ಗೌ ೧೦೮೦)
ಮಂಜುಗಡ್ಡೆ

ಒಂಟೊಂಟು ಒಡೆಯಲು
ದೊಡ್ಡೆಮ್ಮೆ ಕರೆಯಲು
ಹಾಲುಂಟು ಬೆಣ್ಣೆಯಿಲ್ಲ (ಸು ೧೩೯)
ಮಂಡಗಳ್ಳಿ ಹಾಲು

ಹತ್ತುತಲೆ ಕೆಂಪು
ಆರುತಲೆ ಕಪ್ಪು
ಆತನ ಸಖನ ಸುತನ
ಒಡೆಯನ ವೈರಿಯ
ಮಡದಿಯ ಹುಟ್ಟಿಸರೇನು (ರಾ ಗೌ ೪೭೪)
ಮಂಡೋದರಿಯ ಹುಟ್ಟಿಸರು

ಉಡುದಾರದ ಕೆಳಗೆ
ಮೊಳದುದ್ದ ಓಡಾಡ್ತದೆ (ರಾ ಗೌ ೯೨)

ತುಂಬಿದ ಕೆರೇಲಿ
ದೊಂಬರು ಕುಣೀತಾರೆ (ಜೀಶಂಪ ೧೭೩)
ಮಂತು

ಚೋಟುದ್ವೋಳ್ಗೆ
ಮಾರುದ್ದ ಜಡೆ (ಮಂ ೧.೫–೬೧)
ಮಂತು, ಬೆಣ್ಣೆ ತೆಗೆಯೋದು

ಬಟ್ಲ ಮುಖದ್ವೊಳಗೆ ಎಟ್ಕಂಡ್ನೋಡು
ಜಾಮ್ಮುಸೀಸೆ ಜಗ್ಗಿಸ್ ನೋಡು
ಆಯ್ತೋ ಹೋಯ್ತೋ ಅಂತ
ಕೈ ಹಾಕ್ ನೋಡು (ಮಂ ೧.೪–೫೬)
ಮಂತು ಹಾಕುವುದು, ಬೆಣ್ಣೆ ತೆಗೆಯುವುದು

ಅಜೊ ಗೋಜಲು ಬಣ್ಣ
ರಾತ್ರಿ ನಿನ್ನೊಂದ್ಗೆ ಮಲಗಿದ್ವರ್ಯಾರಾ (ಮಂ ೧.೫–೮)
ಮಂಡ್ಗಿಗೆ (ಚಾಪೆ)

ದೇವ್ನ ಕೇರೀಲಿ ಮಗ್ಗ
ರಾಟೆಗೆ ಹಾಕೋದು ಹಗ್ಗ
ಮಗ್ಗುಲಿಗೆ ಹಾಕ್ಕೊಂಡು ನರಕ (ರಾ ಗೌ ೨೮೮)
ಮಂದಲಿಗೆ

ಚೆಂಬು ಚೆಣಿಕೆ ಒಂಬತ್ತು ಕುಣಿಕೆ
ನೆಯ್ಯಾರ್ದುಡುಗಿ ಕೈಕೆಳಗೆ (ಲ ಗೌ ೫೫೬)

ಬಗ್ಗುದ್ರೆ ಬಾಯ್ಗಿ ಬಡಿತೈತಿ
ಎದ್ರೆ ಎದ್ಗೆ ವಡಿತೈತೆ (ಮಂ ೧.೨–೧೨)

ವಿಜಯನಗರದ ಬಜೇಗೊನೆ
ಎಟುಕಿಸಿ ನೋಡಿತು ಅವಳೆದೆ ಮ್ಯಾಲೆ (ಸು ೪೪೮)

ಸಾವಿರ್ದ ರೂಪಾಯಿ ಬೀಗ
ಹಾಕೋರುಂಟು ಕಳೆಯೋರಿಲ್ಲ (ಮಂ ೧.೨–೧೪)
ಮಾಂಗಲ್ಯ

ಬಗ್ಗಿದರ ಬಾಯಿಗೆ ಬರ್ತೈತಿ
ಎದ್ದರ ಎದೀಗೆ ಬಡಿತೈತಿ (ವಾಲಿ ೩–೧೩೨)
ಮಾಂಗಲ್ಯ ಸರ

ಅತ್ತೆ ದೇಪಾ ಕಚ್ತಿದ
ಸೊಸೆ ನೀರ್ಹುಯ್ತೀದ
ಅಜ್ಜ ಕವ್ಳಾಪಿಪ್ತ್ಯಾ (ಶಾಂ ನಾ ೧೮)
ಮಿಂಚ–ಮೊಳೆ–ಗುಡ್ಗ

ಕತ್ತಲೆಯಲ್ಲಿ ಕತ್ತಿ ಬೀಸಿತು (ಚಂ ಸೆ ೭೮)

ಮುಂಡಿಲ್ಲದ ಹುಲ್ಲೆಕರ
ತಣುಕ್ ಅಂತಲ (ಜೀಶಂಪ ೨೩೨)
ಮಿಂಚು

ಟಕ್ಕಿ ಬಿಕ್ಕಿ ಡೊಂಕು ಚಿಕ್ಕಿ ಕಣ್ಣಿಗೆ ಕಾಣಿಸುತ್ತೆ ಕಿವಿಗೆ ಕೇಳಿಸೊಲ್ಲ
ಡಾಂ ಡೂಂ ಅನ್ನುತ್ತೆ ಕಿವಿಗೆ ಕೇಳಿಸುತ್ತೆ ಕಣ್ಣಿಗೆ ಕಾಣಿಸೊಲ್ಲ (ಲ ಗೌ ೫೭೬)
ಮಿಂಚು–ಗುಡುಗು

ಆನೆಗುಂದಿ ಅರಸು
ಐದು ಮಂದೀ ಕರಸು
ಸಕ್ರಿ ತುಪ್ಪ ತರಿಸು
ಅಗ್ಸಿ ಬಾಗಿಲ ತೆರೆಸು (ಇ ೧೭೪)
ಮುಂಗೈ, ಐದು ಬೆರಳು, ಅನ್ನಸಾರು, ಬಾಯಿ

ಒಂದು ಮರಕ್ಕೆ
ಹೂವಿಲ್ಲ ಎಲೆಯಿಲ್ಲ ಕಾಯಿಲ್ಲ
ಬೆಳೆಯುತ್ತದೆ (ರಾ ಗೌ ೧೩೧)
ಮುಂಡಗಳ್ಳಿ

ಹಳ್ಳಿಪಾರಗ ಬೆಳ್ಳಿ ಕುಂಚಗಿ (ಲಠ್ಠೆ ಭಾಗ ೪–೨೦೧)

ಹಾರಿಬಂದ ನನ್ನ ಬಟ್ಯಾಕ ಮುರದಿ
ಸಿಟ್ಟಿಗಿ ಬಂದ ನನ್ನ ಕುಬಸಾ ಯಾಕ ಹರದಿ
ಒತ್ತಿ ಹಿಡದ ನನ್ನ ಗಲ್ಲಾ ಯಾಕ ಕಚ್ಚಿದಿ (ಲಠ್ಠೆ ಭಾಗ ೪–೨೦೩)
ಮೆಂಕತೆನಿ

ಒಂಟಿ ಕಾಲು ಕೊಕ್ಕರೆ ಬಗ್ಗಿ ಬಗ್ಗಿ ನೀರು ಕುಡೀತದೆ (ಸು ೧೩೫)

ಯಾತ (ಏತ)

ಹೋಗ್ತಾ ಬಾಣಂತಿ
ಬರ್ತಾ ಬಸುರಿ (ಸು ೫೩೩)

ಯಾತದ ಬಾವಿ

ಅಕ್ಕ ಅಕ್ಕ ಗಿಡ ನೋಡು
ಗಿಡದ ತುಂಬ ಕಾಯಿ ನೋಡು
ಕಾಯಿ ತಿಂದೋರ ಬಾಯಿ ನೋಡು (ಸು ೪)

ಅಕ್ಕಕ್ಕ ಗಿಡ ನೋಡು
ಗಿಡದಾಗ ಬಿಳಿ ಗಿಡ್ಡಾರ್ನ ನೋಡು
ಜೋತು ಬೊದ್ದ ರೀತಿ ನೋಡು
ಅವರ್ನ ತಿಂದವರ ಬಾಯಿ ನೋಡು ಘಮ ಘಮಾ (ಇ ೩)

ಅಕ್ಕಕ್ಕ ಗಿಡಾ ನೋಡು
ಗಿಡದಾಗ ಬಿಳಿ ಗಿಡ್ಯಾರ್ನ ನೋಡು
ಜೋತು ಬಿದ್ದ ರೀತಿ ನೋಡು
ತಿಂದವ್ರ ಬಾಯಿ ಘಮ ಘಮ ನೋಡು (ವಾಲಿ ೨–೮೮)

ಅಕ್ಕಾ ಅಕ್ಕಾ ಗಿಡಾ ನೋಡ
ಗಿಡದ ಮ್ಯಾಗಿನ ಕಾಯಿ ನೋಡ
ಕಾಯಿ ತಿಂದವರ ಬಾಯಿ ನೋಡ (ಲಠ್ಠೆ ಭಾಗ ೪–೬)

ಈಟಾಟಿ ಕಾಯಿ ಮಾಪಳಕಾಯಿ
ತಿನ್ನುದು ಬೀಜ ಉಗಳೂದು ತ್ವಾಟ (ವಾಲಿ ೨–೩೬)

ಒಂದ ಮನೀ ಮೂರು ಕಂಬ (ಇ ೨೮೩)

ವನ ವನ ನಾರಿ ವನಸಿಂಗಾರಿ
ವನ ಏನು ನೋಡುವಿ ತನು ನೋಡು
ತನು ಏನು ನೋಡುವಿ ತಂದು ನೋಡು
ತಂದೇನು ನೋಡುವಿ ತಿಂದು ನೋಡು (ಇ ೯೧೫)

ವನ ವನ ನಾರಿ ವನ ಸಿಂಗಾರಿ
ವನ ಏನು ನೋಡ್ತಿ ತನು ನೋಡು
ತನು ಏನು ನೋಡ್ತಿ ತಂದು ನೋಡು
ತಂದೇನು ನೋಡ್ತಿ ತಿಂದು ನೋಡು (ವಾಲಿ ೨–೯೪)

ಹಸಿರು ಹಾವು ಹರಿದು ಹರಿದು
ಮೊಟ್ಟೆ ಇಡುತ್ತದೆ (ಇ ೧೦೪೮)
ಯಾಲಕ್ಕಿ

ಅಕ್ಕಿಗಿ ಅಗಳಿಲ್ಲ
ತುಪ್ಪಕ ವಾಸಿಲ್ಲ
ಮಕ್ಕಳ ತಾಯಿಗಿ ಮಲಿ ಇಲ್ಲ (ಲಠ್ಠೆ ಭಾಗ ೪–೭)

ಅಕ್ಕಿಗೆ ಅಗುಳಿಲ್ಲ
ತುಪ್ಪಕ್ಕ ಕಂಪಿಲ್ಲ
ಮಕ್ಕಳ ತಾಯಿಗೆ ಮೊಲೆ ಇಲ್ಲ (ಇ ೧೫)
ಯಾಲಕ್ಕಿ–ಜೇನುತುಪ್ಪ–ಕೋಳಿ

ಥಳಿಸಲಾರದ ಅಕ್ಕಿ
ಕಾಸಲಾರದ ತುಪ್ಪ
ಹಳಸಲಾರದ ಹಣ್ಣ (ವಾಲಿ ೫–೧)
ಯಾಲಕ್ಕಿ, ಜೇನುತುಪ್ಪ, ಹುಣಸೀಹಣ್ಣು

ಕಾಯಿ ಕತಕ್ ಹೂ ಜತಕ್ ತಪ್ಪಲ್ಕನೈ (ಲಠ್ಠೆ ಭಾಗ ೪–೧೨೬)
ಯಗಟ್ಯಾನ ಕಂಟಿ

ನೀರು ನೀರು ಜಗಕ್ ನೀರು
ಕೋಲು ಕೋಲು ಕೊಂತದ ಕೋಲು
ಹಣ್ಣು ಹಣ್ಣು ಮಾಗದ ಹಣ್ಣು (ಲ ಗೌ ೬೯೯)
ರಕ್ತ–ಮೂಳೆ–ಮಾಂಸ

ಕಲಕ ನೀರ ಕುಡಿಯಲಾರೆ
ಬಣ್ಣದ ಬಡಗಿ ಹಿಡಿಯಲಾರೆ
ನೆಗ್ಗಲ ಮುಳ್ಳ ಮುಟ್ಟಲಾರೆ (ಇ ೩೬೬)
ರಕ್ತ–ಹಾವು–ಜೇಳು

ಕಲಕ ನೀರ ಕುಡಿಯಲಾರೆ
ಬಿದಿರ ಬೆತ್ತ ಹಿಡಿಯಲಾರೆ
ನೆಗ್ಗಿನ ಮುಳ್ಳು ತುಳಿಯಲಾರೆ
ನೀಲಿ ಗುಡಿಯ ಸುತ್ತಲಾರೆ (ವಾಲಿ ೨–೧೩)
ರಕ್ತ, ಹಾವು, ಚೇಳು, ಆಕಾಶ

ಅವ್ವ ಹಾಕುವದು ಕೈಯೆತ್ತಿ
ಅಪ್ಪ ಹಾಕುವದು ಕಾಲೆತ್ತಿ (ವಾಲಿ ೮–೫)
ರವಿಕೆ, ಇಜಾರು

ಅವ್ವ ಕೈಯೆತ್ತಿ ಹಾಕೋದು
ಅಪ್ಪ ಕಾಲೆತ್ತಿ ಹಾಕೋದು (ರಾ ಗೌ ೪೯)
ರವಿಕೆ, ಪ್ಯಾಂಟು

ಒಂದು ಮರಕ್ಕೆ ನೆರಳು ಇಲ್ಲ (ಮಂ ೧.೫–೩೪)

ಕಲ್ಕತ್ತೆಯಿಂದ ಕಾಶಿಯವರೆಗೆ
ಕದಲದೆ ಹೋಗುವುದು
ಯಾವುದು (ರಾ ಗೌ ೧೮೩)

ಬಿದ್ದಲ್ಲೆ ಬಿದ್ದಿರುತ್ತೆ
ಬೇತಾಳದ ಹಾಗೆ ಬೆಳದಿರುತ್ತೆ (ಇ ೭೪೧)
ರಸ್ತೆ

ಕಬ್ಬಿನ್ಯಾಗ ಕಬ್ಬ ಯಾವ ಕಬ್ಬ (ಲಠ್ಠೆ ಭಾಗ ೪–೫೮)
ರಸ್ಬಾಳಿ ಕಬ್ಬ

ಕೂಸು ಕುದುರೆ ಗಾತ್ರ
ಮಾಸು ಮನೆ ಗಾತ್ರ
ಕೂಸಿನವರ ತಾಯಿ
ಸಾಸಿವೆ ಗಾತ್ರ (ರಾ ಗೌ ೨೧೫)

ಬುಡ ಭೂಮೀಲಿ
ನಡ ಕಾಡಿನಲ್ಲಿ
ತಲೆ ಮೇಲಿಂದು ನಮ್ಮನೇಲಿ (ಸು ೩೭೮)

ಹೋಗಾಕಾರೆ ಕೆಂಪು ಬರಾಕಾರೆ ಬಿಳಿ (ಶಾಂ ನಾ ೨೪೧)
ರಾಗಿ

ಒಂದು ರಾತ್ರಿ ಶಿವರಾತ್ರಿ
ಬಿಟ್ಟು ನೋಡು ಒಂದು ರಾತ್ರಿ (ರಾ ಗೌ ೧೩೨)
ರಾಗಿಕಲ್ಲಲ್ಲಿ ರಾಗಿ ಬೀಸುವುದು

ಕೂತುಗೊಂಡು ತೂತಕ್ಕೆ ಬಿಡುತ್ತಾರೆ (ಲ ಗೌ ೪೬೧)
ರಾಗಿ ಕಲ್ಲಿನ ತೂತಿಗೆ ರಾಗಿ ಬಿಡುವುದು (ಬೀಸುವಾಗ)

ಅಡವೀಲುಟ್ಟೋದು
ಅದರಂಗ ಎರ್ಡಾಗೋದು
ಮರ ನುಂಗೊ ಪಕ್ಸಿ
ಮನವೊಳಗಿರೋದು
ಎಂಟೆತ್ತು ಬೆಳ್ದೆ ದಾನ್ಯನ
ತಾನು ಕಾಪಾಡೋದು
ತೆನ್ನಿಗರ ಕೈಲಿ ಆಡೋದು (ಮಂ ೧.೫೯–೯೯)

ಒಂಟು ಕೋಡಿನ ಪಕ್ಷಿ ಒಡಲೊಳಗೆ ಕರುಳಿಲ್ಲ
ಗಂಟಲು ಮೂರುಂಟು ಮೂಗು ತಾನಿಲ್ಲ (ಜೀಶಂಪ ೮೬)

ಒಂದು ಕುಂಬ್ರಿರಾಗಿ ಒಬ್ಬನೇ ಉಣ್ತಾ (ಶಾಂ ನಾ ೩)

ಕತ್ತಲೆ ಮನೆಯಲ್ಲಿ ಕಾಳಹೋರಿ ಗುಟರೆ ಹಾಕ್ತದೆ (ರಾ ಗೌ ೧೬೯)

ಕತ್ತಲೆ ಮನೇಲಿ ಎತ್ತು ಗುಟರಿಕೆ ಹಾಕ್ತದೆ (ಸು ೧೭೨)

ಕರಿಗುಡ್ಡಕ್ಕೆ ಬಿಳಿದಾರ (ಜೀಶಂಪ ೧೧೧)

ಕಲ್ಲಲ್ಲಿ ಹುಟ್ಟುವುದು
ಕಲ್ಲಲ್ಲಿ ಬೆಳೆಯುವುದು
ನೆತ್ತಿಯಲ್ಲಿ ಕುಟಗುಟ್ಟುವುದು (ರಾ ಗೌ ೧೮೬)

ಕಲ್ಲೇಲಿ ಹುಟ್ಟಿದ್ದು
ಕಲ್ಲೇಲಿ ಬೆಳೆದದ್ದು
ಪಕ್ಕೇಲಿ ಸುರಿಸೋದು (ಜೀಶಂಪ ೧೦೬)

ಕಲ್ಲು ಕಣ ಕಬ್ಬಿಣದ ಮೇಟ (ಲ ಗೌ ೪೨೧)
ಕಲ್ಲುಂಟು ಬೆಟ್ಟವಲ್ಲ
ಚಕ್ರವುಂಟು ಗಾಡಿಯಲ್ಲ
ಉಣ್ಣೋದುಂಟು ಪ್ರಾಣಿಯಲ್ಲ (ಲ ಗೌ ೪೨೨)

ಕವ್ವಳ್ದ ಮನೇಲಿ ಗುಟ್ರು ಹಾಕ್ತು (ಮಂ ೧.೫–೪೬)

ಗುಡ್ಡದ ಮೇಲೆ ಗುಡ್ಡ (ರಾ ಗೌ ೨೩೨)

ನನ್ನ ಹೊಟ್ಟೆ ಮ್ಯಾಲೆ ನಿನ್ನ ಹೊಟ್ಟೆ (ಲ ಗೌ ೬೪೩)

ನೆತ್ತೀಲಿ ಉಂಬುವುದು
ಸುತ್ತಲು ಚೆಲ್ಲುವುದು
ಎತ್ತಿದರೆ ಎರಡು ಹೋಳಾಗುವುದು (ರಾ ಗೌ ೩೨೪)

ನೆತ್ತೀಲಿ ಬಾಯಿ ಪಕ್ಕೆಲಿ ತಿಕ (ಸು ೩೪೯)

ಬಂಡ್ ಓಡ್ತದೆ ಬಂಡಾರ್ಬೀಳ್ತದೆ (ಶಾಂ ನಾ ೧೮)

ಹೊಟ್ಟೆ ಮೇಲೆ ಹೊಟ್ಟೆ (ರಾ ಗೌ ೫೦೪)

ರಾಗಿಕಲ್ಲು

ಕಲ್ಲು ಬಸವನಿಗೆ ಮರದ ಮೂಗರಾಣಿ (ಸು ೧೯೧)

ರಾಗಿಕಲ್ಲು ಮತ್ತು ಗೂಟ

ಕುದುರೆ ಕುಣೀತದೆ
ಕುಂಕುಮ ಉದುರ್ತದೆ (ಸು ೨೧೨)

ಬೆಟ್ಟದ ಸುತ್ತ ಬೆಳ್ಳಿ ಉಡಿದಾರ (ಸು ೩೮೪)

ರಥ ಓಡ್ತದೆ ಹೂ ಉದುರ್ತದೆ (ಸು ೪೩೮)

ರಾಗಿಕಲ್ಲು ಮತ್ತು ಹಸಿಟ್ಟು

ನನ್ನ ಹೊಟ್ಟೆ ಮೇಲೆ ನಿನ್ನ ಹೊಟ್ಟೆ
ನನ್ನ ತೂತಿಗೆ ನಿನ್ನ ಬೆಣೆ (ರಾ ಗೌ ೨೯೨)

ರಾಗಿಕಲ್ಲು, ರಾಗಿಗೂಟ

ಇಂಬೆ ಹಣ್ಣಿನಂತಹ ರಂಬೆಯೊಡನಾಡಿ
ಮೈಯೆಲ್ಲ ನೋಯ್ತು ನೀರ್ ಕೊಡಿ
ಅಂದ ಹೆಂಡ್ತಿಗೆ ಅವಳು
ಕುಶಾನನೊಂದಿಗೆ ಕುಸ್ತಿಮಾಡಿ
ಮೈಯೆಲ್ಲ ನೋಯ್ತೆ
ನೀರ್ ಕೊನ್ನಿ ಅಂದ್ಲು (ರಾ ಗೌ ೮೨)
ರಾಗಿಕಲ್ಲು, ರಾಗಿ ಬೀಸುವುದು

ತೇರು ಓಡುತ್ತೆ
ಹೂವು ಬೀಳುತ್ತೆ (ರಾ ಗೌ ೨೭೪)
ರಾಗಿಕಲ್ಲು, ಹಸೀಟು

ಅಂತಪ್ಪನ ತೋಟದಾಂಗೆ
ಇಂತಪ್ಪನ ಮಾವಿನ ಮರ
ತೊಟ್ಟಿಲ್ಲ ತುದಿಯಿಲ್ಲ (ಲ ಗೌ ೧೨೮)
ರಾಗಿಕಾಳು

ಹತ್ತನಾರದ ಮರ
ಎಣಿಸನಾರದ ಕಾಯಿ (ರಾ ಗೌ ೪೬೯)
ರಾಗಿಗಿಡ

ನೋಡಿದ್ರೆ ನವಿಲುಗರಿ
ಅದ ನೋಡಿದ್ರೆ ನಾಕ್ಕಾಳು (ರಾ ಗೌ ೩೩೦)

ಸೀತೆ ಕೊರಳಲ್ಲಿರುವ ಮುತ್ತು ಎಣಿಸಿದವರಿಗೆ
ಆರು ಮಣ ತುಪ್ಪ ಅರವತ್ತು ಮಣ ಬೆಲ್ಲ
ಕೂರೋಕೆ ಕುರ್ಚಿ ಮಲಗೋಕೆ ಮಂಚ
ಒಡೆಯದೆ ಹೋದರೆ ಹಂದಿ ದೋಣಿಲಿ ಅನ್ನ (ಲ ಗೌ ೯೪೪)

ಕೂಸು ಕುದ್ರೆ ಗಾತ್ರ
ಮನಸು ಮನೆ ಗಾತ್ರ
ಕೂಸ್ನರ್ವ್ವ ಸಾಸ್ವೆ ಗಾತ್ರ (ಮಂ ೧.೪–೩೮)
ರಾಗಿ ತೆನೆ

ಕೂಸು ಕುಡಿಕೆ ಗಾತ್ರ
ಮಾಸು ಮನೆ ಗಾತ್ರ
ಕೂಸಿನೋರವ್ವ ಸಾಸಿವೆ ಗಾತ್ರ (ಸು ೨೧೮)
ರಾಗಿ ತೆನೆ, ಉಬ್ಬಲು ಮತ್ತು ಹುಲ್ಲು, ರಾಗಿ

ಇಬ್ರು ಗಂಡ ಹೆಂಡರು ವೊರಗೋದ್ದೊರೂ ಬಂದ್ರು
ಗಂಡ: ಯಣ್ಣೇ ಯಣ್ಣೇ ಅಂದ್ಹಾ
ಹೆಂಡ್ತಿ: ಏನು ಸ್ವಾಮಿ ಅಂದ್ಲು
ಗಂಡ: ಇಬ್ಬನ್ನಿಯಂತಹ ರಂಬೆವೊಂದಗಾಡಿ ಮೈಕೈಯೆಲ್ಲಾ
ನೋವು ನೀರು ತಕಾ ಬಾ ಅಂದ್ಹಾ (ಮಂ ೧.೫–೨೨)
ರಾಗಿ ತೆನೆ ಕೀಳುವುದು, ರಾಟೆಯಲ್ಲಿ ನೂಲು ತೆಗೆಯುವುದು

ಅರ್ಧ ರಾತ್ರೀಲಿ ಎದ್ದ ಜರ್ ಜರ್ ಅರಿಚಿದ
ಆಗೊಂದ್ ಹೊಡ್ದ ಪಾವಡೆ ತಕ್ಕೊಂಡು ತೊಡ್ದ (ಲ ಗೌ ೫೭)

ಒಂದು ಹೊತ್ತಿನಲ್ಲಿ ಏಳೊ ಮಾರಾಯ
ಅದರೊಳಗೆ ಅದ ಹಾಕೋ ಮಾರಾಯ
ದೀಪ ಹಚ್ಚಿ ನೋಡೋ ಮಾರಾಯ
ಬಟ್ಟಿ ತಗೊಂಡು ಸೀಟೋ ಮಾರಾಯ (ಲ ಗೌ ೩೦೭)
ರಾಗಿ ಬೀಸಿ ಎತ್ತುವುದು

ಅಂತಪ್ಪನ ತೋಟ್ದಲ್ಲಿ
ಅಂತಿಂಥ ಹಣ್ಣು
ತೊಟ್ಟಿಲ್ಲ ತುದಿಯಿಲ್ಲ (ಜೀಶಂಪ ೪೮)
ರಾಗಿ ಮುದ್ದೆ

ಬೆಳಗಾನ ಕೊಸ್ತರೆ ಬೆಳ್ಳಗೆ ಬೀಳ್ತು (ರಾ ಗೌ ೩೭೦)
ರಾಗಿ ಹಸೀಟು

ಮಡಿಸಿದರೆ ಮೊಗ್ಗು
ಬಿಚ್ಚಿದರೆ ಹೂವು
ಪರಿಮಳವಿಲ್ಲ ವಾಸ್ನೆ ಇಲ್ಲ (ಜೀಶಂಪ ೨೦೪)

ಮುತ್ತಿನಂಥ ಕೋಳಿ
ಮುಳ್ಳಿನ ಮೇಲೆ ಮೊಟ್ಟೆ ಇಡ್ತು (ಜೀಶಂಪ ೨೧೬)
ರಾಗಿಹಿಟ್ಟು

ಇಷ್ಟಿಷ್ಟು ಹೂವು
ಈಶ್ವರನ ಹೂವು
ಎಷ್ಟು ಕೊಯ್ದರೂ
ಹಿಡಿತುಂಬ ಆಗೊಲ್ಲ (ರಾ ಗೌ ೮೫)
ರಾಗಿ ಹೂ

ಊರ ಸುತ್ತ ಹುವ್ವ ಕುಯ್ಕೊಂಡು ಬಂದ್ರು ಹಿಡಿಗಿಲ್ಲ (ಸು ೧೦೭)
ರಾಗಿ ಹೂವ

ಮಡಿವಾಳರ ಮಲಸೆಟ್ಟಿ ಬಾಗಿಲದಾಗ
ಮಗೀಮಾವಿನ ಹಣ್ಣಾಗಿತ್ತು
ಅದರ ಕೈಗೆ ಬಂದ ಹಣ್ಣು ಬಾಯಿಗೆ ಬರಲಿಲ್ಲ (ಇ ೮೦೩)
ರಾಜ

ಒಂಟಿಗಾಲಿ
ಕುಂಬಾರನ ತಿಗರಿ ಅಲ್ಲ
ಎಳಿ ಹೊರಡತತಿ
ಗಿರಣಿ ಅಲ್ಲ (ಲಠೈ ಭಾಗ ೨–೨೦)

ಗಲ ಗಲ ಎನ್ನುವ ಮರ
ಮರದ ಮೇಲೆ ಎಲೆ
ಎಲೆಯಲ್ಲಿ ಕಲೆ
ಕಲೆಯಲ್ಲಿ ಮಾತು
ಮಾತಿನೊಡನೆ ತೂತು
ತೂತಿನೊಳಗೆ ನೂಲು
ನಾನ್ಯಾರು (ಇ ೪೬೭)
ರಾಟಿ

ಯಾತ್‌ಗಿರಿ ಹತ್ರ ಯಾತ ಎತ್ತಿದ್ದಕ್ಕೆ
ಮಧುಗಿರಿ ಹತ್ರ ಮೊಗ್ಗು ಬಿಡ್ತು
ರತ್ನಗಿರಿ ಹತ್ರ ಕಾಯಿ ಆಯ್ತು (ಸು ೪೩೭)
ರಾಟೆ, ಕದಿರು ನೂಲು

ಹದಿನಾರು ಮಾರು ಕುತ್ತಿಗೆಗೆ ಊರು ಕೈಯಲ್ಲಿ ಜಾರು (ಲ ಗೌ ೯೮೮)
ರಾಟೆ ಹಗ್ಗ

ಅಡಿವ್ಯಾಗ ಹುಟ್ಟತೈತಿ
ಗಿಡದಾಗ ಬೆಳೀತೈತಿ
ನರ–ನಾರೇರ ಕೊರಳಾಗ ಬರತೈತಿ (ವಾಲಿ ೩–೧೦೧)
ರುದ್ರಾಕ್ಷಿ

ಒಬ್ಬ ತಿರುಗುತಾನೆ ಒಬ್ಬ ನಿಂತು ನೋಡುತಾನೆ (ಲ ಗೌ ೨೬೭)
ರುಬ್ಬುಗಲ್ಲು

ಅಪ್ಪ ಕೂತು ನೋಡ್ತಾನೆ
ಮಗ ಕೆಲಸ ಮಾಡ್ತಾನೆ (ಲ ಗೌ ೬೩)
ರುಬ್ಬುಗಲ್ಲು–ಗುಂಡು

ಗುದರಂಗಡಿ ಹುದಲಾಗ ಸಿಕ್ಕಾಳ
ಮಗ್ಗಲಿನವರನ್ನ ಸಣ್ಣ ಮಾಡ್ತಾಳ (ವಾಲಿ ೩–೯೯)
ರುಬ್ಬುಗುಂಡ

ಗುದುಗರಂಡಿ ಹುದುಲಾಗ ಸಿಕ್ಕಾಳ (ಇ ೫೦೯)
ರುಬ್ಬುಗುಂಡು

ಕೊಟ್ಟದ್ದನ್ನ ಅಗೀತದೆ ಸಿಟ್ಟಿನಿಂದ ಉಗೀತದೆ (ಲ ಗೌ ೪೯೦)
ರುಬ್ಬೊಕಲ್ಲು

ಅಲಕ ಮಲಕ ಚಿಲಕಿನ ತ್ವಾಟ
ಒಳಗ ಹೊಕ್ಕರ ಹೂವಿನ ತ್ವಾಟ (ಲಠೈ ಭಾಗ ೫–೩೨)
ರುಳು

ಉಂದ್ಮರಾ ಎಯ್ದ್ ಹೆಣೆ ನಾಕ ಗಿಂಚ ಹದ್ನಾರ ಕಾಯ (ಶಾಂ ನಾ ೨೫)
ರೂಪಾಯಿ

ಸಾವಿರ ತರ್ತದ ಲಾಖ ತರ್ತದ
ನೀರಾಗ ಹಾಕಿದ್ರ ಸಾಯ್ತದ
ನೀರಾಗ ಹಾಕಿದ್ರ ಸಾಯ್ತದ (ಲಠೈ ಭಾಗ ೫–೨೭೪)
ರೂಪಾಯಿ ನೋಟ

ಅರೆಕಲ್ಲು ಮೇಲೆ ಹಿಡಿಕಡ್ಡಿ ಬೇಲಿ ಮಾಡಿ
ಕರಿಯಮ್ಮನ ಮಗಳು ಕಾಯ್ತಾ ಕೂತಿದ್ಲು (ಲ ಗೌ ೮೬)

ಆಚೆ ಮನೆ ಅಜ್ಜಿ ಈಚೆ ಮನೆ ಅಜ್ಜಿ
ಜಿಗ್‌ಜಿಗ್‌ನೆ ಹೊಡ್ಕಂತಾರ (ಲ ಗೌ ೧೪೪)

ಕಬ್ಬಿಣದ ಕದ ರಬ್ಬನ ಹಾಕಿದರೂ ಕೇಳೊಲ್ಲ (ಲ ಗೌ ೩೮೮)

ನಮ್ಮತ್ರನೇ ಇದೆ
ನಮಗೇ ಹೊಡೆಯುತ್ತದೆ (ರಾ ಗೌ ೨೯೪)

ಬಡಿಯುತಿದೆ ಅಡಿಗಡಿಗೆ ನಾಡಿಯಲ್ಲ
ಹೃದಯವೂ ಅಲ್ಲ ಸದ್ದು ಕೇಳುವುದೂ ಇಲ್ಲ (ಲ ಗೌ ೭೩೮)

ಸಂಜೆಗಂಟ ಹೊಡೆದರೂ ಸಾಕು ಬೇಕಾಗೋದಿಲ್ಲ (ಲ ಗೌ ೯೨೨)
ರೆಪ್ಪೆ

ಮ್ಯಾಲಿಂದ ಕಬ್ಬಿಣದ ಕದ ಬಿದ್ರೂ ಸದ್ದು ಮಾತ್ರ ಆಗೋದಿಲ್ಲ (ಲ ಗೌ ೮೩೯)
ರೆಪ್ಪೆ ಬಡಿಯುವುದು

ಇಂಪಾದ ಗೀತೆ ಅಚ್ಚು ಮೆಚ್ಚಿನ ಮಾತು
ಪಾಂಡಿತ್ಯ ತೋರುವನು
ಉಣ್ಣೋನಲ್ಲ ಉಡೋನಲ್ಲ ನಿದ್ದೆ ತಾನಿಲ್ಲ
ಈ ಮಹಾನುಭಾವ ಊರೆಲ್ಲ (ಲ ಗೌ ೧೭೯)

ಕೂತಲ್ಲೆ ಕೂತಿದ್ದಾರೆ ಸಕಲ ವಿದ್ಯಾಪಾರಂಗತರು
ಕ್ಷಣದಲ್ಲಿ ಪ್ರಾಣ ಹೋಗುತ್ತೆ ಕ್ಷಣದಲ್ಲಿ ಪ್ರಾಣ ಬರುತ್ತೆ (ಲ ಗೌ ೪೬೦)

ಕೋಣೇಲಿ ಕೂತಾವನ್ನ
ಕಿವಿಹಿಂಡಿ ಕೂಗಸ್ತಾರ (ಇ ೪೨೯)

ಗುಂಡಿಯುಂಟು ಅಂಗಿಯಲ್ಲ
ಹಾಡುವುದುಂಟು ವಿದುಷಿಯಲ್ಲ
ಬೆಳಕುಂಟು ಮನೆಯಲ್ಲ (ಲ ಗೌ ೫೨೫)
ರೇಡಿಯೋ

ಹಾಕ ಹಾಕ ಮೆಡತು (ಲ ಗೌ ೧೦೩೫)
ರೇಷ್ಮೆಗೂಡು ತೂಗುವ ಚಿಂತಾಲು

ಕೇನಾನ್ಹಳ್ಳಿಯಿಂದ ಒಂದೆಮ್ಮೆ ತಂದೆ
ಖಂಡುಂಟು ಮೂಳಿಲ್ಲ (ಸು ೨೩೬)
ರೇಷ್ಮೆ ಹುಳು

ಅಂಬನ್ಹಂಗೆ ಹರೀತದೆ
ಕೊಂಬನ್ಹಂಗೆ ಕೂಗ್ತದೆ
ಜಮ್ಮನೇರಳೆ ಮರ ಜಗ್ಗಂತದೆ (ರಾ ಗೌ ೬೩)

ಅಂಬಿನಂತೆ ಹರೀತದೆ
ಕೊಂಬಿನಂತೆ ಕೂಗ್ತದೆ (ಸು ೭೯)

ಆರ್ಭಟದ ಹಾವೊಂದು ಹರಿದ್ಹರಿದು ನಿಂತಾಹ
ಹತ್ತೋರು ಸಾವಿರ ಇಳಿಯೋರು ಸಾವಿರ (ಇ ೧೧೨)

ಉದ್ದಕ್ಕೂ ಕೆಮ್ಮಣ್ಣು ಗೋಡೆ ಸುತ್ತ ಮುತ್ತ ಬಾಗಿಲು (ಲ ಗೌ ೧೯೨)

ಭೂಮಿಯ ಮೇಲೆ ಹರಿಯುವ ಹಾವಲ್ಲ
ಶಬ್ದ ಮಾಡುವೆ ಪ್ರಾಣಿಯಲ್ಲ
ಹೊಗೆ ಉಗುಳುವೆ ಕಾರ್ಖಾನೆ ಅಲ್ಲ
ಹಾಗಾದರೆ ನಾನು ಯಾರು? (ಇ ೭೯೪)

ರಭಸದಿಂದ ಬರುವುದು ಸರ್ಪವಲ್ಲ
ನೂರಾರು ಕಾಲಿನದು ಚೇಳಲ್ಲ (ಲ ಗೌ ೮೮೫)

ಹಾಕಮಣೆ ನೂಕಮಣೆ
ಜಂಬೂರ ಮಣೆ
ಸರಕಾರಕ್ಕೆ ಸಾಗಮಣೆ (ರಾ ಗೌ ೪೮೭)

ಹಂಬಿನಂತೆ ಹರಿಯತ್ತದೆ
ಕೊಂಬಿನಂತೆ ಕೂಗುತ್ತದೆ
ಜಂಬುನೇರಳೆ ಮರದ ಬಳಿ
ಜುಗ್ ಜುಗ್ ಜುಗ್ ಅನ್ನುತ್ತದೆ (ಲ ಗೌ ೧೦೩೪)
ರೈಲು

ಅಡ್ಡದಾರಿ ಹಿಡಿಯೋನಲ್ಲಾ
ಸಣ್ಣ ಹೆಜ್ಜೆ ಹಾಕೋನಲ್ಲಾ
ಭಾರ ಹೊರಲು ಹೆದರೋನಲ್ಲಾ
ಸಿಕ್ಕಲ್ಲೆಲ್ಲಾ ನಿಲ್ಲೋನಲ್ಲಾ (ಇ ೭೫)

ಗಾಡಿಗಟ್ಟೆ ಕಟಗಿ ತಿಂದ
ಬ್ಯಾರಲ್ಗಟ್ಟೆ ನೀರ ಕುಡದ
ಓಟ ಓಡೊ ಕುದುರಿ ಯಾವುದು (ಲಠ್ಠೆ ಭಾಗ ೨–೩೬)

ಗಾಡಿಗಾಡಿ ಸೌದೆ ತಿಂದು
ಬಂಡಿ ಬಂಡಿ ನೀರು ಕುಡಿದು
ಹೊಗೆಯ ಕಾರಿ ಕೂಗಿಕೊಂಡು
ಓಟಾ ಹಿಡಿದ ಕುದುರೆ ಯಾವುದು (ಇ ೪೭೧)
ರೈಲುಗಾಡಿ

ಅಲ್ಲೀ ಝಣ ಝಣ ಇಲ್ಲೀ ಝಣ ಝಣ
ಕಲ್ಯಾಣದ ತನಕಾ ಝಣ ಝಣ (ಇ ೧೩೭)
ರೊಕ್ಕ ಅಥವಾ ಗಂಗಾಳ

ಅತ್ತೆ ಅಗುಲ್ಸ ಮಾವ ತಗುಲ್ಸ (ನಾ ಗೌ ೨೬)

ಒಬ್ಬಣ್ಣ ಇಳೀತನೆ ಒಬ್ಬಣ್ಣ ಹತ್ತತಾನೆ (ಜೀಶಂಪ ೮೯)

ಒಬ್ಬ ಹತ್ತಾ ಒಬ್ಬ ಇಳೀತಾನೆ (ಸು ೧೩೦)

ಎದ್ದರೆ ಏಳು
ಏಳದಿದ್ರೆ ನಿನ್ನ ತಿಕ್ಕೆ ಕಡ್ಡಿ (ಸು ೧೧೧)

ಕರಿ ಕುದರಿ
ಕೆಂಪ ಲಗಾಮ
ಒಬ್ಬ ಏರತಾನ ಒಬ್ಬ ಇಳಿತಾನ (ಇ ೩೫೦)

ಕರೇ ಕುದುರಿ ಬಿಳೀ ಸವಾರ
ಒಬ್ಬ ಏರತಾನ ಒಬ್ಬ ಇಳಿತಾನ (ಇ ೩೬೪)

ಕೆಂಪ ಕುದರಿ ಕರಿ ಥಡಿ
ಒಬ್ಬಾಂವ ವರ್ತಾನ
ಒಬ್ಬಾಂವ ಇಳಿತಾನ (ಲಠ್ಠೆ ಭಾಗ ೪–೮೩)

ಕೆಂಪಣ್ಣನ ಕಂಡು
ಅಕ್ಕ ಬಸುರಿಯಾದ್ಲು (ರಾ ಗೌ ೨೨೦)

ಗೋಡೆಗೊರಗಿಕೊಂಡು ಬಸರಾಗ್ತಾಳೆ (ರಾ ಗೌ ೨೩೮)

ಚೋಟುದ್ದ ಹುಡುಗನಿಗೆ
ಚಂದ್ರಗಾವಿನ ರುಮಾಲು (ಜೀಶಂಪ ೧೫೯)

ತಾಯಿ ಅಗಲಿಸ ತಂದೆ ತಗಲಿಸ (ರಾ ಗೌ ೨೬೮)

ನಮ್ಮನ್ಯಾಗ್ ದಿವ್ಸಾ ಒಂದ್ಹುಡುಗಿ ಬಸ್ರಾಗ್ತಳೆ (ಲ ಗೌ ೬೪೯)

ನಮ್ಮವ್ವ ಅಗುಲ್ಸ ನಿಮ್ಮಪ್ಪ ತಗುಲ್ಸ (ನಾ ಗೌ ೧೪೮)

ನಿನ್ನ ಉಳಿಸಿದವರ್ಯಾರು ಬಡಿದವರ್ಯಾರು
ಬಸಿರು ಮಾಡಿದವರ್ಯಾರು (ಇ ೬೬೨)

ನಿನ್ನ ತಿಕ್ಕಿದವರ್ಯಾರು
ಬಡಿಸಿದವರ್ಯಾರು
ಬಸರ ಮಾಡಿದವರ್ಯಾರು (ವಾಲಿ ೮–೫೮)

ಬಾಗಿಲಿಗೆ ಬಂದು ಬಸರಾತು (ಇ ೭೨೯)

ಬಾಗ್ಲೀಗ್ಬತ್ತು ಬಸ್ತಿಯಾಗೋಗ್ತು (ಶಾಂ ನಾ ೪೫೩)

ಬಿಳಿಯಣ್ಣ ಕರಿಯಣ್ಣ ಇಳಿಯಣ್ಣ (ನಾ ಗೌ ೧೭೩)

ಬಂಜೆಯಾಗಿ ಹೋಗಿ ಬಸುರಾಗಿ ಬರುವೆ (ಇ ೭೮೯)

ರೊಟ್ಟಿ

ಅಂಗೈಯಗಲ ಕಣ ಹೊರಚೆಲ್ಲಿದ ರಾಸಿ
ಐದು ಮಂದಿ ಮುರಿತಾರ ಬತ್ತೀಸ ಮಂದಿ ತುಳಿತಾರ (ವಾಲಿ ೫೫–೨೫೫)

ರೊಟ್ಟಿ ಪಲ್ಲೆ (ಊಟದ ಕ್ರಮೆ)

ಗೋಡೆಲಿ ಬಸುರಾಗ್ತದೆ (ಲ ಗೌ ೫೩೪)
ರೊಟ್ಟಿ ಬೆರಣಿ

ಕತ್ತಲ ಮನ್ಯಾಗ ಕರ್ಯಾಪ್ಪ ಕೂತಾನ (ಲಠೈ ಭಾಗ ೫–೧೧೦)
ರೊಟ್ಟಿ, ಹಂಚು

ಕತ್ತಲ ಮನ್ಯಾಗ ಕರಿಯವ್ವ ಕುಂತಾಳ (ಇ ೩೨೬)
ರೊಟ್ಟಿ ಹಂಚು ಅಥವಾ ಮಸೀ ಅರಿವೆ ಅಥವಾ ಗಡಿಗೆ

ಕತ್ತಲದಾಗ್ ಕಾಳವ್ವ ಕುಂತಿದಾಳೆ (ಲ ಗೌ ೩೭೪)
ರೊಟ್ಟಿಯ ಹೆಂಚು

ನಿದ್ದಿ ಬರದಿದ್ದರೂ ಸದಾ ಮಲಗುವವನಾರು? (ಇ ೬೬೦)
ರೋಗಿ

ಅಕ್ಕನ ಅಂಗಳದಾಗ ಅಕ್ಕಿ ಗೆರಿ ಹಾಕ್ಯಾರ (ವಾಲಿ ೩–೫೯)

ಆಚಾರ್ ತುಂಬಾ ಬಜಾರ್ ಪಟ್ಟಿ (ಮಂ ೧.೨–೨)

ಕಲ್ಲೊಳಗೆ ಸಿಡಿದೊಡೆದು ಹಾಲೆ ಹೂವಾದರೇನೆ
ನಾರಿಯರ ಕೈಯೊಳಗೆ ತಾನೀಸಿ ಹೋದ (ಲ ಗೌ ೪೨೬)

ಚಿಕ್ಕ ಚಿಕ್ಕ ಚಿನಾಲ್ ಪೆಟ್ಟಿಗೆ
ಅಜಾರ್ ತುಂಬಾ ಬಜಾರ್ ಪೆಟ್ಟಿಗಾ (ಮಂ ೧.೨–೭)

ಚಿನ್ ಚಿನ್ ಪೆಟ್ಟಿ ಚಿನ್ನಾರಿ ಪೆಟ್ಟಿ
ಅಚಾರ್ ತುಂಬ ಬಜಾರ್ ಪೆಟ್ಟಿ (ಮಂ ೧.೨–೯)

ಬೆಟ್ಟದ ಮೇಲೆ ಬೆಳ್ಳಿ ಕೋಲು
ಹಾಕುವರುಂಟು ತೆಗೆಯುವರಿಲ್ಲ (ಇ ೭೬೦)

ಹಜಾರದ ತುಂಬ ಬಜಾರ ಪೆಟ್ಟಿಗೆ (ಲ ಗೌ ೯೭೫)

ಹೊಸ್ತಲ ಮುಂದ ಬೆಳ್ಳಿಗೆರಿ
ಹಾಕುವರುಂಟು ತೆಗಿಯೋರಿಲ್ಲ (ವಾಲಿ ೩–೭೪)
ರಂಗೋಲಿ

ಅಕ್ಕನ ತಿಕ್ಕೆ ಅಕ್ಕಿ ಗೆರೆ ಎಳೀರಿ (ರಾ ಗೌ ೫)

ಚಿಕ್ಕ ಚಿಕ್ಕ ಪೆಟ್ಟಿಗೆ ಚಿನ್ನಾಲ ಪೆಟ್ಟಿಗೆ
ಹಜಾರದ ತುಂಬ ಬಜಾರ ಪೆಟ್ಟಿಗೆ (ರಾ ಗೌ ೨೪೭)

ಬೆಳ್ಳಿಯ ಕೋಲನ್ನು ಹಾಕುವರುಂಟು ತೆಗೆವರಿಲ್ಲ (ಚಂ ಸೆ ೧೯೪)

ಮನೆಸುತ್ತ ಮಂಡಲದ ಹಾವು ಮಲಗಿದೆ (ಜೀಶಂಪ ೨೨೨)
ರಂಗೋಲೆ

ಮಾತು ಕತೆ ಯಾವಾಗ
ಎದುರು ಬದುರು ಕೂತಾಗ
ಅಳೆಯೋದ್ಕರೆಯೋದ್ಯಾವಾಗ
ಪೂರ್ತಿ ಹೊಟ್ಟೆ ತುಂಬಿದಾಗ (ಜೀಶಂಪ ೨೧೩)
ರಂಗವಲ್ಲಿ

ಪಟ್ಟಣ ಪರಾರಿ
ನಿಲೂರ ನಂದಿಕೋಲ
ಕಲಬುರಗಿ ಕಳಸ (ಲಠ್ಠೆ ಭಾಗ ೫–೨೦೦)
ರಂವದಿ, ದಂಟ, ತೆನಿ

ಎರಡು ಬೆಟ್ಟದ ಮಧ್ಯ ಒಂದು ದಾರಿ
ಮುಂದೆ ಬಂದರೆ ಒಂದು ದೊಡ್ಡ ಮೈದಾನ
ಆ ಮೈದಾನದ ಎರಡು ಮೂಲೆಗೆ ಎರಡು ಕಪ್ಪು ಹುಲ್ಲಿನ ರಾಶಿ
ಆ ರಾಶಿಯ ಕೆಳಗೆ ಎರಡು ಗಿಳಿ
ಅವುಗಳ ನಡುವೆ ಒಂದು ಕಂಬ
ಆ ಕಂಬದ ಕೆಳಗೆ ಎರಡು ಮನೆ
ಅಲ್ಲಿಂದ ಮುಂದಕ್ಕೆ ಬಂದರೆ ಸಣ್ಣ ಮೈದಾನ
ಅನಂತರ ಒಂದು ದೊಡ್ಡ ಮನೆ
ಅಲ್ಲಿ ಮೂವತ್ತೆರಡು ಜನ ಕಾವಲುಗಾರರು
ಮತ್ತೆ ಯಾವಾಗಲೂ ಒಂದು ಹಾವಾಡುತ್ತದೆ (ಇ ೨೪೩)
ರುಂಡದ ಭಾಗ

ಈಟ ಕಂಬದ ಮ್ಯಾಲ ಲಿಂಗಪ್ಪ ಕುಂತಾನೆ (ಇ ೨೦೪)

ಒಂಟಿ ಕಲ್ಲಿನ ಮ್ಯಾಲೆ
ನಾಲ್ಕು ಬೆಳ್ಳಿ ಕಾಲು (ಮಂ ೧.೪–೨೨)

ಒಂದ ಕಂಬಕ್ಕ ನಾಲ್ಕು ಕಿವಿ
ಮ್ಯಾಲೆ ಮುಕುಟಾ (ಇ ೨೭೯)

ಒಂದ ಕಂಬ್ಕ ನಾಕ ಕಿವಿ (ಲಠ್ಠೆ ಭಾಗ ೪–೫೨)

ಒಂದು ಕಂಬಕ್ಕೆ ನಾಲ್ಕು ಕಿವಿ (ಚಂ ಸೆ ೬೬) (ಲ ಗೌ ೩೧೩)

ಕರಿ ಕಂಬಾ ಮೂರ್ಕಿವಿ (ಶಾಂ ನಾ ೨೪೨)

ಕಂಬದ ಮೇಲೆ ನಿಂಬೆ ಹಣ್ಣು (ಸು ೨೦೦)

ಕಂಬದ ಮ್ಯಾಗ ಲಿಂಬಿ ಕಾಯಿ (ಲಠ್ಠೆ ಭಾಗ ೪–೬೯)

ಕಂಬದ ಮ್ಯಾಲ ಲಿಂಬಿ ಹಣ್ಣ (ವಾಲಿ ೫– ೩)

ಕಂಬದ್ಮೆಲೆ ನಿಂಬೀಕಾಯಿ (ಶಾಂ ನಾ ೨೪೩)

ಚಿಕ್ಕ ಚೌಕ ಬಾವಿ ಕುಡಿಯಾಕ ನೀರಿಲ್ಲ (ಇ ೫೨೧)

ನಾಲ್ಕು ಕಿವಿಗಳುಂಟು ಬ್ರಹ್ಮನಲ್ಲ
ಒಂದು ಬಾಲವುಂಟು ದನವಲ್ಲ (ಲ ಗೌ ೬೭೨)

ಪುಟ್ಟ ಕಂಬಕ್ಕೆ ನಾಲ್ಕು ಕಿವಿ (ಜೀಶಂಪ ೧೯೫)
ಲವಂಗ

ಅತ್ತಿತ್ತ ಹೋತು ನಡುವ ಬಂದು ಕುಂತ್ಯು (ಇ ೯೪)
ಅತ್ತಿತ್ತ ಹೋಯಿತು ನಡುವೆ ಬಂದು ಕುಳಿತಿತು (ಚಂ ಸೆ ೧೧)
ಲಾಟಾನು

ಅಂಗೈ ಅಗಲ ದೇವಸ್ಥಾನ ಚೋಟುದ್ದ ಆಳು (ಲ ಗೌ ೧೦೬)
ಲಾಟೀನು–ಬತ್ತಿ

ಹಳದಿ ಬಣ್ಣದ ನುಣ್ಣಣ್ಣ
ಬಿದ್ದರೆ ಸಾಸಿವೆ ಕಾಳಣ್ಣ
ಗುಂಡನೆ ಚೆಂಡು ನೋಡಣ್ಣ
ಯಾರಿವ ಹೇಳಿ ತಿನ್ನಣ್ಣ (ಇ ೧೦೫೨)
ಲಾಡು ಉಂಡೆ

ಕರಿನೀರು ಕುಡಿತಾನೆ
ಕೆಸರ್ಹಜ್ಜೆ ಇಡ್ತಾನೆ
ಒಬ್ಬನು ಅವನ ಸಂಗಡ
ಕುಡೀತಾನೆ (ಜೀಶಂಪ ೧೧೬)

ಕರ್ರಗಿದ್ದರೂ ಕೋಡಗನಲ್ಲ
ಎರಡು ನಾಲಿಗೆ ಇದ್ದರೂ ಹಾವಲ್ಲ
ನಾನು ಇಲ್ಲದೆ ಜಗತ್ತು ನಡೆಯುವಂತಿಲ್ಲ
ಹಾಗಾದರೆ ನಾನಾರು (ಇ ೩೪೨)

ಚೋಟುದ್ದ ಹುಡುಗ ಚೂಟಿಯಾಗಿ ಓಡುತ್ತಾನೆ (ಲ ಗೌ ೫೫೮)

ಬಣ್ಣವಿದೆ ವರ್ಣಪಕ್ಷಿಯಲ್ಲ
ನಾಲಗೆಗಳೆರಡಿವೆ ಜಗಳಗಂಟಿಯಲ್ಲ (ಲ ಗೌ ೭೩೯)

ಬಾಯಿಯಿದೆ ನಾಲಗೆ ಇದೆ
ಹಾವಿನಂತೆ ದೇಹವಿದೆ
ಎಲ್ಲರಲ್ಲೂ ಬಳಕೆಯಿದೆ (ಚಂ ಸೆ ೧೮೦)

ಮೂಗಲ್ಲಿ ಕಪ್ಪುಂಟು ಕಾಗೆಯಲ್ಲ
ಜೋಡು ನಾಲಗೆಯುಂಟು ಸರ್ಪವಲ್ಲ
ಐದು ಮಂದಿ ಗಂಡಂದಿರುಂಟು ದ್ರೌಪದಿಯಲ್ಲ (ಲ ಗೌ ೮೫೩)
ಲೇಖನಿ

ಗಂಟೆಗಳ ಮೊಳಗಿಸುವೆ ಭಕ್ತ ನಾನಲ್ಲ
ಉಯ್ಯಾಲೆ ತೂಗುವೆನು ಕುಳಿತವರೆ ಇಲ್ಲ
ಎರಡು ಕೈ ತೂಗುವೆನು ಪೋಲಿಸನಲ್ಲ
ಜಾಣನಾದವ ಇದ ಹೇಳಬಲ್ಲ (ಇ ೫೧೩)
ಲೋಲಕದ ಗಡಿಯಾರ

ಅಂತಕ್ಕನ ಮಗಳು ಅಂತರಲೇ ಜೋತಾಡ್ತಾಳ (ವಾಲಿ ೩–೧೧೮)
ಲೋಲಕು (ಕರ್ಣಾಭರಣ)

ಅಂತಕ್ಕನ ಮಗಳು
ಅಂತರದಲ್ಲಿ ಓಲಾಡ್ತಾಳೆ (ರಾ ಗೌ ೬೧)
ಲೋಲಾಕು ಅಥವಾ ಜುಮಕಿ

ಜಂತಿಗೆ ಜೋತು ಬಿದ್ದಾನ ಎಣ್ಣಿಲ್ದ ಉರಿತಾನ (ಇ ೫೫೧)
ಲೈಟು

ತಕ್ಕೊಂಡ ಕೈಲಿ ಹಿಡಕೊಂಡ
ತೊಳಕೊಂಡ ಕೊಳ್ಳಿಗೆ ಹಾಕ್ಕೊಂಡ (ಸು ೨೯೦)
ಲಿಂಗ

ಮಳ್ಳ ಹಕ್ಕಿ ಮುಳ್ಳಾಗ ತತ್ತಿ ಹಾಕ್ಯಾದ (ವಾಲಿ ೨–೬೭)

ಹಸಿರು ಗೂಡಿನಲ್ಲಿ ಚಿನ್ನದ ಮೊಟ್ಟೆ (ವಾಲಿ ೨–೧೦೧)
ಲಿಂಬಿಹಣ್ಣು

ಮಳ್ಳ ಹಕ್ಕಿ ಮುಳ್ಳಾಗ ಮೊಟ್ಟೀ ಇಟ್ಟೈತಿ (ಇ ೮೩೫)
ಲಿಂಬೀಗಿಡ

ವಳ್ಳೊಳ್ಳೆಯವ್ನು ಮುಳ್ಳಲ್ ಮೊಟ್ಟೇ ಹಾಕ್ತು (ಶಾಂ ನಾ ೨೪೫)

ಹಸ್ರ ಗಿಟ್ಟಲಿ (ಗೂಡ್ನಲ್ಲ) ಚಿನ್ನದ್ಮೊಟ್ಟೆ (ಶಾಂ ನಾ ೨೪೪)
ಲಿಂಬು

ಕೆಂದ ಎತ್ತಿನ ಹೊಟ್ಟಾ್ಯಗ ಗುದ್ದು (ಇ ೪೪೫)
ವಡೆ

ಸುತ್ತ ಬೇಲಿ ನಡುವೆ ಕೀಲಿ (ಇ ೯೫೩)
ವಡ್ಯಾಣ

ಎಲಿಕಿಂತ ಎಲಿಸಣ್ಣ ನಾಗರ ಬಣ್ಣ
ಹೇಳಿದರ ನನ್ನ ತಮ್ಮ
ಹೇಳದಿದ್ದರ ನನ್ನ ಹೆಂಡತೀ ತಮ್ಮ (ಇ ೨೪೮)
ವಡ್ಯಾನ ಕಂಟಿ

ಅಟ್ಟಂಬಟ್ಟಂ ಆರಾಣದಾಗ
ರೊಟ್ಟಿ ಬಿದ್ದೈತಿ (ಲತ್ಥೆ ಭಾಗ ೫–೫)
ವರತಿ

ತಾಳಿಕಟ್ಟೋಕ್ಕೂಲೀನೇ (ಇ ೫೮೪)
ವರದಕ್ಷಿಣೆ

ಪುಟ್ಟ ಪೋರಂಗೆ ಮಣ್ ಕೆಲ್ಸಾ (ಶಾಂ ನಾ ೬೫)
ವರ್ಲೆ

ಈಗ ಹುಟ್ಟಿದ ಪೋರಾ ಈಗ್ಲೇ ಮನೆ ಕಟ್ಟುತ್ತಾನೆ (ಶಾಂ ನಾ ೬೬)
ವರ್ಲೆ–ನುಸಿ

ವಂದ್ಮರಾ ಹನ್ನರ್ಡು ಟೊಂಗೆ ಮುವತ್ತೆಲೆ
ಹದನೆಯ್ದು ಕಪ್ಪು ಹದನಯ್ದು ಬಿಳುಪು (ಶಾಂ ನಾ ೨೭೮)
ವರ್ಷಾ

ಒಂದು ಹಣ್ಣಿಗೆ ಹನ್ನೆರಡು ಸೂಳೆ ಮುವತ್ತು ಬೀಜ (ಶಾಂ ನಾ ೪೧)
ವರ್ಷ

ಒಂದ ಮರ ಮರಕ್ಕ ಹನ್ನೆರ್ಡ್ಡ ಟೊಂಗಿ
ಟೊಂಗಿಗಿ ಮೂವತ್ತೆಲಿ ಅದರಾಗ
ಹದ್ನೈದ ಕರೀವು ಹದ್ನೈದ ಬಿಳೀವು (ಲಠ್ಠೆ ಭಾಗ ೨–೨೨)
ವರ್ಷ, ತಿಂಗಳ, ದಿವಸ, ಅಮಾಸಿ, ಹುಣ್ಣಿಮಿ

ವರ್ಷಕ್ಕೊಂದು ಹಣ್ಣು
ಹಣ್ಣಿಗೆ ಹನ್ನೆರಡು ಹೋಳು
ಹೋಳಿಗೆ ಮೂವತ್ತು ಬೀಜ (ಜೀಶಂಪ ೨೪೬)
ವರ್ಷ, ತಿಂಗಳು, ದಿನ

ಒಂದು ಮರ ಹುಟ್ಟಿ ಹನ್ನೆರಡು ಕವಲಾಯ್ತು
ಒಂದು ಕವಲಿಗೆ ಮೂವತ್ತೆಲೆ ಆಯ್ತು
ಅದರೊಳಗೆ ಹದಿನೈದು ಕರಿಯದಾಯ್ತು
ಹದಿನೈದು ಬಿಳಿಯದಾಯ್ತು (ಲ ಗೌ ೩೨೭)
ವರ್ಷ, ತಿಂಗಳು, ದಿನ, ಅಮವಾಸ್ಯೆ, ಹುಣ್ಣಿಮೆ

ಒಂದು ಮರ
ಹನ್ನೆರಡು ಕಾಯಿ
ಮುನ್ನೂರರವತ್ತೈದು ಎಲೆಗಳು (ರಾ ಗೌ ೧೫೪)
ವರ್ಷ, ತಿಂಗಳು, ದಿನಗಳು

ಒಂದು ಉಂಡೆ ಹಣ್ಣು
ಒಂದು ಹಣ್ಣಲ್ಲಿ ಹನ್ನೆರಡು ಭಾಗ
ಒಂದು ಭಾಗದಲ್ಲಿ ಮೂವತ್ತು ಬೀಜ (ಇ ೨೯೧)

ಹನ್ನೆರಡು ಅಂಕಣದೊಂದು ಮನೆಗೆ
ಮುವತ್ತು ಬಾಕಲು (ಸು ೪೯೩)
ವರ್ಷ, ತಿಂಗಳು, ದಿವಸ

ಒಂದು ಮರಕ್ಕೆ ಹನ್ನೆರಡು ಕೊಂಬೆ
ಕೊಂಬೆಗೆ ಮುವ್ವತೆಲೆ
ಅದರಲ್ಲಿ ಅರ್ಧ ಕಪ್ಪು ಅರ್ಧ ಬಿಳುಪು (ಸು ೧೪೪೪)
ವರ್ಷ, ತಿಂಗಳು, ದಿವಸ, ಕೃಷ್ಣಪಕ್ಷ ಮತ್ತು ಶುಕ್ಲಪಕ್ಷ

ಒಂದ ಗಿಡ
ಗಿಡಕ್ಕೆ ಹನ್ನೆರಡು ಟೊಂಗೆ
ಟೊಂಗಿಗೆ ಮೂವತ್ತು ಕಾಯಿ
ಒಂದೊಂದು ಕಾಯಿಯೊಳಗ
ಅರ್ಧ ಕಪ್ಪು ಬೀಜ, ಅರ್ಧ ಬಿಳಿ ಬೀಜ (ಇ ೨೮೮)
ವರ್ಷ, ತಿಂಗಳು, ದಿವಸ, ಹಗಲು, ರಾತ್ರಿ

ಒಂದು ಮರ ಹನ್ನೆರಡು ಕಾಯಿ
ಮುರುನೂರಾ ಅರವತ್ತೈದು ಎಲೆಗಳು (ವಾಲಿ ೨–೩೮)
ವರ್ಷ, ತಿಂಗಳುಗಳು, ದಿವಸಗಳು

ಮರದೊಳಗೆ ಮರ ಹುಟ್ಟಿ ಹನ್ನೆರಡು ಕವಲಾಗಿ
ಆರು ಕಪ್ಪು ಆರು ಬಿಳುಪು (ಲ ಗೌ ೮೨೦)
ವರ್ಷ, ತಿಂಗಳು–ಹಿಂದಿಂಗಳು, ಮುಂದಿಂಗಳು

ನಾಲ್ಕರಲ್ಲಿ ಕಾದು ನಾಲ್ಕರಲ್ಲಿ ಆರಿ ನಾಲ್ಕರಲ್ಲಿ ಮುಳುಗುತ್ತೆ (ಚಂ ಸೆ ೧೫೬೬)
ವರ್ಷದ ಮೂರು ಋತುಗಳು

ಬಾರೆ ಮೇಲೆ ಚದುರಂಗಿ ಗಿಡ ಹುಟ್ಟಿ
ಎಸಳು ಐವತ್ತು ಕುಡಿ ಮುನ್ನೂರ ಅರವತ್ತೈದು (ಲ ಗೌ ೭೫೭)
ವರ್ಷ, ವಾರ, ದಿನ

ಪುಟ್ಟುಟ್ ದೇವಸ್ತಾನಾ ಬಗ್ಗಿ ಬಗ್ಗಿ ನಮಸ್ಕಾರಾ (ಶಾಂ ನಾ ೩೮೩)

ಯಾರೂ ಇಲ್ಲದ್ಮನೆಲಿ ಪೋರಿರ್ತಾ (ಶಾಂ ನಾ ೩೮೪)

ವಲೆ

ವಂದು ಬೆಳಗಪ್‌ದ್ಬೆಡಾ ಅಂಬು
ವಂದು ಬೆಳ್ಗೇನು ಸಂಜ್ಯೇನು ಅಂಬು
ವಂದು ಸಂಜ್ಯಾಗೊ ಅಂಬು (ಶಾಂ ನಾ ೩೮೨)

ವಲೆ–ತಿಕ್ಕಾ–ಬಾಗ್ಲು

ಅಕ್ಕ ಮನೆ ತಂಗೀ ಮನೆಗ್ಯಾಣ್ತು (ಶಾಂ ನಾ ೩೮೫)

ವಲೆ ದೀಪಾ

ದಡಮುಂಡೆಗೆ ಅಡೀಲಿ ತೂತು (ರಾ ಗೌ ೨೮೧)

ದಡ ಮುಂಡೆಗೆ ಅಡೆಮ್ಯಾಲೆ ಕೂಡ ತೂತು (ಸು ೩೧೨)

ದಡ್ಡೆಗೆ ಅಡೀಲೇ ತೂತು (ಲ ಗೌ ೬೨೪)

ವಾಡೆ

ರಾಮ ಸೀತಾ ಮಲಗ್ಯಾರ
ಸೀತಾ ಎದ್ದ ಹೋದ್ಲು
ಎಲ್ಲಿ ಹೋಗಿದ್ದಿ ಅಂತ ರಾಮ ಕೇಳಿದ್ಲು
ನನ್ನ ತಂದಾವ್ನ ಅಪ್ಪನ ಮನಿಗಿ
ಹೋಗಿದ್ದೆ ಅಂದು (ಲಠ್ಠೆ ಭಾಗ ೨–೫೯)

ವಾಯು

ಸೋಮನ ಮಗಳು ಬುದ್ಧಿವಂತಿ ಆದಾಳ
ಬೇಸ ಆದಾಳ ಸುಖವಂತಿ ಆದಾಳ
ಶಾಣ್ಯಾ ಆದಾಳ ಆಯಿತಾ ಬರತಾಳ (ವಾಲಿ ೭–೨೩)

ವಾರದ ಏಳು ದಿನಗಳ ಹೆಸರುಗಳು

ಬೆಳಕು ಕೊಡುವುದು ಬೆಂಕಿಯಲ್ಲ
ಉರಿಯುವುದು ಬಿಸಿಲಲ್ಲ (ಚಂ ಸೆ ೧೯೦)

ವಿದ್ಯುಚ್ಛಕ್ತಿ

ಎಣ್ಣೆಲ್ಲ ಬತ್ತಿಲ್ಲ
ಕಡ್ಡಿ ಗೀಚಿ ಹಚ್ಚೋರು ಮೊದಲಿಲ್ಲ
ಲೋಕಾನೆಲ್ಲ ಬೆಳಗುವೆ ನಾನಾರು (ಲ ಗೌ ೨೧೬)

ದಾರದೊಳಗೋಡುವೆನು
ಧರೆಯನ್ನು ಬೆಳಗುವೆನು
ಹುಟ್ಟೆಲ್ಲೋ ಅಳಿವೆಲ್ಲೋ ನಾ ಕಾಣೆ (ಚಂ ಸೆ ೧೪೩)
ವಿದ್ಯುದ್ದೀಪ

ಉದ್ದಿನ ಹಿಟ್ಟು ಕೊಟ್ಟ ಮುದ್ದಿನ ಮಗಳ ಕೊಟ್ಟ
ಉಜ್ಜಾಡೋದು ಕೊಟ್ಟ ಅಳಿಯನ ಕೈಗೆ (ಲ ಗೌ ೨೦೧)

ಒಂದು ಹೋಳಿಗೆ ನೂರು ಆಳಿಗೆ ಮಿಕ್ಕಿದ್ದು ನಾಳೆಗೆ
ಇನ್ನೂ ಮಿಕ್ಕಿದ್ದು ನಾಳೆ ನಾಳೆಗೆ (ಲ ಗೌ ೩೨೩)

ಒಂದು ಹೋಳಿಗೆ ನೂರು ಆಳಿಗೆ
ಮತ್ತೆ ಉಳಿದರೆ ನಾಳಿಗೆ (ಇ ೨೯೩)

ಬೆಟ್ಟದ ಸುತ್ತ ಬೆಳ್ಳೀ ಕಟ್ಟೆ (ಇ ೭೬೩)

ಮುಂಡಿಲ್ಲದ ಹುಲ್ಲೆಕರ ತಣುಕ್ ಅಂತಲ (ಜೀಶಂಪ ೨೧೫)
ವಿಭೂತಿ

ತಂದೆಗೆ ಮೂರು ತಾಯಿಗೆ ಎರಡು (ಲ ಗೌ ೫೯೩)
ವಿಭೂತಿ–ಅರಿಶಿನ ಕುಂಕುಮ

ಅಡಿಕೆಯಾಟು ಉಂಡಿ ತಂದು ಎಲ್ಲಾರೂ ತಿಂದು
ಅವರ ಉಂಡಿ ಅವರಿಗೇ ಕೊಟ್ಟಾ (ಇ ೭೯)

ಒಂದಾ ಉಂಡಿ ನೂರು ಮಂದಿ ತಿಂದು
ನಾಳೀಗಿ ಉಳೀತು (ವಾಲಿ ೩–೩೩)

ಒಂದು ಹೋಳಿಗೆ ನೂರು ಆಳಿಗೆ
ಉಳಿದದ್ದು ನಾಳಿಗಿ (ವಾಲಿ ೩–೮೪)
ವಿಭೂತಿ ಉಂಡಿ

ಅಪ್ಪನಿಗೆ ಮೂರು
ಅವ್ವಗ ಮಾತ್ರ ಒಂದು (ವಾಲಿ ೮–೩)
ವಿಭೂತಿ (ಮೂರು ಬೆರಳು) ಕುಂಕುಮ (ಒಂದು ಬೊಟ್ಟು)

ಅಪ್ಪಗ ಮೂರು
ಅವ್ವಗ ಎರಡು (ವಾಲಿ ೮–೩೪)
ವಿಭೂತಿ ಗೆರೆಗಳು

ಅಪ್ಪಗೆ ಮೂರು ಅವ್ವಗೆ ಎರಡು (ಇ ೧೦೭)
ವಿಭೂತಿ ಪಟ್ಟಿ

ಅಪ್ಪನಿಗೆ ಮೂರು
ಅವ್ವನಿಗೆ ಒಂದು (ರಾ ಗೌ ೩೧)
ವಿಭೂತಿ ಪಟ್ಟೆ, ಕುಂಕುಮ

ಹಾರುವುದು ಹದ್ದಲ್ಲ
ಕೂಗುವುದು ಕೋಳಿಯಲ್ಲ
ಹೆಡೆಯುಂಟು ಬಾಲವುಂಟು
ಸರ್ಪ ತಾನಲ್ಲ (ರಾ ಗೌ ೪೮೯)

ಆಕಾಶಕ್ಕೆ ಹಾರುತ್ತೆ ಭೂಮಿಯಲ್ಲಿ ಇರುತ್ತೆ (ಇ ೧೬೦)

ಆಕಾಶದಲ್ಲಿ ಹಾರೋದು ಹಕ್ಕಿಯಲ್ಲ
ಭೂಮಿಯಲ್ಲಿ ವಾಸಿಸೋದು ಮನುಷ್ಯನಲ್ಲ
ಹತ್ತಾರು ಜನರನ್ನು ಹೊತ್ತು ತಿರುಗುತ್ತೆ (ಇ ೧೬೧)

ಆಕಾಶದಾಗ ನಿಂತು ಆಕಳ ಒದರತೈತಿ (ಲಠ್ಠೆ ಭಾಗ ೨–೧೧)

ಹಾರುವೆನು ಹದ್ದಲ್ಲ
ಕೂಗುವೆನು ಕೋಳಿಯಲ್ಲ
ಬಾಲ ಹೆಡೆಯುಂಟು ಸರ್ಪವಲ್ಲ
ನಾನ್ಯಾರು (ಇ ೧೦೬೭)
ವಿಮಾನ

ಹಗಲೂ ವೈರಿ ರಾತ್ರೀನೂ ವೈರಿ (ಇ ೯೮೯)
ವಿರಹ

ಹಿರಿಯ ಮಗ ತಲೆಹೊಡಕ
ಧರೆಗೆ ಪೂಜಿಪನಲ್ಲ
ಕಿರಿಯ ಮಗ ಪುಂಡು ಪೋಕರಿ
ಸೊಸೆಯಾದರೂ ಹೊಲೆಯ ಮಾದಿಗನಿಗೆ ಒಲಿವಳು
ಸತಿಯಾದರೊ ಮಾದಿಗನ ಮನೆಯಲ್ಲಿ ನೆಲಸುವಳು
ಮಗಳೊ ಅವಳು ಹೋಗುವ ಹಾದಿ ಡೊಂಕ
ಮೊಮ್ಮಗನಾದರೊ ಚಾಡಿಕೋರ (ರಾ ಗೌ ೪೯೮)
ವಿಷ್ಣು, ಮನ್ಮಥ, ಶಾರದೆ, ಲಕ್ಷ್ಮಿ, ಗಂಗೆ, ನಾರದ

ಕಾಲ ಮ್ಯಾಲ ಮರ
ಮರದ ಮ್ಯಾಲ ಬಳ್ಳಿ
ಬಳ್ಳಿ ಮ್ಯಾಲ ಬೆರಳು (ವಾಲಿ ೩–೬೩)

ಕಾಲ್ಮೇಲೆ ಮರ
ಮರದ್ಮೇಲೆ ಬಳ್ಳಿ
ಬಳ್ಳಿ ಮೇಲೆ ಬೆರಳು (ರಾ ಗೌ ೨೦೦)

ಹೆಡೆಯುಂಟು ಸರ್ಪವಲ್ಲ
ನುಡಿಯುಂಟು ಗಿಳಿಯಲ್ಲ (ವಾಲಿ ೩–೧೨೬)
ವೀಣೆ

ಅರಕಟ್ಟು ಮರಕ್ಕೆ ಮುತ್ತಿನಕಟ್ಟು
ಗಂಗೋಡಿಕಟ್ಟು
ತೇರಿನ ಮೇಲೆ ಸುಳಿ ಬಿಗಿದ್ ಕಟ್ಟು (ಲ ಗೌ ೭೮)

ಆ ಮರಕ್ಕೆ ಈ ಮರಕ್ಕೆ ಹಬ್ಬಿತ್ತು
ಕುಪ್ಪೆ ನಿಂಗನ್ನ ಕೂಗಿತ್ತು
ಪಟ್ಟಣಕ್ಕೆ ಹೋಗಿ ಸಾರಿತ್ತು (ಲ ಗೌ ೧೫೨)

ಆ ಮರಕ್ಕೆ ಈ ಮರಕ್ಕೆ ಹಾರುಗಿಣಿ
ಪಟ್ಟಿರಾಯನಿಗೆ ಮೂರುಗಿಣಿ
ಪಟ್ಟಣಗಂಟೆ ಹಾರುಗಿಣಿ (ಲ ಗೌ ೧೫೦)
ವೀಳಯದೆಲೆ

ಆ ಗಿಡ ಈ ಗಿಡ ಹಬ್ಬತೈತಿ
ಪ್ಯಾಟ್ಯಾಗ ಹೋಗಿ ಮೆರಿತೈತಿ
ಶುಭಕಾರ್ಯದ್ಯಾಗ ಮುಂದಿರತೈತಿ (ವಾಲಿ ೨–೧೯)

ಗಣಪತಿ ರಾಯಾ ಗಣಕಿಲೆ ಹೊಡೆದರೆ
ಸದರ ಸಾವಿರ ಹಣ್ಣ ಉದರತಾವ (ಲಠ್ಠೆ ಭಾಗ ೪–೮೫)

ಮೂರ್ಜನಾ ಬಂದೊ ಬಾವಿ ಹಾರ್ದೊ
ವಬ್ಬಗ್ದಾ ವಬ್ಬೇಲ್ದಾ ವಬ್ಬುಳ್ಗ್ದಾ (ಶಾಂ ನಾ ೩೮೬)
ವೀಳ್ಯ

ಅರಕಟ್ಟು ಮರಕಟ್ಟು
ಮರಕ್ಕೆ ಮೂವತ್ತುಕಟ್ಟು (ಜೀಶಂಪ ೩೩)

ಆ ಮರಕೆ
ಈ ಮರಕೆ ಹಬ್ಬೋ ಗಿಣಿ
ಪಟ್ಟಣಕ್ಕೆಲ್ಲ ಸಾರೋ ಗಿಣಿ (ಸು ೮೩)
ವೀಳ್ಯದೆಲೆ

ಆಚೆ ಮರಕ್ಕೂ ಈಚೆ ಮರಕ್ಕೂ ಹಬ್ಬದೆ
ಪೇಟೆಗೆ ಹೋಗಿ ಸಾರ್ತದೆ (ರಾ ಗೌ ೭೨)
ವೀಳ್ಯೆದೆಲೆ

ಸಾಲ್ಯಾಗ ಸಾಲಿ ಯಾವ ಸಾಲಿ (ಲಠ್ಠೆ ಭಾಗ ೫–೨೭೩)
ವ್ಯಾಯಾಮ ಸಾಲಿ

ಎಲೆ
ಎಲೆ ತುಂಬ ಕಲೆ ತುಂಬ ಮಾತು (ಲ ಗೌ ೨೪೨)
ವೃತ್ತ ಪತ್ರಿಕೆ

ಹದ್ದಿಗೆ ಹದಿನಾರು ಕಣ್ಣು (ಲ ಗೌ ೯೯೨)
ವಂದರಿ

ನಿನ್ನ ತೀಟಕ್ ನೀನೋದೆ
ನಿನ್ನ ತೀಟ್ ಕಂಬಕ್ಕ (ಮಂ ೧.೫–೭೧)
ವಂದ್ರಿ

ಮುಚ್ಚಿದರೂ ಇಲ್ಲ ಬಿಟ್ಟರೂ ಇಲ್ಲ ಹಿಡಿದರೂ ಇಲ್ಲ (ಲ ಗೌ ೮೪೩)
ಶಬ್ದ

ಕಯ್ಯುಂಟು ಕಾಲಿಲ್ಲ ಶಿರಹರದ ಮುಂಡಾ
ಒಳಗೆ ನವಗಾಯ ಒಂಬತ್ತು ತುಂಡಾ
ಕಂಯ್ಕಳಚಿಕೊಂಡರೆ ತಾಮುರುಟಿಕೊಂಡು
(ಮಯ್ಮೆಲೆ ನೂರಾರು ಗಾಯವನೆ ಗೊಂಡಾ)
ಒಯ್ಯನೊಯ್ಯನೆ ಬಂದು ಹೆಗಲೇರಿಕೊಂಡಾ
ರಾಯರಾಯರಿಗೆಲ್ಲಾ ಒಪ್ಪಿಸಿಕೊಂಡಾ
(ರಾಯರಾಯರಿಗೆಲ್ಲಾ ತಾನೇ ಪ್ರಚಂಡಾ) (ಶಾಂ ನಾ ೪೨೪)

ಶರ್ಟ್

ಕೈಯಿದೆ ಕಾಲಿಲ್ಲ
ಮುಂಡವಿದೆ ರುಂಡವಿಲ್ಲ
ಊರಿಗೆ ಹೋಗು ಮುಂದ
ಜೋರಿಲೇ ಹೊರಗ ಬರತೈತಿ (ಇ ೪೧೯)

ಕೈಯುಂಟು ಕಾಲಿಲ್ಲ
ಮುಂಡವುಂಟು ರುಂಡವಿಲ್ಲ (ಇ ೪೨೧)

ಕೈಯುಂಟು ಕಾಲಿಲ್ಲ ಶಿವಹರಿದ ಮುಂಡ
ಮೈಯೆಲ್ಲ ನವಗಾಯ, ಒಂಬತ್ತು ತುಂಡ
ಕೈಯಿದ್ದು ಕೆಲಸಕ್ಕೆ ಬರದೆ ಹೊಯ್ಕೊಂಡ
ಅಯ್ಯಯ್ಯೋ ಎಂದು ರಾಯರನು ಅಪ್ಪಿಗೊಂಡ (ಇ ೪೨೨)

ಶರ್ಟು

ಒಂದ ಗಡಿಗಿ
ಒಂಬತ್ತ ತೂತ (ಲಠ್ಠೆ ಭಾಗ ೧–೧೭)

ಬಡಿಗ್ಯಾ ಮಾಡದ ಮನಿ
ಬಾಚಿ–ಕೆತ್ತದ ಮನಿ
ಅಂಬರದ ನನ್ನರಮನಿ (ಲಠ್ಠೆ ಭಾಗ ೧–೪೩)

ಶರೀರ

ಹೋಗಾಗ ಹತ್ತ ಮಂದಿ
ಬರಾಗ ಒಂಬತ್ತು ಮಂದಿ (ವಾಲಿ ೪–೪೦)

ಶವ ಸಂಸ್ಕಾರ

ಹೊರಗ ಸಿಹಿ ಒಳಗ ಸಿಹಿ
ಪೂರಾ ಸಿಹಿ– ಈ ವಸ್ತುಗಳು ಯಾವುವು (ವಾಲಿ ೨– ೮)
ಶಾರೀಕ, ಬದಾಮ, ಕಲ್ಲುಸಕ್ಕರೆ

ಸಾವಿರ ಜನ ಬಂದರೂ
ಸಂಜೆಯಾದ ಮೇಲೆ ಇರೋದಿಲ್ಲ (ಇ ೯೪೩)
ಶಾಲೆ

ಬೆಳಿಗ್ಗೆ ಹೊಡೆದಾಗ ಬೇಸರ ಸಂಜೆ ಹೊಡೆದಾಗ ಸಂತೋಷ (ಲ ಗೌ ೭೮೯)
ಶಾಲೆಯ ಗಂಟೆ

ಅರ್‌ಕಾಲ್ ತಲೆ ಕಳ್ಗೆ
ಅದ್ರ ಉತ್ರಾ ಯಾರಿಗೂ ಸಿಕ್ಕಾ (ಶಾಂ ನಾ ೩೮೮)
ಶಿಕ್ಕಾ

ಸೀಮ್ಗೆಲ್ಲ ಶಿವ ಶಿವ ಅಂತ ಬಂತು (ರಾ ಗೌ ೪೫೨)
ಶಿವರಾತ್ರಿ

ಹರನ ಹಾರ
ಹಾರನ ಆಹಾರ
ಆಹಾರನ ಪುತ್ರ
ಪುತ್ರನ ಮಿತ್ರ
ಮಿತ್ರನ ಶತ್ರು
ಶತ್ರುವಿನ ತಂಗಿ ನಾನ್ಯಾರು (ಇ ೧೦೧೭)

ಹರನ ಹಾರ
ಹಾರನ ಆಹಾರ
ಆಹಾರನ ಪುತ್ರ
ಪುತ್ರನ ಮಿತ್ರ
ಮಿತ್ರನ ಶತ್ರು
ಶತ್ರುವಿನ ತಂಗಿ ಯಾರು (ಲಠೈ ಭಾಗ ೫–೨೯೬)
ಶೂರ್ಪನಖಿ

ತಾರೆ ಗಿಂಡಿ ತತ್ತಾ ಗಿಂಡಿ
ಮುಚ್ಲಾತೆಗೆದ್ರೆ ಮುನ್ನೂರ್ಗಿಂಡಿ (ಶಾಂ ನಾ ೨೭೨)
ಶೆಮಂತ್ಗೆ

ನನಗೆ ಮಾತೆ ಶರಧಿ
ಹಿರಿಯಣ್ಣ ಸುಧಾಕರ
ಸಹೋದರಿ ಲಕ್ಷ್ಮೀ
ಭಾವ ಶ್ರೀಹರಿ
ಹೀಗಿದ್ದೂ ತಿರುಕನ ಕೈಯಲ್ಲಿ ಬಳಲುತ್ತಿರುವೆ (ವಾಲಿ ೨–೪೭)

ನೀರಾಗ ಹುಟ್ಟಿ ನೀರಾಗ ಬೆಳೆದ
ಊರೂರ ಮ್ಯಾಲ ಕೂಗತತಿ ಸೂರಿ
ಯಾವದ ಹೇಳ (ಲಠ್ಠೆ ಭಾಗ ೫–೧೯೪)

ನೀರಿನಲ್ಲೇ ಹುಟ್ಟುವದು
ನೀರಿನಲ್ಲೇ ಬೆಳೆಯುವದು
ಊರೂರ ಮೇಲೆ ಕೂಗುವದು
ಅದು ಏನು (ಇ ೬೭೪)
ಉಪ್ಪು / ನೀರಗುಳ್ಳಿ

ನೀರಿನಲೇ ಹುಟ್ಟೋದು
ನೀರಿನಲೇ ಬೆಳೆಯೋದು
ಊರೂರ ಮೇಲೆ ಕೂಗೋದು
ಮಾರನೀನಾದರೂ ತಿಳಿದ್ಹೇಳು (ಜೀಶಂಪ ೧೮೮೮)

ಬಿಳೀ ಬದನೆ ಕಾಯಿ ಊರೂರ್ಗೆಲ್ಲಾ ಭೋರ್ಗರೆಯುತ್ತೆ (ಲ ಗೌ ೭೭೧)

ಶರಧಿಯೆ ಎನಗೆ ಮಾತೆ
ಸುಧಾಕರನೆ ನನಗೆ ಹಿರಿಯಣ್ಣ
ಲಕ್ಷ್ಮಿಯೆ ನನಗೆ ಸಹೋದರೆ
ಹರಿಯೆ ನನಗೆ ಭಾವ
ಈ ನಾಲ್ವರಿದ್ದು ತಿರುಕನ ಕೈಗೆ
ಸಿಕ್ಕಿ ಬಳಲುವಂತಾಯ್ತು (ರಾ ಗೌ ೪೩೦)
ಶಂಖ

ಅಕ್ಕಟ ಅಕ್ಕಟ ವಾರೆ ಕಣ್ಣು
ಮುಕ್ಕಟಾ ಮುಕ್ಕಟಾ ಮೂರ್ಕಣ್ಣು
ಶಿದ್ದಾಪುರಕಟ್ಟಿಗೆ ವಂದೇಕಣ್ಣು (ಶಾಂ ನಾ ೩೮೭)
ಶಂಕಾ–ತೆಂಗು–ಅಡ್ಕ

ಯೆಲವೆಲವೋ ವಾಸುದೇವಾ
ನೆಲದೊಳಗೆ ಯೇನು ಸುದ್ದಿ
ರೆಕ್ಕೆಯುಂಟು ಹಾರಲಾರ
ಕಚ್ಚಿದವರಿಗೆ ಕಿಚ್ಚಾಗಿರುವೆ (ಶಾಂ ನಾ ೨೪೬)

ಶುಂಠಿ

ಆಯ್ಯು ಹೊಯ್ಯು ಮಣ್ಣೊಳಗೆ (ಲ ಗೌ ೧೫೩)

ಎಲೆ ಎಲೆ ಮಾದೇವ ನೆಲದೊಳಗೆ ಏನು ಸುದ್ದಿ
ಗುಂಯ್ ಗುಂಯ್ ಮಾತು
ಕೊಕ್ಕುಂಟು ತಿನ್ನಲಾರೆ ಪುಕ್ಕುಂಟು ಹಾರಲಾರೆ
ಇನ್ನೊಬ್ಬರಿಗೆ ಕಚ್ಚಲಾರೆ
ನನಗೆ ಕಚ್ಚಿದರೆ ಕಚಿಕಚಿಯಾಗಿ ಉರಿದೇನು (ಲ ಗೌ ೨೪೬)

ಕಚ್ಚಿದರೆ ಕಿಚ್ಚಾಗುವೆ
ಕೊಕ್ಕುಂಟು ಕೂಗಲಾರೆ
ರೆಕ್ಕೆಯುಂಟು ಹಾರಲಾರೆ
ನೆಲದೊಳಗೆ ಹೊಕ್ಕಿದರೂ ನನ್ನ ಬಿಡರು (ಚಂ ಸೆ ೭೩)

ಶುಂಠಿ

ಯೀಟೀಟ ಕಾಯಿ ಮಾಪಳ ಕಾಯಿ ತಿನ್ನೇಲೆಬೀಜಾ ಉಗುಳೆಲೆ ಸಿಪ್ಪಿ
(ಶಾಂ ನಾ ೨೪೭)

ವಂದ್ವಟ್ಟೆ ಯೆರಡ್ಜನಾ ಕಳ್ರು (ಶಾಂ ನಾ ೨೪೮)

ಶೇಂಗಾ

ಒಂದಂಕಣದ ಮನೆಯನು ಮಾಡಿ ಅಣಿಗೊಳಿಸಿ ಹೂಡಿ
ಬೆಂದವನ ಕರೆತಂದು ಒಳಗಡೆಯ ದೂಡಿ
ಒಂದಾಗಿ ಇಬ್ಬರು ವನಿತೆಯರು ಕೂಡಿ
ಒಂದಡಿಯ ಮೆಟ್ಟಿದರೆ ನೂರಾಯ್ತು ನೋಡಿ (ಚಂ ಸೆ ೬೩)

ಹೊಕ್ಕಿದ್ದು ಒಂದಾಗಿ ಹೊರಟಿದ್ದು ನೂರಾಗಿ (ಚಂ ಸೆ ೨೫೬)

ಶೇವಿಗೆ

ನಿಮ್ಮಪ್ಪನವ್ರು ಕೊಸ್ತರು
ನಿಮ್ಮವ್ವನವ್ರು ಯಸ್ತರು (ಮಂ ೧.೪–೫೧)

ಶ್ಯಾಮಿಗೆ

ಮಾಲಿಂಗನ ಬಳ್ಳಿ ತೊಡಕ್ಕೈತಿ (ಇ ೮೪೭)
ಶ್ಯಾವಗಿ

ಒಂದಂಕಣದ ಮನೆ ಒಳಗೆ
ವಾರಿನಿ ಧಯ ತೋಡಿ
ಬೆಂದವನ ತಂದು ಆ ಮನೆಗೆ ಕೂಡಿ
ಒಂದ್ಹಿಡಿ ಮುಟ್ಟಿದರೆ ನೂರಾಯ್ತು ನೋಡಿ (ಜೀಶಂಪ ೮೪)
ಶ್ಯಾವಗೆ

ಅಡಿಗಡಿಗಂಗಡಿ ಬಿದಿರು ಚಾವಡಿ
ನಡುಗುತ ಬಂದ ಗಡ್ಡದ ಸಾಬಿ (ಸು ೨೪)

ಅದುರದುರಂಗಡಿ ಬಿದಿರಿನ ಚಾವಡಿ
ಅದರುತ ಬಂದಾನ ಗಡ್ಡದ ಜೋಗಿ (ಇ ೧೦೦)

ಅರಗಡಿದಿಗೆ ಬಗ್ಗಿ ಕೊಂಡು
ಅರೆಗದ ಮಾಡಿಕೊಂಡು
ಅದನೆ ಮೂರಾಳು ಮಾಡ್ತಾರೆ (ಲ ಗೌ ೭೩)

ಅವ್ವ ಇಕ್ಕಿದ್ದು ಅಡೀಲೆ ಪಾಯ (ಸು ೫೦)

ಇಬ್ಬರಾಳು ಜಾಣದೀರು ಸೇರಿ
ಮಾಡಿಯಂತೆ ಮನೆ ಕಟ್ಟಿ
ಬೆಂದವನ ತಂದು ಆ ಮನೆಗೆ ಕೂಡಿ
ಒಂದು ಮೆಟ್ಟು ಮೆಟ್ಟಿದರೆ ನೂರೊಂದು ನುಡಿ ನುಡಿ (ಲ ಗೌ ೧೭೫)

ಎರಡು ತಿಕ್ಕಾಡ್ತವೆ ಒಂದು ಹೊರಳಾಡ್ತದೆ (ಲ ಗೌ ೨೨೭)

ಒಂದು ಅಂಕಣ ಮನೆಯ ಒರಳನ್ನು ತೋಡಿ
ಬೆಂದವ ಹಿಡಿತಂದು ಆ ಮನೆಯ ಕೂಡಿ
ಚಂದದಿಂ ವನಿತೆಯರು ಕೈ ಎರಡು ಕೂಡಿ
ಒಂದೆಡೆಯ ಮುಟ್ಟಿದರೆ ಸಾವಿರದು ನೋಡಿ (ಇ ೨೯೫)

ಕುಂಟು ಯಾತ ಕುಣಿದು ಕುಣಿದು ಹಿಸುಕಿದ (ಸು ೨೧೬)

ನಮ್ಮಪ್ಪ ಹೇತ ನಿಮ್ಮಪ್ಪ ತಿಂದ (ಲ ಗೌ ೬೪೫)

ಮೂರು ಕಾಲಿನವನು ಹೇಲೋದು
ಎರಡು ಕಾಲಿನವನು ತಿನ್ನೋದು (ಲ ಗೌ ೮೫೯)

ಹಡಗಿನ ಅಂಗಡಿ ಬೆಡಗಿನ ಸಾಬಿ
ಗಡ್ಡಮೀಸಿ ಹಾಕಿಕೊಂಡು ನಡುಗುತ ನಡುಗುತ ಬಂದ (ಲ ಗೌ ೯೭೮)
ಶ್ಯಾವಿಗೆ

ಒಂದಂಕಣದ ಮನೆ ಒಳಗೆ
ಬೆಂದವನ ಕರತಂದು
ಒಂದಾಗಿ ನೂಕಿದರೆ
ನೂರಾಯ್ತು ನೋಡಿ (ಇ ೨೭೧)

ಮೂರು ಕಾಲಿನ ಕೋತಿ ಹೆತ್ತರೆ ಪ್ರೀತಿ (ಇ ೮೭೫)
ಒತ್ತು ಶಾವಿಗೆ

ಮಳೆ ಹುಯ್ಯಲಿಲ್ಲ ಬೆಳೆ ಆಗಲಿಲ್ಲ
ಹಸುರಿಗೆ ಇದೆ
ಅಗೀಲಿಲ್ಲ ಉಗೀಲಿಲ್ಲ
ಕೆಂಪಗಿದೆ (ರಾ ಗೌ ೩೮೮)
ಶ್ಯಾವಗೆ ಒತ್ತುವುದು

ಬಡ್ಡ ಇಟ್ಟಬುಟ್ಟ
ಬಲ್‌ಗಾರ ಎತ್ತಿ ಜೇಬ್ಗಾಕ್ಕಂಡ (ಮೈ.ಕ.) (ಮಂ ೧.೫–೭೪)
ಶ್ಯಾಮಿಗೆ ವೊಳ್ಳು

ಅಪ್ಪ ಅಪ್ಪ ಮರ ನೋಡು
ಮರಕ್ಕೆಲ್ಲ ಕೊಂಬೆ ನೋಡು
ಕೊಂಬೆಗೆಲ್ಲ ಕೊನೆ ನೋಡು
ಕೊನೆಗೆಲ್ಲ ಎಲೆ ನೋಡು
ಎಲೆಗೆಲ್ಲ ತೂತು ನೋಡು
ತೂತಿಗೆಲ್ಲ ಮಾತು ನೋಡು (ರಾ ಗೌ ೨೭)
ಶ್ಯಾವಗೆ ಒಳ್ಳು. ಶ್ಯಾವಗೆ

ಕಾಲ್ಮೇಲೆ ಕಾಲ್ಹಾಕಿಕೊಂಡು
ಕನ್ನಡಿ ಹಿಡಿದುಕೊಂಡು
ಅದರೊಳಕ್ಕೆ ಅದನ್ಹಾಕಿಕೊಂಡು
ಅದೃಷ್ಟ ನೋಡು (ರಾ ಗೌ ೨೦೧)
ಶ್ಯಾವಗೆ ಹೋಳು

ತಪತಪ ಕರಡಿ ತಾಮ್ರಾಳ್ದ ಬಿಂದಿಗೆ
ಮುಚ್ಯಪ್ಪ ಕರಡಿ ಮುನೂರು ಬಾಗಿಲು (ಲ ಗೌ ೫೮೪)

ನಾಲ್ಕು ಕಾಲಿನ ನರಸಿಂಹಯ್ಯನವರಿಗೆ
ನಲವತ್ತಾರು ಜನಿವಾರ (ಲ ಗೌ ೬೬೯)

ಮುತ್ತಿನ ಪೆಟ್ಟಿಗೆಗೆ ಮುನ್ನೂರು ಬಾಗಿಲು (ಲ ಗೌ ೮೪೫)
ಶ್ಯಾವಿಗೆ ಒರಳು

ಅಟ್ಟದ ಮೇಗಳ ಪುಟ್ಟಣ್ಣ
ಹಿಟ್ಟಾಯಿತ್ಲೆ ಇಳಿಯಣ್ಣ (ಲ ಗೌ ೩೦)
ಶ್ಯಾವಿಗೆ ಒರಳು–ಉಪ್ಪಿನಕಾಯಿ

ಸತ್ತ ಅಡಿಕೆ ಮರದಲ್ಲಿ ಎಳೆಸಿಂಗಾರದ ಹೂವು (ಲ ಗೌ ೯೧೦)
ಶ್ಯಾವಿಗೆ ಒರಳು–ಶ್ಯಾವಿಗೆ

ಅದರದರ ಅಂಗಡಿ ಬಿದಿರಿನ ಚಾವಡಿ
ಗುಡುಗುತ ಬಂದನು ಗಡ್ಡದ ಜೋಗಿ (ಲ ಗೌ ೫೨)
ಶ್ಯಾವಿಗೆ–ಜೇನುಹುಟ್ಟ

ಏಣಿಯಿಂದ ಬಿದ್ದವನಿಗೆ ಏನೇನು ಆರೈಕೆ?
ಹಿತ್ತಲ ಹೀರೇಕಾಯಿ ಕತ್ತರಿಸಿದ ಬದನೆಕಾಯಿ
ಗಾಣದ ಎಣ್ಣೆ ಗಡಿಗೆ ತುಪ್ಪ (ಲ ಗೌ ೨೫೫೫)
ಶ್ಯಾವಿಗೆ–ತರಕಾರಿ ಸಾರು

ನೀರಲ್ಲಿ ಮುಳುಗುವದು ಬಿಳೀದು
ಮೇಲೆ ತೇಲುವದು ಕರೀದು (ವಾಲಿ ೫–೩೬)
ಸಕ್ಕರಿ–ಚಹಾ

ಅಂಗಡಿಯಲ್ಲಿಟ್ಟು ಮಾರದಲ್ಲ
ತಕ್ಕಡಿಯಲ್ಲಿಟ್ಟು ತೂಗೋದಲ್ಲ
ಅದಿಲ್ಲದಿದ್ರೆ ನಮ್ಮನೆ
ಅಚ್ಚಟ್ಟೆ ಆಗೋದಿಲ್ಲ (ನಾ ಗೌ ೧೬)

ಅಂಗಡೀಲ್ಮಾರೋದಲ್ಲ
ತಕ್ಡೀಲ್ತೂಗೋದಲ್ಲ
ಅದಿಲ್ದಿದ್ರೆ
ನಿಮ್ಮ ಮನೇ ದೇವರು ನಡೆಯೆದೇ ಇಲ್ಲ (ಜೀಶಂಪ ೭)

ಉಬ್ಬೂರಿನಿಂದ ಒಂದು ಮಾರು ಬೆತ್ತ ತಂದರು
ಅರಮನೆ ಬಿಗಿದು ನೆರೆಮನೆ ಬಿಗಿದು
ಇನ್ನೂ ಒಂದು ಚೂರು ಉಳೀತು (ಲ ಗೌ ೨೦೩)

ಒಂದು ಅಜ್ಜಿ ಉಂಡೆ ಮಾಡಿ ರೊಟ್ಟಿ ಮಾಡಿ ಪಾಯಸ ಮಾಡಿ
ಮನೇನೆಲ್ಲ ಸುತ್ತು ಬರ್ತದೆ (ಲ ಗೌ ೩೪೨)

ತಕ್ಕಡಿಯಲ್ಲಿಟ್ಟು ತೂಗುವುದಿಲ್ಲ
ಮಾಪಿನಿಂದ ಅಳೆಯುವದಿಲ್ಲ
ಅದಿಲ್ಲದೆ ಹಬ್ಬವಾಗುವದಿಲ್ಲ (ವಾಲಿ ೩–೧೧)

ತಟ್ಟೆಯಲಿಟ್ಟು ತೂಗುವುದಲ್ಲ
ಹೆಡಗೆಯಲಿಟ್ಟು ಮಾರುವುದಲ್ಲ (ಲ ಗೌ ೫೮೧)

ದಿಪ್ಪನೆ ಬಿತ್ತು ದಪ್ಪನೆ ಹೆರಕಿದರು (ಲ ಗೌ ೬೩೦)

ಸಂತೇಲೆ ಮಾರೋದಲ್ಲ
ತಕ್ಕಡೀಲಿ ತೂಗೋದಲ್ಲ
ಅದು ಇಲ್ಲದಿದ್ರೆ ನಮ್ಮನೆ ಹಬ್ಬಾನೆ ಇಲ್ಲ (ನಾ ಗೌ ೨೦೮)

ಹೊತ್ತ್ ಮಾರುವುದಲ್ಲ ತಕ್ಕಡೀಲಿ ತೂಗುವುದಲ್ಲ
ಅದಿಲ್ಲದೆ ನಮ್ಮನೆಗೆ ದೇವರು ಬರೋದಿಲ್ಲ (ಲ ಗೌ ೧೦೭೫)
ಸಗಣಿ

ಕರಡಿ ಮನೆ ಸಾರಿಸುತ್ತದೆ
ತುಂಬೆ ನೀರು ಹೊರುತ್ತದೆ
ಹಂದಿ ಹೂವು ಕೊಯ್ಯುತ್ತದೆ (ಲ ಗೌ ೩೯೦)
ಸಗಣಿ–ತಂಬಿಗೆ–ಹೂವು

ಚಿಕ್ಕಕ್ಕನಿಗೆ ಪುಕ್ಕುದ್ದ (ರಾ ಗೌ ೨೪೫)
ಸಟಗ(ಸೌಟು)

ಯಳಂದೂರ ಹೆಣ್ಣು ಬಿಳಿಗಿರಿರಂಗನ ಬೆಟ್ಟದ ಗಂಡು
ಎರಡೂ ಗಂಟ್ಹಾಕೊಂಡವೆ (ಲ ಗೌ ೮೮೦)
ಸಟ್ಟುಗ

ಪೂಜೆಯ ಭಟ್ಟ
ಜುಟ್ಟು ಹಿಡಿಯುತನಕ
ಮಾತಾಡೂದಿಲ್ಲ (ಇ ೭೦೮)
ಸಣ್ಣಗಂಟೆ

ಗಟ್ಟದ ಸೂಳೆಗೆ ಸಾವಿರಾರು ಮೂಗುತಿ (ಶಾಂ ನಾ ೩೨)
ಸಣ್ಣ ಮೆಣಸಿನಗಿಡ

ಭೂಮಿಗಿಂತ ದೊಡ್ಡದ್ಯಾವುದು
ಆಕಾಶಕ್ಕಿಂತ ಅಗಲವಾದ್ದು ಯಾವುದು
ನೀರಿಗಿಂತ ತೆಳುವಾದ್ದು ಯಾವುದು (ಸು ೩೯೩)
ಸತ್ಯ, ಆಶೆ, ಗಾಳಿ

ಒಬ್ಬ ರಾಜನ ಮನಿಗೆ ಭಿಕ್ಷುಕ ಹೊಗಿದ್ದ
ಅವಾಗ ರಾಜ ಹೇಳಿದಾ " ಈಗ ಬ್ಯಾಡಾ
ಹೋಳಿಹುಣ್ಣಿವಿ, ಅಲಾಹಬ್ಬ, ಸೀಗೀ ಹುಣ್ಣಿವಿ ಕೂಡಿ
ಬಂದಾಗ ಬಾ ಕೋಡತೀನಿ" ಅಂದ, ಆದರ ಯಾವಾಗ? (ಇ ೩೦೦)
ಸತ್ತಾಗ

ಈಟೀಟ ಹುಡುಗ ಎಷ್ಟು ಕಾರತೈತಿ (ಇ ೨೦೭)
ಸಬಕಾರ

ಕನ್ನಡ ಜಿಲ್ಲೆಯಿಂದ ಕಬ್ಬು ತಂದೆ
ಎಡದ ಹಲ್ಲಿಗೂ ನಾಟೋದಿಲ್ಲ
ಬಲದ ಹಲ್ಲಿಗೂ ನಾಟೋದಿಲ್ಲ (ಲ ಗೌ ೩೮೨)
ಸಬ್ಬಲ್

ಟಾಕುಟೀಕಿನ ಮನೆ
ತಗರು ಕಂಠಿನ ಮನೆ
ಬಾಚಿ ಮುಟ್ಟದ ಮನೆ
ಬಲ್ಲಿದನಿಗೆ ಬೇಕಾದ ಮನೆ (ಇ ೫೫೯)

ಹಾಕಿದ್ ಬೀಗ ತೆಗೆಯಾಂಗಿಲ್ಲ (ಮಂ ೧.೫–೮೯)

ಹಾಕಿದ ಬಾಗಿಲು ತೆಗೆಯೋದಿಲ್ಲ (ಸು ೫೧೧)
ಸಮಾಧಿ

ನಾಲ್ಕು ಚೌಕದ ಮನೆ ನಗರೆ ಬಣ್ಣದ ಹೂ
ಹಾಕೋದು ಒಂದು ಬಿತ್ತೋರು ನೂರಾರು (ಲ ಗೌ ೬೭೩)
ಸಮಾಧಿಯಲ್ಲಿ ಹೆಣ ಹೂಳುವುದು

ಅಮ್ಮನ ಸೀರೆ ಭಾರೀ ಸೀರೆ
ನೀಲಿ ನೀಲಿ ಸೀರೆ
ನಿರಿಗೆ ಎಣಿಸೋಕೆ ನಾರಾಯಣನಿಗೂ ಆಗೊಲ್ಲ (ಲ ಗೌ ೬೮)

ನಮ್ಮಮ್ಮ ಹುಟ್ಟಿಹಳು
ಬಲು ಸುಂದರದ ನೀಲಿಸೀರೆಯುಟ್ಟಿಹಳು
ಅದರ ನೆರಿಗೆಯ ಸೌಂದರ್ಯ ಸಂಪತ್ತುಗಳನು
ಬಣ್ಣಿಸುವರು ಜಗದೊಳಿಲ್ಲ (ಲ ಗೌ ೬೪೬)
ಸಮುದ್ರ

ಎಲೆಲೆಗೆಲ್ಲ ಅರುಗಿಲ್ಲದ ಎಲೆ ಯಾವುದು (ಸು ೧೧೮)
ಸರ್ವೆಮರದ ಎಲೆ

ತೊಡೆಗಾತ್ರ ಮರ
ಸೂಜಿಗಾತ್ರ ಎಲೆ (ಸು ೩೦೯)

ಸಾಲು ಸಾಲು ಚಕ್ಕೋತಿನ ಮರ
ಕೊಳ್ಳೋರು ಬಂದ್ರೆ ಎಪ್ಪತ್ತೈದು ರೂಪಾಯಿ (ಸು ೪೬೪)
ಸರ್ವೆಮರ

ಗಿಡ್ಡ ಹೊಟ್ಟೆ ಮುಂಡೆಗೆ ಎರಡು ಹೊಟ್ಟೆ (ಲ ಗೌ ೫೧೬)

ತಗ್ಗಿನ ಗದ್ದೇಲಿ ನೀರು
ಮೇಲಿನ ಗದ್ದೇಲಿ ಬೇಸಾಯ (ಲ ಗೌ ೫೭೯)

ಮೇಲಿನ ಗದ್ದೇಲಿ ನೀರಿಲ್ಲ
ಕೆಳಗಿನ ಗದ್ದೇಲಿ ನೀರುಂಟು (ಲ ಗೌ ೮೭೦)
ಸರಗೋಲು

ಹಸರ ಚಿಟ್ಯಾಗ
ಘಟ್ಟಿ ಅವಲಕ್ಕಿ (ಲಠ್ಠೆ ಭಾಗ ೪–೧೮೭)
ಸವತಿಕಾಯಿ

ದೂರಿಂದ್ಬತ್ತು ಕಟ್ಟೆ ಬುಡ್ದಲ್ನಿಲ್ತು
ಕಟ್ಟೆರ್ವೆ ಬಂತು ಕಚ್‌ಗಂಡೋಯ್ತು

ವೋಡ್ ವೋಡ್ ಬತ್ತು ವಕ್ಕಾಲಿಲಿ ನಿಲ್ತು (ಶಾಂ ನಾ ೩೮೯)
ಸವ್ವೆಹೊರೆ

ನಾನು ನೆಟ್ಟ ಮರ ನನಗೇ ಹತ್ತಲಿಕ್ಕೆ ಆಗೋಲ್ಲ (ಲ ಗೌ ೬೬೦)
ಸಿಹಿ

ಒಂಟಿಕಾಲಿನ ಹಕ್ಕಿ ಕೊಕ್ಕಿನಲ್ಲಿ ನೀರು ಕುಡಿಯಲ್ಲ
ಪುಕ್ಕದೊಳಗೆ ಕುಡೀತದೆ (ಸು ೧೩೭)
ಸಸ್ಯ

ಮೂರ ಕಾಲಿನ ಮೇಲೆ ನಿಂತು
ನೆತ್ತಿಲೇ ನೀರು ಕುಡೀತೈತೆ (ಇ ೮೭೩)
ಸಾಣೀಕಲ್ಲು

ಅರೆವ ಕಲ್ಲಿನ ಮೇಲೆ
ಮರವು ಹುಟ್ಟಿದ ಕಂಡೆ
ಮರದ ಮೇಲೆರಡು ಕರಿಕಂಡೆ
ವಾಸನೆಯು ಬರುತಿಹುದ ಕಂಡೆ (ಇ ೧೩೩)

ಅಂಗೈ ಅಗಲ ಗದ್ದಿ ಮುಂಗೈ ಅಗಲ ಮ್ಯಾರಿ
ನೀರ ಹಕ್ಕ್ಯಂದ್ ಹೊಲ ಹೊಡೀತರ್ (ಲ ಗೌ ೧೦೮)
ಸಾಣೆಕಲ್ಲು

ಅರೆಕಲ್ಲಿನ ಮೇಲೆ
ಮರ ಮೂಡಿದುದ ಕಂಡೆ
ಮರದ ಮೇಲೆರಡು
ಕರಗಳನು ಕಂಡೆ
ಅಂದು ಮುಂದೆ ಶಿವನ ಮುಖದಲಿ
ಮೆರೆವುದ ಕಂಡೆ (ರಾ ಗೌ ೩೯)
ಸಾಣೆಕಲ್ಲು, ಗಂಧದ ಕೊರಡು

ಒಡಮುರಕ ಸುತ್ತೋದು
ಬಾಯಿ ಆರಿದ್ದಂಗೆ
ತಾ ನೀರ ಕುಡಸೋದು (ಇ ೨೭೦)

ಸಾಣೇಕಲ್ಲು

ಹಲ್ಲಣ ಕುದ್ರೆಗೆ ಮಯ್ಯೆಲ್ಲಾ ಗಾಯಾ (ಶಾಂ ನಾ ೩೯೨)

ಸಾಣ್ಣೆ

ಎಲ್ಲಾರ್ನ ಸುಚಿ ಮಾಡುವ ನಾನ್ಯಾರು
ನೀರಾಗ ಬುರು ಬುರು ನೊರಿ
ನಾ ಎಲ್ಲಾರಿಗೂ ಬೇಕು ಕೊಳಿ ನೀಗಾಂವಾ
ಹೊಳಪ ನೀಡಾಂವಾ ಪಿರತಿ ಗಳಸಾಂವಾ
ನಾ ಯಾರು (ಲಠ್ಠೆ ಭಾಗ ೫–೮೪)

ತಿನ್ನೂದಲ್ಲ ಉಣ್ಣೂದಲ್ಲ
ಕೈಯಾಗ ಸಂವಿತತಿ (ಲಠ್ಠೆ ಭಾಗ ೫–೧೬೯)

ಸಾಬೂಣ

ತಿನ್ನಕದಲ್ಲ ಉಣ್ಣಕದಲ್ಲ ಕೈಯಾಗೆ ಸವಿಕತತಿ (ಲ ಗೌ ೬೦೨)

ನೋಡಿದ್ರೆ ತರತರ ಬಣ್ಣ
ಉಜ್ಜಿದರೆ ಒಂದೇ ಬಣ್ಣ (ರಾ ಗೌ ೩೩೧)

ಮೇಲೆ ನೋಡಿದರೆ ನಾನಾ ಬಣ್ಣ
ಉಜ್ಜಿಕೊಂಡರೆ ಒಂದೇ ಬಣ್ಣ (ಚಂ ಸೆ ೨೦೯)

ಸಾಬೂನು

ಬತ್ಮರ್ದ್ದಲ್ಲಿ ಮುತ್ತೊರಗ್ತು (ಶಾಂ ನಾ ೪೫೭)

ಸಾಮ್ಗೆ

ಹಿಡಿ ನನ್ನ ಹಿಡಿಕಿ
ಹಾಕ ನನ್ನ ತೊಡ್ಯಾಗ (ವಾಲಿ ೮–೨೮)

ಸಾಯಕಲ್ಲ್

ಅಡಡೀಲಿ ಉಂಟು
ಜಂಬುನೇರಳೆ ಹಣ್ಣು
ಕೊಳ್ಳುವವರುಂಟು
ತಿನ್ನುವವರಿಲ್ಲ (ರಾ ಗೌ ೧೩)

ಅಂಗಡಿಯಲ್ಲಿ ಮಾರೋದು
ಜಂಬುನೇರಳೆ ಹಣ್ಣು
ಕೊಂಬೋರುಂಟು
ತಿಂಬೋರಿಲ್ಲ (ರಾ ಗೌ ೫೫)

ಅಂಗಡೀಲಿರುತ್ತೆ ಜಂಬುನೇರಳೆ
ಕೊಂಬೋರುಂಟು ತಿಂಬೋರಿಲ್ಲ (ಚಂ ಸೆ ೨೮)
ಸಾಲಿಗ್ರಾಮ

ಅತಂತ್ರ ಗಂಗೆ
ಅತ್ಗಳಗಂಗೆ (ನಾ ಗೌ ೨೫)
ಸಾವಿಗೆ

ಅತ್ತೆದು ಅಂಗೈ ಅಗಲ
ಮಾವುಂದು ಮುಂಗೈ ಗಾತ್ರ (ನಾ ಗೌ ೨೮)
ಸಾವಿಗೆ ಕೊಂತ

ಅಂಚಿನಕಡ್ಡಿಯಂಗೆ ಕಾಯಿ
ಒಳಗೆ ನೋಡಿದ್ರೆ ರಾಗಿ ಕಾಳು (ರಾ ಗೌ ೬೦)

ಕುಂದಲಗೂಡಿನಲ್ಲಿ ಕೂಸು
ನಂಜನಗೂಡಿನಲ್ಲಿ ನಾಸು
ಅದ ಒಡೀಸ್ದವನಿಗೆ
ಮೂರ್ಕಾಸು (ರಾ ಗೌ ೨೦೬)

ಸಾರಿಗಾಕೊ ಪದಾರ್ಥದಲ್ಲಿ
ಚಿವುಕಿದ್ರೆ ನಾಲ್ಕು ಬ್ಯಾಳೆ
ಆಗೋ ಪದಾರ್ಥ ಸಾಸಿವೆ (ಮಂ ೧.೪–೭೯)
ಸಾಸಿವೆ

ಕಟ್ಟರ ಕಾಳ್ಗರುವಾಯ್ತು
ನುಚ್ಚಿರ ಹೋರ್ಗರುವಾಯ್ತು
ತಿಪ್ಪೆ ಮೇಲಿರೋ ಬಗ್ಗರ್ಗೆ ಹೊಟ್ಟೆನೋವತ್ಕತ್ತು (ಲ ಗೌ ೩೭೨)
ಸಾಸಿವೆ ಹುರಿಯುವುದು

ಅಂಗೈ ಅರಮನೇಲಿ
ರಂಗಚಾರ್ರ ಪುರಾಣ (ಸು ೬೭)

ಒಂದು ಕಾಳು ಸುಲಿದರೆ ನಾಲ್ಕು ಬೇಳೆ (ಸು ೧೫೭)
ಸಾಸುವೆ

ಬಿಳಿ ಲಂಗದ ಹುಡುಗಿ ಅಂಗಡ್ಯಾಗೆ ಕುಳಿತಾಳೆ
ರೊಕ್ಕಾ ಕೊಟ್ಟರೆ ಬರುತಾಳೆ ಬೆಂಕಿಯನ್ನು ಬೇಡುತಾಳೆ
ಜಗ್ಗಿದರೆ ಬರುತಾಳೆ ಬಿಟ್ಟರೆ ಹೋಗುತಾಳೆ (ಇ ೭೫೫)

ಬೆಳ್ಳಿ ಲಂಗದ ಸುಂದರಿಗೆ ಮೈಯೆಲ್ಲಾ ಚಿನ್ನ (ಇ ೭೭೨)

ಮಾರೀಗಿ ಬೆಂಕಿ ಮುಕಳ್ಯಾಗ ಹೊಗಿ (ವಾಲಿ ೮–೪೩)

ಮಾರೀಗೆ ಬೆಂಕಿ
ಮುಕಳಾಗ ಹೊಗಿ (ಇ ೮೪೫)
ಸಿಗರೇಟು

ಬಿಳಿ ಲಂಗದ ಹುಡುಗಿ ಎಳೆದರೆ ಬರ್ತಾಳೆ ಬಿಟ್ಟರೆ ಓಡ್ತಾಳೆ (ಲ ಗೌ ೭೬೬)
ಸಿಗರೇಟು–ಹೊಗೆ

ಛತ್ತಿಸ ಕೋಟಿ ಗುಡ್ಡದ ಮ್ಯಾಲಿಂದ
ಲಡ್ಡ ಕಡಸುರ ಲಡ್ಡಬಂದ
ಪಾತಾಳಕ ಬಿದ್ರ ಪಾತಾಳದಾನ ಹಕ್ಕಿ
ಮಾತಾಡತಾವ (ಲಠ್ಠೆ ಭಾಗ ೨–೩೯)
ಸಿಡ್ಲ

ಅಲ್ಲೂ ಇಲ್ಲ ಇಲ್ಲೂ ಇಲ್ಲ
ಕಡಕೋಳ ಸಂತ್ಯಾಗ ಇಲ್ಲ
ಸಾವಿರ ರೂಪಾಯಿ ಕೊಟ್ಟರೂ
ಮಗ ಸನಮಂತ ಆಗವ್ವೊಲ್ಲ (ಇ ೧೩೯)
ಸಿಡಿಲು

ತಂದೆ ಗರಗರ ತಾಯಿ ತರಕಲು
ಮಗಳು ಬೋಡಿ ಮೊಮ್ಮಗಳು ಕಮ್ಮಗೆ (ವಾಲಿ ೨–೭೧)

ನಡೆಯುವ ಕಾಲೆಂಟು
ನಡೆಯದ ಕಾಲೆರಡು
ನುಡಿಯುವ ಬಾಯಿ ನಾಲ್ಕು
ನುಡಿಯದ ಬಾಯಿ ಒಂದು
ಒಟ್ಟು ತಲೆ ಐದು (ವಾಲಿ ೪– ೪೨)

ಹಸರಂಗಿ ಬಿಳಿ ಕಮಾನ
ಅದರಾಗ ಕುಂತಾನ ಕರೀ ಜವಾನ (ವಾಲಿ ೨– ೬೦)
ಸಿದಿಗೆಯ ಮೇಲೆ ಹೊತ್ತ ಹೆಣ

ಅಕ್ನ ಮನೆಗೆ ತಂಗೆ ಹೋಗ್ತು
ತಂಗಿ ಮನೆಗೆ ಅಕ್ ಹೋಗ್ತಿಲ್ಲೆ (ಶಾಂ ನಾ ೩೯೩)
ಸಿದ್ದೆ–ಕೊಳ್ಳಾ

ಹೋಗುತ್ತಾ ಬರುತ್ತಾ ಇರುವುವು ಎರಡು
ಹೋದ ಮೇಲೆ ಬರಲಾರವು ಎರಡು
ಬಂದ ಮೇಲೆ ಹೋಗಲಾರವು ಎರಡು (ಲ ಗೌ ೧೦೮೧)
ಸಿರಿತನ–ಬಡತನ, ಪ್ರಾಣ–ಮಾನ, ಕೀರ್ತಿ–ಅಪಕೀರ್ತಿ

ವೋಯ್ತಾ ಬತ್ತಾವಿರೋವೆರೆಡು
ವೋದ್ಮೇಲೆ ಬರದೇ ಇರವೆರಡು
ಬಂದ ಮ್ಯಾಲೆ ವೋಗದೆ ಇರೋದೊಂದು (ಮಂ ೧.೩–೮)
ಸಿರಿತನ, ಬಡತನ, ಮಾನ, ಪ್ರಾಣ, ಪುಣ್ಯ

ಹೋಗ್ತಾವು ಬರ್ತಾವು ಎರಡು
ಹೋದ ಮ್ಯಾಲ ಬರಲಾರವು ಎರಡು
ಬಂದ ಮ್ಯಾಲ ಹೋಗಲಾರವು ಎರಡು (ಇ ೧೧೧೭)

ಹೋಗ್ತಾ ಬರ್ತಾನಾ ಇರ್ತಾವ ಎಡ್ಡು
ಹೋದ ಮ್ಯಾಲ ಬರಲಾರ್ದುವು ಎಡ್ಡು
ಬಂದ ಮ್ಯಾಲ ಹೋಗಲಾರ್ದುವು ಎಡ್ಡು (ಲಠೈ ಭಾಗ ೫–೩೧೪)
ಸಿರಿವಂತಿಕೆ, ಬಡತನ, ಪ್ರಾಣ, ಮಾನ, ಕೀರ್ತಿ, ಅಪಕೀರ್ತಿ

ಅರಿವ್ಯಾಗ ಅರಿವಿ ಯಾವ ಅರಿವಿ (ಲಠೈ ಭಾಗ ೫–೨೯)
ಸಿಳ್ಳ ಅರಿವಿ

ಆತಂಗ ಪತಂಗ ತಪಾಲ್ಯಾಗ ಹೇತ್ಹಾಂಗ (ಇ ೧೬೯)
ಸೀಕರಣಿ

ಆತಂಗ ಪತಂಗ ತಪೇಲ್ಯಾಗ ಹೇತಂಗ (ವಾಲಿ ೮–೫೫)
ಸೀಕರಣೆ

ಸೊಂಟ ಮುರುಕಿ ಸಂತೆಗೆ ಹೋದ್ಲು (ಸು ೪೮೧)
ಸೀಗಡಿ

ಸೊಂಟ ಮುರಕಿ ಸಂತೆಗೆ ಹೋದ್ಲು (ಇ ೯೭೭)
ಸೀಗಡಿಕಾಯಿ

ಎಳ್ಳದಾನಿಕಿಂತಾ ಅದರ ಎಲಿ ಸುಣ್ಣ
ಆರ ತಿಂಗಳ ಮ್ಯಾಲಿಂದ ಒಡದ್ರ
ಆಕಳ ಕುಡತಾ ಮೂರ ತಿಂಗಳ
ಮ್ಯಾಲಿಂದ ಒಡದರ ಮೂಗ ಕುಡತಾ
ಈಗೇ ಒಡದರ ನಾನೇ ಬರತಾ (ಲಠ್ಠೆ ಭಾಗ ೫–೮೫)
ಸೀಗರಗ್ಯಾನ ಗಿಡ

ಗಿಡದಲ್ಲಿ ಹುಟ್ಟುವುದು
ಗಿಡದಲ್ಲಿ ಬೆಳೆಯುವುದು
ಶಾಸ್ತ್ರಕ್ಕೆ ಮೊದಲಾಗಿ ಬರುವುದು (ರಾ ಗೌ ೨೨೯)
ಸೀಗೆ

ತಲೆಗೊಂದು ಕಾಯಿ
ಎಲೆಗೊಂದು ಕಾಯಿ
ಆಟಕ್ಕೊಂದು ಕಾಯಿ
ಊಟಕ್ಕೊಂದು ಕಾಯಿ (ರಾ ಗೌ ೨೬೫)
ಸೀಗೆ, ಉಪ್ಪಿನಕಾಯಿ, ಪಗಡೆ, ಹುಣಸೆ

ತಲೆಗೊಂದು ಕಾಯಿ
ಆಟಕ್ಕೊಂದು ಕಾಯಿ
ಎಲೆಗೊಂದು ಕಾಯಿ
ದೇವರಿಗೊಂದು ಕಾಯಿ (ಸು ೨೯೪)
ಸೀಗೆಕಾಯಿ, ಪಗಡೆಕಾಯಿ, ಅಡಿಕೆಕಾಯಿ, ತೆಂಗಿನಕಾಯಿ

ಎಲೆ ಸಣ್ಣ ಕಾಲು ಮೋಟ ಮರ ಗರಗಸ (ಲ ಗೌ ೨೪೩)
ಸೀಗೆಮರ

ಹಣ್ಣಾದರೂ ಕಾಯೆನಿಸಿಕೊಳ್ಳುತ್ತದೆ (ಲ ಗೌ ೯೭೯)

ಹತ್ತು ವರ್ಷದಿಂದ ನಿಪ್ಪಣ್ಣಾಗಲಿಲ್ಲ ಕರ್ನಾಟಕದ ಕಾಯಿ (ಲ ಗೌ ೯೮೭)

ಸುತ್ತ ಮುತ್ತ ಬೇಲಿ ಕಟ್ಟ
ಸುವ್ವಲಮ್ಮನ ಕಾಯಿ ಬೆಳದು
ಕೊಳ್ಳೋರವರೆ ತಿನ್ನೋರಿಲ್ಲ (ಸು ೪೭೭)
ಸೀಗೇಕಾಯಿ

ಹಸಿರು ಕೋಟೆ
ಬಿಳಿ ಜನರು
ಕಪ್ಪು ಕಳ್ಳರು (ಇ ೧೦೪೧)
ಸೀತಾ ಪೇರಲ

ಕಳ್ಳೀ ಕಮಾನ
ಬೆಳ್ಳೀ ಇಮಾನ
ಅದರ ಮ್ಯಾಗ ಕುಂತಾನ ಕರಿಜವಾನ (ಇ ೩೭೮)

ಹಸರ ಗ್ವಾಡಿ
ಗ್ವಾಡ್ಯಾಗ ಬಿಳಿ ಕ್ವಾಟಿ
ಕ್ವಾಟ್ಯಾಗ ಕರಿಮನಸೇರಾ (ಲಠ್ಠೆ ಭಾಗ ೪–೧೯೨)

ಹಸರ ಡಬ್ಬಿಗಿ ಅರ್ವತ್ತ ಖಾನಿ (ಲಠ್ಠೆ ಭಾಗ ೪–೧೯೩)

ಹಸರ ಡೆಬ್ಬಿ ಅರವತ್ತು ಖಾನಿ
ಅದರಾಗ ಕುಂತಾರ ಕರಿಜವಾನಿ (ಲಠ್ಠೆ ಭಾಗ ೪–೧೮೩)

ಹಸಿರು ಕೋಟೆಯೊಳಗೆ ಬಿಳಿ ರಾಜ
ಅದು ತಿಂದರೆ ಹೊರಬರುವದು ಕರೇ ಬೀಜ (ವಾಲಿ ೨–೫೫)

ಹಸಿರು ಗೋಡೆ ಬಿಳೀ ಕೋಟು ಕರೀ ಮನುಷ್ಯರು (ಲ ಗೌ ೧೦೧೩)
ಸೀತಾಫಲ

ಕಳ್ಳಿಕಮಾನ ಬೆಳ್ಳಿ ಇಮಾನ
ಅದರ ಮ್ಯಾಗ ಕುಳಿತಾನ
ಕರಿ ಜವಾನ (ಲಠ್ಠೆ ಭಾಗ ೪–೬೬)
ಸೀತಾಫಲ ಹಣ್ಣ

ಒಳ್ಗ ಹಲ್ಲು ಮ್ಯಾಲ್ ಕಣ್ಣು (ಮಂ ೧.೪–೨೭)

ಹಸಿರು ಕೋಟೆಯ ಒಳಗೆ
ಬಿಳೀರಾಜ
ಅದ ತಿಂದರೆ ಹೊರ ಬರ್ತಾನೆ
ಕರೀ ರಾಜ (ರಾ ಗೌ ೪೪೧)
ಸೀತಾಫಲದ ಹಣ್ಣು

ಹಸಿರು ಕೋಟೆ
ಅದರೊಳಗೆ ಬಿಳಿ ಕೋಟೆ
ಅದರೊಳಗೆ ಕೆಂಪು ಕೋಟೆ
ಅದರೊಳಗೆ ಬಿಳಿ ಮಕ್ಕಳ ಸಾಮ್ರಾಜ್ಯ (ಲ ಗೌ ೧೦೧೦)
ಸೀಬೆಹಣ್ಣು

ಮರದೊಳಗೆ ಮರ ಹುಟ್ಟಿ
ಭೂಚಕ್ರದ ಕೊಡೆಯಾಗಿ
ತಿನ್ನಬಾರದ ಹಣ್ಣು ಬಹುರುಚಿ (ಜೀಶಂಪ ೨೧೦)
ಸೀಮೆ ಎಣ್ಣೆ

ಬೆಟ್ಟದ ಮೇಲೊಂದು ಲೋಟ
ಕಾಫಿ ಕಾಯಿಸಿ
ನೀನೂ ಕುಡಿಯಲಾರೆ
ನಾನೂ ಕುಡಿಯಲಾರೆ (ರಾ ಗೌ ೩೬೩)
ಸೀಮೆಯೆಣ್ಣೆ

ಬಂಗಾರದ ಕೊಳದಲ್ಲಿ
ಸಿಂಗಾರದ ಗಿಣಿ ಹೋಗಿ
ಬಾಯಲ್ಲಿ ಮುತ್ತು ಕಚ್ಚಿಕೊಂಡು
ಪುಕ್ಕದಲ್ಲಿ ನೀರು ಕುಡೀತದೆ (ರಾ ಗೌ ೩೭೪)
ಸೀಮೆಯೆಣ್ಣೆ ಬತ್ತಿ (ಹಣತಿ)

ಚಿಕ್ ಹುಡುಗ
ಚಿಣಿಮಿಣಿಗಾರ
ಹೊಕ್ಕು ನೂರಾಳ್ ಕೊಂದ (ಸು ೨೭೦)

ಮರದ ತುಂಡು ಗಿರಲೆ ಮೊಸೆ
ಸಾವಿರ ಜನ ಕೊಂದು ಸಾವಿರ ಜನ ತರ್ತದೆ (ಲ ಗೌ ೮೧೯)

ಮಂಗಳವಾರದ ಸಂತೇಲಿ ಗುಂಟ ತಂದು
ಮನೆಯವರೆಲ್ಲ ಪೆಟ್ಕಂಡ್ರು (ಲ ಗೌ ೮೩೦)

ಹಕ್ಕಿ ಹಾರ್ತು ಪುಕ್ಕ ಮೆಡೀತು
ನನ್ನ ನೋಡ್ತು ನಿನ್ನ ಕೈತು (ಮಂ ೧.೫–೮೮)
ಸೀರಣಿಗೆ

ಆಟೈತಿ ಈಟೈತಿ
ಸರಕಾರದಾಗ ಹೋಗಿ ಸಹಿ ಮಾಡುತೈತಿ (ಇ ೧೬೬)
ಸೀಸ ಪೆನ್ಸಿಲ್ಲು

ಅರಳು ಅಕ್ಕಿ ಹಾಕಿ
ಅನ್ನಂತ ಬರ ಅಳಿಯವುಂಡು
ಮಿಂಚ್ ಬರೊ ಮಗುಂಡು
ಸೋಬಾಣ ಸೊಯ್ನೆಂದು
ಅಡೆಕಾಯೊ ಮಕ್ಕ ಆರುಸುಲುಂಡು
ಕುರಿ ಕಾಯೊ ಮಕ್ಕ ಮೂರುಸಲುಂಡು
ಇದ್ಯಾಕ ಚಕ್ರಗಿತ್ತಿ ನಮ್ಮಟ್ಟಿಗೆ ಬರಲಿಲ್ಲ
ಇನ್ನೊಸಿ ಮಿಕ್ಕರೆ ಸಂದೆಯಾಯಿತು (ಮಂ ೧.೫–೧೨)

ಅರೆಪಾವು ಅಕ್ಕಿ ಹಾಕಿ
ಗಿರಿಮ್ಯಾಲೆ ಪರ ಮಾಡಿ
ಒಂದೂರ ಅಕ್ಕನಿಗೆ ಬಂದು ಬಂದು ಇಕ್ಕಿ
ಅರ್ಧ ಪಾವ ಅಕ್ಕಿ ಹಾಕಿ
ಊರಿಗೆಲ್ಲಾ ಊಟ ಮಾಡಿಸಿ
ಮನಿಯವರು ಉಂಡು ಇನ್ನೂ ಉಳದೈತಿ (ವಾಲಿ ೩–೧೩೪)

ಇನ್ನೂ ಮಿಕ್ತು ನೆಲಿಗೆ ಇರಿಸ್ತೊ
ಒಂದೂರು ಮಗಳು ಬಂದ್ಬಂದ್ ಉಂಡು
ಇನ್ನೂ ಮಿಕ್ತು
ನೆಲವೆ ಕಿತ್ಕೊಂಡ್ ಬೀಳ್ತು (ರಾ ಗೌ ೩೩೪)

ಈಟ ಕುಡಕ್ಯಾಗ ಅನ್ನಾ ಮಾಡಿದ್ರ
ಬೀಗರುಂಡ್ರ ಬಿಜ್ಜರುಂಡ್ರ ಇನ್ನೂ ಉಳದತಿ (ಲಠ್ಠೆ ಭಾಗ ೫–೬೧)

ಒಂದು ತಟ್ಟೆ ಅನ್ನವನ್ನು ಬಂದವರಿಗೆಲ್ಲಾ ನೀಡಿ
ಅಟ್ಟಕ್ಕೆ ಹಾಕಿ ಬೆಟ್ಟಕ್ಕೆ ಹಾಕಿ ಇನ್ನೂ ಉಳಿದಿದೆ (ಲ ಗೌ ೩೨೬)

ಒಂದು ಸೇರು ಬತ್ತ ಮೈಸೂರು ಸುತ್ತ
ಸೂಳೆ ಸತ್ತಳು ಮಿಂಡಗಾರ ಅತ್ತ (ಲ ಗೌ ೩೧೫)

ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ
ಮಲ್ಲಿಕಾರ್ಜುನನ್ನ ಶಿಖರಕೆ ಬೆಳಕಾಗಿ
ಬಲ್ಲವರು ಹೇಳಿ ಸರ್ವಜ್ಞ (ಚಂ ಸೆ ೯೦)

ಕಲ್ಲರಳಿ ಹೂವಾಗಿ
ಮಲ್‌ಮಲ್ ಸ್ವಾಮಿಯಾಗಿ
ಎಲ್ಲರಿಗೂ ಬೇಕಾಗಿ
ನಿಮ್ಮನೆಗೆ ಬೆಳಕಾಗಿ (ಸು ೧೯೦)

ಕಲ್ಲರಳಿ ಹೂವಾಯ್ತು
ಎಲ್ಲರಿಗೂ ಬೇಕಾಯ್ತು
ಮಲ್ಲಯ್ಯ ಶಿಖರಕ್ಕೆ ಬೆಳಕಾಯ್ತು (ರಾ ಗೌ ೧೮೪)

ಕಲ್ಲಾಗಿ ಹುಟ್ಟಿ ಕಲ್ಲಾಗಿ ಬೆಳೆದು
ಎಲ್ಲ ದೇವರಿಗೂ ಸಲ್ಲತಕ್ಕದ್ದು (ಲ ಗೌ ೪೨೦)

ಕಲ್ಲಾಗಿ ಹುಟ್ಟಿ ಜಂಜಾಟಕ್ಕೆ ಸಿಲ್ಕಿದೆನು
ಬೆಂಕಿಯಲ್ಲಿ ಧುಮುಕಿದೆನು ಹೂವಾಗಿ ಅರಳಿದೆನು
ಮನೆಯನ್ನು ಬೆಳಗಿದೆನು ಎಲೆಯ ಸ್ನೇಹದಿಂದ ಸಣ್ಣಾಗಿ ಸತ್ತೆನು (ಚಂ ಸೆ ೯೧)

ಕಲ್ಲೊಳಗೆ ಹುಟ್ಟುವುದು ದೇವಲ್ಯವಲ್ಲ
ಎಲ್ಲರ ಮನೆಯಲ್ಲಿ ತಾನಿಲ್ಲದಿಲ್ಲ
ಮೆಲಬಹುದು ಬಾರದೆಂಬುದೇನಿಲ್ಲ
ಮೆದ್ದರೆ ತನ್ನ ಗುಣ ತೋರಬಲ್ಲ
ಇದ ಹೇಳಬಲ್ಲ ಜಾಣನಿಗೆ ಅರಿದಿಲ್ಲ (ಲ ಗೌ ೪೨೫)

ನೋಡಿದ್ರೆ ಕಲ್ಲು ನೀರ ಬಿಟ್ರೆ ಮಣ್ಣು (ಜೀಶಂಪ ೧೯೩)

ಪಾವಕ್ಕಿ ಹಾಕಿ
ನೆಂಟರುಂಡು ನಾಲ್ವರುಂಡು
ಘಟ್ಟಕ್ಕೋಗೋ ಮಗನ್ಗೆ ಬುತ್ತಿ ಕಟ್ಟಿ ಕಳಿಸಿ
ಬೆಟ್ಟದ ಮರಿಯಾಗಿ
ಬಟ್ಟೀಲಿ ಅರಳತೈತಿ (ಇ ೭೬೧)

ಸುಟ್ಟ ಮೀನ ಶಾರಕ ಹೋತ (ಲಠೈ ಭಾಗ ೫–೨೭೮)

ಸುಟ್ಟ ಮೀನು ಪಟ್ಟಣಕ್ಕೆ ಹೋಯ್ತು (ಸು ೪೭೩)

ಸುಟ್ಟ ಹೆಣಾ ಪಟ್ಟಣಕ್ಕ ಹೋಯ್ತು (ಇ ೯೫೦)

ಹೋದೂರ ಅಕ್ಕನಿಗೆ ನೋಡಿ ನೋಡಿ ಇಕ್ಕಿ
ಈಗ ಬರೋ ದಾಸಯ್ಯ ಆಗ್ಲೆ ಬಂದಿದ್ರೆ
ನಿನಗೂ ಒಂದು ತುತ್ತ ಇಕ್ಕೀವೆ (ಲ ಗೌ ೮೪೪)
ಸುಣ್ಣ

ಮೈಸೂರಿನ ಮಲ್ಲಿಗೆ ಹೂವು
ತಲಕಾಡಿನ ತಾವರೆ ಎಲೆ
ಚನ್ನಪಟ್ಟಣದ ಕರಿಕಲ್ಲು
ಅವು ಮೂರ್ನೂ ಸೇರ್ತಾವು
ಒಂದು ದಾಳಿಂಬೆ ಹಣ್ಣಂತೆ (ರಾ ಗೌ ೪೧೧)

ಒಂದು ಕದ್ರಕೊತ್ತು
ಒಂದು ತೇಲ್ಕೊತ್ತು
ಒಂದು ಮುಳಿಕೊತ್ತು (ಮಂ ೧.೪–೨೩)
ಸುಣ್ಣ, ಎಲೆ, ಅಡಿಕೆ

ಬಿಸಿಲಿಗೆ ಬಾಡದೇ ಇರುವ ಕಾಯಿ
ಬಿಸಿಲಿಗೆ ಬಾಡದೇ ಇರುವ ಹೂವು (ರಾ ಗೌ ೩೫೦)
ಸುಣ್ಣದ ಕಾಯಿ, ರೋಜಾದ ಹೂ

ಮೈಯೆಲ್ಲ ಕೆಂಪು ಬಾಯೆಲ್ಲ ಬಿಳುಪು (ಲ ಗೌ ೮೭೪)
ಸುಣ್ಣದ ಗೂಡು

ಅಪ್ಪಕೋಡೂ ಉಂಬೂಕಾಗೂದಲ್ಲಾ
ಮಗ್ನ ಕೋಡೂ ಉಂಬೂಕಾಗೂದಲ್ಲಾ (ಶಾಂ ನಾ ೩೯೫)

ಉಂದ್ಬಟ್ಲಾ ಅನ್ನಾ (ಶಾಂ ನಾ ೩೯೪)
ಸುಣ್ಣಾ

ಮನೆ ಮನೆಗ್ಬಂದ್ಮೂಸ್ರ ಗಡ್ಗೆ (ಶಾಂ ನಾ ೩೯೬)

ಬೆಣ್ಣೆ ಗಡ್ಗೆ ಅಟ್ಟಕ್ ಹತ್ತು (ಶಾಂ ನಾ ೩೯೭)
ಸುಣ್ಣ್ದೆ ಮಡ್ಕೆ

ಸುರಗಿ ಶಾಂತವ್ವ
ಮುರಗಿ ಮಾಂತವ್ವ
ಹುಳಕಮಾರಿ ಹೊನ್ನವ್ವ (ಇ ೯೬೪)
ಸುರಳಿಹೊಳಿಗೆ, ಕರಿಗಡಬು, ದೋಸೆ

ಈಟ ಕುಡಿಕ್ಯಾಗ ಇಟ್ಟಪ್ಪ ಕುಂತಾನ (ಇ ೨೦೩)
ಸುಲಗಾಯಿ

ಅಕ್ಕಂಗೆ ಆರು ಕಣ್ಣು
ಮುಕ್ಕಂಗೆ ಮೂರು ಕಣ್ಣು
ನನ್ನಂಥ ಪಾಪಿಗೆ ಒಂದೇ ಕಣ್ಣು (ಸು ೮)

ಈಟ ಪಾರಾ ಕುಂಡ್ಯಾಗ ದಾರ (ವಾಲಿ ೮–೩೮)

ಈಟೀಟ ಪಾರಾ ಕುಂಡ್ಯಾಗ ದಾರಾ (ಲಠ್ಠೆ ಭಾಗ ೫–೬೬)

ಈಟೇ ಪಾರ ಕುಂಡ್ಯಾಗ ದಾರ (ಇ ೨೦೯)

ಎಡ್ಡ ತಲಿಗಿ ಒಂದಾ ಏರಿ (ಲಠ್ಠೆ ಭಾಗ ೫–೮೧)

ಒಬ್ಬನಿಗೆ ಕೈಯಿಲ್ಲ ಕಾಲಿಲ್ಲ ಒಂದೇ ಒಂದು ಕಣ್ಣು (ಲ ಗೌ ೨೭೪)

ಒಂದ ಕಣ್ಣಿನ ಪೋರಿ ಓಣೆಲ್ಲಾ ಓಡ್ಯಾಡ್ತದ (ಲಠ್ಠೆ ಭಾಗ ೫–೯೮)

ಒಂದು ಕಣ್ಣಿಹುದು ಕಾಗೆ ನಾನಲ್ಲ
ಬಿಲವನ್ನು ಬಯಸುವೆನು ಹಾವಲ್ಲ
ಭೋರ್ಗರೆಯುತ್ತ ಏರಿಳಿಯುತ್ತೇನೆ ಸಮುದ್ರವಲ್ಲ (ಇ ೨೯೬)

ಕತ್ತಲೆ ಮನೆಯಲ್ಲಿ ಬೆಳ್ಳಿ ಬಿದ್ದಿದೆ
ಕಣ್ಣಿಗೂ ಕಾಣೋಲ್ಲ ಹುಡುಕಿದರೂ ಸಿಕ್ಕೋಲ್ಲ (ಲ ಗೌ ೩೭೮)

ಕತ್ತಲೆ ಮನೇಲಿ ತೊಲೆ ಬಿದ್ದೋದ್ರೆ
ನಿಮ್ಮಪ್ಪನೂ ಎತ್ತಲಾರ
ನಮ್ಮಪ್ಪನೂ ಎತ್ತಲಾರ (ರಾ ಗೌ ೧೬೮)

ಕತ್ತಲೆ ಮನೇಲಿ ಬಿದ್ದಿರೋ ತೊಲೇನ
ಯಾರೂ ಎತ್ತಲಾರ್ರು (ಸು ೧೭೫)

ಕತ್ತಲೆ ಮನೆಯಲ್ಲಿ ಬೆತ್ತ ಬಿದ್ದಿದೆ
ನಮ್ಮಪ್ಪನಿಗೂ ಸಿಗದು
ನಿಮ್ಮಪ್ಪನಿಗೂ ಸಿಗದು (ವಾಲಿ ೩–೪೯)

ಕಾಸಿನ ಕುದುರಿಗಿ ಬಾಲಾಗ ಕಡಿವಾಣ (ಲಠ್ಠೆ ಭಾಗ ೫–೧೩೨)

ಗಟ್ಟದಿಂದ ಒಂದು ಮರವನು ತಂದೆ
ಮನೆ ಕಟ್ಟಿ ಕಟ್ಟಿ ಇನ್ನೂ ಉಂಟು (ಚಂ ಸೆ ೧೧೫)

ಗೋಪುರ ಗೋಪುರದೊಳಗೊಂದು ಯಲಿ
ಯಲಿಗೆ ನೂರು ಮರಿ
ನೂರು ಮರಿಗೆ ಚಿನ್ನದ ಗರಿ
ವಂಟು ವಡೋಯೋನು ಸಿಪಾಯಿಗಿರಿ (ಮಂ ೧.೫–೫೬)

ಚಟ್ಟ್ ಪಟ್ಟ್ ಲೇಡಿಗೆ ಒಂದೇ ಕಣ್ಣು (ಚಂ ಸೆ ೧೨೧)
(ಇ ೫೧೫) (ಲ ಗೌ ೫೩೬)

ಚಟ್ ಪಟ್ ಲೇಡಿಗೆ ಒಂದೇ ಕಣ್ಣು (ಲ ಗೌ ೫೩೬)

ಬಿದಿರೊಂದರಾಗ ಸಾವಿರ ಮನಿ ಕಟ್ಟಿದರೂ
ಬಿದಿರ ಗಳಾ ಹಾಂಗs ಉಳದೈತಿ
ಸೋತಿಲ್ಲ ಸಮದಿಲ್ಲ (ಇ ೭೪೦)

ಸಣ್ಣೊರುಗೆ ಮುಕ್ಕೀಲ್ದಾರಾ (ದೊಡ್ ಬಾಲಾ) (ಶಾಂ ನಾ ೩೩೯)

ಸುಂದರವಾದ ಹೆಣ್ಣು ಒಂದೇ ಕಣ್ಣು (ಲ ಗೌ ೯೫೯)

ಸೋಗಿನ ಹೆಣ್ಣಿಗೆ ಒಂದು ಕಣ್ಣು (ಇ ೯೮೧)

ಸುಂದರಿ ಹೆಣ್ಣ ಒಂದಾ ಕಣ್ಣ (ಲಠೈ ಭಾಗ ೫–೨೮೨)
ಸೂಜಿ

ಇಷ್ಟೇ ಪಾರ ಕುಂಡ್ಯಾಗ ದಾರ (ವಾಲಿ ೩–೧೦)
ಸೂಜಿದಾರ

ಚೋಟುದ್ದ ಹುಡುಗಿಗೆ ಮಾರುದ್ದ ಜಡೆ (ಇ ೫೪೪)
ಸೂಜಿದಾರ

ಕಾಸಿನ ಕುದುರೆಗೆ ಬಾಲದಲ್ಲಿ ಲಗಾಮು (ಚಂ ಸೆ ೧೦೩)
ಸೂಜಿನೂಲು

ಒಬ್ಬನದು ಸಣ್ಣ ಕುಂಡಿ
ಒಬ್ಬನದು ದೊಡ್ಡ ಕುಂಡಿ
ಒಬ್ಬಬಿಗಂತೂ ಕುಂಡೀನೆ ಇಲ್ಲ (ವಾಲಿ ೮–೧೨)
ಸೂಜಿ, ಡಬ್ಬಣ, ಕದಿರು

ಒಂದು ಪೈಸದ ಹೋರಿ
ನೂರೊಂದು ಹಗ್ಗ ಕಿತ್ತು ಹಾಕಿತು (ಸು ೧೪೨)
ಸೂಜಿ ಮತ್ತು ದಾರ

ಈಟ್ಟುದ್ದ ಹುಡುಗಿಗೆ ಮಾರುದ್ದ ಜಡೆ (ಸು ೯೩)

ಕಾಸಿನ ಕುದುರೆಗೆ ತಿಕದ ಮೇಲೆ ಲಗಾಮು (ಲ ಗೌ ೪೪೫)

ಕಾಸಿನ ಕುದುರೆಗೆ ಮಾರುದ್ದ ಲಗಾಮು (ರಾ ಗೌ ೨೦೨)

ಚೋಟುದ್ದ ಕುದುರೆಗೆ ಮಾರುದ್ದ ಲಗಾಮು (ಲ ಗೌ ೫೬೨) (ಸು ೨೮೨)

ಚೋಟುದ್ದದವನಿಗೆ ಮಾರುದ್ದ ಪಂಚೆ (ಲ ಗೌ ೫೫೯)

ಚೋಟುದ್ದೋನಿಗೆ ಮಾರುದ್ದ ಕಚ್ಚೆ (ಸು ೨೪೦)

ಚೋಟುದ್ದೋನ್ಗೆ ಚೀಟಿ ಕುಪಾಲಿ (ಮಂ ೧.೫–೬೦)

ಚೋಟುದ್ದ ಮನುಷ್ಯನಿಗೆ ಮಾರುದ್ದ ಗಡ್ಡ (ರಾ ಗೌ ೨೫೭)

ಚೋಟುದ್ದ ಹುಡುಗನಿಗೆ ಮಾರುದ್ದ ಜುಟ್ಟು (ಲ ಗೌ ೫೬೪)

ಚೋಟುದ್ದ ಹುಡುಗಿಗೆ ಮಾರುದ್ದ ಜಡೆ (ರಾ ಗೌ ೨೫೫)

ನೀ ತೋರಿಸ್ತ ನಾ ಪೋಣಿಸ್ತ (ರಾ ಗೌ ೩೧೭)

ನೀ ಬಲೆ ಉದ್ದ ನಿನ್ನ ತೂತು ಗೆದ್ದ (ಇ ೬೬೮)

ಬೇಲಿ ನುಗ್ಗೊ ನಾಯಿಗೆ ತಿಕದಲ್ಲಿ ಮೂಗರಾಣಿ (ಲ ಗೌ ೭೯೬)

ಹಾಕಿದ್ ಬೀಗ ತೆಗೆಯಾಂಗಿಲ್ಲ (ಮಂ ೧.೫–೯೦)
ಸೂಜಿ–ದಾರ

ಚೋಟುದ್ದ ಹುಡುಗ್ಗ ಮಾರುದ್ದ ಜುಟ್ಟ (ಲಠ್ಠೆ ಭಾಗ ೫–೧೬೦)
ಸೂಜಿ, ದಾರ

ಒಂಟಿ ಕಣ್ಣಿನ ಮನುಷ್ಯ ಬಯಲು ಮುಚ್ಚುತಾನೆ (ಲ ಗೌ ೨೯೬)
ಸೂಜಿಯಿಂದ ಬಟ್ಟೆ ಹೊಲಿಯುವುದು

ಅಚ್ಚಯ್ಯನ ಅಂಗಡಿ
ಪಚ್ಚಯ್ಯನ ಅಂಗಡಿ
ಎತ್ತಗೆ ನೋಡಿದರೊಂದೇ ಅಂಗಡಿ (ರಾ ಗೌ ೧೧)

ಅಚ್ಚಯ್ಯನಂಗಡಿ ಪಚ್ಚಯ್ಯನಂಗಡಿ
ಸುತ್ತ ನೋಡಿದರ ಒಂದೇ ಅಂಗಡಿ (ವಾಲಿ ೧–೯)

ಆಲೂರಲ್ಲಿ ಅವರೆ ನೆಟ್ಟು ಬೇಲೂರಲ್ಲಿ ಚಪ್ಪರ ಹಾಕಿ
ಕೊಡಿಯಾಲದಲ್ಲಿ ಕುಡಿ ಮಗುಚಿತು (ಲ ಗೌ ೧೫೯)

ಊರಿಗೆಲ್ಲಾ ಒಂದೇ ಬಿಳಿ ಕಂಬಳಿ (ವಾಲಿ ೧–೧೮)

ಎಣ್ಣೆಯಿಲ್ಲ ಬತ್ತಿಯಿಲ್ಲ
ನಂದಿಹೋಗದ ನಂದಾದೀಪ
ಜಗವನು ಬೆಳಗುತ ಎಂದೆಂದೂ ಜಗಕೆ ಜೀವ ತಾನೆನಿಸಿಹನೆಂದು (ಚಂ ಸೆ ೪೯)

ಏಳು ತಲೆ ಕೆಂಪುಂಟು
ಹತ್ತು ತಲೆ ಬಿಳಿಯ
ಬೀಳು ತಲೆ ಕಪ್ಪು ಕತ್ತಲೆಯಾಯ್ತು ತಿಳಿಯ (ಚಂ ಸೆ ೫೮)

ದಾನಗುಂಬಳ ಪಾನಗುಂಬಳ
ಊರಿಗೆಲ್ಲ ಒಂದೇ ಕುಂಬಳ (ರಾ ಗೌ ೨೮೫)

ದುಂಡಗಿರುವೆ ಚೆಂಡಲ್ಲಾ ಉರಿಯುತ್ತಿರುವೆ ಬೆಂಕಿಯಲ್ಲಾ (ಶಾಂ ನಾ ೨೦)

ದೊಡ್ಡ ಆಲದ ಮರ ದೊಪ್ಪನೇ ಬಿತ್ತು
ಸಂತಿ ಮಂದಿ ದಿಕ್ಕಾಪಾಲಾದರು (ವಾಲಿ ೧–೮)

ನನ್ನ ಮುಂದೋಂದ ಸೇಬು ಹಣ್ಣ
ತಿನಬೇಕಂದ್ರ ಹೆರಚಾಕ
ಬರುದುಲ್ಲಾ (ಲಠ್ಠೆ ಭಾಗ ೨–೪೩)

ಬಾನಲಿ ನಿಗಿ ನಿಗಿ ಹೊಳೆಯುವ ಚಂಡು
ಲೋಕಕೆ ಬೆಳಕನು ನೀಡುವ ಚಂಡು
ಕೆಂಡವ ಕಾರುವ ದುಂಡನೆ ಚಂಡು
ಜೀವಕೆ ಜೀವ ದೊರಕುವ ಚಂಡು
ಇದ ಹೇಳಿದವರಿಗೆ ಮುತ್ತಿನ ಚಂಡು (ಇ ೭೩೨)

ಬೆಂಕಿ ಉಂಡೆಯನ್ನು ಮುಟ್ಟಲಾರರು
ಕಣ್ಣಿಂದ ದಿಟ್ಟಿಸಿಯೂ ನೋಡಲಾರರು (ಇ ೭೮೭)

ಯಾವುಗ ನೆರಳಿದ್ರೂ
ಅವಗ ಮಾತ್ರ ನೆರಳs ಇಲ್ಲ (ಇ ೯೦೨)

ಹಗಲಲ್ಲಿ ಮಿತ್ರನಾಗುವನು
ಇರುಳಲ್ಲಿ ಶತ್ರು ಆಗುವನು (ಇ ೯೮೫)
ಸೂರ್ಯ

ಹಗ್ಗಿನ್ಹೊಲದಾಗೆ ಜಗ್ಗಿಣಕ (ಸು ೪೮೭)
ಸೂರ್ಯ

ಇಡೀ ಜಗತ್ತಿಗೆ ಒಂದ ರೊಟ್ಟಿ (ಇ ೧೮೮)
ಸೂರ್ಯ ಅಥವಾ ಚಂದ್ರ

ಈ ದೇಶದಿಂದ ಆ ದೇಶಕ್ಕೆ ಹೋದಾಗ ಬಾ
ಒಣಮರ ಮಾತಾಡಿದಾಗ ಬಾ
ಮುತ್ತಿನ ಬಟ್ಟು ಕೆಟ್ಟಾಗ ಬಾ (ರಾ ಗೌ ೮೭)
ಸೂರ್ಯ, ಕದ, ದೀಪ

ಅಣ್ಣ ಬಂದರ ತಮ್ಮ ಓಡತಾನ
ತಮ್ಮ ಬಂದರ ಅಣ್ಣ ಓಡತಾನ (ಇ ೮೦)

ಅಪ್ಪ ಬಂದರ ಅವ್ವ ಮರಿಯಾಗ್ತಾಳ
ಅವ್ವ ಬಂದರ ಅವ್ವ ಮರಿಯಾಗ್ತಾನ (ವಾಲಿ ೧–೫೩)
ಸೂರ್ಯ, ಚಂದ್ರ

ಅಂಚೇರ್ ಗಿಂಡಿ ಪಂಚೇರ್ ಗಿಂಡಿ
ದೇಶಾ ತಿರುಗೋದೆರಡೇ ಗಿಂಡಿ (ಲ ಗೌ ೧೧೪)

ಒಂದೇ ಮನೆಯಲ್ಲಿ ಇಬ್ಬರು ಮಕ್ಕಳು
ಒಬ್ಬನ ಕಂಡರೆ ಮತ್ತೊಬ್ಬ ಓಡುವನು (ಚಂ ಸೆ ೭೦)

ಚಿಕ್ಕ ಚಿಕ್ಕ ಗುಂಬ ಚಿನ್ನ ಬೆಳ್ಳಿ ಗುಂಬ
ಲೋಕ ತಿರುಗೋವೆರಡೇ ಗುಂಬ (ಲ ಗೌ ೫೪೫)

ನೀರಿನಲ್ಲಿ ತಟ್ಟೆ ತೇಲ್ತದೆ (ಲ ಗೌ ೬೯೭)

ದಾಸ್ ಬುರುಡೆ ದೌಲತ್ ಬುರುಡೆ
ದೇಶಕ್ಕೆಲ್ಲಾ ಎರಡೇ ಬುರುಡೆ
ಸೂರ್ಯ ಚಂದ್ರರು

ದಾಸ ಬುರುಡೆ
ದೌಲತ್ ಬುರುಡೆ
ಲೋಕಕ್ಕೆಲ್ಲ ಎರಡೇ ಬುರುಡೆ
ಸೂರ್ಯ, ಚಂದ್ರ (ವಾಲಿ ೧–೬)

ದಾಸ್ಬರುಡೆ ದೌಲತ್ ಬುರುಡೆ
ಲೋಕಕ್ಕೆಲ್ಲಾ ಎರಡೇ ಬುರುಡೆ
ಹಾಸಿಗಿ ಹಾಸಿದ್ರೂ ಮಲಗವ್ರ ಇಲ್ಲ (ಇ ೧೦೭೧)
ಸೂರ್ಯ, ಚಂದ್ರ

ಒಂದು ಗುಂಡು ಒಡೆದ್ರ
ಒಂಬತ್ತನೂರ ತೊಂಬತ್ತುನೂರು
ಈ ಕಥೆ ಬಿಡಿಸಿದವಿರಿಗೆ ಬೆಳ್ಳಿ ರೊಟ್ಟಿ (ಇ ೨೯೭)
ಸೂರ್ಯ–ಚಂದ್ರ–ನಕ್ಷತ್ರ

ಒಂದು ಮರ ಹುಟ್ಟಿ ಒಂಬತ್ತು ಕವಲೊಡೆದು
ಅದರ ಒಂದು ಕೊನೆಯಲ್ಲಿ ಹದಿನೈದು ಬಿಳಿದು ಹದಿನೈದು ಕರಿದು
ಸೂರ್ಯ, ನವಗ್ರಹಗಳು, ಚಂದ್ರ, ಶುಕ್ಲಪಕ್ಷ, ಕೃಷ್ಣಪಕ್ಷ (ಲ ಗೌ ೩೪೮)

ದೊಡ್ಡಳ್ಳಿ ಮರ ದಡ್ಡನೆ ಬೀಳ್ತು
ಸಂತೇರೆಲ್ಲ ಚೆಲ್ಲಾಪಿಲ್ಲಿ (ಲ ಗೌ ೬೩೬)
ಸೂರ್ಯ ಮುಳುಗಿದ

ಇಬ್ಬನಿಗೆ ಒಬ್ಬಣ್ಣ ಬಿಸಿಲಿಗೆ ಬಿರಿಯಣ್ಣ (ಲ ಗೌ ೧೭೩)
ಸೂರ್ಯ–ಮಿಣಿಕೆಹಣ್ಣು

ಅಚ್ಚಿಂದಾವರೆ ಇಚ್ಚೊಂದಾವರೆ
ಪಚ್ಚೈನಂಗಡಿ ಪಾರೈನಂಗಡಿ
ಎತ್ತ ನೋಡಿದರೂ ಒಂದೇ ಅಂಗಡಿ (ಸು ೧೭)

ಇಲ್ಲೆಸೆದ ಕೋಲು ಮಧುಗಿರಿ ತಾವ ಮಾಯವಾಯ್ತು (ಸು ೯೨)

ಚಿನ್ ಚಿನ್ ಅಂಗಡಿ ಚಿನ್ನಾರ್ ಅಂಗಡಿ
ಹಜಾರ್ ತುಂಬ ಬಜಾರ್ ಅಂಗಡಿ (ಸು ೨೭೫)

ದುಂಡಗೆ ಇರುವೆ ಚೆಂಡೆಲ್ಲ
ಬೆಳಕನ್ನು ನೀಡುವೆ ದೀಪವಲ್ಲ (ಇ ೬೧೭)

ಬಟ್ಟಲದ ಬಾಯಂತೆ
ಹುಟ್ಟುವದು ಜಗದೊಳಗೆ
ಮುಟ್ಟದುದು ತನ್ನ ಹೆಂಡರನು
ಕವಿಗಳಲಿ ದಿಟ್ಟರಿದ ಪೇಳಿ (ಇ ೭೧೩)

ಉರಿ ಹೋಗೋನು
ಸಿರಿ ಬರೋನು (ರಾ ಗೌ ೧೦೩)

ದಾತ್ ಬುರುಡೆ ದವಲತ್ ಬುರುಡೆ
ಲೋಕಕ್ಕೆಲ್ಲ ಎರಡೇ ಬುರುಡೆ (ಸು ೩೧೭)
ಸೂರ್ಯ ಚಂದ್ರ

ದಪ್ಪಂದು ಮಾವಿನಕಾಯಿ ತುಪ್ಪನೆ ಬಿತ್ತು
ದನೀನ ಹುಡುಗರು ಓಡಿ ಬಂದರು (ಸು ೩೧೬)

ದೊಡ್ಡ ಆಲದ ಮರ ದುಬ್ಬನೆ ಬಿತ್ತು
ಸಂತೆ ಜನ ಎಲ್ಲಿ ಚೆಲ್ಲಾಪಿಲ್ಲಿಯಾದ್ರು (ಸು ೩೨೪)
ಸೂರ್ಯಾಸ್ತ

ಪುಂಡಿಕಡ್ಡಿ ಪುಡುಡುಗ
ಹಂಚಿಕಡ್ಡಿ ಸಣ್ಣಡುಗ
ನಾನು ಬತೀನಿ ನಿಲ್ಲುಡುಗ (ಸು ೩೫೫)
ಸೂಸಲು, ಶ್ಯಾವಿಗೆ, ಕಾಯ್ಹಾಲು

ಹೋಯ್ತಾಳೆ ನೋಡು ಹೋಯ್ತಾಳೆ ನೋಡು ಸಂತೆ ಬಜಾರಿ
ಅವಳ ಅಂಡು ಕುಂಡಿ ನೋಡಿದ್ರೆ ದಂಡಿನ ದಾಳಿಂಬೆ (ರಾ ಗೌ ೫೧೦)
ಸೂಳೆ

ಹಗಲೆಲ್ಲ ಅತ್ತರೂ ರಾತ್ರಿಯೆಲ್ಲ ನಗುತ್ತ (ಇ ೯೮೬)
ಸೂಳೇಮನೆ

ಸಂತ್ಯಾಗಿಟ್ಟು ಮಾರೂದಲ್ಲ
ತಕ್ಕಡ್ಯಾಗಿಟ್ಟು ತೂಗೂದಲ್ಲ
ಅದು ಇಲ್ದ ನಡಿಯೂದಿಲ್ಲ (ಇ ೯೭೦)

ತಕ್ಕಡ್ಯಾಗ ಇಟ್ಟ ತೂಗಾಂಗಿಲ್ಲ
ಅದಿಲ್ಲದ ಹಬ್ಬ ಆಗಾಂಗಿಲ್ಲ (ಲಠ್ಠೆ ಭಾಗ ೫–೧೬೬)
ಸೆಗಣಿ

ಅಂಗ್ಡೀಲಿಟ್ಕಂಡಿ ಮಾರೂದಲ್ಲಾ
ತಕ್ಡಿ ತೆಕ್ಕಂಡಿ ತೂಗುದಲ್ಲಾ
ಇದಿದ್ದೊರ್ತು ಕಳೀತಿಲ್ಲೆ (ಶಾಂ ನಾ ೧೨೨)
ಸೆನ್ನಿ

ಹಚ್ಚನ ಹಸರಕ್ಕಾ
ಮುತ್ತಿನಂಥಾ ಬಸಕ್ಕಾ
ಕೆಂಪಿನ ಹವಳಕ್ಕಾ ಮನಿ ಹಸನ ಮಾಡತಾರ (ಇ ೯೯೯)
ಸೆಗಣಿ, ಸುಣ್ಣ, ಕೆಂಪಮಣ್ಣ

ಸೊಂಟಮುರಕಿ ಸಂಕ್ಲಿ ಹೋದ್ಲು (ಲತ್ಕೆ ಭಾಗ ೫–೨೮೫)
ಸೇಗಡಿ (ಸುಣ್ಣ)

ನಿಂದ್ರೊಳ್ಗೆ ನಂದ್ ಅಳ್ಳಾಡ್ತದೆ
ಬಗ್ಗಿ ನೋಡಿದ್ರೆ ಭಯವಾಗ್ತದೆ (ರಾ ಗೌ ೩೧೦)
ಸೇದೋ ಬಾವಿ

ಚೋಟುದ್ದ ಹುಡುಗನಿಗೆ ಚಾಟಿ ವ್ಯಾಪಾರ (ರಾ ಗೌ ೨೫೮)

ಹೆಟ್ಟದು ಎದ್ದು ಕುಂದ್ರೋದು (ಲ ಗೌ ೧೦೬೯)
ಸೇರು

ಅಕ್ಕನ ಮನಿಗಿ ತಂಗಿ ಬರ್ತಾಳ
ತಂಗೀ ಮನಿಗಿ ಅಕ್ಕ ಹೋಗುದುಲ್ಲ (ಲತ್ಕೆ ಭಾಗ ೫–೨೮೫)
ಸೇರ, ಪಾವ

ಅಕ್ಕ ತಂಗೀ ಮನೀಗೆ ಹೋಗ್ತಾಳ ಆದರ
ತಂಗಿ ಅಕ್ಕನ ಮನೀಗೆ ಹೋಗುದಿಲ್ಲ (ಇ ೧೨)

ಅಕ್ಕನ ಮನೆಗೆ ತಂಗಿ ಹೋಗಬಹುದು
ತಂಗಿ ಮನಗೆ ಅಕ್ಕ ಬರಕಿಲ್ಲ (ನಾ ಗೌ ೧೦)

ಅವ್ವನೊಳಗೆ ಮಗಳು ಹೋಗ್ತಾಳೆ
ಮಗಳೊಳಗೆ ಅವ್ವ ಹೋಗುವುದಿಲ್ಲ (ರಾ ಗೌ ೪೭)
ಸೇರು, ಪಾವು

ಅವ್ವನೊಳಗ ಮಗಳು ಹೋಗ್ತಾಳ
ಆದರ ಮಗಳೊಳಗ ಅವ್ವ ಹೋಗುವದಿಲ್ಲ (ವಾಲಿ ೮–೧)
ಸೇರು–ಪಾವು

ಸಂತೆಯೊಳಗೆಲ್ಲಾ
ಅವ್ವ ಮಕ್ಕಳದೇ ವ್ಯಾಪಾರ (ರಾ ಗೌ ೪೩೮)
ಸೇರು, ಪಾವು, ಚಟಾಕು

ಅಕ್ಕ ತಂಗಿ ಮನೆಗೆ ಹೋಗೋದಿಲ್ಲ
ತಂಗಿ ಅಕ್ಕನ ಮನೆಗೆ ಹೋಗ್ತಾಳೆ (ಸು ೭)
ಸೇರು ಮತ್ತು ಅಚ್ಚೇರು

ಹೊಕ್ಕಿದ್ದು ಒಂದು ಹೊರಟಿದ್ದು ನೂರು (ಇ ೧೦೯೯)
ಸೇವಿಗೆ

ಹಸಿರೊಂದು ಐನೂರು ಕುಸುರೊಂದು ಮುನ್ನೂರು
ಬೀಜೊಂದು ಬಿತ್ತಾರ ನಡುವೆ ಚಿತ್ತಾರ
ಕಂಬ ಕಂಬಗಳಿಗೆ ಮುಡಿಮುಡಿದು
ತಿಂಗಳು ತಿಂಗಳಿಗು ಮುಡಿದಾನು ಕಡುಜಾಣ (ಲ ಗೌ ೧೦೧೫)
ಸೇವಂತಿಗೆ ಅಂಟು

ತಾರೌಗಿಂಡಿ ತತ್ತರಗಿಂಡಿ
ಮುಚ್ಚಳ ತೆಗೆದರೆ ಮುನ್ನೂರು ಗಿಂಡಿ (ಚಂ ಸೆ ೧೩೮)

ಬೇಲ್ಯಾಗ ಇರೋದು ಬೆಟ್ಟಗೆ ಹಬ್ಬೋದು
ಸ್ವಾಮಿ ಶಿವಶಂಕರ ವಾಲಗದಾಗ ಇರೋದು (ಇ ೭೭೪)
ಸೇವಂತಿಗೆ ಹೂ

ಓದು ಕಲಿತವ ಹೇಳೋ ನನ ಜಾಣ (ವಾಲಿ ೧–೧೦೮)

ಎಂಟು ನಿರಗಿ ಹೊಯ್ದು
ಗಂಡನಿಲ್ಲದ ಬಾಲಿ ಬಸರಾಗ್ಯಾಳಂಬೋದು
ಓದು ಕಲಿತವ ಹೇಳೋ ನನ ಜಾಣ (ವಾಲಿ ೨–೧೦೮)

ಹಸರ ಸೀರಿಯುನುಟ್ಟು
ಸೇವಂತಿಗೆಯ ಹೂವು

ಅಡಿಗಡಿಗಂಗಡಿ ಬಿದ್ದರೆ ಚಾವಡಿ
ನಡಗುತ ಬಂದ ಗಡ್ಡದ ಸಾಬಿ (ಇ ೭೭)

ಚಕ್ರವುಂಟು ಗಾಡಿಯಲ್ಲ
ಗಂಟೆಯುಂಟು ದೇವಾಲಯವಲ್ಲ
ದೀಪವುಂಟು ಸೂರ್ಯನಲ್ಲ
ಸವಾರಿ ಮಾಡಬಹುದು ಕುದುರೆಯಲ್ಲ (ಲ ಗೌ ೫೩೫)
ಸೈಕಲ್

ಎರಡು ಕಾಲುಗಳಿವೆ ಮಾನವನಲ್ಲ
ವೇಗವಾಗಿ ಓಡುತ್ತದೆ ಕುದುರೆಯಲ್ಲ
ಮನುಷ್ಯನ ಸೇವಕನೆಂದರೆ ಜೀವವಿಲ್ಲ
ಇದ ಹೇಳಬಲ್ಲವರಿಗೆ ಒಂದು ಧಡೆ ಬೆಲ್ಲ (ಚಂ ಸೆ ೫೨)
ಸೈಕಲು

ಕಪ್ಪು ಕುದುರೆ ಕೆನೆಯೋದಿಲ್ಲ (ಇ ೩೩೫)
ಸೈಕಲ್ಲ

ಎರಡು ಚಕ್ರವುಂಟು ಬಂಡಿಯಲ್ಲ
ದೀಪ ಉಂಟು ಮನೆಯಲ್ಲ
ಗಂಟೆಯುಂಟು ಗುಡಿಯಲ್ಲ
ಸವಾರಿ ಮಾಡಬಹುದು ಕುದುರೆಯಲ್ಲ (ಸು ೧೧೭)
ಸೈಕಲ್ಲು

ನನಗೆ ಎಲ್ಲಾ ಭಾಷೆಗಳಲ್ಲೂ ಒಂದೇ ರೂಪ
ನನಗೆ ಕೆಲವು ಸಾರಿ ಬೆಲೆಯುಂಟು ಕೆಲವು ಸಾರಿ ಬೆಲೆಯಿಲ್ಲ
ಹಾಗಾದರೆ ನಾನಾರು (ಚಂ ಸೆ ೧೪೯)
ಸೊನ್ನೆ

ಗಿಡ್ಡ ಗಿಡಕನಾಗಿ
ಗಿಡತುಂಬ ಹೂವಾಗಿ
ಹೂವಲ್ಲಿ ಕಾಯಾಗಿ
ತಿನ್ನೋದು ಬೀಜ
ಉಗುಳೋದು ಸಿಪ್ಪೆ (ಚಂ ಸೆ ೧೧೯)
ಸೊಪ್ಪಿನ ಕಡಲೆಕ್ಕಾ

ಮೊಗ ತಕ್ಕೊಂಡು ತೊಟ್ಟು ಬಿಸಾಡ್ತಾರೆ (ಲ ಗೌ ೮೭೭)
ಸೊಪ್ಪಿನ ಕಡಲೇಕಾಯಿ

ಕರು ಮಲ್ಗಿದ್ದು ದಾಬು ಮೇಯ್ತು (ಶಾಂ ನಾ ೨೫೦)

ಕರು ವರಗ್ತು ಹಸು ಮೇಯ್ತು (ಶಾಂ ನಾ ೨೫೧)

ಗೆರ್ಯಿಯಂತಾ ಪಕ್ಕಾ ಕೊಳ್ಳೊದಂತಾ ಮೊಟ್ಟೆ (ಶಾಂ ನಾ ೨೪೯)
ಸೊರೆಕಾಯಿ

ಕೊಡೆ ಮೇಲೆ ಕೊಡೆ
ಕೊತ್ಮರಿ ಜಡೆ
ನೀ ಕೊಡೆ ನಾ ಬಿಡೆ (ರಾ ಗೌ ೨೨೫)
ಸೊಳ್ಳೆ ಮುಳ್ಳು (ಕುಂಡ ಗಜ್ಜಿಗದ ಮುಳ್ಳು)

ನೀರ್ನೂ ಕುಡ್ಕಂಡು
ಬೇರ್ನೂ ತಿಂದ್ಕಂತು (ಮಂ ೧.೫–೭೦)
ಸೊಳ್ಳು

ಒಂದು ವೊಣಮರ
ಬೇರಿಗೆ ನೀರು
ಕೊಂಬೆಗೆ ಬೆಂಕಿ (ಮಂ ೧.೫–೩೭)
ಸೊಳ್ಳು (ದೀಪ)

ಊರೆಲ್ಲಾ ತಿರುಗತೈತಿ ರಾತ್ರಿ ಮನಿಗೆ ಬರತೈತಿ
ಪದಹಾಡಿ ಊಟಕ್ಕಿಂತ ಕಾಟಾ ಕೊಡತೈತಿ (ಇ ೨೩೦)

ಊರೆಲ್ಲಾ ಸುತ್ತಿ ರಾತ್ರಿ ಹಂತಿಲ್ಲಿ ಬಂದು
ಪದಾ ಹಾಡಿ ದುಕ್ಕ ಕೊಡತೈತಿ (ವಾಲಿ ೬–೬೨)

ಚಟ್ ಪಟ್ನ ಸಿಡಿಯೊ ಹೆಣ್ಣಿಗ ಒಂದೇ ಕಣ್ಣ (ಮಂ ೧.೫–೫೭)

ಮಲೆನಾಡ ಕೋಣಕ್ಕೆ ಮುಗದಾನ ಹಾಕ್ಯಾರ
ಹೋದರ ಇರಿಯ್ಯಾಕ ಬರತೈತಿ (ಇ ೮೩೪)

ವೀಣೆಯ ರಾಗವ ಹಾಡುತ ಬರುವೆ
ಕಾಣದ ರೋಗವ ನಾ ತರುವೆ
ಕೊಚ್ಚಿಯ ನೀರೆ ನನ್ನಯ ವಾಸ
ಜನರಿಗೆ ಕೊಡುವೆ ನಾ ಕ್ಲೇಶ ನಾನ್ಯಾರು (ಇ ೯೧೯)

ವೀಣೆ ಸುಬ್ಬಯ್ಯ (ರಾ ಗೌ ೪೨೭)

ಹಗಲು ಹಾಯಾಗಿರುತ್ತೆ ರಾತ್ರಿ ಚುಚ್ಚೋಕೆ ಬರುತ್ತೆ (ಲ ಗೌ ೯೬೮)
ಸೊಳ್ಳೆ

ಮುಂಕೈ ಆಗನಾರ್ದು
ಗೂಸಕ್ಕೆ ಗೂಗ್‌ನಾರ್ದು
ಮಡಚೊ ಕೈ ಮಡಿನಾರ್ದು
ಎರಡು ಸೇರಿ ಗುಂಪು ಸೇರ್ದೊ (ಮಂ ೧.೪–೬೫)
ಸೊಳ್ಳೆಕಾಯಿ

ಮಮುಂಕೈ ಆಗನಾರ್ದು
ಗೂಸಕ್ಕೆ ಗೂಗನಾರ್ದು
ಮಡಿಚೋ ಕೈ ಮಡಿನಾರ್ದು
ಎರಡು ಸೇರಿ ಗುಂಪು ಸೇರ್ದು (ಮಂ ೨.೧–೨೪)
ಸೊಳ್ಳೆಕಾಯಿ (ಕಾಡಿನಲ್ಲಿ ಬಿಡುವ ಕಾಯಿ)

ಒರುಗಿನ ದೇವಯ್ಯ ಉಬ್ಬೆ ಕೃಷ್ಣಯ್ಯ ಚಪ್ಪಗಾಲ ಚೆನ್ನಯ್ಯ
ಮೂರು ಜನ ಕೂಡಿದ್ರೆ ಕೇಳಬೇಕೆ (ಲ ಗೌ ೨೮೩)

ಪೀಟೀಲು ಪಾಪಣ್ಣ ವಲ್ಲಿ ಮಲ್ಲಣ್ಣ ಗೋಡೆ ಕೆಂಪಣ್ಣ
ಮೂರು ಜನವೂ ಮನುಷ್ಯನ ಸ್ನೇಹಿತರು (ಲ ಗೌ ೭೨೬)
ಸೊಳ್ಳೆ, ಕೂರೆ, ತಿಗಣೆ

ಅಂತರಗಂಗೆ ಹಾರಡೋಗ
ಮುರ್ಕಾಟಿ ಬಂದು ಕೆಂಪಗೆ ಮಾಡ್ತು (ಲ ಗೌ ೧೨೪)
ಸೊಳ್ಳೆ–ತಿಗಣೆ

ನೆತ್ತಿಗುದ್ದಿ ನೀರ ಕುಡಿದರ
ಹೊಟ್ಟೆ ಹಗುರು (ಇ ೬೮೪)
ಸೋಡಾ

ನೆತ್ತಿಯ ಗುದ್ದಿ ನೀರು ಕುಡಿದರೆ ಹೊಟ್ಟೆ ಹಗುರ (ಚಂ ಸೆ ೧೬೮)
ಸೋಡಾ ಬಾಟ್ಲಿ

ನೆತ್ತೀ ವಡದು ನೀರ ಕುಡದರ
ಹೊಟ್ಟಿ ಹಗರ ಆಗತದ (ಲಠೈ ಭಾಗ ೪–೧೨೯)
ಸೋಡಾ ವಾಟರ

ನೆತ್ತಿಯ ಗುದ್ದಿ ನೀರು ಕುಡಿದರೆ
ಹೊಟ್ಟೆ ಹಗುರಾಗುತ್ತದೆ (ವಾಲಿ ೩–೧೩೬)
ಸೋಡಾವಾಟರ ಬಾಟಲಿ

ಚಿಕ್ಕಪ್ಪನಿಗೆ ಪುಚ್ಚುದ್ದ (ವಾಲಿ ೩– ೧೨)

ಚೋಟುದ್ದ ಮುಂಡೆಗೆ ಮಾರುದ್ದ ಕಚ್ಚೆ (ಇ ೫೪೩)

ಚೋಟುದ್ದ ಹಳ್ಳಗ ಮಾರುದ್ದ ದಾರಿ (ಲ ಗೌ ೫೬೩)

ಚೋಟುದ್ದ ಹುಡುಗನಿಗೆ ಮಾರುದ್ದ ಕಚ್ಚೆ (ವಾಲಿ ೩– ೬೭)

ತೆಂಗಿಗೂ ಬಿದಿರಿಗೂ ಜಗಳ (ಲ ಗೌ ೬೧೮)

ಪುಟ್ಟ ಹೊಟ್ಟೆ ಮೋಟು ಬಾಲ (ಲ ಗೌ ೭೩೦)
ಸೌಟು

ಸಾಲ ಸಾಲ ಮರಗಳೇ
ನೀಲವತಿ ಗಿಣಿಗಳೇ
ತಪ್ಪತಂತೆ ತೋರಿರೊ
ನಿಮ್ಮ ಎತ್ತಕೊಂತೆ ತೊಟ್ಟಿಗೆ ತಂದ್ರು (ಮಂ ೧.೫–೮೭)
ಸೌಟು, ಸಟ್ಗ

ಚಿಕ್ಕ ಹಕ್ಕಿಗೆ ಪುಕ್ಕುದ್ದ
ಚಿಕ್ಕ ಹಕ್ಕಿಗೆ ಕೊಕ್ಕುದ್ದ (ಸು ೨೬೯)
ಸೌಟು, ಸೌಟಿನ ಕಾವು

ಉದ್ದ ಕಡಿದರೆ ಸಾರ ಅಡ್ಡ ಕಡಿದರೆ ಚಕ್ರ (ಲ ಗೌ ೧೯೫)
ಸೌತೇಕಾಯಿ

ತಲೆಯಲ್ಲಾಡಿಸಿ ತನುವನ್ನೆ ತೂಗಿಸಿ
ಕುಣಿಸುವುದೇನದು ಹೃದಯವನು (ರಾ ಗೌ ೨೬೭)
ಸಂಗೀತ

ಅಯ್ಯಯ್ಯೋ ಭಾವಾ ಮೈಯೆಲ್ಲಾ ಬೂದಿ
ತಲಿಮ್ಯಾಲ ಶಂಖ ಮೈಯಾಗ ಚಕ್ರ (ಇ ೧೨೦)
ಸಂಡಿಗೆ ಕುಂಬಳ

ಕೆಂಪಯ್ಯನ ಹೆಂಡ್ರು ಸಂಪನ್ಗಾತಿ
ನಾಲ್ಕು ಜನಕೆ ಬೇಕಾದೋಳು (ಸು ೨೨೯)
ಸಂಪಿಗೆ ಹೂ

ಒಂದು ನೆಲದಲ್ಲಿ ಬೆಳ್ದಾವರೆ ಗಿಡ ಹುಟ್ಟಿ
ಹಸಿರು ಎಂಬತ್ತು ಕುಸುರು ಮೂವತ್ತು
ಹೆಸರು ಕೇಳಿದರೆ ಬಾಯಲ್ಲಿ ಮೊಸರನ್ನ (ಲ ಗೌ ೩೦೯)
ಸಂಬಾರ

ಅರಮನೆ ಸುರಮನೆ ಪಂಚಾಂಗ್‌ದ್ಮನೆ
ಸುತ್ತ ಮುತ್ತ ಪೊಗಡೆ ಕಟ್ಟೆ (ಶಾಂ ನಾ ೩೯೧)
ಸಂಬಾರ್ಟಟ್ಲು

ಹಲ್ಲಿಲ್ಲದ ಕಪ್ಪೆ ಹಾವ ನುಂಗಿತು (ಲ ಗೌ ೧೦೦೬)
ಸಂಭೋಗ

ಇಬ್ಬರ ಹೆಂಡ್ರ ಕಾಯಿ
ಕೂಸ ಮಕ್ಕೋ ಕಾಯಿ
ತಾಯೀ ತಮ್ಮನ ಕಾಯಿ (ಲಠೈ ಭಾಗ ೪–೪೦)
ಸಂವತಿಕಾಯಿ, ತೊಟ್ಟಿಲಕಾಯಿ, ಮಾವಿನಕಾಯಿ

ಅಕ್ಕಕ್ಕಿ ಅನ್ನಕ್ಕರೂದಿಲ್ಲಾ ಹಿಟ್ಟಿಟ್ಟು ರೊಟ್ಟೀಗ್ಬರೂದಿಲ್ಲಾ (ಶಾಂ ನಾ ೨೭೩)
ಸಿಂಗಾರಾ

ಬುರುಗ ಬಸಪ್ಪ (ಲಠೈ ಭಾಗ ೫–೨೨೬)

ಮೋಟಾರದಾಗ ಮೆರಿತಾಳ
ಕ್ವಾಣನ ಮ್ಯಾಲ ಕುತ್ತ ಕರಿತಾಳ
ನಡು ಊರಾಗ ವಸ್ತಿಹಾಕಿ
ಒಳ್ಯಾವರ ಮಾನಾ ಕಳಿತಾಳ (ಲಠೈ ಭಾಗ ೫–೨೫೯)
ಸಿಂದಿ

ಉದ್ದಾನ ಹೆಂಗಸಾ ಬದ್ದೆಲ್ಲಾ ಹುಳುಕ
ಅವಳ ಕೊಟ್ಟಾ ಹಾಲಂದ್ರ ಬಾಳ ರುಚಿ (ಲಠೈ ಭಾಗ ೫–೭೧)

ಉದ್ದಾನ ಹೆಂಗಸಿಗಿ ಮೈಯೆಲ್ಲ ಗಾಯ (ಲಠ್ಠೆ ಭಾಗ ೫–೭೨)

ಕಲ್ಲಾಗ ಹುಟ್ಟಿ ಮುಳ್ಳಾಗ ಬೆಳೆದು
ಕುತ್ತಿಗ್ಯಾನ ಕೊಡಾ ಹಾಲ ಸುರೀತೈತಿ (ವಾಲಿ ೨–೮೪)

ಸೀಮಿ ಮ್ಯಾಗಿನ ಹೆಂಗಸಿಗಿ
ಸೀರಿ ಇಲ್ಲ ಕುಬಸಿಲ್ಲ
ಕೊಳ್ಳಾಗ ಒಂದ ಗುಳ್ಳ ಕಟ್ಯಾರ (ಲಠ್ಠೆ ಭಾಗ ೫–೨೭೭)

ಸೀಮಿ ಮ್ಯಾಗಿನ ಹೆಂಗಸಿಗೆ
ಸೀರಿ ಇಲ್ಲ ಕುಬುಸ ಇಲ್ಲ
ಕೊಳ್ಳಾಗೊಂದು ಡೋಳ್ಳ ಕಟ್ಟಾ್ಯರ (ಇ ೯೫೧)
ಸಿಂದಿ ಗಿಡ

ಆಕಳ ಆಕಾಶಕ ಕರಾ ಭೂಮಿಗಿ
ಹಿಂಡುವವ ಜಾಣ ಕುಡಿವವ ಕೋಣ (ವಾಲಿ ೨–೨೮)
ಸಿಂದಿ ಗಿಡ, ರಸ

ಆಕಾಶದಾಗ ಆಕಳ
ಕೈಲಾಸದಾಗ ಕರ
ಹಿಂಡಾಂವ ಜಾಣ
ಕುಡ್ಯಾಂವ ಕ್ವಾಣ (ಲಠ್ಠೆ ಭಾಗ ೫–೪೧)
ಸಿಂದಿಗೊಬ್ಬ

ನೆಂಟರು ಬಂದು ಇಣಕಿಣಕಿ ನೋಡ್ತಾರೆ (ಲ ಗೌ ೭೧೩)

ಪುಟ್ಟ ಗಡಿಗ್ಯಾಗ ಕೆಟ್ಟ ಮಸರು (ಇ ೭೦೫)

ಬೆಳ್ಳಿ ಕುಡಿ ನೆಲಕ್ಕೆ ಹೊಡಿ (ಲ ಗೌ ೭೯೧)

ಬೆಳ್ಳಿಯ ಚಡಿ ನೆಲಕ್ಕೆ ಹೊಡಿ (ಚಂ ಸೆ ೧೯೩)

ಬೆಳ್ಳೀ ಛಡಿ ನೆಲಕ್ಕ ಹೊಡಿ (ಇ ೭೬೯)

ಮೂಗನಾಯ್ಕನ ಕೋಟೆಗೆ
ಐದು ಜನಾ ಕಳ್ಳರು ಬಿದ್ದರು
ಇಬ್ಬರು ಹೊತುಗೊಂಡು ಬಂದರು
ಮೂವರು ಹಾಗೇ ಬಂದರು (ಇ ೮೭೧)

ಸೊರ್ ಸೊಟಕ್ ಗೋಡೆಗೆ ಲಟಕ್ (ಲ ಗೌ ೯೬೩)

ಸಿಂಬಳ

ಸಿಮೆಂಟ್ನ ಚಡಿ ನೆಲಕ್ಚಡಿ (ಶಾಂ ನಾ ೧೧೭)

ಸುರಾಸುರಂಗಿ ಗೊಡೆಮೆಲೆಟ್ಟಂಗಿ (ಶಾಂ ನಾ ೧೨೦)

ಸುರುಸುರು ಸುರಂಗಾ ಗೊಡೆ ಮೆಲೆ ವರಂಗಾ (ಶಾಂ ನಾ ೧೧೮)

ಸೊಂಯ್ಗುಟ್ಟಾ ಗೊಡೆಮೆಲಿಟ್ಟಾ (ಶಾಂ ನಾ ೧೧೯)

ಯೆರಡ್ಕೆರೆಲೂ ನೀರು (ಶಾಂ ನಾ ೧೨೧)

ಸಿಂಬ್ಳಾ

ಮೂಡ್ಗಡಿಂದ ಒಬ್ಬ ಮನ್ಸ್ಯ ಬಂದ ಮೂಲೆ ಸೇರಿದ್ದ
ಐದು ಮಂದಿ ಅವನ್ನ ಹೊರಗ್ ತರ್ತಕರ (ಲ ಗೌ ೮೫೬)

ಸಿಂಬಳ ತೆಗೆಯುವುದು

ಒಂದ ಬಾಗಲ್ಲೆ ಬಾ ಅಂದ್ರ
ಎಡ್ಡ ಬಾಗಲ್ಲೆ ಬರ್ತಾನ
ಭಾಡ್ಯಾಗ ಹಿಡ್ರಿ ಗ್ವಾಡಿಗಿ ಬಡಿರಿ (ಲಠ್ಠೆ ಭಾಗ ೫–೯೩)

ಧಡ್ಡರು ತಗದು ಒಗದ್ರ
ಶ್ಯಾಣ್ಯಾರು ಅರಿವ್ಯಾಗ್ಹಾಕಿ ಕಿಸೇದಾಗ
ಇಟಗೊಳ್ಳತಾರ (ವಾಲಿ ೭–೧೭)

ಧಡ್ರ ಒಗಿತಾರ
ಸಾಣ್ಯಾರ ಇಟಗೋತಾರ (ಲಠ್ಠೆ ಭಾಗ ೫–೧೮೧)

ಬಡವರು ತೆಗದ ಒಗಿತಾರ
ಶ್ರೀಮಂತ್ರು ತೆಗೆದು
ಕಿಸೇದಾಗ ಇಟ್ಟುಕೊಂತಾರ (ಇ ೭೧೬)

ಬೆಳ್ಳಿ ಧಡಿ ಕೈದಾಗ ಹಿಡಿ ಗ್ವಾಡಿಗಿ ಬಡಿ (ಲಠ್ಠೆ ಭಾಗ ೫–೨೨೮)

ಬೆಳ್ಳಿ ಧಡಿ ನೆಲಕ್ಕ ಬಡಿ (ಲಠ್ಠೆ ಭಾಗ ೫–೨೨೯) (ವಾಲಿ ೭–೩)

ಬಂಗಾರ ಬಾಗಿಲ ಬೆಳ್ಳಿ ಛಿಡಿ
ಒಂದ ಬಾಗಿಲ್ಲಿ ಬಾ ಅಂದ್ರ
ಎಡ್ಡ ಬಾಗಿಲ್ಲಿ ಬರತಾನ (ಲತ್ಥೆ ಭಾಗ ೫–೨೧೧)

ಸಣ್ಣನ್ನ ಮನ್ಯಾಗ ಗಿಣ್ಣ ತುಂಬೇತಿ (ಇ ೯೨೧)

ಸಾಲಾಗಿರುವ ಮನೆಯಲ್ಲಿ
ಇಬ್ಬರು ಗೆಳತ್ಯಾರು ಬಿಳಿಸೀರೆ
ಉಟ್ಟು ಬಗ್ಗಿ ಬಗ್ಗಿ ನೋಡ್ತಾರೆ (ಇ ೯೩೬)

ಸೊರ್‌ಸೊಟಕ್ಕ ಗ್ವಾಡಿಗಿ ಲಟಕ್ (ಲತ್ಥೆ ಭಾಗ ೫–೨೮೬)

ಹಗೆದಾಗ ಬೊಗ ಬೊಗ ಅಂತೈತಿ (ಇ ೯೯೬)
ಸುಂಬಳ

ಗುದ್ದಿನ್ಯಾಗಿನ ಹಾವು ಎದ್ದೇದು ನೋಡತೈತಿ (ಇ ೫೦೮)
ಸುಂಬಳಾ

ಮೂಗಪ್ಪ ಸೆಟ್ರ ಕೋಟಗಿ ಐದ ಜನ ಕಳ್ರು
ಇಬ್ಬರ ಹೊಕ್ಕೊಂಡ ಬಂದ್ರು
ಮೂಗಾರ ಹಂಗಾ ಬಂದ್ರು (ಲತ್ಥೆ ಭಾಗ ೫–೨೫೨)
ಸುಂಬಳ ಗೊನ್ನಿ ತಗ್ಯೋದ ಐದಬಟ್ಟ

ಮಂಕರಿಯೋರಪ್ಪ ಮೂಲೆಗೆ ಹೋದ (ಸು ೪೦೪)
ಸಿಂಬೆ

ಸುಂಕದ ಮನಿ ಸೊಬಗಿನ ಮನಿ
ಬಂದವರನೆಲ್ಲಾ ಸುಲಿಯೊ ಮನಿ (ಲತ್ಥೆ ಭಾಗ ೫–೨೮೦)
ಸುಂಕದ ಕಟ್ಟಿ

ಸುಂಕದ ಮನಿ ಸೊಬಗಿನ ಮುನಿ
ಬಂದದ್ನೆಲ್ಲ ಸುಲಿಯೋ ಮನಿ (ಇ ೯೫೬)
ಸುಂಕದ ಕಟ್ಟೆ

ಅಂಕ ಡೊಂಕ 'ಸು'
ಅದರ ತಮ್ಮ 'ಜೀ'
ಕರಿಯ ಗುಳಿಗಿ 'ಮೆ' (ವಾ ೨–೧೨)
ಸುಂಟಿ, ಜೀರಗಿ, ಮೆಣಸು

ಇಲ್ಲಿರಂಗಿ ಇಟ್ಟಪರಂಗಿ
ಬಟ್ಟೋನ್ಮುಕದ ಪದ್ಮಾವತಿ
ಎಲ್ಹೊಗಿದ್ದೆ ಧಾರಾವತಿ (ಜೀಶಂಪ ೬೮)
ಸುಂಡ

ಈಟೀಟ ಕಾಯಿ ಮಾಪಳಕಾಯಿ
ತಿನ್ನಲೇ ಬೀಜ ಉಗಳಲೆ ಸಿಪ್ಪಿ (ವಾಲಿ ೫–೪೭)
ಸೇಂಗಾ

ಸುಟ್ಟ ಏಡಿ ಮರ ಹತ್ತುತ್ತೆ (ಲ ಗೌ ೯೪೬)
ಸೇಂದಿ ಗಡಿಗೆ

ಒಂದಾ ಬಳ್ಳಿಗಿ ಅರ್ಧ ಕಗ್ಗ ಅರ್ಧ ಹಣ್ಣ (ಲಠ್ಠೆ ಭಾಗ ೪–೫೧)
ಸೊಂಡಿ ಹಣ್ಣ

ಎರಡು ಬೆಟ್ಟಗಳ ಮೇಲಿನ ನಿದ್ರೆ ಸುಖ (ವಾಲಿ ೪–೨೪)

ಚಿಗರ ಹುಡುಗಿಗಿ
ಚಿಟ್ಟ ಲಿಂಬಿಕಾಯಿ (ವಾಲಿ ೪–೫೧)
ಸ್ತನಗಳು

ಒಂದು ಅಕ್ಷರದ ಒಡವೆ ಅದಿಲ್ಲದಿದ್ದರೆ ಮದುವೆಯಿಲ್ಲ (ಲ ಗೌ ೩೪೭)
ಸ್ತ್ರೀ

ಮನಿ ಅದಾವು ಊರ ಅಲ್ಲ
ಮಂದಿ ಐತಿ ದೀಪ ಇಲ್ಲ
ಸ್ಮಶಾನ (ವಾಲಿ ೧–೪೫)

ನನ್ನ ಮಾತ್ರ ಅಳುಸುತ್ತೆ
ಒಡೆಯಕ್ಕೋದ್ರೆ ಸಿಕ್ಕಲ್ಲ (ಮಂ ೧.೫–೬೮)
ಸ್ಯಾಮಿಗೆ

ತಾತಾ ಗಿಂಡಿ
ತಾಮ್ರದ ಗಿಂಡಿ
ಕೆತ್ತಿಸಿ ನೋಡಿದ್ರ
ಮುತ್ತಿನ ಗಿಂಡಿ (ಲಠ್ಠೆ ಭಾಗ ೪–೧೧೧)
ಸ್ಯಾವಂತಿಗಿ ಹೂ

ಕಾಯ ಕನ್ನ ಕನ್ನ
ಹೂವ ಚಿನ್ನ ಚಿನ್ನ
ಯಾಕೊ ನನ್ನ ಜೀಂವಾ
ತೊಡ್ರಾ ಬಡ್ರಾ (ಲಠ್ಠೆ ಭಾಗ ೪–೭೨)
ಸ್ಯಾಂವಿಗಿ

ಸೆರಗಿಲ್ಲದ ಸೆಲ್ಲೆ ಬೀಜಲ್ಲದ ಪಲ್ಲೆ (ಲಠ್ಠೆ ಭಾಗ ೪–೧೬೪)
ಸ್ಯಾಂವಿ ಪಲ್ಯಾ

ನನ್ನಲ್ಲಿ ಎರಡು ಉತ್ತಮಾಶ್ವಗಳಿವೆ
ಒಂದು ವಜ್ರದಂತೆ ಹೊಳೆಯುತ್ತದೆ
ಇನ್ನೊಂದು ಕಾಡಿಗೆಯಂತೆ ಕಪ್ಪಾಗಿದೆ
ಇವೆರಡೂ ಅಶ್ವಗಳು ಒಂದೇ ಸವನೆ ಓಡುತ್ತವೆ
ಆದರೆ ಓಟದಲ್ಲಿ ಒಂದು ಮತ್ತೊಂದನ್ನು ಗೆಲ್ಲಲಾರದು
ಹಗಲು–ರಾತ್ರಿಗಳು (ವಾಲಿ ೧–೫೯)

ಬಾಯ್ತುಂಬ ತುಂಬಿಕೊಂಡ
ಮಣ್ಣೆ ಬಾಯಿ ಮುಚಿಕೋತತಿ (ಲಠ್ಠೆ ಭಾಗ ೫–೨೧೭)
ಹಗೆ

ನಾನು ಬಹಳ ಉದ್ದವಿದ್ದೇನೆ
ಆದರೆ ನಿಲ್ಲಲು ಶಕ್ತಿಯಿಲ್ಲ (ಚಂ ಸೆ ೧೫೪೪)

ಸಂದೆಗಂಟ ಬಿದ್ದಿರ್ತದೆ ಸಂದೇಲಿ ಎದ್ ನಿಲ್ತದೆ (ಲ ಗೌ ೯೨೮)

ಮನೆಸುತ್ತ ಮಂಡಲದ ಹಾವು ಮಲಗಿದೆ (ಜೀಶಂಪ ೨೦೫)
ಹಗ್ಗ

ಸರಸರ ಹರಿತತಿ ಹಾವಲ್ಲ
ಗಡಗಡ ನಡಿತತಿ ಬಂಡಿ ಅಲ್ಲ
ಕೊಳ್ಳಾಗ ಜನ್ವಾರತಿ ಹಾರವಾ ಅಲ್ಲ (ಲಠ್ಠೆ ಭಾಗ ೫–೨೭೧)
ಹಗ್ಗ, ಗಡಗಡಿ, ಉಕ್ಕಡಕೊಡ

ಸರಕಾರ ಮಕ್ಕಳು ಸಾವಿರ ಜನ
ಹೊಟ್ಟೆ ಉಬ್ಬುತೈತಿ ಅಂಗಿ ಹಿಗ್ಗುತೈತಿ (ಇ ೯೩೦)
ಹಗ್ಗ, ನೀರು, ಕೊಡ

ಸರ ಸರ ಅನ್ನೋದು ಹಾವಲ್ಲ
ಗಾಡ ಗಾಡ ಅನ್ನೋದು ಗಾಡಿ ಚಕ್ರವಲ್ಲ
ಕುತ್ತಿಗೇಲಿ ಜನಿವಾರವಿದೆ ಹಾರುವಯ್ಯನಲ್ಲ (ಸು ೪೫೭)
ಹಗ್ಗ, ನೀರು ಸೇದುವ ಗಾಲಿ, ಬಿಂದಿಗೆ

ಸರಸರ ಎಂಬುದು ಸರ್ಪವಲ್ಲ
ಗುಡು ಗುಡು ಎಂಬುದು ಗುಡುಗಲ್ಲ
ಸೊಂಟಕ್ಕೆ ಬರುವುದು ಮಗುವಲ್ಲ (ಲ ಗೌ ೯೧೮)
ಹಗ್ಗ–ಬಿಂದಿಗೆ

ಸರಸರಾ ಅಂತತಿ ಸರ್ಪಲ್ಲ
ಗಡಗಡ ಅಂತತಿ ಗಾಡಿ ಅಲ್ಲ (ಲಠ್ಠೆ ಭಾಗ ೫–೨೭೦)
ಹಗ್ಗ, ರಾಟಿ

ಸರಸರ ಎನ್ನುವದು ಸರ್ಪವಲ್ಲ
ಗಡಗಡ ಎನ್ನುವದು ಗಾಡಿಯಲ್ಲ (ವಾಲಿ ೩–೨೮)
ಹಗ್ಗ, ರಾಟೆ

ಸರಸರವೆನ್ನುವುದು ಸರ್ಪವಲ್ಲ
ಜನಿವಾರ ಹಾಕುವುದು ಬ್ರಾಹ್ಮಣನಲ್ಲ
ನಾರಿಯರ ಕೈಹಿಡಿಯುವುದು ಪತಿಯಲ್ಲ
ಈ ಮೂರು ಹೇಳಬಲ್ಲವನು ದಡ್ಡನಲ್ಲ (ಚಂ ಸೆ ೨೧೯)
ಹಗ್ಗ, ರಾಟೆ, ಕೊಡ

ಬಾವಿ ದುಡ್ಗೆ ಮೇಲೆ ಹೆಬ್ಬಾವ್ ಹಾರ್ತದೆ (ಶಾಂ ನಾ ೧೫೫)
ಹಗ್ಗಾ

ಹೋಗಾಕಾರೆ ಯರ್ಡ್‌ಜನಾ
ಬರಾಕಾರೆ ಮೂರ್ಜನಾ (ಶಾಂ ನಾ ೩೯೮)
ಹಗ್ಗಾ–ಕೊಡಾ–ನೀರು

ಹಚ್ಚಿದ ಕುಳ್ಳು ಕಿತ್ತೋದಲ್ಲ
ಹಚ್ಚೂ ಮುಂದ ನಗೋದಲ್ಲ (ಇ ೧೦೦೦)

ಹಾಕಾಕ ಬರತೈತಿ
ತಗಿಯಾಕ ಬರೂದಿಲ್ಲ (ಇ ೧೦೫೮)
ಹಚ್ಚಿ ಬೊಟ್ಟು

ಅಂತಪ್ಪನ ಹಿತ್ತಲದಾಗ ಅಂತ್ರಾಣಿ ಗಿಡ ಹುಟ್ಟೈತಿ
ಅತ್ತರೂ ಬರವಲ್ದು ಕಿತ್ತರೂ ಬರವಲ್ದು (ಇ ೮೭)
ಹಚ್ಚೀ ಬಟ್ಟು

ಅಕ್ಕನ ಕೈಗೆ ಪಚ್ಚೆ ಕಡಗ ಹಾಕುವವರುಂಟು ತೆಗೆಯುವವರಿಲ್ಲ (ಲ ಗೌ ೬)

ಅಕ್ಕನ ಕೈಗೆ ಹಾಕಿದ ಬೀಗ ತೆಗೆಯಕ್ಕಾಗದು (ಸು ೬)

ಅಪ್ಪಣ್ಣಯ್ಯನ ತೋಟಕ್ಕೆ ಎಪ್ಪತ್ತೈದು ಬೀಗ
ಅತ್ತರೂ ಬರದು ಕಿತ್ತರೂ ಬರದು (ಲ ಗೌ ೬೫)

ಉತ್ರಾಸದ ಮೇಲೆ ಉತ್ರಾಣಿಗಿಡ ಹುಟ್ಟದೆ
ಕಿತ್ರುಬರಲ್ಲ ಕೀರಾಡಿದರೂ ಬರಲ್ಲ (ಜೀಶಂಪ ೭೧)

ಉತ್ರಾಸದ ಮೇಲೊಂದು
ಉತ್ರಾಣಿಕೆ ಗಿಡ ಹುಟ್ಟಿ
ಉತ್ತರೂ ಬರದು
ಕಿತ್ತರೂ ಬರದು (ಸು ೯೬)

ಎತ್ತರ ಹಾಸಿನ ಮ್ಯಾಲ ಉತ್ತರಾಣಿ ಗಿಡಹುಟ್ಟಿ
ಉತ್ತರೂ ಬರಲಿಲ್ಲ ಕಿತ್ತರೂ ಬರಲಿಲ್ಲ (ವಾಲಿ ೪–೪೪)

ಕಿತ್ತೂರ ಕಿಲ್ಲೇದ ಮ್ಯಾಲ ಹತ್ತರಕಿ ಪಲ್ಲೆ ಹುಟ್ಯಾದ
ಕಿತ್ತರೂ ಬರುವದಿಲ್ಲ ಸತ್ತರೂ ಬರೂದಿಲ್ಲ (ವಾಲಿ ೪–೪೫)

ಚಿಕ್ಕ ಚಿಕ್ಕ ಪೆಟ್ಟಿಗೆ ಚಿನ್ನಾರಿ ಪೆಟ್ಟಿಗೆ
ಹಾಕೋರುಂಟು ತೆಗೆಯೋರಿಲ್ಲ (ಲ ಗೌ ೫೪೦)

ನಿಟ್ಟೂರು ಏರಿ ಮೇಲೆ
ಒಂದು ಅಟಂಗಿಮರ ಹುಟ್ಟಿದೆ
ಅತ್ತ ಕಿತ್ತರು ಬರಲ್ಲ
ಇತ್ತ ಕಿತ್ತರು ಬರಲ್ಲ (ಜೀಶಂಪ ೧೮೬)

ನಿನ್ನ ಅಂಗಳದಾಗ ಚೆನ್ನಬಸವನ ಗುಡಿ
ನೀ ನೋಡಿಲ್ಲ ಮಂದೆಲ್ಲ ನೋಡ್ತಾರ (ವಾಲಿ ೪–೪೭)

ಹಚ್ಚೆ

ನನ್ನ ಮುಂದೆ ಎಲ್ಲರೂ ತಲೆಬಾಗುವರು (ಚಂ ಸೆ ೧೫೩)

ಹಜಾಮ

ಕರೀ ನೆಲಾ ಮೇಯತಾದ
ಏಳು ಹೊಳಿ ನೀರ ಕುಡಿತಾದ
ಸವಡು ಇಲ್ದ ದುಡಿತಾದ
ಗಾದಿ ಮ್ಯಾಲ ಮಲಗತಾದ (ವಾಲಿ ೩–೩೬)

ಹಜಾಮನ ಕತ್ತಿ

ನೀರಿನಲ್ಲಿ ಹೋಗುವೆನು ಮೀನು ನಾನಲ್ಲ
ಮಾನವನ ಸೇವಕನು ನನಗೆ ಜೀವವಿಲ್ಲ
ನೀರಿನಲ್ಲಿ ಹೋದರೂ ಹೆಜ್ಜೆ ಕಾಣುವುದಿಲ್ಲ (ಲ ಗೌ ೬೯೫)

ಹಡಗು

ಅರೆ ಅರೆ ದೊಂಬ್ತಿ
ಅಟ್ಟದ ಮ್ಯಾಲೆ ಕೂತಿದ್ದಿ
ಪಟ್ಟೆ ಸೀರೆ ಉಟ್ಟದ್ದಿ (ಸು ೪೫)

ಮಾಳಿಗೆ ಮ್ಯಾಲಿಂದ
ಮಂಡಲದ ಹಾವು ನೇತು ಬಿದ್ದಿದೆ (ಸು ೪೦೯)

ಹಡಲಕಾಯಿ (ಪಡುವಲಕಾಯಿ)

ಪುಣ್ಯ ಜೋರು ಇದ್ದರ
ಕೊಡದಾನ ಕುಂಬಳಕಾಯಿ ಕಡಿಗಾಗತೈತಿ (ವಾಲಿ ೪–೪೯)

ಹಡೆಯುವ ಕ್ರಿಯೆ

ಅಂಗೈಯಷ್ಟು ಪಟ್ಟಣ ಅದರ
ಅರವತ್ತೇಳು ಜಿಡ್ಡಿಬಾಗಿಲ (ಲಠೈ ಭಾಗ ೫–೩೮)
ಹಣಗಿ

ಕಣ್ಣಿಗ ಕಾಣತದ ಕೈಗ ಸಿಗಲ್ಲ (ಲಠೈ ಭಾಗ ೫–೧೦೭)

ಹಚ್ಚಿದ ಕುಳ್ಳ ಕಿತ್ತೋದಿಲ್ಲ (ಲಠೈ ಭಾಗ ೫–೨೯೧)
ಹಣಚಿಬಟ್ಟ

ಬೆಲಕ ಮಲಕ ಹಾಕಾಕ ಬರ್ತೈತಿ ತೆಗ್ಯಾಕ ಬರೂದಿಲ್ಲ (ಇ ೫೩೩೬)
ಹಣಚಿಬಟ್ಟು

ಬಿತ್ತಿದ ಬೆಳಿ ಕಿತ್ತಲಾರ
ಸುಣ್ಣದ ಗಡಗಿ ಸುತ್ತಲಾರ (ಲಠೈ ಭಾಗ ೫–೨೧೯)
ಹಣಚೆಬಟ್ಟ, ನೆಲ

ಅಂಗೈ ಅಗಲದ ಗದ್ದೆ
ಮುಂಗೈ ಅಗಲದ ಅಂಚು
ಚಿನ್ನದ ಕದರು (ಲ ಗೌ ೧೧೨)

ಕುಂಬಾರ ತಿಂಜಾರ ಗಾಣಿಗ
ಮೂವಾರು ಕೂಡಿ ಉಣ್ತಾರೆ (ಲ ಗೌ ೪೫೮)

ಚೋಟುದ್ದದ ಗಣಮರ ಅಂಗೈ ಇಂಬ ದೇವಸ್ಥಾನ (ಲ ಗೌ ೫೬೦)

ಲೀಲಾವತಿ ಎಂಬ ಕೆರೆ ನಳಚಕ್ರವರ್ತಿಯೆಂಬ ದೊರೆ
ಲೀಲಾವತಿ ಕೆರೆಯ ಹಸಿ ಬತ್ತಿಹೋದರೆ ನಳಚಕ್ರವರ್ತಿಗೆ ಮರಣ (ಲ ಗೌ ೮೯೫)
ಹಣತೆ

ಕೆರೆಯ ಮೇಲೆ ಕುದುರೆ ಕೂತು
ಬಾಲದಲ್ಲಿ ನೀರು ಕುಡಿಯುತ್ತದೆ (ಚಂ ಸೆ ೧೦೭)
ಹಣತೆ ದೀಪ

ಅಂಗೈಯಗಲದ ಗದ್ದೆ
ಗದ್ದೆಯಲ್ಲಿ ನೀರು
ನೀರಿನಲ್ಲಿ ಬೇರು
ಬೇರಿನ ತುದಿಗೆ ಬೆಂಕಿ (ವಾಲಿ ೩–೯೨)
ಹಣತೆಯ ದೀಪ

ಬಂಗಾರದ ಬಸವಣ್ಣ
ಬಾಲದಲ್ಲಿ ನೀರು ಕುಡೀತದೆ (ಸು ೩೬೧)
ಹಣತೆ, ಬತ್ತಿ

ಕೂತುಕೂರು ಕುಂಬಾರ ಶೆಟ್ಟಿ
ಆತುಕೂರು ಅಳ್ಳೆ ಶೆಟ್ಟಿ
ಗಾಣ ಹೊರೋ ಗಾಣಿಗ ಶೆಟ್ಟಿ (ಸು ೨೧೯)
ಹಣತೆ, ಬತ್ತಿ, ಎಣ್ಣೆ

ಕೆರೆ ಬತ್ತಿ ಹೋಯಿತು
ಹಾವು ಸತ್ತು ಹೋಯಿತು
ಗಿಳಿ ಹಾರಿ ಹೋಯಿತು (ಸು ೨೨೨)
ಹಣತೆಯ ಎಣ್ಣೆ, ಬತ್ತಿ, ದೀಪದಕುಡಿ

ಏರಿ ಮೇಲೆ ಮೂರು ಜನ ಸೂಳೇರ್ಹೋಗ್ತಾರೆ
ಅವರ್ನೆಣಿಸಿದರೂ ಎಣಿಸಬಹುದು
ಅವರ ನೆರಿಗೆ ಎಣಿಸಾಕಾಗೋದಿಲ್ಲ (ಜೀಶಂಪ ೮೦)

ಒಂದು ಮರಕ್ಕೆ ಒಂದೇ ಬೇರು (ಜೀಶಂಪ ೯೯)

ಕಳ್ಳನಾಲಿಗೆ ಬೆಳ್ಳಿಗೂಟ (ಜೀಶಂಪ ೧೨೦)
ಹಣಬೆ

ಆಕಾಶದಲ್ಲಿ ಎರಡು ಕಾಮನ ಬಿಲ್ಲು
ನಡುವೆ ಪುಟ್ಟದಾದ ಕೆಂಪು
ನಕ್ಷತ್ರ ಮಿನುಗುತ್ತಿರುತ್ತದೆ (ಇ ೧೬೩)
ಹಣಿ, ಹುಬ್ಬು, ಕುಂಕುಮ

ಅಟ್ಟಣದಾಲದ ಮರ
ಕಿಬ್ಬನಳ್ಳಿ ನಾಯಕರುಡುಗಿ
ಬೊಡ್ಡೆ ಅರಳಿರಬೇಕು
ತುದಿ ಮೊಗ್ಗಾಗಿರಬೇಕು
ಅದನ್ನ ತಂದು ಕೊಟ್ಟೋರ್ನ
ಮದುವೆ ಆಗ್ತೀನಿ ಅಂತಳೆ (ನಾ ಗೌ ೨೧)
ಹಣ್ಣಿಹೂವು

ಹತ್ತ ಮಂದಿ ಬಡುತಾರ
ಐದ ಮಂದಿ ತಿರುತಾರ
ಅಗಸಿಗಿ ಬರಾನಾ ಹೊಟ್ಟಿ ಉಬ್ಬತೈತಿ (ಲಠೈ ಭಾಗ ೧–೫೫)
ಹತ್ತಬೆರಳು, ಐದ ಬೆರಳ, ರೊಟ್ಟಿ

ಅಕ್ಕಾ ಅಕ್ಕಾ ತೇರ ನೋಡ
ತೇರಿನ್ಯಾಗಿನ ಗೊಂಬೀ ನೋಡ
ಗೊಂಬೀ ಮೂಗಿನ್ಯಾಗ ಸಿಂಬಳಾ ನೋಡ
ಸಿಂಬಳದಾಗಿನ ಸೀರಿ ನೋಡ (ಇ ೧೪)

ಅಡಿಕಿ ಬಸುರಾಗಿ ತಡಕೋಡಿಗೆ ಹೆಸರಾಗಿ
ನಿಮ್ಮವರು ಬಂದ್ರ ಬರ್ತೀನಿ
ಬರದಿದ್ರ ಅಡವೀ ಪಾಲಾಗ್ತಿನಿ (ಇ ೭೮)

ಕಲ್ಲ ಕಣಾ ಕಬ್ಬಿಣ ಮೇಟಿ
ಕಾಳ ಹೊರಗೆ ಕಣಕಿ ಒಳಗ (ಇ ೩೭೩)

ನಗಿಬಂದ ನಾಕ ದಿನಾ ಆತು
ನಗಬೇಕಂದ್ರ ಪಂಚಕ ಬಂದತಿ (ಲಠೈ ಭಾಗ ೫–೧೮೪)

ಮೂವರು ಮುಂಡೆಯರು
ಮುಸುಕಿನ ಜಾಣೆಯರು
ಬಿಸಿಲು ಬರತಂಕ
ಮುಸುಕ ತೆಗೆಯೋಲ್ಲ (ಇ ೮೭೮)

ಹಸರ ಎಲಿಮ್ಯಾಗ
ಮಸರ ಛಲ್ಲಿದಾಂಗ (ಲಠೈ ಭಾಗ ೫–೨೯೯)

ಹಸರು ಗಿಡದಾಗ ಬೆಣ್ಣೀ ಉಂಡಿ (ಇ ೧೦೩೪)
ಹತ್ತಿ

ಕರಿ ಕುದರಿ ಕೆಬ್ಬಿಣ ಲಗಾಮ
ಒದ್ರ ಲದ್ದಿ ಹಾಕ್ತದ (ಲಠೈ ಭಾಗ ೫–೧೧೬)
ಹತ್ತಿ ಅರ್ಯೋದು

ಹಂದರ ತುಂಬಾ ಹಸರೆಲೆಯಾಗಿ
ಕಂಬ ಕಂಬಕ ಮಲೀ ಬಂದು
ಬಂದ ಬೀಗರೆಲ್ಲಾ ಬಸರಾಗಿ ಹೋಗ್ತಾರ (ವಾಲಿ ೮–೫೩)
ಹತ್ತಿ ಬಿಡಿಸುವ ಕ್ರಿಯೆ

ನಗು ಬಂದು ಆರು ತಿಂಗಳಾಗ್ಯಾದ
ನಗಬೇಕಂದರ ಪಂಚಕ ಬಂದಾನ
ಧನ್ಯಾರಿಗಿ ಬಂದು ನೋಡಿ ಹೋಗನ್ನು
ರಾಣೀಗಿ ಬಂದು ಕರಕೊಂಡು ಹೋಗನ್ನು (ವಾಲಿ ೨–೭೬)
ಹತ್ತಿ ಬಿಡಿಸುವದು

ಅಟ್ಟಂಬಾರಣ್ಯದಾಗೆ ಚಿಟಗುಬ್ಬಿ ತಲಿ ಒಡ್ತತಿ (ಲ ಗೌ ೩೧)
ಹತ್ತಿಕಾಯಿ ಒಡೆಯುವುದು

ಹಂದರಕ ಹಸರಂಗಿ
ಕಂಬಕ್ಕ ಮಲಿ ಬಂದ
ನಿಬ್ಬಣಕ ಬಂದ ಮಂದೆಲ್ಲಾ
ಬಸರಾಗತಾರ (ಲಠೈ ಭಾಗ ೫–೩೦೧)
ಹತ್ತಿಗಿಡ, ಹತ್ತಿಕಾಯಿ, ಬಿಡಸೊ ಹೆಣ್ಣುಮಗಳು

ಅಟ್ಟಂಬಟ್ಟಮ್
ಆರ್ಯಾಣದಾಗ
ಚಿಟಗುಬ್ಬಿ ತಲಿ ಒಡಿತ (ಲಠೈ ಭಾಗ ೫–೬)

ನಗೀ ಬಂದು ನಾಲ್ಕು ತಿಂಗಳಾತು
ನಗಬೇಕಂದರ ಪಂಚಕ ಬಿದ್ದೈತಿ
ಅಪ್ಪಗ ಬಂದು ನೋಡಿ ಹೋಗನ್ನು
ಅವ್ವಗ ಬಂದು ಕರಕೂಂಡು ಹೋಗನ್ನು (ಇ ೬೨೬)

ಮಟ ಮಟ ಮಧ್ಯಾಣದಾಗ
ಚಿಟಗುಬ್ಬಿ ತಲಿ ಒಡದೈತಿ (ಇ ೮೦೧)
ಹತ್ತಿ ತೊಳಿ

ಅಟ್ಟಂ ಬಟ್ಟಂ ಆರ್ಯಾಣದಾಗ ಚಿಟಗುಬ್ಬಿ ತಲೆ ಒಡದ್ಯೆತಿ (ಇ ೫೬)
ಹತ್ತಿ ತೊಳೆ

ಇಟ್ಲಿಂದ ಬರೇ ಉಡಿಯಾಗ್ ಹೋತಾರೆ
ಅಟ್ಲಿಂದ ತುಂಬ್ದುಡ್ಯಾಗ್ ಬತ್ತಾರೆ (ಲ ಗೌ ೧೬೬)
ಹತ್ತಿ ಬಿಡಿಸಿಕೊಂಡು ಬರುವುದು

ಹಸಿರು ಗಿಡದ
ಸುಣ್ಣಾ ಹಿಡದು ಬಸುರಾಕ್ಕಾರ (ಇ ೧೦೪೦)
ಹತ್ತಿ ಬಿಡಿಸುವುದು

ಅಟ್ಟಟ್ಟ ಅರ್ಯಾಣದಾಗ
ಚಟಗುಬ್ಬಿ ತಲಿ ಒಡದ್ಯೆತಿ (ವಾಲಿ ೨–೧೧೩) (ವಾಲಿ ೨–೩೮)
ಹತ್ತಿಯ ಕಾಯಿ

ಅಕ್ಕಕ್ಕ ತೇರ ನೋಡು
ತೇರ ಮ್ಯಾಲಿನ ಗೊಂಬಿ ನೋಡು
ಗೊಂಬಿ ಮೂಗಿನ ಸುಂಬಳಾ ನೋಡು (ವಾಲಿ ೨–೬೮)
ಹತ್ತಿಯ ಗಿಡ

ಹರದುವ್ವ ತರದುವ್ವ
ವರಕೊಟ್ರೆ ಬರದುವ್ವ (ಸು ೪೯೫)
ಹತ್ತಿ ಹುವ್ವ

ಹೂವಿನ್ಯಾಗ ಹೂವ ಯಾವ ಹೂ (ಲಠೈ ಭಾಗ ೫–೩೦೬)
ಹತ್ತಿ ಹೂ

ಹೋಗುವಾಗ ಹೂವಿನ ತೋಟ
ಬರುವಾಗ ಬರೀತೋಟ (ಲಠೈ ಭಾಗ ೫–೩೧೭)
ಹತ್ತಿ ಹೊಲ

ನಗಿಬಂದ ನಾಕ ದಿನಾ ಆತ
ನೆಂಟರ ಬಂದ ಎಂಟ ದಿನಾ ಆತ
ನಾ ಕೆಟ್ಟ ಹೋಗ್ತೇನಿ ನಮ್ಮರ್ನ ಕರಿರಿ (ಲಠೈ ಭಾಗ ೫–೧೮೩)
ಹತ್ತಿ ಹೊಲ (ಬಿಡಸಾಕ ಬಂದದ್ದು)

ಅಜ್ಜ ಏನು ಕೊಟ್ಟರೂ ತಿಂತಾನ
ನೀರು ಕೊಟ್ಟರ ಸಾಯ್ತಾನ (ಇ ೪೬)
ಹತ್ತೀ ತೊಳಿ

ಒಂದು ಬಟ್ಟೆ ಒಣಗೋಕೆ ಹತ್ತು ನಿಮಿಷ ಬೇಕು
ಹತ್ತು ಬಟ್ಟೆ ಒಣಗೋಕೆ ಎಷ್ಟು ಹೊತ್ತುಬೇಕು (ಸು ೧೬೩)
ಹತ್ತು ನಿಮಿಷ

ತೌಂಟಿಗೆಯವರಪ್ಪ ಹಾರೋದ (ರಾ ಗೌ ೨೮೦)

ದಿನವೆಲ್ಲ ಅಡಿ ಬಂತು
ನಾಕು ಸಮುದ್ರ ತಿರುಗಿ ಬಂತು
ಮುಗಿಲ ಮುಟ್ಟಿ ಬಂತು (ವಾಲಿ ೬–೩೦)

ಹಗಲು ಆಡಿ ಬಂದೆ
ನಾಕು ಸಮುದ್ರ ತಿರುಗೆ ಬಂದೆ
ಮುಗಿಲು ಮುಟ್ಟಿ ಬಂದೆ
ಮೊಗ ತಾರೆ ಮುದ್ದಾಡೆ (ರಾ ಗೌ ೪೬೫)
ಹದ್ದು

ಅಡ್ನಾಡಿ ಬಕ್ ಬರ್ಲಿ (ಲ ಗೌ ೪೩)
ಹನಿಡ್ಯೂ, ಬರ್ಗ್‌ಲಿ ಸಿಗರೇಟುಗಳು

ಎದ್ದಾಂವಾ ಕುಂತಿಲ್ಲ
ಕುಂತಾವಾ ಎದ್ದಿಲ್ಲ
ಹೋದಾವಾ ಹೊಳ್ಳಿಲ್ಲ (ಇ ೨೩೬)
ಹನುಮಂತ, ಬೋರಗಲ್ಲು, ಶವ(ಹೆಣ)

ಒಂದು ಬಾಯಿ
ಹನ್ನೆರಡು ತಿಕ (ಸು ೧೪೮)
ಹನ್ನೆರಡು ತಾಳಿನ ಕೂರಿಗೆ ಮತ್ತು ಬಟ್ಟಲು

ಒಂದು ಹಚ್ಚ ಹಸಿರು ಮೈದಾನಿನಲ್ಲಿ
ಹನ್ನೆರಡು ಉನ್ನತ ವೃಕ್ಷಗಳಿವೆ
ಒಂದೊಂದು ವೃಕ್ಷಕ್ಕೂ ಫಲಪುಷ್ಪಬರಿತವಾದ ಮೂವತ್ತು ರೆಂಬೆಗಳಿವೆ
ಆ ರೆಂಬೆಗಳು ಇದ್ದಂತೆಯೆ ಇರುತ್ತವೆ
ಬೆಳೆಯುವುದೂ ಇಲ್ಲ ಬಾಡುವುದೂ ಇಲ್ಲ
ಹನ್ನೆರಡು ತಿಂಗಳುಗಳು ಹಾಗೂ ತಿಂಗಳ ಮೂವತ್ತು ದಿನಗಳು (ವಾಲಿ ೧–೫೮)

ಚಂದ್ರ ಬಿಂಬದ ಸಮಾನ
ನಾವೇ ಪ್ರದರ್ಶನಕ್ಕಿಡುವ ವಸ್ತು
ಹಕಾರಾದಿ ಳಕಾರಾಂತ್ಯ ಮಧ್ಯಕ್ಷರವೇನು (ಲ ಗೌ ೫೩೮)

ಸೂರ್ಯ ಸುಕ್ಕ ಬೂದಿ ಮುಕ್ಕ (ಜೀಶಂಪ ೨೬೩)
ಹಪ್ಪಳ

ಗುಜ್ರ ಎಮ್ಮಿ
ಹೆಜ್ಜಿಲ್ದ ನಡಿತತಿ (ಲಠೈ ಭಾಗ ೨–೩೭)

ಹಾಲ ಉಕ್ಕಿದರ ನೀರ ಹಾಕ್ತಾರು
ನೀರ ಉಕ್ಕಿದರ ಏನ ಹಾಕ್ತಾರು (ಲಠೈ ಭಾಗ ೫–೩೦೪)
ಹರಗೋಲ

ಅಂತಪ್ಪನ ಕುದುರಿ ನಿಂತು ಉಚ್ಚಿ ಹೊಯ್ಯತೈತಿ (ಇ ೮೫)
ಹರನಾಳಗಿ

ಅಂತಪ್ಪನ ಕುದುರಿ ಅಂತರಲೇ ಉಚ್ಚಿ ಹೊಯ್ಯತೈತಿ (ವಾಲಿ ೩–೪)
ಹರನಾಳಿಗೆ

ತುಂಬಿದ ಕೆರೆಯಲ್ಲಿ ಕೆಂದೆತ್ತು ನೀರ್ಕುಡೀತು (ರಾ ಗೌ ೨೭೧)

ಕರಿಯ ಕೋಣ ಎದ್ದದ್ದೆ ಹೋಗಿ ಹಳ್ಳ ಬೀಳ್ತದೆ (ಲ ಗೌ ೩೯೮)
ಹರಬಿ

ತಿಕಕ್ಕೆ ತಲೆ
ಬಾಯಿಗೆ ಬೆರಳು
ಅಂಗಾಲಲ್ಲಿ ತಾಳ
ಒಡೆಯುವ ಹೆಣ್ಣೆ
ಅದು ಒಂದು ಅಂಗದ ಗಿಡ (ರಾ ಗೌ ೨೭೦)
ಹರಬಿ, ಮಿಂಚು, ಕೀರೆಗೆಡ್ಡೆ

ತಿಗದಾಗೆ ತಲೆ
ಬಾಯಾಗೆ ಕೈ (ಸು ೩೦೨)
ಹರವಿ

ಅಜ್ಜ ಭರ್ತಿ ಆಗ್ಯಾನ
ಅಪ್ಪ ತಂದು ಹಾಕ್ತಾನ
ಮಗ ಖರ್ಚು ಮಾಡ್ತಾನ (ವಾಲಿ ೩–೧೦೮)
ಹರವಿ, ಕೊಡ, ತಂಬಿಗೆ

ತಾಯಿ ಕುಂತವಳೆ
ಮಗಳು ಓಡಾಡ್ತಾಳೆ (ಸು ೨೯೯)
ಹರವಿ, ಚೊಂಬು

ಅಕ್ಕನ ಹಳ್ಳಿಗೆ ಒಬ್ಬಳು ಅಕ್ಕನಕೊಟ್ಟಿದೆ
ಅತ್ತರೆ ಕರ್ಕೊಂಡ್ಹೋಗೋದಿಲ್ಲ
ಅಳದಿದ್ದರೆ ಕರ್ಕೊಂಡ್ಹೋಗ್ತೀನಿ (ಜೀಶಂಪ ೫೦)

ಅಂಗೈ ಗಾತ್ರ ಗದ್ದೆ
ಮುಂಗೈ ಗಾತ್ರ ಬದು
ಬೆಳೆಯಬಹುದು
ತಿನ್ನಾಕಾಗೋದಿಲ್ಲ (ರಾ ಗೌ ೫೭)

ಗುಣಿ ಕಟ್ಟಬಹುದು
ಗೊಬ್ಬರ ಹಾಕಬಹುದು
ತಿನ್ನೋದಲ್ಲ ಉಣ್ಣೋದಲ್ಲ
ಮಾತ್ರ ಅದು ಬೇಕು (ರಾ ಗೌ ೨೩೪)
ಹರಳು

ಅಕ್ಕನಳ್ಳಿಗೆ ಅಕ್ಕನ ಕೊಟ್ಯೆತೆ
ನಕ್ಕರೆ ಕರಕೊಂಡು ಬಾ
ನಗದಿದ್ರೆ ಬಿಟ್ಟು ಬಾ (ನಾ ಗೌ ೬)

ಒಬ್ಬ ಬ್ರಾಹ್ಮಣನಿಗೆ
ಮೂರು ಗುಧಸ್ಥಾನ (ರಾ ಗೌ ೧೫೫)

ಬೇಸಿಗೆಯಲ್ಲಿ ಬೆಂದ ಕಾಯಿ
ಮೋಜಿಂದಡೆ ತಂದ ಕಾಯಿ (ಲ ಗೌ ೭೯೭)

ಮುಳ್ಳುಂಟು ಹಲಸಿನ ಹಣ್ಣಲ್ಲ
ಕಹಿಯುಂಟು ಹಾಗಲಕಾಯಿಲ್ಲ
ತಿರುಳುಂಟು ತೆಂಗಿನಕಾಯಲ್ಲ (ಲ ಗೌ ೮೫೧)

ಹಸಿರುಂಟು ಹಾಗಲ ಕಾಯಲ್ಲ
ಮೇಲೆ ಮುಳ್ಳುಂಟು ಹಲಸಿನ ಕಾಯಲ್ಲ
ಒಳಗೆ ತಿರುಳುಂಟು ತೆಂಗಿನ ಕಾಯಲ್ಲ (ಲ ಗೌ ೧೦೧೪)
ಹರಳು ಕಾಯಿ

ಒಬ್ಬ ಯಜಮಾನನಿಗೆ ಮೂರು ಜನ ಮಕ್ಕಳು (ಲ ಗೌ ೨೭೭)
ಹರಳುಕಾಯಿನ ಗೊನೆ

ಅಜ್ಜಿಮನೆ ಹಿತ್ತಿಲಲ್ಲಿ ಐದು ಬೆಟ್ಟಿನ ದೆವ್ವ (ಲ ಗೌ ೨೮)

ಅಯ್ಯೊಯ್ಯೋ ಜೋಗಿ
ಮೈಯೆಲ್ಲಾ ಬೂದಿ
ಕಂಕುಳಲ್ಲಿ ಕಾಮಾಕ್ಷಿ
ತಲೆ ಮೇಲೆ ರುದ್ರಾಕ್ಷಿ (ರಾ ಗೌ ೩೮)

ಅಯ್ಯಯ್ಯೋ ಜೋಗಿ
ಮೈಯೆಲ್ಲಾ ಬೂದಿ
ಕೈಯಲ್ಲಿ ಕಠಾರಿ
ತಲೆ ಮೇಲೆ ರುದ್ರಾಕ್ಷಿ (ಲ ಗೌ ೭೨)

ಏರಿಮ್ಯಾಲೆ ಮೂರು ಜನ
ಮುಸಿಕಿನ ಸೂಳೇರು
ಎಷ್ಟು ಮಳೆ ಹೂದ್ರೂ
ಅವರು ನೆನೆಯಕ್ಕಿಲ್ಲ
ಬಿಸಿಲು ಬಂದ್ರೆ ಬಾಯ್ಬಿಡ್ತಾರೆ (ರಾ ಗೌ ೧೧೮)

ತಲೆ ಚೆಚ್ಚಿ ಒಲೆ ಮ್ಯಾಲಾಕ್ಕೊಂಡು
ಕಾಲ್ ಮುರ್ದು ಒಲೆವೊಳಿಕಾಕೊಂಡು ಕುಳ್ತವ್ರೆ (ನಾ ಗೌ ೧೩೨)

ಭೂಮಿಲಿ ಒಂದು ಭೂ ಚಕ್ರದ ಗಿಡ ಹುಟ್ಟಿ
ಕಂಕುಳಲ್ಲಿ ಕಟಕಟೆ ನೆತ್ತೀಲಿ ರುದ್ರಾಕ್ಷಿ (ಲ ಗೌ ೮೦೩)

ಮೈಯೆಲ್ಲ ಬೂದಿ
ತಲೆ ಮೇಲೆ ರುದ್ರಾಕ್ಷಿ
ಕೈಯಲ್ಲಿ ಜೋಳಿಗೆ (ನಾ ಗೌ ೧೯೭)

ಸಾಲುಸೋಲ ಮುರಗೋಳ
ನೀಲಾವರದ ಗಂಡಗೋಳ
ನೀನಕ್ಕರೆ ನಾಬರ್ತೀನಿ
ನೀನಗದೆ ಇದ್ದರೆ ನಾಬರಲ್ಲ (ಜೀಶಂಪ ೨೫೫)

ಸುತ್ತ ಮುತ್ತ ಬೀಜ ಹುಯ್ದ ಸುವ್ವಾರನ ಗಿಡ ಹುಟ್ಟಿ
ಮಂಜಪ್ಪನ ಕಾಯಿ ಬಿಟ್ಟು ನಾಡಿಗೆಲ್ಲ ಹೆಸರಾಯಿತು (ಲ ಗೌ ೯೫೪)
ಹರಳು ಗಿಡ

ಜ್ಯೋತಿಗೆ ನೀತಿ ಮರ
ಮಾತು ಕಳಂಗ ಮರ
ನಾಯಿ ಗುಲಾಮ್ ಮರ (ಲ ಗೌ ೫೭೩)
ಹರಳುಗಿಡ–ಬಗುನಿ–ಈಚಲುಮರ

ಅಯ್ಯಯ್ಯೋ ಜೋಗಿ
ನಿನ್ನ ಮೈಯೆಲ್ಲ ಬೂದಿ
ತಲೆ ಮ್ಯಾಲೆ ರುದ್ರಾಕ್ಷಿ (ಸು ೪೦)
ಹರಳುಗಿಡ ಮತ್ತು ಹರಳುಕಾಯಿ

ಮೂಡಲಿಂದ ಮೂರುಜನ
ಮುತ್ತೈದೆಯರು ಬಂದರು
ಬಿಸಿಲು ಬರದೆ ಅವರು
ಮುಸುಕು ತೆಗೆಯೋಲ್ಲ (ರಾ ಗೌ ೪೦೦)

ಹಳ್ಳದಿಂದ ಆಚೆಗೆ ಮಗಳ ಕೊಟ್ಟಿದೆ
ಸಿಡಗುಟ್ಟಿದರೆ ಕರೆತನ್ನಿ
ಸಿಡಗುಡದೆ ಹೋದರೆ ಬಿಟ್ಟು ಬನ್ನಿ (ಲ ಗೌ ೧೦೨೭)
ಹರಳು ಬೀಜ

ಕತ್ತಲೆಯ ಮನೆಯಲ್ಲಿ ಕರಿಕರಿಯ ದೆವ್ವ ಮಿಣುಮಿಣಿಕ ಅಂತದೆ (ಲ ಗೌ ೩೭೬)
ಹರಳೆಣ್ಣೆ ದೀಪ

ಗುಜ್ಜರ ಎಮ್ಮೆ ಹೆಜ್ಜೆ ಇಲ್ಲದೆ ನಡೆಯುತ್ತದೆ (ಚಂ ಸೆ ೧೨೦)

ಗುಜ್ಜರ ಎಮ್ಮೆ ಹೆಜ್ಜೆಯಿಲ್ಲದೆ ನಡೆಯುವುದು (ಇ ೪೯೦)

ನೀರಿನಲ್ಲಿ ತೇಲುವೆ ಬೆಂಡಲ್ಲ
ಜನರು ಕೂರುವರು ಕುರ್ಚಿಯಲ್ಲ
ತೊಗಲುಂಟು ಪಾದರಕ್ಷೆಯಲ್ಲ (ಲ ಗೌ ೬೯೬)

ಹಾಲು ಉಕ್ಕಿದ್ರ ನೀರು ಹಾಕ್ಕಾರ
ನೀರು ಉಕ್ಕಿದ್ರ ಏನ್ ಹಾಕ್ಕಾರ (ಇ ೧೦೬೯)
ಹರಿಗೋಲು

ಹಿಟ್ಟುಂಡು ಬೂದಿ ಹಾಕಿದರು (ಲ ಗೌ ೧೦೪೮)
ಹರಿವಾಣ

ಕಂದ ಹೋರಿಗೆ ಕೆಂದ ಹಗ್ಗ (ಲ ಗೌ ೪೭೬)
ಹರಿವೆ

ಕಟ್ಯಾಗ ಕಟ್ಟಿ ಯಾಕಟ್ಟಿ (ಲಠೈ ಭಾಗ ೫–೧೦೪)
ಹಲಕಟ್ಟಿ

ಆಲದಮರ
ಆಲದಮರದ್ಮೇಲೆ ಕಂಚಿನ ಪುರ
ಕಂಚಿನ ಪುರದ್ಮೇಲೆ ಭತ್ತದ ರಾಶಿ
ಭತ್ತದ ರಾಶಿ ಮೇಲೆ
ಐದು ಜನ ಸೂಳೇರು ನಾಟ್ಯ ಮಾಡ್ತಾರೆ (ರಾ ಗೌ ೮೧)
ಹಲಗೆ, ತಣಿಗೆ, ಅನ್ನ, ಬೆರಳು

ಕಡ್ಲಿ ಕಾಳಷ್ಟು ಹೆಂಡಿ
ಬತ್ತೀಸ ಖೋಲಿ ಸಾರಿಸಿ
ಬಚ್ಚಲ ಪಾಲ ಆಗತೈತಿ (ಲಠೈ ಭಾಗ ೫–೧೦೫)
ಹಲಪುಡಿ

ಹದಿನಾರೆತ್ತಿನ ಹಣಿಪಟ್ಟಿ
ಮನಿಮಾಡೂ ಹೆಳತಿ
ಸಿಂಗಾರದೊಳಗಿನ ಭಂಗಾರ (ಲಠೈ ಭಾಗ ೫–೩೧೫)
ಹಲಪುಡಿ, ಕಸಬರಗಿ, ಗುಳದಾಳಿ

ದಾಸವಾಳದ ಹೂವು ಮುಡಿದವನ ಭಂಡ
ಕೇಸಟ್ಟೆ ಕೋಲು ಕೀಸಿದವನ ಭಂಡ (ಲ ಗೌ ೬೨೯)
ಹಲಸಂಡೆ

ಅಜ್ಜಿ ಮೈತುಂಬ ಕಜ್ಜಿ (ಲಠ್ಠೆ ಭಾಗ ೪–೧೨)

ಅಡ್ಡ ಹರೆ ಮೇಲೆ ದಿಡ್ಡ ಕೂತಾನೆ (ಲ ಗೌ ೪೦)

ಏರಿ ಹಿಂದೆ ಎಮ್ಮೆ ಕರಿನ
ಹೊಟ್ಟೆ ಬಗೀತಾರೆ (ನಾ ಗೌ ೬೭)

ಕವಡೇಲಿ ಕಚ್ಚನಾಯಿ
ಸಿಗಾಕ್ಕೊಂಡಾದೆ (ರಾ ಗೌ ೧೪೯)

ತೊಲೆ ಮೇಲೆ ಅವ್ವ
ಅವ್ವನ ಮೈಲಿ ತಾರಗಜ್ಜಿ (ರಾ ಗೌ ೨೭೭)

ದೊಡ್ಡ ಮರಕ್ಕೆ ದೋಣಿಕಟ್ಟಿದೆ (ಜೀಶಂಪ ೧೭೮)

ಮಲೆನಾಡ ಎಮ್ಮೆಗೆ ಮೈಯೆಲ್ಲಾ ಮುಳ್ಳು (ಲ ಗೌ ೮೨೬)
ಹಲಸಿನಕಾಯಿ

ಡೊಂಕ್ ಮಕಕೆ
ದೋಣಿ ಕಟ್ಟೈತೆ (ನಾ ಗೌ ೧೨೮)
ಹಲಸಿನ ಮರ

ಚಿನ್ನದ ಕರಂಡಗ್ಯಾಗ
ಬೆಳ್ಳೀ ಲಿಂಗ (ಲಠ್ಠೆ ಭಾಗ ೪–೯೮)
ಹಲಸಿನ ತೊಳೆ (ಬಾಳೆ ಹಣ್ಣು)

ಅಪ್ಪ ಕಜ್ಜಿಗ
ಮಗ ಮುದ್ದುಗಾರ (ರಾ ಗೌ ೨೮)

ಅವ್ವ ತಂಟ್ರಿ ಮಗಳು ಮುಳ್ಳಿ
ಹುಟ್ಟಿದ ಮಗು ಅಪರಂಜಿ (ಜೀಶಂಪ ೬)

ಒಂದು ಕುಣೀಲಿ ಒಕ್ಕಳ ತೊಳೆ ಮೀನು (ಲ ಗೌ ೩೨೫)

ಚಿಕ್ಕ ಗುಂಡೀಲಿ ಹತ್ತಾರು ಕೊರವಗಳು (ಲ ಗೌ ೫೪೨)

ಚಿಕ್ಕ ಪೆಟ್ಟಿಗೇಲಿ ಚೊಕ್ಕ ಚಿನ್ನ (ರಾ ಗೌ ೨೪೮)

ಚಿನ್ನದ ಪೆಟ್ಟಿಗೇಲಿ ಬೆಳ್ಳಿಮಗು (ಜೀಶಂಪ ೧೫೫)

ಚಿನ್ನದ ಪೆಟ್ಗೇಲಿ ಬೆಳ್ಳಿ ಗಜ್ಜುಗ (ನಾ ಗೌ ೧೧೯)

ತಾಯಿ ತರಕಲಿ
ಮಗಳು ಬೋಡಿ
ಮೊಮ್ಮಗಳು ಕಮ್ಮಗಡಲೆ (ಜೀಶಂಪ ೧೬೭)

ತಾಯಿ ತಲೆಗದರಿ
ಮಗಳು ನುಣ್ಣಗೆ (ಜೀಶಂಪ ೧೬೮)

ಬೆಳ್ಳಿ ತಟ್ಟೆಯ ಮೇಲೆ ಚಿನ್ನದ ಲಿಂಗ (ಲ ಗೌ ೭೯೨)

ಬಂಗಾರ್ದ ಪೆಟ್ಟೇಲಿ ಬೆಳ್ಳಿಮೀನು (ಜೀಶಂಪ ೧೯೯)
ಹಲಸಿನ ತೊಳೆ

ಚಿನ್ನದ ಗುಡೀಲಿ ಬೆಳ್ಳಿ ಲಿಂಗ (ಲ ಗೌ ೫೫೩)

ಬಂಗಾರ ನುಂಗಿದ ಬೆಳ್ಳಿ ಉಗಿದ (ಲ ಗೌ ೭೪೩)

ಚಿನ್ನದ ಕರಡಿಗೆ ಬೆಳ್ಳಿ ಲಿಂಗ (ಸು ೨೭೮)
ಹಲಸಿನ ತೊಳೆ–ಬೀಜ
ಆನಿ ಹೊಟ್ಯಾಗ ಬೆಳ್ಳನ್ನ ಮೊಟ್ಟೆ (ಇ ೧೭೩)

ಒಂದು ಗುಂಡೀಲಿ ಒಂಬತ್ತು ಕೊರಮ (ರಾ ಗೌ ೧೩೭)

ಒಂದು ಕೂಳೀಲಿ ಒಕ್ಕಳ ಕೊರವ (ಲ ಗೌ ೩೩೫)
ಹಲಸಿನ ಬೀಜ

ಒಂದು ಗುಂಡೀಲಿ
ಒಂಭತ್ತು ಕೊರವ (ಸು ೧೫೫)
ಹಲಸಿನ ಬೀಜ ಅಥವಾ ಬಾವಿಯಲ್ಲಿರುವ ಬಿಂದಿಗೆಗಳು

ತಂದೆ ಮುಳ್ಳರಾಯರು ತಾಯಿ ನಾರಮ್ಮ
ಮಕ್ಕಳು ಮಾಣಿಕ್ಯ ಮೊಮ್ಮಕ್ಕಳು ರುಬ್ಬುಗುಂಡು (ಲ ಗೌ ೫೯೨)
ಹಲಸಿನ ಮೈ, ಸಿದರೆ, ತೊಳೆ, ಬೀಜ

ಅಜ್ಜಿ ತರಕಿ
ಮಗಳು ನರಸಿ
ಮೊಮ್ಮಗಳು ನುಣುಪಿ (ಲ ಗೌ ೨೫೫)

ಅಪ್ಪ ಹಲುಬೀರ
ಅವ್ವ ತಲೆಗುಂಜು
ಮಗ ಮುದ್ದುಗಾರ (ಲ ಗೌ ೬೦)

ಅಪ್ಪ ಮುಳ್ಳು
ಅವ್ವ ತಲೆಗೆದರಿ
ಮಗಳು ಸಿಂಗಾರಿ (ಲ ಗೌ ೬೬)

ಹಲಸಿನ ಮೈ, ಒಳಸಿದರೆ, ತೊಳೆ

ಕಡದರೆ ಹಾಲ
ಹೊಡದರೆ ಹಾಲ
ಒಡದರ ಸಾವಿರ ಮಕ್ಕಳ (ಲಠೈ ಭಾಗ ೪–೫೬)

ಕಪ್ಪತ್ತ ಗುಡ್ಡದಾಗ
ಇಪ್ಪತ್ತ ಕುರಿ ಕೋದ್ರೂ
ಚಿಪ್ಪಿನಷ್ಟು ನೆತ್ರಿಲ್ಲ (ಲಠೈ ಭಾಗ ೪–೫೯)

ಮಲ್ಲಾಡ ಎಮ್ಮಿಗಿ
ಮೈತುಂಬ ಮುಳ್ಳ (ಲಠೈ ಭಾಗ ೪–೧೫೨)

ಮುದಿ ಅಜ್ಜಿ ಮೈ ಮುಳ್ಳ ಮುಳ್ಳ (ಲಠೈ ಭಾಗ ೪–೧೫೪)
ಹಲಸಿನ ಹಣ್ಣ

ಅಜ್ಜಿಗೆ ಮೈತುಂಬಾ ಕಜ್ಜಿ
ಜಜ್ಜಿ ತಿಂದರೆ ಬಾಳ ಸೀ (ಇ ೫೧)

ಅಪ್ಪ ಹಲ್ಗಿಂಚ
ಅವ್ವ ತಲೆಗೆದರಿ
ಮಗಳು ಮಾಸುಂದರಿ (ವಾಲಿ ೨–೮೦)

ಅವ್ವ ಮುಳ್ಳು ಮುಳ್ಳು
ಅಪ್ಪ ನಾರು ನಾರು
ಮಕ್ಕಳು ದುಂಡು ದುಂಡು (ಇ ೧೪೨)

ಏರಿ ಹಿಂದೆ ಮುಳ್ಳಂದಿ ಹೊಟ್ಟೆ ಬಗೀತಾರೆ (ಸು ೧೨೪)

ಒಂದ ಗುದ್ದಿನ್ಯಾಗ ಇಪ್ಪತ್ತು ಮೊಟ್ಟಿ (ಇ ೨೮೬)

ಕಡಿದರೆ ಹಾಲು
ಹೊಡಿದರೆ ಬಡಿದರೆ
ಸಾವಿರ ಮಕ್ಕಳು (ಇ ೩೧೬)

ಕತ್ತಲೆ ಕೋಣೇಲಿ ಮುಳ್ಳು ಹಂದಿ ಮೈ ಸೀಳ್ತಾರೆ (ಲ ಗೌ ೩೭೫)

ಕತ್ತೆಮಲ್ಲಿ ಮುದ್ಕಿ ಕುಯ್ತಾರೆ (ಜೀಶಂಪ ೧೦೪)
ಕಪ್ಪತ ಗುಡ್ಡದಲ್ಲಿ
ಇಪ್ಪತ್ತು ಕುರಿ ಕೊಯ್ದರೂ
ಚಿಪ್ಪಿನಷ್ಟು ರಕ್ತವಿಲ್ಲ ಕೀವಿಲ್ಲ (ಇ ೩೩೧)

ಕರ ಕಟ್ಟದೆ ವರ ಹುಲ್ಲು ಹಾಕದೆ
ಕರ ಮೆಯ್ದೆ ಇದ್ದ ಬಗೆಯಾನಾ
ಮೋಡಗಟ್ಟದು ಮಣವಾರ ಹಾಕ್ತು
ಮಳೆ ವೂಯ್ಯದೆ ಇದ್ದ ಬಗೆಯವ್ವಾ (ಮಂ ೧.೪–೩೧)

ಗಬ್ಬದ ಕುರಿ ದಿಬ್ಬ ಹತ್ತಲಾರದು (ಲ ಗೌ ೪೯೯)

ಡೊಂಕು ಮರಕೆ ದೋಣು ಕಟ್ಟಿದೆ (ಸು ೨೮೮ ಬಿ)

ತಾಯಿ ತರಕಿ
ಮಗಳ ಬೋಡಿ
ಮೊಮ್ಮಗಳು ಖಿಮ್ಮಗ (ಇ ೫೮೩)

ತಾಯಿ ತಲೆಗೆದರಿ
ಮಗಳು ಸುಪ್ಪಾಣಿ
ಮೊಮ್ಮಗಳು ಬೋಳಿ (ಲ ಗೌ ೫೯೬)

ದ್ವಂಕ ಮರ್ದಲ್ಲಿ
ಡೋಲ್ ನ್ಯಾತಾಕಿತ್ತು (ಮಂ ೧.೪–೪೭)

ನೆರೆದ ಹೆಣ್ಣು ನೇತ್ಹಾಕೊಂಡದೆ
ತಡೀಲಾರ್ದೆ ಕೆಡೀಕೊಂಡ (ಲ ಗೌ ೭೧೦)

ಪಚ್ಚೆಕಲ್ಲಿನ ಪ್ರಾಕಾರ
ಒಳಗೆ ಚಿನ್ನದ ಗುಡಿಗಳು
ಅವುಗಳ ಮಧ್ಯೆ ಬಿಳಿಯ ಲಿಂಗ (ಚಂ ಸೆ ೧೭೩)

ಪೆಟ್ಟಿಗೆ ಪೆಟ್ಟಿಗೆ
ಒಂದೇ ಪೆಟ್ಟಿಗೆ
ಬಿಚ್ಚಿ ನೋಡಿದ್ರೆ
ಮುನ್ನೂರು ಪೆಟ್ಟಿಗೆ (ರಾ ಗೌ ೩೩೬)

ಬಂಗಾರ ಪೆಟಗ್ಯಾಗ ಬೆಳ್ಳಿ ಲಿಂಗ (ವಾಲಿ ೨–೧೫)

ಬಂಗಾರದ ತತ್ತೀ ತುಂಬೈತಿ (ಇ ೮೫೯)

ಬಂಗಾರದ ಸಂದಕದಾಗ ಬೆಳ್ಳಿ ಲಿಂಗ (ಇ ೭೮೦)

ಮರದ ಮೇಲೆ ಕುಂತಾನ ಮೋಟು ನನ್ಮಗ
ಬಾಳ ರುಚಿ ನೋಡ್ರಿ ಕಪ್ಪು ನನ್ಮಗ (ವಾಲಿ ೨–೬೨)

ಮಲ್ಲಾಡದ ಕೋಣಗ ಮೈತುಂಬ ಮುಳ್ಳು (ಇ ೮೩೨)

ಮುಟ್ಟಿದರೆ ಮೈಯೆಲ್ಲ ಮುಳ್ಳು
ಅದನ್ನು ಬಿಚ್ಚಿದರೆ ಸವಿಯಾದ ವಡೆ (ಇ ೮೫೫)

ಮುತ್ತಿಕ್ಕಿದರೆ ಮೂಗು ಕಚ್ಚಿದಳು (ಸು ೪೧೩)

ಮುಳ್ಳಿನ ಮಣಿ ತುಂಬ ಮುಳ್ಳಂದಿ ಹೊಟ್ಟೇಲಿ
ಚಿನ್ನಾದ ಮೊಟ್ಟೆ (ರಾ ಗೌ ೩೯೬)

ಮೂಲೇಲಿ ಮುದುಕಿ ಕುಯ್ತಾರೆ (ಸು ೪೨೭)

ಮೂಲೇಲಿ ಮುದ್ಕಿ ಕುಯ್ತಾರೆ (ಜೀಶಂಪ ೨೩೯)

ಮೂಲೇಲಿ ಮುಳ್ಳು ಮುಖದ ಮುದಿ ಮೂಳಿ ಕೂತವಳೆ (ಲ ಗೌ ೮೬೯)

ಸತ್ತವನೇ ಸಾವಿನ ಸುದ್ದಿ
ತೆಗೊಂಡು ಹೋಗ್ತಾನೆ (ರಾ ಗೌ ೪೩೬)

ಸಂದ್ಯಾಗ ಹಂದಿ ಕೊಯ್ತಾರ (ಇ ೯೭೫)

ಹಲಸಿನ ಹಣ್ಣು

ಅತ್ತೆ ಅತ್ತೆ ಚಾರೆ
ಸೊಸೆ ಸೊಸೆ ಸೂಳೆ
ಮಕ್ಕೊ ಮಕ್ಕೊ ಬೋಳಿ (ಶಾಂ ನಾ ೨೫೪೪)

ಅಂತರದಲ್ಲಿ ಆಡೋ ಅಪ್ಪಣ್ಣಾ
ಕೆಳಂಗ್ಬಿದ್ರೆ ದುಪ್ಪಣ್ಣಾ
ಮೆಯ್ತುಂಬಾ ಮುಳ್ಳಣ್ಣಾ
ಅಂಗೀ ಬಿಚ್ಚೋ ನಾಗಣ್ಣಾ (ಶಾಂ ನಾ ೨೫೫)

ಒಳ್ಗೆ ನೆಕ್ಕಾಮಾಡೂ ಕಾತೀದು ಹೆರ್ಗೆ ನೆಕ್ಕಾ ಮಾಡೂ ಕಾಗೂದಿಲ್ಲಾ (ಶಾಂ ನಾ ೨೩)

ಕಚೇರಿ ವಳಂಗಿದ್ದನಾ ಲೆಕ್ಕಾ ಮಾಡೊಲ್ಬತ್ತು
ಹೆರಂಗಿ ದ್ಕಿಡ್ಕಿ ಲೆಕ್ಕಾಮಾಡೊಲ್ಬತ್ತಿಲ್ಲೆ (ಶಾಂ ನಾ ೨೫೭)

ನನ್ನಜ್ಜಾ ಹುಟ್ಟುವಾಗ್ಲೇ ಮುಳ್ಳು ಮುಳ್ಳು (ಶಾಂ ನಾ ೨೫೬)

ನನ್ನಪ್ಪಾ ವಂದೆಮ್ಮಾ ತಂಜಾ
ಅದು ತಪ್ಪಲ್ಲಿವರೆಗೂ ಕರತ್ತು
ತಂದ್ಮೆಲೆ ಕರದೇ ಯಿಲ್ಲೆ (ಶಾಂ ನಾ ೨೫೮)

ವಂದ್ ಪೆಟ್ಗೆ ಮುಚ್ಲಾ ತೆಗದ್ಮೂಡ್ಲೆಯಾ ಗಮ್‌ಗಮಾಗುಡ್ತು (ಶಾಂ ನಾ ೨೫೨)

ಹಾರೆ ಹೊಡೂದು ಸಾರೆ ತೆಗೂದು ನುಂಗ್ ಉಗ್ಳುದು (ಶಾಂ ನಾ ೨೫೩)
ಹಲ್ಸು ಹಣ್ಣು

ಒಂದು ಕಿಸ್ತರೆ ಗಮ್ಮನ್ನಂತು
ಒಂದು ಕೊಸ್ತರೆ ಗಮ್ಮನ್ನಂತು
ಒಂದು ಕಸ್ತರೆ ಗಮ್ಮನ್ನಂತು (ಮಂ ೧.೫–೩೨)
ಹಲಸಿನ ಹಣ್ಣು, ಊದುಕಡ್ಡಿ

ತಾಯಿ ತರಕಿ ಮಗಳು ಬೋಡಿ
ಮೊಮ್ಮಗಳ ಹೆಸರು ಘಮ್‌ಗಡಲೆ (ಸು ೨೯೮)
ಹಲಸಿನ ಹಣ್ಣು, ತೊಳೆ, ಬೀಜ

ಅವ್ವ ಹುರುಕಿ ಮಗಳು ನುಣಪಿ
ಮೊಮ್ಮಗ ಕಮ್ಮಡಲೆ (ಇ ೧೪೧)
ಹಲಸಿನ ಹಣ್ಣು–ಬೀಜ–ತೊಳೆ

ಒಂದು ಗೋಪುರ
ಅದರೊಳಗೆ ಮೂರು ಸುತ್ತುಗಳು
ಹೊರಗಿನ ಸುತ್ತು ಪಚ್ಚೆಯದು
ನಡುವಿನ ಸುತ್ತು ಬೆಳ್ಳಿಯದು
ಕೊನೆಯ ಸುತ್ತು ಚಿನ್ನದ್ದು
ಅದರ ತುಂಬಾ ಶಿವಲಿಂಗಗಳು (ಲ ಗೌ ೩೦೨)
ಹಲಸಿನ ಹಣ್ಣು, ಹೊರ ಮೈ, ಒಳ ಮೈ, ತೊಳೆ, ಬೀಜ

ಅವ್ವತರಕಿ ಮಗಳು ನುಣುಪಿ
ಮೊಮ್ಮಗಳ ಹೆಸರು ಕಂಗಡಲೆ (ಜೀಶಂಪ ೨೮)

ಮುದಿ ಅಜ್ಜೀ ಮೈ ಮುಳ್ಳು ಮುಳ್ಳು (ಇ ೮೬೧)
ಹಲಸು

ಎದರ ಮಾಡದಾಗ
ಮೂವತ್ತೆರಡು ಕವಡಿ ಬಿದ್ದಾವ
ತಗೋಬೇಕಂದರ ಬರಾದಿಲ್ಲ (ಲಠೈ ಭಾಗ ೧–೧೨)

ಒಂದ ಮಾಡದಾಗ
ಬತ್ತೀಸ ಕವಡಿ (ಲಠೈ ಭಾಗ ೧–೨೦)
ಹಲ್ಲ

ಈಟ ಕುಳ್ಳಾ್ಯಗ ಅಕ್ಕಿ ಅನ್ನ (ವಾಲಿ ೪–೧೮)

ಒಂದೇ ಮಾಡದಾಗ ಬತ್ತೀಸ ಕವಡಿ (ವಾಲಿ ೪–೪೮)

ಬಾವಿ ಸುತ್ತ ಬೆಳ್ಳಿ ಗೂಟ (ವಾಲಿ ೪–೨೧)

ಹೊಡೆದಾಡಿಯೂ ಗಾಸಿಯಾಗದ ವೀರರು ಯಾರು (ವಾಲಿ ೪–೫೦)
ಹಲ್ಲುಗಳು

ಕಾಲುಗಳು ನಾಲ್ಕು ಬಾಲ ಒಂದುಂಟು
ಸರ್ಕಸ್ಸು ಮಾಡುವನು ತಲೆಕೆಳಗೆ ಮಾಡಿ ನಡೆಯುವನು (ಚಂ ಸೆ ೧೦೨)

ಬಾಯಿಲೇ ತಿಂದು
ಬಾಯಿಲೇ ಬಿಡತೈತಿ (ಇ ೭೩೪)
ಹಲ್ಲಿ

ಒಬ್ಬ ನಿಚ್ಚಣಿಕಿ ಬೇಡಾಕ ಬಂದಾನ
ಒಬ್ಬ ಕಡ್ಲಿ ತಿನ್ನಾಕ ಕರಿತಾನ
ಇಬ್ಬರಿಗೂ ಉತ್ತರಾ ಒಂದ ಕೊಡಬೇಕು (ಇ ೩೦೧)
ಹಲ್ಲಿಲ್ಲ

ಆಜಾರ್ ತುಂಬ ಬಜಾರ್ ಪೆಟ್ಟಿ (ಮಂ ೧.೧–೨)

ಈಟ ಮಾಡಿನ್ಯಾಗ ಶೆಕ್ಕಿ ತುಂಬ್ಯಾವ (ಇ ೨೦೨)

ಉಯ್ಯಾಲೆ ಮ್ಯಾಲೆ ಹುಡುಗೀರು ಆಡ್ತಾರೆ
ಅವರನ್ನು ಎಣಿಸಬಹುದು
ಅವರ ನೆರಿಗೆ ಎಣಿಸಕ್ಕಾಗಲ್ಲ (ಸು ೧೦೦)

ಕತ್ತಲ ಕೋಣೀಗೆ ಬೆಳ್ಳೀ ಕೋಟಿ (ಇ ೩೨೯)

ಚಿಕ್ಕ ಮಣೇಲಿ ಚೆಕ್ಕೆ ತುಂಬ್ಹುದಾ (ಮಂ ೧.೧–೯)

ಚಿಕ್ಕ ಮನೇಲಿ ಚಕ್ಕೆ ತುಂಬಿದೆ (ಜೀಶಂಪ ೧೫೦)

ಚಿಕ್ಕ ಮನೇಲಿ ಸಾಲು ದೇವರು (ಸು ೨೬೭)

ತೆರೆ ತೆಗೆದರೆ ಮುತ್ತಿನ ಸಾಲು (ಲ ಗೌ ೬೧೭)

ಪುಟ್ಟ ಬಾಯಲ್ಲಿ ಚೊಟ್ಟ ಹುಳು (ಲ ಗೌ ೭೨೮)

ಸಣ್ಣನ್ನ ಮನ್ಯಾಗ ಸೆಕ್ಕಿ ತುಂಬ್ಯಾವು (ಇ ೯೨೨)

ಸಾಲಾಗಿ ನಿಂತಿಹರು ಕಾಲಾಳು ಸೈನಿಕರು
ಬೆಳ್ಳಿಯನು ಹೋಲುವರು ಕದನಗೈಯುವರು (ಲ ಗೌ ೯೩೩)
ಹಲ್ಲು

ಸುತ್ತಲೂ ಬೆಳ್ಳಿಯ ಕಟ್ಟೆ
ಕಟ್ಟೆಯಲ್ಲಿ ನೀರು
ನೀರಿನಲ್ಲಿ ಎಲುಬಿಲ್ಲದ ಹಾವು (ಇ ೯೫೯)
ಹಲ್ಲು, ಎಂಜಲು, ನಾಲಿಗೆ

ಚಿಕ್ಕ ಮನೆಯಲ್ಲಿ ಚಕ್ಕೆ ತುಂಬಿದೆ (ಚಂ ಸೆ ೧೨೬)

ಸಾಲಾಗಿ ನಿಂತಿಹರು
ಕಾಲಾಳು ಸೈನಿಕರು
ಬೆಳ್ಳಿಯನು ಹೋಲುವರು
ಕದನಗೈಯುವರು (ಇ ೯೩೭)

ಹಲ್ಲುಗಳು

ಸುತ್ತಲೂ ಬಿಳಿಕಲ್ಲು ನಡುವೆ ಬಾಳೆ ಸುಳಿ (ಇ ೯೫೫)

ಹಲ್ಲು, ನಾಲಿಗೆ

ಅಡಕಿಯಷ್ಟು ಸೆಗಣಿ
ಮೂವತ್ತೆರಡು ಮನಿ ಸಾರಿಸಿ
ನಾಳೆ ಬೇಕಂತ ನಾಗೊಂದಿ ಮ್ಯಾಗ ಇಡತಾರ (ಇ ೬೫)

ಅಂಗೈದಷ್ಟು ಕಣಾ
ಲಿಂಗದಷ್ಟು ರಾಶಿ
ಬಾಯಿಗೆ ಬೇಸಿ (ಇ ೪೦)

ಅಂಗೈಯೊಂದು ಕಣ
ಅರ್ಧ ಚಮಚೆ ರಾಸಿ
ಬಾಯಿಗದು ಬೇಸಿ (ವಾಲಿ ೩–೯೪)

ಹದಿನಾರೆತ್ತಿನ ಹಲ್ಲಪೇಟಿ (ಇ ೧೦೦೯)

ಹಲ್ಲುಪುಡಿ

ಅಂಬೋಲಿ ಘಟ್ಟಕ ಹೋಗಿ
ತಂಬೂರಿ ಕಾಯಿ ತಂದರ
ಕೊಂಬೋರುಂಟು ತಿಂಬೋರಿಲ್ಲ (ಲಠ್ಠೆ ಭಾಗ ೨–೯)

ಹವಲ

ಅಮರೇ ಗಡ್ಡುಕೆ ಹೋಗಿ
ಕುಮರೇ ಹಣ್ಣು ತಂದು
ಕೊಳ್ಳುವವರುಂಟು ತಿನ್ನುವವರಿಲ್ಲ (ಜೀಶಂಪ ೧೯)

ಅಮರೆ ಗುಡ್ಡಕ್ಕೆ ಹೋಗಿತ್ತು
ಹಮರೆಹಣ್ಣು ತಂದು
ಕೊಳ್ಳೋರುಂಟು ತಿನ್ನೋರಿಲ್ಲ (ಜೀಶಂಪ ೨೫)

ಅಂಬೋಲಿ ಬೆಟ್ಟಕ್ಕೆ ಹೋಗಿ
ತಂಬೋರಿ ಕಾಯಿ ತಂದ್ರ
ಕೊಳ್ಳುವವರುಂಟು ತಿನ್ನುವವರಿಲ್ಲ (ಇ ೧೧೪೪)
ಹವಳ

ರೂಪ ಇಲ್ಲ ರುಚಿಯಿಲ್ಲ
ಬಣ್ಣ ಇಲ್ಲ ವಾಸನೆಯಿಲ್ಲ
ಇದು ಬಿಟ್ಟು ಗತಿಯಿಲ್ಲ (ವಾಲಿ ೨–೨೯)
ಹವೆ

ಬಣ್ಣದಾಗ ಬಣ್ಣ ಯಾವ ಬಣ್ಣ (ಲಠ್ಠೆ ಭಾಗ ೫–೨೦೬)
ಹಸರ ಬಣ್ಣ

ಹಸಿರು ಗಿಡದಾಗ ಗಿಳಿ ಜೋತಾಡತಾವು (ಇ ೧೦೪೯)
ಹಸಿ ಮೆಣಸಿನಕಾಯಿ

ಹಸರಂಗಿ ಬಸಲಿಂಗ
ಕೆಂಪಂಗಿ ಕೇದಾರಲಿಂಗ (ವಾಲಿ ೨–೫೬)
ಹಸಿ ಮೆಣಸಿನಕಾಯಿ, ಹಣ್ಣು ಮೆಣಸಿನ ಕಾಯಿ

ಹಸುರಂಗಿ ಚೆನ್ನಮಲ್ಲಪ್ಪ
ಕೆಂಪಂಗಿ ಬಸವಲಿಂಗಯ್ಯ (ರಾ ಗೌ ೪೮೪)
ಹಸಿರು ಮೆಣಸಿನಕಾಯಿ, ಕೆಂಪು ಮೆಣಸಿನಕಾಯಿ

ಊಟಕ್ಕೆ ಕೂತಲ್ಲಿ ಏನು ಬಿಟ್ಟು ಬಂದಿರಿ (ಲ ಗೌ ೨೦೬)
ಹಸಿವು

ಎಲಾ ಎಲಾ ರಾಮಚಂದ್ರ
ನೆಲದೊಳಗೇನು ಸುದ್ದಿ
ಕೊಕ್ಕುಂಟು ಕೂಗಲಾರೆ
ರೆಕ್ಕೆಯುಂಟು ಹಾರಲಾರೆ (ವಾಲಿ ೨–೮೫)

ಕೊಕ್ಕುಂಟು ಕೂಗಲಾರ
ರೆಕ್ಕೆಯುಂಟು ಹಾರಲಾರೆ (ವಾಲಿ ೨–೨೧)
ಹಸಿ ಸುಂಟಿ

ಎಲೆಎಲೆ ರಾಮಚಂದ್ರ
ಕೊಕ್ಕುಂಟು ಕೂಗಲಾರೆ
ರೆಕ್ಕೆಯುಂಟು ಹಾರಲಾರೆ (ಜೀಶಂಪ ೭೬)
ಹಸಿ ಶುಂಟಿ

ಕೊಕ್ಕುಂಟು ಕೂಗಲಾರದು
ರೆಕ್ಕೆಯುಂಟು ಹಾರಲಾರದು (ಸು ೨೩೯)
ಹಸಿ ಶುಂಠಿ

ಎಲೆ ಎಲವೋ ರಾಮಚಂದ್ರ
ನೆಲದೊಳಗ ಏನು ಸುದ್ದಿ
ಕೊಕ್ಕುಂಟು ಕೂಗಲಾರ
ರೆಕ್ಕೆಯುಂಟು ಹಾರಲಾರ
ಕಚ್ಚಿದರೆ ಮುಟ್ಟಲಾರಿ
ಮುಟ್ಟಿದರೆ ಕಚ್ಚಲಾರಿ (ಇ ೨೫೫೫)
ಹಸೀ ಶುಂಠಿ

ನಾಲ್ಕು ಹಸೇವು
ಎರಡು ಒಣಾವು
ಎರಡು ಮಿಣಿ ಮಿಣಿ
ಎರಡು ಪಟಾ ಪಟಾ (ಇ ೬೫೨)
ಹಸು (ಕಾಲು–ಕೋಡು–ಕಣ್ಣು–ಕಿವಿ)

ನಮ್ಮೂರಿನಿಂದ ಕಬ್ಬಿಣ ತಂದೆ
ಕತ್ತಿ ಕೊಡಲಿ ಮಾಡಿಸಿದರೂ
ಇನ್ನೂ ಒಂದು ಚೂರು ಉಳೀತದೆ (ಲ ಗೌ ೬೫೬)
ಹಸು–ಕರು ಸಂತಾನ

ಒಂದು ಕುತ್ತಿಗೆ
ಎರಡು ಹೊಟ್ಟೆ (ಸು ೧೬೧)
ಹಸುಬೆ ಚೀಲ

ಒಂದು ಮನೆಗೆ ನಾಲ್ಕು ಕೆಸರುಗಂಬ
ನಾಲ್ಕು ಹಾಲುಗಂಬ ಎರಡು ನೀಳ್ಗಂಬ (ಲ ಗೌ ೩೧೧)

ಹಸು, ಅದರ ಕಾಲು, ಮೊಲೆ ಮತ್ತು ಕೋಡು
ಅಕ್ಕನ ಕೈಗೆ ಪಚ್ಚೆಯ ಕಡಗ ಹಾಕುವರುಂಟು ತೆಗೆವವರಿಲ್ಲ (ಚಂ ಸೆ ೧)
ಹಸುರು ಚುಚ್ಚುವುದು

ನಾಲ್ಕು ಕಾಲುಮರ
ನಾಲ್ಕು ಹಾಲುಮರ
ಎರಡು ಒಣಮರ (ಲ ಗೌ ೬೬೨)
ಹಸುವಿನ ಕಾಲು, ಕೆಚ್ಚಲು, ಕೊಂಬು

ಒಂದು ಕೆರೆಗೆ ನಾಲ್ಕು ತೂಬು (ರಾ ಗೌ ೧೪೩)

ಆಣಿಕಲ್ಲು ಮಲಿ ಬಿದ್ದು
ಜಾನಿಕಲ್ಲು ಕೇರಿ ತುಂಬಿ
ನಾಲ್ಕು ಜನ ಅಕ್ಕತಂಗ್ಯಾರು ನೆನಿದs ಬರ್ತಾರ (ಇ ೧೬೮)

ಆನೆಕಲ್ ಮಳೆ ಹೂದು
ಜೇನ್‌ಕಲ್ ಕೆರೆ ತುಂಬಿ
ನಾಲ್ಕುಜನ ಅಕ್ಕತಂಗೇರು
ನೆನಿದಾಲೆ ಹೋಗ್ತಾರೆ (ಜೀಶಂಪ ೬೬)

ಕೆರೆಏರಿಮೇಲೆ ನಾಲ್ವರು ಸೂಳೇರು ಹೋಗ್ತಾರೆ
ಅವರು ನೆನಿತಾರೆ ಅವರನೆರಿಗೆ ನೆನೆಯೋಲ್ಲ (ಜೀಶಂಪ ೧೩೪)

ಜಮ್‌ನೇರಲೆ ಮರ ಜಗ್ಗಿಸಿದರೆ
ನಾಲ್ಕು ಕೆರೆ ನೀರು ಒಂದಾಗ್ತದೆ (ಸು ೨೮೬)

ಆನೆಕಲ್ಲು ಮಳೆಬಿದ್ದು
ಜಾನಕಲ್ಲು ಕೆರೆತುಂಬಿ
ನಾಲ್ಕುಜನ ಅಕ್ಕತಂಗಿಯರು ನೆನೆಯದೆ ಬರ್ತಾರೆ (ಚಂ ಸೆ ೩೮)

ಆನ್‌ಕಣ್ ಮಳ್ದಾವೂದು
ಜೇನ್ಕಲ್ ಕ್ವಳ ತುಂಬಿ
ನಾಕ್‌ಜನ ಸೂಳೇರು ನಲಿತಾ ಬಂದ್ರು ಅಂದ್ರೆ (ಮಂ ೧.೧–೫)

ನಾಕ್ ಜನ ಸೂಳೇರು
ಎಸ್ಟು ಮಳೂದ್ರೂವೆ
ನಡದೇ ವೋಯ್ತುರೆ (ಮಂ ೧.೧–೧೧)
ಹಸುವಿನ ಕೆಚ್ಚಲು

ಏಡು ವಣಮರ
ನಾಕು ಅಸಿಮರ
ಎಳ್ದು ಮಣ–ಮಣ
ಎಳ್ದು ಲೊಟ–ಪಿಟಿ
ಒಂದ್ ಕೊಣ–ಕೊಣ (ಮಂ ೧.೧–೭)
ಹಸುವಿನ ಕೊಂಬು, ಕಾಲು, ಕಣ್ಣು, ಕಿವಿ, ಬಾಲ

ಅಜ್ಜಿ ಕೆಮ್ತಾಳೆ
ಅಜ್ಜ ಗುಮ್ತಾನೆ (ಸು ೧೮)
ಹಸೆಕಲ್ಲು ಮತ್ತು ಗುಂಡುಕಲ್ಲು

ಅಂಗೈ ಅರೆ ಕೋಣೇಲಿ ಐದು ಜನ ಆಟ ಆಡ್ತಾರೆ (ಲ ಗೌ ೧೧೦)

ಒಂದು ಕೆರೆಗೆ ಐದು ಕಾಲುವೆ (ಲ ಗೌ ೩೫೧)
ಹಸ್ತ

ಕಿರೆ ಕಿರೆ ಗೆಣ್ಣುಂಟು ಕಬ್ಬಿನಾ ಕೋಲಲ್ಲ
ಅದಕೆ ಮೂರು ಕಣ್ಣುಂಟು ತೆಂಗಿನಕಾಯಲ್ಲ
ಸಾವಿರಾರು ಮುಳ್ಳುಂಟು ಹಲಸಿನಾಕಾಯಲ್ಲ
ಎಂಥದೋ ಏನೋ ಶಿವನೇ ಬಲ್ಲ (ಇ ೪೦೧)
'ಹಳಕಾರ' ಎನ್ನುವ ಒಂದು ಜಾತಿಯ ಗಿಡ ಹಾಗೂ ಅದರ ಕಾಯಿ

ಮೂರು ಜನ ಮುಂಡೇರು
ಮುಸುಕಿನ ಜಾಣೇರು
ಬಿಸಿಲು ಬರದ ಹೊರತು
ಮುಸುಕು ತೆಗೆಯೋದಿಲ್ಲ (ಸು ೪೨೨)
ಹಳ್ಳಿ (ಹರಳು)

ಲಕ್ಕೂರಿಗೆ ನಮ್ಮಕ್ಕನ್ನ ಕೊಟ್ಟಿದ್ದೀವಿ
ನಕ್ಕರೆ ಕರಕೊಂಡು ಬರ್ತೀವಿ
ನಗದಿದ್ರೆ ಹಂಗೇ ಬರ್ತೀವಿ (ಸು ೪೪೩)
ಹಳ್ಳಿಕಾಯಿ

ಅಜ್ಜಿ ಮೈಯೆಲ್ಲಾ ಕಜ್ಜಿ
ಕಜ್ಜಿ ನೋಡಿದರ ಕಹಿ (ವಾಲಿ ೨–೮೭)

ನನ್ನಜ್ಜ ಮಯ್ಯೆಲ್ಲಾ ಕಜ್ಜಿ ಕಾಜ್ಜಿ (ಶಾಂ ನಾ ೨೫೯)
ಹಾಗಲಕಾಯಿ

ಯೆಲೆ ಕಕ್ಕು ಮುಕ್ಕು
ಕಾಯಿ ಚದುರಂಗಾ
ಹಣ್ಣು ರಾಜಾ ಕೆಂಪು (ಶಾಂ ನಾ ೨೬೦)
ಹಾಗ್ಲ ಕಾಯಿ

ಅಕಟಕ ವಿಕಟಕ
ನಾಟಕ ತೋಟಕ
ನಿನ್ನೋಡಿ ನನ್ನ ಜೀವಾ
ಚುಟು ಚುಟು ಚುಟೂ (ಲಠ್ಠೆ ಭಾಗ ೪–೫)
ಹುಣಚಿಕಾಯಿ

ಅಜ್ಜಿಗಿ ಮೈಯೆಲ್ಲಾ ಕಜ್ಜಿ
ತಿಂದವರ ಬಾಯೆಲ್ಲಾ ಇಸಾ (ಲಠ್ಠೆ ಭಾಗ ೪–೧೧)

ಅಜ್ಜಿಗೆ ಮೈಯೆಲ್ಲಾ ಕಜ್ಜಿ (ಇ ೪೭)

ಎಲಿ ಚಚ್ಚೆ ಪಚ್ಚೆ
ಕಾಯಿ ಮುಕ್ಕೂ ಮುರುಟು
ಹೂವು ಹೊಚ್ಚ ಹೊನ್ನ (ಲಠ್ಠೆ ಭಾಗ ೪–೪೫)

ಕಾಯಿ ಖನ್ನ ಖನ್ನ
ಹೂವ್ವ ಚಿನ್ನಚಿನ್ನ
ಗೋಕುಲಮಡ್ಡ ಕಡ್ಡ ತಿಡ್ಡ (ಲಠ್ಠೆ ಭಾಗ ೪–೭೦)

ನನಗೊಂದು ಅಜ್ಜಿ
ಮೈತುಂಬ ಕಜ್ಜಿ (ಚಂ ಸೆ ೧೫೨)

ಮೂರು ಮಕದ ಎಲೆ
ಮೂವತ್ತು ಮಕದ ಕಾಯಿ (ಸು ೪೨೫)

ಹಿತ್ತಲಲ್ಲಿ ಒಂದು ಹಾಗ್ಲ
ಹಿಡಕತ್ತಲ್ಲ ಹಾಗ್ಲ
ಮೆಲ್ಲಗೆ ಬುಡಸ್ಕೊಂಡು ಬಾರ್ಲ
ಅಲ್ಲೆ ನಿಂತ್ಕೊಂಡು ಕೂಗ್ಲ (ರಾ ಗೌ ೪೯೭)
ಹಾಗಲಕಾಯಿ

ಬಂಗಾರದಾಗ ಕಾಯಿ
ಖಟಗ್ಯಾಗ ಕಾಯಿ
ಬೆಳ್ಯಾಗ ಕಾಯಿ
ಕಬ್ಬಿನದಾಗ ಕಾಯಿ (ಲಠ್ಠೆ ಭಾಗ ೫–೨೦೯)
ಹಾಗಲಕಾಯಿ, ಪಗಡಿಕಾಯಿ, ಮಾವಿನಕಾಯಿ, ಕೀಲಿಕೈ

ಹಾದ್ಯಾಗ ಹದರಗಿತ್ತಿ
ಮನ್ಯಾಗ ಮದರಗಿತ್ತಿ
ತೋಟದೊಳಗ ತೋಟಗಿತ್ತಿ (ಇ ೧೦೬೧)
ಹಾದರಗಿತ್ತಿ ಮುಳ್ಳು

ಒಂದು ಮರ ಮರವೆಲ್ಲ ಎಲೆ
ಎಲೆಯೆಲ್ಲ ತೂತು ತೂತೆಲ್ಲ ಮಾತಾಡ್ತು (ಲ ಗೌ ೩೩೯)

ಮನೆಲೆಲ್ಲಾ ವಾಡಾಡ್ತದೆ
ಬೀದಿಗೆ ಬಂದು ಕೂತ್ಕತ್ತದೆ (ಮಂ ೧.೫–೭೬)
ಹಾರ್ಮೋನಿಯಂ

ಊರೆಲ್ಲಾ ಸುಟ್ಟರು
ಬ್ರಾಹ್ಮಣನ ಲಂಗೋಟಿ ಸುಟ್ಟಿಲ್ಲ (ಲಠ್ಠೆ ಭಾಗ ೫–೭೮)

ಹಲ್ಲಿಲ್ಲದ ಕ್ವಾಣ
ಗದ್ದೀ ಕಡಿತತಿ (ಲಠ್ಠೆ ಭಾಗ ೫–೨೮೮)
ಹಾರಿ

ಕರಿ ಕಳ್ಳ
ನೋಡಿದ್ರೆ ದೊಣ್ಣೆ ಹಂಗೆ ನಿಂತವ್ನೆ (ರಾ ಗೌ ೧೭೮)

ಹಲ್ಲಿಲ್ಲದ ಕೋಣ ಗದ್ದೆ ಕಡಿಯುತ್ತೆ (ಲ ಗೌ ೧೦೦೫)
ಹಾರೆ

ಎಲಿ ಇಲ್ದ ಗಿಡದ ಬುಡದ ತೆಲಿ ಇಲ್ದ ಪಾರ
ಮಲಿ ಇಲ್ದ ಪೋರಿನ ಮಾಡಿಕೊಂಡಿತ (ಲಥ್ಮೆ ಭಾಗ ೩–೧೬)
ಹಾಲಗಳ್ಳಿ, ಪಡಿ, ಮೀನ

ಮಲಿ ಹಿಡ್ಯಾಕಿಂತ ಮೊದಲ
ಏನ ಹಿಡಿಬೇಕು (ಲಥ್ಮೆ ಭಾಗ ೫–೨೪೧)
ಹಾಲ ಹಿಂಡೊ ತಂಬಗಿ

ಮೊಲೆ ಹಿಡಿಯುವದಕ್ಕೂ ಮೊದಲು ಏನು ಹಿಡಿಯುತ್ತಾರೆ (ವಾಲಿ ೮–೪೦)
ಹಾಲು ಕರೆಯುವಾಗ ತಂಬಿಗೆ

ಸೀರೆ ಮೇಲೆ ಷಟಾಕು
ಮೊಲೆ ಮೇಲೆ ಕೈ (ರಾ ಗೌ ೪೫೩)

ನಾಕ್ ಬಾವ್ಯಾಳ ನೀರು ಒಂದೇ ಬಾವ್ಗೆ ಬೀಳ್ತತಿ (ಲ ಗೌ ೬೫೭)
ಹಾಲು ಕರೆಯುವುದು

ಬಿಳಿಯಮ್ಮ ಬಸುರಾಗಿ ಬೆಳ್ಳಿ ಹಡೆದಳು (ಲ ಗೌ ೭೭೬)
ಹಾಲು–ಬೆಣ್ಣೆ

ಬುಡಾಶೀ, ನೆಡು ಹುಳಿ, ಕೊನೆಗೆ ಪರ್ಮಳಾ (ಶಾಂ ನಾ ೪೫೮)
ಹಾಲು–ಮಸ್ರು–ತುಪ್ಪಾ

ಮನೆಯೆಲ್ಲ ಸುತ್ತುತ್ತೆ ಮೂಲೇಲಿ ನಿಲ್ಲುತ್ತೆ (ಜೀಶಂಪ ೨೧೧)
ಹಾಲು–ಮೊಸರು–ತುಪ್ಪ

ಬುಡದಲ್ಲಿ ಸಿಹಿ
ಮಧ್ಯ ಹುಳಿ
ಕೊನೆಗೆ ಪರಿಮಳ (ವಾಲಿ ೫–೫೬)
ಹಾಲು, ಮೊಸರು, ತುಪ್ಪ

ಸುಂಡವಾಳು ಸೂತಕವಾಯ್ತು
ಅನಿವಾಳು ಬಸುರಾಯ್ತು
ಗುಂಡುಕಲ್ಲಿಗೆ ಬಂತು ಮುರಿಕ್ಸ್ಯಟ (ಲ ಗೌ ೯೫೮)
ಹಾಲು, ಮೊಸರು, ಬೆಣ್ಣೆ

ನಾಲ್ಕ ಬಾವಿ ನೀರೂ
ಒಂದ ಬಾವಿಗೆ ಬರತೈತಿ (ಇ ೬೪೯)
ಹಾಲು ಹಿಂಡುವದು

ಹೊಸಿಲಾರದ ಹಗ್ಗ
ಎತ್ತಲಾರದ ಹಲಗಿ (ಲಠೈ ಭಾಗ ೫–೩೧೩)
ಹಾವ, ಭೂಮಿ

ಕೋಟ ಕಳದು ತೋಟದ ಬೇಲ್ಯಾಗಿಟ್ಟಾನ (ಇ ೪೨೮೮)
ಹಾವಿನ ಪರೆ

ಅಂಗೀ ಕಳದು ಅಂಗಳದಾಗ ಇಟ್ಟಾರ (ವಾಲಿ ೬–೬೪)
ಹಾವಿನ ಪರೆ

ಬಾರಲೋ ಸತ್ತವನೆ
ಓಡಿ ಹೋಗುವವನೂ ನಿನ್ನಂಥವನೆ
ನೀನೂ ಅವನಂಥವನಿದ್ದರೆ
ನಾನೂ ಸತ್ತವನೆ (ಇ ೭೩೬)
ಹಾವಿನ ಪೊರೆಯನ್ನು ನೋಡಿ ಇಲಿ ಅಂದದ್ದು

ಅಂಕುಡೊಂಕಾದ ಮನೆ
ಬಡಿಗ ಮಾಡದ ಮನೆ
ಬಾಚಿ ಮುಟ್ಟದ ಚೆಂದದ ಮನೆ (ವಾಲಿ ೨–೧೫)
ಹಾವಿನ ಹುತ್ತ

ಅಡವಿಯಲ್ಲಿ ಅರಮನೆ
ಅಂಕುಡೊಂಕು ಅರಸ
ಮಾತಾಡಿಸಿದರ ಮುಸ್ ಅಂತಾನ (ಇ ೬೭)
ಹಾವಿನ ಹುತ್ತ–ಹಾವು

ಅಡಿಮ್ಯಾಗಿರುವ ಅರಮನಿ
ಅದರಾಗಿರುವ ಅರಸ
ಮಾತಾಡಿಸಿದರ ಮುನಿಸ (ವಾಲಿ ೬–೪೫)

ಎಲ್ಲಾ ಇದೆ ಕೈಕಾಲು ಇಲ್ಲ (ರಾ ಗೌ ೧೧೪)

ಕಣಕಲ್ ಗಡತ್ರ ಕಾರ್ಗೆ ದಾಟಿಲಿಕ್ಕಾಗೂದಿಲ್ಲಾ (ಶಾಂ ನಾ ೧೨)

ನಾನಿರುವೆ ಉದ್ದ ಆದರೂ ಅಲ್ಲ ದೊಣ್ಣೆ
ಹೊಂದಿಲ್ಲ ಕಾಲು ಆದರೂ ಅಲ್ಲ ಮೀನು
ಹರಿಯುವೆ ನಾನು ಆದರೂ ಅಲ್ಲ ನೀರು
ಕಾಣದೆ ಬಂದರೆ ಹತ್ತಿರಕ್ಕೆ
ಇನ್ನಿಲ್ಲ ನಿಮಗಾಸೆ ಬದುಕುವುದಕ್ಕೆ
ಎನ್ನುವ ಧೀರ ನಾನು ಏನು ಮಾಡಿಏರಿ ನೀವು (ಲ ಗೌ ೬೭೪)

ನೀ ಸತ್ತೀಯಂತ ಪಾಡ
ಇಲ್ಲದಿರಕ ನಾನ ಸಾಯತೀನಿ (ಇ ೬೭೭)

ನೋಡಲು ಚೆಂದ ಮುಟ್ಟಿದರೆ ಕೊಂದ (ರಾ ಗೌ ೩೨೬)

ಬಿರಬಿರನೆ ಹೋಗೋಳೆ
ಬಿಲ್ಲೆ ಸರದೋಳೆ
ನಿಂತು ಮಾತಾಡೆ ಗೆಣೆಕಾತಿ (ಸು ೩೭೦)

ಬೆಳ್ಳಿ ಬೆತ್ತ ಹಿಡೀಲಾರೆ (ಸು ೩೮೭)

ಮೈ ನೋಡಿದರೆ ಹಿಮ
ಮನಸು ನೋಡಿದರೆ ಯಮ (ಲ ಗೌ ೮೭೬)

ರಾಜನ ರೂಪು ನೋಡಲು ಅಂದ ಮುಟ್ಟಿದರೆ ಕೊಂದ (ಚಂ ಸೆ ೨೧೩)

ವೋಡ್ ಹೋಗ್ತು ತೆಕ್ಕ ಹಾಕಿ ಮಲಗ್ತು (ಶಾಂ ನಾ ೬೮)

ಸುತ್ತ ಸುತ್ತುವದು ವಾಲೆ ತಾನಲ್ಲ
ಚಿತ್ರ ಬರೆಯುವದು ಕಂಟಿ ತಾನಲ್ಲ
ಪೆಟ್ಟಿಗೆಯಲಿಡಲು ಆಭರಣವಲ್ಲ
ತಿಳಿದು ಹೇಳುವ ಜಾಣಗರಿದಲ್ಲ (ಲತ್ಥೆ ಭಾಗ ೩–೬೪)

ಸುತ್ತು ಸುತ್ತುವುದು ವಾಲೆಯಲ್ಲ
ಚಿತ್ರ ಬರೆಯುವದು ಕುಂಚವಲ್ಲ
ಪೆಟ್ಟಿಗೆಯಲ್ಲಿಡಲು ಆಭರಣವಲ್ಲ–ನಾನ್ಯಾರು? (ಇ ೯೬೦)

ಸುತ್ತ ಸುರುಳುವುದು
ಪೆಟಾರಿಯಲಿ ತುಂಬುವುದು ಒಡವೆಯಲ್ಲ
ಇದ ಹೇಳಬಲ್ಲ ಜಾಣನಿಗೆ ಅರಿದಲ್ಲ (ಸು ೪೭೬)

ಹಾರೋಕೆ ರೆಕ್ಕೆ ಇಲ್ಲ
ಕುಪ್ಪೋಕೆ ಕಾಲಿಲ್ಲ
ಹೋಗೋದು ಬಿರುಸು (ಲ ಗೌ ೧೦೪೩) (ಜೀಶಂಪ ೨೦೯)
ಹಾವು

ಕಾಲಿಲ್ಲದಣ್ಣ ಒಬ್ಬ
ಬಾಲವಿಲ್ಲದಣ್ಣ ಒಬ್ಬ
ತಲಿ ಇಲ್ಲದಣ್ಣ ಒಬ್ಬ
ಕೋಡು ಇಲ್ಲದಣ್ಣ ಒಬ್ಬ (ವಾಲಿ ೬–೨೨)
ಹಾವು, ಕಪ್ಪೆ, ಏಡಿ, ಕುದುರೆ

ಕಾಲಿಲ್ಲದಾತ ಮರ ಹತ್ತಿದ
ಕೈಯಿಲ್ಲದಾತ ಹಣ್ಣ ಕುಯ್ದ
ನಾಲಗೆ ಇಲ್ಲದಾತ ರುಚಿ ನೋಡಿದ (ಸು ೨೦೮)
ಹಾವು, ಕಾಗೆ, ಇರುವೆ

ಹೊಸಿಯದ ಹಗ್ಗ ಎತ್ತದ ಹಲಗಿ (ಇ ೧೧೧೩)
ಹಾವು, ನೆಲ

ಹೊಸಿಲಾರದ ಹಗ್ಗ
ಎತ್ತಲಾರದ ಹಲಗೆ (ಜೀಶಂಪ ೨೯೫)
ಹಾವು, ಭೂಮಿ

ಬಣ್ಣದ ಕೋಲು ಹಿಡಿಯಲಾರೆ
ಸುಣ್ಣದ ಗೋಡೆ ಸುತ್ತಲಾರೆ
ಡೊನ್ನಿ ಮುಳ್ಳ ತುಳಿಯಲಾರೆ (ಇ ೭೨೦)
ಹಾವು, ಮುಗಿಲು, ಚೇಳು

ಉಡಿನಾರದ ಹಗ್ಗ
ಹಿಂಡಿನಾರದ ಹಲಗೆ
ಎಣಿಸಲಾರದ ಗೆಜ್ಜೆ (ರಾ ಗೌ ೯೧)
ಹಾವು, ಮೋಡ, ಚಿಕ್ಕೆ

ಕಣ್ಣುಂಟು ಕಾಲಿಲ್ಲ
ಮನೆಯುಂಟು ಹೆಂಚಿಲ್ಲ (ಲ ಗೌ ೩೭೦)
ಹಾವು–ಹುತ್ತ

ಉಂಡ ಉಟ್ಟ ಕೆಡಗಿ ಕೊಂಡ (ರಾ ಗೌ ೮೯)

ಹಗಲು ಹೊತ್ತು ಮುದುರಿಕೊಂಡಿರ್ತದೆ
ಇರುಳು ಹೊತ್ತು ನಿಗರಿಕೊಂಡಿರ್ತದೆ (ಸು ೪೮೪)
ಹಾಸಿಗೆ

ರಾತ್ರಿ ಅರಳುತ್ತದೆ ಹಗಲು ಮುದುಡುತ್ತದೆ (ಶಾಂ ನಾ ೪೦೧)
ಹಾಸ್ಗೆ

ಬೆಳಕಾಗಲಿ ಬೆಳಕಾಗಲಿ ಎನ್ನುತ್ತದೆ ಒಂದು
ಬೆಳಗಾಗದಿರಲಿ ಬೆಳಗಾಗದಿರಲಿ ಎನ್ನುತ್ತದೆ ಇನ್ನೊಂದು
ಬೆಳಗಾದರೇನು ಬೆಳಕಾಗದಿದ್ದರೇನು ಎನ್ನುತ್ತದೆ ಮತ್ತೊಂದು (ಚಂ ಸೆ ೧೮೯)
ಹಾಸಿಗೆ, ಒಲೆ, ನೆಲ

ಬೆಳಕಾಗಲಿ ಬೆಳಕಾಗಲಿ ಎನ್ನುತ್ತದೆ ಒಂದು
ಬೆಳಗಾಗದಿರಲಿ ಬೆಳಗಾಗದಿರಲಿ ಎನ್ನುವುದು ಮತ್ತೊಂದು
ಬೆಳಗಾದರೇನು ಬೆಳಗಾಗದಿದ್ದರೇನು ಎನ್ನುವುದು ಮಗದೊಂದು (ಇ ೭೬೬)
ಹಾಸಿಗೆ, ಒಲೆ, ಬಟ್ಟೆ

ಒಂದು ಉದ್ದುದ್ದ ಒಂದು ಅಡ್ಡಡ್ಡ
ಹಗಲು ಸುತ್ತಿಕೊಳ್ಳುತ್ತೆ ರಾತ್ರಿ ಬಿಚ್ಚಿಕೊಳ್ಳುತ್ತೆ (ಲ ಗೌ ೩೨೪)
ಹಾಸಿಗೆ, ದಿಂಬು

ಬಿಳಿ ಹೊಲ
ಕರಿ ಬೀಜ
ಕೈಲೆ ಬಿತ್ತೇನಿ
ಬಾಯ್ಲೆ ಆಯ್ಕೊಂತೀನಿ (ಇ ೭೯೮)
ಹಾಳಿ, ಪೆನ್ನು ಬರೆಯುವುದು, ಓದುವುದು

ಬಿಳೀ ಹೊಲದಲ್ಲಿ ಕರೀ ಎಳ್ಳಿನ ಬೆಳೆ
ಸಾಲು ಸಾಲು ಮಲಗಿದೆ (ಸು ೩೭೫)
ಹಾಳೆ, ಅಕ್ಷರ

ಅಲ್ಲಿ ಬುಳು ಬುಳು ಇಲ್ಲಿ ಬುಳು ಬುಳು
ಕಲ್ಯಾಣ ತನಕಾ ಬುಳು ಬುಳು (ಲಠ್ಠೆ ಭಾಗ ೫–೩೩)
ಹಿಕ್ಕಿ, ಕುರಿಹಿಕ್ಕಿ

ಗುಡ್ಡವೆಲ್ಲ ಬೆಂದರು ಅದರಲ್ಲೊಂದು ಕೋಲು ಬೇಯೋದಿಲ್ಲ (ಜೀಶಂಪ ೧೩೮)
ಹಿಟ್ಟಿನಕೋಲು

ಒಂದು ಸಿಕ್ಕತ್ತು
ಒಂದು ನೆಕ್ಕೋತು (ರಾ ಗೌ ೧೫೨)
ಹಿಟ್ಟಿನಕೋಲು, ಕವೆಕೋಲು

ಒಂದು ಎಟ್ಗಳ್ಳೋದು
ಒಂದು ಪೆಟ್ಕಳ್ಳೋದು
ಒಂದು ಮೋಟ್ಕಳ್ಳೋದು (ಮಂ ೧.೫–೩೧)
ಹಿಟ್ಟಿನ ದೊಣ್ಣೆ

ಅಗ್ರಸ್ತ ಸೂಳೆ
ಬಿಳಿಗಿರಿರಂಗನ ಬೆಟ್ಟದ ಮಿಂಡಗಾರ
ಇಬ್ರೂ ನಮ್ಮೆನ್ನ ಕೋಣೇಲಿ ಸಿಕ್ಕಿಹಾಕೊಂಡವರೆ (ಲ ಗೌ ೧೯)
ಹಿಟ್ಟಿನದೊಣ್ಣೆ, ಸೌಟು

ನಿನ್ನ ಕತ್ತಿಗೆ ನನ್ನ ಕಾಲು
ನಿನ್ನ ಬಾಯಿಗೆ ನನ್ನ ಕೋಲು (ರಾ ಗೌ ೩೧೨)

ಕರಿಯಮ್ಮನದರಲ್ಲಿ ಊರೆಲ್ಲ ಉಂಡರು (ಸು ೧೮೦)
ಹಿಟ್ಟಿನ ಮಡಕೆ

ಕರಿ ಗುಡಿ
ಕರಿ ಗುಡಿಯೊಳಗೊಂದು ಬಿಳಿಗುಡಿ
ಅದ ಹೊಕ್ಕಿ ಪೂಜೆ ಮಾಡೋನೊಬ್ಬ ಬಕ್ಕ ಪೂಜಾರಿ (ರಾ ಗೌ ೧೭೪)
ಹಿಟ್ಟಿನ ಮಡಿಕೆ. ಹಸೀಟು, ದೊಣ್ಣೆ

ಚಡಾ ಚಡಿ
ಕಿಡೀ ಕಿಡಿ
ತೊಡೆ ಸಂಧೀಲಿ ಕಿಡಿ (ಸು ೨೬೧)
ಹಿಟ್ಟು ತೊಳಸುವ ಕೋಲುಗಳು, ಬೆಂಕಿ, ಕವೆಗೋಲು

ಬೆಟ್ಟ ಬೇಯ್ತದೆ
ಬಿದಿರು ನಿಂತದೆ (ಸು ೩೮೧)
ಹಿಟ್ಟು, ಹಿಟ್ಟಿನ ಕೋಲು

ಹಳ್ಳಿ ಹುಡುಗನಿಗೆ ಬೆಳ್ಳಿ ಮುಂಡಾಸು
ಪೇಟೆ ಹುಡುಗನಿಗೆ ಚೀಟ ಮುಂಡಾಸು (ಲ ಗೌ ೧೦೨೮)
ಹಿಟ್ಟುಂಡೆ ಹಿಡಿ–ಮೆಣಸಿನಕಾಯಿ

ನನ್ನಜ್ಜಿ ಹಗಲಿಡೀ ಕೆಲ್ಸಾ ಮಾಡ್ತು ರಾತ್ರಿ ಮುಕೇಲ್ಕುಳ್ತು (ಶಾಂ ನಾ ೪೦೩)

ಸಾವರಾರ್ಮಕ್ಕೋಗೆ ವಂದೇ ಉಡ್ದಾರ (ಶಾಂ ನಾ ೪೦೨)
ಹಿಡಿ

ಕಿಚಡಿ ಆಯಿತು ಪಚಡಿ ಆಯಿತು
ಹುಚ್ಚಿಡಿಕೆ ಬರದೆ ಊಟ ಆಗುವುದಿಲ್ಲ (ಲ ಗೌ ೪೪೭)
ಹಿಡ್ಲು

ಹಸಿರ ಮೇಲೆ ಹಾಸಿದೆ
ಕಾಲು ತೊಳೀಬಹುದು ಕೈ ತೊಳಿಯಲಾಗುವುದಿಲ್ಲ (ಲ ಗೌ ೧೦೧೮)

ಹುಟ್ಟುವೆ ಚಳಿಯಲ್ಲಿ ಸಾಯುವೆ ಬಿಸಿಲಲ್ಲಿ
ಕಲ್ಲಾಗಿ ಕೂಡ್ರಲು ಬಲ್ಲೆ ನೀರಾಗೆ ಹರಿಯಲು ಬಲ್ಲೆ (ಶಾಂ ನಾ ೪೦೪)
ಹಿಮ

ಡುಬ್ಬಾ ಕೆರೀ ಮೂಗ ಮುರಿ (ವಾಲಿ ೨–೯೧)
ಹಿರೇಕಾಯಿ

ನನ್ನ ಮೈ ಕೆರೀತಾರ
ನಿನ್ನ ಗಲ್ಲ ಕಡಿತಾರ (ಇ ೬೩೨)
ಹಿರೇಕಾಯಿ, ಪೇರಲಹಣ್ಣು

ಅವ್ವ ಡುಮಕವ್ವ
ಅಪ್ಪ ಕೆರಕಪ್ಪ
ಮಗಳ ಮಾಸುಂದ್ರಿ (ಲಠ್ಠೆ ಭಾಗ ೪–೨೭)
ಹೀರಿಕಾಯಿ

ಹತ್ತತಲಿ ಆದ್ರ ರಾವಣನಲ್ಲ
ಬಾಲ ಇದ್ರೂ ಹನಮಂತನಲ್ಲ
ಕಿರೀಟಿದ್ರೂ ರಾಜಾ ಅಲ್ಲ (ಲಠ್ಠೆ ಭಾಗ ೪–೧೭೯)
ಹೀರೀಕಾಯಿ

ಮೊಗ್ಗಿ ಅಳ್ಳಿ ಹೂವಾದ್ರೂ ವಾಸಿಲ್ಲ (ಲಠ್ಠೆ ಭಾಗ ೫–೨೫೭)
ಹೀರೀ ಹೂ

ಹತ್ತ ತಲೆ ಅದೆ ರಾವಣನಲ್ಲ
ಕಿರೀಟ ಅದೆ ಅರ್ಜುನನಲ್ಲ
ಬಾಲ ಅದೆ ಆಂಜನೇಯನಲ್ಲ (ಮಂ ೧.೪–೮೪)

ನನ್ನಜ್ಜಿ ಮಯ್ಯೆಲ್ಲಾ ದಾರೆ ದಾರೆ (ಶಾಂ ನಾ ೨೬೧)
ಹೀರೆಕಾಯಿ

ಅಯ್ಯಯ್ಯ ದಾಸಯ್ಯ
ನಿನ್ನ ಮೈಯೆಲ್ಲ ಬಾಸುಂಡ (ಮಂ ೧.೪–೧೨)

ಕಿರಿಕಿರಿವಾಲಾ
ಕಿರಂಗಿವಾಲಾ
ಬಾಗಲಾ ಹಾಕಿದರ
ತೆಗಿಲಿಕ್ಕೆ ಬರೂದಿಲ್ಲಾ (ಇ ೩೯೭)

ಕಿರೀಟವುಂಟು ರಾಜನಲ್ಲ
ಗೋಡೆಯುಂಟು ಮನೆಯಲ್ಲ
ಬಾಲವುಂಟು ಪ್ರಾಣಿಯಲ್ಲ (ಲ ಗೌ ೪೫೦)

ಡುಬ್ಬಾ ಕೆರಿ ಮೂಗು ಮುರಿ (ಇ ೫೬೦)

ಹತ್ತು ತಲೆ ಉಂಟು ರಾವಣನಲ್ಲ
ಕಿರೀಟವುಂಟು ರಾಜನಲ್ಲ
ಬಾಲವುಂಟು ಹನುಮಂತನಲ್ಲ
ಇದ ಹೇಳಿದವರಿಗೆ ಕಡಿದಲ್ಲ (ಲ ಗೌ ೯೮೨)

ಹತ್ತು ತಲೆಯುಂಟು ರಾವಣನಲ್ಲ
ಬಾಲವುಂಟು ಹನುಮಂತನಲ್ಲ
ಇದ ಹೇಳಬಲ್ಲ ಜಾಣರ ನಾ ಕಾಣೆನಲ್ಲ (ರಾ ಗೌ ೪೭೩)

ಹತ್ತು ಮುಖವುಂಟು ರಾವಣನಲ್ಲ
ಕಿರೀಟವುಂಟು ರಾಜನಲ್ಲ
ಬಾಲ ಇದ್ದರೂ ಹನುಮಂತನಲ್ಲಾ
ನಾನ್ಯಾರು (ಇ ೧೦೦೩)

ಹಿತ್ತಲಲ್ಲಿ ಚಪ್ಪರ ಹಾಕದೆ
ಅದ ನೋಡ್ರೆ ರಟ್ಟೇಗಾತ್ರ ರಟ್ಟೆ ಉದ್ದ
ಅದರೊಳಗೆ ನೋಡಿದ್ರೆ ದಾರ (ರಾ ಗೌ ೪೯೬)
ಹೀರೇಕಾಯಿ

ತೊರಗಲ್ ಮಟಾ ತರುತತಿ
ಮುರಗೋಡ ಮಟಾ ಮುರುತತಿ (ಲಠ್ಠೆ ಭಾಗ ೪–೧೧೯)
ಹೀರೇಕಾಯಿ, ಚವಳಿಕಾಯಿ

ಗಡಿಗ್ಯಾಗ ಆಡ್ತದ
ಗ್ವಾಡ್ಗಿ ಮುದ್ದ ಕೊಡತದ (ಲಠ್ಠೆ ಭಾಗ ೫–೧೪೪೪)
ಹುಟ

ಹಡಗದಂತಾ ಎಮ್ಮಿ
ಹೆಡಗಿಯಂತಾ ಕೆಚ್ಚಲ
ಹಾಲ ಅಳದ ಮಾರೋದು
ಸೆಗಣಿ ತೂಗಿ ಮಾರೋದು (ಲಠ್ಠೆ ಭಾಗ ೪–೧೭೬)
ಹುಟ್ಟ, ಜೇನ, ಮ್ಯಾಣ

ಗಿಡ ಗಿಡಕ ಕುಡಗೋಲ
ಜೋತಿ ಬಿದ್ದಾವ (ಲಠ್ಠೆ ಭಾಗ ೪–೮೭)

ಗಿಡ್ಡ ಗಿಡ್ಡಕ್ಕ
ಕುಡಗೋಲ ಕಟ್ಯಾಣ (ಲಠ್ಠೆ ಭಾಗ ೪–೯೦)
ಹುಣಚಿಕಾಯಿ

ಸೊಟ್ಟ ಸೂಳಿ ಮಗನ ಬಿದ್ದಗಿದ್ದೀ ತೆಳಗ (ಲಠ್ಠೆ ಭಾಗ ೪–೧೬೫)
ಹುಣಸಿಕಾಯಿ

ಸೊಟ್ಟ ಸೂಳೆ ಮಗನ ಕೆಳಗಬಿದ್ದು
ಹೊಟ್ಟಿ ಒಡಗೊಂಡಿ (ಇ ೯೮೦)
ಹುಣಸೀಕಾಯಿ

ಅಟ್ಟದ ಮೇಲಿಂದ ಬಿದ್ದವನನ್ನು
ಕೊಡತಿ ತಗೊಂಡು ಚಚ್ಚಿದರು (ಸು ೨೧)

ಅಂಬರದಾಗ್ ಅಪ್ಪಣ್ಣ
ನೆಲಕ್ಕ್ ಬಿದ್ದರೆ ತುಪ್ಪಣ್ಣ (ಲ ಗೌ ೧೩೭)

ಆ ಗೋಡೆವರ ಮಗಳಾಗಿ ಈ ಗೋಡೆವಳ ಸೊಸಿಯಾಗಿ
ನಾಕು ಕಡೆ ನತ್ತಿಟ್ಟಕೊಂಡ ಓಲಾಡತಾಳ ಡೋಲಾಡತಾಳ (ಇ ೧೬೪)
ಹುಣಸೇಕಾಯಿ

ಅಟ್ಟ ಆರೆಣದಾಗ
ಅಂಬಾಬಾಯಿ ಜೋತ್ಯಾಡ್ತಾಳ (ಲಠ್ಠೆ ಭಾಗ ೪–೧೪)

ದಪ್ಪನ ಬೀಳೊ ದುಪ್ಪಣ್ಣ
ಅಂಗಿ ಹರಿತೊ ಕೆಂಪಣ್ಣ (ಲಠ್ಠೆ ಭಾಗ ೪–೧೨೦)

ಮುಗಿಲ ಮ್ಯಾಲಿನ ಪಾರ
ಟಪ್ಪಂತ ಬಿತ್ತ
ಚೊಣ್ಣ ಹರಿತ (ಲಠ್ಠೆ ಭಾಗ ೪–೧೫೩)
ಹುಣಸಿ ಹಣ್ಣ

ಅಕಟಕ ಮುಕಟಕ ಆಗಲಿ ತಂಬಾಕ
ನಿನ್ನನ್ನ ಕಂಡು ಜೀವ ಚುಟುಕ್ಕ ಬಾಯಿ ಗುಟಕ್ಕ (ಇ ೨)
ಹುಣಸಿ ಹಣ್ಣು

ಚಪ್ಪರದಾನ ಪೋರಿ ದಪ್ಪಂತ ಬಿತ್ತು
ಕುಬಸ ಹರೀತು ಮಲಿ ತೆರೀತು (ವಾಲಿ ೨–೨೫)

ಬಿರಿ ಬಿರಿ ಬಂದಾ ಬಿರಗಲ್ಲ ಒಗದಾ
ತ್ವಾಟ ಸುಲದಾ ಬ್ಯಾಟ ತಿಂದಾ (ವಾ ೨–೧೪)
ಹುಣಸೀ ಹಣ್ಣು

ಅಂಕಪ್ಪಯ್ಯ ಸಂಕಪ್ಪಯ್ಯ ಸಿರ್ಕಪ್ಪಯ್ಯ ಗೊಂಗಡಿ
ಹಾಸನಂತ ಕೂಡ್‌ಪೆಟ್ಟಿ ತಿಳ್ಕಪ್ಪಯ್ಯ ಗೊಂಗಡಿ (ಲ ಗೌ ೯೮)

ಆಪ್ಪರಪ್ಪಣ್ಣ
ಕೆಳಕ್ಕೆ ಬಿದ್ದರೆ ದೊಪ್ಪಣ್ಣ
ಸಿಪ್ಪೆ ಸುಲಿದರೆ ಕೆಂಪಣ್ಣ (ಜೀಶಂಪ ಜಿಳ)

ಕಚ್ಚೆ ಬಿಚ್ಚಾಕಿ ಮೆಟ್ಟಿ ಜಬ್ಬಾಕಿ
ಅಟ್ಟದ ಮೇಲೆ ಆರ್ತಿಂಗಳು ಮಡಗಿದ್ದಿ (ರಾ ಗೌ ೧೬೨)

ಚಪ್ಪರದಾನ ಹೆಣ್ಣ ನೆಲಕ್ಕೆ ಬೀಳತದ
ಕುಬಸ ಹರಿತೈತಿ ಮಲಿ ತೆರಿತೈತಿ (ಇ ೫೧೭)

ಚಪ್ಪರದಾಗಿನ ಚೆಲುವಿ ನೆಲಕ್ಕ ಬಿದ್ದರ
ಕುಬಸ ಹರೀತೈತಿ ಮಲೀ ತೆರೀತೈತಿ (ವಾಲಿ ೮–೪೬)
ಹುಣಸೆ ಹಣ್ಣು

ಅಂತರಲ್ಲಾಡೋ ಅಪ್ಪಯ್ಯ
ಕೆಳಕ್ಕೆ ಬಿದ್ದರೆ ಕುಪ್ಪಯ್ಯ
ಕುಪ್ಪಸ ಕಳೆದರೆ ಕೆಂಪಯ್ಯ (ಲ ಗೌ ೧೨೬)

ಒಳಕೋಟೆ ಹೊರಕೋಟೆ ದುರ್ಗ ತಾನಲ್ಲ
ಒಳಗಿರುವ ಮುತ್ತು ಮಾಣಿಕ್ಯವಲ್ಲ
ಬಲ್ಲವರಿಗೆ ಇದ ನಿಮಗೆ ಏಳು ತಿಂಗಳ ಕೊಡುವೆ
ಹೇಳಿ ನೀವೆಲ್ಲ (ಲ ಗೌ ೨೮೮)

ದಪ್ಪನೆ ಬಿದ್ಯಲ್ಲೋ ಡುಬ್ಬ ಸೂಳೇ ಮಗನೇ
ಅಂಗಿ ಹರೀತಲ್ಲೋ ಮಂಗ ನನ ಮಗನೇ (ಇ ೬೦೯)

ಹಣ್ಣು ಹಣ್ಣಿಗೆಲ್ಲಾ ಯಾವ ಹಣ್ಣು ಮೇಲು (ರಾ ಗೌ ೪೬೭)
ಹುಣಿಸೆ ಹಣ್ಣು

ಅಜ್ಜಿ ಜಜ್ಜಿ ಭಜ್ಜೀ ಮಾಡಿ
ಚರ್ಮಾ ಸುಲಿದು ಮೂಳೇ ಮುರಿದು
ಬಿಸಿಲಿಗೆ ಹಾಕಿ ಡಬ್ಬೀ ತುಂಬ್ತಾರ
ವರ್ಷಾನುಗಟ್ಲೆ ಕಾಟಾ ಕೊಡ್ತಾರ (ಇ ೪೯)

ಕತ್ಲೆ ಮನೇಲಿ ಮುಳ್ಳ ಹಂದಿ ಕೂತದೆ (ಮಂ ೧.೪–೩೦)

ದುಪ್ಪನ ಬಿತ್ತೋ ದುಪ್ಪಣ್ಣ
ಅಂಗೀ ಹರೀತೋ ಕೆಂಪಣ್ಣ (ಇ ೬೧೮)

ದೊಪ್ಪನೆ ಬಿದ್ದೇನಲೆ ಡೂಗ ನನ್ನ ಮಗನ
ಅಂಗಿ ಹರಿತಲೇ ಪೆಂಗ ನನ್ನ ಮಗನ (ಇ ೬೨೩)

ಬಿರಿಬಿರಿ ಹೊಕ್ಕೈತಿ
ಬಿರಗಲ್ಲು ಒಗೀತೈತಿ
ತ್ವಾಟಿ ಸುಲಿತೈತಿ
ಬ್ಯಾಟಿ ಆಡತೈತಿ (ಇ ೭೪೨)

ಮುರಿಯೊಂಗಿಲ್ಲ ತರ್ಯಾಂಗಿಲ್ಲ
ಅದ್ಯಾವದಾ ವಸ್ತು (ಮಂ ೧.೪–೬೮)
ಹುಣಸೇ ಹಣ್ಣು

ಅರ್ಕಟ ಮರ್ಕಟ ಚಾಟಕ ಚೂಟಕ
ನಿನ್ಕಂಡ್ರೆ ನನ್ಜೀವಾ ಬಲು ಚುಚ್ಚು (ಶಾಂ ನಾ ೨೬೨)

ಮರಾಗೊಡ್ಡು ಕಾಯ್ದೊಡ್ಡಾ ಯಲೆ ಚಿಕ್ಕಾ (ಶಾಂ ನಾ ೨೬೩)

ಯಲೆ ಪಿಣಿ ಪಿಣಿ ಕಾಯಿ ಜಲಾ ಮಲಾ (ಶಾಂ ನಾ ೨೬೪)
ಹುಣಸೆ

ಹಳಸಲಾರ್ದ ಹಣ್ಣ
ಕಾಸಲಾರ್ದ ತುಪ್ಪ
ಥಳಸಲಾರ್ದ ಅಕ್ಕಿ (ಲಠೈ ಭಾಗ ೪–೧೯೯)
ಹುಣಸಿ, ಜೇನತುಪ್ಪ, ಸಾಬೂದಾಣಿ

ಚಿನ್ನದ ಪೆಟ್ಟಿಗ್ಯಾಗ
ಬೆಳ್ಳೀ ಲಿಂಗ (ಲಠೈ ಭಾಗ ೪–೯೭)
ಹುಣಸಿನ ತೊಳಿ, ಬೀಜ

ಆಕಾಶದಲ್ಲಿ ಕತ್ತಿ ನೇತಾಡುತ್ತದೆ (ಚಂ ಸೆ ೩೪)

ಆ ಗೋಡೆವರ ಮಗಳಾಗಿ ಈ ಗೋಡೆವಳ ಸೊಸಿಯಾಗಿ
ನಾಕು ಕಡೆ ನತ್ತಿಟ್ಟಕೊಂಡ ಓಲಾಡತಾಳ ಡೋಲಾಡತಾಳ (ಇ ೧೬೪)
ಹುಣಸೆಹುಳಿ ಕೋಡು

ಹಳಸದ ಹಣ್ಣು
ಕಾಸದ ತುಪ್ಪ
ಹೊಳೆಯದ ಅಕ್ಕಿ (ಇ ೧೦೫೧)
ಹುಣಸೇ ಹಣ್ಣು, ಜೇನು, ಮುತ್ತು

ಅಂಕುಡೊಂಕಿನ ಮನೆ
ಬಡಗಿ ಕಟ್ಟದ ಮನೆ
ಬಾಚಿ ಮುಟ್ಟದ ಮನೆ (ರಾ ಗೌ ೫೧)

ಒಬ್ಬಳಿಗೊಂಬತ್ತು ಬಾಯಿ (ಲ ಗೌ ೨೭೧)

ಒಂದು ಕೋಣನಿಗೆ ಒಂಬತ್ತು ಗೊಳ್ಳೆ (ಲ ಗೌ ೩೧೦)

ಒಂದು ಗುಡಾಣಕ್ಕೆ ಒಂಬತ್ತು ಬಾಯಿ (ಲ ಗೌ ೩೩೨)

ಒಂದು ಮಡಕೆಗೆ ಒಂಬತ್ತು ತೂತು (ಜೀಶಂಪ ೯೫)

ಕಂಬ ಇಲ್ಲ ಕೊಳಗ ಇಲ್ಲ ಒಂಬೈನೂರು ಕೋಣೆ (ಲ ಗೌ ೪೩೩)

ಕಂಬಿಲ್ಲದೆ ಬಲಗಿಲ್ಲದೆ ಒಂಬೈನೂರು ಮನೆ ಕಟ್ಟಿರುತ್ತೆ (ಲ ಗೌ ೪೩೬)

ಕೆಂದೆತ್ತಿಗೆ ಒಂಬತ್ತು ಕನ್ನ (ಲ ಗೌ ೪೭೮)

ಕೆಂದೆತ್ತಿಗೆ ಹದಿನಾರು ಗ್ವಾಮಾಳೆ (ರಾ ಗೌ ೨೧೯)

ಟಕ್ಕ ಟಕ್ಕೆನ ಮನೆ
ಟಗರು ಕಟ್ಟಿದ ಮನೆ
ಬಾಚಿ ಮುಟ್ಟದ ಮನೆ
ಬಡಗಿ ಕಟ್ಟದ ಮನೆ (ಇ ೫೫೮)

ಟಾಕು ಟೀಕಿನ ಮನೆ ಟಗರುಗಂಟಿನ ಮನೆ
ಹೆಂಚು ಹಾಕದ ಮನೆ ಕೆಂಪು ಬಣ್ಣದ ಮನೆ
ಬಾಚಿ ಮುಟ್ಟದ ಮನೆ ಬಡಗಿ ಕಟ್ಟದ ಮನೆ (ಲ ಗೌ ೫೭೫)

ಹಂಚಿ ಹುಲ್ಲೊಳಗೆ
ಕೆಂಚಣ್ಣ ಕುಂತವನೆ (ಸು ೫೦೮)
ಹುತ್ತ

ಹೋಗಕಾರೆ ಕಡ್ಪಾಕಿರೆ ಬಪ್ಪಲ್ಲಿತಂಕಾ ಚಿಗ್ರ್ತು (ಶಾಂ ನಾ ೨೭೭)
ಹುತ್ತಾ

ಒಂದು ಕುರಿಗೆ ಒಂಭತ್ತು ಗೋಮಾಳೆ (ಸು ೧೫೩೩)
ಹುತ್ತದ ಕೋವಗಳು

ಕೋಟಿ ಜನರು ಕಟ್ಟಿದ ಕೋಟೆ
ಆರೆಂಟು ಬಾಗಿಲು ಬಿಚ್ಚಿದ ಕೋಟೆ
ಹೋದರೆ ಒಳಗಡೆ ರಾಜನ ತಂಟೆ
ಉಳಿವುಂಟೆ ನಮಗುಳಿವುಂಟೆ (ಲ ಗೌ ೪೯೪)
ಹುತ್ತ, ಹಾವು

ಹಲವಯ್ಯನರಮನೆಗೆ
ಹಲವು ಜಂತದ ಕೀಲು
ತಲೆಬಾಕಲುಂಟು
ತೆವಳಿಕೊಂಡು ಹೋಗಯ್ಯ
ನಿನ್ನರಮನೆಗೆ (ಸು ೪೯೬)
ಹುತ್ತ ಮತ್ತು ಹಾವು

ತೊಲಿ ಇಲ್ಲದ ಮನ್ಯಾಗ
ಎಲುಬಿಲ್ಲದ ಮನುಶಾ ಕುಂತಾನ (ಇ ೫೯೯)

ತೊಲಿ ಇಲ್ದ ಮನ್ಯಾಗ
ಎಲುವಿಲ್ಲದ ಮನಸ್ಯಾ (ಲಠ್ಠೆ ಭಾಗ ೩–೪೫)
ಹುತ್ತಿನ ಹುಳ

ಗಿಡ್ಡನ್ನೋನೆ
ಜಿರ್ಲೆ ಮೀಸೆಯೋನೆ
ಹಬ್ಬಾದ ನಂತರ ಅಂಟುಕೊಳ್ಳೋನೆ (ರಾ ಗೌ ೨೩೧)
ಹುನಗನ ಮುಳ್ಳು

ಸೂಳೆರ ಕುಣಿತ
ನಾರಿಯ ಒಲಿತ
ಶೃಂಗಾರ ಇದಕ್ಕಿಂತ ಮಿಗಿತ (ಇ ೯೬೬)
ಹುಬ್ಬು

ಚಿಲಿಪಿಲಿ ಹೊಕ್ಕವರ್ಯಾರು
ಗಿಲ್ ಅಂದ ಹೂವ್ ಕೊಯ್ಯವರ್ಯಾರು
ಬೆಂದ ಹೂವಿನ ಚೆಂದ ನೋಡಿ
ಒಂದಽ ದಿನ ಮುಡಿಯಲಾರೆ (ಲ ಗೌ ೫೫೫)
ಹುರಿದ ಜೋಳದ ಹರಳು

ತೊತ್ತರಿ ಮಗಳಿಗೆ ಸೊಂಟದಲ್ಲಿ ಕತ್ತಿ (ಚಂ ಸೆ ೧೪೧)
ಹುರುಳಿ

ದಬ್ಬೆ ಹಂಗೆ ಕಾಯಿ
ಹಿಂದಗಡೆ ತೊಟ್ಟು
ಮುಂದಗಡೆ ಮೂಕು ನಾರು
ಎಡೆದ್ರೆ ಒಂದಂಗುಲ ದಪ್ಪಕಾಳು (ರಾ ಗೌ ೨೮೪)
ಹುರುಳಿ ಕಾಳು

ಕುಳ್ ಹುಣಿಸೆ ಮರದಲ್ಲಿ
ಕೊಕ್ ಹುಣಿಸೆಕಾಯಿ (ರಾ ಗೌ ೨೧೩)

ಚಿಕ್ಕಬೋರನಿಗೆ
ಬಗಲಲ್ಲಿ ಕತ್ತಿ (ರಾ ಗೌ ೨೪೨)
ಹುರುಳಿ ಗಿಡ

ತಣಕ ಮಿಣಕ ಬಾಲದಲ್ಲಿ ಬಿಳುಪು
ಕರೆದರೆ ಬರದು ಕಾಡಿನ ಭೂತ (ಲ ಗೌ ೫೮೩)
ಹುಲಿ

ಬೆಟ್ಟದ ಮೇಲೆ ತುಂಬೆ ಗಿಡ ಹುಟ್ಟಿ
ಯಾರು ಬಂದ್ರೂ ಕೀಳಾಕಾಗೊಲ್ಲ (ಲ ಗೌ ೭೮೭)
ಹುಲಿ ಮೀಸೆ

ಕುದುರೆ ಮೇಲೆ ಕೂತಕೊಳ್ಳಾರ್ರಿ
ಬೆತ್ತದ ಹಿಡಿ ಹಿಡಿಲಾರ್ರಿ
ಬಿದ್ದಿದ್ದ ಹೂವ ಮುಡಿಲಾರ್ರಿ (ರಾ ಗೌ ೨೦೭)
ಹುಲಿ, ಹಾವು, ಬೆಂಕಿ

ಹಂಡ ಗುದುರಿ ಹತ್ತಲಾರೆ
ಬೆಳ್ಳಿ ಬೆತ್ತ ಹಿಡಿಯಲಾರೆ
ಕಲಕ ನೀರ ಕುಡಿಯಲಾರೆ (ಲ ಗೌ ೧೦೩೦)

ಹಂಡಗುದುರಿ ಹತ್ತೋದಲ್ಲ
ಬೆಳ್ಳಿಬೆತ್ತ ಹಿಡ್ಯೋದಲ್ಲ
ಕೆಂಪನೀರ ಕುಡ್ಯೋದಲ್ಲ (ಲತ್ಥೆ ಭಾಗ ೩–೬೯)

ಹಂಡಗುದುರಿ ಹತ್ತೋದಲ್ಲ
ಬೆಳ್ಳಿ ಬೆತ್ತ ಹಿಡಿಯೋದಲ್ಲ
ಕೆಂಪು ನೀರು ಕುಡಿಯೋದಲ್ಲ (ಇ ೧೦೮೦)
ಹುಲಿ, ಹಾವ, ರಕ್ತ

ಮನೆಕಿಂದು ಮೆನೆ ಮಗ್ಗಣ್ ಬೀಳ್ತದೆ (ಶಾಂ ನಾ ೪೦೯)
ಹುಳ್ಕಟ್ಟು

ಆನೆ ದೇಯ್ತು
ಆನೆ ತೊಡೆ ಬೇಯ್ತಿಲ್ಲೆ (ಶಾಂ ನಾ ೪೦೮)

ಗಟ್ಟಿದ್ಮೆಗಣ್ಣ ಬಟ್ಟಂಗೆ (ಅರ್ಗ ಮಗ್ಳೀಗೆ) ವರ್ಯಕ್ಕೊಂದಡ್ಗೆರೆ (ಶಾಂ ನಾ ೪೦೭)

ಗಟ್ದ್ ಮನ್ನ ಅಜ್ಜಿಗೆ ಉರ್ಸ್ಕುಂದುಡ್ಗೆರೆ (ಶಾಂ ನಾ ೪೦೬)

ನನ್ನಜ್ಜಿ ವರ್ಯಕ್ಕೊಂದ್ಬಾರಿ ಮಂಡೆ ಬಾಚ್ಕತ್ತು (ಶಾಂ ನಾ ೪೦೫)
ಹುಲ್ಮನೆ

ಪಚ್ಚಿಲ್ಲದ ಹಕ್ಕಿ ಅರವತ್ತು ಖಂಡುಗ ಗದ್ದೆ ಮೇಯುತ್ತೆ (ಲ ಗೌ ೭೧೭)
ಹುಲ್ಲತ್ತಿ

ಅಕಟಕಟ ಪಕ್ಷಿ ಮಕುಟವನೆ ಧರಿಸಿ
ಕಲ್ಲುಪ್ಪು ಹಾಕಿ ಕಾರ್ ಮೆಣಸು ಹಾಕಿ
ಕರಿಬೇವು ಹಾಕಿ ಚೆನ್ನಾಗಿದ್ದೀಯಾ ಪಕ್ಷಿ
ಚೆನ್ನಾಗಿದ್ದೀನಿ (ಲ ಗೌ ೨)

ಅಗಟಗಟ ಪಕ್ಷಿ
ಮಗಟ ಮದರಿಸಿ
ಕರಿಬೇವು ಹಾಕಿ ಬೆರಸಿ ಎಂದರೆ
ಅದು ಬಹುರುಚಿ (ಜೀಶಂಪ ೪೨)
ಹುಳಿಯನ್ನ

ಆಕಾರ ಮಾವಿನ ಕಾಯಿನ್ಹಂಗೆ
ತಿರುವು ಒಂದ್ಹುಲ್ಲಿನ ಗರಿ ಅಗಲ
ಒಂದು ಬೆಟ್ಟಗೂ ತುಂಡ
ಅದರೊಳಗೆ ಕರಿಹೂ ಬಿಳಿಹೂ
ಎಲ್ಲಾ ಇರುತ್ತೆ (ರಾ ಗೌ ೬೯)
ಹುಳ್ಳಿ ಕಾಯಿ

ಅಂಕದೊದಕ್ಕೆ ಸಂಕಗಾಳಿ
ಮೂರು ಮಕ್ಕಳಿಗೆ ಹತ್ತುಕಾಲು (ಜೀಶಂಪ ೬೦)
ಹೂಡಿದ ನೇಗಿಲು (ಎತ್ತುಗಳು ಎಂಟು ಕಾಲು+ರೈತ,ಎರಡು ಕಾಲು)

ಬಟ್ಟ ಮುಖದ ಬಾಲೆ ಬಹಳ ಸುಂದರಳು
ಅಷ್ಟಮಿಯ ಚಂದ್ರನಾ ಆಕಾರವುಳ್ಳವಳು
ಅವಳ ಮೊದಲ ಅಕ್ಷರ 'ಹೂ' ಕೊನೆಯ ಅಕ್ಷರ 'ಬು' (ವಾಲಿ ೫೫–೧೩)
ಹೂರಣ ಗಡಬು

ಬಟ್ಟ ಮುಖದಾ ಬಾಲೆ
ಬಹಳ ಚೆಲ್ವಿಕೆಯು
ಅಷ್ಟಮಿ ಚಂದ್ರಮನಂತೆ
ಆಕಾರ ಉಳ್ಳವಳು
ಮೊದಲ ಅಕ್ಷರ ಹೂ
ಕೊನೆಯ ಅಕ್ಷರ ಬು (ರಾ ಗೌ ೩೪೧)
ಹೂರಣಗಡುಬು

ಒಂದು ಅಡಿಕೆ ಕೆಚ್ಚಿ
ಒಂಬೈನೂರು ತೊಂಬೈನೂರು
ಸಾತನೂರು ಸಂಕಲಗೆರೆ
ಮದ್ದೂರಮ್ಮನ ಮಂಡೆ (ರಾ ಗೌ ೧೩೪)
ಹೂವು

ಅಚ್ಚಿಕ ಇಚ್ಚೀಕ ಗುಡ್ಡ
ನಡುವ ಹುಲಿ ಗುಡುಗತೈತಿ (ವಾಲಿ ೭–೫)

ಆಕಡೆ ಈಕಡೆ ಬೆಟ್ಟ
ಮಧ್ಯೆ ಹುಲಿ ಕೂಗುತ್ತೆ (ರಾ ಗೌ ೬೬)

ಊರೆಲ್ಲ ಮಲಗ್ಯದೆ ಊಟಂಗ ಎದ್ದವನೆ (ಸು ೧೦೯)

ಎರಡು ಗುಡ್ಡದ ನಡುವ ಕಡ್ಡಿ ಒದರ್ತಾವ (ವಾಲಿ ೭–೧೨)

ಎರಡು ಗುಡ್ಡದ ನಡುವೆ ಗೂಗಿ ಗೂಕ್ ಅಂತೈತಿ (ಇ ೨೩೯)

ಏರಿಮ್ಯಾಲೆ ಒಂದು ಮಾನ ಮಡಗಿ
ಎಷ್ಟು ಉಚ್ಚೆ ಹೂದ್ರೂ ತುಂಬಾಕ್ಕಿಲ್ಲ (ರಾ ಗೌ ೧೧೯)

ಗುದ್ದಿನಾಗ ಬಸವಣ್ಣ ಇಣಕಿ ನೋಡ್ತಾನ (ವಾಲಿ ೭–೮)

ಬಿಟ್ಟರೆ ಸಿಕ್ಕ ಹಿಡಿದರೆ ನಿಲ್ಲ (ಸು ೩೬೯)

ಬಿಟ್ಟಿರ ಸಿಗಲಾರ ಹಿಡಿದರ ದಕ್ಕಲಾರ ಬಡಿದರ ಬಗ್ಗಲಾರ (ವಾಲಿ ೭– ೯)

ಬುಟ್ಟರೆ ಸಿಕ್ಕ ಹಿಡಿದರೆ ದಕ್ಕ ಹೊಡೆದರೆ ಬಗ್ಗ (ರಾ ಗೌ ೩೬೧)

ಯಾಳ್ಡ ಗುಡ್ಡದ ನಡುವೆ ಕಳ್ಡಿ ಒದುರ್ತತಿ (ಲ ಗೌ ೮೮೩)

ಶೆಟ್ಟರೆ ಕುದುರೆ ಬಿಟ್ಟರೆ ನಿಲ್ಲದು (ಸು ೪೫೧)

ಶೆಟ್ಟಿ ಕುದುರೆ ಬಿಟ್ಟರೆ ಸಿಕ್ಕದು (ರಾ ಗೌ ೪೩೩)

ಸಂದ್ಗಂಟ ಊರುಬ್ಬುಟ್ಟು ಬಂದು
ಮೂಲಲೇ ನಿಂತ್ಕಂತ್ತು (ಮಂ ೧.೫–೪೫)

ಹೂಸು

ಇಟ್ಟಪ್ಪನ ಕುದರಿ
ಬಿಟ್ರ ಸಿಗಾಂಗಿಲ್ಲ (ಲಠ್ಠೆ ಭಾಗ ೫–೫೬)

ಎಡ್ಡ ಗುಡ್ಡದ ನಡುವ
ಕಡ್ಡಿ ಒದರ್ತದ (ಲಠ್ಠೆ ಭಾಗ ೫–೮೨)

ಗುಡ್ಡದ ಹಿಂದ ಗುಡಗ ಹಾಕ್ತದ (ಲಠ್ಠೆ ಭಾಗ ೫–೧೫೦)

ಶಾರತಾನ ಹ್ವಾದರೂ ಸೇರ ತುಂಬಾಲ (ಲಠ್ಠೆ ಭಾಗ ೫–೧೩೦)
ಹೂಂಸ

ವಾಲ್ಗ ಊದಕದು
ಪನ್ನೀರ್ ಚೆಲ್ಲಕದು
ಹೊರಕಗ್ ಬರಕ ಹೆಸರೇನು (ಲ ಗೌ ೮೯೮)
ಹೂಸು, ಮೂತ್ರ, ಮಲ

ಕರಿ ಕಂಬಳಿ ನೆಂಟ
ಸರ್ವತ್ನಾ ್ಯಗ ಹೊಂಟ (ಲಠ್ಠೆ ಭಾಗ ೩–೨೪)

ಕರೀ ಕಂಬಳಿ ನೆಂಟಾ
ನಡುರಾತ್ರಾ ್ಯಗ ಹೊಂಟಾ (ವಾಲಿ ೬–೧೧)

ಗುಡುಗುಡು ಗುಮ್ಮ ಗುದ್ದಲಿ ತಮ್ಮ
ಯಾಕೋ ರಾಮಾ ನಾಕ ಕಾಲಾ (ಲಠ್ಠೆ ಭಾಗ ೩–೩೬)
ಹೆಗ್ಗಣ

ಕರಿ ಕಂಬಳಿ ನೆಂಟ
ಸರಿ ಹೊತ್ತಿನಲ್ಲಿ ಹೊಂಟ

ಕರಿ ಹೊಲದಲ್ಲಿ ಬಿಳೀ ಧಾನ್ಯದ ಬಿತ್ತನೆ
ಬಿತ್ತೋದು ಕೈಯಲ್ಲಿ ಹರಗೋದು ಬಾಯಲ್ಲಿ (ಸು ೧೮೨)
ಹೆಗ್ಗಣ; ಸ್ಲೇಟಿನ ಮೇಲಿನ ಅಕ್ಷರ

ಗುಡುಗುಡುಗುಮ್ಮ
ಗುದ್ದಲಿ ತಮ್ಮ
ಏಕೋರಾಮ
ನಾಕುಕಾಲು
ಗುಡ್ಡದ ಹಿಂದೆ
ಗುಂಡ್ಕಲ್ಲು ಬಿದ್ದಿದೆ (ಜೀಶಂಪ ೧೩೯)
ಹೆಗ್ಗಣ (ಮೊದಲ ನಾಲ್ಕು ಸಾಲು); ತಲೆಗಂಟು (ಕೊನೆಯ ಎರಡು ಸಾಲು)

ಕರಿ ಕಂಬಳಿ ಗೌಡ ಇಲ್ಲಿ ಬಂದ ಅಲ್ಲಿ ಹೋದ (ಲ ಗೌ ೪೦೨)

ಕರಿ ಕಂಬ್ಳಿ ನೆಂಟ
ಸರ್ಹೊತ್ತಿನಲ್ಲಿ ಹೊಂಟ (ರಾ ಗೌ ೧೭೫)

ಕಂಬ ಕಂಬದ ಮೇಲೆ ಗುಂಭ
ಗುಂಭದ ಮೇಲೆ ಸಂಭ್ರಮದ ಮೇಲೆ
ಸಂಜೇಲಿ ಬಂದ ಜಂಗುಮಯ್ಯ (ಲ ಗೌ ೪೩೨)
ಹೆಗ್ಗಣ್ಣ

ಕಾಯಿಕಾಯಿ ಸಂಜೀವಂದೇ ಕಾಯಿ
ಸಂಜೇಲಿ ಬಂದೋಳು ಯಾರುತಾಯಿ (ಜೀಶಂಪ ೧೨೭)
ಹೆಗ್ಗನ

ಇಲ್ಲಿಂದ ಹೊತ್ಗಂದ್ ಹೋಗಾದು
ಅಲ್ಲಿಂದ ಬರೆಕ್ಕೈಲಿ ಬರೋದು (ಲ ಗೌ ೧೬೫)

ನಡೆಯೋವು ಎಂಟು
ನಡೆ ತಪ್ಪಿದವು ಎರಡು
ನುಡಿಯೋವು ನಾಲ್ಕು
ನುಡಿ ತಪ್ಪಿದವು ಒಂದು
ಬಟ್ಟಾ ತಲೆ ಐದು (ರಾ ಗೌ ೨೯೦)

ಬೊಂಬಾಯಿ ಮೋಟಾರು
ನಾಲ್ಕು ಜನ ಡ್ರೈವರು
ಮೇಲೊಬ್ಬ ಪ್ರಯಾಣಿಕ (ರಾ ಗೌ ೩೭೬)
ಹೆಣ

ಚಿಂತೆಯಿಲ್ಲದ ಪುರುಷ
ನಿಧಾನವಿಲ್ಲದ ಹೆಣ್ಣು
ಸುಂಕವಿಲ್ಲದ ರಾಶಿ (ಇ ೫೩೦)
ಹೆಣ–ಗಂಗಾ–ಉಪ್ಪು

ತಂದೋನು ಹೊದ್ಕೊಳ್ಳಲಾರ
ಹೊದ್ಕೊಂಡೋನು ಎದ್ದೇಳಲಾರ (ಸು ೨೯೭)
ಹೆಣದ ಬಟ್ಟೆ

ಚಿಂತಿ ಇಲ್ಲದ ಪುರುಷ
ನಿಲ್ಲಲಾರದ ನೀರೆ
ಸುಂಕವಿಲ್ಲದ ರಾಸಿ
ಹೆಣ, ನದಿ, ಉಪ್ಪು (ವಾಲಿ ೧–೩೩)

ಒಂದು ಒಳಗಡೆ ಹೋಯ್ತು
ಎರಡು ಈಚೇಗೆ ಉಳಕೊಂಡೊ (ಲ ಗೌ ೩೧೯)
ಹೆಣ–ಪಾಪ–ಪುಣ್ಯ

ನಡೆ ನಡೆವವು ಎಂಟು ನಡೆ ತಪ್ಪಿದವು ಎರಡು
ಐದು ತಲೆ ನಾಲ್ಕು ಸೂಲು (ಲ ಗೌ ೬೪೧)
ಹೆಣ ಹೊರುವುದು

ಹೋಗ್ತ ಹೋಗತತಿ ಬರತ ಬರಾಗಿಲ್ಲ (ಲತ್ಥೆ ಭಾಗ ೫–೩೦೯)
ಹೆಣಾ

ಕಲ್ಲ ಕಟ್ಟಿದ ಗ್ವಾಲ್ದಿ
ಕಡದ ಹಾಕಿದ ಕಣಿಕಿ
ಎದ್ದ ತಿನ್ನದ ಕ್ವಾಣನ್ನ ಒದ್ದ ಎಬ್ಬಿಸಬೇಕೇನ (ಇ ೩೭೧)
ಹೆಣ್ಣು

ಅ(ಹ)ಬ್ಬಬ್ಬಾ ಅಂತ ಬಂತು
ಹಬ್ಬಕ್ಕೆ ಅಕ್ಕಿಲ್ಲ ಅಂತು
ಸಾಲ ತಕ್ಕೊಂಡು ಬಾ ಅಂತು
ಸಾಲ ತೀರ್ಸೋ‌ಯ್ಯಾರು ಅಂತು
ನಾನೆ ಜಗ ಮೊಂಡ ಅಂತು (ರಾ ಗೌ ೩೪)

ಇಟೀ ಮಗನೇ ಚೋಟೀ ಮಗನೆ
ಸರಕಾರಕ್ಕೆ ಹೋಗಿ ಸೈ ಕೊಟ್ಟು ಬರ್ತಾನೆ (ಇ ೧೮೭)
ಹೆಬ್ಬೆರಳು

ಅವ್ವ ಅಪ್ಪ ಇಡುವದು ನಮಗಾಗಿ
ಆದರೆ ಉಪಯೋಗಿಸುವದು ಅವರೇ ಹೆಚ್ಚು (ವಾಲಿ ೬–೫೫)

ಅವ್ವ ಅಪ್ಪ ನಮಗಾಗಿ ಇಡ್ತಾರೆ
ಆದರೆ ಅವರೆ ಅದನ್ನ
ಹೆಚ್ಚಾಗಿ ಉಪಯೋಗಿಸುತ್ತಾರೆ (ರಾ ಗೌ ೪೩)
ಹೆಸರು

ಹುಡುಗಿ ಎಂಥಾ ಹುಡುಗಿ ಐತಿ
ಕಟ್ಟಲ್ಲೆ ಕೆಟ್ಟಾಡ
ಹುಡುಗ ಎಂಥಾ ಹುಡುಗ ಐತಿ
ಹಾರಲ್ಲೆ ಕೆಟ್ಟಾದ (ವಾಲಿ ೪–೩೪)
ಹೆರಳು ಹಾಕಿಲ್ಲ, ಮುಗ್ಗರಿಸುತ್ತಿದೆ

ಒಬ್ಬನ್ನ ಹಾಕಿದ್ದೆ
ಒಬ್ಬನ್ನ ನೂಕಿದ್ದೆ
ಒಬ್ಬನ್ನ ನೋಡಿ ನಗತಿದ್ದೆ (ಲಠ್ಠೆ ಭಾಗ ೫–೮೯)
ಹೆಳಲು ಹಾಕುವುದು, ಬಾಗಿಲು ನೂಕುವುದು, ಕನ್ನಡಿ ನೋಡುವುದು

ಇಟಿಟ ಮಣಿ ಮಣಿ ಮ್ಯಾಗ [ಗಿಣಿ
ಗಿಣಿ ಮ್ಯಾಗ ಹೊಲ ಹೊಲ್ದಾಗ ಕಬ್ಬ]
ಕಬ್ಬಿನಾಗ ಎಮ್ಮಿ ಮೈತದ (ಲಠ್ಠೆ ಭಾಗ ೩–೧೦)

ಕರಿಗುಡ್ಡದ ಮ್ಯಾಗ
ಕುರಿ ಮೆಯ್ತತಿ (ಲಠ್ಠೆ ಭಾಗ ೩–೨೫)

ನೀರಿಗಿ ಹೋಗೊ ನಿಲಗಂಗಾ
ನಿನ ಭುಜದ ಮ್ಯಾಲಿಂದ ಏನ
ಅರಗಿಣಿ ಪರಗಿಣಿ ಆರತಿಂಗಳ
ನೀರ ಹಾಕಿ ಸಲವಿದ
ಆರ ತಿಂಗಳ ಬಡದರ
ಆಕಳ ಕರಾ ಕೊಡತ
ಮೂರ ತಿಂಗಳಗಿ ಬಡದರ
ಮೂಗತಿ ಕೊಡತ
ಇವತ್ತಿಗಿ ಬಡದರ
ನಿನ ಸಂಗಾಟ ಬರತ (ಲಠ್ಠೆ ಭಾಗ ೩–೪೯)

ಹಿಂಗ ಬಂದ ಗುಡ್ಡಾ
ಗುಡ್ಡದ ಮ್ಯಾಲ ಹೊಲ
ಹೊಲದಾಗ ಎಮ್ಮಿ ಮೆಯ್ತದ (ಲಠ್ಠೆ ಭಾಗ ೩–೬೮)
ಹೇನ

ಆಳುದ್ದ ಹೊಲದಲ್ಲಿ ಕಾಳ ಹೋರಿ ಗುಟರಿ ಹಾಕ್ತದೆ (ಲ ಗೌ ೧೬೩)

ಎಲುಬಿಲ್ಲದ ಹಂದಿ
ಬಯಲಿಲ್ಲದ ಹೊಲದಲ್ಲಿ ಮೇಯುತ್ತದೆ (ಲ ಗೌ ೨೩೮)

ಎಳ್ನಂಗೆ ಹುಳೀತಾವೆ (ರಾ ಗೌ ೧೧೫)

ಕರಿ ಘಟ್ಟದ ಮೇಲೆ ಕುರಿ ಹಿಂಡು ಓಡಾಡ್ತವೆ (ಲ ಗೌ ೩೯೩)

ಕರಿ ತೋಟದಲ್ಲಿ ಮೂರು ಕರಿಕುರಿ ಹುರುಳಿ ಹುಡುಕಾಡುತ್ತವೆ (ಲ ಗೌ ೪೧೦)

ಕರಿವನವೆಲ್ಲಾ ಸುತ್ತಿದ ಮಗನೇ
ಅಂಗೈ ಪಟ್ಟಣ ಸೇರಿದ ಮಗನೇ
ಉಗುರಿನ ಮೇಲೆ ಸತ್ತೆಯೊ ಮಗನೆ (ವಾಲಿ ೬–೩೯)

ಕರಿ ಸ್ಯಾಲೆ ಗರತಿ
ಕರೆದರೆ ಮಾತಾಡೋದಿಲ್ಲ (ರಾ ಗೌ ೧೮೧)

ಕರಿ ಹೊಲದಾಗ ಕುರಿ ಮೆಯ್ತಾವ (ವಾಲಿ ೬–೫೯)

ಕರೀ ಗದ್ದೇಲಿ ಕುರಿ ಹಿಂಡು (ಲ ಗೌ ೪೧೬)

ಕುರುಚಲು ಗಿಡದಲ್ಲಿ ಇರುವೆ ದಂಡು (ಸು ೨೧೪)

ಕಂಬದಮೇಲೆ ಗುಂಬದಮೇಲೆ
ಕುರಿ ಮೇಯುತ್ತೆ (ಜೀಶಂಪ ೧೧೦)

ಗಿಡಾ ಇಲ್ದ ಆರ್ಯಾಣದಾಗ ಎಲುವ ಇಲ್ದ ಮಿಕ (ಲಠ್ಠೆ ಭಾಗ ೩–೩೪)

ತರೀಕೆರೆ ಏರಿಮ್ಯಾಲೆ
ಕರಿಕುರಿ ಮೇಯ್ತಿಯ್ತು (ರಾ ಗೌ ೨೬೨)

ನೀರಿಗ್ಹೋಗುವ ನೀಲಮ್ಮ
ತೋಳ ಮ್ಯಾಲಿಂದೇನಮ್ಮ
ಅಂಜರ ಗಿಣಿ ಪಿಂಜರ ಗಿಣಿ
ಸಾಕೀನಿ ಹೋಗೋ ಸುಖ ಜಾಣ (ವಾಲಿ ೬–೪೨)

ಮುಳ್ಳಿಲ್ಲದ ಕಾಡಿನಲ್ಲಿ ಮೂಳೆಯಿಲ್ಲದ ಕಡವೆ ಮೇಯುತ್ತಿದೆ (ಲ ಗೌ ೮೪೯)

ಹತ್ತಿ ತಿತ್ತಿ ತಿಗಣೇ ತಿತ್ತಿ
ಜುಟ್ಟಂಗಿ ಕಾಯಿ ಮೇಲೆ ನೊದೆ ಹುಲ್ಲು
ನೊದೆ ಹುಲ್ಲಿನ ಮೇಲೆ ಕರಿ ಮರಿ ಮೆಯ್ತಾ ಇದೆ (ಲ ಗೌ ೯೮೧)
ಹೇನು

ಕಗ್ಲಿ ಕಾಡು ಎಂಟು ಕಾಲು ಬೇಟೆ
ಎಂಟು ಜನ ಅವಿತವರೆ ಎರಡಾಳು ಸಿಗೀತಾರೆ (ಲ ಗೌ ೩೬೧)
ಹೇನು ಕುಕ್ಕುವುದು

ಮೂರು ಕಾಸಿನ ಕುದುರೆಗೆ
ಮುನ್ನೂರ ರೂಪಾಯಿ ಹಗ್ಗ (ಲಠೆ ಭಾಗ ೩–೫೭)
ಹೇನ, ಕೂದಲು

ಮೂರು ಕಾಸಿನ ಕುದುರೆಗೆ
ಮುನ್ನೂರು ರೂಪಾಯಿನ ಹಗ್ಗ (ಲ ಗೌ ೮೬೭)
ಹೇನು, ಕೂದಲು

ಮೆಟ್ಲು ಇಲ್ದೆ ಇರಾಬೆಟ್ಟಾ
ಮೂಳೆ ಇಲ್ದೆ ಇದ್ದಂದಿ
ಎಂಟಾಳು ಅಮಿಕಂಡ್ರು
ಇಬ್ರು ತಿವುದ್ರು (ಮಂ ೧.೩–೭)
ಹೇನು ಹಿಡಿಯುವುದು

ಒಳ್ಳೆ ಗೌಡ ಹುಲ್ಲಾಗಿ ಹೋದ (ಸು ೧೩೨)

ಹಾಳು ಬಾವಿಗೆ ಹಗ್ಗ ಬಿಟ್ರಿ
ಕಿತ್‌ಕಿತ್ತೆ ಹೋಗ್ತದೆ (ಸು ೫೧೫೫)
ಹೇಲು

ಈಟಿ ಹುಡುಗ ಮುಗಿಲ್ ಮಟ್ಟ ಜುಟ್ಟು (ಲ ಗೌ ೧೮೧)

ಕೊಂಬೆಯಿಲ್ಲ ಬೇರಿಲ್ಲ ಗಿಡ ಮರ ಮಾತ್ರ ಬೆಳೆಯುತ್ತವೆ (ಇ ೪೫೭)

ನೀರಿಗಿಂತ ತಿಳುವು
ಗಾಳಿಗಿಂತ ಹಗುರು
ಬೇವಿಗಿಂತ ಕಹಿ
ರೆಕ್ಕೆ ಇಲ್ಲದೆ ಹಾರುತ್ತದೆ (ವಾಲಿ ೧–೫೬)

ನೀರಿಗಿಂತಾ ತಿಳು
ಬೇವಿಗಿಂತ ಕಹಿ
ರೆಕ್ಕೆ ಇಲ್ಲದ ಮ್ಯಾಲ ಹಾರತೀನಿ (ಇ ೬೭೫)

ಮರದೊಳಗೆ ಮರವುಟ್ಟಿ
ಮರೆಯಲ್ಲೆ ಯಲೆಯಾಗಿ
ಯೆಲೆಯೆಲ್ಲಾ ತೂತಾಗಿ
ತೂತೆಲ್ಲಾ ಮಾತಾಡುತ್ತಾರೆ (ಮಂ ೧.೫–೭೭)

ಮಾಯದ ಕುದುರೆ
ವಾಸನೆ ನೋಡಬಹುದು ಕಣ್ಣಿಂದ ಕಾಣಬಹುದು
ಹಿಡಿಯಲು ಮಾತ್ರ ಜಗದೀಶ್ವರನಿಂದಲೂ ಸಾಧ್ಯವಿಲ್ಲ
ಈ ಕುದುರೆ ಯಾವುದು (ಲ ಗೌ ೮೩೬)
ಹೊಗೆ

ಸುಟ್ಟ್ ಮೊಟ್ಟೆ ಸೂರಿಗೆ ಸಿಗಿಸ್ತು (ಲ ಗೌ ೯೪೭)
ಹೊಗೆಪೀಕಿ

ಸುಸಾ ಬೀಜ ಪಟಾ ರಾಕ್ಷಿ (ರಾ ಗೌ ೪೫೭)
ಹೊಗೆಬಿತ್ತ

ಪಂಚವರ್ಣದ ಕುದುರೆ ಪರದೇಶಕ್ಕೆ ಹೋಯ್ತು
ಬಿಳಿ ಕುದುರೆ ಬೀದೀಗೋಯ್ತು
ಕಪ್ಪು ಕುದುರೆ ಕೇರೀಗ್ ಹೋಯ್ತು (ಲ ಗೌ ೭೨೧)
ಹೊಗೆ, ಬೂದಿ, ಇದ್ದಿಲು

ಗಾಟುಂಟು ಗಮನವಿಲ್ಲ
ಹುರಿಯುಂಟು ಹಗ್ಗವಲ್ಲ (ಲ ಗೌ ೫೦೮)

ಸುಟ್ಟ ಬಾಡು ಸೂರಾಗೆ (ಸು ೪೭೪)
ಹೊಗೆಸೊಪ್ಪು

ಸುಬ್ರಗಾಟಿ ಹಬ್ಬಕ್ಕ ಬಂದ
ಎರ್ಡು ಗುದ್ದುತ್ಲೆ ಉಚ್ಚೆ ವುಯ್ದ (ಮಂ ೧.೪–೮೦)
ಹೊಗೆಸೊಪ್ಪು, ಕಡ್ಡಿಪುಡಿ

ಗಿಡ್ಡ ಪಾರ ಅಡ್ಡ ಬಿದ್ದತಿ (ಲಠೆ ಭಾಗ ೫–೧೪೪೮)

ಬುಡ್ಡ ಸೂಳಿ ಮಗಾ ಅಡ್ಡ ಬಿದ್ದಾನ (ಲಠೈ ಭಾಗ ೫–೨೨೫)
ಹೊಚ್ಚಲ

ಊಟ ತಿಂಡಿಗಳುಂಟು ಮನೆಯಲ್ಲ
ಕುರ್ಚಿ ಮೇಜುಗಳುಂಟು ಶಾಲೆಯಲ್ಲ
ಜನಸಂದಣಿಯುಂಟು ಜಾತ್ರೆಯಲ್ಲ
ವ್ಯಾಪಾರ ನಡೆಯುವುದು ಸಂತೆಯಲ್ಲ (ಇ ೨೨೧)
ಹೊಟೆಲ್

ಏಳ್ನೂರು ಎಂಟ್ನೂರ ಗದಗಿನ ಊರ
ನಿನ್ನ ನಂಟಿದ್ದಲ್ಲಿ ಕೇಳ್ಕೊಂಡ ಬಾ
ಎಂಟ ದಿನದ ಅವದಿ ನಿನಗ (ಲಠೈ ಭಾಗ ೫–೩೦)
ಹೊಟ್ಟ ತುಂಬೊ ಝಿಲ್ಲಿ

ಮನಿಮಂದಿ ಎದರಾ ಮಗಳ್ಗಿ ಹಿಡಿತಾನ (ಲಠೈ ಭಾಗ ೫–೨೩೫)
ಹೊಟ್ಟಿನ ಜಾಳಿಗಿ

ಆನಿ ಹೊಟ್ಯಾಗ ಸಾವಿರ ಕಣ್ಣ
ಹೊಟ್ಯಾಗ ಎಲ್ಲಾ ಹೊಟ್ಟೇ ಹೊಟ್ಟ (ಲಠೈ ಭಾಗ ೫–೪೮)
ಹೊಟ್ಟಿನ ಜಾಳಿಗಿ

ಗಂಟ ನೂರು ಗದಡಿ ನೂರು
ಮನೀ ನೂರು ಮಂಟಪ ನೂರು
ಒಡದವ್ರಿಗಿ ಎಂಟು ರೊಟ್ಟಿ
ಪೆಂಟ ಬೆಲ್ಲ (ವಾಲಿ ೩–೪೭)
ಹೊಟ್ಟಿನ ಜಾಳಿಗೆ

ಚಿಕ್ಕ ಚಿಕ್ಕ ಪೆಟ್ಟಿಗೆ
ಚಿನ್ನಾಲ ಪೆಟ್ಟಿಗೆ
ಹವಳ ತುಂಬಿದೆ ನವಣೆ ಪೆಟ್ಟಿಗೆ (ರಾ ಗೌ ೨೪೯)
ಹೊಟ್ಟೆ

ದೊಡ್ಡ ಅಳ್ಳಿಮರ
ದಡುಕ್ಕೆ ಬಿತ್ತು (ಮಂ ೨.೧–೧೯)
ಹೊತ್ತು

ನಿಂತಾಗ ಬರಬ್ಯಾಡ ಕುಂತಾಗ ಬರಬ್ಯಾಡ
ಮಲಗಿದಾಗಿ ಬರಬ್ಯಾಡ (ಲಠೈ ಭಾಗ ೫–೧೯೫)
ಹೊಟ್ಟೆ ನಿಂತಾಗ, ಹೊರಗ ಕುಂತಾಗ, ಹಡದ ಮಲಗಿದಾಗ

ಕದಾ ಹಾಕಿಕೊಂಡು ಎದಿ ಬಡಕೊಂತೈತಿ (ಇ ೩೩೦)
ಹೊದಲು

ಬತ್ತಿದ ಕೆರಿಯಾಗ ಬೆಳ್ಳಕ್ಕಿ ಹಾರತೈತಿ (ಇ ೭೨೬)
ಹೊದ್ಲು

ಹೊಡಿ ಇಲ್ಲದ ತೆನಿ ಯಾವುದು (ಲಠೈ ಭಾಗ ೪–೨೧೩)
ಹೊನ್ನಿಕುಕ್ಕಿ ಪಲ್ಯ

ಕುಂತಾಗ ಬರಬ್ಯಾಡ
ನಿಂತಾಗ ಬರಬ್ಯಾಡ
ಮಲಕೊಂಡಾಗ ಬರಬ್ಯಾಡ
ಈ ಮೂರು ವ್ಯಾಳ್ಯಾ ಬಿಟ್ಟು ಬಾ (ಇ ೪೪೨)
ಹೊರಗೆ ಕುಂತಾಗ, ಗರ್ಭಿಣಿ ನಿಂತಾಗ, ಹಡೆದು ಮಲಗಿದಾಗ

(ಹೆಂಡತಿ ಗಂಡನಿಗೆ ಹೇಳುತ್ತಾಳೆ)
ಕುಂತಾಗ ಬರಬ್ಯಾಡ
ನಿಂತಾಗ ಬರಬ್ಯಾಡ
ಮಲಕೊಂಡಾಗ ಬರಬ್ಯಾಡ
ಇದರ ಅರ್ಥವೇನು (ವಾಲಿ ೮–೩೫)
ಹೊರಗೆ ಕುಂತಾಗ, ಗರ್ಭ ನಿಂತಾಗ, ಬಾಣಂತಿಯಾಗಿ ಮಲಗಿದಾಗ

ಒಂದಾ ಹೊತ್ತ ಯಾವಾಗ ಹೊಂಟತ್ತು ಅಂತದ (ಲಠೈ ಭಾಗ ೫–೯೬)

ನಮ್ಮ ಮನ್ಯಾಗೊಂದ ಪಾರ
ಮೈ ತುಂಬ ಕಣ್ಣಾ ಕಣ್ಣ (ಲಠೈ ಭಾಗ ೫–೧೮೫)

ನಾಕ ಕಾಲಿನ ನಾಗಪ್ಪ
ಬೀಗ್ರ ಬಂದಾರ ಬಾಗಪ್ಪಾ (ಲಠೈ ಭಾಗ ೫–೧೮೬)

ನಾಕ ಕಾಲಿನ ನುಲಿಯಪ್ಪ
ಬೀಗ್ರ ಬಂದ್ರ ಡೊಗ್ಗಪ್ಪ (ಲಠೈ ಭಾಗ ೫–೧೮೭)

ಮನ್ಯಾಗ ಒಬ್ಬ ಹುಡುಗ ಮೈತುಂಬ ಕಣ್ಣ (ಲಠೈ ಭಾಗ ೫–೨೩೭)

ಹೊರಸ

ಕರಿ ಎಮ್ಮಿಗಿ ಮೈತುಂಬ ಕಣ್ಣ (ಲಠೈ ಭಾಗ ೫–೧೧೨)

ನಾಕ ಕಾಲಿನ ಎಮ್ಮಿ ಮೈತುಂಬ ಕಣ್ಣು (ಇ ೬೩೮)

ನಾಲ್ಕ ಕಾಲಿನ ಎಮ್ಮೀಗಿ ಮೈ ತುಂಬಾ ಕಣ್ಣು (ವಾಲಿ ೩–೪೦)

ನಾಲ್ಕು ಕಾಲಿನ ಎಮ್ಮಿ ಮೈತುಂಬಾ ಕಣ್ಣು
ಹೈರಾಣಾದವರಿಗಿ ನಿನ್ನ ಬೆನ್ನು (ವಾಲಿ ೩–೧೦೦)

ನಿನ್ನ ಹಾಕೊಂಡು ನಾ ಮಲಗತೀನಿ (ವಾಲಿ ೮–೧೦)

ನೆಲುವಿಗೆ ನಾಲ್ಕು ಕಾಲು (ಇ ೬೯೦)

ಮನ್ಯಾನ ಕೋಣಕ್ಕ ಮೈತುಂಬ ಕಣ್ಣು (ಇ ೮೧೨)

ಮಲ್ಲಾಡದಿಂದ ಒಂದು ಕೋಣನ್ನ ತಂದೀನಿ
ಅದರ ಮೈತುಂಬ ಕಣ್ಣು (ಇ ೮೩೧)

ಹಣ್ಣಾದ ಮುದುಕಿಗೆ ಮೈತುಂಬ ಕಣ್ಣು (ಇ ೧೦೦೨)

ಹೊರಸು

ಮದ್ದಲಂತಾ ಎಮ್ಮಿ ಮೈಯೆಲ್ಲಾ ಕಣ್ಣ (ಲಠೈ ಭಾಗ ೫–೨೩೩)
ಮನಿನೂರ ಮಂಟಪನೂರ ಗಂಟನೂರ (ಲಠೈ ಭಾಗ ೫–೨೩೪)

ಹೊರ್ಸ

ಜಮಖಂಡ್ಯಾಗ ಜಗ್ಗಿ ಬಡದರ
ಕಾಖಂಡಕ್ಯಾಗ ಕಾಯಿ ಅಕ್ಕಾವ (ಲಠೈ ಭಾಗ ೨–೪೦)

ಹೊಲಿಯುವ ರಾಟಿ

ಹೊಸಲು ಮ್ಯಾಲೆ
ಮೊಸರು ಚೆಲ್ಲದೆ (ಸು ೫೩೨)

ಹೊಸಲು ಪೂಜೆಯ ಹೂವು

ದಿಂಡೆ ಹುಡುಗ ಅಡ್ಡ ಮಲಗಿದ್ದಾನೆ (ಲ ಗೌ ೬೩೧)

ಹೊಸಿಲು

ಗಿಡ್ಡನ್ನ ಹುಡುಗ ಅಡ್ಡ ಬಿದ್ದಾನ (ಇ ೪೮೫)

ಪೆದ್ದ ಮುಂಡೇಗಂಡ ಅಡ್ಡ ಬಿದ್ದವ್ನೆ (ರಾ ಗೌ ೩೩೮)
ಹೊಸ್ತಿಲು

ಕಾಲಿಲ್ಲ ನಡಿತತಿ ತೋಳಿಲ್ಲ ಹೊರ್ತತಿ
ನಾಲಿಗಿಲ್ಲ ಸದ್ದ ಮಾಡ್ತತಿ (ಲತ್ಯೆ ಭಾಗ ೫–೧೩೧)
ಹೊಳಿ

ಅಂಕ ಬಿಂಕ ಆಡೋಳೆ
ಲೋಕ ಮೂರು ಸುತ್ತೋಳೆ
ಸೋದರತ್ತೆ ಮೊಮ್ಮಗಳೆ ಸುಗ್ಗಿಲೇಕೆ ಬಡವಾದೆ (ಲ ಗೌ ೧೦೦)

ಅಂಕು ಡೊಂಕು ಹರಿಯೋಳೆ
ಏಳು ಅಂಕಣದಿ ನಿಲ್ಲೋಳೆ
ಬಿಸಿಲಿಗೆ ಏಕೆ ಇಳಿದು ಹೋದೆ (ರಾ ಗೌ ೫೨)

ಕಾಲಿಲ್ಲದೆ ನಡೆಯುವುದು ತೋಳಿಲ್ಲದೆ ಹೊರುವುದು
ನಾಲಗೆಯಿಲ್ಲದೆ ಸದ್ದುಮಾಡುವುದು (ಲ ಗೌ ೪೪೨)

ಪಾದಗಳಿಲ್ಲದೆ ಚಲಿಸುತ್ತೇನೆ ನಾಲಗೆಯಿಲ್ಲದೆ ನುಡಿಯುತ್ತೇನೆ (ಲ ಗೌ ೭೨೪)
ಹೊಳೆ

ಅಂಗಾಲು ಮೇಲಾಗಿ ನೀರು ಕುಡಿಯಾತ
ಇಂದು ನಿಮ್ಮೂರಲ್ಲಿ ಹಬ್ಬಕ್ಕೆ ನಾತ
ನಿನಗ್ಯಾರು ಹೇಳಿದರು ತಲೆಯಿಲ್ಲದ ದಾತ
ನನಗೊಬ್ಬರು ಹೇಳಿದರು ಕರುಳಿಲ್ಲದ ದಾತ (ರಾ ಗೌ ೧೦)
ಹೋತ, ಏಡಿ, ಊದುವ ಕೊಂಬು

ಗಡ್ಡ ಇದ್ದವ ಸಾಧು ಅಲ್ಲ
ಜುಟ್ಟ ಇದ್ದರ ಹಾರುವ ಅಲ್ಲ (ವಾಲಿ ೬–೧೩)
ಹೋತ ಕುದುರೆ

ಮಲ್ಲಾಡದಾಗ ನಾಕೆಮ್ಮಿ ತಂದರು
ಒಂದ ಹೋತ ಒಂದ ಬಂತ
ಒಂದ ಕಳಿತ ಒಂದ ಸಿಕ್ಕಿತ (ಲತ್ಯೆ ಭಾಗ ೨–೫೭)
ಹೋಳಿ ಹುಣ್ಣಿವಿ, ಭಾರತ ಹುಣ್ಣಿವಿ, ಕಾರ ಹುಣ್ಣಿವಿ, ಸೀಗಿ ಹುಣ್ಣಿವಿ

ಅಕ್ಕ ಜಾಣಾ ಇಕ್ಕ ಜಾಣಾ
ಕುಬಸದ ಗಳಿಗಿ ನುಂಗೊ ಜಾಣಾ (ಲತ್ಯೆ ಭಾಗ ೪–೩)

ಚೆಂದಾನ ಚೆಲ್ವೇರ ಇಬ್ಬರು
ಹೊಟ್ಟಿ ಒಂದಾ (ಲಠ್ಠೆ ಭಾಗ ೪–೯೫)

ಕುಬುಸದ ಗಳಿಗೆ ಒಲಿಮ್ಯಾಗ ಮಾಡ್ತಾರ (ಇ ೪೧೦)
ಹೋಳಿಗಿ

ಒಲಿಮ್ಯಾಲ ಮಾಡ್ತಾರ ಕುಬಸಿನ ಗಳಿಗಿ (ವಾಲಿ ೫–೪೫)

ನಾಜೂಕು ನಾರ್ಯಾರು ಅವರಿಬ್ರು
ಹೊಟ್ಟಾ ್ಯಗಿಟ್ಟಾರ ಬೆಲ್ಲದ ಗಬುರು (ಇ ೬೪೩)
ಹೋಳಿಗೆ

ಚೆಲುವೇರು ಅವರಿಬ್ಬರು
ಉಳಿಕೇರು ಪಳಕೇರು ಅವರಿಬ್ಬರು
ಊದೇರು ಬಾದೇರು ಅವರಿಬ್ಬರು (ಸು ೨೭೯)
ಹೋಳಿಗೆ, ದೋಸೆ, ಕಡುಬು

ಮಾರುದ್ದ ಮರಕ್ಕೆ
ನಿಮ್ಮಪ್ಪನೂ ಹತ್ತಲಾರ ನಮ್ಮಪ್ಪನೂ ಹತ್ತಲಾರ (ಲ ಗೌ ೮೩೮)
ಹಂಚಿಕಡ್ಡಿ

ಒಂದು ಬಿದಿರು ಸೀಳಿ
ಒಂಭತ್ತು ಹೋಳು ಮಾಡಿ
ಅರಮನೆ ಕಟ್ಟಿ
ಗುರುಮನೆ ಕಟ್ಟಿ
ಸೂಳೆಮನೆ ಕಟ್ಟಿ
ಸುಂಗಾರದ ಮನೆ ಕಟ್ಟಿ
ಇನ್ನೂ ಒಂದು ಹೋಳು ಮಿಕ್ಕಿತು (ಸು ೧೫೯)
ಹಂಚಿಕಡ್ಡಿ ಹೋಳು

ಏಳತೀಯೋ ಮುಕಳ್ಯಾಗ
ಕೈಹಾಕಿ ಎತ್ತಂತಿಯೋ (ವಾಲಿ ೮–೮)
ಹಂಚಿನಿಂದ ರೊಟ್ಟಿ ಎತ್ತುವದು

ಕೆಂಪ ಕುದರಿ ಕರಿ ಥಡಿ
ಒಬ್ಬ ಹತ್ತಾನ ಒಬ್ಬ ಇಳೀತಾನ (ಇ ೪೪೯)
ಹಂಚು, ರೊಟ್ಟಿ

ಅವ್ವ ಅಗಳಾಡದೆ ಕೂತಿದ್ದಾಳೆ
ಮಗಳು ಆಗಾಗ ಓಡಾಡ್ತಾಳೆ (ವಾಲಿ ೩–೨೫)
ಹಂಡೆ, ಅಂಬಿಗೆ

ಆತತಿ ಬಾತತಿ ನೇತತಿ (ಲಠ್ಠೆ ಭಾಗ ೫–೪೩)
ಹಂಡೆ, ಗಿಂಡಿ

ಅಮ್ಮ ಕುಂತಾಳ
ಮೊಮ್ಮಗಳು ಓಡ್ಯಾಡತಾಳ (ಇ ೧೧೬)
ಹಚಿಡೆ, ಚರಿಗೆ

ನಾವು ಹೋಗುವದೆಲ್ಲಾ ಕೂಡಿಯೇ
ಆದರೆ ಒಬ್ಬರಿಗಿಂತ ಒಬ್ಬರ ದಾರಿ ದೂರ (ವಾಲಿ ೬–೨೦)
ಹಂತಿಯ ಎತ್ತುಗಳು

ಎಂಟ ಮಲಿಯಾಕಿ ಗಂಟ ಮಾರಿಯಾಕಿ
ಪಗಡಿ ಬಾಜಾರದಾಗ ಒದರಕೊಂತ ಹೋದ್ರ
ಕುಂತ ಮಂದಿ ಸರದು ನಿಲ್ಲತಾರ (ವಾಲಿ ೬–೧೯)

ಎಂಟ ಮೊಲೆಯಾಕಿ ಗಂಟ ಮೋತ್ಯಾಕಿ
ಸಂದ್ರಿ ಸಂದ್ರಿ ಹಿಡದ ಹೊಕ್ತಾಳ ಸುಂದ್ರಾಬಾಯಿ (ಲಠ್ಠೆ ಭಾಗ ೩–೧೭)

ಎಂಟು ಮಲಿ ಗಂಟು ಮೋತಿ
ಸಂದ್ಯಾಗ್ಹಾದು ಬರತಾಳ ಸುಂದರಾಬಾಯಿ (ಇ ೨೩೧)

ಎಂಟು ಮೊಲೆಯವಳು
ಗಂಟು ಮೋರೆಯವಳು
ಸಂದಿ ಹಿಡಿದು ಸಾಗ್ಯಾಳ ಸುಂದ್ರಾಬಾಯಿ (ವಾಲಿ ೬– ೩೨)

ಭಟ್ಟ ಸುಟ್ಟರೂ ಭಟ್ಟನ ಜನಿವಾರ ಸುಡೋದಿಲ್ಲ (ಲ ಗೌ ೭೯೮)
ಹಂದಿ

ಸಿನುಗು ಸಿಡುಕು ಸೇರಿದವರು ನೂರಾರು ಜನ (ಲ ಗೌ ೯೪೦)
ಹಂದಿ ಮಾಂಸ

ಒಲ್ಯಾಗ ಒಲಿ ಯಾವ ಒಲಿ (ಲಠ್ಠೆ ಭಾಗ ೫–೯೦)
ಹಿಂದೊಲಿ

ಎರಡು ಕಾಲುಂಟು ನರನಲ್ಲ
ಕೆಂಪು ಕಿರೀಟವುಂಟು ರಾಜನಲ್ಲ
ವೇಳೆ ಹೇಳುವೆನು ಗಡಿಯಾರವಲ್ಲ
ಇದನರಿತು ಹೇಳುವರು ಜಾಣರೆಲ್ಲ (ಲ ಗೌ ೨೨೩)

ಎರಡೇ ಕಾಲಿರುವುದು ರಂಗುಳಿಸಿ ನಡೆಯವುದು
ತಂಗಿ ಮಕ್ಕಳನೆಲ್ಲ ಅಂಗಳಕೆ ಕರೆಯುವುದು (ಲ ಗೌ ೨೩೩)

ಕಿರೀಟ ಇದೆ ರಾಜನಲ್ಲ
ಕಾಲು ಇವೆ ಮನುಷ್ಯನಲ್ಲ
ವೇಳೆಯನ್ನು ಸೂಚಿಸುತ್ತದೆ ಗಡಿಯಾರವಲ್ಲ (ಇ ೪೦೦)

ಕಿರೀಟ ಉಂಟು ಮಹಾರಾಜನಲ್ಲ
ಗಡ್ಡ ಉಂಟು ಸಾಬಿಯಲ್ಲ (ಜೀಶಂಪ ೧೩೦)

ಕಿರೀಟ ಉಂಟು ರಾಜನಲ್ಲ
ರೆಕ್ಕೆ ಉಂಟು ಪಕ್ಷಿಯಲ್ಲ
ಕಾಲುಂಟು ಮನುಷ್ಯನಲ್ಲ (ಸು ೨೦೯)

ಕಿರೀಟವುಂಟು ಕೃಷ್ಣನಲ್ಲ
ಹತ್ತು ತಲೆಯುಂಟು ರಾವಣನಲ್ಲ
ಬಾಲವುಂಟು ಹನುಮನಲ್ಲ (ಇ ೩೯೮)

ತಿಪ್ಪಿಯ ಕೆದರೋದು
ತುರಾಯಿ ಹಿಡಿಯೋದು
ತಂಗಿ ಮಕ್ಕಳನ ಅಂಗಳಕ ಕರೆಯೋದು
ಹೇಳು ಇದರರ್ಥ ಕಡು ಜಾಣ (ವಾಲಿ ೬–೬೫)

ದಾರೀಲಿ ಹೋಗೋ ದೊರೆ ಸನ್ಯಾಸಿಗೆ ಕೆಂಪು ಮುಂಡಾಸು (ಲ ಗೌ ೬೨೭)

ನಿನ್ನೋಡು ನಿನ್ ಸೈರೂಪ ನೋಡು, ತೆಲೀ ಪಟ ನೋಡು
ಹಿಂದ್ ಬರs ಕುಟುಂಬ ನೋಡು (ಲ ಗೌ ೬೮೩)

ಬೀದೀಲಿ ಹೋಗೋ ಮೂರ್ಮಂಡೆ ಕೂಸೆ
ನಿನಗ್ಯಾಕೆ ಪಚ್ಚೆ ಗುಲಾಬಿ (ಸು ೩೭೭)

ಯಾಕೋ ಲಾಲ ತೆಲಿಮಾಲ ಝಾಲ
ಸಾರಂಗ ಊದಿ ಸತ್ತವರನ್ನ ಎಬ್ಬಿಸ್ತಿ (ವಾಲಿ ೬–೧೬)

ಹಳ್ಳಿಯಾ ಗಡಿಯಾರ
ಒಳ್ಳೆಯಾ ಆಹಾರ
ಮಲ್ಲಯುದ್ದರ ಜಾತ್ರೆ
ರುದ್ರ ಗಂಭೀರ (ಇ ೧೦೫೩)

ಹುಂಜ

ತೊಟ್ಟಿಲು ಮಕಾಡೆ
ಜನ ಅಂಗಾತ (ಲ ಗೌ ೬೧೯)
ಹೆಂಚು, ಜನ

ಬೆಂದ ಮನೆ ಬಲಕ್ಕೆ ಬಿಟ್ಟು
ಬೇಯದ ಮನೆ ಎಡಕ್ಕೆ ಬಿಟ್ಟು
ಇಪ್ಪತ್ತು ಜನ ಕುಯ್ದು ಹಾಕಿ
ಮುವ್ವತ್ತೆರಡು ಜನ ಸುಲಿದು ಹಾಕಿ
ಜೋಡಿ ಕುದುರೆ ಮ್ಯಾಲೆ ಜೊತೆಗೆ
ಮೂವರನ್ನು ಕರಕೊಂಡು
ಮರ ಮರ ಮಾತಾಡುವಾಗ ಬಾ (ಸು ೩೯೧)
ಹೆಂಚಿನ ಮನೆ, ಗುಡಿಸಲು, ಉಗುರು, ಹಲ್ಲು, ಕೆರ, ಅಡಿಕೆ, ಎಲೆ ಸುಣ್ಣ–ಅರ್ಧರಾತ್ರಿಯಲ್ಲಿ ಬಾ ಎಂದು ಹೆಣ್ಣು ಗಂಡಿಗೆ

ಆಕಾಶ ಅಡಿಯಾಗಿ ಭೂಮಿಗೆ ಮೇಲಾಗಿ
ಕೆಂಡವಿಲ್ಲದೆ ಉಕ್ಕಿ ಬರುವದು (ಲ ಗೌ ೧೩೯)
ಹೆಂಡ

ಆಕಾಶದಿಂದ ಬೆಳ್ಳೀ ಬಟ್ಟಲು ಬೀಳುತ್ತದೆ (ಇ ೧೫೫೫)

ಒಂದು ಕೊಂಬೆ
ಒಂದು ಕೊಂಬೆಗೆ ನೂರು ಗಿಣಿ
ನೂರು ಗಿಣಿಗೆ ನೂರು ರೆಕ್ಕೆ
ರೆಕ್ಕೆಗೆ ನೂರು ಹಕ್ಕಿ
ಹಕ್ಕಿ ಬಾಯಲ್ಲಿ ಮೂರು ಪಾವು ಅಕ್ಕಿ (ಲ ಗೌ ೩೨೧)

ಚಿಕ್ಕ ಚಿಕ್ಕ ಪೆಟ್ಟಿಗೆ ಚಿನ್ನಾರಿ ಪೆಟ್ಟಿಗೆ
ತಡಕೋನಾರ್ದೆ ಒಡಕೊಂತು (ಲ ಗೌ ೫೪೧)

ಹಸಹಸರ್ಹಕ್ಕಿ
ಹಸುರು ಪಲ್ಲಕ್ಕಿ
ಜಾವೆರಡಕ್ಕೆ
ತಡಕಳ್ಳಲಾರ್ದೆ
ಒಡಕೊಂತು (ಜೀಶಂಪ ೨೭೮)
ಹೊಂಬಾಳೆ

ಎರಡು ಆಲದ ಮರ
ಎರಡು ಜಾಲದ ಮರ
ಎರಡು ಒಣಗಿದ ಮರ
ಎರಡು ಪಟ ಪಟ
ಎರಡು ಮಿಣಿ ಮಿಣಿ
ಒಂದು ಕೊಣ ಕೊಣ (ಸು ೧೧೬)

೨ ಹಿಂದಿನ ಕಾಲುಗಳು, ೨ ಮುಂದಿನ ಕಾಲುಗಳು, ೨ ಕೊಂಬುಗಳು, ೨ ಕಿವಿಗಳು, ೨ ಕಣ್ಣುಗಳು, ೧ ಬಾಲ=ಹಸು,ಎಮ್ಮೆ

ಅತ್ತೆ ಸೊಸೆ ಅವರಿಬ್ಬರು
ಅವ್ವ ಮಕ್ಕಳು ಅವರಿಬ್ಬರು
ಅತ್ತಿಗೆ ನಾದಿನಿ ಅವರಿಬ್ಬರು
ಮೂರು ರೊಟ್ಟಿ ಸುಟ್ಟು
ಮುರಿಯದೆ ತಿನ್ನಬೇಕು (ರಾ ಗೌ ೨೧)

೩ ಜನರು

ಅರಿವಿಲ್ಲದ ಕುರಿ
ಸುರಹೊನ್ನೆ ತೋಟಕೆ ಹೋಗಿ
ತಳ್ಳುಬಿಟ್ಟು ತರಗು ಮೇಯ್ತು (ಸು ೪೩)

ಕಟ್ಟಿರು ಕಂದು ಹಾಕಿ
ಮೂಗಂಡುಗ ಹಾಲು ಕರೆಯೋ ಹೊತ್ತಿಗೆ
ವಿಜಯ ನಗರದೋರು
ಇದೇನು ಚೋಜಿಗ ಅಂತ
ತಿಗಣೆಗೆ ಹಗ್ಗ ಮೂಗುದಾರ ಹಾಕ್ಕೊಂಡು
ನೋಡೋಕೆ ಬಂದ್ರಂತೆ (ಸು ೧೬೭)

ವಸ್ತ್ರದ ಸೆರಗಿನೊಳಗೆ ಕಸ್ತೂರಿ ನಿಂಬೆಹಣ್ಣು
ಹಸಿದೋರ ಬಾಯಲ್ಲಿ
ಅಮಲ್ದಾರ್ರ ಕೈಯಲ್ಲಿ (ಸು ೪೪೭)

❍ ❀ ❍

ಸಂಪಾದಿತ ಒಗಟು ಕೃತಿಗಳು

೧) ಇಮ್ರಾಪುರ ಸೋಮಶೇಖರ, ಕನ್ನಡ ಸಾವಿರದ ಒಗಟುಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೨) ಖಂಡೋಬಾ ಪಿ.ಕೆ., ಲಂಬಾಣಿ ಒಗಟುಗಳು, ದಿ. ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ, ಗುಲಬರ್ಗ, ೧೯೮೮

೩) ಚಕ್ಕಲೂರು ಚನ್ನಪ್ಪ, ಕನ್ನಡ ಒಗಟುಗಳ ಮಾಲೆ, ೧೯೬೭

೪) ಚಂದ್ರರಾಜ ಸೆಟ್ಟಿ, ಒಗಟುಗಳು, ಪ್ರಭಾತ ಪ್ರಕಾಶನ, ಮಂಗಳೂರು, ೧೯೫೫

೫) ತಪಸ್ವೀಕುಮಾರ್ ನಂ., ಕನ್ನಡ ಒಗಟುಗಳ ಸಮೀಕ್ಷೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೬) ದುರ್ಗಾ ಭಾಗವತ್ (ಮೂಲ), ಕನ್ನಡಕ್ಕೆ: ವಿವೇಕ ರೈ, ಭಾರತೀಯ ಪರಂಪರೆ ಹಾಗೂ ಸಾಹಿತ್ಯದಲ್ಲಿ ಒಗಟು, ಲೇಖಕರು, ಮಂಗಳೂರು, ೧೯೮೮

೭) ನಾರಾಯಣ ಗೌಡ ನಂ., ಜನಪದ ಒಗಟುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೩

೮) ಪರಮಶಿವಯ್ಯ ಜೀ.ಶಂ., ಕನ್ನಡ ಒಗಟುಗಳು, ಸಾಹಿತ್ಯ ಸದನ, ಸರಸ್ವತೀಪುರಂ, ಮೈಸೂರು, ೧೯೬೭

೯) ಪಂಡಿತಾರಾಧ್ಯ, ಪ್ರಥಮ, ಪ್ರಬೋಧ ಮುದ್ರಣಾಲಯ, ಮೈಸೂರು, ೧೯೭೬

೧೦) ಪೈ ಎಲ್ ವಿ., ಕನ್ನಡ ಒಗಟುಗಳು, ಗಾದೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩

೧೧) ಮಂಜುಳಾಕ್ಷಿ ಎಲ್. , ನುಡಿಮುತ್ತಿನ ಹಾರ, ಅಭಿರುಚಿ ಪ್ರಕಾಶನ, ಮೈಸೂರು, ೨೦೦೩

೧೨) ರಮೇಶ್ ಬೆಗೋ, ಕನ್ನಡದಲ್ಲಿ ಒಗಟುಗಳು, ಪ್ರಕಾಶನ ಸಾಹಿತ್ಯ, ಬೆಂಗಳೂರು, ೧೯೯೪

೧೩) ರಾಮೇಗೌಡ, ನಮ್ಮ ಒಗಟುಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೦

೧೪) ಲಕ್ಕಪ್ಪ ಗೌಡ ಎಚ್. ಜೆ., ಒಗಟುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೩

೧೫) ಲಕ್ಕಪ್ಪ ಗೌಡ ಎಚ್ ಜೆ, ಒಗಟುಗಳು, ಚೇತನ ಬುಕ್ ಹೌಸ್, ಮೈಸೂರು, ೧೯೯೫

೧೬) ಲಠ್ಠೆ ಎಮ್ ಎಸ್., ಉತ್ತರ ಕರ್ನಾಟಕದ ಒಗಟುಗಳು, ರವೀಂದ್ರ ಪ್ರಕಾಶನ, ಕಲಬುರ್ಗಿ, ೧೯೭೪

೧೭) ಶಿವಣ್ಣ ಮೀರಾಸಾಬಿಹಳ್ಳಿ, ಒಗಟುಗಳು ಒಡಪುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೧೮) ಶಾಂತಿ ನಾಯಕ, ಜಾಣೆ ಕನ್ನಡವ ತಿಳಿದ್ಹೇಳೆ, ಜಾನಪದ ಪ್ರಕಾಶನ, ಹೊನ್ನಾವರ, ೧೮೮೨

೧೯) ಸಣ್ಣರಾಮ, ಲಂಬಾಣಿ ಒಗಟು ಲೋಕ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೭

೨೦) ಸುಧಾಕರ, ಜನಪದ ಬೆಡಗಿನ ವಚನಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೦

೨೧) ಸುಧಾಕರ, ಒಗಟುಗಳು, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೯೦

೨೨) ಹೆಗಡೆ, ಎಲ್ ಆರ್ ಒಗಟುಗಳು ಮತ್ತು ಕತೆಗಳು, ಜ್ಞಾನ ಸಾಧನ ಗ್ರಂಥಮಾಲೆ, ಸಿದ್ಧಾಪುರ, ೧೯೯೩

ಪರಾಮರ್ಶನ ಗ್ರಂಥಗಳು

೧) ಇಮ್ರಾಪುರ ಸೋಮಶೇಖರ, ಕನ್ನಡ ಸಾವಿರದ ಒಗಟುಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೨) Elli Kongas Maranda and Pierre Maranada, Structural Models in Folklore and Transformational Essays, Mounton & Co. N.V., Publishers, The Hague, 1971

೩) ಖಂಡೋಬಾ ಪಿ.ಕೆ., ಲಂಬಾಣಿ ಒಗಟುಗಳು, ದಿ. ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ, ಗುಲಬರ್ಗ, ೧೯೮೮

೪) ಚಂದ್ರರಾಜ ಸೆಟ್ಟಿ, ಒಗಟುಗಳು, ಪ್ರಭಾತ ಪ್ರಕಾಶನ, ಮಂಗಳೂರು, ೧೯೫೫

೫) ತಪಸ್ವೀಕುಮಾರ್ ನಂ., ಕನ್ನಡ ಒಗಟುಗಳ ಸಮೀಕ್ಷೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೬) ದುರ್ಗಾ ಭಾಗವತ್ (ಮೂಲ), ಕನ್ನಡಕ್ಕೆ: ವಿವೇಕ ರೈ, ಭಾರತೀಯ ಪರಂಪರೆ ಹಾಗೂ ಸಾಹಿತ್ಯದಲ್ಲಿ ಒಗಟು, ಲೇಖಕರು, ಮಂಗಳೂರು, ೧೯೮೮

೭) ನರಸಿಂಹಶಾಸ್ತ್ರಿ ದೇವುಡು, ಕರ್ನಾಟಕ ಸಂಸ್ಕೃತಿ, ಶಾರದಾ ಪ್ರಕಾಶನ, ಬೆಂಗಳೂರು, ೧೯೩೫

೮) ನಾರಾಯಣ ಗೌಡ ನಂ., ಜನಪದ ಒಗಟುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೩

೯) ಪರಮಶಿವಯ್ಯ ಜೀ.ಶಂ., ಕನ್ನಡ ಒಗಟುಗಳು, ಸಾಹಿತ್ಯ ಸದನ, ಸರಸ್ವತೀಪುರಂ, ಮೈಸೂರು, ೧೯೬೭

೧೦) ಪಂಡಿತಾರಾಧ್ಯ, ಪ್ರಥಮ, ಪ್ರಬೋಧ ಮುದ್ರಣಾಲಯ, ಮೈಸೂರು, ೧೯೭೬

೧೧) Folkore Fellows Communications, Dept. of Folklore Studies, University of Helsinki, No.29, Dec. 2005

೧೨) ಪೈ ಎಲ್ ವಿ., ಕನ್ನಡ ಒಗಟುಗಳು, ಗಾದೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩

೧೩) Burke Peter (ed.), New Perspectives On Historical Writings, Polity Press, Cambridge, 1992

೧೪) ಮಾಳವಾಡ ಸ. ಸ. (ಸಂ), ಹೊನ್ನ ಬಿತ್ತೇವು ಹೊಲಕೆಲ್ಲ, ಸಾಹಿತ್ಯ ಸಮಿತಿ, ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ, ತರೀಕೆರೆ, ೧೯೬೭

೧೫) ಮಂಜುಳಾಕ್ಷಿ ಎಲ್., ನುಡಿಮುತ್ತಿನ ಹಾರ, ಅಭಿರುಚಿ ಪ್ರಕಾಶನ, ಮೈಸೂರು, ೨೦೦೩

೧೬) ರಮೇಶ್ ಬೆಗೋ, ಕನ್ನಡದಲ್ಲಿ ಒಗಟುಗಳು, ಪ್ರಕಾಶನ ಸಾಹಿತ್ಯ, ಬೆಂಗಳೂರು, ೧೯೯೪

೧೭) Ramanujan A.K. The Relevance of South Asian Folklore, Indian Folkore (ed.) Clauss Peter J., Hand J., and Pattnayaka D.P., Central Institue of Indian Languages, Mysore, 1987

೧೮) ರಾಮೇಗೌಡ, ನಮ್ಮ ಒಗಟುಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೦ ಲಕ್ಕಪ್ಪ ಗೌಡ ಎಚ್. ಜೆ., ಒಗಟುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೩

೧೯) ಲಕ್ಕಪ್ಪ ಗೌಡ ಎಚ್ ಜೆ, ಒಗಟುಗಳು, ಚೇತನ ಬುಕ್ ಹೌಸ್, ಮೈಸೂರು, ೧೯೯೫

೨೦) ಲಠ್ಠೆ ಎಮ್ ಎಸ್., ಉತ್ತರ ಕರ್ನಾಟಕದ ಒಗಟುಗಳು, ರವೀಂದ್ರ ಪ್ರಕಾಶನ, ಕಲಬುರ್ಗಿ, ೧೯೭೪

೨೧) Leach Maria (ed.), Standard Dictionary of folklore, Mythology and Legend

೨೨) ವಿವೇಕ ರೈ ಬಿ.ಎ., ತುಳು ಒಗಟುಗಳು, ಕನ್ನಡ ಸಂಘ, ಮಂಗಳಗಂಗೋತ್ರಿ, ೧೯೭೧

೨೩) ವಿವೇಕ ರೈ ಬಿ ಎ., ತುಳು ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

೨೪) ಶಿವಣ್ಣ ಮೀರಾಸಾಬಿಹಳ್ಳಿ, ಒಗಟುಗಳು ಒಡಪುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೨೫) ಶಿವರಾಮ ಶೆಟ್ಟಿ ಬಿ. ತುಳುನಾಡಿನ ಸಸ್ಯಜಾನಪದ (ಪಿಹೆಚ್‌ಡಿ. ಮಹಾಪ್ರಬಂಧ ಅಪ್ರಕಟಿತ), ಮಂಗಳೂರು ವಿಶ್ವವಿದ್ಯಾನಿಲಯ, ೧೯೯೩

೨೬) ಶಾಂತಿ ನಾಯಕ, ಜಾಣೆ ಕನ್ನಡವ ತಿಳಿದ್ಹೇಳೆ, ಜಾನಪದ ಪ್ರಕಾಶನ, ಹೊನ್ನಾವರ, ೧೯೮೨

೨೭) ಸಣ್ಣರಾಮ, ಲಂಬಾಣಿ ಒಗಟು ಲೋಕ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೭

೨೮) ಸತ್ಯನಾಥ್ ಟಿ.ಎಸ್. ಕನ್ನಡ ಜಾನಪದ: ಕೆಲವು ಮುಖಗಳು, ಶಾರದಾ ಪ್ರಕಾಶನ, ಬೆಂಗಳೂರು, ೧೯೮೮

೨೯) ಸುಧಾಕರ, ಜನಪದ ಬೆಡಗಿನ ವಚನಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೦

೩೦) ಹಿರಿಯಣ್ಣ ಅಂಬಳಿಕೆ, ಜಾನಪದ : ಕೆಲವು ವಿಚಾರಗಳು, ಪ್ರಜ್ವಲ ಪ್ರಕಾಶನ, ಮೈಸೂರು, ೧೯೮೪

೩೧) ಹಿರಿಯಣ್ಣ ಅಂಬಳಿಕೆ, ಜಾನಪದ ರಾಚನಿಕ ಅಧ್ಯಯನ, ದಾಮಿನಿ ಸಾಹಿತ್ಯ, ಬೆಂಗಳೂರು, ೨೦೦೪

೩೨) ಹೆಗಡೆ, ಎಲ್ ಆರ್ ಒಗಟುಗಳು ಮತ್ತು ಕತೆಗಳು, ಜ್ಞಾನ ಸಾಧನ ಗ್ರಂಥಮಾಲೆ, ಸಿದ್ಧಾಪುರ, ೧೯೯೩

❍ ❀ ❍